# ಗುಲಬರ್ಗಾ ಜಿಲ್ಲೆ

## ಮಾನವ ಅಭಿವೃದ್ಧಿ ವರದಿ

## 2008





### ಮಾನವ ಅಭಿವೃದ್ಧಿಗಾಗಿ ರಾಜ್ಯ ಯೋಜನೆಗಳ ಬಲವರ್ಧನೆ

# ಜಿಲ್ಲಾ ಮಾನವ ಅಭಿವೃದ್ಧಿ ವರದಿ

# ಗುಲಬರ್ಗಾ

## 2008

## ಮಾನವ ಅಭಿವೃದ್ಧಿಗಾಗಿ ರಾಜ್ಯ ಯೋಜನೆಗಳ ಬಲವರ್ಧನೆ

UNDP
India

ಯುಎನ್‌ಡಿಪಿ

सत्यमेव जयते

ಯೋಜನಾ ಆಯೋಗ
ಭಾರತ ಸರ್ಕಾರ

GOVERNMENT OF KARNATAKA

ಯೋಜನೆ, ಕಾರ್ಯಕ್ರಮ ಉಸ್ತುವಾರಿ
ಮತ್ತು ಸಾಂಖ್ಯಿಕ ಇಲಾಖೆ,
ಕರ್ನಾಟಕ ಸರ್ಕಾರ

ಗುಲಬರ್ಗಾ ಜಿಲ್ಲಾ ಪಂಚಾಯಿತಿ

# ಜಿಲ್ಲಾ ಮಾನವ ಅಭಿವೃದ್ಧಿ ವರದಿ – ಗುಲಬರ್ಗಾ


ಗ್ರಂಥ ಸ್ವಾಮ್ಯ : ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ
ಕರ್ನಾಟಕ ಸರ್ಕಾರ

ಪ್ರಕಟಣೆ : ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆ
ಕರ್ನಾಟಕ ಸರ್ಕಾರ.

ಪ್ರಥಮ ಪ್ರಕಟಣೆ : 2008



ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಿದೆ. ಈ ವರದಿಯ ಯಾವುದೇ ಭಾಗವನ್ನು ಪ್ರಕಾಶಕರ ಅನುಮತಿಯಿಲ್ಲದೆ ಮರು ಮುದ್ರಿಸುವಂತಿಲ್ಲ, ಸಂಗ್ರಹಿಸುವಂತಿಲ್ಲ ಅಥವಾ ಯಾವುದೇ ಇತರೆ ಮಾಧ್ಯಮದಲ್ಲಿ ಪ್ರಸಾರ ಮಾಡುವಂತಿಲ್ಲ.

ಈ ವರದಿಯಲ್ಲಿ ಮಂಡಿಸಿರುವ ವಿಚಾರಗಳು ಕರ್ನಾಟಕ ಸರ್ಕಾರದ, ಭಾರತ ಸರ್ಕಾರದ ಯೋಜನಾ ಆಯೋಗದ, ಯುಎನ್‌ಡಿಪಿಯ ಮತ್ತು ಅದರ ಕಾರ್ಯಕಾರಿ ಮಂಡಳಿಯ ಅಭಿಪ್ರಾಯವಾಗಬೇಕಾಗಿಲ್ಲ.



ಮುದ್ರಣ : ಸರ್ಕಾರಿ ಮುದ್ರಣಾಲಯ, ಕರ್ನಾಟಕ ಸರ್ಕಾರ


ಖಚಿತವಾದ ಅಂಕಿ–ಅಂಶಗಳನ್ನು ಇಲ್ಲಿ ದಾಖಲಿಸಲು ಪ್ರಯತ್ನ ಮಾಡಲಾಗಿದೆ. ಆದರೂ ತಪ್ಪುಗಳಾಗಿರಬಹುದು ಅಥವಾ ದೋಷಗಳು ಉಳಿದುಕೊಂಡಿರಬಹುದು. ಅಂತಹ ತಪ್ಪುಗಳು ಅಥವಾ ದೋಷಗಳು ಕಂಡು ಬಂದಲ್ಲಿ ಅವುಗಳನ್ನು ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಉಸ್ತುವಾರಿ ಮತ್ತು ಸಾಂಖ್ಯಿಕ ಇಲಾಖೆಗೆ ತಿಳಿಸಬಹುದು.

ಲಕ್ಷ್ಮಣ ಸ. ಸವದಿ
ಸಹಕಾರ ಸಚಿವರು

ದೂರವಾಣಿ : ಕಛೇರಿ : 22259182
22033032

ಕೊಠಡಿ ಸಂಖ್ಯೆ : 232, 2ನೇ ಮಹಡಿ
ವಿಧಾನ ಸೌಧ, ಬೆಂಗಳೂರು

# ಸಂದೇಶ

ಅಭಿವೃದ್ಧಿಯ ಅಂತಿಮ ಗುರಿಯೆಂದರೆ ಜನರ ಧಾರಣಾ ಸಾಮರ್ಥ್ಯದ ವರ್ಧನೆ. ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್‌ವೆಂಬ ಸಂಸ್ಥೆಯ ನಿರಂತರ ಪರಿಶ್ರಮದ ಫಲವಾಗಿ ಪ್ರಸ್ತುತ ಪ್ರಣಾಳಿಕೆ ಒಡಮೂಡಿದೆ. ವಿಶ್ವದ ಪ್ರತಿಯೊಂದು ದೇಶದ ಮಾನವ ಅಭಿವೃದ್ಧಿಯ ಮಟ್ಟವನ್ನು ಅಳೆಯುವ ಕಾರ್ಯದಲ್ಲಿ ಯುಎನ್‌ಡಿಪಿಯು ನಿರತವಾಗಿದೆ. ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮ ಮತ್ತು ನೀತಿಗಳ ದಿಕ್ಕು-ದಿಶೆ ಹಾಗೂ ಅದರ ಹೂರಣ ಮಾನವ ಅಭಿವೃದ್ಧಿ ಪ್ರಣಾಳಿಕೆಯಿಂದಾಗಿ ಬದಲಾವಣೆಗೊಂಡಿವೆ. ಈಗ ಅದರ ಗಮನವೆಲ್ಲ ಜನರಿಗೆ ಮೂಲಭೂತ ಸೌಲಭ್ಯವನ್ನು ಒದಗಿಸುವುದರ ಕಡೆಗಿದೆ. ಶಿಕ್ಷಣ ಜನರಿಗೆ ಒದಗುವಂತೆ ಮಾಡುವುದು, ಒಳ್ಳೆಯ ಆರೋಗ್ಯವು ಜನರಿಗೆ ಒದಗುವಂತೆ ಮಾಡುವುದು ಮತ್ತು ಸಾಕಷ್ಟು ವರಮಾನದ ಜೊತೆಗೆ ಶುದ್ಧ ಕುಡಿಯುವ ನೀರು, ನೈರ್ಮಲ್ಯ, ವಸತಿ ಮುಂತಾದವುಗಳನ್ನು ಜನರು ಗೌರವಯುತ ಬದುಕನ್ನು ನಡೆಸಲು ಒದಗಿಸಬೇಕಾಗುತ್ತದೆ. ದುಸ್ಥಿತಿಯಲ್ಲಿರುವ ಬಡವರು, ಮಹಿಳೆಯರು ಮತ್ತು ಅಂಚಿನಲ್ಲಿರುವ ವಂಚಿತ ಸಮುದಾಯಗಳ ಬದುಕಿನ ಸ್ಥಿತಿಗತಿ ಉತ್ತಮವಾಗುವ ಕಡೆಗೆ ಇಂದು ಗಮನಹರಿಸಲಾಗುತ್ತಿದೆ. ವಂಚಿತ ವರ್ಗಗಳ ಸಶಕ್ತೀಕರಣ ಮತ್ತು ಅವರನ್ನು ಮುಖ್ಯವಾಹಿನಿಯಲ್ಲಿ ಸಂಯೋಜನೆಗೊಳ್ಳುವಂತೆ ಮಾಡುವ ತಂತ್ರಗಳು ಇಂದು ನಾವು ಅಳವಡಿಸಿಕೊಳ್ಳುತ್ತಿರುವ ಅಭಿವೃದ್ಧಿ ಪ್ರಣಾಳಿಕೆಯ ಅಡಿಪಾಯವಾಗಿವೆ.

ಕರ್ನಾಟಕ ಸರ್ಕಾರವು 1999ರಲ್ಲಿ ತನ್ನ ಮೊದಲನೆಯ ಮತ್ತು 2005ರಲ್ಲಿ ತನ್ನ ಎರಡನೆಯ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿದೆ. ಈಗ ಜಿಲ್ಲಾ ಮಟ್ಟದಲ್ಲಿ ಅಂತಹ ವರದಿಗಳನ್ನು ಸಿದ್ಧಪಡಿಸುವ ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರವು ಆರಂಭಿಸಿದೆ. ಈ ಯೋಜನೆಯ ಮೊದಲನೆಯ ಹಂತದಲ್ಲಿ ಆಯ್ಕೆಯಾಗಿರುವ ನಾಲ್ಕು ಜಿಲ್ಲೆಗಳ ಪೈಕಿ ಗುಲಬರ್ಗಾವೂ ಒಂದು. ಇದೊಂದು ಅತ್ಯಂತ ಹಿಂದುಳಿದಿರುವ ಜಿಲ್ಲೆಯಾಗಿದೆ. ಮಾನವ ಅಭಿವೃದ್ಧಿಯಲ್ಲಿ ಅದು ಕಡೆಯ ಜಿಲ್ಲೆಯಾಗಿದೆ. ಈ ಜಿಲ್ಲೆಯಲ್ಲಿ ತಳಮಟ್ಟದಲ್ಲಿ ಮಾನವ ಅಭಿವೃದ್ಧಿಯು ಯಾವ ಸ್ಥಿತಿಯಲ್ಲಿದೆಯೆಂಬುದನ್ನು ವರದಿಯು ಹಿಡಿದಿಟ್ಟಿದೆ. ಈ ಜಿಲ್ಲೆಯ ಯಾದಗೀರ್, ಜೇವರ್ಗಿ, ಶಹಾಪುರ ಮತ್ತು ಶೋರಾಪುರ ತಾಲ್ಲೂಕುಗಳಿಗೆ ಹೆಚ್ಚಿನ ಗಮನ ನೀಡಬೇಕಾಗಿದೆ. ಏಕೆಂದರೆ ಅವು ಮಾನವ ಅಭಿವೃದ್ಧಿಯಲ್ಲಿ ತಳಮಟ್ಟದಲ್ಲಿವೆ. ಈ ತಾಲ್ಲೂಕುಗಳಲ್ಲಿ ಸಾಕ್ಷರತೆ ಪ್ರಮಾಣ ಅತ್ಯಂತ ಕೆಳಮಟ್ಟದಲ್ಲಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣವು ತೀರ ಕೆಳಮಟ್ಟದಲ್ಲಿದೆ.

ಜನರಿಗೆ ಎಷ್ಟು ಅಗತ್ಯವಿದೆಯೋ ಅಷ್ಟು ಉದ್ಯೋಗದ ಅವಕಾಶಗಳು ಮತ್ತು ವರಮಾನವನ್ನು ಸಂಪಾದಿಸುವ ಮಾರ್ಗಗಳು ಜಿಲ್ಲೆಯಲ್ಲಿ ಸಾಕಷ್ಟು ಪ್ರಮಾಣದಲ್ಲಿಲ್ಲ. ಇವು ಜಿಲ್ಲೆಯು ಎದುರಿಸುತ್ತಿರುವ ಅಭಿವೃದ್ಧಿ ಸಂಬಂಧಿ ಸಮಸ್ಯೆಗಳಾಗಿವೆ, ಈ ಸಂಗತಿಗಳಿಗೆ ಜಿಲ್ಲಾ ಯೋಜನೆಯಲ್ಲಿ ಆದ್ಯತೆಯನ್ನು ನೀಡುವ ಅಗತ್ಯವಿದೆ. ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಸಂಗತಿಗಳು ಮಾನವ ಅಭಿವೃದ್ಧಿ ಸೂಚಿಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಹಿನ್ನೆಲೆಯಲ್ಲಿ ನಮ್ಮ ಗಮನವು ಇನ್ನು ಮುಂದೆ ಮಾನವ ಅಭಿವೃದ್ಧಿಯನ್ನು ಉತ್ತಮ ಪಡಿಸುವ ಕಡೆಗಿರಬೇಕು. ಇದೊಂದು ಸವಾಲಾಗಿದೆ. ಈ ಸವಾಲನ್ನು ಎದುರಿಸಲು ಸರ್ಕಾರ, ಖಾಸಗೀವಲಯ, ನಾಗರಿಕ ಸಮಾಜ ಮತ್ತು ಎನ್‌ಜಿಓಗಳ ನಡುವೆ ಸೂಕ್ತವಾದ ಸಹಯೋಗದ ಅಗತ್ಯವಿದೆ.

# ಮುನ್ನುಡಿ

ಅಭಿವೃದ್ಧಿ ಪ್ರಕ್ರಿಯೆಯು ಜನರ ಬದುಕಿಗೆ ಅಗತ್ಯವಾದ ಮೂಲಭೂತ ಅಗತ್ಯಗಳನ್ನು ಒದಗಿಸಬೇಕೆಂಬ ಒಂದೇ ಒಂದು ಕಾಳಜಿಯಿಂದಾಗಿ ಮಾನವ ಅಭಿವೃದ್ಧಿ ಪ್ರಣಾಳಿಕೆಯು ಅಭಿವೃದ್ಧಿಯ ಅಂತಿಮ ಉದ್ದೇಶವಾಗಿ ಒಡಮೂಡಿದೆ. ಜನರು ಆರೋಗ್ಯಕಾಯರಾಗಿ ದೀರ್ಘಕಾಲ ಬದುಕುವಂತಾಗಬೇಕು ಮತ್ತು ಅವರಿಗೆ ಶಿಕ್ಷಣದ ಸೌಲಭ್ಯಗಳು ದೊರೆಯುವಂತಾಗಬೇಕು. ಗೌರವಯುತ ಬದುಕನ್ನು ಸಾಗಿಸಲು ಅಗತ್ಯವಾದಷ್ಟು ವರಮಾನವನ್ನು ಸಂಪಾದಿಸುವುದಕ್ಕೆ ತಕ್ಕ ಉದ್ಯೋಗದ ಅವಕಾಶಗಳಿರಬೇಕು. ಈ ಎಲ್ಲ ಬದುಕಿನ ನಿರ್ಣಾಯಕ ಅಗತ್ಯಗಳನ್ನು ಈಡೇರಿಸಿಕೊಳ್ಳುವುದು ಆಧ್ಯತೆಯ ಸಂಗತಿಯಾಗಬೇಕು. ಸಮಾಜದಲ್ಲಿನ ದುಸ್ಥಿತಿಯಲ್ಲಿರುವ, ವಂಚಿತರ, ಪ.ಜಾ. ಮತ್ತು ಪ.ಪಂ.ಗಳ ಹಾಗೂ ಅಲ್ಪಸಂಖ್ಯಾತರ ಮತ್ತು ಗಂಡಾಂತರಕ್ಕೆ ಯಾವಾಗಲೂ ಒಳಗಾಗುವ ಜನರ ಬದುಕನ್ನು ಉತ್ತಮ ಪಡಿಸುವುದಕ್ಕೆ ಅಗತ್ಯವಾದ ನೀತಿ ತಂತ್ರಗಳನ್ನು ರೂಪಿಸಲು ವಿಶೇಷ ಗಮನ ನೀಡಬೇಕಾಗುತ್ತದೆ.

ಜನರ ಮೂಲಭೂತ ಅಗತ್ಯಗಳನ್ನು ಒದಗಿಸಿಕೊಡಲು ತಳಮಟ್ಟದಲ್ಲಿ ಯೋಜನೆ ರೂಪಿಸುವುದು ಅಗತ್ಯ. ಜನರು ತಮ್ಮ ಅಗತ್ಯಗಳನ್ನು ಗುರಿತಿಸುವ ಪ್ರಕ್ರಿಯೆಯಲ್ಲಿ ಮತ್ತು ಅಂತಹ ಯೋಜನೆಯ ವಿನ್ಯಾಸವನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸಹಭಾಗಿಗಳಾಗಬೇಕು. ಕರ್ನಾಟಕವು ವಿಕೇಂದ್ರೀಕೃತ ಯೋಜನೆಗೆ ಸಂಬಂಧಿಸಿದಂತೆ ಸಾಕಷ್ಟು ಯಶಸ್ಸನ್ನು ಸಾಧಿಸಿಕೊಂಡಿದೆ. ಈಗ ಗ್ರಾಮ ಪಂಚಾಯಿತಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ.

ಕರ್ನಾಟಕ ರಾಜ್ಯದಲ್ಲಿ ಮಾನವ ಅಭಿವೃದ್ಧಿ ಶ್ರೇಣಿಯಲ್ಲಿ ಗುಲಬರ್ಗಾ ಜಿಲ್ಲೆಯ ಸ್ಥಾನ ಕೊನೆಯ ಸ್ತರದಲ್ಲಿದೆ. ರಾಜ್ಯದ 27 ಜಿಲ್ಲೆಗಳ ಪೈಕಿ ಅದು 26ನೆಯ ಸ್ಥಾನದಲ್ಲಿದೆ. ಮಾನವ ಅಭಿವೃದ್ಧಿಯ ಎಲ್ಲ ಸೂಚಿಗಳಲ್ಲಿ ಮತ್ತು ಸೂಚ್ಯಂಕಗಳಲ್ಲಿ, ಅಂದರೆ ಶಿಕ್ಷಣ, ಆರೋಗ್ಯ ಮತ್ತು ಸಂಪನ್ಮೂಲಗಳ ಮೇಲಿನ ಹಕ್ಕುದಾರಿಕೆಗಳಿಗೆ ಸಂಬಂಧಿಸಿದಂತೆ ಅದರ ಸಾಧನೆಯು ಕೆಳಮಟ್ಟದಲ್ಲಿದೆ. ಈ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಬದುಕು ನಡೆಸುತ್ತಿರುವ ಜನರ ದುಸ್ಥಿತಿಯ ಪರಿಮಾಣವನ್ನು ತಾಲ್ಲೂಕುವಾರು ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಗಣನೆ ಮಾಡುವುದರ ಮೂಲಕ ಅಳತೆ ಮಾಡಲಾಗಿದೆ. ಯಾದಗೀರ್, ಜೇವರ್ಗಿ, ಶೋರಾಪುರ ಮತ್ತು ಶಹಾಪುರ ತಾಲ್ಲೂಕುಗಳ ದುಸ್ಥಿತಿಯನ್ನು ನಿವಾರಿಸುವ ಕಡೆಗೆ ತಕ್ಷಣ ಗಮನ ನೀಡಬೇಕಾಗಿದೆ. ಏಕೆಂದರೆ ಅವು ಮಾನವ ಅಭಿವೃದ್ಧಿಯಲ್ಲಿ ಜಿಲ್ಲೆಯೊಳಗೆ ಕಟ್ಟಕಡೆಯ ಸ್ಥಾನದಲ್ಲಿವೆ. ಜಿಲ್ಲೆಯಲ್ಲಿ ಪ.ಜಾ., ಪ.ಪಂ. ಮಹಿಳೆಯರು ಮತ್ತು ಅಲ್ಪಸಂಖ್ಯಾತರು ತೀವ್ರ ದುಸ್ಥಿತಿ ಅನುಭವಿಸುತ್ತಿದ್ದಾರೆ. ಆದ್ದರಿಂದ ಮಾನವ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮತ್ತು ನೀತಿಗಳನ್ನು ಪರಿಣಾಮಕಾರಿಯಾಗಿ ರೂಪಿಸಬೇಕು ಮತ್ತು ಅದರ ಸಮರ್ಥ ಅನುಷ್ಠಾನಕ್ಕೆ ಕ್ರಮ ತೆಗೆದುಕೊಳ್ಳಬೇಕು. ಗ್ರಾಮ ಪಂಚಾಯತಿ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಯೋಜನೆ ರೂಪಿಸಲು ಅಗತ್ಯವಾದ ತಂತ್ರಗಳನ್ನು ಪ್ರಸ್ತುತ ವರದಿಯು ನೀಡುತ್ತದೆ. ಜನರನ್ನು ಒಳಗೊಳ್ಳುವ ಯೋಜನೆಯನ್ನು ಮತ್ತು ಉನ್ನತ ಮಟ್ಟದ ಮಾನವ ಅಭಿವೃದ್ಧಿಯನ್ನು ತಳಮಟ್ಟದಲ್ಲಿ ಸಹಭಾಗಿತ್ವ ಮಾದರಿಯಲ್ಲಿ ಸಾಧಿಸಿಕೊಳ್ಳಲು ಅಗತ್ಯವಾದ ಮಾರ್ಗದರ್ಶನವನ್ನು ಪ್ರಸ್ತುತ ವರದಿಯಲ್ಲಿ ನೀಡಲಾಗಿದೆ.

**(ಡಾ. ಶೈಲಜಾ ಶರಣ ಭೂಪಾಲ ರೆಡ್ಡಿ)**
ಅಧ್ಯಕ್ಷರು
ಜಿಲ್ಲಾ ಪಂಚಾಯತಿ, ಗುಲಬರ್ಗಾ

# ಮೊದಲ ಮಾತು

ಭಾರತೀಯ ಆರ್ಥಿಕತೆಯ ವರಮಾನ ವರ್ಧನಾ ಗತಿಯು ಮೂರು ಬಗೆಯ, ಅಂದರೆ ಮಂದಗತಿಯ, ಮಧ್ಯಮಗತಿಯ ಮತ್ತು ತೀವ್ರಗತಿಯ ವರ್ಧನೆಗಳನ್ನು ಅನುಭವಿಸಿದೆ. ಈ ಮೂರು ಗತಿಯ ಯಾವುದೇ ಹಂತದಲ್ಲಿಯೂ ಜನರ ಅಗತ್ಯಗಳನ್ನು ಪೂರೈಸುವುದು ಸಾಧ್ಯವಾಗಿಲ್ಲ. ಬಹಳಷ್ಟು ಜನರ ಮೂಲಭೂತ ಅಗತ್ಯಗಳಾದ ಶಿಕ್ಷಣ, ಆರೋಗ್ಯ, ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯದಂತಹ ಸಂಗತಿಗಳನ್ನು ಪಡೆದುಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ಜನರ ಧಾರಣಾ ಸಾಮರ್ಥ್ಯವನ್ನು ನಿರ್ಮಿಸುವುದರಲ್ಲಿ ಮತ್ತು ತಮ್ಮ ಭಾವಿ ಬದುಕನ್ನು ಕಟ್ಟಿಕೊಳ್ಳಲು ಅಗತ್ಯವಾದ ಆರ್ಥಿಕ ಅವಕಾಶಗಳನ್ನು ಒದಗಿಸುವುದರಲ್ಲಿ ಮೇಲ್ಕಂಡ ಸಂಗತಿಗಳ ಪಾತ್ರ ನಿರ್ಣಾಯಕವಾಗಿರುತ್ತದೆ. ವರಮಾನದ ಏರಿಕೆಯೊಂದಿಗೆ ಮೇಲೆ ತಿಳಿಸಲಾದ ಸಂಗತಿಗಳು ಜನರಿಗೆ ತಮ್ಮಷ್ಟಕ್ಕೆ ತಾವು ದೊರೆತುಬಿಡುವುದಿಲ್ಲ. ಈ ಸೌಲಭ್ಯಗಳನ್ನು ಸಮಾಜ ಮತ್ತು ಸರ್ಕಾರಗಳು ಪ್ರಜ್ಞಾಪೂರ್ವಕವಾಗಿ ಜನರಿಗೆ ಒದಗಿಸಬೇಕಾಗುತ್ತದೆ. ಆದ್ದರಿಂದ ಅಭಿವೃದ್ಧಿಯು ಜನರನ್ನು ಒಳಗೊಳ್ಳುವಂತಿರಬೇಕು ಮತ್ತು ಎಲ್ಲ ಹಂತಗಳಲ್ಲೂ ಯೋಜನೆ ಮತ್ತು ಅದಕ್ಕೆ ಸಂಬಂಧಿಸಿದ ನೀತಿಗಳು ಮಾನವ ಅಭಿವೃದ್ಧಿ ದಿಶೆಯ ಕಡೆಗೆ ಮುಖ ಮಾಡಿಕೊಂಡಿರಬೇಕಾದುದು ಅವಶ್ಯಕ. ಮಾನವ ಅಭಿವೃದ್ಧಿ ಸ್ಥಿತಿಯನ್ನು ಕುರಿತಂತೆ ಮೌಲ್ಯಮಾಪನ ಮಾಡಲು ಕಾಲಕಾಲಕ್ಕೆ ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಿಸುತ್ತಿರಬೇಕಾಗುತ್ತದೆ. ಇಂತಹ ವರದಿಗಳನ್ನು ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಿದ್ಧಪಡಿಸಬೇಕಾಗುತ್ತದೆ. ಆ ಮೂಲಕ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಬಲಪಡಿಸುತ್ತಿರಬೇಕಾಗುತ್ತದೆ.

ಕರ್ನಾಟಕ ಸರ್ಕಾರವು ಜಿಲ್ಲಾ ಮಟ್ಟದಲ್ಲಿ ಮಾನವ ಅಭಿವೃದ್ಧಿ ವರದಿಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಆರಂಭಿಸಿದೆ. ಜನರನ್ನು ಒಳಗೊಳ್ಳುವ ಮತ್ತು ಮಾನವ ಅಭಿವೃದ್ಧಿ ಗುರಿಗಳನ್ನು ಇಟ್ಟುಕೊಂಡಿರುವ ಹನ್ನೊಂದನೆಯ ಯೋಜನೆಯು ಸಿದ್ಧವಾಗುತ್ತಿರುವ ಸಮಯದಲ್ಲೇ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳ ಸಿದ್ಧತೆ ಆರಂಭವಾಗುತ್ತಿರುವುದು ಸ್ವಾಗತಾರ್ಹ ಸಂಗತಿಯಾಗಿದೆ. ಕರ್ನಾಟಕ ಸರ್ಕಾರವು ಜಿಲ್ಲೆಗಳ ಮಟ್ಟದಲ್ಲಿ ಮಾನವ ಅಭಿವೃದ್ಧಿ ವರದಿಗಳನ್ನು ಸಿದ್ಧಪಡಿಸುವ ಯೋಜನೆಗಾಗಿ ಆಯ್ಕೆ ಮಾಡಿಕೊಂಡಿರುವ ನಾಲ್ಕು ಜಿಲ್ಲೆಗಳ ಪೈಕಿ ಗುಲಬರ್ಗಾ ಕೂಡ ಒಂದು. ಇತರೆ ಮೂರು ಜಿಲ್ಲೆಗಳೆಂದರೆ ಉಡುಪಿ, ವಿಜಾಪುರ ಮತ್ತು ಮೈಸೂರು. ರಾಜ್ಯದಲ್ಲಿ ಮಾನವ ಅಭಿವೃದ್ಧಿಯಲ್ಲಿ ಕಡೆಯ ಸ್ಥಾನದಲ್ಲಿರುವುದರಿಂದ ಗುಲಬರ್ಗಾ ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆ. ಕರ್ನಾಟಕ ಸರ್ಕಾರವು 2005ರಲ್ಲಿ ಪ್ರಕಟಿಸಿರುವ ತನ್ನ ಎರಡನೆಯ ಮಾನವ ಅಭಿವೃದ್ಧಿ ವರದಿಯಲ್ಲಿ ರಾಜ್ಯದ 27 ಜಿಲ್ಲೆಗಳ ಪೈಕಿ ಗುಲಬರ್ಗಾ ಜಿಲ್ಲೆಯು 26ನೆಯ ಸ್ಥಾನ ಪಡೆದುಕೊಂಡಿದೆ. ರಾಜ್ಯದ ಮೊದಲ ಮಾನವ ಅಭಿವೃದ್ಧಿ ವರದಿಯಲ್ಲಿಯೂ ಜಿಲ್ಲೆಯು ಕಡೆಯ ಸ್ಥಾನವನ್ನು ಪಡೆದಿತ್ತು. ಪ್ರಾದೇಶಿಕ ಅಸಮಾನತೆ ನಿವಾರಣಾ ಅಧ್ಯಯನದ ಉನ್ನತಾಧಿಕಾರ ಸಮಿತಿಯು ಸಿದ್ಧಪಡಿಸಿರುವ ವರದಿಯಲ್ಲಿ ಗುಲಬರ್ಗಾ ಜಿಲ್ಲೆಯನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳಲ್ಲಿ ಒಂದೆಂದು ಪರಿಗಣಿಸಲಾಗಿದೆ (ಜೂನ್ 2002). ರಾಷ್ಟ್ರ ಮಟ್ಟದಲ್ಲಿನ ಮತ್ತು ರಾಜ್ಯ ಮಟ್ಟದಲ್ಲಿನ ಯೋಜನೆಗಳು ಜಿಲ್ಲೆಯ ಅಭಿವೃದ್ಧಿ ಮಟ್ಟವನ್ನು ಉತ್ತಮ ಪಡಿಸುವುದರಲ್ಲಿ ವಿಫಲವಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣವಾಗಿರಬಹುದಾದ ಸಂಗತಿಯೆಂದರೆ ಅಭಿವೃದ್ಧಿಗೆ ಪ್ರಾದೇಶಿಕ ಆಯಾಮಗಳಿರುತ್ತವೆ ಮತ್ತು ಅಲ್ಲಿನ ಸಮಸ್ಯೆಗಳು ಭಿನ್ನವಾಗಿರುತ್ತವೆ. ಅವುಗಳನ್ನು ಪರಿಹರಿಸಲು ಸ್ಥಳೀಯ ಮಟ್ಟದಲ್ಲಿ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ವಿವಿಧ ರೂಪದ ಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ. ಕರ್ನಾಟಕ ಸರ್ಕಾರವು ವಿಕೇಂದ್ರೀಕೃತ ಯೋಜನೆಗೆ ಸಂಬಂಧಿಸಿದಂತೆ ಗಣನೀಯ ಪ್ರಗತಿ ಸಾಧಿಸಿದೆ ಈಗ ಯೋಜನೆಗಳನ್ನು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಸಿದ್ಧಪಡಿಸಲಾಗುತ್ತಿದೆ. ಈ ಕಾರಣದಿಂದಾಗಿ ಸ್ಥಳೀಯ ಮಟ್ಟದಲ್ಲಿ ಕಂಡುಬರುವ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾ ಮಟ್ಟದಲ್ಲಿ ಸೂಕ್ತವಾದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ಮಾನವ ಅಭಿವೃದ್ಧಿಯ ಗುರಿಗಳನ್ನು ಈಡೇರಿಸಿಕೊಳ್ಳಲು ಹಮ್ಮಿಕೊಳ್ಳಬೇಕಾಗುತ್ತದೆ.

ಹಿಂದುಳಿದಿರುವ ಗುಲಬರ್ಗಾದಂತಹ ಜಿಲ್ಲೆಗೆ ಜಿಲ್ಲಾ ಮಾನವ ಅಭಿವೃದ್ಧಿ ವರದಿಯನ್ನು ಸಿದ್ಧಪಡಿಸುವುದು ಕಷ್ಟದ ಕೆಲಸ ಮತ್ತು ಅದು ಸವಾಲಿನ ಕಾರ್ಯವಾಗಿದೆ. ಮಾನವ ಅಭಿವೃದ್ಧಿ ವರದಿಯನ್ನು ಸಿದ್ಧಪಡಿಸಲು ಅಗತ್ಯವಾದ ಮಾಹಿತಿಯ ತೀವ್ರ ಕೊರತೆಯಿದೆ. ಮಾಹಿತಿಯನ್ನು ಸಂಗ್ರಹಿಸುವುದು ಸುಲಭ ಕೆಲಸವಲ್ಲ. ಏಕೆಂದರೆ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳು ತಮ್ಮ ರೂಢಿಗತವಾದ ಮತ್ತು ಸಿದ್ಧ ಮಾದರಿಯಲ್ಲಿ ಮಾಹಿತಿಯನ್ನು ಸಿದ್ಧಪಡಿಸಿರುತ್ತಾರೆ. ಜಿಲ್ಲಾ ಮಾನವ ಅಭಿವೃದ್ಧಿ ವರದಿಯು ಪ್ರಧಾನವಾಗಿ ಯುಎನ್‌ಡಿಪಿಯ ಮಾದರಿಯನ್ನೇ ಅನುಸರಿಸಬೇಕಾಗುತ್ತದೆ. ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು

ಗಣನೆ ಮಾಡಲು ಗ್ರಾಮ ಪಂಚಾಯತಿಗಳು ಆದರ್ಶ ಘಟಕಗಳಾಗಿವೆ. ಆದರೆ ಅಲ್ಲಿ ಅಗತ್ಯವಾದ ಮಾಹಿತಿಗಳು ಲಭ್ಯವಿಲ್ಲದಿರುವುದರಿಂದ ಮತ್ತು ಬೃಹತ್ ಜಿಲ್ಲೆಯಾದ ಗುಲಬರ್ಗಾದಲ್ಲಿ ಹತ್ತು ತಾಲ್ಲೂಕುಗಳಿರುವುದರಿಂದ ಅದು ಕಾರ್ಯಸಾಧ್ಯವಿಲ್ಲ. ಆದ್ದರಿಂದ ತಾಲ್ಲೂಕುಗಳನ್ನು ಇಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಗಣನೆ ಮಾಡಲು ಮೂಲ ಘಟಕಗಳನ್ನಾಗಿ ಬಳಸಲಾಗಿದೆ.

ಮಾನವ ಅಭಿವೃದ್ಧಿ ವರದಿಯ ಸಿದ್ಧತೆಯು ಜನರ ಸಹಭಾಗಿತ್ವದಲ್ಲಿ ನಡೆಯಬೇಕಾಗಿರುವುದರಿಂದ ಗುಲಬರ್ಗಾ ಜಿಲ್ಲೆಯ ವರದಿಯ ಸಿದ್ಧತೆ ಸಂದರ್ಭದಲ್ಲಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಮಟ್ಟದ ಜನಪ್ರತಿನಿಧಿಗಳನ್ನು, ಸರ್ಕಾರದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು, ಶಿಕ್ಷಣ ಕ್ಷೇತ್ರದ ತಜ್ಞರನ್ನು, ನಾಗರಿಕ ಸಾಮಾಜಿಕ ಸಂಸ್ಥೆಗಳ ಸದಸ್ಯರನ್ನು ಮತ್ತು ಎನ್‌ಜಿಓಗಳ ಕಾರ್ಯಕರ್ತರನ್ನು ವಿವಿಧ ಹಂತಗಳಲ್ಲಿ ತೊಡಗಿಸಿಕೊಳ್ಳಲಾಗಿದೆ. ಅಭಿವೃದ್ಧಿ ಸೂಚಿಗಳನ್ನು ಗುರುತಿಸುವುದಕ್ಕಾಗಿ ಮತ್ತು ಶಿಕ್ಷಣ, ಆರೋಗ್ಯ, ಉದ್ಯೋಗ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ, ಪ.ಜಾ., ಪ.ಪಂ. ಹಾಗೂ ಇನ್ನಿತರೆ ವಿಷಯ ಕುರಿತಂತೆ ಮಾಹಿತಿ ಕಲೆಹಾಕಲು ವಿವಿಧ ಸಮಿತಿಗಳನ್ನು ಮಾಡಲಾಯಿತು. ಈ ಸಮಿತಿಗಳಲ್ಲಿ ಪಂಚಾಯಿತಿ ಸದಸ್ಯರು, ಸರ್ಕಾರಿ ಇಲಾಖೆಗಳ ಅಧಿಕಾರಿಗಳು, ಶೈಕ್ಷಣಿಕ ವಲಯದ ತಜ್ಞರು, ಎನ್‌ಜಿಓ ಸದಸ್ಯರು, ನಾಗರಿಕ ಸಾಮಾಜಿಕ ಸಂಸ್ಥೆಗಳ ಸದಸ್ಯರು ಇದ್ದರು. ಇಲ್ಲಿ ಜವಾಬುದಾರಿಯನ್ನು ಸಾಕಷ್ಟು ವಿಕೇಂದ್ರೀಕರಿಸಲಾಯಿತು. ವರದಿಯ ಸಿದ್ಧತೆಯನ್ನು ಪರಾಮರ್ಶಿಸುವುದಕ್ಕಾಗಿ ಮತ್ತು ವರದಿ ಸಿದ್ಧತೆಯ ಪ್ರಗತಿಯನ್ನು ಪರಿಶೀಲಿಸುವುದಕ್ಕಾಗಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತಿಯ ಅಧ್ಯಕ್ಷರು, ವರದಿ ಸಿದ್ಧತೆಯ ಸಂಯೋಜಕರು, ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳಾಭಿವೃದ್ಧಿ, ಜಿಲ್ಲಾ ಸಾಂಖ್ಯಿಕ ಅಧಿಕಾರಿ ಹಾಗೂ ಮುಖ್ಯ ಯೋಜನಾಧಿಕಾರಿಗಳನ್ನೊಳಗೊಂಡ ಪ್ರಧಾನ ಸಮಿತಿಯನ್ನು ಮಾಡಲಾಯಿತು. ವರದಿಯ ಮುಖ್ಯ ಸಂಯೋಜಕರು ಸಿದ್ಧಪಡಿಸಿದ್ದ ಮಾನವ ಅಭಿವೃದ್ಧಿ ಕುರಿತ ಪ್ರಸ್ತಾವವನ್ನು ಏಪ್ರಿಲ್ 2006ರಂದು ನಡೆದ ಜಿಲ್ಲಾ ಮಟ್ಟದ ಕಾರ್ಯಾಗಾರದಲ್ಲಿ ಮಂಡಿಸಲಾಯಿತು. ಮತ್ತೆ 2006ರ ಅಕ್ಟೋಬರ್‌ನ ಕಾರ್ಯಾಗಾರದಲ್ಲೂ ಮಂಡಿಸಲಾಯಿತು. ಕಾರ್ಯಾಗಾರದಲ್ಲಿ ನಡೆದ ಚರ್ಚೆಯ ಹಿನ್ನೆಲೆಯಲ್ಲಿ ಇದು ಮರು ನಿರೂಪಿಸಲಾಯಿತು. ಮಾನವ ಅಭಿವೃದ್ಧಿಯ ವಿವಿಧ ಆಯಾಮಗಳ ಬಗ್ಗೆ ಮತ್ತು ಜಿಲ್ಲಾ ಮಾನವ ಅಭಿವೃದ್ಧಿ ವರದಿಯಲ್ಲಿ ಸೇರಿಸಬಹುದಾದ ತಾಲ್ಲೂಕು ಮಟ್ಟದ ಸಂಗತಿಗಳ ಬಗ್ಗೆ ಚರ್ಚಿಸಲು ತಾಲ್ಲೂಕು ಮಟ್ಟದ ಕಾರ್ಯಾಗಾರಗಳನ್ನು ನಡೆಸಲಾಯಿತು. ಮಾನವ ಅಭಿವೃದ್ಧಿಯ ಧಾತು ಸದೃಶ ಸಂಗತಿಗಳನ್ನು ಹಿಡಿದಿಡುವುದು ಪಂಚಾಯತಿ ಸದಸ್ಯರ ಜೊತೆ ಮತ್ತು ಜನರ ಜೊತೆ ಚರ್ಚೆ ಮಾಡಿದ್ದರಿಂದಾಗಿ ಸಾಧ್ಯವಾಯಿತು. ಯಾವ ಸಂಗತಿಗಳ ಬಗ್ಗೆ ಮಾಹಿತಿ ಅಲಭ್ಯವಾಗಿತ್ತೋ ಅಂತಹ ಸಂಗತಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿಕೊಳ್ಳಲು ಸಮೀಕ್ಷೆಗಳನ್ನು ಕೈಗೊಳ್ಳಲಾಯಿತು. ಗುಲಬರ್ಗಾ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ವಿಭಾಗದ ಪಿ.ಎಚ್‌ಡಿ ವಿದ್ಯಾರ್ಥಿಗಳು ಮಾಹಿತಿ ಸಂಗ್ರಹಿಸಲು ಸಹಾಯ ಮಾಡಿದ್ದಾರೆ.

ತಾಲ್ಲೂಕು ಮಟ್ಟದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಗಣನೆ ಮಾಡಲು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ನಿವೃತ್ತ ನಿರ್ದೇಶಕರಾದ ಶ್ರೀ ಶಾಂತಪ್ಪ ಮತ್ತು ಜನಸಂಖ್ಯಾ ಸಂಶೋಧನಾ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಡಾ. ಪಿ.ಜೆ. ಭಟ್ಟಾಚಾರ್ಯಜಿ ಅವರನ್ನು ಒಳಗೊಂಡ ತಜ್ಞರ ಸಮಿತಿಯನ್ನು ರಚಿಸಲಾಗಿತ್ತು. ರಾಜ್ಯ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಜಿಲ್ಲೆಯ ಹತ್ತು ತಾಲ್ಲೂಕುಗಳ 'ಒಟ್ಟು ಆಂತರಿಕ ಉತ್ಪನ್ನ'ವನ್ನು ಗಣನೆ ಮಾಡಿಕೊಟ್ಟಿದೆ ನಿರ್ದೇಶನಾಲಯವು ಜಿಲ್ಲೆಯಲ್ಲಿನ ಪ.ಜಾ. ಮತ್ತು ಪ.ಪಂ.ಗಳ ಅಭಿವೃದ್ಧಿ ಸ್ಥಿತಿಗತಿಯನ್ನು ಗುರುತಿಸುವ ಉದ್ದೇಶದಿಂದ ವಿಶೇಷ ಸಮೀಕ್ಷೆಯೊಂದನ್ನು ನಡೆಸಿತು. ಆ ಸಮೀಕ್ಷೆಯ ಮಾಹಿತಿಯನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಇದರಿಂದಾಗಿ ಜಿಲ್ಲೆಯಲ್ಲಿನ ಪ.ಜಾ. ಮತ್ತು ಪ.ಪಂ.ಗಳ ಮಾನವ ಅಭಿವೃದ್ಧಿ ಸ್ಥಿತಿಗತಿಯನ್ನು ತಿಳಿದುಕೊಳ್ಳುವುದು ಸಾಧ್ಯವಾಯಿತು. ಭಾರತ ಸರ್ಕಾರದ ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯವು ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಬಗ್ಗೆ ಸಮೀಕ್ಷೆಯೊಂದನ್ನು ನಡೆಸಿತು. ಈ ಸಮೀಕ್ಷೆಗಳ ತಥ್ಯಗಳನ್ನು ವರದಿಯಲ್ಲಿ ಬಳಸಿಕೊಳ್ಳಲಾಗಿದೆ.

ಈ ವರದಿಯು ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ತಳಮಟ್ಟದ ವಸ್ತು ಸ್ಥಿತಿಯನ್ನು ಬಹಿರಂಗಗೊಳಿಸಿದೆ. ತಾಲ್ಲೂಕು ಮಟ್ಟದಲ್ಲಿನ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ವ್ಯತ್ಯಯಗಳು ಆತಂಕಕಾರಿಯಾಗಿವೆ. ಈ ಸಂಗತಿಗಳು ಪ್ರದೇಶ ನಿರ್ದಿಷ್ಟ ಅಭಿವೃದ್ಧಿ ನೀತಿಯ ಅಗತ್ಯವನ್ನು ಎತ್ತಿ ಹೇಳುತ್ತಿವೆ. ಈ ಜಿಲ್ಲೆಯ ಯಾದಗೀರ್, ಜೇವರ್ಗಿ, ಶಹಾಪುರ, ಚಿಂಚೋಳಿ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸೂಚಿಗಳ ಸ್ಥಿತಿಯು ಅತ್ಯಂತ ತಳಮಟ್ಟದಲ್ಲಿದೆ. ಅತ್ಯಂತ ನಿರ್ಣಾಯಕವಾದ ಸೂಚಿಗಳೆಂದರೆ ಶಿಕ್ಷಣ ಮತ್ತು ಉದ್ಯೋಗ, ನೈರ್ಮಲ್ಯ ಮತ್ತು ವಸತಿ. ಈ ಕ್ಷೇತ್ರಗಳಿಗೆ ಹೆಚ್ಚಿನ ಗಮನ ನೀಡಬೇಕಾಗಿದೆ. ಯಾದಗೀರ್ ಮತ್ತು ಚಿಂಚೋಳಿ ತಾಲ್ಲೂಕುಗಳು ಶಿಕ್ಷಣ ಮತ್ತು ಜೀವನಾಧಾರಕ್ಕೆ ಸಂಬಂಧಿಸಿದಂತೆ ಬಹಳ ಹಿಂದೆ ಬಿದ್ದಿವೆ. ಬದುಕಿನ ಪ್ರಾಥಮಿಕ ಅಗತ್ಯಗಳಿಂದ ವಂಚಿತವಾದ ಪ.ಜಾ., ಪ.ಪಂ. ಮತ್ತು ಮಹಿಳೆಯರು ಅಪಾರ ಸಂಖ್ಯೆಯಲ್ಲಿದ್ದಾರೆ. ಇದು ಸದಾಕಾಲ ಬರಕ್ಕೆ ಪಕ್ಕಾಗುವ ಜಿಲ್ಲೆಯಾಗಿರುವುದರಿಂದ ಜನರ ಬದುಕು ಸದಾಕಾಲ ಗಂಡಾಂತರಕ್ಕೆ ಇಡಾಗುತ್ತಿರುತ್ತದೆ. ಮಾನವ ಅಭಿವೃದ್ಧಿ ಬಗ್ಗೆ ಯೋಜನೆ ರೂಪಿಸುವಾಗ ನಾವು ಜಿಲ್ಲೆಯಲ್ಲಿ ಶಿಕ್ಷಣಕ್ಕೆ ಆದ್ಯತೆ ನೀಡಬೇಕು,

ಅದರಲ್ಲೂ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಬೇಕಾಗುತ್ತದೆ ಹಾಗೂ ಎಲ್ಲರಿಗೂ ಕೃಷಿ ಮತ್ತು ಕೃಷಿಯೇತರ ಉದ್ಯೋಗ ಒದಗಿಸುವ ಬಗ್ಗೆ ಯೋಜನೆ ರೂಪಿಸಬೇಕಾಗುತ್ತದೆ. ಜನರಿಗೆ ಸೇವೆಯನ್ನು ಒದಗಿಸುವುದರ ಬಗ್ಗೆ ಮತ್ತು ಗುಣಮಟ್ಟದ ಸೇವೆಯನ್ನು ಒದಗಿಸುವುದರ ಬಗ್ಗೆ ಹೆಚ್ಚಿನ ಗಮನ ನೀಡಬೇಕಾಗುತ್ತದೆ.

ಯುಎನ್‌ಡಿಪಿಯಿಂದಾಗಿ ಮಾನವ ಅಭಿವೃದ್ಧಿಯ ಸಂಗತಿಗಳನ್ನು ತಳಮಟ್ಟಕ್ಕೆ ಒಯ್ಯುವುದು ಸಾಧ್ಯವಾಗಿದೆ. ಈ ಸಂಸ್ಥೆಯ ನೆರವಿನಿಂದಾಗಿ ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಗೆ ಜಿಲ್ಲಾ ಮಾನವ ಅಭಿವೃದ್ಧಿ ವರದಿಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಕೈಗೊಳ್ಳುವುದು ಸಾಧ್ಯವಾಗಿದೆ. ಮುಂದಿನ ದಿನಗಳಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಇಂತಹ ವರದಿಗಳು ಸಹಾಯಕವಾಗುತ್ತವೆ.

ಅನೇಕ ವಿದ್ವಾಂಸರ ಮತ್ತು ಸಂಸ್ಥೆಗಳ ನಿರಂತರ ಮತ್ತು ಸುಸ್ಥಿರಗತಿ ಪ್ರಯತ್ನದ ಫಲವಾಗಿ ಪ್ರಸ್ತುತ ವರದಿಯು ಹೊರಬರುತ್ತಿದೆ. ಈ ಕಾರ್ಯದಲ್ಲಿ ನೆರವು ನೀಡಿದವರೆಲ್ಲರನ್ನೂ ನೆನಪಿಸಿಕೊಳ್ಳುವುದು ಮತ್ತು ಅವರಿಗೆ ಕೃತಜ್ಞತೆ ಸಲ್ಲಿಸುವುದು ಇಲ್ಲಿ ಅಸಾಧ್ಯ. ಈ ವರದಿ ಸಿದ್ಧವಾಗುವ ಎಲ್ಲ ಹಂತದಲ್ಲೂ ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಅಲ್ಲಿನ ಹಿರಿಯ ಅಧಿಕಾರಿಗಳು ಮತ್ತು ಅದರ ಸಲಹೆಗಾರರು ಮಹತ್ವವಾದ ಕಾಣಿಕೆ ಸಲ್ಲಿಸಿದ್ದಾರೆ. ನಿರ್ದಿಷ್ಟವಾಗಿ ಶ್ರೀ ಗೌತಮ್ ಬಸು, ಶ್ರೀಮತಿ ನೀರಜಾ ರಾಜಕುಮಾರ್, ಶ್ರೀಮತಿ ಲಕ್ಷ್ಮಿ ವೆಂಕಟಾಚಲಂ ಮತ್ತು ಶ್ರೀಮತಿ ಶೋಭ ನಂಬೀಶನ್ ಅವರ ನೆರವನ್ನು ಮರೆಯುವಂತಿಲ್ಲ. ಅವರೆಲ್ಲರಿಗೂ ನಾನು ಋಣಿಯಾಗಿದ್ದೇನೆ. ಅದೇ ಸಮಯದಲ್ಲಿ ನಮ್ಮ ಕೆಲಸದಲ್ಲಿ ಎಲ್ಲ ರೀತಿಯ ಸಲಹೆ, ಮಾರ್ಗದರ್ಶನ ಮತ್ತು ಬೆಂಬಲ ನೀಡುತ್ತಾ ಬಂದಿರುವ ಯೋಜನಾ ಇಲಾಖೆಯ ಹಿರಿಯ ನಿರ್ದೇಶಕರಾದ ಶ್ರೀ ಕೆ. ಶಂಕರರಾವ್ ಅವರಿಗೆ ನನ್ನ ಧನ್ಯವಾದಗಳು ಸಲ್ಲಬೇಕು. ಅವರ ಬೆಂಬಲವಿಲ್ಲದಿದ್ದರೆ ಪ್ರಸ್ತುತ ವರದಿಯು ಇಂದಿನ ರೂಪದಲ್ಲಿ ಪ್ರಕಟವಾಗುತ್ತಿರಲಿಲ್ಲ. ಯುಎನ್‌ಡಿಪಿಯ ಶ್ರೀ ನಾರಾಯಣರಾಜ್ ಹಾಗೂ ಉಪನಿರ್ದೇಶಕರಾದ ಶ್ರೀ ದಿವಾಕರ ರಾವ್ ಅವರ ಸೇವೆಯನ್ನು ಇಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ. ಈ ವರದಿಗೆ ಸಂಬಂಧಿಸಿದಂತೆ ತಾಂತ್ರಿಕ ಸಲಹೆ ನೀಡುತ್ತಾ ಬಂದಿರುವ ಶ್ರೀ ಶಾಂತಪ್ಪ, ಶ್ರೀ ಪಿ.ಜೆ. ಭಟ್ಟಾಚಾರ್ಯಜಿ ಮತ್ತು ಶ್ರೀ ಜಯರಾಮ್ ಹಾಗೂ ಶ್ರೀ ವಾಮನಮೂರ್ತಿ ಅವರ ಸೇವೆಗಾಗಿ ನಾನು ನನ್ನ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಗುಲಬರ್ಗಾದ ಜಿಲ್ಲಾ ಪಂಚಾಯತಿಗೆ ಮತ್ತು ಅದರ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಪಂಕಜ್‌ಕುಮಾರ್ ಪಾಂಡೆ, ಶ್ರೀ ಪಿ.ಸಿ. ಜಾಫರ್ ಮತ್ತು ಶ್ರೀ ಎಸ್. ಶೇಖರ್ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲಬೇಕು. ಡಾ. ಪಿ.ಆರ್. ಪಂಚಮುಖಿ ಅವರ ಸಲಹೆ ಸೂಚನೆಗಳಿಗೆ ನಾನು ಋಣಿಯಾಗಿದ್ದೇನೆ. ಈ ವರದಿಯ ಕನ್ನಡ ಅನುವಾದಕ್ಕೆ ನೆರವಾದ ಡಾ. ಟಿ.ಆರ್. ಚಂದ್ರಶೇಖರ್, ಜನಾರ್ದನ್, ಡಾ. ಜೆ. ಕೃಷ್ಣ ಹಾಗೂ ಕು. ಚನ್ನಮ್ಮ ಅವರಿಗೂ ನನ್ನ ಧನ್ಯವಾದಗಳು.

ತಜ್ಞರು, ಜನಪ್ರತಿನಿಧಿಗಳು, ನೀತಿ ನಿರೂಪಕರು ಮತ್ತು ಆಡಳಿತಗಾರರು – ಹೀಗೆ ಎಲ್ಲರ ಪ್ರೋತ್ಸಾಹ ಮತ್ತು ಕಾಣಿಕೆಯಿಂದಾಗಿ ಪ್ರಸ್ತುತ ವರದಿಯ ಗುಣಮಟ್ಟ ಹೆಚ್ಚಿದೆ. ಈ ವರದಿಯು ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯ ಪರಿಣಾಮಕಾರಿ ಯೋಜನೆಗೆ ಅಗತ್ಯವಾದ ಬುನಾದಿಯನ್ನು ಒದಗಿಸುತ್ತದೆಯೆಂದು ಭಾವಿಸಲಾಗಿದೆ. ಜಿಲ್ಲೆಯ ಬಡ ಜನರ ಮತ್ತು ವಂಚಿತ ವರ್ಗಗಳ ಆಸೆ–ಆಕಾಂಕ್ಷೆಗಳನ್ನು ಈಡೇರಿಸುವುದಕ್ಕೆ ಪ್ರಸ್ತುತ ವರದಿಯು ನೆರವಾಗುತ್ತದೆಯೆಂದು ಭಾವಿಸಬಹುದಾಗಿದೆ.

**ಶ್ರೀಮತಿ ಛಾಯಾ ದೇವಗಾಂಕರ್**
ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

# ಕೃತಜ್ಞತೆ

ಅನೇಕ ತಜ್ಞರ ಗುಂಪು ಮತ್ತು ಸಂಸ್ಥೆಗಳು ನಡೆಸಿದ ಸಂಯುಕ್ತ ಪ್ರಯತ್ನದ ಫಲವಾಗಿ ಪ್ರಸ್ತುತ ವರದಿಯು ಸಿದ್ಧವಾಗಿದೆ. ಇದೊಂದು ಸಹಭಾಗಿತ್ವದ ಚಟುವಟಿಕೆಯಾಗಿತ್ತು. ಈ ವರದಿಯನ್ನು ಸಿದ್ಧಪಡಿಸಲು ನೆರವಾದ ಮತ್ತು ಅದಕ್ಕೆ ಮಾರ್ಗದರ್ಶನ ನೀಡಿದ ಎಲ್ಲರನ್ನೂ ಕೃತಜ್ಞತೆಯಿಂದ ನೆನಪಿಸಿಕೊಳ್ಳುವುದಕ್ಕೆ ನಮಗೆ ಹೆಮ್ಮೆಯೆನಿಸುತ್ತದೆ. 'ಮಾನವ ಅಭಿವೃದ್ಧಿಗಾಗಿ ರಾಜ್ಯ ಯೋಜನೆಯ ಬಲವರ್ಧನೆ'ವೆಂಬ ಯೋಜನೆಯಡಿಯಲ್ಲಿ ಯುಎನ್‌ಡಿಪಿ, ಕೇಂದ್ರದ ಯೋಜನಾ ಆಯೋಗ ಮತ್ತು ರಾಜ್ಯದ ಯೋಜನಾ ಇಲಾಖೆಗಳ ನೆರವಿನಿಂದಾಗಿ ಪ್ರಸ್ತುತ ಅಧ್ಯಯನವು ಸಾಕಾರವಾಗಿದೆ. ಯುಎನ್‌ಡಿಪಿಯ ಅಧಿಕಾರಿಗಳಾದ ಡಾ. ಸೀತಾಪ್ರಭು (ಮುಖ್ಯಸ್ಥರು, ಎಚ್‌ಡಿಆರ್‌ಸಿ ಘಟಕ), ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿಗಳಾದ ಡಾ. ಆರ್. ಶ್ರೀಧರನ್ (ಆಡಳಿತ ಮತ್ತು ರಾಜ್ಯ ಯೋಜನೆ) ಮತ್ತು ಯುಎನ್‌ಡಿಪಿಯ ಎಚ್‌ಆರ್‌ಡಿಸಿ ಘಟಕ, ನವದೆಹಲಿಯ ರಾಷ್ಟ್ರೀಯ ಕಾರ್ಯಕ್ರಮ ಕಚೇರಿಯ ಡಾ. ಸೂರಜ್‌ಕುಮಾರ್ ಅವರ ಮಾರ್ಗದರ್ಶನ ಮತ್ತು ಬೆಂಬಲಕ್ಕೆ ನಾವು ಸದಾ ಋಣಿಯಾಗಿದ್ದೇವೆ.

ಯೋಜನಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಗೌತಮ್ ಬಸು, ಶ್ರೀಮತಿ ನೀರಜಾ ರಾಜ್ ಕುಮಾರ್, ಶ್ರೀಮತಿ ಲಕ್ಷ್ಮಿವೆಂಕಟಾಚಲ ಮತ್ತು ಶ್ರೀಮತಿ ಶೋಭಾ ನಂಬೀಶನ್ ಅವರ ನಿರಂತರ ಒತ್ತಾಸೆಯಿಂದಾಗಿ ಮತ್ತು ಪ್ರಯತ್ನದ ಕಾರಣದಿಂದಾಗಿ ಪ್ರಸ್ತುತ ವರದಿಯು ಈ ರೂಪವನ್ನು ಪಡೆದುಕೊಂಡಿದೆ. ಅವರೆಲ್ಲರಿಗೂ ನಮ್ಮ ವಂದನೆಗಳು.

ಯೋಜನಾ ಇಲಾಖೆಯ ಮಾನವ ಅಭಿವೃದ್ಧಿ ವಿಭಾಗದ ಹಿರಿಯ ನಿರ್ದೇಶಕರಾದ ಶ್ರೀ ಕೆ. ಶಂಕರರಾವ್ ಅವರ ನಿರಂತರ ಪ್ರಯತ್ನ ನಡೆಸಿದ್ದಕ್ಕೆ ಮತ್ತು ನಮ್ಮ ಬೆನ್ನು ಹತ್ತಿ ವರದಿಯ ಕೆಲಸ ಸುಗಮವಾಗಿ ನಡೆಯುವುದಕ್ಕೆ ಕಾರಣಕರ್ತರಾಗಿದ್ದಕ್ಕೆ ಅವರಿಗೆ ನಾವು ನಮ್ಮ ವಂದನೆ ಸಲ್ಲಿಸುತ್ತೇವೆ. ನಮ್ಮ ಕೆಲಸದಲ್ಲಿ ಸಹಾಯ ನೀಡಿದ ಶ್ರೀ ದಿವಾಕರ ರಾವ್ ಮತ್ತು ಶ್ರೀ ನಾರಾಯಣ ರಾಜ್ ಅವರಿಗೆ ನಮ್ಮ ವಂದನೆಗಳು.

ಈ ವರದಿಯ ಸಿದ್ಧತೆಯ ಕಾರ್ಯವನ್ನು ಆರಂಭಿಸಿದವರು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾಗಿದ್ದ ಶ್ರೀ ಪಂಕಜಕುಮಾರ್ ಪಾಂಡೆ ಮತ್ತು ಅದನ್ನು ಅದೇ ಹುಮ್ಮಸ್ಸಿನಿಂದ ಮುಂದುವರಿಸಿದವರು ಡಾ. ಪಿ.ಸಿ.ಜಾಫರ್. ಅವರಿಬ್ಬರಿಗೂ ಕೃತಜ್ಞತೆ ಅರ್ಪಿಸುವುದು ನನ್ನ ಕರ್ತವ್ಯ.

ಈ ವರದಿಯ ಸಿದ್ಧತೆಯಲ್ಲಿ ತಾಂತ್ರಿಕ ಸಲಹೆಗಾರರಾಗಿ ದುಡಿದ ಮತ್ತು ವಿಶೇಷವಾಗಿ ಎಚ್‌ಡಿಐ ಮತ್ತು ಜಿಡಿಐಗಳ ಮಾಪನದಲ್ಲಿ ನಮಗೆ ಮಾರ್ಗದರ್ಶನ ನೀಡಿದ ಶ್ರೀ ವಿ. ಶಾಂತಪ್ಪ ಮತ್ತು ಡಾ. ಪಿ.ಜೆ. ಭಟ್ಟಾಚಾರ್ಯಜಿ ಅವರಿಗೆ ನಮ್ಮ ವಂದನೆಗಳು. ಮೈಸೂರಿನ ಅಭಿವೃದ್ಧಿ ಅಧ್ಯಯನ ಸಂಸ್ಥೆಯ ಶ್ರೀ ಅಚ್ಯುತ ಅವರು ನಮಗೆ ಅನೇಕ ವಿಷಯದಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು. ಜಿಲ್ಲೆಯ ತಾಲ್ಲೂಕು ಆಂತರಿಕ ಉತ್ಪನ್ನದ ಲೆಕ್ಕಾಚಾರ ಮಾಡಿಕೊಟ್ಟ ಶ್ರೀ ವಾಮನಮೂರ್ತಿ, ಶ್ರೀ ಜಯರಾವ್ (ಡಿಇಎಸ್) ಮತ್ತು ಜಿಲ್ಲಾ ಸಾಂಖ್ಯಿಕ ಅಧಿಕಾರಿಯಾದ ಶ್ರೀ ಬಸವರಾಜ್ ಅವರಿಗೆ ನಮ್ಮ ವಂದನೆಗಳು ಸಲ್ಲಬೇಕು. ಡಿಇಎಸ್ ಸಂಸ್ಥೆಯು ಪ್ರಸ್ತುತ ಅಧ್ಯಯನಕ್ಕಾಗಿ ಜಿಲ್ಲೆಯಲ್ಲಿ ನಡೆಸಿದ ಪ.ಜಾ. ಮತ್ತು ಪ.ಪಂ. ಗಳ ಅಭಿವೃದ್ಧಿ ಸ್ಥಿತಿಗತಿ ಕುರಿತ ಸಮೀಕ್ಷೆಯ ದತ್ತಾಂಶಗಳನ್ನು ನಮಗೆ ನೀಡಿದ ಆ ಸಂಸ್ಥೆಯ ಎಲ್ಲ ತಜ್ಞರಿಗೂ ನಾವು ವಂದಿಸುತ್ತೇವೆ. ಈ ಅಧ್ಯಯನ ಯೋಜನೆಯ ಪ್ರಸ್ತಾವವನ್ನು ಚರ್ಚೆ ಮಾಡಲು 2006ರಲ್ಲಿ ಒಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದಲ್ಲಿ ಅನೇಕ ಉಪಯುಕ್ತ ಸಲಹೆ ಮತ್ತು ಸೂಚನೆ ನೀಡಿದ ಜಿಲ್ಲಾ ಪಂಚಾಯತಿಯ ಅಧ್ಯಕ್ಷರಿಗೆ, ಅದರ ಉಪಾಧ್ಯಕ್ಷರಿಗೆ ಮತ್ತು ಅದರ ಎಲ್ಲ ಸದಸ್ಯರಿಗೆ ನಾವು ನಮ್ಮ ನಮಸ್ಕಾರ ಹೇಳುತ್ತೇವೆ. ಈ ಕಾರ್ಯಾಗಾರದಲ್ಲಿ ಭಾಗವಹಿಸಿ ಅನೇಕ ಉಪಯುಕ್ತ ಸಲಹೆ ಸೂಚನೆ ನೀಡಿದ ಜನಪ್ರತಿನಿಧಿಗಳಿಗೆ, ವಿಶ್ವ ಸೇವಾ ಮಿಷನ್‌ನ ವಿಶ್ವನಾಥ ಸ್ವಾಮೀಜಿ, ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಗುರುಶಾಂತ್ ಪಟ್ಟೆದಾರ್, ಶ್ರೀ ನಾಗರೆಡ್ಡಿ ಕರಡಾಳ್, ಶ್ರೀ ರಾಠೋಡ ಮತ್ತು ಅಕ್ಷರ ಫೌಂಡೇಶನ್ನಿನ ಶ್ರೀ ವಿಜಯ ಕುಲಕರ್ಣಿ ಮತ್ತು ಸರ್ಕಾರಿ ಇಲಾಖೆಗಳ ಅಧಿಕಾರಿಗಳು ಇವರೆಲ್ಲರಿಗೆ ನಮ್ಮ ಕೃತಜ್ಞತೆಗಳು

ಸಲ್ಲಬೇಕು. ವರದಿಯ ಮಧ್ಯಂತರ ಮತ್ತು ಅಂತಿಮ ಕರಡನ್ನು ಮಂಡಿಸಲು ಎರಡು ಕಾರ್ಯಾಗಾರಗಳನ್ನು ಏರ್ಪಡಿಸಲಾಗಿತ್ತು. ತಳಮಟ್ಟದಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಗಳನ್ನು ವಿಶ್ಲೇಷಿಸಲು ಅನುಕೂಲವಾಗುವಂತಹ ಸಲಹೆ ಸೂಚನೆಗಳನ್ನು ಅಲ್ಲಿ ಭಾಗವಹಿಸಿದ್ದ ತಜ್ಞರು ನೀಡಿದ್ದಾರೆ. ಕಾರ್ಯಾಗಾರಗಳನ್ನು ತಾಲ್ಲೂಕು ಮಟ್ಟದಲ್ಲೂ ಏರ್ಪಡಿಸಲಾಗಿತ್ತು. ಅಲ್ಲಿ ಭಾಗವಹಿಸಿದ್ದ ಜನಪ್ರತಿನಿಧಿಗಳು ಅತ್ಯಂತ ಉಪಯುಕ್ತವಾದ ಸಲಹೆ ಮಾಹಿತಿಗಳನ್ನು ಒದಗಿಸಿಕೊಟ್ಟ ಸರ್ಕಾರಿ ಇಲಾಖೆಗಳಾದ ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಮುಂತಾದವುಗಳ ಎಲ್ಲ ಅಧಿಕಾರಿಗಳಿಗೆ ನಮ್ಮ ವಂದನೆಗಳು. ತಾಲ್ಲೂಕು ಮಟ್ಟದ ಕಾರ್ಯಾಗಾರಗಳನ್ನು ಏರ್ಪಡಿಸಲು ಅನುಕೂಲ ಮಾಡಿಕೊಟ್ಟ ತಾಲ್ಲೂಕು ಪಂಚಾಯತಿಯ ಅಧಿಕಾರಿಗಳಿಗೆ ನಾವು ಕೃತಜ್ಞತೆ ಸಲ್ಲಿಸುತ್ತೇವೆ. ಈ ವರದಿಯ ಅಂತಿಮ ಕರಡನ್ನು ಮಂಡಿಸಲು ರಾಜ್ಯ ಮಟ್ಟದಲ್ಲಿ ಒಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಅಲ್ಲಿ ಚರ್ಚೆಯಲ್ಲಿ ಭಾಗವಹಿಸಿದ್ದ ಶ್ರೀ ಬಿ.ಕೆ. ಭಟ್ಟಾಚಾರ್ಯಜಿ, ಶ್ರೀ ಎ. ರವೀಂದ್ರ, ಶ್ರೀ ಸಂಜಯ್ ಕೌಲ್, ಡಾ. ಶಾಂತಾ ಮೋಹನ್, ಡಾ. ಜಿ.ವಿ. ನಾಗರಾಜ್, ಡಾ. ಆರ್.ಎಸ್. ದೇಶಪಾಂಡೆ ಮುಂತಾದವರು ನೀಡಿದ ಸಲಹೆಗಳು ಪ್ರಸ್ತುತ ವರದಿಯ ಗುಣಮಟ್ಟ ಉತ್ತಮವಾಗುವುದಕ್ಕೆ ನೆರವಾಗಿವೆ. ಅವರೆಲ್ಲರಿಗೂ ನಮ್ಮ ವಂದನೆಗಳು. ಧಾರವಾಡದ ಸಿ.ಎಮ್.ಡಿ.ಆರ್. ಸಂಸ್ಥೆಯ ವಿಶ್ರಾಂತ ನಿರ್ದೇಶಕರಾದ ಡಾ. ಪಿ.ಆರ್. ಪಂಚಮುಖಿ ಅವರು ವರದಿಯನ್ನು ಪರಾಮರ್ಶೆ ಮಾಡಿ ಕೊಟ್ಟಿದ್ದಾರೆ. ಅವರ ಅಮೂಲ್ಯ ಸಲಹೆಗಾಗಿ ನಮ್ಮ ವಂದನೆಗಳು.

ಈ ವರದಿಯನ್ನು ಪ್ರಸ್ತುತ ರೂಪದಲ್ಲಿ ಹೊರತರಲು ನೆರವಾದ ಎಲ್ಲರಿಗೂ ನಾವು ನಮ್ಮ ಕೃತಜ್ಞತೆ ಸಲ್ಲಿಸುತ್ತೇವೆ.

**ಎಸ್. ಶೇಖರ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಜಿಲ್ಲಾ ಪಂಚಾಯತಿ
ಗುಲಬರ್ಗಾ

# ಪ್ರಧಾನ ಸಮಿತಿಯ ಸದಸ್ಯರು

| | |
|---|---|
| ಶ್ರೀ ಪಂಕಜಕುಮಾರ್ ಪಾಂಡೆ (C.E.O.) | ಅಧ್ಯಕ್ಷರು |
| ಶ್ರೀ ಪಿ.ಸಿ. ಜಾಫರ್ (C.E.O.) | ಅಧ್ಯಕ್ಷರು |
| ಶ್ರೀ ಎಸ್. ಶೇಕರ್ (C.E.O.) | ಅಧ್ಯಕ್ಷರು |
| ಶ್ರೀ ಎಸ್. ಅನ್ಬುಕುಮಾರ್ (C.E.O.) | ಅಧ್ಯಕ್ಷರು |
| ಪ್ರೊ. ಛಾಯಾ ದೇಗಾಂವಕರ್ (ಅಧ್ಯಯನ ಮುಖ್ಯಸ್ಥೆ) | ಸದಸ್ಯರು |
| ಜಂಟಿ ನಿರ್ದೇಶಕರು (ಕೃಷಿ) | ಸದಸ್ಯರು |
| ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ | ಸದಸ್ಯರು |
| ಡಿಆರ್‌ಡಿಎ (ಯೋಜನೆ) ಉಪ ನಿರ್ದೇಶಕರು | ಸದಸ್ಯರು |
| ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲಬರ್ಗಾ ಮತ್ತು ಯಾದಗೀರ್ | ಸದಸ್ಯರು |
| ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಸದಸ್ಯರು |
| ಜಿಲ್ಲಾ ಸಾಂಖ್ಯಿಕ ಅಧಿಕಾರಿ | ಸದಸ್ಯರು |
| ಜಿಲ್ಲಾಧಿಕಾರಿಗಳು (ಮಹಾನಗರ ಸಭೆ) | ಸದಸ್ಯರು |
| ಎನ್‌ಜಿಒಗಳ ಇಬ್ಬರು ಪ್ರತಿನಿಧಿಗಳು | ಸದಸ್ಯರು |
| ಶ್ರೀ ವಿರೂಪಾಕ್ಷ, ಮುಖ್ಯ ಯೋಜನಾಧಿಕಾರಿಗಳು | ಸದಸ್ಯ ಕಾರ್ಯದರ್ಶಿ |

## ತಜ್ಞರ ತಂಡ

**ಪ್ರೊ. ಛಾಯ ದೇಗಾಂವಕರ್,** ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

**ಪ್ರೊ. ಎಂ. ದೇವರಾಜ,** ರಾಜ್ಯ ನಿಯೋಜನಾಧಿಕಾರಿಗಳು ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಪ್ರೊ. ಟಿ.ಆರ್. ಚಂದ್ರಶೇಖರ್,** ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಪ್ರೊ. ಆರ್.ಎನ್. ಅಚ್ಯುತ,** ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

**ಪ್ರೊ. ವಿ.ಆರ್. ಪಂಚಮುಖಿ,** ನಿರ್ದೇಶಕರು (ನಿವೃತ್ತಿ) ಸಿಎಮ್‌ಡಿಆರ್, ಧಾರವಾಡ

**ಪ್ರೊ. ವಿ. ಶಾಂತಪ್ಪ,** ನಿರ್ದೇಶಕರು (ನಿವೃತ್ತಿ) ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ

**ಶ್ರೀ ವಿ. ಭಟ್ಟಾಚಾರ್ಯಜಿ,** ನಿರ್ದೇಶಕರು (ನಿವೃತ್ತಿ), ಜನಸಂಖ್ಯಾ ಕೇಂದ್ರ, ಬೆಂಗಳೂರು

# ಪರಿವಿಡಿ


**ಪ್ರವೇಶ** 1

ಅಧ್ಯಾಯ 1
**ಗುಲಬರ್ಗಾ ಜಿಲ್ಲೆ : ಒಂದು ಅವಲೋಕನ** 5

ಅಧ್ಯಾಯ 2
**ಗುಲಬರ್ಗಾ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ** 23

ಅಧ್ಯಾಯ 3
**ಸಾಕ್ಷರತೆ ಮತ್ತು ಶಿಕ್ಷಣ** 35

ಅಧ್ಯಾಯ 4
**ಆರೋಗ್ಯ ಮತ್ತು ಪೌಷ್ಟಿಕತೆ** 65

ಅಧ್ಯಾಯ 5
**ಆದಾಯ, ಉದ್ಯೋಗ ಹಾಗೂ ಬಡತನ** 81

ಅಧ್ಯಾಯ 6
**ವಸತಿ, ಕುಡಿಯುವ ನೀರು ಹಾಗೂ ನೈರ್ಮಲ್ಯ** 113

ಅಧ್ಯಾಯ 7
**ಲಿಂಗಸಂಬಂಧಗಳು ಮತ್ತು ಮಾನವ ಅಭಿವೃದ್ಧಿ** 137

ಅಧ್ಯಾಯ 8
**ವಂಚಿತ ಜನಸಮುದಾಯಗಳ ಸ್ಥಿತಿಗತಿ – ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಅಲ್ಪಸಂಖ್ಯಾತರು** 151

ಅಧ್ಯಾಯ 9
**ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಉತ್ತಮ ಆಡಳಿತ** 181

ಅಧ್ಯಾಯ 10
**ಸಾಮಾಜಿಕ ಬಂಡವಾಳ ಮತ್ತು ಮಾನವ ಅಭಿವೃದ್ಧಿ – ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳು** 193

ಅಧ್ಯಾಯ 11
**ಮುಂದಿನ ಗುರಿ ಮತ್ತು ದಾರಿ** 205

**ಸಾಂಖ್ಯಿಕ ಕೋಷ್ಟಕಗಳು** 221

**ತಾಂತ್ರಿಕ ಟಿಪ್ಪಣಿ** 311

## ಕೋಷ್ಟಕಗಳ ಪಟ್ಟಿ


ಕೋಷ್ಟಕ 1.1 : ಇಪ್ಪತ್ತನೆಯ ಶತಮಾನದಲ್ಲಿ ಜನಸಂಖ್ಯೆಯ ಬೆಳವಣಿಗೆಯ ಪ್ರವೃತ್ತಿ 10
ಕೋಷ್ಟಕ 1.1ಅ: ಭೌಗೋಳಿಕ ವಿಸ್ತೀರ್ಣ ಮತ್ತು ಜನಸಂಖ್ಯೆ 10
ಕೋಷ್ಟಕ 1.2 : ಜಿಲ್ಲೆಯ ತಾಲ್ಲೂಕುಗಳಿಗೆ ಸಂಬಂಧಿಸಿದ ಮೂಲ ಸಂಗತಿಗಳು 11
ಕೋಷ್ಟಕ 1.3 : ಗುಲಬರ್ಗಾ ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯ ವಿತರಣೆ ಸ್ವರೂಪ 11
ಕೋಷ್ಟಕ 1.4 : ಕರ್ನಾಟಕ ರಾಜ್ಯದ ಗುಲಬರ್ಗಾ ಜಿಲ್ಲೆಯ ಅತ್ಯಂತ ಹಿಂದುಳಿದ ತಾಲ್ಲೂಕುಗಳು 13
ಕೋಷ್ಟಕ 1.5 : ಗುಲಬರ್ಗಾ ವಿಭಾಗದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ 13
ಕೋಷ್ಟಕ 1.6 : ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕಗಳು 14
ಕೋಷ್ಟಕ 1.7 : ಜಿಲ್ಲೆಯ ಆರ್ಥಿಕ ಸೂಚಿಗಳು 15
ಕೋಷ್ಟಕ 1.8 : ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಸ್ವರೂಪ : 1971–72 ರಿಂದ 2001–02 17
ಕೋಷ್ಟಕ 1.9 : ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳ ಲಭ್ಯತೆ 18

ಕೋಷ್ಟಕ 2.1 : ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕದ ಒಳ ರಚನೆ 29
ಕೋಷ್ಟಕ 2.2 : ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕದ ಒಳ ರಚನೆ (ತಾಲ್ಲೂಕುವಾರು) 2006 29
ಕೋಷ್ಟಕ 2.3 : ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಯಲ್ಲಿ ತಾಲ್ಲೂಕುಗಳ ಸಾಧನೆ 31
ಕೋಷ್ಟಕ 2.4 : ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ : ರಾಜ್ಯ ಮತ್ತು ಜಿಲ್ಲೆ 31

ಕೋಷ್ಟಕ 3.1 : ಗುಲಬರ್ಗಾ ವಿಭಾಗದಲ್ಲಿ ಸಾಕ್ಷರತೆಯ ಮಟ್ಟ (ಹೈದರಾಬಾದ್ ಕರ್ನಾಟಕ ಪ್ರದೇಶ) : 1971–2001 38
ಕೋಷ್ಟಕ 3.2 : ಕರ್ನಾಟಕದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಗುಲಬರ್ಗಾ ಜಿಲ್ಲೆಯು ಪಡೆದ ಸ್ಥಾನ 39
ಕೋಷ್ಟಕ 3.3 : ಲಿಂಗಸಂಬಂಧಗಳು ಮತ್ತು ಸಾಕ್ಷರತೆಯ ಪ್ರಾದೇಶಿಕ ಸ್ವರೂಪ – 2001 41
ಕೋಷ್ಟಕ 3.4 : ಗುಲಬರ್ಗಾ ಜಿಲ್ಲೆಯ ಕಡಿಮೆ ಸಾಕ್ಷರತೆಯ ಐದು ತಾಲ್ಲೂಕುಗಳ ವಿವರ 42
ಕೋಷ್ಟಕ 3.5 : ಶಾಲಾ ದೊರೆಗೊಳ್ಳುವಿಕೆ ಪ್ರಮಾಣ – ತಾಲ್ಲೂಕುವಾರು ಮಾಹಿತಿ 48
ಕೋಷ್ಟಕ 3.6 : ಶಾಲೆಗಳಲ್ಲಿರುವ ಮೂಲಭೂತ ಸೌಲಭ್ಯಗಳು 49
ಕೋಷ್ಟಕ 3.7 : ಶಿಕ್ಷಕರು ಮತ್ತು ಶಾಲಾ ಕೊಠಡಿಗಳ ನಡುವಿನ ಅನುಪಾತ 49
ಕೋಷ್ಟಕ 3.8 : ಶಾಲಾ ವ್ಯವಸ್ಥೆ ಮೇಲೆ ಒತ್ತಡ 51
ಕೋಷ್ಟಕ 3.9 : ಜಿಲ್ಲೆಯಲ್ಲಿ ತಾಲ್ಲೂಕುವಾರು ಶೈಕ್ಷಣಿಕ ಮೂಲಭೂತ ಸೌಲಭ್ಯಗಳ ಸೂಚ್ಯಂಕ 51
ಕೋಷ್ಟಕ 3.10: ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ : 2001–2006 52
ಕೋಷ್ಟಕ 3.11: ತರಗತಿವಾರು ದಾಖಲಾತಿಯ ಪ್ರಮಾಣ (ಶೇ.) 2005–06 53
ಕೋಷ್ಟಕ 3.12: ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣದ ವಿಶ್ಲೇಷಣೆ 2005 54
ಕೋಷ್ಟಕ 3.13: ಶಾಲೆಯಿಂದ ಹೊರಗಿರುವ ಮಕ್ಕಳು 2001–06 54
ಕೋಷ್ಟಕ 3.14: ವಿವಿಧ ಕಾರ್ಯತಂತ್ರಗಳ ಅಡಿಯಲ್ಲಿ ಮಕ್ಕಳ ದಾಖಲಾತಿ 55
ಕೋಷ್ಟಕ 3.15: ವಿವಿಧ ಕಾರ್ಯತಂತ್ರಗಳ ಮೂಲಕ ಶಾಲಾವಾಹಿನಿಗೆ ಮಕ್ಕಳ ಸೇರ್ಪಡೆ 56
ಕೋಷ್ಟಕ 3.16: ಶಾಲಾ ಹೊರಗಿರುವ ಮಕ್ಕಳನ್ನು ಶಾಲಾವಾಹಿನಿಗೆ ಸೇರಿಸಿರುವ ಮಕ್ಕಳ ಸಂಖ್ಯೆ 57
ಕೋಷ್ಟಕ 3.17: ಪ್ರೌಢಶಾಲಾ ದಾಖಲಾತಿ – 2006 59
ಕೋಷ್ಟಕ 3.18: ಶಾಲಾ ಸೌಲಭ್ಯಗಳ ಲಭ್ಯತೆ – ಪ್ರೌಢ ಶಾಲೆಗಳು 59
ಕೋಷ್ಟಕ 3.19: ಗುಲಬರ್ಗಾ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶ 60

ಕೋಷ್ಟಕ 4.1 : ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಸೇವಾ ವ್ಯವಸ್ಥೆಯ ಲಭ್ಯತೆ 2005–06 68
ಕೋಷ್ಟಕ 4.2 : ಗುಲಬರ್ಗಾ ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯ ಸೇವೆ ಕುರಿತು ಮೂಲಭೂತ ಸೂಚಿಗಳು : 2005–06 69
ಕೋಷ್ಟಕ 4.3 : ಜಿಲ್ಲೆಯಲ್ಲಿ ತಾಲ್ಲೂಕುವಾರು ಆರೋಗ್ಯ ಮೂಲಭೂತ ವೈದ್ಯಕೀಯ ಸೌಲಭ್ಯಗಳ ಸೂಚ್ಯಂಕ 71
ಕೋಷ್ಟಕ 4.4 : ಜಿಲ್ಲೆಯ ಆರೋಗ್ಯದ ಮೂಲಭೂತ ಸೌಲಭ್ಯದ ಸೂಚಿಗಳು : 1991–2001 73
ಕೋಷ್ಟಕ 4.5 : ಗುಲಬರ್ಗಾ ಜಿಲ್ಲೆಯಲ್ಲಿ ಸಂತಾನೋತ್ಪತ್ತಿ ಆರೋಗ್ಯದ ಸೂಚಿಗಳು : 2004 73
ಕೋಷ್ಟಕ 4.6 : ಜಿಲ್ಲೆಯಲ್ಲಿ ಹೆರಿಗೆಗಳ ಶೇಕಡಾವಾರು ಹಂಚಿಕೆ : 2005–06 75
ಕೋಷ್ಟಕ 4.7 : ಮಹಿಳೆಯರ ಆರೋಗ್ಯದ ಸೂಚಿಗಳು : 2005–06 76
ಕೋಷ್ಟಕ 4.8 : ಅಂಗನವಾಡಿ ಕೇಂದ್ರಗಳು ಮತ್ತು ಮಕ್ಕಳ ನೋಂದಾವಣಿ 2005–07 78

ಕೋಷ್ಟಕ 5.1 : ಜಿಲ್ಲಾ ವರಮಾನದಲ್ಲಿ ಬೆಳವಣಿಗೆ (ಚಾಲ್ತಿ ಬೆಲೆಗಳಲ್ಲಿ) 83
ಕೋಷ್ಟಕ 5.2 : ತಾಲ್ಲೂಕುವಾರು ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನ (ಚಾಲ್ತಿ ಬೆಲೆಗಳಲ್ಲಿ) 2005–06 84
ಕೋಷ್ಟಕ 5.3 : ತಾಲ್ಲೂಕುವಾರು ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನ (ಸ್ಥಿರ ಬೆಲೆಗಳಲ್ಲಿ) 2005–06 85
ಕೋಷ್ಟಕ 5.4 : ಜಿಲ್ಲಾ ಆಂತರಿಕ ಉತ್ಪನ್ನದ ಸಂರಚನೆ : 1990–91 ರಿಂದ 2005–06 86
ಕೋಷ್ಟಕ 5.5 : ವಲಯವಾರು ಒಟ್ಟು ತಾಲ್ಲೂಕು ಆಂತರಿಕ ಉತ್ಪನ್ನ – 2005–06 87
ಕೋಷ್ಟಕ 5.6 : ದುಡಿಮೆಗಾರ ವರ್ಗದ ಉದ್ಯೋಗವಾರು ರಚನೆ (ಮುಖ್ಯ ದುಡಿಮೆಗಾರರು) 88
ಕೋಷ್ಟಕ 5.7 : ದುಡಿಮೆಯ ಸಹಭಾಗಿತ್ವ ಪ್ರಮಾಣ – ಪುರುಷರು ಮತ್ತು ಮಹಿಳೆಯರು 89
ಕೋಷ್ಟಕ 5.8 : ಲಿಂಗವಾರು ಮುಖ್ಯ ದುಡಿಮೆಗಾರರ ಪ್ರಮಾಣ (ಗ್ರಾಮೀಣ ಮತ್ತು ನಗರ) 90
ಕೋಷ್ಟಕ 5.9 : ಜೀವನಾಧಾರ ಅವಕಾಶ ಸೂಚ್ಯಂಕ 91
ಕೋಷ್ಟಕ 5.10: ಗುಲಬರ್ಗಾ ಜಿಲ್ಲೆಯಲ್ಲಿ ಭೂಮಿ ಮತ್ತು ಕೃಷಿ ದುಡಿಮೆಗಾರರ ನಡುವಿನ ಸಂಬಂಧ 93
ಕೋಷ್ಟಕ 5.11: ಕೃಷಿಯಲ್ಲಿ ಇಳುವರಿ 94
ಕೋಷ್ಟಕ 5.12: ಕಳೆದ ಐದು ವರ್ಷಗಳಲ್ಲಿ ಮಳೆ 95
ಕೋಷ್ಟಕ 5.13: ಜಿಲ್ಲೆಯಲ್ಲಿ ಬಡತನದ ಪ್ರಮಾಣ 98
ಕೋಷ್ಟಕ 5.14: ಗುಲಬರ್ಗಾ ಜಿಲ್ಲೆಯಲ್ಲಿ ಬಡತನದ ಪ್ರಮಾಣ 99
ಕೋಷ್ಟಕ 5.15: ತಾಲ್ಲೂಕುವಾರು ಭೂಹಿಡುವಳಿಗಳ ಹಂಚಿಕೆ 99
ಕೋಷ್ಟಕ 5.16: ಕೂಲಿ ಕಾರ್ಯಕ್ರಮಗಳ ಪ್ರಗತಿ : 2006–07 103
ಕೋಷ್ಟಕ 5.17: ಸ್ವಯಂ ಉದ್ಯೋಗ ಯೋಜನೆಗಳು 103
ಕೋಷ್ಟಕ 5.18: ಫಲಾನುಭವಿಗಳ ಜಾತಿ ಸ್ವರೂಪ 104
ಕೋಷ್ಟಕ 5.19: ಶಿಕ್ಷಣದ ಮಟ್ಟ 105
ಕೋಷ್ಟಕ 5.20: ಸರಾಸರಿ ಹಣಕಾಸು ನೆರವು 105
ಕೋಷ್ಟಕ 5.21: ಕೈಗೊಂಡ ಆರ್ಥಿಕ ಚಟುವಟಿಕೆಗಳು 106
ಕೋಷ್ಟಕ 5.22: ವರಮಾನದ ಹರಿವು 107

ಕೋಷ್ಟಕ 6.1 : ವಸತಿಗಳ ಶೇಕಡಾವಾರು ಹಂಚಿಕೆ (2001) 116
ಕೋಷ್ಟಕ 6.2 : ಕುಡಿಯುವ ನೀರಿನ ನೆಲೆಗನುಗುಣವಾಗಿ ಮನೆಗಳ ಹಂಚಿಕೆ (2001) 119
ಕೋಷ್ಟಕ 6.3 : ಕುಡಿಯುವ ನೀರಿನ ಮೂಲಗಳು 120
ಕೋಷ್ಟಕ 6.4 : ಗುಲಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕಾರ್ಯಯೋಜನೆಗಳ ಪ್ರಗತಿ : 1999–2006 121
ಕೋಷ್ಟಕ 6.5 : ತಾಲ್ಲೂಕುವಾರು ಯೋಜನೆಗಳ ಹಂಚಿಕೆ 2005–06 122
ಕೋಷ್ಟಕ 6.6 : ಗುಲಬರ್ಗಾ ನಗರದಲ್ಲಿ ಜನಸಂಖ್ಯೆಯ ಬೆಳವಣಿಗೆ 123
ಕೋಷ್ಟಕ 6.7 : ನಮೂನೆಯಲ್ಲಿನ ಆಯ್ದ ಬಡಾವಣೆಗಳಲ್ಲಿ ಕುಡಿಯುವ ನೀರಿನ ವಿವಿಧ ವ್ಯವಸ್ಥೆಗಳು 124
ಕೋಷ್ಟಕ 6.8 : ಕುಡಿಯುವ ನೀರಿನ ಪೂರೈಕೆಯಲ್ಲಿ ನಿಯಮಿತತನ ಮತ್ತು ಅಗತ್ಯ ಪ್ರಮಾಣ 124
ಕೋಷ್ಟಕ 6.9 : ಗುಲಬರ್ಗಾ ನಗರದಲ್ಲಿ ವರದಿಯಾದ ನೀರಿನ ಸೋಂಕು ಮತ್ತು ನೀರಿಗೆ ಸಂಬಂಧಿಸಿದ ರೋಗಗಳು (1995–2002) 125

ಕೋಷ್ಟಕ 6.10: ನೀರಿನ ಸೋಂಕು ಮತ್ತು ನೀರಿಗೆ ಸಂಬಂಧಿಸಿದ ರೋಗಗಳು 125
ಕೋಷ್ಟಕ 6.11: ನೀರಿಗೆ ಸಂಬಂಧಿಸಿದ ರೋಗಗಳ ನಮೂನೆ ಮಾಹಿತಿ 127
ಕೋಷ್ಟಕ 6.12: ಕುಟುಂಬ ಘಟಕಗಳು ಮಾಡುವ ಆರೋಗ್ಯ ಸೇವೆ ಮೇಲಿನ ಖರ್ಚು 127
ಕೋಷ್ಟಕ 6.13: ಚಿತ್ತಾಪುರ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಯೋಜನೆಗಳು 128
ಕೋಷ್ಟಕ 6.14: ಕುಡಿಯುವ ನೀರಿನ ಯೋಜನೆಗಳ ಕಾರ್ಯಕ್ಷಮತೆ 128
ಕೋಷ್ಟಕ 6.15: ಯೋಜನೆಗಳು ಕೆಲಸ ಮಾಡದಿರುವ ಕಾಲಾವಧಿ 129
ಕೋಷ್ಟಕ 6.16: ಸ್ನಾನದ ಮನೆ, ಶೌಚಾಲಯ ಮತ್ತು ಒಳಚರಂಡಿ ಸೌಲಭ್ಯಗಳಿರುವ
ಕುಟುಂಬ ಘಟಕಗಳ ಸಂಖ್ಯೆ 131

ಕೋಷ್ಟಕ 7.1 : ಗುಲಬರ್ಗಾ ಜಿಲ್ಲೆಯಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ – 2001 140
ಕೋಷ್ಟಕ 7.2 : ಮಹಿಳೆಯರ ಸಾಕ್ಷರತಾ ಪ್ರಮಾಣ ಮತ್ತು ಅದರ ಬೆಳವಣಿಗೆ ಪ್ರಮಾಣ 141
ಕೋಷ್ಟಕ 7.3 : ಪ್ರೌಢಶಾಲೆಗಳಲ್ಲಿ ಬಾಲಕಿಯರ ದಾಖಲಾತಿ ಮತ್ತು ಪದವಿಪೂರ್ವ
ಕಾಲೇಜುಗಳಲ್ಲಿ ಬಾಲಕಿಯರ ದಾಖಲಾತಿ – 2006 141
ಕೋಷ್ಟಕ 7.4 : ತಾಲ್ಲೂಕುಗಳಲ್ಲಿ ಲಿಂಗ ಅನುಪಾತ 1981–2001 144
ಕೋಷ್ಟಕ 7.5 : ಮಹಿಳೆಯರು ಮತ್ತು ಅವರ ಆರೋಗ್ಯ ಸಂಬಂಧಿ ಸಂಗತಿಗಳು 145

ಕೋಷ್ಟಕ 8.1 : ಒಟ್ಟು ದಾಖಲಾತಿ ಪ್ರಮಾಣ – ಒಟ್ಟು ಜನಸಂಖ್ಯೆ ಪ.ಜಾ. ಮತ್ತು ಪ.ಪಂ. 157
ಕೋಷ್ಟಕ 8.2 : ಪ್ರಾಥಮಿಕ ಹಂತದಲ್ಲಿ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯ 158
ಕೋಷ್ಟಕ 8.3 : ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ದುಡಿಮೆಗಾರರ ಪ್ರಮಾಣ – 2001 161
ಕೋಷ್ಟಕ 8.4 : ಒಟ್ಟು ಜನಸಂಖ್ಯೆಯಲ್ಲಿ ಅಂಚಿನ ದುಡಿಮೆಗಾರರ ಪ್ರಮಾಣ – 2001 161
ಕೋಷ್ಟಕ 8.5 : ವಲಯವಾರು ಮುಖ್ಯ ದುಡಿಮೆಗಾರರ ಹಂಚಿಕೆ – 2001 162
ಕೋಷ್ಟಕ 8.6 : ವಲಯವಾರು ಮತ್ತು ವೃತ್ತಿವಾರು ಕುಟುಂಬಗಳ ಹಂಚಿಕೆ – ಆಯ್ದ ಕುಟುಂಬಗಳ
ಸ್ಯಾಂಪಲ್ ಸಮೀಕ್ಷೆ – 2006–2007 (ಪ.ಜಾ.–ಗ್ರಾಮೀಣ) 162
ಕೋಷ್ಟಕ 8.7 : ವೃತ್ತಿವಾರು ಮತ್ತು ವಲಯವಾರು ಕುಟುಂಬಗಳ ಹಂಚಿಕೆ –
ಸ್ಯಾಂಪಲ್ ಸಮೀಕ್ಷೆ (ಪ.ಜಾ. ನಗರ) 165
ಕೋಷ್ಟಕ 8.8 : ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯಲ್ಲಿನ ಅಂತರಗಳು 169
ಕೋಷ್ಟಕ 8.9 : ನಮೂನೆಯಲ್ಲಿ ಕುಟುಂಬಗಳ ವಿತರಣೆ ಮತ್ತು ಕುಟುಂಬಗಳ ಜನಸಂಖ್ಯಾ ವಿಶಿಷ್ಟತೆಗಳು 172
ಕೋಷ್ಟಕ 8.10: ಶಾಲೆಯನ್ನು ಸೇರದಿರಲು ಕಾರಣಗಳು ಮತ್ತು ಶಾಲೆ ಬಿಟ್ಟ ಮಕ್ಕಳು 172
ಕೋಷ್ಟಕ 8.11: ಮಕ್ಕಳ ಶಿಕ್ಷಣದ ಬಗ್ಗೆ ಪಾಲಕರ ನಿರೀಕ್ಷೆಗಳು 173
ಕೋಷ್ಟಕ 8.12: ಉದ್ಯೋಗದ ಸ್ವರೂಪ 174
ಕೋಷ್ಟಕ 8.13: ಕುಟುಂಬಗಳ ವೃತ್ತಿ ರಚನೆ 175
ಕೋಷ್ಟಕ 8.14: ವಿವಿಧ ಮೂಲಗಳಿಂದ ಕುಟುಂಬದ ವರಮಾನದ ಆಗಮನ 176
ಕೋಷ್ಟಕ 8.15: ಕುಟುಂಬ ಮಟ್ಟದಲ್ಲಿ ದುಸ್ಥಿತಿಯ ಮಟ್ಟ 177

ಕೋಷ್ಟಕ 9.1 : ಗ್ರಾಮಪಂಚಾಯತಿಗಳ ಮಹಿಳಾ ಸದಸ್ಯರು – 2005 186
ಕೋಷ್ಟಕ 9.2 : ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಮಹಿಳಾ ಸದಸ್ಯರು – 2005 186
ಚಿ
ಕೋಷ್ಟಕ 10.1: ಗುಲಬರ್ಗಾ ಜಿಲ್ಲೆಯಲ್ಲಿ ಎನ್‌ಜಿಓಗಳ ವಿತರಣೆ 196
ಕೋಷ್ಟಕ 10.2: ಸ್ತ್ರೀಶಕ್ತಿ ಕಾರ್ಯಕ್ರಮದಡಿಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು 201
ಕೋಷ್ಟಕ 10.3: ಸ್ವಸಹಾಯ ಗುಂಪುಗಳ ಹಣಕಾಸು ಪ್ರಗತಿ 201

## ಚೌಕಟ್ಟುಗಳು


ಚೌಕಟ್ಟು 3.1 : ಪ್ರಾಥಮಿಕ ಶಿಕ್ಷಣ–ಗುಲಬರ್ಗಾ ಜಿಲ್ಲೆ ಅಧ್ಯಯನವೊಂದರ ತತ್ವಗಳು 56

ಚೌಕಟ್ಟು 3.2 : ಪ್ರೌಢ ಶಿಕ್ಷಣ – ಚಾರಿತ್ರಿಕ ಹಿನ್ನೆಲೆ 58

ಚೌಕಟ್ಟು 3.3 : ಶಿಕ್ಷಣದ ಗುಣಮಟ್ಟ ಉತ್ತಮಗೊಳಿಸುವ ದಿಶೆಯಲ್ಲಿ ಸರಕಾರ, ನಾಗರಿಕ ಸಮಾಜ ಮತ್ತು ಎನ್‌ಜಿಒಗಳ ಸಹಯೋಗ 61

ಚೌಕಟ್ಟು 4.1 : ಸಂಸ್ಥೆಗಳು ಹಾಗೂ ಮಾನದಂಡ 68

ಚೌಕಟ್ಟು 4.2 : ಆರೋಗ್ಯ, ಸೇವೆ ಮತ್ತು ದೊರೆಗೊಳ್ಳುವಿಕೆ 70

ಚೌಕಟ್ಟು 4.3 : ಸುರಕ್ಷಿತ ಹೆರಿಗೆ 76

ಚೌಕಟ್ಟು 4.4 : ಪೌಷ್ಟಿಕತೆ 77

ಚೌಕಟ್ಟು 4.5 : ಗಂಡು ಮಗುವಿನ ವ್ಯಾಮೋಹ 77

ಚೌಕಟ್ಟು 4.6 : ಆರೋಗ್ಯ ಸೇವೆಯನ್ನು ಒದಗಿಸುವುದರಲ್ಲಿ ಖಾಸಗಿ ಮತ್ತು ಸಾರ್ವಜನಿಕ ವಲಯಗಳ ನಡುವೆ ಸಹಯೋಗ 79

ಚೌಕಟ್ಟು 5.1 : ಜೀವನಾಧಾರಕ್ಕಾಗಿ ವಲಸೆ 100

ಚೌಕಟ್ಟು 5.2 : ಬಾಲ ಕಾರ್ಮಿಕರು – ಎನ್‌ಜಿಒ ಮಧ್ಯಸ್ಥಿಕೆ 100

ಚೌಕಟ್ಟು 5.3 : ಎಸ್‌ಜಿಎಸ್‌ವೈನ ಪರಿಣಾಮ – ಒಂದು ತಳಮಟ್ಟದ ಅಧ್ಯಯನದಿಂದ ಕಂಡುಕೊಂಡ ಪುರಾವೆ 103

ಚೌಕಟ್ಟು 6.1 : ತಾಲ್ಲೂಕುಗಳಲ್ಲಿ ನೀರಿನ ಲಭ್ಯತೆ 122

ಚೌಕಟ್ಟು 6.2 : ನಗರ ಪ್ರದೇಶದಲ್ಲಿ ನೀರು ಪೂರೈಕೆ – ಗುಲಬರ್ಗಾ ನಗರದ ಅಧ್ಯಯನದ ತಥ್ಯಗಳು 123

ಚೌಕಟ್ಟು 6.3 : 24 ಗಂಟೆಗಳ ನೀರು ಪೂರೈಕೆ ಯೋಜನೆ 127

ಚೌಕಟ್ಟು 6.4 : ವಲಸಿಗರ ಜೀವನ ಸ್ಥಿತಿ 133

ಚೌಕಟ್ಟು 7.1 : ಬಾಲಕಿಯರ ಶಿಕ್ಷಣ 143

ಚೌಕಟ್ಟು 7.2 : ಕೃಷಿ ತಂತ್ರಜ್ಞಾನವು ಮಹಿಳೆಯರಿಗೆ ದೊರೆಯುವಿಕೆ 144

ಚೌಕಟ್ಟು 7.3 : ಲಿಂಗ ತಾರತಮ್ಯ 146

ಚೌಕಟ್ಟು 7.4 : ಮಹಿಳಾ ವಿರೋಧಿ ಮನೋಭಾವ 147

ಚೌಕಟ್ಟು 8.1 : ಪರಿಶಿಷ್ಟ ಪಂಗಡದ ಹೆಣ್ಣುಮಕ್ಕಳ ಸಾಂಸ್ಕೃತಿಕ ಆಚರಣೆಗಳು 159

ಚೌಕಟ್ಟು 8.2 : ವಂಚಿತ ಸಮುದಾಯಗಳು – ಸೇವೆಗಳ ಲಭ್ಯತೆ 159

ಚೌಕಟ್ಟು 8.3 : ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಸ್ಥಿತಿಗತಿ – ಅಧ್ಯಯನ ವರದಿಯ ಸಾರ 166

ಚೌಕಟ್ಟು 8.4 : ಮನೆಯ ಮೂಲಭೂತ ಸೌಲಭ್ಯಗಳು 178

ಚೌಕಟ್ಟು 9.1 : ಸುವರ್ಣ ಗ್ರಾಮೋದಯ ಯೋಜನೆ 188

ಚೌಕಟ್ಟು 9.2 : ಪಂಚಾಯತ್ ಸಶಕ್ತೀಕರಣ 189

ಚೌಕಟ್ಟು 9.3 : ಉತ್ತಮ ಪಂಚಾಯತಿಗಳ ಯಶಸ್ವಿ ಗಾಥೆಗಳು 189
ಚೌಕಟ್ಟು 9.4 : ಆಡಳಿತ – ಊಳಿಗಮಾನ್ಯ ವ್ಯವಸ್ಥೆ 191
ಚೌಕಟ್ಟು 9.5 : ಹಣಕಾಸು ಬಳಕೆ 191

ಚೌಕಟ್ಟು 10.1 : ಮೈಸೂರು ಪುನರ್ವಸತಿ ಮತ್ತು ಅಭಿವೃದ್ಧಿ ಸಂಸ್ಥೆ (ಎಮ್‌ವೈಆರ್‌ಡಿಎ) 196
ಚೌಕಟ್ಟು 10.2 : ಅಭಿವೃದ್ಧಿಯ ವೇಗವರ್ಧಕ – ಎನ್‌ಜಿಒ 198
ಚೌಕಟ್ಟು 10.3 : ಸ್ವ–ಸಹಾಯ ಗುಂಪುಗಳು ಮತ್ತು ಮಹಿಳೆ 199
ಚೌಕಟ್ಟು 10.4 : ಸ್ವ–ಸಹಾಯ ಗುಂಪಿನ ಮೂಲಕ ಮಹಿಳಾ ಸಬಲೀಕರಣ 200
ಚೌಕಟ್ಟು 10.5 : ಮಾರುಕಟ್ಟೆ ಅಡೆತಡೆಗಳ ನಿವಾರಣೆ 200
ಚೌಕಟ್ಟು 10.6 : ಸಾಮಾಜಿಕ ಬಂಡವಾಳ 202

# ಪ್ರವೇಶ

## ಪ್ರಸ್ತಾವನೆ

ಅಭಿವೃದ್ಧಿಯ ಅಂತಿಮ ಗುರಿ ಮಾನವನ ಧಾರಣಾ ಸಾಮರ್ಥ್ಯದ ವರ್ಧನೆಯೆಂಬುದನ್ನು ವ್ಯಾಪಕವಾಗಿ ಒಪ್ಪಿಕೊಳ್ಳಲಾಗಿದೆ. ಮಾನವ ಅಭಿವೃದ್ಧಿ ಎಂಬುದು ಅಭಿವೃದ್ಧಿಯನ್ನು ಕುರಿತ ಪರ್ಯಾಯ ಚಿಂತನೆಯಾಗಿದೆ. ಅನೇಕ ಅಭಿವೃದ್ಧಿಶೀಲ ದೇಶಗಳಲ್ಲಿ ಜನರ ಜೀವನಾವಶ್ಯಕತೆಗಳನ್ನು ಪೂರೈಸುವಲ್ಲಿ ಆರ್ಥಿಕ ಬೆಳವಣಿಗೆಯು ವಿಫಲವಾದ ಕಾರಣದಿಂದಾಗಿ ಮಾನವ ಅಭಿವೃದ್ಧಿ ಪ್ರಣಾಳಿಕೆಯು ಪ್ರಚಲಿತಕ್ಕೆ ಬರಲು ಕಾರಣವಾಯಿತು. ಆರ್ಥಿಕ ಬೆಳವಣಿಗೆ ಮಾದರಿಯಲ್ಲಿ ಮುಖ್ಯ ಉದ್ದೇಶವೆಂದರೆ ವರಮಾನವನ್ನು ಗರಿಷ್ಠೀಕರಿಸಿಕೊಳ್ಳುವುದು. ಈ ಬಗೆಯ ಚಿಂತನೆಯನ್ನು ವ್ಯಾಪಕವಾಗಿ ಟೀಕಿಸಲಾಗಿದೆ. ಏಕೆಂದರೆ, ಅದು ಹಿಂದುಳಿದ ದೇಶಗಳಲ್ಲಿ ಬಡತನ, ನಿರುದ್ಯೋಗ ಮತ್ತು ಅಸಮಾನತೆಗಳನ್ನು ತಗ್ಗಿಸುವುದರಲ್ಲಿ ವಿಫಲವಾಗಿದೆ. ಜನರ ಜೀವನಾವಶ್ಯಕತೆಗಳನ್ನು ಒದಗಿಸುವಲ್ಲಿ ಅದು ಯಶಸ್ವಿಯಾಗಿಲ್ಲ. ಒಂದು ಕಡೆ ಏರುತ್ತಿರುವ ವರಮಾನ ಮತ್ತು ಉತ್ಪನ್ನದ ಮಟ್ಟ ಮತ್ತು ಮತ್ತೊಂದು ಕಡೆ ಉಲ್ಬಣಗೊಳ್ಳುತ್ತಿರುವ ಬಡತನ, ಅನಕ್ಷರತೆ ನಿರುದ್ಯೋಗ ಮತ್ತು ಅಪೌಷ್ಠಿಕತೆಗಳಿಂದ ಕೂಡಿದ ದ್ವಂದ್ವ ಸ್ಥಿತಿಯಿಂದಾಗಿ ಸಾಂಪ್ರದಾಯಿಕ ಅಭಿವೃದ್ಧಿ ಪ್ರಣಾಳಿಕೆ ಬಗ್ಗೆ ಜನರಿಗೆ ವಿಶ್ವಾಸ ಹೋಗಿಬಿಟ್ಟಿದೆ. ಪರ್ಯಾಯವಾದ ಮತ್ತು ನ್ಯಾಯಯುತವಾದ ಅಭಿವೃದ್ಧಿ ಪ್ರಣಾಳಿಕೆ ಬಗ್ಗೆ ನಡೆದ ಅನೇಕ ಪ್ರಯತ್ನಗಳ ಫಲವಾಗಿ ಮಾನವ ಅಭಿವೃದ್ಧಿ ಸಿದ್ಧಾಂತವು ಒಡಮೂಡಿದೆ.

ಬದುಕಿನ ಭೌತಿಕ ಗುಣಮಟ್ಟ ಸೂಚ್ಯಂಕ (ಮೋರೀಸ್ ಡಿ ಮೋರೀಸ್ 1979), ಮೂಲಭೂತ ಅಗತ್ಯಗಳು (ಫಾಲ್ ಸ್ಟ್ರೀಟನ್ 1979), ಕರ್ತವ್ಯ ಮತ್ತು ಧಾರಣ ಸಾಮರ್ಥ್ಯ (ಎ.ಕೆ. ಸನ್ 1985) ಹಾಗೂ ಜನರ ಆಯ್ಕೆಗಳ ವ್ಯಾಪ್ತಿಯನ್ನು ವಿಸ್ತೃತಗೊಳಿಸುವುದು (ಮೆಹಬೂಬ್ ಹುಲ್ ಹಕ್ 1991) ಎಂಬ ಪ್ರಣಾಳಿಕೆಗಳನ್ನು ಸುಧಾರಿಸುವುದರ ಮೂಲಕ ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಗೆ ಖಚಿತವಾದ ರೂಪವನ್ನು ನೀಡಲಾಯಿತು. ಮಾನವ ಅಭಿವೃದ್ಧಿ ಪ್ರಣಾಳಿಕೆ ಚೌಕಟ್ಟಿನಲ್ಲಿ ನಿರ್ಣಾಯಕವಾದ ಆಯ್ಕೆಗಳಾವುವೆಂದರೆ ಆರೋಗ್ಯಕರ ಜೀವನ, ಶಿಕ್ಷಣ ಮತ್ತು ಗೌರವಯುತ ಜೀವನ ನಡೆಸಲು ಅಗತ್ಯವಾದ ಸಂಪನ್ಮೂಲಗಳ ಮೇಲಿನ ಹಕ್ಕುದಾರಿಕೆಗಳು. ಈ ಸಂಗತಿಗಳನ್ನು ಸಾಧಿಸಿಕೊಳ್ಳುವುದೇ ಅಭಿವೃದ್ಧಿಯ ನಿಜವಾದ ಮಾಪನವೆಂಬುದು ಈಗ ಸ್ಪಷ್ಟವಾಗಿದೆ. ಇವಲ್ಲದೇ, ಇನ್ನೂ ಅನೇಕ ಹೆಚ್ಚುವರಿ ಆಯ್ಕೆಗಳಿವೆ. ಅವುಗಳಾವುವೆಂದರೆ ರಾಜಕೀಯ ಸ್ವಾತಂತ್ರ, ಮಾನವ ಹಕ್ಕುಗಳ ದೃಢೀಕರಣ, ಆಡಳಿತದಲ್ಲಿ ಸಹಭಾಗಿತ್ವ, ತೀರ್ಮಾನ ತೆಗೆದುಕೊಳ್ಳುವಲ್ಲಿ ಪಾಲುಗೊಳ್ಳುವುದು ಮತ್ತು ಸ್ವಾಭಿಮಾನ. ಆದರೆ, ಇವು ಜನರ ಬದುಕಿನಲ್ಲಿ ನಿರ್ಣಾಯಕ ಆಯ್ಕೆಗಳ ನಂತರ ಬರುವ ಸಂಗತಿಗಳಾಗಿವೆ.

ಯುನೈಟೆಡ್ ನೇಷನ್ಸ್ ಡೆವಲಪ್‌ಮೆಂಟ್ ಪ್ರೋಗ್ರಾಮ್ ಸಂಸ್ಥೆಯು (ಯು.ಎನ್.ಡಿ.ಪಿ) ಮಾನವ ಅಭಿವೃದ್ಧಿ ಪರಿಭಾವನೆಯನ್ನು ಉತ್ತಮಗೊಳಿಸುವ ಕಾರ್ಯದಲ್ಲಿ ನಿರತವಾಗಿದೆ. ಅದರ ಮಾಪನ ವಿಧಾನವನ್ನು ರೂಪಿಸುವುದರಲ್ಲೂ ಅದು ಕಾರ್ಯತತ್ಪರವಾಗಿದೆ. ವಿಶ್ವದ 175 ದೇಶಗಳಲ್ಲಿ ಸಂಬಂಧಪಟ್ಟಂತೆ ಮಾನವ ಅಭಿವೃದ್ಧಿ ವರದಿಯನ್ನು 1990ರಲ್ಲಿ ಪ್ರಥಮ ಬಾರಿಗೆ ಪ್ರಕಟಿಸಲಾಯಿತು. ಅಲ್ಲಿಂದ ಪ್ರತಿ ವರ್ಷವೂ ಜಾಗತಿಕ ಮಟ್ಟದಲ್ಲಿ ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಿಸುತ್ತಾ ಬರಲಾಗಿದೆ.

ಭಾರತದಲ್ಲಿ ಈಗ ರಾಷ್ಟ್ರಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಿಸಲಾಗುತ್ತಿದೆ. ಭಾರತ ಸರ್ಕಾರವು 2001ರಲ್ಲಿ ತನ್ನ ರಾಷ್ಟ್ರೀಯ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿತು. ಯುಎನ್‌ಡಿಪಿ ವಿಧಾನವನ್ನು ಅನುಸರಿಸಿ ಕರ್ನಾಟಕ ಸರ್ಕಾರದ ಯೋಜನಾ ಇಲಾಖೆಯು 1999ರಲ್ಲಿ ರಾಜ್ಯದ

20 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮಾನವ ಅಭಿವೃದ್ಧಿಯ ಪ್ರಥಮ ವರದಿಯನ್ನು ಪ್ರಕಟಿಸಿತು. ರಾಜ್ಯದ 27 ಜಿಲ್ಲೆಗಳಲ್ಲಿ ಸಂಬಂಧಿಸಿದ ಕರ್ನಾಟಕ ಮಾನವ ಅಭಿವೃದ್ಧಿ ಕುರಿತ ಎರಡನೇ ವರದಿಯನ್ನು 2005ರಲ್ಲಿ ಪ್ರಕಟಿಸಲಾಯಿತು. ಈಗ ರಾಜ್ಯ ಸರ್ಕಾರವು ಜಿಲ್ಲಾ ಮಟ್ಟದಲ್ಲಿ ಮಾನವ ಅಭಿವೃದ್ಧಿ ವರದಿಗಳನ್ನು ಪ್ರಕಟಿಸುವ ಕ್ರಮ ತೆಗೆದುಕೊಂಡಿದೆ. ಪ್ರಥಮ ಹಂತದಲ್ಲಿ ಗುಲಬರ್ಗಾ, ವಿಜಾಪುರ, ಮೈಸೂರು ಮತ್ತು ಉಡುಪಿ ಜಿಲ್ಲೆಗಳ ವರದಿಗಳನ್ನು ಸಿದ್ಧಪಡಿಸುವ ಕಾರ್ಯವನ್ನು ಆರಂಭಿಸಲಾಗಿದೆ. ಪ್ರಸ್ತುತ ಕೃತಿಯಲ್ಲಿ ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸಂಗತಿಗಳನ್ನು ವಿಸ್ತೃತವಾಗಿ ಹಿಡಿದಿಡಲು ಪ್ರಯತ್ನಿಸಲಾಗಿದೆ. ಮಾನವ ಅಭಿವೃದ್ಧಿಯು ಯೋಜನೆಗಳ ಮುಖ್ಯ ಉದ್ದೇಶವಾಗುತ್ತಿರುವುದರಿಂದ ಅದನ್ನು ಜಿಲ್ಲಾ ಮಟ್ಟದಲ್ಲಿ ಸಂಯೋಜಿಸಬೇಕಾಗಿದೆ. ಈ ರೀತಿ ಸಂಯೋಜಿಸಿದಾಗ ಜನರು ಯೋಜನೆಗಳನ್ನು ಸಿದ್ಧಪಡಿಸುವ ಮತ್ತು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸಬಹುದಾಗಿದೆ. ಪ್ರಸ್ತುತ ವರದಿಯು ಜಿಲ್ಲಾ ಮಟ್ಟದಲ್ಲಿ ಮಾನವ ಅಭಿವೃದ್ಧಿ ನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಗೆ ಅಗತ್ಯವಾದ ಚೌಕಟ್ಟನ್ನು ನೀಡುತ್ತದೆಯೆಂದು ನಿರೀಕ್ಷಿಸಲಾಗಿದೆ. ಮಾನವ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಮತ್ತು ಅನುಷ್ಠಾನಗೊಳಿಸುವ ಪ್ರಕ್ರಿಯೆಯಲ್ಲಿ ಜನರು ಈಗ ಪಾಲುಗೊಳ್ಳಬಹುದಾಗಿದೆ. ಈ ದಿಶೆಯಲ್ಲಿ ಜಿಲ್ಲಾ ಮಾನವ ಅಭಿವೃದ್ಧಿ ವರದಿಯಲ್ಲಿ ಜಿಲ್ಲೆಯೊಳಗಿನ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಅಂತರಗಳನ್ನು ಮತ್ತು ಅಗತ್ಯಗಳನ್ನು ಗುರುತಿಸುವುದು ಸಾಧ್ಯ ಮತ್ತು ಆ ಮೂಲಕ ಮಾನವ ಅಭಿವೃದ್ಧಿ ಗುರಿಗಳನ್ನು ಸಾಧಿಸಿಕೊಳ್ಳಲು ಅಗತ್ಯವಾದ ನೀತಿ ಚೌಕಟ್ಟನ್ನು ನೀಡುವುದು ಸಾಧ್ಯ.

ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ ಎರಡರಲ್ಲೂ ರಾಜ್ಯದೊಳಗೆ ದೀರ್ಘಕಾಲದಿಂದ ಅತ್ಯಂತ ಹಿಂದುಳಿದಿರುವ ಸ್ಥಿತಿಯಲ್ಲಿರುವ ಗುಲಬರ್ಗಾ ಜಿಲ್ಲೆಯ ಸಮಸ್ಯೆಗಳ ಸ್ವರೂಪವು ರಾಜ್ಯ/ರಾಷ್ಟ್ರ ಮಟ್ಟದ ಸಮಸ್ಯೆಗಳ ಸ್ವರೂಪಕ್ಕಿಂತ ಭಿನ್ನವಾಗಿದೆ. ಆದ್ದರಿಂದ ಅನಭಿವೃದ್ಧಿ ಮತ್ತು ಹಿಂದುಳಿದಿರುವಿಕೆಗಳ ವಿಷಚಕ್ರದಿಂದ ಜಿಲ್ಲೆಯನ್ನು ಮುಕ್ತಗೊಳಿಸಲು ತಳಮಟ್ಟದಲ್ಲಿ ಸೂಕ್ತವಾದ ನೀತಿ ಕಾರ್ಯಕ್ರಮಗಳನ್ನು ರೂಪಿಸುವ ಅಗತ್ಯವಿದೆ.

## ವರದಿಯ ವಿಷಯ ಮತ್ತು ಅದರ ವ್ಯಾಪ್ತಿ

ಗುಲಬರ್ಗಾ ಜಿಲ್ಲೆಯ ತಾಲ್ಲೂಕುಗಳ ಅಭಿವೃದ್ಧಿ ಮಟ್ಟವನ್ನು ಮೌಲ್ಯಮಾಪನ ಮಾಡಲು ಪ್ರಸ್ತುತ ವರದಿಯಲ್ಲಿ ಪ್ರಯತ್ನಿಸಲಾಗಿದೆ. ಇದೊಂದು ಕ್ರಿಯಾಶೀಲ ಮತ್ತು ಚಲನಶೀಲ ವಿಶ್ಲೇಷಣೆಯಾಗಿದೆ. ಏಕೆಂದರೆ ಇಲ್ಲಿ ತಳಮಟ್ಟದಲ್ಲಿನ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಎತ್ತಲಾಗಿದೆ ಹಾಗೂ ವರಮಾನ, ವಸತಿ, ನೈರ್ಮಲ್ಯ, ಕುಡಿಯುವ ನೀರು, ಶಿಕ್ಷಣ, ಸಾಕ್ಷರತೆ, ಆರೋಗ್ಯ ಮುಂತಾದವುಗಳಿಗೆ ಸಂಬಂಧಿಸಿದ ತಳಮಟ್ಟದಲ್ಲಿನ ಅಂತರಗಳನ್ನು ಗುರುತಿಸಲಾಗಿದೆ. ಇದರಲ್ಲಿ ವಂಚಿತ ವರ್ಗಗಳ ಹಾಗೂ ಮಹಿಳೆಯರ ಮಾನವ ಅಭಿವೃದ್ಧಿ ಸ್ಥಿತಿಗತಿಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಮಾನವ ಅಭಿವೃದ್ಧಿಗೆ ಜನರ ಸಹಭಾಗಿತ್ವದ ಅಗತ್ಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ ಮತ್ತು ಸಹಭಾಗಿತ್ವದಲ್ಲಿ ಎನ್‌ಜಿಒಗಳು, ರಾಜ್ಯ ಸರ್ಕಾರ, ನಾಗರಿಕ ಸಮಾಜ ಮತ್ತು ಸ್ವಯಂ ಸೇವಾ ಸಂಘಗಳ ಪಾತ್ರವನ್ನು ಗುರುತಿಸಲಾಗಿದೆ.

## ಅಧ್ಯಯನ ವಿಧಾನ

ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಲೆಕ್ಕಹಾಕಿ ಜಿಲ್ಲೆಯೊಳಗಿನ ತಾಲ್ಲೂಕುಗಳ ಮಾನವ ಅಭಿವೃದ್ಧಿ ಸ್ಥಿತಿಗತಿಗಳನ್ನು ವರದಿಯಲ್ಲಿ ಮೌಲ್ಯಮಾಪನ ಮಾಡಲಾಗಿದೆ. ಯುಎನ್‌ಡಿಪಿ ಮತ್ತು ಕೆಹೆಚ್‌ಡಿಆರ್–2005ಗಳಲ್ಲಿ ಅನುಸರಿಸಿರುವ ವಿಧಾನಗಳನ್ನೇ ಪ್ರಸ್ತುತ ವರದಿಯಲ್ಲಿ ಸೂಚ್ಯಂಕಗಳನ್ನು ಲೆಕ್ಕಹಾಕಲು ಅನುಸರಿಸಲಾಗಿದೆ. ಇದಕ್ಕಾಗಿ ತಾಲ್ಲೂಕು ಮಟ್ಟದ್ದಲ್ಲಿ ತಲಾ ವರಮಾನ, ಜೀವನಾಯುಷ್ಯ ಮತ್ತು ದಾಖಲಾತಿ ಹಾಗೂ ಸಾಕ್ಷರತೆ ಸೂಚಿಗಳನ್ನು ಲೆಕ್ಕಹಾಕಬೇಕಾಗುತ್ತದೆ. ಕರ್ನಾಟಕ ಸರ್ಕಾರದ ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯು ವಲಯವಾರು ವರಮಾನ

ಕಾಣಿಕೆಯನ್ನು ಆಧರಿಸಿ ತಾಲ್ಲೂಕು ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾ ವರಮಾನಗಳನ್ನು ಕಂಡುಹಿಡಿಯಲಾಗಿದೆ. ಗ್ರಾಮಮಟ್ಟದಿಂದ ವಯೋಮಾನವಾರು ಮರಣದ ಮಾಹಿತಿಯನ್ನು ಆಧರಿಸಿ ಜೀವನಾಯುಷ್ಯವನ್ನು ತಾಲ್ಲೂಕು ಮಟ್ಟಕ್ಕೆ ಸಂಬಂಧಿಸಿದಂತೆ ಲೆಕ್ಕ ಹಾಕಲಾಗಿದೆ. ಒಟ್ಟು ಸಾಕ್ಷರತೆಯನ್ನು ವಯಸ್ಕರ ಸಾಕ್ಷರತೆಗೆ ಪ್ರತಿಯಾಗಿ ಇಲ್ಲಿ ಬಳಸಲಾಗಿದೆ. ಮತ್ತು ಲಭ್ಯವಿರುವ ಆನುಷಂಗಿಕ ಮಾಹಿತಿಯನ್ನು ಧರಿಸಿ ದಾಖಲಾತಿ ವಿವರವನ್ನು ಸಂಗ್ರಹಿಸಿಕೊಳ್ಳಲಾಗಿದೆ. ಈ ಎಲ್ಲಾ ಮಾಹಿತಿ ಉಪಯೋಗಿಸಿಕೊಂಡು ಗುಲಬರ್ಗಾ ಜಿಲ್ಲೆ ಹಾಗೂ ಅದರ ಹತ್ತು ತಾಲ್ಲೂಕುಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಕಂಡುಹಿಡಿಯಲಾಗಿದೆ.

## ಮಾನವ ಅಭಿವೃದ್ಧಿ ವರದಿಯ ಸಿದ್ಧತಾ ಪ್ರಕ್ರಿಯೆ

ವಿವಿಧ ಹಂತಗಳಲ್ಲಿ ವಿವಿಧ ಸಂಸ್ಥೆಗಳು ಹಾಗೂ ತಜ್ಞರ ನಡುವಿನ ಸಹಚಿಂತನೆಯ ಫಲವಾಗಿ ಪ್ರಸ್ತುತ ವರದಿಯು ಸಿದ್ಧವಾಗಿದೆ. ಜಿಲ್ಲಾ ಮಟ್ಟದಲ್ಲಿ ಸಂಘಟಿಸಿದ ಕಾರ್ಯಾಗಾರಗಳಲ್ಲಿ ಸರ್ಕಾರಿ ಇಲಾಖೆಗಳು, ಪಂಚಾಯಿತಿ ಪ್ರತಿನಿಧಿಗಳು, ಎನ್‌ಜಿಒಗಳು, ಸ್ವಸಹಾಯ ಗುಂಪುಗಳು, ವಿದ್ವಾಂಸರು ಮತ್ತು ಮುಂತಾದವರ ಜೊತೆ ವ್ಯಾಪಕವಾಗಿ ಚರ್ಚೆ ಮಾಡಲಾಗಿದೆ. ಜಿಲ್ಲಾ ಕಾರ್ಯಾಗಾರವನ್ನು ಮೇ 2006 ಮತ್ತು ಅಕ್ಟೋಬರ್ 2006ರಲ್ಲಿ ನಡೆಸಲಾಯಿತು. ಅಭಿವೃದ್ಧಿಯ ವಿವಿಧ ಹಕ್ಕುದಾರರ ಸಹಭಾಗಿತ್ವದಿಂದ ಕೂಡಿದ ತಾಲ್ಲೂಕು ಮಟ್ಟದ ಕಾರ್ಯಾಗಾರಗಳಲ್ಲಿ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸುವ ಬಗ್ಗೆ ಚರ್ಚಿಸಲಾಯಿತು. ವರದಿಯ ಕರಡು ಪ್ರತಿಯನ್ನು ಅಕ್ಟೋಬರ್ 2007ರ ಕಾರ್ಯಾಗಾರದಲ್ಲಿ ಮಂಡಿಸಲಾಯಿತು ಮತ್ತು ಅಲ್ಲಿ ನೀಡಲಾದ ಸಲಹೆ ಸೂಚನೆಗಳನ್ನು ಅಳವಡಿಸಿಕೊಂಡು ವರದಿಯ ಅಂತಿಮ ಪ್ರತಿಯನ್ನು ಸಿದ್ಧಪಡಿಸಲಾಯಿತು.

ಜಿಲ್ಲಾ ಮಟ್ಟದಲ್ಲಿ ಅಭಿವೃದ್ಧಿ ಯೋಜನೆ ರೂಪಿಸಿದ ಎಲ್ಲ ಹಕ್ಕುದಾರರ ಜೊತೆ ನಡೆಸಿದ ವ್ಯಾಪಕ ಚರ್ಚೆ ಮತ್ತು ಅವರ ಸಹಭಾಗಿತ್ವದ ಫಲವಾಗಿ ಪ್ರಸ್ತುತ ವರದಿ ಒಡಮೂಡಿದೆ. ಜಿಲ್ಲೆಯಲ್ಲಿನ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಗುರುತಿಸುವುದರಲ್ಲಿ ವರದಿಯು ಯಶಸ್ವಿಯಾಗಿದೆ. ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ ಸಂದೇಶವನ್ನು ಪ್ರಸಾರ ಮಾಡಲು ಮತ್ತು ಮಾನವ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸಲು ಅಗತ್ಯವಾದ ಸಂಪನ್ಮೂಲವನ್ನು ಪ್ರಸ್ತುತ ವರದಿ ನೀಡುತ್ತದೆಯೆಂದು ನಿರೀಕ್ಷಿಸಲಾಗಿದೆ.

# ಗುಲಬರ್ಗಾ ಜಿಲ್ಲೆ – ಒಂದು ಅವಲೋಕನ




KALBURGI (GULBARGA) District Map
MAHARASHTRA
Bidar
ANDHRA PRADESH
Bijapur
Raichur
Khajuri
Aland
Salgar
Bodhan
Kinhi
Sonath
Kamlapur
Mahagaon
Narona
Sargapur
Ratkal
Chincholi
Mullamdri
Awarja
Benithora
Sulahpet
Kulali
Nimbarga
KALBURGI
Kalgi
Marhal
Mannur
Bari
Atanur
Gobur Buzurgr
Tingli
Nirgunda
Kogna
Afzalpur
Gangapur
Farhatabad
Sedam
Chitapur
Adki
Firozabad
Mudhol
Nelogi
Wadi
Kona
Jevargi
Handarki
Andola
Nalwar
Aralagundi
Ijeri
Gajarkot
Yaragol
Yedrami
Gurmatkal
Sirwal
Bhima
Yadgir
Gugi
Doranahalli
Haligeri
Malla Buzurg
Shahpur
Khanapur
Nandepalli
Kembhavi
Sagar
Hattigudur
Ajalapur
Saidapur
Agni
Wadagera
Shorapur
Tumkur
Krishna
Devapur
Kakkara
Tintani
Kodekal
Narayanpur
Map not to Scale
Copyright © 2007 Compare Infobase Limited
www.mapsofindia.com
LEGEND
State Boundary
District Boundary
Major Road
Railway
District Headquarter
Major Town
Other Town
River
N

ಅಧ್ಯಾಯ 1

# ಗುಲಬರ್ಗಾ ಜಿಲ್ಲೆ – ಒಂದು ಅವಲೋಕನ

ಹಳೆಯ ಮೈಸೂರು ರಾಜ್ಯದ ಪುನಾರಚನೆಯು ನಡೆದ 1956ರಲ್ಲಿ ಹೈದರಾಬಾದ್ ಸಂಸ್ಥಾನದಿಂದ ಕರ್ನಾಟಕ ರಾಜ್ಯಕ್ಕೆ ವರ್ಗಾವಣೆಗೊಂಡ ಮೂರು ಜಿಲ್ಲೆಗಳ ಪೈಕಿ ಗುಲಬರ್ಗಾ ಒಂದಾಗಿದೆ. ಹೀಗೆ ವರ್ಗಾವಣೆಗೊಂಡ ಮೂರು ಜಿಲ್ಲೆಗಳೆಂದರೆ ಬೀದರ್, ಗುಲಬರ್ಗಾ ಮತ್ತು ರಾಯಚೂರು (ಈಗ ರಾಯಚೂರು ಜಿಲ್ಲೆಯಿಂದ ಬೇರ್ಪಟ್ಟ ಕೊಪ್ಪಳ ಜಿಲ್ಲೆಯನ್ನು ಸೇರಿಸಿಕೊಂಡು). ಈ ಮೂರು ಜಿಲ್ಲೆಗಳ ಗುಂಪನ್ನು ಇಂದಿಗೂ ಹೈದರಾಬಾದ್ ಕರ್ನಾಟಕ ಪ್ರದೇಶವೆಂದು ಕರೆಯಲಾಗುತ್ತಿದೆ. ಕರ್ನಾಟಕದ ಇತರೆ ಜಿಲ್ಲೆಗಳಿಗೆ ಹೋಲಿಸಿದರೆ ಈ ಮೂರು ಜಿಲ್ಲೆಗಳು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿವೆ. ಇದು 1956ರಲ್ಲಿ 'ಹೈದ್ರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿ ಸ್ಥಿತಿಗತಿ ಅಧ್ಯಯನ ಸಮಿತಿ'ಯ ವರದಿಯಿಂದ ಸ್ಪಷ್ಟವಾಗಿದೆ. ಸಮಿತಿಯು ಸ್ಪಷ್ಟವಾಗಿ ತಿಳಿಸಿರುವಂತೆ ಹಳೆಯ ಮೈಸೂರು ರಾಜ್ಯದ ಜಿಲ್ಲೆಗಳಿಗೆ ಹೋಲಿಸಿದರೆ ಹೈದರಾಬಾದ್ ಕರ್ನಾಟಕ ಪ್ರದೇಶವು ಆರೋಗ್ಯ, ಶಿಕ್ಷಣ, ಸಾರಿಗೆ, ಸಂಪರ್ಕ ಮುಂತಾದ ಆರ್ಥಿಕ ಮತ್ತು ಸಾಮಾಜಿಕ ಸೂಚಿಗಳಲ್ಲಿ ಬಹಳ ಹಿಂದುಳಿದಿರುವ ಸ್ಥಿತಿಯಲ್ಲಿದೆ. ಈ ಪ್ರದೇಶವನ್ನು ರಾಜ್ಯದ ಉಳಿದ ಪ್ರದೇಶಗಳ ಅಭಿವೃದ್ಧಿ ಮಟ್ಟಕ್ಕೆ ತರಬೇಕೆಂದರೆ ಇಲ್ಲಿ ನಿಯಮಿತವಾಗಿ ಹರಿದು ಬರುತ್ತಿರುವ ಬಂಡವಾಳದ ಮೊತ್ತಕ್ಕಿಂತ ಎರಡು–ಮೂರು ಪಟ್ಟು ಅಧಿಕ ಪ್ರಮಾಣದಲ್ಲಿ ಬಂಡವಾಳ ವಿನಿಯೋಜನೆಯಾಗಬೇಕು. ಈ ಕಾರಣದಿಂದ ಕಾಲವಿಳಂಬವಿಲ್ಲದೆ ತೀರ್ಮಾನಗಳನ್ನು ತೆಗೆದುಕೊಳ್ಳಲು ಅನುಕೂಲವಾಗಲು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಶೀಘ್ರಾತಿಶೀಘ್ರವಾಗಿ ಅನುಷ್ಠಾನಗೊಳಿಸಲು ಈ ಮೂರು ಜಿಲ್ಲೆಗಳನ್ನು ಒಂದು ಪ್ರತ್ಯೇಕ ವಿಭಾಗಕ್ಕೆ ಸೇರಿಸಬೇಕೆಂದು ಶಿಫಾರಸ್ಸು ಮಾಡಲಾಯಿತು. ಅದರಂತೆ ಈ ಮೂರು ಜಿಲ್ಲೆಗಳ ಜೊತೆಯಲ್ಲಿ ಬಳ್ಳಾರಿ ಜಿಲ್ಲೆಯನ್ನು ಸೇರಿಸಿಕೊಂಡು ಪ್ರತ್ಯೇಕ ಆಡಳಿತಾತ್ಮಕ ವಿಭಾಗವನ್ನು ರಚಿಸಲಾಯಿತು. ಈ ನಾಲ್ಕು ಜಿಲ್ಲೆಗಳನ್ನು ಒಂದುಗೂಡಿಸಿ ರೂಪಿಸಿದ ವಿಭಾಗವೇ ಗುಲಬರ್ಗಾ ವಿಭಾಗ.

ಈ ಪ್ರದೇಶದ ಚರಿತ್ರೆಯೆಂದರೆ ನೋವಿನ, ಹಿಂದುಳಿದಿರುವಿಕೆಯ ಮತ್ತು ಆರ್ಥಿಕ–ಸಾಮಾಜಿಕ ಕ್ಷೇತ್ರಗಳಲ್ಲಿನ ಚಲನರಾಹಿತ್ಯದ ಗಾಥೆಯಾಗಿದೆ. ಈ ಪ್ರದೇಶವು ಹೈದರಾಬಾದ್ ನಿಜಾಮನ ಆಡಳಿತದ ಕಕ್ಷೆಗೆ ಬಂದಂದಿನಿಂದ ಬಹಳಷ್ಟು ಮಟ್ಟಿಗೆ ಅದು ಹಿಂದುಳಿದ ಸ್ಥಿತಿಯಲ್ಲಿದೆ. ಈ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯ ಸ್ಥೂಲ ಪರಿಚಯವನ್ನು ಮಾಡಿಕೊಡಲು ಪ್ರಯತ್ನಿಸಲಾಗಿದೆ. ಜಿಲ್ಲೆಯ ಚಾರಿತ್ರಿಕ ಹಿನ್ನೆಲೆ, ಸಾಮಾಜಿಕ ರಚನೆ, ಸಂಪನ್ಮೂಲಗಳ ಲಭ್ಯತೆ, ಮತ್ತು ಜಿಲ್ಲೆಯ ಆರ್ಥಿಕ ವ್ಯವಸ್ಥೆಯ ಸ್ವರೂಪ ಮುಂತಾದ ಸಂಗತಿಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಇದು ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ ಪ್ರಸ್ತುತ ಯಾವ ಸ್ಥಿತಿಯಲ್ಲಿದೆ ಎಂಬುದನ್ನು ಅರಿತುಕೊಳ್ಳಲು ಅಗತ್ಯವಾದ ಭೂಮಿಕೆಯನ್ನು ಒದಗಿಸುತ್ತದೆ.

## ಗುಲಬರ್ಗಾ ಜಿಲ್ಲೆ – ಒಂದು ಸಂಕ್ಷಿಪ್ತ ಚರಿತ್ರೆ

ಗುಲಬರ್ಗಾವನ್ನು ಸ್ಥಳೀಯವಾಗಿ ಕಲಬುರ್ಗಿಯೆಂದು ಕರೆಯಲಾಗುತ್ತದೆ. ಅದರ ಉರ್ದು ರೂಪ ಕಲ್‌ಬುರಗಾ. ಈ ನುಡಿಯ ಉಲ್ಲೇಖವು ಕ್ರಿ.ಶ.1445ರ ಅಬ್ದುಲ್ ರಜಾಕನ ವಿಜಯನಗರ ಸಾಮ್ರಾಜ್ಯದ ಗಡಿಯು ಕಲ್‌ಬುರಗದ ಅಂಚಿನವರೆಗೆ ಹಬ್ಬಿತ್ತು ಎಂಬ ವಿವರಣೆಯಲ್ಲಿ ದೊರೆಯುತ್ತದೆ. ಕನ್ನಡದಲ್ಲಿ ಕಲಬುರ್ಗಿಯೆಂದರೆ ಕಲ್ಲಿನ ಪ್ರದೇಶ ಅಥವಾ ಕಲ್ಲುಬಂಡೆಗಳ ರಾಶಿಯೆಂಬ ಅರ್ಥ ಬರುತ್ತದೆ. ಈ ಪ್ರದೇಶದ ಭೂಗೋಳಿಕ ಮತ್ತು ಮಣ್ಣಿನ ಸ್ವರೂಪಕ್ಕೆ ಅನುಗುಣವಾಗಿ ಅದರ ಹೆಸರಿರುವುದು ಕಂಡು ಬರುತ್ತದೆ. ಗುಲಬರ್ಗಾ ಎಂಬ ಹೆಸರು ಕಲ್‌ಬುರುಗ ಎಂಬುದರ ಮತ್ತೊಂದು ರೂಪವಾಗಿದೆ. ಪರ್ಷಿಯನ್ ಭಾಷೆಯಲ್ಲಿ ಗುಲ್ ಎಂದರೆ ಹೂವು ಮತ್ತು ಬರ್ಗ್ ಎಂದರೆ ಎಲೆ ಎಂದು ಅರ್ಥ. ಅಂದರೆ ಎಲೆಯಿಂದ ಕೂಡಿದ ಹೂವು ಎಂದು ಅರ್ಥ. ಗುಲಬರ್ಗಾ ಎಂಬ ಹೆಸರು ರಾಜ ಗುಲ್‌ಚಂದ್ ಹೆಸರಿನೊಂದಿಗೂ ಕೂಡಿಕೊಂಡಿದೆ. ಚರಿತ್ರಕಾರರ

**ಹಳೆಯ ಮೈಸೂರು ರಾಜ್ಯದ ಪುನಾರಚನೆಯು ನಡೆದ 1956ರಲ್ಲಿ ಹೈದರಾಬಾದ್ ಸಂಸ್ಥಾನದಿಂದ ಕರ್ನಾಟಕ ರಾಜ್ಯಕ್ಕೆ ವರ್ಗಾವಣೆಗೊಂಡ ಮೂರು ಜಿಲ್ಲೆಗಳ ಪೈಕಿ ಗುಲಬರ್ಗಾ ಒಂದಾಗಿದೆ. ಹೀಗೆ ವರ್ಗಾವಣೆಗೊಂಡ ಮೂರು ಜಿಲ್ಲೆಗಳೆಂದರೆ ಬೀದರ್, ಗುಲಬರ್ಗಾ ಮತ್ತು ರಾಯಚೂರು (ಈಗ ರಾಯಚೂರು ಜಿಲ್ಲೆಯಿಂದ ಬೇರ್ಪಟ್ಟ ಕೊಪ್ಪಳ ಜಿಲ್ಲೆಯನ್ನು ಸೇರಿಸಿಕೊಂಡು). ಈ ಮೂರು ಜಿಲ್ಲೆಗಳ ಗುಂಪನ್ನು ಇಂದಿಗೂ ಹೈದರಾಬಾದ್ ಕರ್ನಾಟಕ ಪ್ರದೇಶವೆಂದು ಕರೆಯಲಾಗುತ್ತಿದೆ.**



ಪ್ರಕಾರ ಗುಲಬರ್ಗಾ ಕೋಟೆಯನ್ನು ಮೂಲದಲ್ಲಿ ಗುಲ್‌ಚಂದ್ ಕಟ್ಟಿಸಿದನೆಂದೂ, ತದನಂತರ ಅದನ್ನು ಅಲ್ಲಾವುದ್ದೀನ್ ಬಹಮನಿಯು ಬಲಪಡಿಸದನೆಂದು ಹೇಳಲಾಗುತ್ತಿದೆ. ಗುಲಬರ್ಗಾವು 16ನೆಯ ಶತಮಾನದವರೆಗೆ ಕಲಬುರ್ಗಿಯೆಂದೇ ಪ್ರಸಿದ್ಧವಾಗಿತ್ತು. ಆದರೆ ಅಲ್ಲಿಂದ ನಂತರ ಅದು ಗುಲಬರ್ಗಾ ಎಂದು ಪ್ರಚುರಕ್ಕೆ ಬಂದಿತು (ಕರ್ನಾಟಕ ಸರ್ಕಾರ, ಕರ್ನಾಟಕ ರಾಜ್ಯ ಗೆಜೆಟೀಯರ್–ಗುಲಬರ್ಗಾ ಜಿಲ್ಲೆ ಪು:2)

ಈ ಪ್ರದೇಶವು ಶ್ರೀಮಂತವಾದ ಪರಂಪರೆಯನ್ನು ಹೊಂದಿದೆ. ಚಾಲುಕ್ಯರು ಮತ್ತು ರಾಷ್ಟ್ರಕೂಟರು ಇದನ್ನು ಆಳಿದ್ದಾರೆ. ನೃಪತುಂಗ ಚಕ್ರವರ್ತಿಯ ಕಾಲದಲ್ಲಿ ಪ್ರಸಿದ್ಧ ಸಾಹಿತ್ಯ ಕೃತಿ ಕವಿರಾಜಮಾರ್ಗ ರಚಿತವಾಯಿತು. ಮಹಾವೀರಾಚಾರ್ಯನ ಮಹತ್ವದ ಗಣಿತವನ್ನು ಕುರಿತ ಕೃತಿ ಮತ್ತು ವಿಜ್ಞಾನೇಶ್ವರನಿಂದ ರಚಿತವಾದ ಕೃತಿ 'ಮಿತಾಕ್ಷರ' ಈ ಪ್ರದೇಶಕ್ಕೆ ಸೇರಿದೆ. ಈ ಪ್ರದೇಶವು ಅಂದು ಶಿಕ್ಷಣದಲ್ಲಿ ಬಹಳ ಮುಂದಿತ್ತು ಎಂದು ಹೇಳಲಾಗುತ್ತಿದೆ. ಚಿತ್ತಾಪುರ ತಾಲ್ಲೂಕಿನಲ್ಲಿ ದೊರೆತ 'ನಾಗಾಯಿ ವಿಶ್ವವಿದ್ಯಾಲಯ'ದ ಅವಶೇಷಗಳಿಂದ ಇದು ಸ್ಪಷ್ಟವಾಗುತ್ತದೆ. ಈ ಪ್ರದೇಶದಲ್ಲಿ 12ನೆಯ ಶತಮಾನದಲ್ಲಿ ಶ್ರೀ ಬಸವೇಶ್ವರ ಮತ್ತು ಅವನ ಅನುಯಾಯಿಗಳ ನೇತೃತ್ವದಲ್ಲಿ ಬೃಹತ್ ಸಮಾಜ ಸುಧಾರಣಾ ಚಳುವಳಿಯೊಂದು ನಡೆದುಹೋಯಿತು. ಅದು ಸಮಾಜವನ್ನು ಒಂದು ಮಾಡುವ ಮತ್ತು ಸಮಾನತೆ ಕಡೆಗೆ ಸಮಾಜವನ್ನು ಒಯ್ಯುವ ಚಳುವಳಿಯಾಗಿತ್ತು. ಉತ್ಪಾದನೆ ಮತ್ತು ವಿತರಣೆಗಳು ದಾಸೋಹ ಮತ್ತು ಕಾಯಕ ಸಿದ್ಧಾಂತಗಳ ಮೇಲೆ ನಿಂತಿದ್ದರಿಂದ ಅಲ್ಲಿ ಸಾಮಾಜಿಕ ಸುಖವನ್ನು ಗರಿಷ್ಟೀಕರಿಸಿಕೊಳ್ಳುವುದು ಸಾಧ್ಯವಾಯಿತು.

**ಈ ಪ್ರದೇಶದಲ್ಲಿ 12ನೆಯ ಶತಮಾನದಲ್ಲಿ ಶ್ರೀ ಬಸವೇಶ್ವರ ಮತ್ತು ಅವನ ಅನುಯಾಯಿಗಳ ನೇತೃತ್ವದಲ್ಲಿ ಬೃಹತ್ ಸಮಾಜ ಸುಧಾರಣಾ ಚಳುವಳಿಯೊಂದು ನಡೆದುಹೋಯಿತು. ಅದು ಸಮಾಜವನ್ನು ಒಂದು ಮಾಡುವ ಮತ್ತು ಸಮಾನತೆ ಕಡೆಗೆ ಸಮಾಜವನ್ನು ಒಯ್ಯುವ ಚಳುವಳಿಯಾಗಿತ್ತು. ಉತ್ಪಾದನೆ ಮತ್ತು ವಿತರಣೆಗಳು ದಾಸೋಹ ಮತ್ತು ಕಾಯಕ ಸಿದ್ಧಾಂತಗಳ ಮೇಲೆ ನಿಂತಿದ್ದರಿಂದ ಅಲ್ಲಿ ಸಾಮಾಜಿಕ ಸುಖವನ್ನು ಗರಿಷ್ಟೀಕರಿಸಿಕೊಳ್ಳುವುದು ಸಾಧ್ಯವಾಯಿತು.**

ಇದರ ಪರಿಣಾಮವಾಗಿ ಸಾಮಾಜಿಕ ನ್ಯಾಯದಿಂದ ಕೂಡಿದ ಸಮಾಜವು ಅಭಿವೃದ್ಧಿಯಾಗುವುದು ಸಾಧ್ಯವಾಯಿತು. ಶಿವಶರಣರು ರಚಿಸಿದ ವಚನಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದವು. ಗುಲಬರ್ಗಾವು ಪ್ರಸಿದ್ಧ ಸೂಫಿ ಸಂತ ಹಜರತ್ ಖಾಜ ಬಂದೇ ನವಾಜನ ಕಾರ್ಯಸ್ಥಾನವಾಗಿದೆ.



19ನೆಯ ಶತಮಾನದಲ್ಲಿ ಸಂಭವಿಸಿದ ನಿರಂತರ ಬರಗಳಿಂದಾಗಿ ಹಾಗೂ ಅನಿಶ್ಚಿತ ಮಳೆಯಿಂದಾಗಿ ಜನರ ಜೀವನವು ಸುಖಕರವಾಗಿರಲಿಲ್ಲ ಮತ್ತು ಅಲ್ಲಿ ಸಾಮಾಜಿಕ ಭದ್ರತೆ ಎಂಬುದಿರಲಿಲ್ಲ. ಹೈದರಾಬಾದ್ ನಿಜಾಮನ ಆಡಳಿತ ವ್ಯವಸ್ಥೆಯ ಅದಕ್ಷತೆ ಮತ್ತು ಔದಾಸೀನ್ಯದಿಂದಾಗಿ ಈ ಪ್ರದೇಶವು ಸರಿಯಾಗಿ ಅಭಿವೃದ್ಧಿಯಾಗಲಿಲ್ಲ. ರಾಜ್ಯದ ಆಡಳಿತ ಕೇಂದ್ರ ಮತ್ತು ಗುಲಬರ್ಗಾದ ನಡುವೆ ಭೂಗೋಳಿಕವಾಗಿ ಅಂತರ ಬಹಳವಿದ್ದುದರಿಂದಲೂ ಇದರ ಅಭಿವೃದ್ಧಿ ಕುಂಠಿತಗೊಂಡಿತು. ಈ ಭಾಗವು 1956ರಲ್ಲಿ ಮೈಸೂರು ಪ್ರಾಂತದಲ್ಲಿ ವಿಲೀನವಾದಾಗ ಅದು ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿತ್ತು. ದುರದೃಷ್ಟದ ಸಂಗತಿಯೆಂದರೆ ಇದು ಸ್ವಾತಂತ್ರ್ಯ ಪಡೆಯುವುದರಲ್ಲಿಯೂ ಹಿಂದೆ ಬಿದ್ದಿತು. ಏಕೆಂದರೆ ದೇಶಕ್ಕೆ ಆಗಸ್ಟ್ 15, 1947ರಲ್ಲಿ ಸ್ವಾತಂತ್ರ್ಯ ಬಂದರೆ ಹೈದರಾಬಾದ್ ಪ್ರದೇಶಕ್ಕೆ ಸ್ವಾತಂತ್ರ್ಯವು ಸೆಪ್ಟೆಂಬರ್ 17, 1948 ರಲ್ಲಿ ಪ್ರಾಪ್ತವಾಯಿತು.

ಹೀಗೆ ತನ್ನ ಸಾಂಸ್ಕೃತಿಕ ಪರಂಪರೆಯನ್ನೇ ಕಳೆದುಕೊಂಡ ಅತ್ಯಂತ ಹಿಂದುಳಿದ ಸ್ಥಿತಿಯಲ್ಲಿದ್ದ ಈ ಪ್ರದೇಶವನ್ನು ರಾಷ್ಟ್ರದ ಮತ್ತು ರಾಜ್ಯದ ಅಭಿವೃದ್ಧಿ ವಾಹಿನಿಯಲ್ಲಿ ವಿಲೀನಗೊಳಿಸಬೇಕೆಂದರೆ ಅದಕ್ಕೆ ಬಹಳಷ್ಟು ಶ್ರಮದ ಮತ್ತು ಅವಿರತ ಪ್ರಯತ್ನದ ಅಗತ್ಯವಿತ್ತು. ಆದರೆ ಅಂತಹ ಪ್ರಯತ್ನ ನಡೆಯದೆ ಇದ್ದುದರಿಂದ ಕರ್ನಾಟಕ ರಾಜ್ಯವು ಏಕೀಕರಣಗೊಂಡ ಮೇಲೂ ಅದರ ಸ್ಥಾನಮಾನವು ಬದಲಾಗಲಿಲ್ಲ. ಅದು 1960 ರಿಂದ 2000ದ ಅವಧಿಯಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ರಾಜ್ಯದಲ್ಲಿ ಕಟ್ಟಕಡೆಯ ಸ್ಥಾನದಲ್ಲೇ ಉಳಿಯಿತು. ಅದು ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳಲ್ಲೂ ಕಟ್ಟಕಡೆಯ ಸ್ಥಾನದಲ್ಲಿರುವುದನ್ನೂ (ಕೆಎಚ್‌ಡಿಆರ್ 1999 ಮತ್ತು 2005) ಕಂಡು ಬರುತ್ತದೆ. ಆದ್ದರಿಂದ ಜಿಲ್ಲೆಯ ಸ್ಥಿತಿಗತಿಯು ಹೇಗಿದೆ ಎಂಬುದನ್ನು ತಿಳಿದುಕೊಳ್ಳಲು ತಳಮಟ್ಟದಲ್ಲಿನ ಸ್ಥಿತಿಗತಿಯ ವಿಶ್ಲೇಷಣೆಯ ಅಗತ್ಯವಾಗಿದೆ. ಆಗ ಮಾತ್ರ ಇದರ ಅಭಿವೃದ್ಧಿಯನ್ನು ತಡೆಯುತ್ತಿರುವ ಸಂಗತಿಗಳಾವುವು ಎಂಬುದು ತಿಳಿಯುತ್ತದೆ.

ಅದರ ಆಧಾರದ ಮೇಲೆ ಜಿಲ್ಲೆಯ ಮಾನವ ಅಭಿವೃದ್ಧಿ ಮಟ್ಟವನ್ನು ಉತ್ತಮಪಡಿಸಲು ಅಗತ್ಯವಾದ ಕಾರ್ಯಕ್ರಮಗಳನ್ನು ಮತ್ತು ನೀತಿಗಳನ್ನು ರೂಪಿಸಿ ಅವುಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬಹುದು.

## ಜಿಲ್ಲೆಯು ನೆಲೆಗೊಂಡಿರುವ ಸ್ಥಳ

ಕರ್ನಾಟಕ ರಾಜ್ಯದಲ್ಲಿನ 29 ಜಿಲ್ಲೆಗಳ ಪೈಕಿ ಗುಲಬರ್ಗಾವು ಒಂದಾಗಿದೆ. ಇದು ರಾಜ್ಯದ ಉತ್ತರ ಭಾಗದಲ್ಲಿ ನೆಲೆಗೊಂಡಿದೆ. ಇದು ಉತ್ತರ ಅಕ್ಷಾಂಶ $17^{0}10$ ಡಿಗ್ರಿ ಮತ್ತು $17^{0}45$ರ ಡಿಗ್ರಿಗಳ ನಡುವೆ ಮತ್ತು ಪೂರ್ವ ರೇಖಾಂಶ $76^{0}10$ ಡಿಗ್ರಿ ಮತ್ತು $77^{0}45$ರ ಡಿಗ್ರಿಗಳ ನಡುವೆ ನೆಲೆಗೊಂಡಿದೆ. ರಾಜ್ಯದಲ್ಲಿ ಇದು ಅತ್ಯಂತ ದೊಡ್ಡ ಜಿಲ್ಲೆಯಾಗಿದೆ. ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಶೇ. 8.49ರಷ್ಟನ್ನು ಮತ್ತು ಜನಸಂಖ್ಯೆಯಲ್ಲಿ ಶೇ. 5.9ರಷ್ಟು ಪಾಲು ಪಡೆದಿದೆ. ಇದರ ಪಶ್ಚಿಮ ದಿಕ್ಕಿನಲ್ಲಿ ಕರ್ನಾಟಕ ರಾಜ್ಯದ ವಿಜಾಪುರ ಜಿಲ್ಲೆ ಮತ್ತು ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಗಳಿದ್ದರೆ ಪೂರ್ವದಲ್ಲಿ ಆಂದ್ರದ ಮೆಹಬೂಬ್‌ನಗರ್ ಜಿಲ್ಲೆಯಿದೆ. ಉತ್ತರದಲ್ಲಿ ಕರ್ನಾಟಕದ ಬೀದರ್ ಮತ್ತು ರಾಯಚೂರು ಮತ್ತು ಮಹಾರಾಷ್ಟ್ರದ ಉಸ್ಮಾನಾಬಾದ್ ಜಿಲ್ಲೆಗಳಿವೆ. ಜಿಲ್ಲೆಯಲ್ಲಿ ಹತ್ತು ತಾಲ್ಲೂಕುಗಳಿವೆ. ಅವುಗಳಾವುವೆಂದರೆ ಅಫಜಲಪುರ, ಅಳಂದ್, ಚಿಂಚೋಳಿ, ಚಿತ್ತಾಪುರ, ಗುಲಬರ್ಗಾ, ಜೇವರ್ಗಿ, ಸೇಡಮ್, ಶೋರಾಪುರ, ಶಹಾಪುರ ಮತ್ತು ಯಾದಗೀರ್.

## ಭೌಗೋಳಿಕ ಲಕ್ಷಣಗಳು

ಜಿಲ್ಲೆಯ ಒಟ್ಟು ಭೌಗೋಳಿಕ ವಿಸ್ತೀರ್ಣ 16174 ಚ.ಕಿ.ಮೀ. ಮತ್ತು ರಾಜ್ಯದ ಭೌಗೀಳಿಕ ವಿಸ್ತೀರ್ಣದಲ್ಲಿ ಇದರ ಪಾಲು ಶೇ 8.49 ಈ ಪ್ರದೇಶವು ವಿಶಾಲವಾದ ಹತ್ತಿ ಕಪ್ಪು ಮಣ್ಣಿನಿಂದ ಕೂಡಿದೆ. ಈ ಪ್ರದೇಶದಲ್ಲಿ ಮರಗಳು ಬಹಳ ಅಪರೂಪ ಮತ್ತು ಇದು ವಿಶಾಲ ಬಟಾಬಯಲ ಪ್ರದೇಶವನ್ನು ಹೊಂದಿದೆ. ಸರಿಸುಮಾರು 60 ಕಿ.ಮೀ.ನಷ್ಟು ವಿಸ್ತೀರ್ಣದ ಗುಡ್ಡಗಳ ಸಾಲು ಮತ್ತು ಕೃಷ್ಣ ಹಾಗೂ ಭೀಮಾ ನದಿ ಕೊಳ್ಳಗಳು ಇಲ್ಲಿನ ಭೌಗೋಳಿಕ ಲಕ್ಷಣಗಳಾಗಿವೆ. ಜಿಲ್ಲೆಯಲ್ಲಿ ಅರಣ್ಯ ಪ್ರದೇಶವೆಂಬುದಿಲ್ಲ. ಅಳಂದ್ ಮತ್ತು ಚಿಂಚೋಳಿ ಪ್ರದೇಶದ ಸಣ್ಣ ಗುಡ್ಡಗಳಲ್ಲಿ ಕೆಲವು ಗಿಡಮರಗಳಿವೆ. ಜಿಲ್ಲೆಯ ಒಟ್ಟು ಭೌಗೋಳೀಕ ಪ್ರದೇಶದಲ್ಲಿ ಅರಣ್ಯ ಪ್ರದೇಶದ ಪಾಲು ಶೇ. 4.2.

ಇದು ಬರಪೀಡಿತ ಜಿಲ್ಲೆಯಾಗಿದೆ. ಸರಾಸರಿ ಮಳೆಯ ಪ್ರಮಾಣ 777 ಮಿ.ಮೀ. ಮತ್ತು ಸಾಮಾನ್ಯ ಮಳೆಯ ದಿನಗಳು ವಾರ್ಷಿಕ 46. ಬೇಸಿಗೆಯಲ್ಲಿ ತಾಪಮಾನವು ಅತ್ಯಂತ ಗರಿಷ್ಟ ಮಟ್ಟದಲ್ಲಿರುತ್ತದೆ. ಇದು ಜನರ ದುಡಿಮೆಯ ಸಾಮರ್ಥ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಇಲ್ಲಿನ ತಾಪಮಾನವು ಬೇಸಿಗೆಯಲ್ಲಿ 42 ಡಿಗ್ರಿ ಸೆಂಟಿಗ್ರೇಡಿನಷ್ಟಿದ್ದರೆ ಚಳಿಗಾಲದಲ್ಲಿ ಅದು 26 ಡಿಗ್ರಿ ಸೆಂಟಿಗ್ರೇಡಿನಷ್ಟಿರುತ್ತದೆ. ವರ್ಷದ ಡಿಸೆಂಬರ್ ಮತ್ತು ಮೇ ತಿಂಗಳುಗಳು ಅತ್ಯಂತ ಶುಷ್ಕವಾಗಿರುತ್ತವೆ. ಜಿಲ್ಲೆಯಲ್ಲಿನ ಖನಿಜ ನಿಕ್ಷೇಪ ಅತ್ಯಂತ ಕೆಳಮಟ್ಟದಲ್ಲಿದೆ. ಇಲ್ಲಿ ದೊರೆಯುವ ಮುಖ್ಯ ಖನಿಜವೆಂದರೆ ಸುಣ್ಣಕಲ್ಲು. ಇದು ಜಿಲ್ಲೆಯ ಚಿತ್ತಾಪುರ, ಜೇವರ್ಗಿ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ದೊರೆಯುತ್ತದೆ. ಆದ್ದರಿಂದ ಜಿಲ್ಲೆಯಲ್ಲಿರುವ ಬೃಹತ್ ಉದ್ದಿಮೆಯೆಂದರೆ ಸಿಮೆಂಟ್ ಕಾರ್ಖಾನೆಗಳು.

## ಜನಸಂಖ್ಯೆ ಮತ್ತು ಮಾನವ ಸಂಪನ್ಮೂಲ

ಈ ಜಿಲ್ಲೆಯು ಜನಸಂಖ್ಯಾ ಪರಿವರ್ತನೆಯ ಎರಡನೆಯ ಹಂತದಲ್ಲಿ ದೀರ್ಘ ಕಾಲದಿಂದ ಮುಂದುವರಿದಿರುವುದು ತಿಳಿದು ಬರುತ್ತದೆ. ಜನಸಂಖ್ಯೆಯು 1951ರಿಂದಲೂ ತೀವ್ರಗತಿಯಲ್ಲಿ ಬೆಳೆಯುತ್ತಾ ಬಂದಿದೆ. ಅದು 1951–61ರ ದಶಕದಲ್ಲಿ ಶೇ. 14.5ರಷ್ಟು ಏರಿಕೆಯಾಗಿದ್ದರೆ 1981–1991ರಲ್ಲಿ ಅದು ಶೇ. 24ರ ಪ್ರಮಾಣದಲ್ಲಿ ಏರಿತು. ಆದರೆ ಅದು 1991–2000 ದಶಕದಲ್ಲಿ ಶೇ. 21ಕ್ಕೆ ಇಳಿದಿದೆ. ಈ ಜಿಲ್ಲೆಯ 2001ರ ಜನಸಂಖ್ಯೆ 31,30,922. ಅದರಲ್ಲಿ ಮಹಿಳೆಯರ ಜನಸಂಖ್ಯೆ 15,92,789 ಮತ್ತು ಪುರುಷರ ಜನಸಂಖ್ಯೆ 15,38,133. ಇದರಿಂದ ಅಲ್ಲಿನ ಲಿಂಗ ಅನುಪಾತ 966. ಇದು ರಾಜ್ಯ ಮಟ್ಟದ ಲಿಂಗ ಅನುಪಾತವಾದ 965 ಕ್ಕಿಂತ ಮತ್ತು ರಾಷ್ಟ್ರೀಯ ಲಿಂಗ ಅನುಪಾತವಾದ 933ಕ್ಕಿಂತ ಸ್ವಲ್ಪ ಅಧಿಕವಾಗಿದೆ. ಗ್ರಾಮೀಣ ಜನಸಂಖ್ಯೆಯ ಪ್ರಮಾಣ ಶೇ. 72.8 ಒಟ್ಟು

ಜನಸಂಖ್ಯೆಯಲ್ಲಿ ಪ.ಜಾ ಮತ್ತು ಪ.ಪಂ. ಗಳ ಜನರ ಪ್ರಮಾಣ ಕ್ರಮವಾಗಿ ಶೇ. 22.9 ಮತ್ತು ಶೇ. 4.9. ಭೂಗೋಳಿಕ ಪ್ರದೇಶವು ವಿಶಾಲವಾಗಿರುವುದರಿಂದ ಜನಸಂಖ್ಯೆಯು ಇಲ್ಲಿ ವಿರಳವಾಗಿ ಹರಡಿಕೊಂಡಿದೆ. ಇಲ್ಲಿನ ಜನಸಾಂದ್ರತೆ ಕೇವಲ ಪ್ರತಿ ಚ.ಕೀ.ಮೀ.ಗೆ 192.

ಕೋಷ್ಟಕ 1.1

## ಇಪ್ಪತ್ತನೆಯ ಶತಮಾನದಲ್ಲಿ ಜನಸಂಖ್ಯೆಯ ಬೆಳವಣಿಗೆಯ ಪ್ರವೃತ್ತಿ

| ವರ್ಷಗಳು | ಜನಸಂಖ್ಯೆ | ದಶಕವಾರು ಏರಿಕೆ |
|---|---|---|
| 1901 | 883062 | – |
| 1911 | 964468 | + 9.22 |
| 1921 | 887875 | – 7.94 |
| 1931 | 990505 | + 11.56 |
| 1941 | 1059716 | + 6.99 |
| 1951 | 1213608 | + 14.5 |
| 1961 | 1399457 | + 15.31 |
| 1971 | 1739220 | + 24.2 |
| 1981 | 2080643 | + 19.6 |
| 1991 | 2582169 | + 24.1 |
| 2001 | 3130922 | + 21.4 |

ಮೂಲ: ಸೆನ್ಸಸ್ ಆಫ್ ಇಂಡಿಯಾ : ಜಿಲ್ಲಾ ಸೆನ್ಸಸ್ ಕೈಪಿಡಿ – ಗುಲಬರ್ಗಾ ಜಿಲ್ಲೆ 1961 ರಿಂದ 2001.

ಜಿಲ್ಲೆಯ ಆಡಳಿತ ರಚನೆ, ಪ್ರದೇಶದ ವಿಸ್ತೀರ್ಣ ಮತ್ತು ಜನಸಂಖ್ಯೆಯ ವಿವರಗಳನ್ನು ಕೋಷ್ಟಕ : 1.2ರಲ್ಲಿ ತೋರಿಸಲಾಗಿದೆ. ಜಿಲ್ಲೆಯಲ್ಲಿ ಜನರು ವಾಸಿಸುತ್ತಿರುವ 1360 ಹಳ್ಳಿಗಳಿವೆ ಮತ್ತು ಜನವಸತಿಯಿಲ್ಲದ ಹಳ್ಳಿಗಳ ಸಂಖ್ಯೆ 77. ಜಿಲ್ಲೆಯು ಒಟ್ಟು ಭೂಗೋಳಿಕ ಪ್ರದೇಶದಲ್ಲಿ ಕ್ರಮವಾಗಿ ಶೇ. 11.23 ಮತ್ತು ಶೇ. 11.22ರಷ್ಟು ಪಾಲು ಪಡೆದಿರುವ ಜೇವರ್ಗಿ ಮತ್ತು ಶೋರಾಪುರ ಅತಿ ದೊಡ್ಡ ಎರಡು ತಾಲ್ಲೂಕುಗಳಾಗಿವೆ. ಈ ತಾಲ್ಲೂಕುಗಳು ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪಡೆದ ಪಾಲು ಕ್ರಮವಾಗಿ ಶೇ. 7.5 ಮತ್ತು 10.7. ಆದರೆ ಗುಲಬರ್ಗಾ ತಾಲ್ಲೂಕು ಭೂಗೋಳಿಕ ವಿಸ್ತೀರ್ಣದಲ್ಲಿ ಶೇ. 10. 6ರಷ್ಟು ಪಾಲು ಪಡೆದಿದ್ದರೂ ಜನಸಂಖ್ಯೆಯಲ್ಲಿ ಶೇ. 21.6ರಷ್ಟು ಪಾಲು ಪಡೆದಿದೆ. ಇದರಿಂದಾಗಿ ಗುಲಬರ್ಗಾ ತಾಲ್ಲೂಕಿನಲ್ಲಿ ಜನಸಾಂದ್ರತೆ ಅತ್ಯಧಿಕವಾಗಿದೆ. ಲಿಂಗ ಅನುಪಾತವು ಸೇಡಮ್ ತಾಲ್ಲೂಕಿನಲ್ಲಿ

ಕೋಷ್ಟಕ 1.1–ಅ

## ಭೌಗೋಳಿಕ ವಿಸ್ತೀರ್ಣ ಮತ್ತು ಜನಸಂಖ್ಯೆ

| ತಾಲ್ಲೂಕು | ಭೌಗೋಳಿಕ | ಜನಸಂಖ್ಯೆ: 2001 | | | | | | |
|---|---|---|---|---|---|---|---|---|
| | ವಿಸ್ತೀರ್ಣ (ಚ.ಕಿ.ಮೀ) | ಒಟ್ಟು | ಪುರುಷರು | ಮಹಿಳೆಯರು | ಗ್ರಾಮೀಣ | ನಗರ | ಜನಸಾಂದ್ರತೆ | ಲಿಂಗ ಅನುಪಾತ |
| 1 | 2 | 3 | 4 | 5 | 6 | 7 | 8 | 9 |
| ಅಫಜಲಪುರ | 1305 | 180071 | 92538 | 87533 | 160736 | 19335 | 138 | 946 |
| ಅಳಂದ | 1735 | 297136 | 152233 | 144903 | 261891 | 35245 | 171 | 952 |
| ಚಿಂಚೋಳಿ | 1569 | 223646 | 113309 | 110337 | 206502 | 17144 | 143 | 974 |
| ಚಿತ್ತಾಪೂರ | 1765 | 366802 | 186390 | 180412 | 238532 | 128270 | 208 | 968 |
| ಗುಲಬರ್ಗಾ | 1730 | 675679 | 348665 | 327014 | 245414 | 430265 | 391 | 938 |
| ಜೇವರ್ಗಿ | 1822 | 235254 | 119598 | 115656 | 216075 | 19179 | 129 | 967 |
| ಸೇಡಂ | 1025 | 196154 | 97709 | 98445 | 156026 | 40128 | 191 | 1008 |
| ಶಹಾಪುರ | 1694 | 293518 | 148319 | 145199 | 249819 | 43699 | 173 | 979 |
| ಸುರಪುರ | 1820 | 336755 | 170092 | 166663 | 293133 | 43622 | 185 | 980 |
| ಯಾದ್‌ಗೀರ್ | 1709 | 325907 | 163936 | 161971 | 25173 | 75734 | 191 | 988 |
| **ಒಟ್ಟು** | **16174** | **3130922** | **1592789** | **1538133** | **2278301** | **852621** | **192** | **966** |

ಮೂಲ: ಸೆನ್ಸಸ್ ಆಫ್ ಇಂಡಿಯಾ : ಜಿಲ್ಲಾ ಸೆನ್ಸಸ್ ಕೈಪಿಡಿ – ಗುಲಬರ್ಗಾ ಜಿಲ್ಲೆ 1961 ರಿಂದ 2001.

ಮಹಿಳೆಯರಿಗೆ ಅನುಕೂಲವಾಗಿದೆ. ಅದು ಅಫಜಲಪುರದಲ್ಲಿ ಅತಿ ಕಡಿಮೆ 946ರಷ್ಟಿದೆ. ಈ ಜಿಲ್ಲೆಯ ತಾಲ್ಲೂಕುಗಳಲ್ಲಿ ಲಿಂಗ ಅನುಪಾತವು ರಾಷ್ಟ್ರೀಯ ಲಿಂಗ ಅನುಪಾತ (933) ಮಟ್ಟಕ್ಕಿಂತ ಅಧಿಕವಾಗಿದೆ. ಜಿಲ್ಲೆಯ ಸಾಕ್ಷರತಾ ಪ್ರಮಾಣವು ರಾಜ್ಯ ಸರಾಸರಿಯಾದ 67.04ಕ್ಕಿಂತ ಕಡಿಮೆಯಿದೆ. ಈ ಜಿಲ್ಲೆಯು ಮೂಲತಃ ಗ್ರಾಮೀಣ ಸ್ವರೂಪದ್ದಾಗಿದೆ. ಅಲ್ಲಿ ಗ್ರಾಮೀಣವಾಸಿಗಳ ಪ್ರಮಾಣ ಶೇ. 72.8.

ಈ ಜಿಲ್ಲೆಯ ಗ್ರಾಮೀಣ ಪ್ರದೇಶದ ಜನಸಂಖ್ಯಾ ಸ್ವರೂಪವನ್ನು ಕೊಷ್ಟಕ–1.3ರಲ್ಲಿ ತೋರಿಸಿದೆ.

ಕೋಷ್ಟಕ 1.2

## ಜಿಲ್ಲೆಯ ತಾಲ್ಲೂಕುಗಳಿಗೆ ಸಂಬಂಧಿಸಿದ ಮೂಲ ಸಂಗತಿಗಳು

| ಕ್ರ. ಸಂ. | ತಾಲ್ಲೂಕುಗಳು | ವಿಸ್ತೀರ್ಣ (ಚ.ಕಿ.ಮಿ) | ಗ್ರಾ.ಪಂ. | ಹಳ್ಳಿಗಳು | ಜನಸಂಖ್ಯೆ | ಸಾಕ್ಷರತೆ | ಜನಸಾಂದ್ರತೆ | ಲಿಂಗ ಅನುಪಾತ |
|---|---|---|---|---|---|---|---|---|
| 1 | ಅಫಜಲಪುರ | 1305 | 22 | 89 | 180071 | 50.9 | 138 | 946 |
| 2 | ಆಳಂದ್ | 1735 | 39 | 135 | 297136 | 52.9 | 171 | 952 |
| 3 | ಚಿಂಚೋಳಿ | 1569 | 32 | 137 | 223646 | 48.6 | 143 | 974 |
| 4 | ಚಿತ್ತಾಪುರ | 1765 | 35 | 122 | 366802 | 49.5 | 208 | 968 |
| 5 | ಗುಲಬರ್ಗಾ | 1730 | 36 | 136 | 675679 | 66.5 | 391 | 938 |
| 6 | ಜೇವರ್ಗಿ | 1822 | 33 | 145 | 235254 | 44.1 | 129 | 967 |
| 7 | ಸೇಡಮ್ | 1025 | 23 | 109 | 196154 | 44.8 | 191 | 008 |
| 8 | ಶಹಾಪುರ | 1694 | 36 | 145 | 293518 | 38.8 | 173 | 979 |
| 9 | ಶೋರಾಪುರ | 1820 | 42 | 190 | 336755 | 43.4 | 185 | 980 |
| 10 | ಯಾದಗೀರ್ | 1709 | 39 | 152 | 325907 | 37.2 | 191 | 988 |
| | **ಜಿಲ್ಲೆ** | **16224** | **337** | **1360** | **3130922** | **50.01** | **192** | **966** |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿ ಅಂಶಗಳ ನೋಟ : 2005–06

ಕೋಷ್ಟಕ 1.3

## ಗುಲಬರ್ಗಾ ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯ ವಿತರಣೆ ಸ್ವರೂಪ

| ತಾಲ್ಲೂಕು | ಒಟ್ಟು ಜನಸಂಖ್ಯೆ | ಗ್ರಾಮೀಣ ಪ್ರಮಾಣ(ಶೇ) | ಪ.ಜಾ. ಪ್ರಮಾಣ(ಶೇ) | ಪ.ಪಂ. ಪ್ರಮಾಣ(ಶೇ) | ಹಿಂದೂಗಳು ಜನಸಂಖ್ಯೆ(ಶೇ) | ಮುಸ್ಲಿಮರ ಜನಸಂಖ್ಯೆ(ಶೇ) | ಅಲ್ಪಸಂಖ್ಯಾತರ ಜನಸಂಖ್ಯೆ(ಶೇ) |
|---|---|---|---|---|---|---|---|
| ಅಫಜಲಪುರ | 160736 | 89.3 | 17.8 | 2.3 | 80.9 | 12.2 | 18.8 |
| ಆಳಂದ್ | 261891 | 88.1 | 24.3 | 2.3 | 79.3 | 9.1 | 20.4 |
| ಚಿಂಚೋಳಿ | 206502 | 92.3 | 33.9 | 2.4 | 81.1 | 14.3 | 18.6 |
| ಚಿತ್ತಾಪುರ | 238532 | 65.0 | 28.0 | 1.9 | 74.5 | 15.6 | 25.3 |
| ಗುಲಬರ್ಗಾ | 245414 | 36.3 | 30.0 | 2.2 | 78.5 | 12.1 | 21.2 |
| ಜೇವರ್ಗಿ | 216075 | 91.8 | 20.0 | 4.8 | 78.0 | 14.5 | 21.6 |
| ಸೇಡಮ್ | 156026 | 79.5 | 27.1 | 2.6 | 86.7 | 10.5 | 12.8 |
| ಶಹಾಪುರ | 249819 | 85.1 | 24.6 | 9.1 | 80.1 | 12.7 | 19.7 |
| ಶೋರಾಪುರ | 293133 | 87.0 | 19.4 | 18.3 | 88.2 | 9.1 | 11.6 |
| ಯಾದಗೀರ್ | 250173 | 76.8 | 25.0 | 7.6 | 89.9 | 7.6 | 10.1 |
| **ಜಿಲ್ಲೆ** | **2278301** | **72.8** | **25.0** | **5.9** | **81.8** | **11.6** | **18.0** |
| **ಕರ್ನಾಟಕ** | **34889033** | **64.7** | **18.4** | **8.4** | **89.4** | **7.6** | **10.3** |

ಮೂಲ: ಸೆನ್ಸಸ್ ಆಫ್ ಇಂಡಿಯ ವಿಲೇಜ್ ಡೈರೆಕ್ಟರಿ 2001

ಜನಸಂಖ್ಯೆಯು ತುಂಬ ವಿರಳವಾಗಿ ಜಿಲ್ಲೆಯಲ್ಲಿ ಹರಡಿಕೊಂಡಿದೆ. ಇಲ್ಲಿನ ಜನಸಾಂದ್ರತೆ ಪ್ರತಿ ಚ.ಕಿ.ಮೀ.ಗೆ 192. ಜನಸಂಖ್ಯೆಯಲ್ಲಿ ಪ.ಜಾ. ಮತ್ತು ಪ.ಪಂ. ಜನಸಂಖ್ಯೆ ಪ್ರಮಾಣ ಕ್ರಮವಾಗಿ ಶೇ. 22.9 ಮತ್ತು ಶೇ. 4.9. ಇದು ಗ್ರಾಮೀಣ ಪ್ರದೇಶದಲ್ಲಿ ಶೇ. 25 ಮತ್ತು ಶೇ. 5.9ರಷ್ಟಿದೆ. ಒಟ್ಟು ಜನಸಂಖ್ಯೆಯಲ್ಲಿ ಮುಸ್ಲಿಮರ ಪ್ರಮಾಣ ಶೇ. 11.6ರಷ್ಟಿದೆ. ಇವರು ಮುಖ್ಯವಾಗಿ ಚಿತ್ತಾಪುರ (ಶೇ. 15.6), ಜೇವರ್ಗಿ (ಶೇ. 14.5) ಮತ್ತು ಚಿಂಚೋಳಿ (ಶೇ. 14.2) ತಾಲ್ಲೂಕುಗಳಲ್ಲಿ ಕೇಂದ್ರೀಕರಣಗೊಂಡಿದ್ದಾರೆ. ಜಿಲ್ಲೆಯ ಗ್ರಾಮೀಣ ಜನಸಂಖ್ಯೆಯಲ್ಲಿ ಅಲ್ಪಸಂಖ್ಯಾತರ ಪ್ರಮಾಣ ಶೇ. 18ರಷ್ಟಿದೆ. ಇವರು ಚಿತ್ತಾಪುರ, ಜೇವರ್ಗಿ, ಗುಲಬರ್ಗಾ ಮತ್ತು ಅಳಂದ್ ತಾಲ್ಲೂಕುಗಳಲ್ಲಿ ಹೆಚ್ಚಾಗಿ ನೆಲೆಗೊಂಡಿದ್ದಾರೆ.

## ಸಾಮಾಜಿಕ ರಚನೆ, ಭಾಷೆ ಮತ್ತು ಸಂಸ್ಕೃತಿ

ಇಲ್ಲಿ ಕಂಡುಬರುವ ಸಂಗತಿಯೆಂದರೆ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಸರಿ ಸುಮಾರು ಅರ್ಧದಷ್ಟು ಜನರು ಕನ್ನಡ ಭಾಷೆಯನ್ನು ಪ್ರಧಾನವಾಗಿ ಆಡುತ್ತಾರೆ. ಕನ್ನಡದ ನಂತರ ಉರ್ದು, ತೆಲಗು ಭಾಷೆಗಳು ಇಲ್ಲಿ ಬಳಕೆಯಲ್ಲಿವೆ. ಉರ್ದುವನ್ನು ಸಣ್ಣಪುಟ್ಟ ನಗರಗಳಲ್ಲಿನ ಜನರು, ಅಂದರೆ ಮುಖ್ಯವಾಗಿ ಗುಲಬರ್ಗಾ, ಚಿಂಚೋಳಿ, ಶಹಾಪುರ, ಶೋರಾಪುರ ಮತ್ತು ಜೇವರ್ಗಿ ನಗರಗಳಲ್ಲಿ ಹೆಚ್ಚಾಗಿ ಮಾತನಾಡುತ್ತಾರೆ. ಗುಲಬರ್ಗಾ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಮತ್ತು ಅಳಂದ್ ತಾಲ್ಲೂಕಿನಲ್ಲಿ ಮರಾಠಿ ಮಾತನಾಡುವ ಜನರಿದ್ದಾರೆ. ಇವಲ್ಲದೆ ಜಿಲ್ಲೆಯಲ್ಲಿ ಲಂಬಾಣಿ, ಹಿಂದಿ, ಮಾರವಾಡಿ, ಗುಜರಾತಿ, ಕೊರವ, ಖತ್ರಿ, ವಡ್ಡರ್ ಮತ್ತು ಇತರೆ ಭಾಷೆಗಳನ್ನಾಡುವ ಜನರು ಇದ್ದಾರೆ.

ಜಿಲ್ಲೆಯ ಗ್ರಾಮೀಣ ಸಮುದಾಯ ಪ್ರಧಾನವಾಗಿ ಸಂಪ್ರದಾಯಸ್ಥರು. ಜನರು ಜಾತಿ ಮತ್ತು ಉಪಜಾತಿಗಳ ಆಧಾರದ ಮೇಲೆ ಸಂಘಟಿತರಾಗಿದ್ದಾರೆ. ಎರಡು ಪ್ರಧಾನ ಕೋಮುಗಳೆಂದರೆ ಬ್ರಾಹ್ಮಣರು ಮತ್ತು ಲಿಂಗಾಯತರು. ಉಳಿದ ಜಾತಿಗಳೆಂದರೆ ಜೈನರು, ಬುದ್ಧ ಅನುಯಾಯಿಗಳು, ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರು.

ಜಿಲ್ಲೆಯಲ್ಲಿ ವಿವಿಧ ಗುಂಪುಗಳಿಗೆ ಸೇರಿದ ಜಾತಿಗಳಿವೆ. ಮುಖ್ಯವಾದ ಜಾತಿಗಳೆಂದರೆ ಬ್ರಾಹ್ಮಣರು, ಲಿಂಗಾಯತರು, ಕುರುಬರು, ಗೊಂಡರು, ಬೋವಿಗಳು, ಬೇಡರು, ತೆಲಿಗಳು, ರೆಡ್ಡಿಗಳು, ಬುರುಡಿಗಳು, ಸಿಂಪಿಗಳು, ಈಡಿಗರು, ಕುಂಬಾರರು, ಮರಾಠರು, ಪಾಂಚಾಳರು, ರಾಜಪುತಾನರು, ಮಹರರು, ಮಾಂಗ ಜನರು, ಮತ್ತು ಇತರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು. ಇದರಿಂದ ಅತ್ಯಂತ ವೈವಿಧ್ಯವಾದ ಸಂಸ್ಕೃತಿ ಮತ್ತು ಜೀವನ ಪದ್ಧತಿ ಜಿಲ್ಲೆಯಲ್ಲಿರುವುದು ಕಂಡು ಬರುತ್ತದೆ.

ಗ್ರಾಮೀಣ ಪ್ರದೇಶದ ಜನರು ಸಂಪ್ರದಾಯಸ್ಥರಾಗಿದ್ದಾರೆ. ಅವರು ಪರಂಪರೆ, ಕುರುಡು ಆಚರಣೆ, ಮೂಢನಂಬಿಕೆಗಳನ್ನು ಇಟ್ಟುಕೊಂಡಿರುವವರು. ಪ್ರೇತ–ಭೂತಗಳಲ್ಲಿ ಜನರಿಗೆ ನಂಬಿಕೆ ಅಧಿಕ. ಈ ಭೂತ–ಪ್ರೇತಗಳು ಜನರ ಮೇಲೆ ದುಷ್ಪರಿಣಾಮ ಉಂಟು ಮಾಡುತ್ತವೆ ಎಂದು ಜನರು ನಂಬುತ್ತಾರೆ. ಅದಕ್ಕಾಗಿ ಅವರು ದೇವಾನುದೇವತೆಗಳನ್ನು ತೃಪ್ತಿಪಡಿಸುವ ಸಲುವಾಗಿ ಪ್ರಾಣಿ ಬಲಿ ನೀಡುತ್ತಾರೆ. ಸಾಮಾನ್ಯವಾಗಿ ಹೆಣ್ಣು ದೈವಗಳನ್ನು ಜನರು ಪೂಜಿಸುತ್ತಾರೆ. ಅತ್ಯಂತ ಜನಪ್ರಿಯ ದೇವತೆಗಳೆಂದರೆ ಮಾರಮ್ಮ, ದುರ್ಗಮ್ಮ, ಎಲ್ಲಮ್ಮ, ಗಂಗಮ್ಮ, ಇತ್ಯಾದಿ. ಪ್ರತಿ ಊರಿಗೆ ಒಬ್ಬ ದೇವತೆ ಇರುತ್ತದೆ. ಅದನ್ನು ಗ್ರಾಮ ದೇವತಾ ಎಂದು ಕರೆಯುತ್ತಾರೆ. ಅನೇಕ ದೇವತೆಗಳು ಸಾಮಾನ್ಯ ರೋಗಗಳ ಹೆಸರಿನಿಂದಲೂ ಜನಪ್ರಿಯವಾಗಿದ್ದಾವೆ. ಅವುಗಳಾವುವೆಂದರೆ ಕಾಲರಾ, ಸಿಡಿಬು, ಐತಿಗೆ, ಮುಂತಾದವು. ಇಂತಹ ರೋಗಗಳನ್ನು ದೇವತೆಗಳು ಗುಣಪಡಿಸುತ್ತವೆಯೆಂದು ಜನರು ನಂಬುತ್ತಾರೆ.

## ಆರ್ಥಿಕ ಅಭಿವೃದ್ಧಿ : ಗುಲಬರ್ಗಾ ಜಿಲ್ಲೆ – ಕರ್ನಾಟಕ ರಾಜ್ಯ.

ರಾಜ್ಯದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಕುರಿತು ಅಧ್ಯಯನ ನಡೆಸಲು ಸರ್ಕಾರವು ಒಂದು ಸಮಿತಿಯನ್ನು ನೇಮಿಸಿತ್ತು. ಅದನ್ನು ಸಾಮಾನ್ಯವಾಗಿ ಡಾ. ಡಿ.ಎಂ.ನಂಜುಂಡಪ್ಪ ಸಮಿತಿಯೆಂದು ಕರೆಯುವುದು ರೂಢಿಯಲ್ಲಿದೆ. ಈ ಸಮಿತಿಯು ತನ್ನ ಬೃಹತ್ ವರದಿಯನ್ನು

2002ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಸಮಿತಿಯು ಮೂವತ್ತೈದು ಸೂಚಿಗಳನ್ನು ಆಧರಿಸಿ ರಾಜ್ಯದ 175 ತಾಲ್ಲೂಕುಗಳ ಅಭಿವೃದ್ಧಿಯನ್ನು ದಾಖಲಿಸಿತು. ಅದು ರೂಪಿಸಿದ್ದ ಸಂಯುಕ್ತ ಸಮಗ್ರ ಅಭಿವೃದ್ಧಿ ಸೂಚ್ಯಂಕದ ಆಧಾರದ ಮೇಲೆ ಜಿಲ್ಲೆಯ ತಾಲ್ಲೂಕುಗಳನ್ನು ನಾಲ್ಕು ಗುಂಪುಗಳನ್ನಾಗಿ ವರ್ಗೀಕರಿಸಿತು.

1 ಸಾಪಾಕ್ಷವಾಗಿ ಅಭಿವೃದ್ಧಿ ಹೊಂದಿದ ತಾಲ್ಲೂಕುಗಳು

2 ಅತ್ಯಂತ ಹಿಂದುಳಿದ ತಾಲ್ಲೂಕುಗಳು

3 ಅತಿ ಹಿಂದುಳಿದ ತಾಲ್ಲೂಕುಗಳು

4 ಹಿಂದುಳಿದ ತಾಲ್ಲೂಕುಗಳು

ಈ ಸಮಿತಿಯ ವರ್ಗೀಕರಣದ ಪ್ರಕಾರ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಂಭತ್ತನ್ನು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ವರ್ಗೀಕರಿಸಿದೆ. ಉಳಿದ ಒಂದನ್ನು ಹಿಂದುಳಿದ ತಾಲ್ಲೂಕೆಂದು ವರ್ಗೀಕರಿಸಿದೆ.

## ಮಾನವ ಅಭಿವೃದ್ಧಿಯಲ್ಲಿ ಗುಲಬರ್ಗಾ ಜಿಲ್ಲೆ

ಕರ್ನಾಟಕ ಸರ್ಕಾರವು 1991ರ ಅಂಕಿಅಂಶಗಳನ್ನು ಆಧರಿಸಿ ಇಪ್ಪತ್ತು ಜಿಲ್ಲೆಗಳಿಗೆ ಸಂಬಂಧಿಸಿದಂತೆ 1999ರಲ್ಲಿ ತನ್ನ ಮೊದಲ ಮಾನವ ಅಬಿವೃದ್ಧಿ ವರದಿಯನ್ನು ಪ್ರಕಟಿಸಿತು. ಮುಂದೆ ರಾಜ್ಯದ ಪ್ರಗತಿಯನ್ನು ದಾಖಲಿಸುವ ಉದ್ದೇಶದಿಂದ 2005ರಲ್ಲಿ ರಾಜ್ಯದ ಇಪ್ಪತ್ತೇಳು ಜಿಲ್ಲೆಗಳನ್ನೊಳಗೊಂಡಂತೆ ತನ್ನ ಎರಡನೆಯ ಮಾನವ ಅಭಿವೃದ್ಧಿ ವರದಿಯನ್ನು ಪ್ರಕಟಿಸಿತು. ಗುಲಬರ್ಗಾ ಜಿಲ್ಲೆ ಮತ್ತು ಅದರ ನೆರೆಯ ಜಿಲ್ಲೆಗಳ ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸಾಧನೆಯನ್ನು ಕೋಷ್ಟಕ–1.5ರಲ್ಲಿ ತೋರಿಸಿದೆ.

ಕೋಷ್ಟಕ 1.4

### ಕರ್ನಾಟಕ ರಾಜ್ಯದ ಗುಲಬರ್ಗಾ ಜಿಲ್ಲೆಯ ಅತ್ಯಂತ ಹಿಂದುಳಿದ ತಾಲ್ಲೂಕುಗಳು

| ತಾಲ್ಲೂಕು | ರಾಜ್ಯದಲ್ಲಿ ಸ್ಥಾನ (ಒಟ್ಟು ತಾಲ್ಲೂಕುಗಳು) | ಸೂಚ್ಯಂಕ |
|---|---|---|
| ಸೇಡಮ್ | 155 | 0.72 |
| ಶೋರಾಪುರ | 157 | 0.70 |
| ಯಾದಗೀರ್ | 162 | 0.67 |
| ಚಿತ್ತಾಪುರ | 165 | 0.65 |
| ಅಫಜಲಪುರ | 170 | 0.62 |
| ಶಹಾಪುರ | 171 | 0.62 |
| ಆಳಂದ್ | 172 | 0.61 |
| ಚಿಂಚೋಳಿ | 173 | 0.57 |
| ಜೇವರ್ಗಿ | 174 | 0.57 |

ಮೂಲ: ಪ್ರಾದೇಶಿಕ ಅಸಮಾನತೆ ಅಧ್ಯಯನದ ಉನ್ನತಾಧಿಕಾರ ಸಮಿತಿ ವರದಿ ಕರ್ನಾಟಕ ಸರ್ಕಾರ 2002

ಕೋಷ್ಟಕ 1.5

### ಗುಲಬರ್ಗಾ ವಿಭಾಗದಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ

| ಜಿಲ್ಲೆಗಳು | ಮ.ಅ.ಸೂ. 1991 | ಸ್ಥಾನ | ಮ.ಅ.ಸೂ. 2001 | ಸ್ಥಾನ | ಲಿ.ಅ.ಸೂ. 1991 | ಸ್ಥಾನ | ಲಿ.ಅ.ಸೂ. 2001 | ಸ್ಥಾನ |
|---|---|---|---|---|---|---|---|---|
| ಬಳ್ಳಾರಿ | 0.512 | 18 | 0.617 | 18 | 0.499 | 17 | 0.606 | 17 |
| ಬೀದರ್ | 0.496 | 23 | 0.599 | 21 | 0.477 | 23 | 0.572 | 22 |
| ಗುಲಬರ್ಗಾ | 0.453 | 25 | 0.564 | 26 | 0.432 | 25 | 0.543 | 26 |
| ಕೊಪ್ಪಳ | 0.446 | 26 | 0.582 | 24 | 0.428 | 26 | 0.561 | 24 |
| ರಾಯಚೂರು | 0.443 | 27 | 0.547 | 27 | 0.422 | 27 | 0.530 | 27 |
| **ರಾಜ್ಯ** | **0.541** | | **0.650** | – | **0.525** | | **0.637** | |

ಮೂಲ: ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ವರದಿ–2005 ಕನಾಟಕ ಸರ್ಕಾರ

ಟಿಪ್ಪಣಿ: ಮಾ.ಅ.ಸೂ : ಮಾನವ ಅಭಿವೃದ್ಧಿ ಸೂಚ್ಯಂಕ. ಲಿ.ಅ.ಸೂ : ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ

ರಾಜ್ಯದ ಇಪ್ಪತ್ತೇಳು ಜಿಲ್ಲೆಗಳಲ್ಲಿ ಗುಲಬರ್ಗಾ ಜಿಲ್ಲೆಯು ಮಾನವ ಅಭಿವೃದ್ಧಿಯಲ್ಲಿ ಇಪ್ಪತ್ತಾರನೆಯ ಸ್ಥಾನವನ್ನು ಪಡೆದಿದೆ. ರಾಜ್ಯದಲ್ಲಿ ಜಿಲ್ಲೆಯು ಸ್ಥಾನವು 1991 ರಿಂದ 2001ರ ಅವಧಿಯಲ್ಲಿ 25 ರಿಂದ 26ನೆಯ ಸ್ಥಾನಕ್ಕೆ ಇಳಿದಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಶಿಕ್ಷಣ ಕ್ಷೇತ್ರದಲ್ಲಿನ ಮಂದಗತಿ ಬೆಳವಣಿಗೆ ಮತ್ತು ವರಮಾನದಲ್ಲಿನ ಕೆಳಮಟ್ಟದ ಸ್ಥಿತಿ.

ಕಳೆದ ಕೆಲವು ವರ್ಷಗಳಲ್ಲಿ ಜಿಲ್ಲೆಯ ಸ್ಥಿತಿಯು ಸುಧಾರಿಸಿಲ್ಲ. ರಾಜ್ಯ ಮತ್ತು ಜಿಲ್ಲೆಗಳ ನಡುವಿನ ಅಂತರ ಕೇವಲ 0.002ರಷ್ಟು ಮಾತ್ರ ಕಡಿಮೆಯಾಗಿದೆ (0.088 ರಿಂದ 0. 086).

## ಗುಲಬರ್ಗಾ ಜಿಲ್ಲೆಯ ಆರ್ಥಿಕತೆ

ಜಿಲ್ಲೆಯ ಆರ್ಥಿಕತೆಯು ಪ್ರಧಾನವಾಗಿ ಕೃಷಿ ಸ್ವರೂಪದ್ದಾಗಿದೆ. ಜಿಲ್ಲೆಯ ಒಟ್ಟು ಆಂತರಿಕ ಉತ್ಪನ್ನಕ್ಕೆ ಕೃಷಿಯ ಕಾಣಿಕೆ ಶೇ. 31.7 ರಷ್ಟಿದೆ. ಅದು ಜಿಲ್ಲೆಯಲ್ಲಿ ಶೇ. 67 ರಷ್ಟು ದುಡಿಮೆಗಾರರಿಗೆ ವರಮಾನದ ಮೂಲವಾಗಿದೆ. ಕೃಷಿಯು ಪ್ರಧಾನವಾಗಿ ಒಣ ಭೂಮಿ ಬೇಸಾಯದಿಂದ ಕೂಡಿದೆ. ನೀರಾವರಿ ಪ್ರದೇಶದ ವಿಸ್ತೀರ್ಣ ಕೇವಲ ಶೇ. 15.5ರಷ್ಟಿದೆ. ರಾಜ್ಯದ ಸರಾಸರಿಗಿಂತ ಇದು ಬಹಳ ಕೆಳಮಟ್ಟದ್ದಾಗಿದೆ. ನೀರಾವರಿ ಜಿಲ್ಲೆಯ ಮೂರು ತಾಲ್ಲೂಕುಗಳಾದ ಶೋರಾಪುರ, ಶಹಾಪುರ ಮತ್ತು ಜೇವರ್ಗಿಗಳಿಗೆ ಮಾತ್ರ ದೊರಕಿದೆ. ಜಿಲ್ಲೆಯ ವರಮಾನವು ಚಾಲ್ತಿ ಬೆಲೆಗಳಲ್ಲಿ 1960–61ರಲ್ಲಿ ರೂ. 3093 ಲಕ್ಷದಷ್ಟಿದ್ದುದು 1990–91ರಲ್ಲಿ ರೂ. 103770 ಲಕ್ಷಕ್ಕೇರಿದೆ. ಅದು ಮತ್ತೆ 2001–02ರಲ್ಲಿ ರೂ. 421597 ಲಕ್ಷಕ್ಕೇರಿತು. ಜಿಲ್ಲೆಯ ಒಟ್ಟು ಆಂತರಿಕ ಉತ್ಪನ್ನವು 2005–06ರಲ್ಲಿ ರೂ. 676191 ಲಕ್ಷದಷ್ಟಾಗಿದೆ. ವರಮಾನದಲ್ಲಿ ಕೃಷಿಯ ಪಾಲು 1980–81ರಲ್ಲಿ ಶೇ. 51.39 ರಷ್ಟಿದ್ದುದು 2001–02ರಲ್ಲಿ ಶೇ. 33.7ಕ್ಕಿಳಿದಿದೆ. ಅದು ಮತ್ತೆ 2004–05ರಲ್ಲಿ ಶೇ. 32.1ಕ್ಕಿಳಿದಿದೆ.

ಆದರೆ ದುಡಿಮೆಗಾರರ ವೃತ್ತಿ ಸ್ವರೂಪ ಮಾತ್ರ ತುಂಬಾ ಬದಲಾಗಿಲ್ಲ. ಕೃಷಿಯನ್ನು ಅವಲಂಬಿಸಿಕೊಂಡಿದ್ದ ದುಡಿಮೆಗಾರರ ಪ್ರಮಾಣ 1960–61 ರಲ್ಲಿ ಶೇ. 72ರಷ್ಟಿದ್ದುದು 1989–81ರಲ್ಲಿ ಶೇ. 85 ಕ್ಕೇರಿತು. ಆದರೆ 2001ರಲ್ಲಿ ಅದು ಶೇ. 67ಕ್ಕಿಳಿದಿದೆ. ಈ ವಲಯದಲ್ಲಿ ಕಂಡು ಬಂದಿರುವ ಮತ್ತೊಂದು ಪ್ರವೃತ್ತಿಯೆಂದರೆ ಕೃಷಿಯಲ್ಲಿ ದುಡಿಯುವ ಕೂಲಿಕಾರರ ಪ್ರಮಾಣ 1961 ರಲ್ಲಿ ಶೇ. 26.44 ರಷ್ಟಿದ್ದುದು 2001ರಲ್ಲಿ ಅದು ಶೇ 40 ಕ್ಕೇರಿದೆ. ತೃತೀಯ ವಲಯವು ವರಮಾನಕ್ಕೆ ನೀಡುತ್ತಿರುವ ಪ್ರಮಾಣವು 1991 ರಲ್ಲಿ ಶೇ. 36.5 ರಷ್ಟಿದ್ದುದು 2001–02ರಲ್ಲಿ ಶೇ. 45.2 ಕ್ಕೇರಿದೆ. ಈ ವಲಯವನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣವು ಇದೇ ಅವಧಿಯಲ್ಲಿ ಶೇ. 12.6ರಿಂದ ಶೇ. 30.4ಕ್ಕೇರಿದೆ. ಸೇವಾ ವಲಯದಲ್ಲಿ ಉದ್ಯೋಗದ ವಿಸ್ತರಣೆಯು 1991ರಿಂದ ಏರಿಕೆಯಾಗುತ್ತಿದೆ.

ಆತಂಕಕ್ಕೆ ಕಾರಣವಾಗಿರುವ ಸಂಗತಿಯೆಂದರೆ ಕೃಷಿಯು ಜಿಲ್ಲೆಯ ವರಮಾನಕ್ಕೆ ನೀಡುತ್ತಿರುವ ಪ್ರಮಾಣವು 1980–91ರಲ್ಲಿ ಶೇ. 51.39 ರಷ್ಟಿದ್ದುದು 2001–02ರಲ್ಲಿ ಶೇ. 31.7ಕ್ಕೇರಿದೆ. ಆದರೆ ಅದನ್ನು ಅವಲಂಬಿಸಿಕೊಂಡಿರುವ ದುಡಿಮೆಗಾರರ ಪ್ರಮಾಣ ಮಾತ್ರ ಕೇವಲ ಶೇ. 71ರಿಂದ ಶೇ. 67ಕ್ಕಿಳಿದಿದೆ. ಜಿಲ್ಲಾ ಆರ್ಥಿಕತೆಯು ಪ್ರಧಾನವಾಗಿ ಕೃಷಿ ಸ್ವರೂಪದ್ದಾಗಿದೆ.

ಕೋಷ್ಟಕ 1.6

### ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕಗಳು

| ವರ್ಷಗಳು | ಆರೋಗ್ಯ ಸೂಚ್ಯಂಕ | ಸ್ಥಾನ | ಶೈಕ್ಷಣಿಕ ಸೂಚ್ಯಂಕ | ಸ್ಥಾನ | ವರಮಾನ ಸೂಚ್ಯಂಕ | ಸ್ಥಾನ |
|---|---|---|---|---|---|---|
| 1991 | 0.575 | 23 | 0.432 | 25 | 0.352 | 24 |
| ರಾಜ್ಯ | 0.618 | | 0.602 | | 0.402 | |
| 2001 | 0.632 | 20 | 0.572 | 25 | 0.490 | 25 |
| ರಾಜ್ಯ | 0.680 | | 0.712 | | 0.559 | |

ಮೂಲ: ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ ವರದಿ 2005,ಕರ್ನಾಟಕ ಸರ್ಕಾರ 2006

ಕೋಷ್ಟಕ 1.7

## ಜಿಲ್ಲೆಯ ಆರ್ಥಿಕ ಸೂಚಿಗಳು

| ತಾಲ್ಲೂಕು | ಒಟ್ಟು ದುಡಿಮೆಗಾರರಲ್ಲಿ ಕೃಷಿ ಕೂಲಿಕಾರರ ಪ್ರಮಾಣ | | ಒಟ್ಟು ಜನಸಂಖ್ಯೆಯಲ್ಲಿ ಪ.ಜಾ. ಮತ್ತು ಪ.ಪಂ. ಗಳ ಪ್ರಮಾಣ | | ದುಡಿಮೆಯೇತರರ ಪ್ರಮಾಣ | | ಒಟ್ಟು ಹಿಡುವಳಿಗಳಲ್ಲಿ ಸಣ್ಣ ಮತ್ತು ಅತಿ ಸಣ್ಣ ಹಿಡುವಳಿಗಳ ಪ್ರಮಾಣ | | ಬಡತನದ ರೇಖೆ ಕೆಳಗಿರುವ ಕುಟುಂಬಗಳ ಪ್ರಮಾಣ |
|---|---|---|---|---|---|---|---|---|---|
| | **1991** | **2001** | **1991** | **2001** | **1991** | **2001** | **1997** | **2004–05** | **2001–02** |
| ಅಫಜಲಪುರ | 53.86 | 48.27 | 20.6 | 17.82 | 56.1 | 57.31 | 36.84 | 46.88 | 34.04 |
| ಆಳಂದ್ | 50.34 | 50.39 | 27.1 | 22.77 | 54.0 | 48.63 | 42.07 | 53.74 | 34.38 |
| ಚಿಂಚೋಳಿ | 47.42 | 47.52 | 35.7 | 33.23 | 51.3 | 49.91 | 46.08 | 56.35 | 36.12 |
| ಚಿತ್ತಾಪುರ | 36.33 | 30.48 | 31.4 | 29.3 | 59.8 | 61.49 | 42.22 | 51.55 | 34.99 |
| ಗುಲಬರ್ಗಾ | 25.57 | 22.85 | 23.1 | 20.43 | 67.5 | 67.04 | 38.04 | 49.09 | 31.97 |
| ಜೇವರ್ಗಿ | 49.13 | 52.45 | 26.6 | 19.89 | 56.7 | 53.71 | 36.03 | 45.96 | 35.36 |
| ಸೇಡಮ್ | 35.71 | 39.50 | 25.4 | 25.83 | 52.4 | 53.42 | 52.08 | 60.77 | 30.24 |
| ಶಹಾಪುರ | 40.39 | 41.76 | 29.4 | 22.68 | 55.0 | 55.43 | 47.05 | 56.70 | 33.99 |
| ಶೋರಾಪುರ | 37.95 | 43.26 | 29.3 | 18.16 | 53.8 | 56.57 | 47.08 | 58.38 | 33.89 |
| ಯಾದಗೀರ್ | 36.35 | 37.38 | 31.1 | 22.33 | 51.6 | 48.64 | 60.06 | 69.42 | 32.57 |
| **ಜಿಲ್ಲೆ** | **40.05** | **39.96** | **27.8** | **22.92** | **57.8** | **56.88** | **45.07** | **55.32** | **33.85** |

ಮೂಲ: ಸೆನ್ಸಸ್ ಆಫ್ ಇಂಡಿಯಾ 1991 ಮತ್ತು 2001 ಬಡತನದ ಗಣನೆ, ಜಿಲ್ಲಾ ಪಂಚಾಯಿತಿ, ಗುಲಬರ್ಗಾ – 2001–02.

## ಕೃಷಿ

ಗುಲಬರ್ಗಾ ಜಿಲ್ಲೆಯು ಪ್ರಧಾನವಾಗಿ ಕೃಷಿ ಆರ್ಥಿಕತೆಯಿಂದ ಕೂಡಿದೆ. ಕೃಷಿಯ ಬಹಳಷ್ಟು ಭಾಗವು ಒಣ ಭೂಮಿ ಬೇಸಾಯದಿಂದ ಕೂಡಿದೆ. ಇದು ಬರಪೀಡಿತ ಜಿಲ್ಲೆಯಾಗಿದೆ. ಇಪ್ಪತ್ತನೆಯ ಶತಮಾನದಲ್ಲಿ ದಾಖಲಾಗಿರುವ ಬರಗಾಲದ ವರ್ಷಗಳೆಂದರೆ 1901, 1909, 1922, 1923, 1934, 1945. ಜಿಲ್ಲೆಯು 1971–72ರಲ್ಲಿ ಭಯಾನಕ ಬರವನ್ನು ಎದುರಿಸಿತು. ಸರಾಸರಿ ಪ್ರತಿ ಮೂರು ವರ್ಷಗಳಲ್ಲಿ ಒಂದು ಅನಾವೃಷ್ಟಿಯ ವರ್ಷವಾಗಿರುತ್ತದೆ. ನೀರಾವರಿ ಆಯೋಗವು (1972) ಜಿಲ್ಲೆಯ ಹತ್ತು ತಾಲ್ಲೂಕುಗಳನ್ನು ಒಳಗೊಂಡಂತೆ ಶೇ. 98.8ರಷ್ಟು ಪ್ರದೇಶವು ಬರಪೀಡಿತವೆಂದು ವರ್ಗೀಕರಿಸಿತ್ತು. ಗುಲಬರ್ಗಾ ಗೆಜೆಟೀಯರ್‌ನಲ್ಲಿ 17ನೆಯ ಶತಮಾನದಲ್ಲಿ ಜಿಲ್ಲೆಯು ಎದುರಿಸಿದ ಬರಗಳ ಪಟ್ಟಿಯನ್ನು ನೀಡಿದೆ. ಜಿಲ್ಲೆಯು ಎದುರಿಸಿದ ಉಗ್ರ ಬರಗಾಲಗಳೆಂದರೆ 1630, 1650, 1659, 1681, 1685, 1713, 1743, 1747, 1749, 1787, 1792, 1793, 1804, 1819, 1833, 1854, 1873, 1877, 1878, 1897, 1799, 1900, 1909, 1922, 1923, 1934, 1945, 1971, ಮತ್ತು 1980. ಜಿಲ್ಲೆಯಲ್ಲಿ 1791ರಲ್ಲಿ ಸಂಭವಿಸಿದ ಬರವನ್ನು 'ತಲೆ ಬುರುಡೆ ಬರಗಾಲ'ವೆಂದು ಕರೆಯಲಾಗಿದೆ. ಏಕೆಂದರೆ ಆ ಬರಗಾಲದಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಬರಗಾಲಕ್ಕೆ ಬಲಿಯಾದರು.

ಪ್ರತಿ ತಲಾ ಲಭ್ಯವಿರುವ ಭೂಮಿಯ ಪ್ರಮಾಣ ಎರಡು ಎಕರೆಗಳು. ಅತಿಸಣ್ಣ ಮತ್ತು ಸಣ್ಣ ಹಿಡುವಳಿಗಳ ಪ್ರಮಾಣ ಶೇ. 55. ಕೃಷಿಯು ಪ್ರಧಾನವಾಗಿ ಹೊಟ್ಟೆಬಟ್ಟೆಯ ಸ್ವರೂಪದ್ದಾಗಿದೆ. ಇದು ಜಿಲ್ಲೆಯಲ್ಲಿನ ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಗಳು ರಾಜ್ಯ ಮಟ್ಟದಲ್ಲಿನ ಸರಾಸರಿ ಪ್ರಮಾಣಕ್ಕಿಂತ ಕೆಳಮಟ್ಟದಲ್ಲಿದೆ. ಸಾಗುವಳಿ ಪ್ರದೇಶದಲ್ಲಿ ಶೇ. 78.6ರಷ್ಟು ಆಹಾರ ಬೆಳೆಯುವ ಪ್ರದೇಶವಾಗಿದೆ. ಜೋಳ, ಸೂರ್ಯಪಾನ ಮತ್ತು ತೊಗರಿ ಜಿಲ್ಲೆಯ ಮುಖ್ಯ ಬೆಳೆಗಳು. ಈ ಬೆಳೆಗಳು ಕ್ರಮವಾಗಿ ಶೇ. 20.7,

ಶೇ. 24.8 ಮತ್ತು ಶೇ. 11.3ರಷ್ಟು ಪ್ರದೇಶದಲ್ಲಿ ಹರಡಿಕೊಂಡಿವೆ. ಜಿಲ್ಲೆಯನ್ನು ರಾಜ್ಯದ 'ತೊಗರಿಯ ಕಣಜ'ವೆಂದು ಬಣ್ಣಿಸಲಾಗುತ್ತದೆ. ಜಿಲ್ಲೆಯಲ್ಲಿ ಕೃಷಿಯ ಸ್ಥಿತಿಗತಿಯನ್ನು ಪರಿಶೀಲಿಸಿದರೆ ಅಲ್ಲಿನ ಜನರ ಬದುಕು ದುಸ್ಥಿತಿಯಲ್ಲಿರುವುದು ತಿಳಿಯುತ್ತದೆ.

**ಕೃಷಿಯು ಪ್ರಧಾನವಾಗಿ ಹೊಟ್ಟೆಬಟ್ಟೆಯ ಸ್ವರೂಪದ್ದಾಗಿದೆ. ಇದು ಏನನ್ನು ತೋರಿಸುತ್ತದೆಯೆಂದರೆ ಜಿಲ್ಲೆಯಲ್ಲಿನ ಕೃಷಿ ಉತ್ಪಾದನೆ ಮತ್ತು ಉತ್ಪಾದಕತೆಗಳು ರಾಜ್ಯ ಮಟ್ಟದಲ್ಲಿನ ಸರಾಸರಿ ಪ್ರಮಾಣಕ್ಕಿಂತ ಕೆಳಮಟ್ಟದಲ್ಲಿದೆ. ಸಾಗುವಳಿ ಪ್ರದೇಶದಲ್ಲಿ ಶೇ. 78.6 ರಷ್ಟು ಆಹಾರ ಬೆಳೆಯುವ ಪ್ರದೇಶವಾಗಿದೆ. ಜೋಳ, ಸೂರ್ಯಪಾನ ಮತ್ತು ತೊಗರಿ ಜಿಲ್ಲೆಯ ಮುಖ್ಯ ಬೆಳೆಗಳು. ಈ ಬೆಳೆಗಳು ಕ್ರಮವಾಗಿ ಶೇ. 20.7, ಶೇ. 24.8 ಮತ್ತು ಶೇ. 11.3 ರಷ್ಟು ಪ್ರದೇಶದಲ್ಲಿ ಹರಡಿಕೊಂಡಿವೆ. ಜಿಲ್ಲೆಯನ್ನು ರಾಜ್ಯದ 'ತೊಗರಿಯ ಕಣಜ'ವೆಂದು ಬಣ್ಣಿಸಲಾಗುತ್ತದೆ. ಜಿಲ್ಲೆಯಲ್ಲಿ ಕೃಷಿಯ ಸ್ಥಿತಿಗತಿಯನ್ನು ಪರಿಶೀಲಿಸಿದರೆ ಅಲ್ಲಿನ ಜನರ ಬದುಕು ದುಸ್ಥಿತಿಯಲ್ಲಿರುವುದು ತಿಳಿಯುತ್ತದೆ.**

## ನೀರಾವರಿ

ಜಿಲ್ಲೆಯಲ್ಲಿನ ನೀರಾವರಿ ಪ್ರದೇಶದ ವಿಸ್ತೀರ್ಣವು 1971–72ರಲ್ಲಿ ಶೇ. 11.2ರಷ್ಟಿದ್ದುದು 2005–06ರಲ್ಲಿ ಶೇ. 15.5ಕ್ಕೇರಿದೆ. ಜಿಲ್ಲೆಯಲ್ಲಿ ನೀರಾವರಿ ಪ್ರದೇಶವು ವಿಸ್ತರಣೆಗೊಳ್ಳಲು ಕಾರಣವಾದ ಸಂಗತಿಯೆಂದರೆ ಕೃಷ್ಣಾ ಮೇಲ್ದಂಡೆ ಯೋಜನೆ. ಈ ಯೋಜನೆಯಲ್ಲಿ ಜಿಲ್ಲೆಯ ಶೋರಾಪುರ, ಶಹಾಪುರ ಮತ್ತು ಜೇವರ್ಗಿ ತಾಲ್ಲೂಕುಗಳು ಅನುಕೂಲ ಪಡೆದುಕೊಂಡಿವೆ. ಈ ಯೋಜನೆಯ ಮೊದಲ ಹಂತದಲ್ಲಿ ನೀರಾವರಿ ಒದಗಿಸಿದ ಪ್ರದೇಶದ ವಿಸ್ತೀರ್ಣ 288551 ಹೆಕ್ಟೇರುಗಳು. ಆದರೆ ವಾಸ್ತವವಾಗಿ ನೀರಾವರಿ ದೊರೆತ ಪ್ರದೇಶದ ವಿಸ್ತೀರ್ಣ 146974 ಹೆಕ್ಟೇರುಗಳು. ಅಂದರೆ ಒಟ್ಟು ನೀರಾವರಿ ಸಾಮರ್ಥ್ಯದ ಶೇ. 51ರಷ್ಟನ್ನು ಮಾತ್ರ ಬಳಕೆ ಮಾಡಿಕೊಳ್ಳಲು ಸಾಧ್ಯವಾಗಿದೆ. ಬಾವಿಗಳಿಂದ ಸುಮಾರು ಶೇ 15ರಷ್ಟು ಭೂಮಿಗೆ ನೀರಾವರಿ ಒದಗುತ್ತಿದೆ. ಆದರೆ ಇದು ನಂಬಲರ್ಹವಾದ ಮೂಲವೇನಲ್ಲ. ಬೇಸಿಗೆಯಲ್ಲಿ ಬಾವಿಗಳು ಒಣಗಿ ಹೋಗುತ್ತವೆ. ಜಿಲ್ಲೆಯಲ್ಲಿ ಹಿಂದೆ ಆರಂಭಿಸಿರುವ ಅನೇಕ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸ ಬೇಕಾಗಿದೆ. ಅವು ಯಾವುವೆಂದರೆ ಸೌದಾಗರ್ (1971), ಕೆಳಗಿನ ಮುಲ್ಲಮಾರಿ (1975), ಅಮರ್ಜಾ (1975) ಮತ್ತು ಬೆಣ್ಣೆತೊರಾ (1976).

## ಮೂಲಭೂತ ಸೌಲಭ್ಯಗಳು

ಜಿಲ್ಲೆಯಲ್ಲಿ ಅಗತ್ಯವಿರುವಷ್ಟು ಮೂಲಭೂತ ಸೌಲಭ್ಯಗಳಿಲ್ಲ. ಜಿಲ್ಲೆಯ ಆರ್ಥಿಕತೆಯು ದೀರ್ಘಕಾಲದಿಂದಲೂ ಸ್ಥಗಿತ ಸ್ಥಿತಿಯಲ್ಲಿರಲು ಇದು ಪ್ರಮುಖ ಕಾರಣವಾಗಿದೆ. ಜಿಲ್ಲೆಯಲ್ಲಿರುವ ರಸ್ತೆಗಳ ಉದ್ದ ಪ್ರತಿ ಚ.ಕಿ.ಮೀ.ಗೆ 28.26 ಕಿ.ಮೀ.ಗಳು ಮಾತ್ರ. ಗ್ರಾಮೀಣ ರಸ್ತೆಗಳ ಉದ್ದ 5566.97 ಕಿ.ಮೀ. ಈ ರಸ್ತೆಗಳಲ್ಲಿ ಬಹಳಷ್ಟು ಮಳೆಗಾಲದಲ್ಲಿ ಬಳಸಲು ಬರುವುದಿಲ್ಲ. ಒಟ್ಟು ರೈಲು ಮಾರ್ಗದ ಉದ್ದ 225 ಕಿ.ಮೀ. ಜಿಲ್ಲಾ ಕೇಂದ್ರವಾದ ಗುಲಬರ್ಗಾ ನಗರದ ಮೇಲೆ ರಾಷ್ಟ್ರೀಯ ಹೆದ್ದಾರಿಯೊಂದು ಹಾದು ಹೋಗುತ್ತದೆ. ಆದರೆ ಜಿಲ್ಲೆಯೊಳಗೆ ಅದರ ಉದ್ದ ತುಂಬಾ ಸೀಮಿತವಾಗಿದೆ. ಜಿಲ್ಲೆಯ ಅಫ್‌ಜಲಪುರ, ಚಿತ್ತಾಪುರ, ಗುಲಬರ್ಗಾ, ಸೇಡಮ್ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ರೈಲು ಮಾರ್ಗ ಹಾದು ಹೋಗುತ್ತದೆ.

## ಆರ್ಥಿಕ ಅಭಿವೃದ್ಧಿ : ಪ್ರಾದೇಶಿಕ ಸ್ವರೂಪ

ಬಹಳ ಹಿಂದಿನಿಂದಲೂ ಜಿಲ್ಲೆಯನ್ನು ಹಿಂದುಳಿದ ಜಿಲ್ಲೆಯೆಂದು ಗುರುತಿಸುತ್ತಾ ಬರಲಾಗಿದೆ. ಆದರೆ ಅದು ಜಿಲ್ಲೆಯಾದ್ಯಂತ ಒಂದೇ ಸಮನಾಗಿಲ್ಲ. ಜಿಲ್ಲೆಯ ಅಭಿವೃದ್ಧಿಯ ಸ್ವರೂಪವನ್ನು ತಿಳಿದುಕೊಳ್ಳುವ ದೃಷ್ಟಿಯಿಂದ ಕೆಲವು ಸಾಮಾಜಿಕ ಮತ್ತು ಆರ್ಥಿಕ ಸೂಚಿಗಳನ್ನು ಆಧರಿಸಿಕೊಂಡು 1971–73ರಿಂದ 2001–02ರವರೆಗಿನ ಜಿಲ್ಲೆಯ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕವೊಂದನ್ನು ರೂಪಿಸಲಾಗಿದೆ. ಈ ಸೂಚಿಯು ಗಣನೆಗೆ ಜನಸಂಖ್ಯೆ, ವೃತ್ತಿಗಳು, ಕೃಷಿ, ಕೈಗಾರಿಕೆ ಮತ್ತು ಮೂಲಭೂತ ಸೌಲಭ್ಯಗಳನ್ನೊಳಗೊಂಡ ಇಪ್ಪತ್ತು ಸೂಚಿಗಳನ್ನು ಬಳಸಲಾಗಿದೆ. ಈ ಸೂಚ್ಯಂಕವನ್ನು ಆರನೆಯ ಪಂಚವಾರ್ಷಿಕ ಯೋಜನೆಯ ಸಂದರ್ಭದಲ್ಲಿ ರೂಪಿಸಲಾಯಿತು. ಜೇವರ್ಗಿ ಮತ್ತು ಚಿಂಚೋಳಿ ತಾಲ್ಲೂಕುಗಳು ಜಿಲ್ಲೆಯಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಕಟ್ಟಕಡೆಯ ಸ್ಥಾನವನ್ನು ಪಡೆದುಕೊಂಡಿದ್ದವು. ಅಳಂದ್ ಮತ್ತು ಅಫಜಲಪುರ ತಾಲ್ಲೂಕುಗಳ ಅಭಿವೃದ್ಧಿ ಸ್ಥಿತಿಯು ವರ್ಷದಿಂದ ವರ್ಷಕ್ಕೆ ಕ್ಷೀಣಿಸುತ್ತಿರುವುದು ಕಂಡು ಬಂದಿದೆ. ಈ ಕಾಲಾವಧಿಯಲ್ಲಿ ಜೇವರ್ಗಿಯ ಸ್ಥಾನ ಜಿಲ್ಲೆಯಲ್ಲಿ ಹತ್ತನೆಯದಾಗಿದ್ದರೆ ಚಿಂಚೋಳಿಯ ಸ್ಥಾನವು ಕೆಳಗೆ ಬೀಳುತ್ತಿದೆ. ಇತ್ತೀಚಿಗೆ ನೀರಾವರಿ ಸೌಲಭ್ಯ ಬಂದಿರುವುದರಿಂದ ಶೋರಾಪುರ, ಶಹಾಪುರ ಮತ್ತು ಯಾದಗೀರ್ ತಾಲ್ಲೂಕುಗಳ ಆರ್ಥಿಕ ಸ್ಥಿತಿಗತಿಯು ಉತ್ತಮಗೊಳ್ಳುತ್ತಿದೆ.

ಕೋಷ್ಟಕ 1.8

**ಜಿಲ್ಲೆಯ ಆರ್ಥಿಕ ಅಭಿವೃದ್ಧಿಯ ಸ್ವರೂಪ : 1971–72 ರಿಂದ 2001–02**

| ಕ್ರ. ಸಂ. | ತಾಲ್ಲೂಕು | 1971–72 | | 1981–82 | | 1991–92 | | 2001–02 | |
|---|---|---|---|---|---|---|---|---|---|
| | | ಅಭಿವೃದ್ಧಿ ಸೂಚ್ಯಂಕ | ಸ್ಥಾನ | ಅಭಿವೃದ್ಧಿ ಸೂಚ್ಯಂಕ | ಸ್ಥಾನ | ಅಭಿವೃದ್ಧಿ ಸೂಚ್ಯಂಕ | ಸ್ಥಾನ | ಅಭಿವೃದ್ಧಿ ಸೂಚ್ಯಂಕ | ಸ್ಥಾನ |
| 1. | ಅಫಜಲಪುರ | 102.73 | 4 | 131.44 | 1 | 98.00 | 4 | 79.7 | 8 |
| 2. | ಅಳಂದ್ | 116.50 | 2 | 128.12 | 2 | 80.93 | 7 | 82.8 | 7 |
| 3. | ಚಿಂಚೋಳಿ | 84.76 | 7 | 95.45 | 5 | 79.04 | 8 | 75.85 | 9 |
| 4. | ಚಿತ್ತಾಪುರ | 102.87 | 3 | 101.40 | 4 | 104.00 | 3 | 92.42 | 4 |
| 5. | ಗುಲಬರ್ಗಾ | 170.46 | 1 | 121.25 | 3 | 158.60 | 1 | 182.5 | 1 |
| 6. | ಜೇವರ್ಗಿ | 60.91 | 10 | 83.63 | 8 | 75.40 | 10 | 67.6 | 10 |
| 7. | ಸೇಡಮ್ | 101.74 | 5 | 95.03 | 6 | 96.58 | 5 | 96.5 | 3 |
| 8. | ಶಹಾಪುರ | 68.92 | 8 | 75.14 | 10 | 81.10 | 6 | 84.8 | 6 |
| 9. | ಶೋರಾಪುರ | 66.47 | 9 | 81.96 | 9 | 118.71 | 2 | 111.4 | 2 |
| 10. | ಯಾದಗೀರ್ | 101.36 | 6 | 94.50 | 7 | 78.50 | 9 | 87.85 | 5 |
| | **ಜಿಲ್ಲೆ** | **100.00** | | **100.00** | | **100.00** | | **100** | |

ಮೂಲ: ಛಾಯಾ ದೇವಗಾಂವಕರ್ 2001 'ಹೈದರಾಬಾದ್ ಕರ್ನಾಟಕ ಪ್ರದೇಶದ ಅಭಿವೃದ್ಧಿಗೊಂದು ಯೋಜನೆ' ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

## ಹಿಂದುಳಿದಿರುವಿಕೆಗೆ ಕಾರಣಗಳು

### ಮೂಲಭೂತ ಸೌಲಭ್ಯಗಳ ಅಲಭ್ಯತೆ

ಈ ಜಿಲ್ಲೆಯ ಕೈಗಾರಿಕಾಭಿವೃದ್ಧಿಗೆ ಅಡ್ಡಿಯಾಗಿರುವ ಸಂಗತಿಯೆಂದರೆ ಮೂಲಭೂತ ಸೌಲಭ್ಯಗಳ ಕೊರತೆ. ಜಿಲ್ಲೆಯೊಳಗೆ ಮತ್ತು ಜಿಲ್ಲೆ–ಜಿಲ್ಲೆಗಳ ನಡುವೆ ಸಂಪರ್ಕ ಕಲ್ಪಿಸುವಂತಹ ರಸ್ತೆಗಳ ಜಾಲವಿಲ್ಲ. ಸಧ್ಯ ಬಳಕೆಯಲ್ಲಿರುವ ರಸ್ತೆಗಳ ಸ್ಥಿತಿಗತಿ ಉತ್ತಮವಾಗಿಲ್ಲ. ಅದರ ನಿರ್ವಹಣೆ ಸರಿ ಇಲ್ಲ. ಜಿಲ್ಲಾ ಪಂಚಾಯಿತಿ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗಳು ಅಪಾರ ಹಣವನ್ನು ರಸ್ತೆ ಅಭಿವೃದ್ಧಿಗಾಗಿ ಖರ್ಚು ಮಾಡುತ್ತಿದ್ದರೂ ಜಿಲ್ಲೆಯಲ್ಲಿ ರಸ್ತೆ ಜಾಲವೊಂದನ್ನು ನಿರ್ಮಿಸುವುದು ಸಾಧ್ಯವಾಗಿಲ್ಲ. ಜಿಲ್ಲೆಯೊಳಗೆ ರೈಲು ಮಾರ್ಗವೆನೋ ಹಾದು ಹೋಗಿದೆ. ಆದರೆ ಜಿಲ್ಲೆಯ ಪ್ರಮುಖ ನಗರಗಳ ನಡುವೆ ರೈಲು ಸಂಪರ್ಕ ಇಲ್ಲದಿರುವುದರಿಂದ ಅದು ಜಿಲ್ಲೆಯ ವಾಣಿಜ್ಯ ಮತ್ತು ವ್ಯಾಪಾರಗಳ ಅಭಿವೃದ್ಧಿಗೆ ಸಹಾಯಕವಾಗಿಲ್ಲ.

ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯು ಸಮರ್ಪಕವಾಗಿಲ್ಲ. ಇದು ಕೃಷಿ ಮತ್ತು ಕೈಗಾರಿಕೆಗಳಲ್ಲಿ ಬಳಸುತ್ತಿರುವ ವಿದ್ಯುತ್‌ನ ಪ್ರಮಾಣ ಕಡಿಮೆಯಿರುವುದರಿಂದ ತಿಳಿದು ಬರುತ್ತದೆ. ಬೇಸಿಗೆಯಲ್ಲಿ ವಿದ್ಯುತ್‌ನ ಪೂರೈಕೆ ಅನಿಶ್ಚಿತತೆಯಿಂದ ಕೂಡಿರುತ್ತದೆ. ಅಂಚೆ ಕಚೇರಿಗಳನ್ನು ಅಪಾರ ಸಂಖ್ಯೆಯಲ್ಲಿ ಸ್ಥಾಪಿಸಲಾಗಿದೆ. ಆದರೆ ಅಲ್ಲಿ ಆಧುನಿಕ ಸಂಪರ್ಕ ಸೌಲಭ್ಯಗಳಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಬ್ಯಾಂಕಿನ ಸೌಲಭ್ಯವನ್ನು ಸರಿಯಾಗಿ ಬೆಳೆಸಿಲ್ಲ. ಕೋಷ್ಟಕ–1.8 ರಲ್ಲಿ ಜಿಲ್ಲೆಯಲ್ಲಿ ಲಭ್ಯವಿರುವ ಮೂಲಭೂತ ಸೌಲಭ್ಯಗಳ ವಿವರಗಳನ್ನು ತೋರಿಸಲಾಗಿದೆ.

ಹಣಕಾಸು ಸಂಸ್ಥೆಗಳು ಮತ್ತು ಸಮರ್ಪಕ ಸೌಲಭ್ಯಗಳು ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ಲಭ್ಯವಿಲ್ಲ. ಇದರಿಂದಾಗಿ ಜನರು ಸಾಂಸ್ಥಿಕೇತರ ಮೂಲಗಳನ್ನು ಸಾಲಕ್ಕಾಗಿ ಅವಲಂಬಿಸುವುದು ಅನಿವಾರ್ಯವಾಗಿ ಬಿಟ್ಟಿದೆ. ಜಿಲ್ಲೆಯಲ್ಲಿ ಕೇವಲ ಶೇ. 32ರಷ್ಟು ಹಳ್ಳಿಗಳಲ್ಲಿ ಮಾತ್ರ ಐದು ಕಿ.ಮೀ ಒಳಗೆ ವಾಣಿಜ್ಯ ಬ್ಯಾಂಕಿನ ಸೌಲಭ್ಯ ಲಭ್ಯವಿದೆ. ರಾಜ್ಯಮಟ್ಟದಲ್ಲಿ ಇದು ಶೇ45ರಷ್ಟಿದೆ. ಜಿಲ್ಲೆಯಲ್ಲಿ ಅಭಿವೃದ್ಧಿಯನ್ನು ಇನ್ನಷ್ಟು ತೀವ್ರಗೊಳಿಸಲು ಮೂಲಭೂತ ಸೌಲಭ್ಯಗಳ ಬೆಳವಣಿಗೆ ಅಗತ್ಯ.

**ಈ ಜಿಲ್ಲೆಯು ಹಿಂದುಳಿದಿರುವುದಕ್ಕೆ ಮತ್ತೊಂದು ಕಾರಣವಾಗಿರುವ ಸಂಗತಿಯೆಂದರೆ ತೀವ್ರ ಜನಸಂಖ್ಯಾ ಏರಿಕೆ. ರಾಜ್ಯ ಮಟ್ಟದಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. 1.7ರಷ್ಟಿದ್ದರೆ ಜಿಲ್ಲೆಯಲ್ಲಿ ಅದು ಶೇ. 2.1ರಷ್ಟಿದೆ**

## ಜನಸಂಖ್ಯೆಯ ತೀವ್ರ ಬೆಳವಣಿಗೆ

ಈ ಜಿಲ್ಲೆಯು ಹಿಂದುಳಿದಿರುವುದಕ್ಕೆ ಮತ್ತೊಂದು ಕಾರಣವಾಗಿರುವ ಸಂಗತಿಯೆಂದರೆ ತೀವ್ರ ಜನಸಂಖ್ಯಾ ಏರಿಕೆ. ರಾಜ್ಯ ಮಟ್ಟದಲ್ಲಿ ಜನಸಂಖ್ಯೆಯ ವಾರ್ಷಿಕ ಬೆಳವಣಿಗೆ ಪ್ರಮಾಣ ಶೇ. 1.7ರಷ್ಟಿದ್ದರೆ ಜಿಲ್ಲೆಯಲ್ಲಿ ಅದು ಶೇ. 2.1ರಷ್ಟಿದೆ. ಜನರ ವಲಸೆಯ ಕಾರಣದಿಂದ ಇಲ್ಲಿ ಜನಸಂಖ್ಯೆಯ ಬೆಳವಣಿಗೆ ಪ್ರಮಾಣವು ಅಧಿಕವಾಗಿದೆ. ಆದರೆ ಇದು ಸಮಸ್ಯೆಯ ಸಣ್ಣ ಚಿತ್ರವನ್ನು ಮಾತ್ರ ತೋರಿಸುತ್ತದೆ. ಇಲ್ಲಿ ಜನನ ಪ್ರಮಾಣವು ಅವಶ್ಯಕತೆಗಿಂತ ಅಧಿಕವಾಗಿದೆ. ಅದು 28ರಷ್ಟಿದೆ. ಮರಣ ಪ್ರಮಾಣವು 8 ರಷ್ಟಿದೆ. ಮಹಿಳೆಯರ ಸರಾಸರಿ ವಿವಾಹದ ವಯಸ್ಸು 17.6 ವರ್ಷಗಳು. ಇದರಿಂದಾಗಿ ಜಿಲ್ಲೆಯಲ್ಲಿ ಜನನ ಪ್ರಮಾಣವು ಅಧಿಕವಾಗಿದೆ. ಮೂರು ಮಕ್ಕಳಿಗಿಂತ ಅಧಿಕ ಮಕ್ಕಳನ್ನು ಪಡೆಯುವ ಕುಟುಂಬಗಳ ಪ್ರಮಾಣ ಶೇ. 51.1, ಇದು ಜಿಲ್ಲೆಯಲ್ಲಿ ಅವಲಂಬನೆ ಪ್ರಮಾಣವು ಅಧಿಕವಾಗುವುದೆಂದು ಮತ್ತು ತಲಾ ವರಮಾನ ಕಡಿಮೆಯಾಗುತ್ತಿದೆಯೆಂದು ಕಂಡು ಬರುತ್ತದೆ.

## ಮಂದಗತಿಯ ಮತ್ತು ಸ್ಥಿರಗತಿಯ ಕೈಗಾರಿಕ ಅಭಿವೃದ್ಧಿ

ಇದು ಒಂದು ಪ್ರಾಕೃತಿಕ ಸಂಪನ್ಮೂಲಗಳ ಕೊರತೆಯನ್ನು ಎದುರಿಸುತ್ತಿರುವ ಜಿಲ್ಲೆಯಾಗಿದೆ. ಈ ಪ್ರದೇಶದಲ್ಲಿ ದೊರೆಯುವ ಒಂದೇ ಒಂದು ಖನಿಜವೆಂದರೆ ಸುಣ್ಣಕಲ್ಲು. ಈ ಜಿಲ್ಲೆಯು

**ಕೋಷ್ಟಕ 1.9**

**ಗ್ರಾಮೀಣ ಪ್ರದೇಶದಲ್ಲಿ ಮೂಲಭೂತ ಸೌಲಭ್ಯಗಳ ಲಭ್ಯತೆ**

| ತಾಲ್ಲೂಕು | ಸಮತಟ್ಟು ಮಾಡಿದ ರಸ್ತೆಗಳಿರುವ ಹಳ್ಳಿಗಳ ಪ್ರಮಾಣ | ವಿದ್ಯುತ್ ಸಂಪರ್ಕವಿರುವ ಹಳ್ಳಿಗಳ ಪ್ರಮಾಣ | ಕೃಷಿ ಸಹಕಾರ ಸಂಘಗಳು ಐದು ಕಿ.ಮೀ ದೂರದಲ್ಲಿ ದೊರೆಯುವ ಗ್ರಾಮಗಳ ಪ್ರಮಾಣ | ಕೃಷಿ ಸಹಕಾರ ಬ್ಯಾಂಕುಗಳು ಐದು ಕಿ.ಮೀ. ದೂರದಲ್ಲಿ ದೊರೆಯುವ ಹಳ್ಳಿಗಳ ಪ್ರಮಾಣ | ಪ್ರತಿ ಲಕ್ಷ ಜನಸಂಖ್ಯೆಗೆ ಸಹಕಾರಿ ಬ್ಯಾಂಕುಗಳು | ಐದು ಕಿ.ಮೀ. ಅಂತರದಲ್ಲಿ ವಾಣಿಜ್ಯ ಬಾಂಕಿನ ಲಭ್ಯತೆ | ಪ್ರತಿ ಲಕ್ಷ ಜನಸಂಖ್ಯೆಗೆ ವಾಣಿಜ್ಯ ಬ್ಯಾಂಕು | ಪ್ರತಿ ಲಕ್ಷ ಜನಸಂಖ್ಯೆಯಗೆ ವಾಣಿಜ್ಯ ಬ್ಯಾಂಕು |
|---|---|---|---|---|---|---|---|---|
| ಅಫಜಲಪುರ | 74.8 | 100.0 | 52.6 | 15.6 | 3.1 | 32.6 | 6.5 | 32.8 |
| ಆಳಂದ್ | 95.5 | 100.0 | 41.6 | 12.4 | 2.5 | 39.3 | 8.7 | 28.0 |
| ಚಿಂಚೋಳಿ | 66.2 | 100.0 | 39.0 | 12.5 | 2.0 | 23.5 | 4.1 | 23.6 |
| ಚಿತ್ತಾಪುರ | 53.3 | 97.1 | 44.5 | 10.9 | 2.4 | 35.0 | 3.4 | 25.2 |
| ಗುಲಬರ್ಗಾ | 67.9 | 98.2 | 23.9 | 16.5 | 2.6 | 23.9 | 3.8 | 24.4 |
| ಜೇವರ್ಗಿ | 50.0 | 99.2 | 31.1 | 26.2 | 6.7 | 42.6 | 7.1 | 27.7 |
| ಸೇಡಮ್ | 46.2 | 99.3 | 33.8 | 8.3 | 0.9 | 49.0 | 7.9 | 31.0 |
| ಶಹಾಪುರ | 80.0 | 97.9 | 28.9 | 8.9 | 1.4 | 20.0 | 4.1 | 17.7 |
| ಶೋರಾಪುರ | 42.8 | 96.6 | 55.9 | 11.0 | 2.4 | 39.3 | 3.6 | 19.2 |
| ಯಾದಗೀರ್ | 72.4 | 99.3 | 44.7 | 19.1 | 4.8 | 20.4 | 3.6 | 26.0 |
| **ಜಿಲ್ಲೆ** | **64.3** | **98.7** | **39.6** | **13.8** | **2.9** | **31.9** | **5.2** | **25.3** |
| **ಕರ್ನಾಟಕ** | **70.3** | **98.1** | **51.2** | **25.6** | **4.5** | **45.4** | **5.8** | **25.2** |

ಮೂಲ: ವಿಲೇಜ್ ಡೈರೆಕ್ಟರಿ ಸೆನ್ಸಸ್ ಆಫ್ ಇಂಡಿಯಾ 2001

ಅಭಿವೃದ್ಧಿಗೆ ಅಗತ್ಯವಾದ ಚೈತನ್ಯವನ್ನು ತುಂಬುವಂತೆ ಸಿಮೆಂಟ್ ಉದ್ದಿಮೆಯು ಇಲ್ಲಿ ಬೆಳೆಯಲಿಲ್ಲ. ಅದರ ಉತ್ಪಾದನಾ ವೆಚ್ಚವು ದುಬಾರಿಯಾಗಿಬಿಟ್ಟಿದೆ. ಇದರಿಂದಾಗಿ ಮಿನಿ ಸಿಮೆಂಟ್ ಉದ್ದಿಮೆಗಳು ಉಳಿಯಲಿಲ್ಲ. ಕೆಲವು ಬೃಹತ್ ಸಿಮೆಂಟ್ ಉದ್ದಿಮೆಗಳು ತಾವು ಗಳಿಸಿದ ಲಾಭವನ್ನು ಇಲ್ಲಿ ಮರು ಹೂಡಿಕೆ ಮಾಡುತ್ತಿಲ್ಲ. ಇದರಿಂದಾಗಿ ಜಿಲ್ಲೆಯಲ್ಲಿ ಗಳಿಸಿದ ಲಾಭ ಬೇರೆ ಕಡೆಗೆ ವರ್ಗಾವಣೆಯಾಗುತ್ತಿದೆ. ಜಿಲ್ಲೆಯಲ್ಲಿ ಉದ್ದಿಮೆ ಸಾಹಸಿಗಳ ಕೊರತೆಯೂ ಇದೆ.

## ಮಂದಗತಿಯ ಕೃಷಿ ಬೆಳವಣಿಗೆ

ಕೃಷಿಯು ಜಿಲ್ಲೆಯ ಮೂಲಭೂತ ವಲಯವಾಗಿದೆ. ಸುಮಾರು ಶೇ. 67ರಷ್ಟು ದುಡಿಮೆಗಾರರು ಕೃಷಿಯನ್ನು ಅವಲಂಬಿಸಿದ್ದಾರೆ. ಆದರೆ ಕೃಷಿಯಿಂದ ಪ್ರಾಪ್ತವಾಗುತ್ತಿರುವ ವರಮಾನ ಅತ್ಯಂತ ಕಡಿಮೆ. ಅದು ಅನಿಶ್ಚಿತತೆಯಿಂದ ಕೂಡಿದೆ. ಏಕೆಂದರೆ ಇಲ್ಲಿರುವುದು ಒಣಬೇಸಾಯ ಮತ್ತು ಇಲ್ಲಿ ಬರಗಾಲವೆನ್ನುವುದು ಶಾಶ್ವತ ಲಕ್ಷಣವಾಗಿಬಿಟ್ಟಿದೆ. ಬೆಳೆ ಪದ್ಧತಿಯನ್ನು ಪರಿಶೀಲಿಸಿದರೆ ಇಲ್ಲಿ ಹೊಟ್ಟೆಬಟ್ಟೆ ಕೃಷಿ ಅಸ್ತಿತ್ವದಲ್ಲಿರುವುದು ಕಂಡು ಬರುತ್ತದೆ. ಇದರಿಂದಾಗಿ ಕೃಷಿಯಲ್ಲಿ ಬರುವ ಆಧಿಕ್ಯವು ಬಹಳ ಕಡಿಮೆ. ಜಿಲ್ಲೆಯು ಅಭಿವೃದ್ಧಿಗೆ ಅಗತ್ಯವಾದ ಪ್ರಮಾಣದಲ್ಲಿ ಬಂಡವಾಳ ಆಧಿಕ್ಯವನ್ನು ಒದಗಿಸುವುದರಲ್ಲಿ ವಿಫಲವಾಗಿದೆ.

## ಕೆಳಮಟ್ಟದಲ್ಲಿರುವ ಸಾಕ್ಷರತೆ

ಈ ಜಿಲ್ಲೆಯು ಹಿಂದುಳಿದಿರಲು ಕಾರಣವಾಗಿರುವ ಮತ್ತೊಂದು ಸಂಗತಿಯೆಂದರೆ ಕೆಳಮಟ್ಟದಲ್ಲಿರುವ ಸಾಕ್ಷರತಾ ಪ್ರಮಾಣ. ಮಹಿಳಾ ಸಾಕ್ಷರತಾ ಪ್ರಮಾಣವು ಅತ್ಯಂತ ಕೆಳಮಟ್ಟದಲ್ಲಿದೆ. ಬಡತನದಿಂದಾಗಿ ಕುಟುಂಬಗಳಲ್ಲಿ ಮಕ್ಕಳನ್ನು ವರಮಾನದ ಮೂಲವನ್ನಾಗಿ ಬಳಸಲಾಗುತ್ತಿದೆ. ಜಿಲ್ಲೆಯಲ್ಲಿರುವ ಬಾಲಕಾರ್ಮಿಕ ಸಮಸ್ಯೆಯು ಇದಕ್ಕೆ ಪುರಾವೆಯಾಗಿದೆ. ಜಿಲ್ಲೆಯಲ್ಲಿ ಜನರು ಮೂಡಸಂಪ್ರದಾಯಗಳಲ್ಲಿ ಮುಳುಗಿ ಹೋಗಿರುವುದರಿಂದ ಇಲ್ಲಿ ಕುಟುಂಬಗಳ ಗಾತ್ರ ದೊಡ್ಡದಾಗಿದೆ. ಪ್ರತಿ ಕುಟುಂಬದಲ್ಲಿನ ಮಕ್ಕಳ ಸಂಖ್ಯೆ ಅಧಿಕ. ಕುಟುಂಬ ಯೋಜನೆಯನ್ನು ಅನುಸರಿಸುತ್ತಿರುವವರು ಈಗಾಗಲೆ ಎರಡು–ಮೂರು ಮಕ್ಕಳನ್ನು ಪಡೆದವರಾಗಿದ್ದಾರೆ. ಅದರಲ್ಲೂ ಗಂಡು ಮಗು ಹುಟ್ಟುವವರೆಗೆ ಜನರು ಮಕ್ಕಳನ್ನು ಪಡೆಯುತ್ತಲೇ ಇರುತ್ತಾರೆ. ಜಿಲ್ಲೆಯಲ್ಲಿರುವ ಬಡತನ ಮತ್ತು ನಿರುದ್ಯೋಗಕ್ಕೆ ಜನಸಂಖ್ಯೆಯ ತೀವ್ರಗತಿಯ ಬೆಳವಣಿಗೆಯು ಮತ್ತು ಅನಕ್ಷರತೆಯು ಮೂಲ ಕಾರಣಗಳಾಗಿವೆ.

## ಸಾಮಾಜಿಕ ಸಂಗತಿಗಳು

ಈ ಜಿಲ್ಲೆಯ ಹಿಂದುಳಿದಿರುವಿಕೆಗೆ ಸಾಮಾಜಿಕ ಸಂಗತಿಗಳು ಕಾರಣಗಳಾಗಿವೆ. ಈ ಜಿಲ್ಲೆಯಲ್ಲಿ ಜಾತಿ ಪದ್ಧತಿಯು ಆಳವಾಗಿ ಬೇರು ಬಿಟ್ಟಿದೆ. ಸಮಾಜದಲ್ಲಿ ಪುರೋಗಾಮಿ ಮೌಲ್ಯಗಳ ಬೆಳವಣಿಗೆಗೆ ಇದು ಪ್ರಮುಖ ಅಡ್ಡಿಯಾಗಿದೆ. ಗ್ರಾಮೀಣ ಪ್ರದೇಶದಲ್ಲಿ ವಿವಿಧ ಗುಂಪುಗಳ ನಡುವೆ ಘರ್ಷಣೆಗಳು ಸಾಮಾನ್ಯ. ಇದು ಪಂಚಾಯಿತಿ ವ್ಯವಸ್ಥೆಯ ಚಟುವಟಿಕೆ ಮೇಲೆ ದುಷ್ಪರಿಣಾಮ ಬೀರಿದೆ.

ಜಿಲ್ಲೆಯ ಜೇವರ್ಗಿ ಮತ್ತು ಅಫ್‌ಜಲಪುರ ತಾಲ್ಲೂಕುಗಳ ಅನೇಕ ಹಳ್ಳಿಗಳಲ್ಲಿ ಇದನ್ನು ಕಾಣಬಹುದಾಗಿದೆ. ಜನರು ದುಡಿಮೆ ಸಾಮರ್ಥ್ಯದ ಮೇಲೆ ಇಲ್ಲಿನ ಹವಾಮಾನವು ದುಷ್ಪರಿಣಾಮ ಬೀರುತ್ತಿದೆ. ಜನರ ಕೌಟುಂಬಿಕ ಬಜೆಟ್ಟಿನಲ್ಲಿ ಮದುವೆ ಮತ್ತು ಇತರೆ ಹಬ್ಬ–ಹರಿದಿನಗಳಿಗಾಗಿ ಮಾಡುವ ಖರ್ಚಿನ ಪ್ರಮಾಣ ಅತ್ಯಂತ ಅಧಿಕವಾಗಿರುವುದು ಕಂಡು ಬರುತ್ತದೆ.(ಅಲ್ಪಸಂಖ್ಯಾತರು ಅಧಿಕವಾಗಿರುವ ಜಿಲ್ಲೆಗಳ ಸಮೀಕ್ಷಾ ಅಧ್ಯಯನ : 2007). ಜನರಲ್ಲಿ ಒಮ್ಮತವೆನ್ನುವುದು ಯಾವ ವಿಷಯದಲ್ಲೂ ಕಂಡು ಬರುವುದಿಲ್ಲ ಮತ್ತು ಜನರಲ್ಲಿ ಸಾರ್ವಜನಿಕ ಪ್ರಜ್ಞೆಯೆನ್ನುವುದು ಕಂಡು ಬರುವುದಿಲ್ಲ. ಹಿಂದುಳಿದಿರುವ ಜನ ಸಮುದಾಯ ಮತ್ತು ಅನಭಿವೃದ್ಧಿ ಪ್ರದೇಶಗಳ ನಡುವೆ ಒಂದು ರೀತಿಯ ವಿಷಚಕ್ರ ಸೃಷ್ಟಿಯಾಗಿರುವಂತೆ ಕಾಣುತ್ತದೆ.

## ದುರ್ಬಲವಾದ ಆಡಳಿತ

ಜಿಲ್ಲೆಯಲ್ಲಿರುವ ಅಭಿವೃದ್ಧಿ ಆಡಳಿತವು ಅತ್ಯಂತ ದುರ್ಬಲವಾಗಿದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಮರ್ಥವಾಗಿ ಅನುಷ್ಠಾನಗೊಳಿಸಬಲ್ಲ ನುರಿತ

**ಮೊಟ್ಟಮೊದಲು ಜಿಲ್ಲೆಯ ಯಾವ ವಲಯದಲ್ಲಿ ಸಮಸ್ಯೆಯಿದೆ ಮತ್ತು ಯಾವ ವಲಯದ ಅಭಿವೃದ್ಧಿ ಆದ್ಯತೆ ನೀಡಬೇಕು ಎಂಬುದನ್ನು ಗುರುತಿಸಿಕೊಳ್ಳಬೇಕಾಗಿದೆ. ಹೀಗೆ ಗುರುತಿಸಿದ ವಲಯಗಳಿಗೆ ಅಪಾರ ಪ್ರಮಾಣದಲ್ಲಿ ಬಂಡವಾಳವನ್ನು ಒದಗಿಸಬೇಕಾಗಿದೆ. ಗ್ರಾಮೀಣ ಸಾಕ್ಷರತೆ ಕೆಳಮಟ್ಟದಲ್ಲಿರುವುದು ಅತ್ಯಂತ ಖೇದದ ಸಂಗತಿಯಾಗಿದೆ.**

**ಜಿಲ್ಲೆಯಲ್ಲಿರುವ ಕೃಷಿ ಆಧಾರಿತ ಕೈಗಾರಿಕೆಗಳ ಅಭಿವೃದ್ಧಿಯ ಸಾಮರ್ಥ್ಯವನ್ನು ಸದುಪಯೋಗ ಪಡಿಸಿಕೊಳ್ಳುವ ಅಗತ್ಯವಿದೆ. ಇದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿರುವ ಯುವಕರಿಗೆ ಉದ್ದಿಮೆ ಸ್ಥಾಪಿಸಲು ಅಗತ್ಯವಾದ ತರಬೇತಿ ನೀಡಬೇಕು, ಉದ್ಯೋಗ ಕಾರ್ಯಕ್ರಮಗಳನ್ನು ಹೀಗೆ ಉದ್ದಿಮೆ ಸಾಹಸಿಗಳ ಅಭಿವೃದ್ಧಿಗೆ ಬಳಸಿಕೊಳ್ಳಬೇಕಾಗಿದೆ. ಅವರಿಗೆ ಅಗತ್ಯವಾದ ಸಾಲ ಸೌಲಭ್ಯಗಳನ್ನು ಸರಿಯಾಗಿ ಒದಗಿಸಬೇಕಾಗಿದೆ. ಈ ದಿಶೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವು ಮಹತ್ವವಾದ ಪಾತ್ರವನ್ನು ನಿರ್ವಹಿಸಬಹುದು.**

ಮತ್ತು ತರಬೇತಿ ಪಡೆದ ಹಾಗೂ ದೂರದೃಷ್ಟಿಯುಳ್ಳ ಸಮರ್ಥ ಅಭಿವೃದ್ಧಿ ಆಡಳಿತಗಾರರ ಕೊರತೆ ಕಂಡು ಬರುತ್ತದೆ. ಇದರಿಂದಾಗಿ ಕೆಲವೇ ಕೆಲವು ಜನಪ್ರಿಯ ಕಾರ್ಯಕ್ರಮಗಳನ್ನು ಮಾತ್ರ ಇಲ್ಲಿ ಅನುಷ್ಠಾನಗೊಳಿಸುವುದು ಸಾಧ್ಯವಾಗಿದೆ. ಸಮರ್ಥ ಉಸ್ತುವಾರಿ ಇಲ್ಲದಿರುವುದರಿಂದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಅನೇಕ ಲೋಪಗಳು ಕಂಡು ಬರುತ್ತಿವೆ. ಅಭಿವೃದ್ಧಿ ಮಂಡಳಿಯು ನಿರ್ಮಿಸಿದ ರಸ್ತೆಗಳು ಸರಿಯಾದ ನಿರ್ವಹಣೆಯಿಲ್ಲದೆ ಹಾಳಾಗುತ್ತಿವೆ. ಫಲಾನುಭವಿಗಳ ಆಯ್ಕೆಯಲ್ಲಿ ಕಂಡು ಬರುತ್ತಿರುವ ದೋಷದಿಂದ ಬಡತನ ನಿವಾರಣಾ ಕಾರ್ಯಕ್ರಮಗಳ ಅನುಷ್ಠಾನ ಸಮರ್ಪಕವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಇದಕ್ಕೆ ಮೇಲುಸ್ತುವಾರಿಯ ಕೊರತೆ, ಮಧ್ಯವರ್ತಿಗಳ ಕಾಟ ಮತ್ತು ಸಮಾಜ ಘಾತುಕ ಶಕ್ತಿಗಳ ಕಾರಣಗಳಿಂದಾಗಿ ಬಡತನ ಕಾರ್ಯಕ್ರಮಗಳ ಅನುಷ್ಠಾನ ಸರಿಯಾಗಿ ನಡೆಯುತ್ತಿಲ್ಲ.

ಈ ಎಲ್ಲ ಅನಿಷ್ಟಗಳ ಹಿನ್ನೆಲೆಯಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಅಗತ್ಯವಾದ ಕಾರ್ಯತಂತ್ರದ ಬಗ್ಗೆ ಕೆಲವು ಸಲಹೆ-ಸೂಚನೆಗಳನ್ನು ಇಲ್ಲಿ ನೀಡಲಾಗಿದೆ. ಮೊಟ್ಟಮೊದಲು ಜಿಲ್ಲೆಯ ಯಾವ ವಲಯದಲ್ಲಿ ಸಮಸ್ಯೆಯಿದೆ ಮತ್ತು ಯಾವ ವಲಯದ ಅಭಿವೃದ್ಧಿಗೆ ಆದ್ಯತೆ ನೀಡಬೇಕು ಎಂಬುದನ್ನು ಗುರುತಿಸಿಕೊಳ್ಳಬೇಕಾಗಿದೆ. ಹೀಗೆ ಗುರುತಿಸಿದ ವಲಯಗಳಿಗೆ ಅಪಾರ ಪ್ರಮಾಣದಲ್ಲಿ ಬಂಡವಾಳವನ್ನು ಒದಗಿಸಬೇಕಾಗಿದೆ. ಗ್ರಾಮೀಣ ಸಾಕ್ಷರತೆ ಕೆಳಮಟ್ಟದಲ್ಲಿರುವುದು ಅತ್ಯಂತ ಖೇದದ ಸಂಗತಿಯಾಗಿದೆ. ಆದ್ದರಿಂದ ಅದರ ಮೇಲೆ ಬಂಡವಾಳ ತೊಡಗಿಸುವುದು ಅತ್ಯಂತ ನಿರ್ಣಾಯಕವಾದುದಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅನೇಕ ಹಳ್ಳಿಗಳಲ್ಲಿ ಪ್ರಾಥಮಿಕ ಶಾಲೆಗಳಿಲ್ಲ. ಪ್ರಾಥಮಿಕ ಶಾಲೆಗಳ ಕೊರತೆಯಿದೆ ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಪ್ರೌಢಶಾಲೆಗಳ ಕೊರತೆಯೂ ಇದೆ. ಮಹಿಳಾ ಸಾಕ್ಷರತೆಯನ್ನು ಉತ್ತಮಪಡಿಸುವ ದೃಷ್ಟಿಯಿಂದ ಪ್ರೌಢಶಾಲೆಗಳನ್ನು ಹೆಚ್ಚು ಹೆಚ್ಚಾಗಿ, ಅದರಲ್ಲೂ ಬಾಲಕಿಯರಿಗಾಗಿ ತೆರೆಯುವುದು ಅತ್ಯಂತ ಅಗತ್ಯವಾಗಿದೆ. ಪಾಲಕರು ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪ್ರೇರಣೆ ನೀಡಬೇಕಾದ ಅಗತ್ಯವಿದೆ. ಜಿಲ್ಲೆಯಲ್ಲಿ ಅಗತ್ಯವಾಗಿರುವ ಮೂಲಭೂತ ಸೌಲಭ್ಯಗಳಾವುವೆಂದರೆ ರಸ್ತೆ-ರೈಲು ಮಾರ್ಗಗಳ ನಿರ್ಮಾಣ, ವಿಮಾನ ನಿಲ್ದಾಣದ ನಿರ್ಮಾಣ, ಮಧ್ಯಮ ಮತ್ತು ದೊಡ್ಡ ನೀರಾವರಿ ಯೋಜನೆಗಳ ನಿರ್ಮಾಣ. ವಿದ್ಯುತ್ತಿನ ಸಮರ್ಪಕ ಸರಬರಾಜು ಮತ್ತು ಬ್ಯಾಂಕಿಂಗ್ ವ್ಯವಸ್ಥೆಯ ವಿಸ್ತರಣೆ, ಅದರಲ್ಲೂ ಇತ್ತೀಚಿಗೆ ನೀರಾವರಿ ಸೌಲಭ್ಯವನ್ನು ಪಡೆಯುತ್ತಿರುವ ಪ್ರದೇಶದಲ್ಲಿ ಬ್ಯಾಂಕುಗಳ ಶಾಖೆಗಳನ್ನು ತೆರೆಯುವ ಅಗತ್ಯವಿದೆ. ಕೃಷಿ ಕ್ಷೇತ್ರದಲ್ಲಿ ಬದಲಾವಣೆಯನ್ನು ತರಲು ರೈತರಿಗೆ ತರಬೇತಿ ನೀಡಬೇಕು ಮತ್ತು ಅವರಿಗೆ ಅಗತ್ಯವಾದ ಸಾಧನ-ಸಂಪನ್ಮೂಲಗಳ ಸರಬರಾಜಿಗಾಗಿ ಕೇಂದ್ರಗಳನ್ನು ತೆರೆಯುವ ಅಗತ್ಯವಿದೆ. ಜಿಲ್ಲೆಯಲ್ಲಿರುವ ಕೃಷಿ ಆಧಾರಿತ ಕೈಗಾರಿಕೆಗಳ ಅಭಿವೃದ್ಧಿಯ ಸಾಮರ್ಥ್ಯವನ್ನು ಸದುಪಯೋಗ ಪಡಿಸಿಕೊಳ್ಳುವ ಅಗತ್ಯವಿದೆ. ಇದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿರುವ ಯುವಕರಿಗೆ ಉದ್ದಿಮೆ ಸ್ಥಾಪಿಸಲು ಅಗತ್ಯವಾದ ತರಬೇತಿ ನೀಡಬೇಕು, ಉದ್ಯೋಗ ಕಾರ್ಯಕ್ರಮಗಳನ್ನು ಹೀಗೆ ಉದ್ದಿಮೆ ಸಾಹಸಿಗಳ ಅಭಿವೃದ್ಧಿಗೆ ಬಳಸಿಕೊಳ್ಳಬೇಕಾಗಿದೆ. ಅವರಿಗೆ ಅಗತ್ಯವಾದ ಸಾಲ ಸೌಲಭ್ಯಗಳನ್ನು ಸರಿಯಾಗಿ ಒದಗಿಸಬೇಕಾಗಿದೆ. ಈ ದಿಶೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರವು ಮಹತ್ವವಾದ ಪಾತ್ರವನ್ನು ನಿರ್ವಹಿಸಬಹುದು. ಇದು ಜಿಲ್ಲೆಗೆ ಸೂಕ್ತವಾದ ಉದ್ದಿಮೆಗಳನ್ನು ಗುರುತಿಸುವ ಕೆಲಸ ಮಾಡಬೇಕು, ಉದ್ದಿಮೆಗಳನ್ನು ಸ್ಥಾಪಿಸಲು ಅಗತ್ಯವಾದ ತಾಂತ್ರಿಕ ಸಲಹೆಯನ್ನು ಮತ್ತು ಮಾರ್ಗದರ್ಶನವನ್ನು ಅದು ನೀಡಬೇಕು. ತರಬೇತಿ ಕಾರ್ಯಕ್ರಮಗಳ ಮೂಲಕ ಉದ್ಯಮ ಸಾಹಸಿಗಳನ್ನು ಅಭಿವೃದ್ಧಿ ಪಡಿಸಬೇಕು. ಈಗಿರುವ ಉದ್ದಿಮೆ ಸಾಹಸಿಗಳಿಗೆ ಆಧುನಿಕ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡಬೇಕು. ಜಿಲ್ಲೆಯಲ್ಲಿ ಅಭಿವೃದ್ಧಿಯನ್ನು ತೀವ್ರಗೊಳಿಸುವ ಉದ್ದೇಶದಿಂದ ಸರ್ಕಾರವು ಮಧ್ಯ ಪ್ರವೇಶ ಮಾಡಿ ಜಿಲ್ಲೆಯ ವರಮಾನದ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಗಾಗಿ ಅಗತ್ಯವಾದ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ದಿಶೆಯಲ್ಲಿ ಮುಖ್ಯವಾಗಿ ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿಕೆ ಮತ್ತು ಉದ್ಯೋಗಗಳಿಗೆ

ಸಂಬಂಧಿಸಿದಂತೆ ಸರ್ಕಾರವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಇತ್ತೀಚೆಗೆ ಜಿಲ್ಲೆಯು ತೀವ್ರ ಸ್ವರೂಪದ ಪರಿವರ್ತನಾ ಪ್ರಕ್ರಿಯೆಗೆ ಒಳಗಾಗಿದೆ. ಕೃಷಿ ಕ್ಷೇತ್ರದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯು ತೀವ್ರ ಬದಲಾವಣೆಯನ್ನು ತಂದಿದೆ. ರಾಜ್ಯದಲ್ಲಿ ಅಭಿವೃದ್ಧಿಯ ದೃಷ್ಟಿಯಿಂದ ಕಟ್ಟಕಡೆಯ ಜಿಲ್ಲೆಯಾಗಿದ್ದ ಗುಲಬರ್ಗಾ ಇಂದು ಅಭಿವೃದ್ಧಿಯ ಗತಿಯು ಉತ್ತಮವಾಗುತ್ತಿರುವ ಸ್ಥಿತಿಯನ್ನು ಅನುಭವಿಸುತ್ತಿದೆ. ಈ ಬಗೆಯ ಬದಲಾವಣೆ ಪ್ರಕ್ರಿಯೆಯು ಜಿಲ್ಲೆಯ ತಾಲ್ಲೂಕುಗಳಲ್ಲಿ ಮಾನವ ಅಭಿವೃದ್ಧಿಗೆ ಯಾವ ರೀತಿಯ ಕಾಣಿಕೆ ನೀಡುತ್ತಿದೆ ಎಂಬುದನ್ನು ವಿಶ್ಲೇಷಣೆ ಮಾಡುವುದು ಅಗತ್ಯವಾಗಿದೆ.

# ಗುಲಬರ್ಗಾ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ




ಮಾನವ ಅಭಿವೃದ್ಧಿ ಸೂಚ್ಯಾಂಕದ ಸ್ಥಾನಮಾನ
76°30'0"E
77°0'0"E
77°30'0"E
18°0'0"N
17°30'0"N
17°0'0"N
16°30'0"N
16°0'0"N
N
Aland
0.603
Gulbarga
0.631
Afzalpur
0.607
Chincholi
0.564
Chitapur
0.593
Sedam
0.581
Jevargi
0.549
Yadgir
0.543
Shahpur
0.570
Shorapur
0.585
LEGEND
Talukas showing HDI higher than District average
Talukas showing HDI less than District average
State boundary
District boundary
Taluk boundary
SCALE 1:1100000
0 5 10 20 30 40
KM

ಅಧ್ಯಾಯ 2

# ಗುಲಬರ್ಗಾ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ

## ಪ್ರಸ್ತಾವನೆ

ಮಾನವ ಅಭಿವೃದ್ಧಿಯನ್ನು ಅಭಿವೃದ್ಧಿಯ ಅಂತಿಮ ಗುರಿಯನ್ನಾಗಿ ಇಂದು ಒಪ್ಪಿಕೊಳ್ಳಲಾಗಿದೆ. ಜನರು ಗೌರವಯುತವಾಗಿ ಬದುಕಲು ಅಗತ್ಯವಾದ ಸಾಮರ್ಥ್ಯವನ್ನು ಉತ್ತಮಪಡಿಸುವ ಮತ್ತು ಅವರ ಮೂಲಭೂತ ಅಗತ್ಯಗಳನ್ನು ಒದಗಿಸುವಂತಹ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಒಳಗೊಂಡ ಸಂಗತಿಗಳಿಗೆ ಆದ್ಯತೆ ನೀಡುವ ವಿಚಾರ ಪ್ರಣಾಳಿಕೆಯೇ ಮಾನವ ಅಭಿವೃದ್ಧಿ. ಸಾಂಪ್ರದಾಯಿಕ ಅಭಿವೃದ್ಧಿ ಪ್ರಣಾಳಿಕೆಯು ವರಮಾನದ ಬೆಳವಣಿಗೆ ಮೇಲೆ ಹೆಚ್ಚು ಗಮನ ನೀಡುತ್ತಿದ್ದುದರಿಂದ ಅದು ಸೂಕ್ತ ನೀತಿಗಳ ನೆರವಿನಿಂದ ಮಾನವ ಅಭಿವೃದ್ಧಿಯನ್ನು ಸಾಧಿಸುವುದರಲ್ಲಿ ವಿಫಲವಾಯಿತು. ವರಮಾನ ಅಭಿವೃದ್ಧಿ ಪ್ರಣಾಳಿಕೆಗಿಂತ ಮಾನವ ಅಭಿವೃದ್ಧಿಯ ವ್ಯಾಪ್ತಿಯು ವಿಸ್ತೃತವಾದುದಾಗಿದೆ. ಏಕೆಂದರೆ ಅದು ಮಾನವನ ಆಯ್ಕೆಗಳನ್ನು–ಅಂದರೆ ವರಮಾನದ ಜೊತೆಗೆ ಜನರ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಆಯ್ಕೆಗಳನ್ನು ವಿಸ್ತೃತಗೊಳಿಸುವ ಗುರಿಯನ್ನಿಟ್ಟುಕೊಂಡಿದೆ.

ಈ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯ ಸದ್ಯದ ಮಾನವ ಅಭಿವೃದ್ಧಿ ಸ್ಥಿತಿಗತಿಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ. ಇದರ ಮೊದಲ ಭಾಗದಲ್ಲಿ ಮಾನವ ಅಭಿವೃದ್ಧಿ ಕುರಿತಂತೆ ಪ್ರಾಥಮಿಕ ಮಾಹಿತಿಯನ್ನು ನೀಡಲಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಅಳತೆ ಮಾಡುವ ವಿಧಾನವನ್ನು ಇಲ್ಲಿ ವಿವರಿಸಲಾಗಿದೆ ಮತ್ತು ಈ ಬಗೆಯ ಸೂಚ್ಯಂಕದ ಮೂಲಕ ಜಿಲ್ಲೆಯ ತಾಲ್ಲೂಕುಗಳ ಮಾನವ ಅಭಿವೃದ್ಧಿ ಸ್ಥಿತಿಯನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಈ ಸೂಚ್ಯಂಕವನ್ನು ಪ್ರಾದೇಶಿಕ ಅಸಮಾನತೆ ನಿವಾರಣಾ ಅಧ್ಯಯನ ಸಮಿತಿಯು ರೂಪಿಸಿರುವ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕದ ಜೊತೆ ತುಲನೆ ಮಾಡಲಾಗಿದೆ. ಅಧ್ಯಾಯದ ಅಂತಿಮ ಭಾಗದಲ್ಲಿ ಕೆಲವು ಸಲಹೆಗಳನ್ನು ನೀಡಲಾಗಿದೆ.

## ಮಾನವ ಅಭಿವೃದ್ಧಿ – ಒಂದು ಪರಿಭಾವನೆ

ಜನರ ಆಯ್ಕೆಯ ವ್ಯಾಪ್ತಿಯನ್ನು ವಿಸ್ತೃತಗೊಳಿಸುವ ಪ್ರಕ್ರಿಯೆಯೇ ಮಾನವ ಅಭಿವೃದ್ಧಿಯೆಂದು ಅದನ್ನು ನಿರ್ವಹಿಸಲಾಗಿದೆ. ಇದೊಂದು ಚಲನಶೀಲ ಪರಿಭಾವನೆಯಾಗಿದೆ. ಏಕೆಂದರೆ ಇಲ್ಲಿನ ಆಯ್ಕೆಗಳು ಅಭಿವೃದ್ಧಿಯ ಹಂತ ಮತ್ತು ಕಾಲ ಸರಿದಂತೆ ಅವು ಬದಲಾಗುತ್ತಿರುತ್ತವೆ. ಈ ಆಯ್ಕೆಗಳಲ್ಲಿ ಕೆಲವು ನಿರ್ಣಾಯಕವಾದವುಗಳಾದರೆ ಕೆಲವು ಹೆಚ್ಚುವರಿಯಾಗಿದ್ದಾವೆ. ನಿರ್ಣಾಯಕ ಆಯ್ಕೆಗಳಾವುವೆಂದರೆ ದೀರ್ಘವಾದ ಆಯಸ್ಸು, ಆರೋಗ್ಯಕರ ಬದುಕು, ಶಿಕ್ಷಣ ಮತ್ತು ಗೌರವಯುತ ಬದುಕನ್ನು ಸಾಗಿಸಲು ಅಗತ್ಯವಾದ ಸಂಪನ್ಮೂಲಗಳ ಮೇಲಿನ ಹಕ್ಕುದಾರಿಕೆ. ಹೆಚ್ಚುವರಿ ಆಯ್ಕೆಗಳಾವುವೆಂದರೆ ಕಾರ್ಯಕ್ಷಮತೆಯನ್ನು ಮತ್ತು ಸೃಜನಶೀಲತೆಯನ್ನು ಸಾಧಿಸಿಕೊಳ್ಳಲು ಅಗತ್ಯವಾದ ಅವಕಾಶಗಳ ವ್ಯಾಪ್ತಿಯನ್ನು ವಿಸ್ತೃತಗೊಳಿಸುವ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ, ಸುಭದ್ರವಾದ ಮಾನವ ಹಕ್ಕುಗಳು, ವೈಯುಕ್ತಿಕ ಘನತೆ ಮತ್ತು ಸ್ವಾಭಿಮಾನ.

ವರಮಾನವು ತನ್ನಷ್ಟಕ್ಕೆ ತಾನು ಮಾನವ ಅಭಿವೃದ್ಧಿಯನ್ನು ಒದಗಿಸುವುದು ಸಾಧ್ಯವಿಲ್ಲ. ಆದ್ದರಿಂದ ಅಭಿವೃದ್ಧಿಯನ್ನು ವರಮಾನ ಒಂದರ ಆಧಾರದ ಮೇಲೆ ಮಾಪನ ಮಾಡುವುದು ಸರಿಯಲ್ಲ. ಆರ್ಥಿಕ ಸುಖವನ್ನು ಮೀರಿದ ಅನೇಕ ಆಯ್ಕೆಗಳಿರುತ್ತವೆ ಮತ್ತು ಅವು ವರಮಾನವನ್ನು ಮಾತ್ರವೇ ಸಂಪೂರ್ಣವಾಗಿ ಅವಲಂಬಿಸಿರುವುದಿಲ್ಲ. ಪ್ರಜಾಪ್ರಭುತ್ವವನ್ನು ಸಾಧಿಸಿಕೊಳ್ಳಲು ದೇಶವೊಂದು ಶ್ರೀಮಂತವಾಗಿರಬೇಕಾಗಿಲ್ಲ. ತನ್ನ ಸದಸ್ಯರೆಲ್ಲರಿಗೂ ಸಮಾನವಾದ ಗೌರವ ನೀಡಲು ಕುಟುಂಬದ ವರಮಾನವು ಅಗಾಧವಾಗಿರಬೇಕಾಗಿಲ್ಲ. ಪುರುಷರು ಮತ್ತು ಮಹಿಳೆಯರನ್ನು ಸಮಾನವಾಗಿ ಗೌರವದಿಂದ ನೋಡಿಕೊಳ್ಳಲು ದೇಶವೊಂದು ಸಮೃದ್ಧವಾಗಿರಬೇಕಾಗಿಲ್ಲ.

**ವರಮಾನವು ತನ್ನಷ್ಟಕ್ಕೆ ತಾನು ಮಾನವ ಅಭಿವೃದ್ಧಿಯನ್ನು ಒದಗಿಸುವುದು ಸಾಧ್ಯವಿಲ್ಲ. ಆದ್ದರಿಂದ ಅಭಿವೃದ್ಧಿಯನ್ನು ವರಮಾನ ಒಂದರ ಆಧಾರದ ಮೇಲೆ ಮಾಪನ ಮಾಡುವುದು ಸರಿಯಲ್ಲ. ಆರ್ಥಿಕ ಸುಖವನ್ನು ಮೀರಿದ ಅನೇಕ ಆಯ್ಕೆಗಳಿರುತ್ತವೆ ಮತ್ತು ಅವು ವರಮಾನವನ್ನು ಮಾತ್ರವೇ ಸಂಪೂರ್ಣವಾಗಿ ಅವಲಂಬಿಸಿರುವುದಿಲ್ಲ. ಪ್ರಜಾಪ್ರಭುತ್ವವನ್ನು ಸಾಧಿಸಿಕೊಳ್ಳಲು ದೇಶವೊಂದು ಶ್ರೀಮಂತವಾಗಿರಬೇಕಾಗಿಲ್ಲ. ತನ್ನ ಸದಸ್ಯರೆಲ್ಲರಿಗೂ ಸಮಾನವಾದ ಗೌರವ ನೀಡಲು ಕುಟುಂಬದ ವರಮಾನವು ಅಗಾಧವಾಗಿರಬೇಕಾಗಿಲ್ಲ.**

ವರಮಾನವು ಯಾವ ಮಟ್ಟದಲ್ಲೇ ಇರಲಿ ಸಮಾಜವೊಂದು ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಕಾಯ್ದುಕೊಂಡಿರಬಲ್ಲುದು (ಮೆಹಬೂಬ್ ಉಲ್ ಹಕ್:1995). ಅಂದ ಮೇಲೆ ಜನರ ಅನೇಕ ಆಯ್ಕೆಗಳು ವರಮಾನದ ಮತ್ತು ಆರ್ಥಿಕ ಸಂಗತಿಗಳ ಚೌಕಟ್ಟನ್ನು ಮೀರಿರುತ್ತವೆ. ಜನರ ಬದುಕನ್ನು ಉತ್ತಮಪಡಿಸಬಲ್ಲ ಜ್ಞಾನ, ಆರೋಗ್ಯ, ಶುದ್ಧ ವಾತಾವರಣ, ಸಾಮಾಜಿಕ ಮತ್ತು ರಾಜಕೀಯ ಸ್ವಾತಂತ್ರ್ಯ ಮುಂತಾದವುಗಳನ್ನು ಪಡೆದುಕೊಳ್ಳಲು ವರಮಾನವು ಬೇಕೆಬೇಕೆಂದಿಲ್ಲ.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯು ಆರ್ಥಿಕ ಬೆಳವಣಿಗೆಯ ಮತ್ತು ವರಮಾನದ ಮಹತ್ವವನ್ನು ಅಲ್ಲಗಳೆಯುವುದಿಲ್ಲ. ಬಡತನವನ್ನು ನಿವಾರಿಸಲು ಮತ್ತು ಗೌರವಯುತವಾದ ಬದುಕನ್ನು ಬದುಕಲು ವರಮಾನ ಮತ್ತು ಆರ್ಥಿಕ ಬೆಳವಣಿಗೆಯು ಅಗತ್ಯ. ಆದರೆ ಅವು ಜನರ ಬದುಕಾಗಿ ಪರಿವರ್ತನೆಗೊಳ್ಳಬೇಕು. ಆದ್ದರಿಂದ ಅಭಿವೃದ್ಧಿಯು ಧಾತು ಜನರು ಎಂಬುದನ್ನು ಮೊದಲು ಒಪ್ಪಿಕೊಳ್ಳಬೇಕು. ಮಾನವ ಅಭಿವೃದ್ಧಿಯು ಎರಡು ಮುಖ್ಯ ಸಂಗತಿಗಳನ್ನು ಒಳಗೊಂಡಿದೆ. ಮೊದಲನೆಯದು ಜನರ ಧಾರಣಾ ಸಾಮರ್ಥ್ಯವನ್ನು ಒದಗಿಸಬಲ್ಲ ಉತ್ತಮ ಆರೋಗ್ಯ, ಜ್ಞಾನ, ಕುಶಲತೆ ಮುಂತಾದವುಗಳು. ಎರಡನೆಯದು ಸೃಷ್ಟಿಯಾದ ಧಾರಣಾ ಸಾಮರ್ಥ್ಯವನ್ನು ಉದ್ಯೋಗದ ಮೂಲಕ, ಸಾಮಾಜಿಕ-ರಾಜಕೀಯ ಚಟುವಟಿಕೆಗಳಲ್ಲಿ ಸಹಭಾಗಿಗಳಾಗುವುದರ ಮೂಲಕ ಸಮರ್ಥವಾಗಿ ಬಳಸಿಕೊಳ್ಳುವುದು (ಮೆಹಬೂಬ್ ಉಲ್ ಹಕ್ 1995). ಒಟ್ಟಾರೆ ಮಾನವ ಅಭಿವೃದ್ಧಿಯೆಂಬುದು ಜನರ ಧಾರಣಾ ಸಾಮರ್ಥ್ಯದ ಎಲ್ಲ ಸಂಗತಿಗಳನ್ನು ಒಳಗೊಂಡಿರುತ್ತದೆ. ರಾಜಕೀಯ ಮತ್ತು ನಾಗರಿಕ ಅವಕಾಶಗಳಿಲ್ಲದಿದ್ದರೆ ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯುವುದು ಅಸಾಧ್ಯ.

ಚೌಕಟ್ಟು 2.1

| | ಮಾನವ ಅಭಿವೃದ್ಧಿ ದೃಷ್ಟಿಕೋನ | ಮಾನವ ಅಭಿವೃದ್ಧಿ ಬಿಟ್ಟು ಇತರೆ ಅಭಿವೃದ್ಧಿ ಪ್ರಣಾಳಿಕೆಗಳ ದೃಷ್ಟಿಕೋನ |
|---|---|---|
| ಅಭಿವೃದ್ಧಿ ಯಾವುದಕ್ಕಾಗಿ? | ಜನರ ಸಮೃದ್ಧ ಬದುಕಿಗಾಗಿ, ಅವರ ಬದುಕಿನ ಘನತೆಗಾಗಿ, ಸ್ವಾತಂತ್ರ್ಯಕ್ಕಾಗಿ, ಅಸಮಾನತೆಯನ್ನು ನಿವಾರಿಸುವುದಕ್ಕಾಗಿ, ಹೊರಗಾಕುವಿಕೆ ಮತ್ತು ಬಡತನದ ನಿವಾರಣೆಗಾಗಿ. | ರಾಷ್ಟ್ರೀಯ ವರಮಾನದ ಏರಿಕೆ ಮತ್ತು ಏರಿಕೆಯಾದ ವರಮಾನವು ಕೆಳಮುಖಿಯಾಗಿ ಹರಿಯುವುದಕ್ಕಾಗಿ, ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಾಗಿ- |
| ಅಭಿವೃದ್ದಿ ಯಾರಿಗಾಗಿ?<br>ಅಭಿವೃದ್ದಿಯ ಕರ್ತೃಗಳಾರು? | ಜನರಿಗಾಗಿ<br>ಜನರು | ಜನರಿಗಾಗಿ ಮತ್ತು ಜನರ ಸರಕುಗಳಿಗಾಗಿ,<br>ಜನರು ಮತ್ತು ಸರಕುಗಳು ಹಾಗೂ ಭೌತಿಕ ಬಂಡವಾಳ + ಮಾನವ ಬಂಡವಾಳ + ಪ್ರಾಕೃತಿಕ ಸಂಪನ್ಮೂಲ |
| ಹೇಗೆ? | ಕೆಳಕಂಡ ಒಳ್ಳೆಯ ನೀತಿಗಳ ಮೂಲಕ:<br>ಜನರನ್ನು ಧಾತುವನ್ನಾಗಿ ಮಾಡಿಕೊಳ್ಳುವುದು<br>ವರಮಾನದ ಏರಿಕೆ ಮತ್ತು ಉದ್ಯೋಗದ ಏರಿಕೆ, ಆಯ್ಕೆಗಳಲ್ಲಿ ಸಮಾನತೆ ಮತ್ತು ಆಸ್ತಿಯ ಸಮಾನ ವಿತರಣೆ,<br>ಒಳ್ಳೆಯ ಸಾಮಾಜಿಕ ನೀತಿಗಳು<br>ಗಂಡಾಂತರಕ್ಕೀಡಾಗುತ್ತಿರುವ ವಂಚಿತ ಜನರ ಅಭಿವೃದ್ಧಿಗಾಗಿ ವಿಶೇಷ ಪ್ರಯತ್ನ,<br>ರಾಜಕೀಯ ಜನತಂತ್ರ<br>ನಾಗರಿಕರ ಸಹಭಾಗಿತ್ವ | ರಾಚನಿಕ ಮರುಹೊಂದಾಣಿಕೆ ಮೂಲಕ ಸುಧಾರಣೆ ಕೈಗಾರಿಕಾ ಕೂಲಿಯನ್ನು ಹೆಚ್ಚು ಏರಿಸಬಾರದು,<br>ಕುಟುಂಬ ಯೋಜನಾ ಸಾಧನಗಳ ವಿತರಣೆ<br>ಸುಧಾರಿತ ತಳಿಗಳ ಬಿತ್ತನೆ,<br>ವಸತಿ ವಲಯದ ಮೇಲೆ ಬಂಡವಾಳ ಹೂಡಿಕೆ,<br>ಮೂಲಭೂತ ಅಗತ್ಯಗಳ ಮೇಲೆ ಬಂಡವಾಳ ಹೂಡಿಕೆ,<br>ಮಾರುಕಟ್ಟೆ ಆಧಾರಿತ ನಿರ್ದೇಶನ ನೀಡುವುದು |

ಈ ಪ್ರಣಾಳಿಕೆಯು ಅಭಿವೃದ್ಧಿಯನ್ನು ಮಾಪನ ಮಾಡುವ ಪದ್ದತಿಯಲ್ಲಿ ಬದಲಾವಣೆಯನ್ನು ತಂದಿದೆ. ಸಾಂಪ್ರದಾಯಿಕ ಪದ್ಧತಿಯಲ್ಲಿ ಅಭಿವೃದ್ಧಿಯನ್ನು ಒಟ್ಟು ರಾಷ್ಟ್ರೀಯ ಉತ್ಪನ್ನದ ಮತ್ತು ತಲಾ ವರಮಾನದ ಅಥವಾ ಅನುಭೋಗದ ಏರಿಕೆಯ ಆಧಾರದ ಮೇಲೆ ಅಳೆಯಲಾಗುತ್ತಿತ್ತು. ಆದರೆ ಈ ಮಾಪನಗಳು ಮಾನವ ಅಭಿವೃದ್ಧಿಯ ಎಲ್ಲ ಆಯಾಮಗಳನ್ನು ಒಳಗೊಳ್ಳಲಾರವೆಂಬುದು ಈಗ ಸ್ಪಷ್ಟವಾಗಿದೆ. ನಮಗೆ ತಿಳಿದಿರುವಂತೆ ನಮ್ಮ ಅನುಭವವು ತೋರಿಸುತ್ತಿರುವಂತೆ ಏರಿಕೆಯಾದ ವರಮಾನವು ತನ್ನಷ್ಟಕ್ಕೆ ತಾನು ಜನರ ಮಟ್ಟಕ್ಕೆ ಇಳಿಯುವುದಿಲ್ಲ ಮತ್ತು ಅದು ಜನರ ಬದುಕಾಗಿ ತನ್ನಷ್ಟಕ್ಕೆ ತಾನು ಪರಿವರ್ತನೆಯಾಗುವುದಿಲ್ಲ. ಸಮಾಜದಲ್ಲಿರುವ ವರಮಾನದ ಅಸಮಾನತೆಯಿಂದಾಗಿ ಏರುತ್ತಿರುವ ವರಮಾನದಿಂದ ಮತ್ತು ಉತ್ಪಾದನೆಯಿಂದ ಅನೇಕ ಜನರ ಗುಂಪುಗಳು ವಂಚಿತವಾಗಿ ಬಿಡುತ್ತವೆ. ಜನರ ಬದುಕಿಗೆ ಅಗತ್ಯವಾದ ಶಿಕ್ಷಣ, ಆರೋಗ್ಯ ಮುಂತಾದ ಸಂಗತಿಗಳು ವರಮಾನದ ಏರಿಕೆಯಿಂದ ತಮ್ಮಷ್ಟಕ್ಕೆ ತಾವು ಉತ್ತಮವಾಗುತ್ತವೆಯೆಂದು ಭಾವಿಸಲು ಬರುವುದಿಲ್ಲ. ಏಕೆಂದರೆ ಇವುಗಳ ಸರಬರಾಜಿಗೆ ಪರ್ಯಾಯ ಮಾರ್ಗಗಳನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಮಾರುಕಟ್ಟೆ ಶಕ್ತಿಗಳು ಇಂತಹ ಸಂಗತಿಗಳನ್ನು ಒದಗಿಸುವುದು ಸಾಧ್ಯವಿಲ್ಲ. ಆದರೆ ಜನರ ಧಾರಣಾ ಸಾಮರ್ಥ್ಯದ ದೃಷ್ಟಿಯಿಂದ ಇವು ತುಂಬಾ ಅಗತ್ಯವಾಗಿದೆ. ಮಾನವ ಬಡತನವೆಂಬುದು ಮುಲಭೂತವಾಗಿ ದುಸ್ಥಿತಿಯಾಗಿದೆ. ಅದು ವರಮಾನದ ದುಸ್ಥಿತಿಯೊಂದಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ದುಸ್ಥಿತಿಗಳನ್ನು ಒಳಗೊಂಡಿರುತ್ತದೆ. ಅಮರ್ತ್ಯಸೆನ್ ಪ್ರಕಾರ ಬಡವರಾಗಿರಲಿ ಅಥವಾ ಬಡವರಲ್ಲದಿರಲಿ, ಧಾರಣಾ ಸಾಮರ್ಥ್ಯವು ಜನರ ಬದುಕನ್ನು ಉತ್ತಮಪಡಿಸುವ ದಿಶೆಯಲ್ಲಿ ಮುಖ್ಯವಾಗುತ್ತದೆ. ಬದುಕನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಧಾರಣಾ ಸಾಮರ್ಥ್ಯದ ಕೊರತೆಯೇ ಬಡತನ.(ಸೆನ್ 1985). ಆದ್ದರಿಂದ ವರಮಾನದಲ್ಲಿನ ಏರಿಕೆಯನ್ನು ಅಭಿವೃದ್ಧಿಯ ಅಂತಿಮ ಗುರಿಯೆಂದು ಪರಿಗಣಿಸಲು ಸಾಧ್ಯವಿಲ್ಲ. ಜನರ ಧಾರಣಾ ಸಾಮರ್ಥ್ಯ ಮತ್ತು ಅವರ ಸ್ವಾತಂತ್ರ್ಯಗಳ ವಿಸ್ತೃತತೆಯ ಮೂಲಕ ಜನರ ಬದುಕನ್ನು ಸಮೃದ್ಧಗೊಳಿಸುವ ಪ್ರಕ್ರಿಯೆಯೇ ಅಭಿವೃದ್ಧಿ (ಸೆನ್ 1999).

ಮಾನವ ಅಭಿವೃದ್ಧಿಯ ನಾಲ್ಕು ಅಂಗಗಳೆಂದರೆ ಸಮಾನತೆ, ಸುಸ್ಥಿರಗತಿ, ಉತ್ಪಾದಕತೆ ಮತ್ತು ಸಶಕ್ತೀಕರಣ. ಸಮಾನತೆಯೆಂದರೆ ಅವಕಾಶಗಳು ಎಲ್ಲರಿಗೂ ಸಮಾನವಾಗಿ ದೊರೆಯಬೇಕೆ ಎಂಬುದಾಗಿದೆ. ಸುಸ್ಥಿರಗತಿ ಎಂದರೆ ಒಂದು ಕಾಲಾವಧಿಯಲ್ಲಿ ಮಾನವ ಸಂಪನ್ಮೂಲದ ಮೇಲೆ ಬಂಡವಾಳ ತೊಡಗಿಸುವುದರ ಮೂಲಕ ಮಾನವ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವುದು ಮತ್ತು ಗಳಿಸಿಕೊಂಡ ಸಾಮರ್ಥ್ಯವನ್ನು ಉತ್ಪಾದಕವಾಗಿ ಬಳಸಿಕೊಳ್ಳುವುದು. ಸಶಕ್ತೀಕರಣವೆಂದರೆ ಜನರು ಮುಕ್ತ ಸ್ವಾತಂತ್ರ್ಯದಲ್ಲಿ ತಮ್ಮ ಆಯ್ಕೆಗಳನ್ನು ಮಾಡಿಕೊಳ್ಳಲು ಅಗತ್ಯವಾದ ಸಾಮರ್ಥ್ಯ.

## ಮಾನವ ಅಭಿವೃದ್ಧಿ ಸೂಚ್ಯಂಕ

ಆರೋಗ್ಯ, ಶಿಕ್ಷಣ ಮತ್ತು ಗೌರವಯುತ ಜೀವನಮಟ್ಟಗಳನ್ನೊಳಗೊಂಡ ಮಾನವ ಅಭಿವೃದ್ಧಿ ಸೂಚ್ಯಂಕವು ಜನರ ಮೂಲಭೂತ ಬದುಕಿನ ಮಟ್ಟವನ್ನು ಅಳೆಯುವ ಮಾಪನವಾಗಿದೆ. ಈ ಸೂಚ್ಯಂಕವು ಮೂರು ಸೂಚಿಗಳನ್ನು ಒಳಗೊಂಡಿದೆ. ಆರೋಗ್ಯವನ್ನು ದೀರ್ಘಾಯುಷ್ಯದಿಂದ ಅಳೆಯಲಾಗುತ್ತದೆ. ಅದರ ಆಧಾರದ ಮೇಲೆ ಆರೋಗ್ಯ ಸೂಚ್ಯಂಕವನ್ನು ಗಣನೆ ಮಾಡಲಾಗುತ್ತದೆ. ಶೈಕ್ಷಣಿಕ ಸಾಧನೆಯೆಂಬುದು ಸಂಯುಕ್ತ ಮಾಪನವಾಗಿದೆ. ಅದನ್ನು ಎರಡನೆಯ ಮೂರು ತೂಕದ ಸಾಕ್ಷರತೆ ಮತ್ತು ಮೂರನೆಯ ಒಂದು ತೂಕದ ದಾಖಲಾತಿಯನ್ನು ಕೂಡಿಸಿ ಶೈಕ್ಷಣಿಕ ಸೂಚ್ಯಂಕವನ್ನು ಅಳತೆ ಮಾಡಲಾಗುತ್ತದೆ. ಗೌರವಯುತ ಬದುಕನ್ನು ಅಳೆಯಲು ತಲಾ ವರಮಾನವನ್ನು ಬಳಸಲಾಗುತ್ತದೆ. ಈ ತಲಾ ವರಮಾನವನ್ನು ಡಾಲರಿನ ಕೊಳ್ಳುವ ಶಕ್ತಿಗೆ ಸಮಾನವಾದ ಮಟ್ಟದಲ್ಲಿ ಅಳೆಯಲಾಗುತ್ತದೆ. ಈ ಸೂಚ್ಯಂಕವನ್ನು ಮಾಪನ ಮಾಡುವಾಗ ಸೂಚಿಗಳಿಗೆ ಗರಿಷ್ಠ ಮತ್ತು ಕನಿಷ್ಟಗಳನ್ನು ನಿಗದಿಪಡಿಸಲಾಗಿದೆ. ಮಾನವ ಅಭಿವೃದ್ಧಿಯು ಕೇವಲ ಮೂರು ಸೂಚಿಗಳನ್ನು ಒಳಗೊಂಡಿರುವುದರಿಂದ ಅದರ ವ್ಯಾಪ್ತಿಯು ಸೀಮಿತವಾದುದಾಗಿದೆ. ಜಿಲ್ಲಾ ಮಟ್ಟದಲ್ಲಿ ತಳಸ್ಪರ್ಶ

**ಮಾನವ ಬಡತನವೆಂಬುದು ಮುಲಭೂತವಾಗಿ ದುಸ್ಥಿತಿಯಾಗಿದೆ. ಅದು ವರಮಾನದ ದುಸ್ಥಿತಿಯೊಂದಿಗೆ ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ದುಸ್ಥಿತಿಗಳನ್ನು ಒಳಗೊಂಡಿರುತ್ತದೆ. ಅಮರ್ತ್ಯಸೆನ್ ಪ್ರಕಾರ ಬಡವರಾಗಿರಲಿ ಅಥವಾ ಬಡವರಲ್ಲದಿರಲಿ, ಧಾರಣಾ ಸಾಮರ್ಥ್ಯವು ಜನರ ಬದುಕನ್ನು ಉತ್ತಮಪಡಿಸುವ ದಿಶೆಯಲ್ಲಿ ಮುಖ್ಯವಾಗುತ್ತದೆ. ಬದುಕನ್ನು ಉತ್ತಮಪಡಿಸಿಕೊಳ್ಳಲು ಅಗತ್ಯವಾದ ಧಾರಣಾ ಸಾಮರ್ಥ್ಯದ ಕೊರತೆಯೇ ಬಡತನ. (ಸೆನ್ 1985).**

ಅಧ್ಯಯನದ ಅಗತ್ಯವಿದೆ. ಆದರೆ ಮಾಹಿತಿ ಕೊರತೆಯಿಂದಾಗಿ ಮತ್ತು ಮಾಪನ ವಿಧಾನದ ಬಗೆಗಿನ ಗೊಂದಲದಿಂದಾಗಿ ಈಗಿರುವ ಮಾಪನ ವಿಧಾನವನ್ನೇ ಉಳಿಸಿಕೊಳ್ಳಲಾಗಿದೆ. ಮಾನವ ಅಭಿವೃದ್ಧಿ ವರದಿಗಳನ್ನು ತಾಲ್ಲೂಕುಮಟ್ಟದಲ್ಲಿ, ವರ್ಗ ಮತ್ತು ಜಾತಿ, ಲಿಂಗಗಳಿಗೆ ಸಂಬಂಧಿಸಿದಂತೆ ಅಭಿವೃದ್ಧಿ ಸ್ಥಿತಿ ಹೇಗಿದೆಯೆಂಬುದನ್ನು ತೋರಿಸಲಾಗಿದೆ.

## ಗುಲಬರ್ಗಾ ಜಿಲ್ಲೆಯ ಮತ್ತು ಅದರ ಹತ್ತು ತಾಲ್ಲೂಕುಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳ ಲೆಕ್ಕಾಚಾರ

ಯುಎನ್‌ಡಿಪಿ ವಿಧಾನ ಮತ್ತು ಕರ್ನಾಟಕ ಮಾನವ ಅಭಿವೃದ್ಧಿ – 2005ರಲ್ಲಿನ ವಿಧಾನವನ್ನು ಅನುಸರಿಸಿ ಇಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಜಿಲ್ಲೆಗೆ ಮತ್ತು ಅದರ ಹತ್ತು ತಾಲ್ಲೂಕುಗಳಿಗೆ ಲೆಕ್ಕ ಹಾಕಲಾಗಿದೆ. ಆದರ ವಿವರಗಳನ್ನು ವರದಿಯ ಕೊನೆಯಲ್ಲಿನ ಅನುಬಂಧ'ದಲ್ಲಿ ತಾಂತ್ರಿಕ ವಿವರ ಎಂಬ ಶೀರ್ಷಿಕೆಯಲ್ಲಿ ನೀಡಲಾಗಿದೆ. ವಯಸ್ಕರ ಸಾಕ್ಷರತೆಗೆ ಪ್ರತಿಯಾಗಿ ಇಲ್ಲಿ ಜಿಲ್ಲೆಯ ಹತ್ತು ತಾಲ್ಲೂಕುಗಳ 'ಒಟ್ಟು ಸಾಕ್ಷರತೆ'ಯನ್ನು (ಏಳು ವರ್ಷಕ್ಕೆ ಮೇಲ್ಪಟ್ಟವರು)ಸೂಚ್ಯಂಕದ ಲೆಕ್ಕಾಚಾರಕ್ಕೆ ಬಳಸಲಾಗಿದೆ. ಒಂದರಿಂದ ಹನ್ನೆರಡನೆಯ ತರಗತಿವರೆಗಿನ ಶಾಲಾ ಹಾಜರಾತಿಯನ್ನು ದಾಖಲಾತಿ ಸೂಚ್ಯಂಕವನ್ನು ಗಣನೆ ಮಾಡಲು ಬಳಸಲಾಗಿದೆ.

ಜೀವನಾಯುಷ್ಯದ ಲೆಕ್ಕಾಚಾರಕ್ಕಾಗಿ ಗ್ರಾಮವಾರು ವಯೋಮಾನವಾರು ಮರಣದ ಸಂಖ್ಯೆಯನ್ನು 2005–06ಕ್ಕೆ ಸಂಬಂಧಿಸಿದಂತೆ ಗ್ರಾಮ ಲೆಕ್ಕಾಧಿಕಾರಿಗಳ ಮತ್ತು ಅಂಗನವಾಡಿ ಕಾರ್ಯಕರ್ತೆಯರಿಂದ ಸಂಗ್ರಹಿಸಿಕೊಳ್ಳಲಾಗಿದೆ. ಇದರ ವಿವರಗಳನ್ನು ತಾಂತ್ರಿಕ ಟಿಪ್ಪಣಿಯಲ್ಲಿ ನೀಡಲಾಗಿದೆ. ಪ್ರತಿ ತಾಲ್ಲೂಕಿನ ಎಲ್ಲ ಹಳ್ಳಿಗಳ ವಯೋಮಾನವಾರು ಮರಣದ ಸಂಖ್ಯೆಯನ್ನು ಕೂಡಿಸಿ ತಾಲ್ಲೂಕು ಮಟ್ಟದ ಮಾಹಿತಿಯನ್ನು ಪಡೆಯಲಾಗಿದೆ. ಕಂಪ್ಯೂಟರ್‌ನಲ್ಲಿನ ಸಿದ್ಧ 'ಲೈಫ್ ಟೇಬಲ್'ನ ಸಹಾಯದಿಂದ ಜೀವನಾಯುಷ್ಯ ಸೂಚ್ಯಂಕವನ್ನು ಲೆಕ್ಕಾಚಾರ ಮಾಡಲಾಗಿದೆ.

ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ಅಧಿಕಾರಿಗಳು ಪ್ರತಿ ತಾಲ್ಲೂಕಿನ ವಲಯವಾರು ವರಮಾನದ ವಿವರಗಳನ್ನು ಸಂಗ್ರಹಿಸಿಕೊಂಡು ಪ್ರತಿ ತಾಲ್ಲೂಕಿನ ಒಟ್ಟು ಆಂತರಿಕ ಉತ್ಪನ್ನವನ್ನು ಲೆಕ್ಕ ಮಾಡಿ ಕೊಟ್ಟಿದ್ದಾರೆ. ಈ ಕಾರ್ಯಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳಿಗಾಗಿ ಕಾರ್ಯಾಗಾರವನ್ನು ಮಾಡಲಾಯಿತು. ಜಿಲ್ಲಾ ಒಟ್ಟು ಆಂತರಿಕ ಉತ್ಪನ್ನ ಮತ್ತು ತಲಾ ಒಟ್ಟು ಆಂತರಿಕ ಉತ್ಪನ್ನವನ್ನು ಪ್ರತಿ ತಾಲ್ಲೂಕಿಗೂ 2005–06ಕ್ಕೆ ಸ್ಥಿರ ಮತ್ತು ಚಾಲ್ತಿ ಬೆಲೆಗಳಲ್ಲಿ ಲೆಕ್ಕ ಹಾಕಲಾಗಿದೆ. ಪ್ರತಿ ತಲಾ ಒಟ್ಟು ಆಂತರಿಕ ಉತ್ಪನ್ನವನ್ನು (ಸ್ಥಿರ ಬೆಲೆಗಳಲ್ಲಿ) ಬಳಸಿಕೊಂಡು ಪಿಪಿಪಿ ಡಾಲರಿನ ರೂಪದಲ್ಲಿ ವರಮಾನ ಸೂಚ್ಯಂಕವನ್ನು ಗಣನೆ ಮಾಡಲಾಗಿದೆ. ಯುಎನ್‌ಡಿಪಿ ವಿಧಾನದಲ್ಲಿ ವರಮಾನ ಸೂಚ್ಯಂಕವನ್ನು ಲೆಕ್ಕಹಾಕಲಾಗಿದೆ.

ಆರೋಗ್ಯ ಸೂಚ್ಯಂಕ, ಶೈಕ್ಷಣಿಕ ಸೂಚ್ಯಂಕ ಮತ್ತು ವರಮಾನ ಸೂಚ್ಯಂಕಗಳ ಸರಾಸರಿ ಮೊತ್ತದ ಆಧಾರದ ಮೇಲೆ ತಾಲ್ಲೂಕು ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕಹಾಕಲಾಗಿದೆ. ಗುಲಬರ್ಗಾ ಜಿಲ್ಲೆಯ ಸರಾಸರಿ ಮಾನವ ಅಭಿವೃದ್ಧಿ ಸೂಷ್ಯಂಕವು 2001ರಲ್ಲಿ 0.564 ರಷ್ಟಿದ್ದುದು 2005–05ರಲ್ಲಿ 0.590 ಕ್ಕೇರಿದೆ. ರಾಜ್ಯದ ಮಾನವ ಅಭಿವೃದ್ಧಿ ಸೂಚ್ಯಂಕವು 1991 ರಲ್ಲಿ 0.541 ರಷ್ಟಿದ್ದುದು 2001 ರಲ್ಲಿ ಅದು 0.650 ಕ್ಕೇರಿದೆ. ಇದೇ ಅವಧಿಯಲ್ಲಿ ಗುಲಬರ್ಗಾ ಜಿಲ್ಲೆಯ ಸುಚ್ಯಂಕವು 1991ರಲ್ಲಿ 0.453ರಷ್ಟಿದ್ದುದು 2001ರಲ್ಲಿ 0.564ಕ್ಕೇರಿದೆ. ರಾಜ್ಯ ಮಟ್ಟದಲ್ಲಿ ಸೂಚ್ಯಂಕವು 1991 ರಿಂದ 2001ರ ಅವಧಿಯಲ್ಲಿ ಶೇ. 20 ರಷ್ಟು ಏರಿಕೆಯಾಗಿದ್ದರೆ ಜಿಲ್ಲಾ ಮಟ್ಟದಲ್ಲಿ ಅದರ ಏರಿಕೆಯು ಶೇ. 24.5 ರಷ್ಟಾಗಿದೆ.

ಜಿಲ್ಲೆಯ ಆರೋಗ್ಯ ಸೂಚ್ಯಂಕವು 1991ರಲ್ಲಿ 0.575ರಷ್ಟಿದ್ದುದು 2001ರಲ್ಲಿ 0. 632ಕ್ಕೇರಿದೆ. ರಾಜ್ಯದ 27 ಜಿಲ್ಲೆಗಳ ಪೈಕಿ ಗುಲಬರ್ಗಾದ ಸ್ಥಾನ ಅತ್ಯುತ್ತಮವಾದ ಇಪ್ಪತ್ತಾಗಿತ್ತು. ಆದರೆ ಅದರ ಸ್ಥಾನ ಶಿಕ್ಷಣಕ್ಕೆ ಮತ್ತು ವರಮಾನಕ್ಕೆ ಸಂಬಂಧಿಸಿದಂತೆ ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳ ನಂತರದ ಕಟ್ಟಕಡೆಯದಾಗಿತ್ತು. ರಾಜ್ಯ ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಜಿಲ್ಲಾ ಸೂಚ್ಯಂಕಗಳ ನಡುವೆ 0.086ರಷ್ಟು ಅಂತರವಿದೆ. ಜಿಲ್ಲೆಯ ಸೂಚ್ಯಂಕವು ರಾಷ್ಟ್ರಮಟ್ಟದ ಸೂಚ್ಯಂಕವಾದ 0.621 ಕ್ಕಿಂತ ಕಡಿಮೆಯಿದೆ. ಗುಲಬರ್ಗಾ ಜಿಲ್ಲೆಯ ಸೂಚ್ಯಂಕವು

ಮಧ್ಯಪ್ರದೇಶ (0.572) ಮತ್ತು ಒರಿಸ್ಸಾ (0.569) ರಾಜ್ಯಗಳ ಸೂಚ್ಯಂಕಗಳಿಗಿಂತ ಕೆಳಮಟ್ಟದಲ್ಲಿದೆ. ಆದರೆ ಅದು ಉತ್ತರ ಪ್ರದೇಶ ಮತ್ತು ಬಿಹಾರ ರಾಜ್ಯಗಳ ಸೂಚ್ಯಂಕಗಳಿಗಿಂತ ಅಧಿಕವಾಗಿದೆ. ರಾಜ್ಯದಲ್ಲಿ 2001ರಲ್ಲಿ ಅದರ ಸ್ಥಾನವು ರಾಯಚೂರು ಜಿಲ್ಲೆಯ ನಂತರ ಕಡೆಯದಾಗಿದೆ. ಅದರ ಸ್ಥಾನವು 1991ರಲ್ಲಿ ಇಪ್ಪತ್ತೈದಿದ್ದುದು 2001ರಲ್ಲಿ ಅದು ಇಪ್ಪತ್ತಾರಕ್ಕಿಳಿದಿದೆ. ಅದರ ಸ್ಥಾನವು 1991ರಲ್ಲಿ ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಸ್ಥಾನಕ್ಕಿಂತ ಉತ್ತಮವಾಗಿತ್ತು. ಆದರೆ 2001ರಲ್ಲಿ ಅದರ ಸ್ಥಾನವು ಕೊಪ್ಪಳಕ್ಕಿಂತ ಕೆಳಗೆ ಬಿದ್ದಿದೆ. ಇದರ ಸೂಚ್ಯಂಕವು 2006ರಲ್ಲಿ 0.590. ಇದೂ ಕೂಡ ರಾಜ್ಯಮಟ್ಟದ 2001ರ ಸೂಚ್ಯಂಕಕ್ಕಿಂತ ಕಡಿಮೆಯಾಗಿದೆ. ಜಿಲ್ಲೆಯ ಸೂಚ್ಯಂಕದ ವಾರ್ಷಿಕ ಬೆಳವಣಿಗೆ ಪ್ರಮಾಣ 1991ರಿಂದ 2001ರಲ್ಲಿ ಶೇ. 2.4. ಆದರೆ 2001ರಿಂದ 2006ರಲ್ಲಿ ಅದು ಕೇವಲ ಶೇ. 0.95

ಕೋಷ್ಟಕ 2.1

## ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕದ ಒಳ ರಚನೆ

| ವರ್ಷ | ಆರೋಗ್ಯ ಸೂಚ್ಯಂಕ | ಶೈಕ್ಷಣಿಕ ಸೂಚ್ಯಂಕ | ವರಮಾನ ಸೂಚ್ಯಂಕ | ಮಾನವ ಅಭಿವೃದ್ಧಿ ಸೂಚ್ಯಂಕ | ಮಾ.ಅ.ಸೂ.ದಲ್ಲಿ ಸರಾಸರಿ ಶೇಕಡಾ ಬದಲಾವಣೆ |
|---|---|---|---|---|---|
| 1991 | 0.575 (0.618) | 0.432 (0.602) | 0.352 (0.402) | 0.453 (0.541) | |
| 2001 | 0.632 (0.680) | 0.572 (0.712) | 0.490 (0.559) | 0.564 (0.650) | 2.4 |
| 2006 | 0.656 | 0.576 | 0.538 | 0.590 | 0.95 |

ಮೂಲ: ಕೆಎಚ್‌ಡಿಆರ್ –2005 ಮತ್ತು ಡಿಎಚ್‌ಡಿಆರ್ –ಗುಲಬರ್ಗಾ– 2005–06

ಟಿಪ್ಪಣಿ: ಆವರಣದಲ್ಲಿರುವ ಅಂಕಿಗಳು ರಾಜ್ಯ ಸರಾಸರಿಯನ್ನು ತೋರಿಸುತ್ತವೆ.

ಕೋಷ್ಟಕ 2.2

## ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕಗಳ ಒಳ ರಚನೆ (ತಾಲ್ಲೂಕುವಾರು) – 2006

| ತಾಲ್ಲೂಕು | ಆರೋಗ್ಯ ಸೂಚ್ಯಂಕ | ಶೈಕ್ಷಣಿಕ ಸೂಚ್ಯಂಕ | ವರಮಾನ ಸೂಚ್ಯಂಕ | ಮಾನವ ಅಭಿವೃದ್ಧಿ ಸೂಚ್ಯಂಕ | ಸ್ಥಾನ |
|---|---|---|---|---|---|
| ಅಫಜಲಪುರ | 0.615 | 0.666 | 0.541 | 0.607 | 2 |
| ಅಳಂದ್ | 0.673 | 0.626 | 0.510 | 0.603 | 3 |
| ಚಿಂಚೋಳಿ | 0.596 | 0.585 | 0.511 | 0.564 | 8 |
| ಚಿತ್ತಾಪುರ | 0.686 | 0.547 | 0.548 | 0.593 | 4 |
| ಗುಲಬರ್ಗಾ | 0.723 | 0.627 | 0.545 | 0.631 | 1 |
| ಜೇವರ್ಗಿ | 0.551 | 0.566 | 0.530 | 0.549 | 9 |
| ಸೇಡಮ್ | 0.633 | 0.560 | 0.550 | 0.581 | 6 |
| ಶಹಾಪುರ | 0.663 | 0.499 | 0.549 | 0.570 | 7 |
| ಶೋರಾಪುರ | 0.675 | 0.554 | 0.528 | 0.585 | 5 |
| ಯಾದಗೀರ್ | 0.668 | 0.445 | 0.518 | 0.543 | 10 |
| **ಜಿಲ್ಲೆ** | **0.656** | **0.576** | **0.538** | **0.590** | |

ಮೂಲ: ಕೆಎಚ್‌ಡಿಆರ್–2005 ಡಿಎಚ್‌ಡಿಆರ್–2006

ಮಾತ್ರವಾಗಿದೆ. ಜಿಲ್ಲೆಯ ಶೈಕ್ಷಣಿಕ ಸೂಚ್ಯಂಕವು 2001ರಲ್ಲಿ 0.573ರಷ್ಟಿದ್ದುದು 2006ರಲ್ಲಿ 0. 576ಕ್ಕೇರಿದೆ. ಇಲ್ಲಿನ ಏರಿಕೆ ಅತ್ಯಲ್ಪವಾಗಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಸೂಚ್ಯಂಕಕ್ಕೆ ಬಳಸಿರುವ ಅಂಕಿಅಂಶಗಳ ಮೂಲವು ಬೇರೆಬೇರೆಯಾಗಿದೆ. ಈ ವರದಿಯಲ್ಲಿ ಶಾಲಾ ದಾಖಲಾತಿಗೆ ಎಸ್‌ಎಸ್‌ಎ ನಲ್ಲಿನ ಈಎಮ್‌ಐಎಸ್ ಮಾಹಿತಿಯನ್ನು ಬಳಸಲಾಗಿದೆ. ಆದರೆ 2001ರಲ್ಲಿ ರಾಜ್ಯ ಮಟ್ಟದಲ್ಲಿ ಸೂಚ್ಯಂಕದ ಗಣನೆಗೆ ಇಲಾಖಾ ಮಾಹಿತಿಯನ್ನು ಬಳಸಲಾಗಿದೆ. ಇದರಿಂದಾಗಿ ಶೈಕ್ಷಣಿಕ ಸೂಚ್ಯಂಕವು ತುಲನಾತ್ಮಕವಾಗಿಲ್ಲ. ಇದರಿಂದಾಗಿ 2001 ರಿಂದ 2006ರ ನಡುವೆ ಸೂಚ್ಯಂಕದ ಬೆಳವಣಿಗೆ ಮಂದಗತಿಯದ್ದಾಗಿದೆ.

ಜಿಲ್ಲೆಯ ಹತ್ತು ತಾಲ್ಲೂಕುಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳ ವಿವರವನ್ನು ಕೋಷ್ಟಕ–2.2ರಲ್ಲಿ ನೀಡಲಾಗಿದೆ.

ಮಾನವ ಅಭಿವೃದ್ಧಿಯಲ್ಲಿ ಗುಲಬರ್ಗಾ ತಾಲ್ಲೂಕು ಮೊದಲನೆಯ ಸ್ಥಾನದಲ್ಲಿರುವುದಕ್ಕೆ ಮುಖ್ಯ ಕಾರಣವೆಂದರೆ ಈ ತಾಲ್ಲೂಕಿನಲ್ಲಿರುವ ಅಪಾರ ಪ್ರಮಾಣದ ನಗರ ಜನಸಂಖ್ಯೆ. ಇದರ ಸೂಚ್ಯಂಕ 0. 631. ಇಷ್ಟಾದರೂ ಅದು ರಾಜ್ಯದ 2001ರ ಸರಾಸರಿಗಿಂತ (0.650) ಕೆಳಮಟ್ಟದಲ್ಲಿದೆ. ಇದು ತುಮಕೂರು ಮತ್ತು ಮೈಸೂರು ಜಿಲ್ಲೆಗಳ 2001ರ ಸೂಚ್ಯಂಕಕ್ಕೆ ಸಮವಾಗಿದೆ. ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಅತ್ಯಧಿಕ ಮತ್ತು ಅತ್ಯಂತ ಕೆಳಮಟ್ಟಗಳ ನಡುವಿನ ಅಂತರ 0.088 (ಶೇ. 16.2). ಕೇವಲ ನಾಲ್ಕು ತಾಲ್ಲೂಕುಗಳಲ್ಲಿ ಮಾತ್ರ ಸೂಚ್ಯಂಕವು ಜಿಲ್ಲಾ ಸೂಚ್ಯಂಕಕ್ಕಿಂತ ಅಧಿಕವಾಗಿದೆ. ಅಫ್‌ಜಲಪುರ, ಗುಲಬರ್ಗಾ, ಆಳಂದ್ ಮತ್ತು ಚಿತ್ತಾಪುರಗಳೇ ಆ ನಾಲ್ಕು ತಾಲ್ಲೂಕುಗಳು. ಯಾದಗೀರ್ ತಾಲ್ಲೂಕು 0.543 ಸೂಚ್ಯಂಕದೊಂದಿಗೆ ಕಟ್ಟಕಡೆಯ ಸ್ಥಾನದಲ್ಲಿದೆ. ಜೇವರ್ಗಿಯು 0.549 ಸೂಚ್ಯಂಕದೊಂದಿಗೆ ಕೊನೆಯಿಂದ ಎರಡನೆಯ ಸ್ಥಾನದಲ್ಲಿದೆ.

ಶಹಾಪುರ ತಾಲ್ಲೂಕಿನಲ್ಲಿ ಆರೋಗ್ಯ ಮತ್ತು ವರಮಾನ ಸೂಚ್ಯಂಕಗಳು ಜಿಲ್ಲಾ ಸೂಚ್ಯಂಕಗಳಿಗಿಂತ ಅಧಿಕ ಮಟ್ಟದಲ್ಲಿದ್ದರೆ ಶೈಕ್ಷಣಿಕ ಸೂಚಿಯಲ್ಲಿ ಅದರ ಸ್ಥಾನವು ಅತ್ಯಂತ ಕೆಳಮಟ್ಟದಲ್ಲಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಅಲ್ಲಿ ಸಾಕ್ಷರತೆ ಮತ್ತು ದಾಖಲಾತಿ ಅತ್ಯಂತ ಕೆಳಮಟ್ಟದಲ್ಲಿದೆ. ತಾಲ್ಲೂಕಿಗೆ ನೀರಾವರಿ ಬಂದಮೇಲೆ ವರಮಾನದ ಮಟ್ಟವು ಉತ್ತಮವಾಗುತ್ತಿದೆ. ಇದರಿಂದಾಗಿ ತಾಲ್ಲೂಕಿನ ವರಮಾನ ಸೂಚ್ಯಂಕವು ಉನ್ನತ ಮಟ್ಟದಲ್ಲಿದೆ. ಈ ತಾಲ್ಲೂಕಿನ ಸಾಕ್ಷರತೆ ಪ್ರಮಾಣ ಶೇ. 44 ಮತ್ತು ದಾಖಲಾತಿ ಪ್ರಮಾಣ ಶೇ. 61. ಯಾದಗೀರ್ ತಾಲ್ಲೂಕಿನ ಶೈಕ್ಷಣಿಕ ಸೂಚ್ಯಂಕವು ಕಟ್ಟಕಡೆಯದಾಗಿದೆ. ಅಲ್ಲಿನ ಸಾಕ್ಷರತೆ ಪ್ರಮಾಣ ಶೇ. 41.9 ಮತ್ತು ದಾಖಲಾತಿ ಪ್ರಮಾಣ ಶೇ. 50. ಯಾದಗೀರ್ ತಾಲ್ಲೂಕಿನ ವರಮಾನ ಸೂಚ್ಯಂಕವು ಕೆಳಮಟ್ಟದಲ್ಲಿದೆ. ಜ್ಞಾನಾರ್ಜನೆಗೆ ಅವಕಾಶಗಳಿಲ್ಲದಿರುವುದು ಮತ್ತು ಅಗತ್ಯವಿರುವಷ್ಟು ಜೀವನಾವಕಾಶಗಳಿಲ್ಲದಿರುವುದು ತಾಲ್ಲೂಕಿನ್ ಸೂಚ್ಯಂಕವು ಕೆಳಮಟ್ಟದಲ್ಲಿರಲು ಬಹು ಮುಖ್ಯ ಕಾರಣವಾಗಿದೆ.

ಇಲ್ಲಿ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕದ ಆಧಾರದ ಮೇಲೆ ತಾಲ್ಲೂಕುಗಳು ಸಾಧಿಸಿಕೊಂಡಿರುವ ಸಾಧನೆ ಮತ್ತು ತಲಾ ವರಮಾನ ಹಾಗೂ ಮಾನವ ಅಭಿವೃದ್ಧಿಯಲ್ಲಿ ಸಾಧಿಸಿಕೊಂಡಿರುವ ಸಾಧನೆಗಳನ್ನು ತುಲನೆ ಮಾಡಲಾಗಿದೆ. ಇದನ್ನು ಕೋಷ್ಟಕ–2.3 ರಲ್ಲಿ ತೋರಿಸಲಾಗಿದೆ.

ಪ್ರಾದೇಶಿಕ ಅಸಮಾನತೆ ನಿವಾರಣಾ ಅಧ್ಯಯನದ ಉನ್ನತಾಧಿಕಾರ ಸಮಿತಿಯು ರಾಜ್ಯದ 175 ತಾಲ್ಲೂಕುಗಳಿಗೂ ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕಗಳನ್ನು ಲೆಕ್ಕ ಹಾಕಿ ನೀಡಿದೆ. ಈ ಸೂಚ್ಯಂಕವು 35 ಸೂಚಿಗಳನ್ನು ಆಧಾರಿಸಿದ ಸೂಚಿಯಾಗಿದೆ. ಕೋಷ್ಟಕ 2.3 ರಿಂದ ಸ್ಪಷ್ಟವಾಗುವಂತೆ ಆರ್ಥಿಕ ಅಭಿವೃದ್ಧಿಯು ಯಾವಾಗಲೂ ಮಾನವ ಅಭಿವೃದ್ಧಿಯನ್ನು ಸಾಧಿಸುತ್ತದೆಯೆಂದು ಹೇಳಲು ಬರುವುದಿಲ್ಲ. ಸೇಡಮ್ ಮತ್ತು ಯಾದಗೀರ್ ತಾಲ್ಲೂಕುಗಳು ಆರ್ಥಿಕ ಅಭಿವೃದ್ಧಿಯ ದೃಷ್ಟಿಯಿಂದ ಉತ್ತಮವಾಗಿವೆ. ಆದರೆ ಮಾನವ ಅಭಿವೃದ್ಧಿಯಲ್ಲಿ ಅವುಗಳ ಸಾಧನೆ ತೃಪ್ತಿಕರವಾಗಿಲ್ಲ. ಚಿತ್ತಾಪುರದ ಸ್ಥಿತಿಯು ಅದೇ ರೀತಿಯಲ್ಲಿದೆ. ಅದು ತಲಾ ವರಮಾನದಲ್ಲಿ ಜಿಲ್ಲೆಯಲ್ಲಿ ಎರಡನೆಯ ಸ್ಥಾನ ಪಡೆದಿದೆ. ಆದರೆ ಮಾನವ ಅಭಿವೃದ್ಧಿಯಲ್ಲಿ ನಾಲ್ಕನೆಯ ಸ್ಥಾನ ಪಡೆದಿದೆ. ಶೋರಾಪುರ ತಾಲ್ಲೂಕು ಕೂಡ ಇದಕ್ಕೆ ಉದಾಹರಣೆಯಾಗಬಲ್ಲದು. ಇದಕ್ಕೆ ಪ್ರತಿಯಾಗಿ

ಅಳಂದ್ ಮತ್ತು ಅಫಜಲಪುರ ತಾಲ್ಲೂಕುಗಳು ಮಾನವ ಅಭಿವೃದ್ಧಿಯಲ್ಲಿ ಉತ್ತಮ ಸಾಧನೆ ಮಾಡಿವೆ. ಆದರೆ ಅವುಗಳು ಆರ್ಥಿಕ ಅಭಿವೃದ್ಧಿಯಲ್ಲಿ ಕೆಳಮಟ್ಟದಲ್ಲಿವೆ. ಆದರೆ ಕೆಲವು ತಾಲ್ಲೂಕುಗಳಲ್ಲಿ ಉದಾಹರಣೆಗೆ ಜೇವರ್ಗಿ, ಚಿಂಚೋಳಿ ಮತ್ತು ಗುಲಬರ್ಗಾಗಳಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಗಳ ನಡುವೆ ಹೆಚ್ಚಿನ ಭಿನ್ನತೆ ಕಂಡು ಬರುವುದಿಲ್ಲ. ಅಂದಮೇಲೆ ಆರ್ಥಿಕ ಅಭಿವೃದ್ಧಿಯನ್ನು ಮಾನವ ಅಭಿವೃದ್ಧಿಯನ್ನಾಗಿ ಪರಿವರ್ತಿಸಿಕೊಳ್ಳಲು ಸೂಕ್ತ ನೀತಿಗಳ ಮೂಲಕ ಪ್ರಯತ್ನ ಮಾಡಬೇಕಾಗುತ್ತದೆ.

ಸಮಾಜದಲ್ಲಿನ ಲಿಂಗ ಅಸಮಾನತೆಗಳನ್ನು ಮಾನವ ಅಭಿವೃದ್ಧಿ ಸೂಚ್ಯಂಕವು ತೋರಿಸುವುದಿಲ್ಲ. ಪುರುಷಶಾಹಿ ಸಮಾಜದಲ್ಲಿ ಲಿಂಗ ಅಸಮಾನತೆಗಳಿರುತ್ತವೆ. ಪುರುಷರಿಗೆ ಇದಿರಾಗಿ ಮಹಿಳೆಯರು ಸಾಧಿಸಿಕೊಂಡಿರುವ ಸಾಧನೆಯನ್ನು ತಿಳಿದುಕೊಳ್ಳಲು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕವನ್ನು ಲೆಕ್ಕಹಾಕಬೇಕಾಗುತ್ತದೆ. ಸಮಾಜದಲ್ಲಿರುವ ಲಿಂಗ ಅಸಮಾನತೆಯನ್ನು ಗುರುತಿಸಲು ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳ ತುಲನೆ ಅಗತ್ಯವಾಗಿದೆ.

ಕೋಷ್ಟಕ 2.3

## ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿಯಲ್ಲಿ ತಾಲ್ಲೂಕುಗಳ ಸಾಧನೆ

| ತಾಲ್ಲೂಕುಗಳು | ಮಾನವ ಅಭಿವೃದ್ಧಿ ಸೂಚ್ಯಂಕ | ಸ್ಥಾನ | ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕ | ಸ್ಥಾನ |
|---|---|---|---|---|
| ಅಫಜಲಪುರ | 0.607 | 2 | 0.62 | 6 |
| ಅಳಂದ್ | 0.603 | 3 | 0.61 | 7 |
| ಚಿಂಚೋಳಿ | 0.564 | 8 | 0.57 | 8 |
| ಚಿತ್ತಾಪುರ | 0.593 | 4 | 0.65 | 5 |
| ಗುಲಬರ್ಗಾ | 0.631 | 1 | 0.89 | 1 |
| ಜೇವರ್ಗಿ | 0.549 | 9 | 0.57 | 8 |
| ಸೇಡಮ್ | 0.581 | 6 | 0.72 | 2 |
| ಶಹಾಪುರ | 0.570 | 7 | 0.62 | 6 |
| ಶೋರಾಪುರ | 0.585 | 5 | 0.70 | 3 |
| ಯಾದಗೀರ್ | 0.543 | 10 | 0.67 | 4 |
| **ಜಿಲ್ಲೆ** | **0.590** | | **0.88** | |

ಮೂಲ: ಪ್ರಾದೇಶಿಕ ಅಸಮಾನತೆಯ ನಿವಾರಣಾ ಅಧ್ಯಯನ ಸಮಿತಿ ವರದಿ 2002 ಮತ್ತು ಗುಲಬರ್ಗಾ ಜಿಲ್ಲಾ ಮಾನವ ಅಭಿವೃದ್ಧಿ ವರದಿ 2006

ಕೋಷ್ಟಕ 2.4

## ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ : ರಾಜ್ಯ ಮತ್ತು ಜಿಲ್ಲೆ

| ವರ್ಷ | ಸಮಾನ ವಿತರಣೆಯ ಆರೋಗ್ಯ ಸೂಚ್ಯಂಕ | ಸಮಾನ ವಿತರಣೆಯ ಶೈಕ್ಷಣಿಕ ಸೂಚ್ಯಂಕ | ಸಮಾನ ವಿತರಣೆಯ ವರಮಾನ ಸೂಚ್ಯಂಕ | ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕ |
|---|---|---|---|---|
| 1991 | 0.574 (23) | 0.396 (25) | 0.326 (24) | 0.432 (25) |
| 2001 | 0.631 (20) | 0.556 (25) | 0.442 (25) | 0.453 (25) |
| 2006 | 0.650 | 0.559 | 0.513 | 0.574 |

ಮೂಲ: ಕೆ.ಎಚ್.ಡಿ.ಆರ್. 2005 ಮತ್ತು ಡಿ.ಎಚ್.ಡಿ.ಆರ್. : ಗುಲಬರ್ಗಾ – 2006

ಟಿಪ್ಪಣಿ: ಆವರಣದಲ್ಲಿರುವ ಅಂಕಿಗಳು ರಾಜ್ಯದಲ್ಲಿನ ಸ್ಥಾನವನ್ನು ತೋರಿಸುತ್ತವೆ..

ಜಿಲ್ಲೆಯ ಎಲ್ಲ ತಾಲ್ಲೂಕುಗಳಿಗೂ 2006 ಕ್ಕೆ ಸಂಬಂಧಿಸಿದಂತೆ ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳನ್ನು ಲೆಕ್ಕ ಹಾಕಲಾಗಿದೆ. ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳನ್ನು ಕೋಷ್ಟಕ–2.5 ರಲ್ಲಿ ತೋರಿಸಲಾಗಿದೆ.

ಜಿಲ್ಲೆಯ ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕವು 2006ರಲ್ಲಿ 0.573ರಷ್ಟಿತ್ತು. ಇದು 2001ರಲ್ಲಿ 0. 543 ರಷ್ಟಾಗಿತ್ತು ಲಿಂಗ ಸಂಬಂಧಿ ಅಭಿವೃದ್ಧಿ ಸೂಚ್ಯಂಕದ ಒಳಗಿನ ಸೂಚಿಗಳಿಗೆ ಸಂಬಂಧಿಸಿದಂತೆ ತೀವ್ರ ಭಿನ್ನತೆಗಳಿವೆ. ಗುಲಬರ್ಗಾ ಜಿಲ್ಲೆಯ ಸೂಚ್ಯಂಕವು ಅತ್ಯಂತ ಹೆಚ್ಚಿನ ಮಟ್ಟದಲ್ಲಿದೆ. ಅದರ ಸೂಚ್ಯಂಕ 0.602. ಆದರೆ ಇದು ರಾಜ್ಯ ಸರಾಸರಿ ಸೂಚ್ಯಂಕಕ್ಕಿಂತ ಕೆಳಮಟ್ಟದಲ್ಲಿದೆ. ಜೇವರ್ಗಿ ತಾಲ್ಲೂಕಿನ ಸೂಚ್ಯಂಕವು (0.538) ಕಟ್ಟಕಡೆಯದಾಗಿದೆ. ಜಿಲ್ಲೆಯಲ್ಲಿನ ಅತ್ಯಂತ ಹೆಚ್ಚಿನ ಸೂಚ್ಯಂಕ ಪಡೆದ ತಾಲ್ಲೂಕು ಮತ್ತು ಅತ್ಯಂತ ಕಡಿಮೆ ಸೂಚ್ಯಂಕವನ್ನು ಪಡೆದ ತಾಲ್ಲೂಕುಗಳ ನಡುವಿನ ಅಂತರ 0.064. ಗುಲಬರ್ಗಾ, ಅಳಂದ್, ಅಫಜಲಪುರ, ಚಿತ್ತಾಪುರ ಮತ್ತು ಸೇಡಮ್ ತಾಲ್ಲೂಕುಗಳ ಸೂಚ್ಯಂಕಗಳು ಜಿಲ್ಲಾ ಸರಾಸರಿ ಮಟ್ಟವಾದ 0.574 ಕ್ಕಿಂತ ಅಧಿಕವಾಗಿವೆ. ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕಗಳ ಒಳರಚನೆಯನ್ನು ಪರಿಶೀಲಿಸಿದರೆ ನಮಗೆ ಭಿನ್ನವಾದ ಚಿತ್ರ ದೊರೆಯುತ್ತದೆ. ಸಮಾನ ವಿತರಣೆಯ ವರಮಾನ ಸೂಚ್ಯಂಕವು ಗುಲಬರ್ಗಾ ತಾಲ್ಲೂಕಿನಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ತಾಲ್ಲೂಕಿನ ನಗರ ಪ್ರದೇಶದಲ್ಲಿ ಕೆಳಮಟ್ಟದಲ್ಲಿರುವ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣ. ಗುಲಬರ್ಗಾ ತಾಲ್ಲೂಕು ಆರೋಗ್ಯ ಸೂಚ್ಯಂಕದಲ್ಲಿ ಮೊದಲನೆಯ ಸ್ಥಾನ ಪಡೆದಿದೆ ಮತ್ತು ಶೈಕ್ಷಣಿಕ ಸೂಚ್ಯಂಕದಲ್ಲಿ ಎರಡನೆಯ ಸ್ಥಾನ ಪಡೆದಿದೆ. ಶೈಕ್ಷಣಿಕ ಸೂಚ್ಯಂಕದಲ್ಲಿ ಅಫಜಲಪುರ ತಾಲ್ಲೂಕು ಮೊದಲನೆಯ ಸ್ಥಾನ ಪಡೆದಿದೆ. ಚಿತ್ತಾಪುರ ತಾಲ್ಲೂಕು ಆರೋಗ್ಯ ಮತ್ತು ವರಮಾನದಲ್ಲಿ ಉತ್ತಮ ಸ್ಥಾನದಲ್ಲಿದ್ದರೂ ಅದರ ಸ್ಥಾನ ಶೈಕ್ಷಣಿಕ ಸೂಚ್ಯಂಕದಲ್ಲಿ ಎಂಟನೆಯದಾಗಿದೆ. ಗ್ರಾಮೀಣ ಮಹಿಳೆಯರ ಸಾಕ್ಷರತೆಯು ಅತ್ಯಂತ ಕೆಳಮಟ್ಟದಲ್ಲಿರುವುದರಿಂದ ಯಾದಗೀರ್ ತಾಲ್ಲೂಕಿನ ಶೈಕ್ಷಣಿಕ ಸೂಚ್ಯಂಕವು ಅತ್ಯಂತ ಕೆಳಮಟ್ಟದಲ್ಲಿದೆ. ಯಾವ ತಾಲ್ಲೂಕವು ಸೂಚ್ಯಂಕದ ಮೂರು ಸೂಚಿಗಳಿಗೆ ಸಂಬಂಧಿಸಿದಂತೆ ಸಮಾನವಾದ ಸಾಧನೆಯನ್ನು ತೋರಿಲ್ಲ.

ಈ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿಗೂ ಸಂಬಂಧಿಸಿದಂತೆ ಮಾನವ ಅಭಿವೃದ್ಧಿ ರಾಡಾರುಗಳನ್ನು ರೂಪಿಸಲಾಗಿವೆ. ಈ ರಾಡಾರುಗಳನ್ನು ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಒಂಬತ್ತು ಅಭಿವೃದ್ಧಿ ಸೂಚಿಗಳನ್ನು ಆಧರಿಸಿ ರೂಪಿಸಲಾಗಿದೆ. ಈ ಸೂಚಿಗಳು ಹೀಗಿವೆ–

ಆರೋಗ್ಯ ಸೂಚ್ಯಂಕ
ಶೈಕ್ಷಣಿಕ ಸೂಚ್ಯಂಕ
ವರಮಾನ ಸೂಚ್ಯಂಕ
ಮಾನವ ಅಭಿವೃದ್ಧಿ ಸೂಚ್ಯಂಕ
ಜಿಲ್ಲಾ ಒಟ್ಟು ಆಂತರಿಕ ಉತ್ಪನ್ನ
ಜೀವನಾಧಾರ ಅವಕಾಶಗಳ ಸೂಚ್ಯಂಕ
ಮಹಿಳೆಯರ ಸಾಕ್ಷರತಾ ಪ್ರಮಾಣ
ಮಾನವ ಬಡತನ ಸೂಚ್ಯಂಕ

**ಮಾನವ ಅಭಿವೃದ್ಧಿ – ಅಫಜಲಪುರ**




**ಮಾನವ ಅಭಿವೃದ್ಧಿ – ಆಳಂದ**



## ಮಾನವ ಅಭಿವೃದ್ಧಿ – ಚಿಂಚೋಳಿ




## ಮಾನವ ಅಭಿವೃದ್ಧಿ – ಚಿತ್ತಾಪುರ




## ಮಾನವ ಅಭಿವೃದ್ಧಿ – ಗುಲಬರ್ಗಾ




## ಮಾನವ ಅಭಿವೃದ್ಧಿ – ಜೇವರ್ಗಿ




## ಮಾನವ ಅಭಿವೃದ್ಧಿ – ಶಹಾಪುರ




## ಮಾನವ ಅಭಿವೃದ್ಧಿ – ಸೇಡಂ



**ಮಾನವ ಅಭಿವೃದ್ಧಿ – ಯಾದಗೀರ್**




**ಮಾನವ ಅಭಿವೃದ್ಧಿ – ಶೋರಾಪುರ**




## ಮುಕ್ತಾಯ

ಮಾನವ ಅಭಿವೃದ್ಧಿ ಸೂಚ್ಯಂಕವೆನ್ನುವುದು ಜನರ ಆರೋಗ್ಯ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ ಮತ್ತು ವರಮಾನ ಸ್ಥಿತಿಗತಿಗಳ ಮೇಲೆ ಪ್ರಭಾವ ಬೀರುವ ಅನೇಕ ಸಂಗತಿಗಳ ಒಟ್ಟು ಫಲವಾಗಿದೆ. ಈ ಸೂಚ್ಯಂಕಕ್ಕೆ ಸಂಬಂಧಿಸಿದಂತೆ ಅಗತ್ಯವಾದ ನೀತಿ ರೂಪಿಸುವುದಕ್ಕೆ ಅದರ ಮೇಲೆ ಪ್ರಭಾವ ಬೀರುವ ಸಂಗತಿಗಳನ್ನು ಗುರುತಿಸುವುದು ಅತ್ಯಂತ ಅಗತ್ಯ. ಗುಲಬರ್ಗಾ ಜಿಲ್ಲೆಗೆ ಸಂಬಂಧಿಸಿದಂತೆ ಅದರ ವರಮಾನದ ವರ್ಧನೆ ಅತ್ಯಂತ ಮಂದಗತಿಯಲ್ಲಿ ನಡೆದಿದೆ (ಇದು ಆ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಒಂಭತ್ತು ಅತ್ಯಂತ ಹಿಂದುಳಿದಿರುವ ಮತ್ತು ಒಂದು ಹಿಂದುಳಿದಿರುವ ಸ್ಥಿತಿಗತಿಯಲ್ಲಿರುವ ಮಾಹಿತಿಯಿಂದ ತಿಳಿಯುತ್ತದೆ) ಮತ್ತು ಅದು ತಳಮಟ್ಟದಲ್ಲಿ ಜನರಿಗೆ ತಲುಪುತ್ತಿಲ್ಲ. ಆದ್ದರಿಂದ ಮಾನವ ಅಭಿವೃದ್ಧಿಯಲ್ಲಿ ಜಿಲ್ಲೆಯ ಸಾಧನೆಯು ಅತ್ಯಂತ ನಿಕೃಷ್ಟವಾಗಿದೆ. ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕವು ತೀವ್ರಗತಿಯಲ್ಲಿ ಏರಿಕೆಯಾಗುತ್ತಿಲ್ಲ. ಜಿಲ್ಲೆಯ ಜೇವರ್ಗಿ, ಶಹಾಪುರ, ಶೋರಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಮಾನವ ಅಭಿವೃದ್ಧಿ ಸೂಚ್ಯಂಕವು ಅತ್ಯಂತ ಕೆಳಮಟ್ಟದಲ್ಲಿದೆ. ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದರ ಮೂಲಕ ಮತ್ತು ಶಾಲಾ ಸೌಲಭ್ಯವು ಎಲ್ಲರಿಗೂ ದೊರೆಯುವಂತೆ ಮಾಡುವುದರ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಸಾಕ್ಷರತಾ ಪ್ರಮಾಣವನ್ನು, ಅದರಲ್ಲೂ ಮಹಿಳೆಯರ ಸಾಕ್ಷರತಾ ಪ್ರಮಾಣವನ್ನು ಉತ್ತಮಪಡಿಸಲು. ಅಗತ್ಯವಿರುವ ಹಾಗೂ ಮಾನವ ಅಭಿವೃದ್ಧಿಗೆ ಪೂರಕವಾದ ನೀತಿ–ಕಾರ್ಯಕ್ರಮಗಳನ್ನು ರೂಪಿಸಬೇಕಾಗುತ್ತದೆ. ಮತ್ತೊಂದು ಸುಧಾರಿಸಬೇಕಾದ ಸಂಗತಿಯೆಂದರೆ ಆರೋಗ್ಯ ಸೇವೆ. ಇದಕ್ಕೆ ಆರೋಗ್ಯ ಸೇವಾ ವ್ಯವಸ್ಥೆಯ ಕಾರ್ಯಕ್ಷಮತೆಯನ್ನು ಉತ್ತಮಪಡಿಸಬೇಕಾಗುತ್ತದೆ ಮತ್ತು ಅಲ್ಲಿನ ಸಿಬ್ಬಂದಿಯ ಕೊರತೆಯನ್ನು ಕ್ಷಿಪ್ರಗತಿಯಲ್ಲಿ ನಿವಾರಿಸಬೇಕು. ಮಹಿಳೆಯರು ಹೆಚ್ಚು ಹೆಚ್ಚು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಹಭಾಗಿಗಳಾಗುವಂತೆ ಮಾಡುವ ನೀತಿಗಳನ್ನು ರೂಪಿಸಬೇಕು. ಇದರ ಜೊತೆಗೆ ಸಮಾಜದಲ್ಲಿನ ವಂಚಿತ ವರ್ಗ ಮತ್ತು ತುಳಿತಕ್ಕೊಳಗಾಗಿರುವ ವರ್ಗದ ಅಭಿವೃದ್ಧಿಯ ಕಡೆಗೆ ವಿಶೇಷ ಗಮನ ನೀಡುವ ಅವಶ್ಯಕತೆಯಿದೆ. ಜನರಿಗೆ ಅಗತ್ಯವಿರುವಷ್ಟು ಪ್ರಮಾಣದಲ್ಲಿ ಕುಡಿಯುವ ನೀರು, ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮತ್ತು ಜನರಿಗೆ ಒಳ್ಳೆಯದನ್ನು ಮಾಡುವಂತಹ ಆಡಳಿತವನ್ನು ಒದಗಿಸಲು ಎನ್‌ಜಿಒಗಳು, ಸ್ವಸಹಾಯ ಗುಂಪುಗಳು ಮತ್ತು ಪಂಚಾಯತಿ ರಾಜ್ ವ್ಯವಸ್ಥೆ ಮುಂತಾದವುಗಳನ್ನು ಬಲಪಡಿಸುವ ಅಗತ್ಯವಿದೆ. ಈ ವಿಷಯದ ಮೇಲೆ ಬೆಳಕು ಚೆಲ್ಲುವ ಸಂಗತಿಗಳನ್ನು ಕುರಿತಂತೆ ಮುಂದಿನ ಅಧ್ಯಾಯಗಳಲ್ಲಿ ವಿವರವಾಗಿ ಚರ್ಚಿಸಲಾಗಿದೆ,

**ಮಾನವ ಅಭಿವೃದ್ಧಿ ಸೂಚ್ಯಂಕವೆನ್ನುವುದು ಜನರ ಆರೋಗ್ಯ ಸ್ಥಿತಿಗತಿ, ಶೈಕ್ಷಣಿಕ ಸ್ಥಿತಿಗತಿ ಮತ್ತು ವರಮಾನ ಸ್ಥಿತಿಗತಿಗಳ ಮೇಲೆ ಪ್ರಭಾವ ಬೀರುವ ಅನೇಕ ಸಂಗತಿಗಳ ಒಟ್ಟು ಫಲವಾಗಿದೆ. ಈ ಸೂಚ್ಯಂಕಕ್ಕೆ ಸಂಬಂಧಿಸಿದಂತೆ ಅಗತ್ಯವಾದ ನೀತಿ ರೂಪಿಸುವುದಕ್ಕೆ ಅದರ ಮೇಲೆ ಪ್ರಭಾವ ಬೀರುವ ಸಂಗತಿಗಳನ್ನು ಗುರುತಿಸುವುದು ಅತ್ಯಂತ ಅಗತ್ಯ.**

# ಸಾಕ್ಷರತೆ ಮತ್ತು ಶಿಕ್ಷಣ



ಅಧ್ಯಾಯ 3

# ಸಾಕ್ಷರತೆ ಮತ್ತು ಶಿಕ್ಷಣ

ಜನರನ್ನು ಸಶಕ್ತರನ್ನಾಗಿಸುವಲ್ಲಿ ಶಿಕ್ಷಣವು ತುಂಬಾ ನಿರ್ಣಾಯಕ ಪಾತ್ರವಹಿಸುತ್ತದೆ. ಜನರ ಕುಶಲತೆಯ ಮತ್ತು ಜ್ಞಾನದ ಮಟ್ಟವನ್ನು ವಿಸ್ತೃತಗೊಳಿಸುವುದರ ಮೂಲಕ ಹಾಗೂ ಅವರಿಗೆ ಉತ್ಪನ್ನದಾಯಕ ಉದ್ಯೋಗ ಒದಗಿಸುವುದರ ಮೂಲಕ ಅದು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ನಿವಾರಿಸಬಲ್ಲದು. ಜಾಗತಿಕ ಮಾನವ ಹಕ್ಕುಗಳ ಘೋಷಣೆ (ಯುಎನ್‌ಒ: 1948)ಯಲ್ಲಿ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಒಪ್ಪಿಕೊಳ್ಳಲಾಗಿದೆ. ಅಭಿವೃದ್ಧಿಯ ಚಾಲಕ ಶಕ್ತಿಗಳು ಒಳಗಿನಿಂದ ಬರುತ್ತವೆಯೆಂದು ಪ್ರತಿಪಾದಿಸುವ ಸಿದ್ಧಾಂತಗಳಲ್ಲಿ ಆರ್ಥಿಕ ಅಭಿವೃದ್ಧಿಗೆ ಶಿಕ್ಷಣವು ಒಂದು ಪ್ರಮುಖವಾದ ಸಂಪನ್ಮೂಲವೆಂದು ಗುರುತಿಸಲಾಗಿದೆ. ಶಿಕ್ಷಣವು ಜ್ಞಾನಾರ್ಜನೆಯ ಪ್ರಕ್ರಿಯೆಯನ್ನು ಪ್ರೋತ್ಸಾಹಿಸುತ್ತದೆ ಮತ್ತು ಆ ಮೂಲಕ ಅದು ಜನರ ಸಾಮಾಜಿಕ ಮತ್ತು ಆರ್ಥಿಕ ಕ್ಷೇಮಾಭ್ಯುದಯವನ್ನು ಉತ್ತಮಪಡಿಸುತ್ತದೆ. ಹೀಗೆ ಶಿಕ್ಷಣವು ನಾನಾ ಮುಖಗಳಲ್ಲಿ, ವೈಯುಕ್ತಕವಾಗಿ ಹಾಗೂ ಸಾಮೂಹಿಕವಾಗಿ ಪರಿಣಾಮ ಬೀರುತ್ತದೆ. ಸಮಾಜದಲ್ಲಿ ಅಂಚಿಗೆ ದೂಡಲ್ಪಟ್ಟ ಸಮುದಾಯಗಳು ಮತ್ತು ಮಹಿಳೆಯರನ್ನು ಒಳಗೊಂಡಂತೆ ಅದು ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳನ್ನು ಪ್ರೋತ್ಸಾಹಿಸುವ ಒಂದು ಪ್ರಮುಖ ಸಾಧನವಾಗಿದೆ. ಹನ್ನೊಂದನೆಯ ಯೋಜನೆಯ ಮೂಲ ಉದ್ದೇಶವಾದ ಜನರನ್ನು ಒಳಗೊಳ್ಳುವ ಅಭಿವೃದ್ಧಿಯ ಪ್ರಕ್ರಿಯೆಯನ್ನು ಸಾಧಿಸಿಕೊಳ್ಳಲು ಶಿಕ್ಷಣ ನಿರ್ಣಾಯಕವಾದುದಾಗಿದೆ.

ಗುಲಬರ್ಗಾ ಜಿಲ್ಲೆಯು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ನೆಲೆಗೊಂಡಿದೆ ಮತ್ತು ಅದು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜಿಲ್ಲೆಯಾಗಿದೆ. ಸಾಂಪ್ರದಾಯಿಕವಾದ ಸಾಮಾಜಿಕ ರಚನೆ ಮತ್ತು ಮೌಲ್ಯ ವ್ಯವಸ್ಥೆಗಳು ಅಭಿವೃದ್ಧಿಗೆ ಮತ್ತು ಬದಲಾವಣೆಗೆ ಅನುಕೂಲಕರವಾಗಿರುವುದಿಲ್ಲ. ಅಭಿವೃದ್ಧಿಗಿರುವ ಅತ್ಯಂತ ಪ್ರಮುಖವಾದ ತೊಡರು ಇದಾಗಿದೆ. ಇಲ್ಲಿ ಶಿಕ್ಷಣವು ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಮತ್ತು ಆರ್ಥಿಕ ಅಭಿವೃದ್ಧಿಯ ಗತಿಯನ್ನು ತೀವ್ರಗೊಳಿಸಲು ಹಾಗೂ ಮೌಲ್ಯ ವ್ಯವಸ್ಥೆಯಲ್ಲಿ, ಜನರ ಮನೋಭೂಮಿಕೆಯಲ್ಲಿ ಮತ್ತು ಸಾಂಸ್ಥಿಕ ರಚನೆಗೆ ಸಂಬಂಧಿಸಿದಂತೆ ಅಗತ್ಯವಾದ ಮತ್ತು ನಿರೀಕ್ಷಿತವಾದ ಬದಲಾವಣೆಯನ್ನು ಸಮಾಜದಲ್ಲಿ ತರುವಲ್ಲಿ ಪ್ರಮುಖ ಪಾತ್ರ ನಿರ್ವಹಿಸಬಹುದಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ಗುಲಬರ್ಗಾ ಜಿಲ್ಲೆಯು ಸಾಕ್ಷರತೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಧಿಸಿಕೊಂಡಿರುವ ಸಾಧನೆಗಳನ್ನು ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ. ಜಿಲ್ಲೆಯಲ್ಲಿನ ಸಾಕ್ಷರತಾ ಮಟ್ಟವನ್ನು ಗಮನದಲ್ಲಿಟ್ಟುಕೊಂಡು ಕಳೆದ ಐವತ್ತು ವರ್ಷಗಳಲ್ಲಿ ಸಾಕ್ಷರತೆಯಲ್ಲಿ ಜಿಲ್ಲೆಯ ಹತ್ತು ತಾಲ್ಲೂಕುಗಳು ಸಾಧಿಸಿಕೊಂಡಿರುವ ಸಾಧನೆಯನ್ನೂ ವಿಶ್ಲೇಷಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಮುಖ್ಯಾಂಶಗಳಾದ ಶಾಲಾ ಸೌಲಭ್ಯಗಳ ದೊರೆಯುವಿಕೆ, ಶಾಲಾ ಮೂಲಭೂತ ಸೌಲಭ್ಯ, ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳು, ಮಕ್ಕಳು ಶಾಲಾವಾಹಿನಿಯಲ್ಲಿ ಮುಂದುವರಿಯುವ ಪ್ರಮಾಣ ಮತ್ತು ಮಕ್ಕಳ ದಾಖಲಾತಿ ಹೀಗೆ ಅನೇಕ ವಿಷಯಗಳನ್ನು ಶಿಕ್ಷಣದ ವಿವಿಧ ಹಂತಗಳಿಗೆ, ಅಂದರೆ, ಕಿರಿಯ ಮತ್ತು ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಹಾಗೂ ರಾಜ್ಯದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಜಿಲ್ಲೆಯು ಹೇಗೆ ಮತ್ತು ಎಷ್ಟು

**ಜನರನ್ನು ಸಶಕ್ತರನ್ನಾಗಿಸುವಲ್ಲಿ ಶಿಕ್ಷಣವು ತುಂಬಾ ನಿರ್ಣಾಯಕ ಪಾತ್ರವಹಿಸುತ್ತದೆ. ಜನರ ಕುಶಲತೆಯ ಮತ್ತು ಜ್ಞಾನದ ಮಟ್ಟವನ್ನು ವಿಸ್ತೃತಗೊಳಿಸುವುದರ ಮೂಲಕ ಹಾಗೂ ಅವರಿಗೆ ಉತ್ಪನ್ನದಾಯಕ ಉದ್ಯೋಗ ಒದಗಿಸುವುದರ ಮೂಲಕ ಅದು ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆಗಳನ್ನು ನಿವಾರಿಸಬಲ್ಲದು. ಜಾಗತಿಕ ಮಾನವ ಹಕ್ಕುಗಳ ಘೋಷಣೆ (ಯುಎನ್‌ಒ: 1948)ಯಲ್ಲಿ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿ ಒಪ್ಪಿಕೊಳ್ಳಲಾಗಿದೆ.**



ಹಿಂದುಳಿದಿದೆ ಎಂಬುದನ್ನು ತಾಲ್ಲೂಕು, ಲಿಂಗ ಮತ್ತು ಜಾತಿಗಳಿಗೆ ಸಂಬಂಧಿಸಿದಂತೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಲಾಗಿದೆ. ಶಿಕ್ಷಣದ ಗುಣಮಟ್ಟದ ಸಂಗತಿಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ ಮಟ್ಟವನ್ನು ಉತ್ತಮ ಪಡಿಸಲು ಹಾಗೂ ಶಿಕ್ಷಣದ ಮಟ್ಟವನ್ನು ಉತ್ತಮ ಪಡಿಸಲು ಅಗತ್ಯವಾದ ಕ್ರಮಗಳ ಬಗ್ಗೆಯು ಇಲ್ಲಿ ಚರ್ಚೆ ಮಾಡಲಾಗಿದೆ ಅಧ್ಯಾಯದ ಕೊನೆಯಲ್ಲಿ ಕೆಲವು ಶಿಫಾರಸ್ಸುಗಳನ್ನು ಮಾಡಲಾಗಿದೆ.

## ಸಾಕ್ಷರತೆಯಲ್ಲಿ ಪ್ರಗತಿ

ಸಾಕ್ಷರತೆಗೆ ಸಂಬಂಧಿಸಿದಂತೆ ಗುಲಬರ್ಗಾ ಜಿಲ್ಲೆಯು ಹೆಚ್ಚಿನದುದೇನನ್ನು ಸಾಧಿಸಿಲ್ಲ. ಕರ್ನಾಟಕದಲ್ಲಿ ಇದು ಅತ್ಯಂತ ಕೆಳ ಮಟ್ಟದ ಸಾಕ್ಷರತಾ ಜಿಲ್ಲೆಯಾಗಿದೆ. ಈ ಜಿಲ್ಲೆಯ ಸಾಕ್ಷರತಾ ಮಟ್ಟವು 1961ರ ಶೇ. 17.18 ರಿಂದ 2001ರಲ್ಲಿ 50.01 ಕ್ಕೆ ಏರಿಕೆಯಾಗಿದ್ದರು ಅದು ಕೆಳಮಟ್ಟದ ಸಾಕ್ಷರತಾ ಜಿಲ್ಲೆಯಾಗಿದೆ. ಈ ಜಿಲ್ಲೆಯು ಅತ್ಯಂತ ಹಿಂದುಳಿದ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ, ಅಂದರೆ ಗುಲಬರ್ಗಾ ವಿಭಾಗಕ್ಕೆ ಸೇರಿದೆ. ಈ ವಿಭಾಗವು ಬೀದರ್, ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಹೀಗೆ ಐದು ಜಿಲ್ಲೆಗಳನ್ನೊಳಗೊಂಡಿದೆ. ಕೋಷ್ಟಕ-3.1ರಲ್ಲಿ ಗುಲಬರ್ಗಾ ಜಿಲ್ಲೆಯು ಸಂಬಂಧಿಸಿದ ವಿಭಾಗವು ಸಾಕ್ಷರತೆಯ ದೃಷ್ಟಿಯಿಂದ ಎಲ್ಲಿದೆ ಎಂಬುದನ್ನು ತೋರಿಸಲಾಗಿದೆ.

ಇದರಿಂದ ಸ್ಪಷ್ಟವಾಗುವ ಸಂಗತಿಯೆಂದರೆ ಗುಲಬರ್ಗಾ ವಿಭಾಗವು ಸಾಕ್ಷರತೆಯಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ. ಎಲ್ಲ ಜನಗಣತಿ ವರ್ಷಗಳಲ್ಲಿ ಅದರ ಸಾಕ್ಷರತೆಯು ರಾಜ್ಯ ಸರಾಸರಿಗಿಂತ ಕಡಿಮೆಯಿದೆ. ರಾಜ್ಯದಲ್ಲಿ ಸಾಕ್ಷರತೆಯಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವ ಜಿಲ್ಲೆಗಳೆಂದರೆ ರಾಯಚೂರು ಮತ್ತು ಗುಲಬರ್ಗಾ. ಹೈದರಾಬಾದ್ ಕರ್ನಾಟಕ ಪ್ರದೇಶದ ಸಾಕ್ಷರತೆ ಮತ್ತು ರಾಜ್ಯ ಸರಾಸರಿ ಸಾಕ್ಷರತೆ ನಡುವೆ ಅಂತರವು 1961ರಲ್ಲಿ ಶೇ. 10.39ರಷ್ಟಿದ್ದುದು 2001ರಲ್ಲಿ ಶೇ. 18.34 ರಷ್ಟಾಗಿದೆ. ಈ ಜಿಲ್ಲೆಗಳಲ್ಲಿ 1991-2001 ಅವಧಿಯಲ್ಲಿನ ಸಾಕ್ಷರತೆಯ ಬೆಳವಣಿಗೆ ಪ್ರಮಾಣವು ರಾಜ್ಯ ಮಟ್ಟದ ಬೆಳವಣಿಗೆ ಪ್ರಮಾಣಕ್ಕಿಂತ ಅಧಿಕವಿದ್ದರೂ ರಾಯಚೂರು ಮತ್ತು ಗುಲಬರ್ಗಾ ಜಿಲ್ಲೆಗಳಲ್ಲಿ ಅರ್ಧದಷ್ಟು ಜನರು ಮತ್ತು ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಶೇ. 40ರಷ್ಟು ಜನರು ಅಕ್ಷರ ಸಂಪತ್ತಿನಿಂದ ವಂಚಿತರಾಗಿದ್ದಾರೆ. ಇದು ಇಲ್ಲಿನ ಮೂಲಭೂತ ದುಸ್ಥಿತಿಯಾಗಿದೆ. ಏಕೆಂದರೆ ಶಿಕ್ಷಣವು ಜನರ ಧಾರಣಾ ಸಾಮರ್ಥ್ಯವನ್ನು ವರ್ಧಿಸುತ್ತದೆ ಮತ್ತು ಉತ್ತಮ ಜೀವನ ನಡೆಸಲು ಅವಕಾಶ ಒದಗಿಸುತ್ತದೆ. ಕೆಳಮಟ್ಟದಲ್ಲಿರುವ ಸಾಕ್ಷರತೆಯು ಇಲ್ಲಿ ಮಾನವ ಸಂಪನ್ಮೂಲದ

ಕೋಷ್ಟಕ 3.1

**ಗುಲಬರ್ಗಾ ವಿಭಾಗದಲ್ಲಿ ಸಾಕ್ಷರತೆಯ ಮಟ್ಟ (ಹೈದರಾಬಾದ್ ಕರ್ನಾಟಕ ಪ್ರದೇಶ) : 1971-2001**

| ಕ್ರ.ಸಂ. | ಜಿಲ್ಲೆಗಳು ಮತ್ತು ವಿಭಾಗಗಳು | 1971 | 1981 | 1991 | 2001 |
|---|---|---|---|---|---|
| 1 | ಬಳ್ಳಾರಿ | 25.12 | 30.64 | 45.57 | 60.64 |
| 2 | ಬೀದರ್ | 20.02 | 26.64 | 45.11 | 61.98 |
| 3 | **ಗುಲಬರ್ಗಾ** | 18.74 | 24.94 | 38.54 | 50.01 |
| 4 | ರಾಯಚೂರು | 20.20 | 27.72 | 35.96 | 49.54 |
| 5 | ಕೊಪ್ಪಳ | – | – | – | 55.02 |
| 6 | **ಹೈದರಾಬಾದ್ ಕರ್ನಾಟಕ ಪ್ರದೇಶ** | 21.13 | 26.45 | 40.49 | 48.70 |
| 7 | ಬೆಳಗಾವಿ ವಿಭಾಗ | 33.39 | 38.57 | 56.85 | 65.82 |
| 8 | ಬೆಂಗಳೂರು ವಿಭಾಗ | 35.21 | 43.42 | 61.50 | 73.25 |
| 9 | ಮೈಸೂರು ವಿಭಾಗ | 32.44 | 40.04 | 58.49 | 69.62 |
| 10 | **ಕರ್ನಾಟಕ** | **31.52** | **38.46** | **56.04** | **67.04** |

ಮೂಲ: ಸೆನ್ಸಸ್ ಆಫ್ ಇಂಡಿಯಾ ವರದಿಗಳಿಂದ ಪಡೆಯಲಾಗಿದೆ : ಕರ್ನಾಟಕ 1971, 1981, 1991 & 2001

ಗುಣಮಟ್ಟವು ದುರ್ಬಲವಾಗಿರುವುದನ್ನು ಸೂಚಿಸುತ್ತದೆ. ಈ ಪ್ರದೇಶದ ಅಭಿವೃದ್ಧಿಯ ಮಂದಗತಿ ಬೆಳವಣಿಗೆಗೆ ಮುಖ್ಯ ಕಾರಣವೆಂದರೆ ಕೆಳಮಟ್ಟದ ಸಾಕ್ಷರತೆ ಮತ್ತು ಶಿಕ್ಷಣ.

ಗುಲಬರ್ಗಾ ಜಿಲ್ಲೆಯಲ್ಲಿ ಸಾಕ್ಷರತೆಯ ಬೆಳವಣಿಗೆ ಪ್ರಮಾಣವು ಅಧಿಕವಾಗಿದ್ದರೂ ಅದರ ಸಾಪೇಕ್ಷ ಮಟ್ಟವು ಉತ್ತಮಗೊಳ್ಳುತ್ತಿಲ್ಲ. 1961ರವರೆಗೆ ಅದರ ಸ್ಥಾನವು ರಾಯಚೂರಿಗಿಂತ ಕೆಳಗಿನದಾಗಿತ್ತು. ಈ ಜಿಲ್ಲೆಯಲ್ಲಿ ಸಾಕ್ಷರತೆಯ ಬೆಳವಣಿಗೆ ಪ್ರಮಾಣವು ಸರಾಸರಿ ಶೇ. 30ಕ್ಕಿಂತ ಕಡಿಮೆಯಿದೆ. ಜಿಲ್ಲೆಯು ರಾಜ್ಯದಲ್ಲಿ ಸಾಕ್ಷರತೆಗೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದಂತೆ ಪಡೆದುಕೊಂಡಿರುವ ಸ್ಥಾನವನ್ನು ಕೋಷ್ಟಕ–3.2ರಲ್ಲಿ ತೋರಿಸಲಾಗಿದೆ.

ಕೋಷ್ಟಕ 3.2

## ಕರ್ನಾಟಕದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಗುಲಬರ್ಗಾ ಜಿಲ್ಲೆಯು ಪಡೆದ ಸ್ಥಾನ

| ಜಿಲ್ಲೆಗಳು | ಪುರುಷರು | ಮಹಿಳೆಯರು | ಒಟ್ಟು |
|---|---|---|---|
| ದಕ್ಷಿಣ ಕನ್ನಡ | 89.70 | 77.21 | 83.35 |
| ಬೆಂಗಳೂರು (ನಗರ) | 87.92 | 77.48 | 82.96 |
| ಉಡುಪಿ | 88.23 | 75.19 | 81.25 |
| ಧಾರವಾಡ | 80.82 | 61.92 | 71.61 |
| ಚಾಮರಾಜನಗರ | 59.03 | 42.48 | 50.87 |
| ಗುಲಬರ್ಗಾ | 61.77 | 37.9 | 50.01 |

ಮೂಲ: ಸೆನ್ಸಸ್ ಆಫ್ ಇಂಡಿಯಾ ಕರ್ನಾಟಕ 2001.




ಒಟ್ಟು ಸಾಕ್ಷರತೆಯ ಪ್ರಮಾಣ 2001
N
Aland
(52.9)
Gulbarga
(66.5)
Afzalpur
(50.9)
Chincholi
(48.6)
Chitapur
(49.5)
Sedam
(44.8)
Jevargi
(44.1)
Yadgir
(37.2)
Shahpur
(38.8)
Shorapur
(43.4)
LEGEND
Talukas showing Total literacy higher than District average
Talukas showing Total literacy less than District average
State boundary
District boundary
Taluk boundary
SCALE 1:1100000
0 5 10 20 30 40
KM
76°30'0"E
77°0'0"E
77°30'0"E
18°0'0"N
17°30'0"N
17°0'0"N
16°30'0"N
16°0'0"N

## ಗುಲಬರ್ಗಾ ವಿಭಾಗದಲ್ಲಿ ಸಾಕ್ಷರತೆಯ ಮಟ್ಟ (ಹೈದರಾಬದ್–ಕರ್ನಾಟಕ ವಿಭಾಗ)




ಅತ್ಯಧಿಕ ಸಾಕ್ಷರತೆ ಸಾಧಿಸಿಕೊಂಡಿರುವ ದಕ್ಷಿಣ ಕನ್ನಡ, ಉಡುಪಿ ಮತ್ತು ಬೆಂಗಳೂರು ಜಿಲ್ಲೆಗಳಿಗೆ ಹೋಲಿಸಿದರೆ ಗುಲಬರ್ಗಾ ಜಿಲ್ಲೆಯ ಸಾಕ್ಷರತೆ ಪ್ರಮಾಣವು ಕೆಳಮಟ್ಟದಲ್ಲಿದೆ. ಈ ಮುಂದುವರಿದ ಮೂರು ಜಿಲ್ಲೆಗಳು 2001ರಲ್ಲೇ ಹತ್ತನೆಯ ಯೋಜನೆಯ ಶೇ. 75ರ ಸಾಕ್ಷರತಾ ಗುರಿಯನ್ನು ದಾಟಿಬಿಟ್ಟಿವೆ. ಆದರೆ ಗುಲಬರ್ಗಾ ಜಿಲ್ಲೆಯು ಆ ಗುರಿಯಿಂದ ಬಹಳ ದೂರದಲ್ಲಿದೆ. ಮಧ್ಯವರ್ತಿ ಕಾರ್ಯತಂತ್ರದ ಮೂಲಕ ಜಿಲ್ಲೆಯ ಸಾಕ್ಷರತೆಯು ವಾರ್ಷಿಕ ಏರಿಕೆಯು ಶೇ. 1.2ರಷ್ಟನ್ನು ಸಾಧಿಸಲಾಗಿದೆ ಅದು ಶೇ. 75ರ ಸಾಕ್ಷರತಾ ಮಟ್ಟವನ್ನು ಸಾಧಿಸಿಕೊಳ್ಳಲು ಇನ್ನೂ 20 ವರ್ಷ ಬೇಕಾಗುತ್ತದೆ. ಇಲ್ಲಿ ಲಿಂಗಸಂಬಂಧಿ ಸಾಕ್ಷರತಾ ಅಂತರ ತೀವ್ರವಾಗಿದೆ. ಪುರುಷರ ಸಾಕ್ಷರತಾ ಪ್ರಮಾಣವು 1961ರಲ್ಲಿ ಶೇ. 28.13ರಷ್ಟಿದ್ದುದು 2001ರಲ್ಲಿ ಶೇ. 61.8ಕ್ಕೇರಿದೆ. ಆದರೆ ಮಹಿಳೆಯರ ಸಾಕ್ಷರತೆಯು ಇದೇ ಅವಧಿಯಲ್ಲಿ ಶೇ. 6.08ರಿಂದ ಶೇ. 37.9ಕ್ಕೇರಿದೆ. ಇಲ್ಲಿ ಮಹಿಳೆಯರ ಸಾಕ್ಷರತೆಯು ಪುರುಷರ ಸಾಕ್ಷರತೆಯ ಶೇ. 61 ರಷ್ಟಿದೆ.

ಮಹಿಳೆಯರು ಮತ್ತು ಪುರುಷರ ನಡುವಿನ ಸಾಕ್ಷರತಾ ಅಂತರವು 1961ರಲ್ಲಿ ಶೇ. 22.00 ರಷ್ಟಿದ್ದುದು 2001ರಲ್ಲಿ ಅಂತರವು ಶೇ. 23.8 ರಷ್ಟಾಗಿದೆ. ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಮಹಿಳೆಯರ ಸಾಕ್ಷರತಾ ಮಟ್ಟವು ಅತ್ಯಂತ ಕೆಳಮಟ್ಟದಲ್ಲಿ ಶೇ. 29.4 ರಷ್ಟಿದೆ. ಅಂದರೆ ಶೇ. 70ರಷ್ಟು ಗ್ರಾಮೀಣ ಮಹಿಳೆಯರು ಶಿಕ್ಷಣದಿಂದ, ಜ್ಞಾನಾರ್ಜನೆಯಿಂದ ಮತ್ತು ಮಾಹಿತಿಯಿಂದ ವಂಚಿತರಾಗಿದ್ದಾರೆ.

**ಅತ್ಯಧಿಕ ಸಾಕ್ಷರತೆ ಸಾಧಿಸಿಕೊಂಡಿರುವ ದಕ್ಷಿಣ ಕನ್ನಡ, ಉಡುಪಿ ಮತ್ತು ಬೆಂಗಳೂರು ಜಿಲ್ಲೆಗಳಿಗೆ ಹೋಲಿಸಿದರೆ ಗುಲಬರ್ಗಾ ಜಿಲ್ಲೆಯ ಸಾಕ್ಷರತೆ ಪ್ರಮಾಣವು ಕೆಳಮಟ್ಟದಲ್ಲಿದೆ. ಈ ಮುಂದುವರಿದ ಮೂರು ಜಿಲ್ಲೆಗಳು 2001ರಲ್ಲೇ ಹತ್ತನೆಯ ಯೋಜನೆಯ ಶೇ. 75ರ ಸಾಕ್ಷರತಾ ಗುರಿಯನ್ನು ದಾಟಿಬಿಟ್ಟಿವೆ. ಆದರೆ ಗುಲಬರ್ಗಾ ಜಿಲ್ಲೆಯು ಆ ಗುರಿಯಿಂದ ಬಹಳ ದೂರದಲ್ಲಿದೆ.**

ಕೋಷ್ಟಕ 3.3

### ಲಿಂಗಸಂಬಂಧಗಳು ಮತ್ತು ಸಾಕ್ಷರತೆಯ ಪ್ರಾದೇಶಿಕ ಸ್ವರೂಪ–2001

| | ಪುರುಷರು | ಮಹಿಳೆಯರು | ಒಟ್ಟು | ಗ್ರಾಮೀಣ | ನಗರ |
|---|---|---|---|---|---|
| ಗುಲಬರ್ಗಾ | 61.77 | 37.9 | 50.01 | 42.28 | 70.12 |
| ರಾಜ್ಯ | 76.10 | 56.87 | 66.64 | 59.33 | 80.58 |

ಮೂಲ: ಕರ್ನಾಟಕದಲ್ಲಿ ಮಾನವ ಅಭಿವೃದ್ಧಿ – 2005

ನಗರ ಮಹಿಳಾ ಸಾಕ್ಷರತಾ ಪ್ರಮಾಣ ಶೇ 60. ನಗರದಲ್ಲಿ ಲಿಂಗಸಂಬಂಧಿ ಸಾಕ್ಷರತಾ ಅಂತರವು ಶೇ 18.7ರಷ್ಟಿದೆ. ಜಿಲ್ಲೆ ಮತ್ತು ರಾಜ್ಯ ಸಾಕ್ಷರತಾ ಮಟ್ಟದ ನಡುವೆ ಶೇ 16.6 ಅಂಶಗಳಷ್ಟು ಅಂತರವಿದೆ. ಆದರೆ ಮಹಿಳಾ ಸಾಕ್ಷರತೆಗೆ ಸಂಬಂಧಿಸಿದಂತೆ ಅಂತರವು ಶೇ 19ರಷ್ಟಿದೆ.

**ಸಾಕ್ಷರತೆಯ ಲಿಂಗಸಂಬಂಧಿ ಹಾಗೂ ಪ್ರಾದೇಶಿಕ ಆಯಾಮಗಳು 2001**




ಕೋಷ್ಟಕ 3.4

**ಗುಲಬರ್ಗಾ ಜಿಲ್ಲೆಯ ಕಡಿಮೆ ಸಾಕ್ಷರತೆಯ ಐದು ತಾಲ್ಲೂಕುಗಳ ವಿವರ**

| ತಾಲ್ಲೂಕು | | 1961 | | 1971 | | 1981 | | 1991 | | 2001 | | |
|---|---|---|---|---|---|---|---|---|---|---|---|---|
| | | ಮ | ಒ | ಮ | ಒ | ಮ | ಒ | ಮ | ಒ | ಪು | ಮ | ಒ |
| ಜೇವರ್ಗಿ | ಒ | 2.6 | 9.8 | 5.2 | 15.2 | 9.0 | 21.6 | 17.1 | 32.8 | 57.9 | 29.9 | 44 |
| | ಗ್ರಾ | 2.6 | 9.8 | 5.2 | 15.2 | 8.3 | 19.0 | 8.3 | 32.8 | 56.4 | 28.0 | 42.4 |
| | ನ | 0 | 0 | 0 | 0 | 22.0 | 40.2 | 00.0 | 0 | 74.8 | 51.7 | 63.5 |
| ಸೇಡಮ್ | ಒ | 4.6 | 13.7 | 6.6 | 15.7 | 10.0 | 20.9 | 21.1 | 34.5 | 56.4 | 33.4 | 44.8 |
| | ಗ್ರಾ | 3.4 | 9.2 | 5.0 | 13.8 | 8.4 | 20.0 | 12.2 | 22.0 | 51.2 | 27.9 | 39.4 |
| | ನ | 15.0 | 32.0 | 19.2 | 31.5 | 27.1 | 35.9 | 36.1 | 47.0 | 75.7 | 55.3 | 65.7 |
| ಶಹಾಪುರ | ಒ | 3.3 | 10.9 | 4.9 | 12.6 | 10.0 | 16.9 | 17.0 | 29.1 | 49.9 | 27.5 | 38.8 |
| | ಗ್ರಾ | 2.4 | 8.1 | 3.5 | 10.8 | 9.1 | 14.8 | 10.3 | 19.0 | 45.7 | 23.1 | 34.5 |
| | ನ | 12.4 | 27.0 | 19.2 | 30.9 | 24.3 | 36.8 | 34.6 | 44.0 | 72.5 | 52.2 | 62.6 |
| ಶೋರಾಪುರ್ | ಒ | 3.2 | 12.2 | 6.7 | 15.6 | 10.0 | 21.2 | 18.8 | 32.7 | 56.3 | 30.4 | 43.4 |
| | ಗ್ರಾ | 1.4 | 7.7 | 4.1 | 12.5 | 7.9 | 18.0 | 10.6 | 21.0 | 53.4 | 37.1 | 40.3 |
| | ನ | 15.3 | 32.0 | 25.4 | 38.2 | 29.3 | 40.2 | 41.2 | 52.1 | 75.1 | 52.7 | 64.0 |
| ಯಾದಗೀರ್ | ಒ | 4.7 | 12.8 | 6.9 | 14.6 | 9.0 | 18.3 | 15.6 | 25.9 | 47.5 | 26.9 | 37.2 |
| | ಗ್ರಾ | 2.3 | 8.6 | 3.4 | 9.8 | 5.2 | 12.0 | 7.0 | 14.0 | 39.0 | 18.7 | 28.9 |
| | ನ | 13.4 | 26.0 | 19.1 | 31.6 | 24.3 | 37.7 | 33.2 | 44.0 | 74.4 | 53.2 | 63.9 |

ಮೂಲ: ಸೆನ್ಸಸ್ ಆಫ್ ಇಂಡಿಯಾ 1961–2001.



1991ರ ಜನಗಣತಿಯಲ್ಲಿ ಪುರುಷ ಸಾಕ್ಷರತೆಯ ಸ್ಥಾನಮಾನ
N
Aland
55.01
Gulbarga
70.12
Afzalpur
52.29
Chitapur
52.30
Chincholi
48.27
Sedam
47.73
Jevargi
48.42
Yadgir
35.96
Shahpur
41.04
Shorapur
46.39
LEGEND
Talukas showing Male literacy higher than District average
Talukas showing Male literacy less than District average
State boundary
District boundary
Taluk boundary
SCALE 1:1100000
0 5 10 20 30 40
KM


2001ರ ಜನಗಣತಿಯಲ್ಲಿ ಪುರುಷ ಸಾಕ್ಷರತೆಯ ಸ್ಥಾನಮಾನ
76°30'0"E
77°0'0"E
77°30'0"E
18°0'0"N
17°30'0"N
17°0'0"N
16°30'0"N
16°0'0"N
N
Aland
66.0
Gulbarga
76.3
Chincholi
62.3
Afzalpur
63.6
Chitapur
61.0
Sedam
56.4
Jevargi
57.9
Yadgir
47.5
Shahpur
49.9
Shorapur
56.3
LEGEND
Talukas showing Male literacy higher than District average
Talukas showing Male literacy less than District average
State boundary
District boundary
Taluk boundary
SCALE 1:1100000
0 5 10 20 30 40 KM



1991ರ ಜನಗಣತಿಯಲ್ಲಿ ಮಹಿಳಾ ಸಾಕ್ಷರತೆಯ ಸ್ಥಾನಮಾನ
76°30'0"E
77°0'0"E
77°30'0"E
18°0'0"N
17°30'0"N
17°0'0"N
16°30'0"N
16°0'0"N
N
Aland
22.45
Gulbarga
43.41
Chincholi
18.28
Afzalpur
22.09
Chitapur
24.70
Sedam
21.13
Jevargi
17.09
Yadgir
15.62
Shahpur
17.04
Shorapur
18.84
LEGEND
Talukas showing Female literacy higher than District average
Talukas showing Female literacy less than District average
State boundary
District boundary
Taluk boundary
SCALE 1:1100000
0 5 10 20 30 40
KM


2001ರ ಜನಗಣತಿಯಲ್ಲಿ ಮಹಿಳಾ ಸಾಕ್ಷರತೆಯ ಸ್ಥಾನಮಾನ
Aland
39.2
Gulbarga
56.1
Chincholi
34.7
Afzalpur
37.5
Chitapur
37.7
Sedam
33.4
Jevargi
29.86
Yadgir
26.9
Shahpur
27.5
Shorapur
30.4
LEGEND
Talukas showing Female literacy higher than District average
Talukas showing Female literacy less than District average
State boundary
District boundary
Taluk boundary
SCALE 1:1100000
0 5 10 20 30 40 KM
N

## ತಾಲ್ಲುಕುಗಳ ನಡುವೆ ಸಾಕ್ಷರತಾ ಪ್ರವೃತ್ತಿ

ಸಾಕ್ಷರತಾ ಸಾಧನೆಗೆ ಸಂಬಂಧಿಸಿದಂತೆ ಜಿಲ್ಲೆಯೊಳಗೆ ತೀವ್ರ ಪ್ರಾದೇಶಿಕ ಭಿನ್ನತೆಯಿದೆ. ಗುಲಬರ್ಗಾ ತಾಲ್ಲೂಕಿನ ಉನ್ನತ ಸಾಕ್ಷರತಾ ಪ್ರಮಾಣವಾದ ಶೇ. 66.5 ಜಿಲ್ಲೆಯ ಸರಾಸರಿ ಸಾಕ್ಷರತಾ ಪ್ರಮಾಣವನ್ನು ಶೇ. 50ಕ್ಕೆ ಒಯ್ಯುವುದರಲ್ಲಿ ಚಾಲಕ ಶಕ್ತಿಯಾಗಿ ಕೆಲಸ ಮಾಡಿದೆ (ಈ ತಾಲ್ಲೂಕಿನಲ್ಲಿ ನಗರವಾಸಿಗಳ ಪ್ರಮಾಣ ಅಧಿಕವಿದೆ). ಜಿಲ್ಲೆಯ ಅಫಜಲಪುರ (ಶೇ. 50.9) ಮತ್ತು ಆಳಂದ್ (ಶೇ. 52.9)ತಾಲ್ಲೂಕುಗಳನ್ನು ಬಿಟ್ಟರೆ ಉಳಿದ ತಾಲ್ಲೂಕುಗಳಲ್ಲಿ ಸಾಕ್ಷರತಾ ಪ್ರಮಾಣವು ಜಿಲ್ಲಾ ಸರಾಸರಿಗಿಂತ ಕಡಿಮೆಯಿದೆ. ಜಿಲ್ಲೆಯ ಯಾದಗೀರ್ ತಾಲ್ಲೂಕಿನಲ್ಲಿ ಸಾಕ್ಷರತೆ ಅತ್ಯಂತ ಕೆಳಮಟ್ಟ ಶೇ. 37.2ರಷ್ಟಿದ್ದರೆ ಶೋರಾಪುರ ತಾಲ್ಲೂಕಿನಲ್ಲಿ ಅದು ಶೇ. 38.8ರಷ್ಟಿದೆ. ಜಿಲ್ಲೆಯ ಅರ್ಧದಷ್ಟು ತಾಲ್ಲೂಕುಗಳಲ್ಲಿ ಸಾಕ್ಷರತೆಯು ಶೇ. 45ಕ್ಕಿಂತ ಕಡಿಮೆಯಿದೆ.

ಸಾಕ್ಷರತೆಯು ಅತ್ಯಂತ ಕೆಳಮಟ್ಟದಲ್ಲಿರುವ ಐದು ತಾಲ್ಲೂಕುಗಳಲ್ಲಿ ಅದರ ಬೆಳವಣಿಗೆ ಪ್ರಮಾಣ ಅತ್ಯಂತ ಕಳವಳಕಾರಿಯಾಗಿದೆ. ಜಿಲ್ಲೆಯ ಯಾದಗೀರ್ ತಾಲ್ಲೂಕಿನಲ್ಲಿ ಕಳೆದ 40 ವರ್ಷಗಳಲ್ಲಿ ಸಾಕ್ಷರತೆಯ ಬೆಳವಣಿಗೆ ಪ್ರಮಾಣ ಶೇ. 190. ಶಿಕ್ಷಣದ ಅಭಿವೃದ್ಧಿಗಾಗಿ ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿಯೂ ಸ್ಥಿತಿ ಹೀಗಿದೆ. ದೇಶದಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮವನ್ನು 1994–95ರಲ್ಲಿ ಜಾರಿಗೆ ತರಲಾಯಿತು. ಗುಲಬರ್ಗಾ ಜಿಲ್ಲೆಯು ಅದರ ಎರಡನೆಯ ಹಂತದಲ್ಲಿ ಯೋಜನೆಯ ವ್ಯಾಪ್ತಿಗೆ ಸೇರಿತು. ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಉದ್ದೇಶದಿಂದ ಸದರಿ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಅಲ್ಲಿ ಸಮಾಜದ ಅಂಚಿನಲ್ಲಿರುವ ಜನ ಸಮುದಾಯಗಳಾದ ಪ.ಜಾ. ಮತ್ತು ಪ.ಪಂ.ಗಳ ಮಕ್ಕಳಿಗೆ ಮುಖ್ಯವಾಗಿ ಶಾಲಾ ಸೌಲಭ್ಯವನ್ನೊದಗಿಸುವುದು, ಜನರ ಸಹಭಾಗಿತ್ವವನ್ನು ಸಾಧಿಸಿಕೊಳ್ಳುವುದು ಮುಂತಾದ ಗುರಿಯನ್ನಿಟ್ಟುಕೊಂಡು ಅದು ಜಾರಿಗೆ ಬಂದಿತು. ಈ ಜಿಲ್ಲೆಯಲ್ಲಿ ಸರ್ವ ಶಿಕ್ಷಾ ಅಭಿಯಾನವನ್ನು 2001ರಲ್ಲಿ ಆರಂಭಿಸಲಾಯಿತು. ಆದರೆ ಜಿಲ್ಲೆಯ ಶಹಾಪುರ ತಾಲ್ಲೂಕಿನಲ್ಲಿ 1991–2001ರ ಅವಧಿಯಲ್ಲಿ ಸಾಕ್ಷರತೆಯ ಬೆಳವಣಿಗೆ ಪ್ರಮಾಣ ಕೇವಲ ಶೇ. 9.7ರಷ್ಟಿತ್ತು. ಈಗ ಕೃಷ್ಣಾ ಮೇಲ್ದಂಡೆ ಯೋಜನೆ ವ್ಯಾಪ್ತಿಯಲ್ಲಿ ಶಹಾಪುರ ತಾಲ್ಲೂಕು ಸೇರಿದೆ. ಇಷ್ಟಾದರೂ ಸಾಕ್ಷರತೆಯ ಪ್ರಗತಿ ತೀವ್ರ ಕೆಳಮಟ್ಟದಲ್ಲಿದೆ. ಇದೇ ರೀತಿಯ ಸ್ಥಿತಿ ಶೋರಾಪುರ ತಾಲ್ಲೂಕಿನಲ್ಲೂ ಇದೆ. ಅಲ್ಲಿ 1991–2001ರ ಅವಧಿಯಲ್ಲಿ ಸಾಕ್ಷರತಾ ಬೆಳವಣಿಗೆ ಪ್ರಮಾಣ ಶೇ. 10.7. ಆದರೆ ಇತ್ತೀಚಿಗೆ ಪ್ರಸಿದ್ಧ ಎನ್‌ಜಿಒ ಎಂಬ ಹೆಸರು ಗಳಿಸಿರುವ ಪ್ರೇಮ್‌ಜೀ ಪ್ರತಿಷ್ಠಾನದ ಪ್ರಯತ್ನದಿಂದಾಗಿ ಶೋರಾಪುರ ತಾಲ್ಲೂಕಿನ ಸಾಕ್ಷರತಾ ಪ್ರಮಾಣವು ಉತ್ತಮವಾಗುವ ಸಾಧ್ಯತೆಯಿದೆ.

ಮಹಿಳೆಯರ ಸಾಕ್ಷರತಾ ಪ್ರಮಾಣವು 1991–2001ರ ದಶಕದಲ್ಲಿ ಏರಿಕೆಯ ಪ್ರವೃತ್ತಿಯನ್ನು ತೋರಿಸುತ್ತಿದೆ. ಇದು ರಾಜ್ಯ ಸರ್ಕಾರವು ಜಿಲ್ಲೆಯಲ್ಲಿ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಿದ್ದರಿಂದ ಉಂಟಾಗಿರುವ ಪರಿಣಾಮವಾಗಿದೆ. ಯಾದಗೀರ್ ತಾಲ್ಲೂಕಿನಲ್ಲಿ ಗ್ರಾಮೀಣ ಮಹಿಳೆಯರ ಸಾಕ್ಷರತೆಯು 1991–2001ರ ದಶಕದಲ್ಲಿ ಶೇ. 7 ರಿಂದ ಶೇ. 18.7ಕ್ಕೇರಿದೆ. ಇದು ಹಿಂದಿನ 30 ವರ್ಷಗಳ ಏರಿಕೆಯಾದ ಶೇ. 4ಕ್ಕೆ (1961–1991) ಹೋಲಿಸಿದರೆ ಅತ್ಯುತ್ತಮ ಸಾಧನೆಯಾಗಿದೆ. ಶೋರಾಪುರ ತಾಲ್ಲೂಕಿನಲ್ಲಿ ಸಾಕ್ಷರತೆಯು ಉತ್ತಮವಾಗುತ್ತಿರುವ ಲಕ್ಷಣಗಳು ಕಂಡುಬರುತ್ತಿವೆ. ಈ ತಾಲ್ಲೂಕುಗಳಲ್ಲಿ ಕೆಳಹಂತದಲ್ಲಿನ ಸಮತೋಲನ ಸ್ಥಿತಿಯನ್ನು ಈಗ ಮುರಿದಂತಾಗಿದೆ. ಜಿಲ್ಲೆಯ ಎಲ್ಲ ಐದು ಕಡಿಮೆ ಸಾಕ್ಷರತಾ ತಾಲ್ಲೂಕುಗಳಲ್ಲೂ ಅನುಕೂಲಕರವಾದ ಗತಿಶೀಲ ಬದಲಾವಣೆಗಳು ಗೋಚರಿಸುತ್ತಿವೆ.

ಇಷ್ಟಾದರೂ ಮಹಿಳೆಯರ ಸಾಕ್ಷರತೆಯು ಅತ್ಯಂತ ಕೆಳಮಟ್ಟದಲ್ಲಿರುವುದು ಆತಂಕಕ್ಕೆ ಕಾರಣವಾಗಿದೆ.

## ಶೈಕ್ಷಣಿಕ ಮೂಲಭೂತ ಸೌಲಭ್ಯಗಳು : ಶಿಕ್ಷಣ ದೊರೆಗೊಳ್ಳುವಿಕೆ

ಜಿಲ್ಲೆಯಲ್ಲಿ ಶೈಕ್ಷಣಿಕ ಸಂಸ್ಥೆಗಳ ಪ್ರಮಾಣ ಅಧಿಕವಾಗುತ್ತಿದೆ. ಅದರಲ್ಲೂ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತ ಅವುಗಳ ಸಂಖ್ಯೆಯು

**ಸಾಕ್ಷರತಾ ಸಾಧನೆಗೆ ಸಂಬಂಧಿಸಿದಂತೆ ಜಿಲ್ಲೆಯೊಳಗೆ ತೀವ್ರ ಪ್ರಾದೇಶಿಕ ಭಿನ್ನತೆಯಿದೆ. ಗುಲಬರ್ಗಾ ತಾಲ್ಲೂಕಿನ ಉನ್ನತ ಸಾಕ್ಷರತಾ ಪ್ರಮಾಣವಾದ ಶೇ. 66.5 ಜಿಲ್ಲೆಯ ಸರಾಸರಿ ಸಾಕ್ಷರತಾ ಪ್ರಮಾಣವನ್ನು ಶೇ. 50ಕ್ಕೆ ಒಯ್ಯುವುದರಲ್ಲಿ ಚಾಲಕ ಶಕ್ತಿಯಾಗಿ ಕೆಲಸ ಮಾಡಿದೆ**

**ಈ ಜಿಲ್ಲೆಯಲ್ಲಿ ಶಾಲೆಗಳಾಗಲಿ ಅಥವಾ ಶಿಕ್ಷಣ ಖಾತ್ರಿ ಶಾಲೆಗಳಾಗಲಿ ಇಲ್ಲದ 156 ವಸತಿ ತಾಣಗಳಿವೆ. ಅವುಗಳಲ್ಲಿ 125ಕ್ಕೆ ಒಂದು ಕಿ.ಮೀ.ಅಂತರದೊಳಗೆ ಶಾಲೆಗಳಿಲ್ಲ. ಜಿಲ್ಲೆಯಲ್ಲಿ 116 ವಸತಿ ತಾಣಗಳಿಗೆ ಸಂಬಂಧಿಸಿದಂತೆ ಪ್ರೌಢಶಾಲಾ ಸೌಲಭ್ಯವು ಮೂರು ಕಿ.ಮೀ.ಗಿಂತ ದೂರದಲ್ಲಿದೆ.**

ಅಧಿಕವಾಗುತ್ತಿದೆ. ಪ್ರಾಥಮಿಕ ಶಾಲೆಗಳ ಸಂಖ್ಯೆಯು 1980ರಲ್ಲಿ 1700 ರಿಂದ 1997ರಲ್ಲಿನ 2334ಕ್ಕೇರಿದೆ. ಇದು ಮತ್ತೆ 2001ರಲ್ಲಿ 3117ಕ್ಕೇರಿವೆ. ಈ ಶಾಲೆಗಳಲ್ಲಿ ಶೇ. 85 ರಷ್ಟು ಸರ್ಕಾರಿ ಶಾಲೆಗಳಾಗಿವೆ. ಅನುದಾನದಡಿಯಲ್ಲಿ ಅಸ್ತಿತ್ವಕ್ಕೆ ಬಂದ ಶಾಲೆಗಳ ಪ್ರಮಾಣ ಶೇ. 5.4. ಮಕ್ಕಳಿಗೆ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ಜವಾಬುದಾರಿಯನ್ನು ಈಗಲೂ ಸರ್ಕಾರವೇ ಪೂರೈಸುತ್ತಿದೆ.

ಇದರಿಂದಾಗಿ ಬಡ ಕುಟುಂಬಗಳ ಮಕ್ಕಳಿಗೆ ಶಾಲಾ ಸೌಲಭ್ಯ ಪಡೆದುಕೊಳ್ಳುವುದು ತುಂಬಾ ಸುಲಭವಾಗಿದೆ. ಜಿಲ್ಲೆಯಲ್ಲಿರುವ ಒಟ್ಟು ವಸತಿ ತಾಣಗಳ ಸಂಖ್ಯೆ 2543. ಶಾಲಾ ಶಿಕ್ಷಣ ದೊರೆಗೊಳ್ಳುವಿಕೆ ಪ್ರಮಾಣ ಶೇ. 93.87ರಷ್ಟಿದೆ. ಶಾಲಾ ಸೌಲಭ್ಯ ದೊರೆಗೊಳ್ಳುವಿಕೆಯ ಪ್ರಮಾಣ ಅತ್ಯಧಿಕ ಜೇವರ್ಗಿ ತಾಲ್ಲೂಕಿನಲ್ಲಿ ಶೇ. 98.45ರಷ್ಟಿದೆ. ಈ ತಾಲ್ಲೂಕಿನಲ್ಲಿರುವ ಒಟ್ಟು ವಸತಿ ತಾಣಗಳಾದ 194ರಲ್ಲಿ 191ಕ್ಕೆ ಶಾಲಾ ಸೌಲಭ್ಯವನ್ನು ನೀಡಲಾಗಿದೆ. ಅಳಂದ್ ಮತ್ತು ಗುಲಬರ್ಗಾ ತಾಲ್ಲೂಕುಗಳಲ್ಲಿ ಶಾಲಾ ಸೌಲಭ್ಯ ದೊರೆಗೊಳ್ಳುವಿಕೆ ಪ್ರಮಾಣ ಅತ್ಯಂತ ಕಡಿಮೆ ಕ್ರಮವಾಗಿ ಶೇ. 89.6 ಮತ್ತು ಶೇ. 90ರಷ್ಟಿದೆ. ಈ ಜಿಲ್ಲೆಯಲ್ಲಿ ಶಾಲೆಗಳಾಗಲಿ ಅಥವಾ ಶಿಕ್ಷಣ ಖಾತ್ರಿ ಶಾಲೆಗಳಾಗಲಿ ಇಲ್ಲದ 156 ವಸತಿ ತಾಣಗಳಿವೆ. ಅವುಗಳಲ್ಲಿ 125ಕ್ಕೆ ಒಂದು ಕಿ.ಮೀ.ಅಂತರದೊಳಗೆ ಶಾಲೆಗಳಿಲ್ಲ. ಜಿಲ್ಲೆಯಲ್ಲಿ 116 ವಸತಿ ತಾಣಗಳಿಗೆ ಸಂಬಂಧಿಸಿದಂತೆ ಪ್ರೌಢಶಾಲಾ ಸೌಲಭ್ಯವು ಮೂರು ಕಿ.ಮೀ.ಗಿಂತ ದೂರದಲ್ಲಿದೆ.

ಡಿಪಿಈಪಿ ಮತ್ತು ಸರ್ವ ಶಿಕ್ಷಾ ಅಭಿಯಾನ ಕಾರ್ಯಕ್ರಮಗಳಡಿಯಲ್ಲಿ ಶಾಲಾ ಕಟ್ಟಡ, ಶೌಚಾಲಯ ಮತ್ತು ನೀರಿನ ಸೌಲಭ್ಯಗಳನ್ನು ಒದಗಿಸಲಾಗಿದೆ. ಆದರೂ ಕೇವಲ ಶೇ. 39.7ರಷ್ಟಕ್ಕೆ ಮಾತ್ರ ಶೌಚಾಲಯ ಸೌಲಭ್ಯ ಇದೆ ಮತ್ತು ಶೇ. 63.58 ಶಾಲೆಗಳಿಗೆ ಮಾತ್ರ ಕುಡಿಯುವ ನೀರಿನ ಸೌಲಭ್ಯವಿದೆ. ತಾಲ್ಲೂಕುವಾರು ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳಿರುವ ಶಾಲೆಗಳ ವಿವರವನ್ನು ಕೋಷ್ಟಕ–3.6ರಲ್ಲಿ ತೋರಿಸಿದೆ.

ಶೌಚಾಲಯ ಸೌಲಭ್ಯಗಳ ವ್ಯಾಪ್ತಿಯು ಜಿಲ್ಲೆಯ ಚಿತ್ತಾಪುರ, ಗುಲಬರ್ಗಾ, ಶೋರಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ. ಜಿಲ್ಲೆಯಲ್ಲಿನ ಶೇ. 60ರಷ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ಸೌಲಭ್ಯವಿದೆ. ಆದರೆ ಕೇವಲ ಶೇ. 40ರಷ್ಟು ಶಾಲೆಗಳಲ್ಲಿ ಮಾತ್ರ ಶೌಚಾಲಯ ಸೌಲಭ್ಯಗಳಿವೆ. ಇಲ್ಲಿ

ಕೋಷ್ಟಕ 3.5

## ಶಾಲಾ ದೊರೆಗೊಳ್ಳುವಿಕೆ ಪ್ರಮಾಣ – ತಾಲ್ಲೂಕುವಾರು ಮಾಹಿತಿ

| ಕ್ರ.ಸಂ. | ತಾಲ್ಲೂಕು | ಒಟ್ಟು ವಸತಿ ತಾಣಗಳು | ಶಾಲಾ ಸೌಲಭ್ಯವಿರುವ ವಸತಿ ತಾಣಗಳು | ಶಾಲಾ ದೊರೆಗೊಳ್ಳುವಿಕೆ ಪ್ರಮಾಣ |
|---|---|---|---|---|
| 1 | ಅಫಜಲಪುರ | 166 | 159 | 95.78 |
| 2 | ಅಳಂದ್ | 231 | 207 | 89.61 |
| 3 | ಚಿಂಚೋಳಿ | 242 | 220 | 90.91 |
| 4 | ಚಿತ್ತಾಪುರ | 269 | 258 | 95.91 |
| 5 | ಗುಲಬರ್ಗಾ | 303 | 273 | 90.10 |
| 6 | ಜೇವರ್ಗಿ | 194 | 191 | 98.45 |
| 7 | ಸೇಡಮ್ | 231 | 218 | 94.37 |
| 8 | ಶಹಾಪುರ | 258 | 245 | 64.96 |
| 9 | ಶೋರಾಪುರ | 414 | 395 | 95.41 |
| 10 | ಯಾದಗೀರ್ | 235 | 221 | 94.04 |
| | **ಒಟ್ಟು** | **2543** | **2397** | **93.87** |

ಇನ್ನೂ 2562 ಶಾಲಾ ಕೊಠಡಿಗಳ ಅಗತ್ಯವಿದೆ. ಸುಮಾರು 816 ಶಾಲಾ ಶಿಕ್ಷಕರ ಹುದ್ದೆಗಳು ಖಾಲಿಯಿವೆ. ಜಿಲ್ಲೆಯಲ್ಲಿ ಶಿಕ್ಷಕರ ಮತ್ತು ಮಕ್ಕಳ ನಡುವಿನ ಅನುಪಾತ ನಿಗದಿಪಡಿಸಿದ ಮಾನದಂಡವಾದ 1 : 40 ಕ್ಕಿಂತ ಅಧಿಕವಾದ ಸ್ಥಿತಿ ಜೇವರ್ಗಿ, ಶಹಾಪುರ ಮತ್ತು ಶೋರಾಪುರಗಳಲ್ಲಿದೆ.

ಕೋಷ್ಟಕ 3.6

## ಶಾಲೆಗಳಲ್ಲಿರುವ ಮೂಲಭೂತ ಸೌಲಭ್ಯಗಳು

| ತಾಲ್ಲೂಕು | ಒಟ್ಟು ಶಾಲೆಗಳು | ಶೌಚಾಲಯವಿರುವ ಶಾಲೆಗಳು | ಈ ಸೌಲಭ್ಯವಿರುವ ಶಾಲೆಗಳ ಪ್ರಮಾಣ | ಮೂಲಭೂತ ಸೌಲಭ್ಯಗಳ ಅಂತರ | ಕುಡಿಯುವ ನೀರಿರುವ ಶಾಲೆಗಳು | ಶೇಕಡಾ ಶಾಲೆಗಳ ಪ್ರಮಾಣ | ಮೂಲಭೂತ ಸೌಲಭ್ಯಗಳ ಅಂತರ |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| ಅಫಜಲಪುರ | 149 | 90 | 60.4 | 39.6 | 98 | 65.70 | 34.3 |
| ಅಳಂದ್ | 217 | 90 | 41.5 | 58.5 | 141 | 65.0 | 35.0 |
| ಚಿಂಚೋಳಿ | 234 | 99 | 42.3 | 57.7 | 139 | 59.4 | 40.6 |
| ಚಿತ್ತಾಪುರ | 273 | 81 | 29.6 | 70.4 | 161 | 59.0 | 41.0 |
| ಗುಲಬರ್ಗಾ | 278 | 108 | 38.8 | 61.2 | 167 | 60.0 | 40.0 |
| ಜೇವರ್ಗಿ | 207 | 91 | 43.9 | 56.1 | 154 | 74.4 | 25.6 |
| ಸೇಡಮ್ | 211 | 101 | 47.8 | 52.2 | 124 | 58.8 | 41.2 |
| ಶಹಾಪುರ | 243 | 100 | 41.1 | 58.9 | 139 | 57.2 | 42.8 |
| ಶೋರಾಪುರ | 340 | 98 | 28.8 | 71.2 | 234 | 68.8 | 31.2 |
| ಯಾದಗೀರ್ | 253 | 97 | 38.30 | 61.7 | 172 | 68.0 | 32.0 |
| ಒಟ್ಟು | **2405** | **955** | **39.7** | **60.3** | **1529** | **63.6** | **36.4** |

ಮೂಲ: ಜಿಲ್ಲಾ ಯೋಜನಾ ಸಂಯೊಜನಾಧಿಕಾರಿಗಳು ವಾರ್ಷಿಕ ಕ್ರಿಯಾ ಯೋಜನೆ ಮತ್ತು ಬೆಟ್ಟು : 2006–07 ಎಸ್ ಎಸ್ ಏ–ಗುಲಬರ್ಗಾ

ಕೋಷ್ಟಕ 3.7

## ಶಿಕ್ಷಕರು ಮತ್ತು ಶಾಲಾ ಕೊಠಡಿಗಳ ನಡುವಿನ ಅನುಪಾತ

| ತಾಲ್ಲೂಕು | ಮುಂಜೂರಾದ ಶಿಕ್ಷಕರ ಹುದ್ದೆಗಳು | ತರಗತಿ ಕೋಣೆಗಳು | ಶಿ–ಕೊ. ಅನುಪಾತ |
|---|---|---|---|
| ಅಫಜಲಪುರ | 865 | 693 | 0.8 |
| ಅಳಂದ್ | 1259 | 964 | 0.77 |
| ಚಿಂಚೋಳಿ | 1004 | 810 | 0.81 |
| ಚಿತ್ತಾಪುರ | 1320 | 975 | 0.74 |
| ಗುಲಬರ್ಗಾ | 1526 | 1184 | 0.78 |
| ಜೇವರ್ಗಿ | 1046 | 764 | 0.73 |
| ಸೇಡಮ್ | 885 | 700 | 0.79 |
| ಶಹಾಪುರ | 1074 | 849 | 0.79 |
| ಶೋರಾಪುರ | 1399 | 1116 | 0.80 |
| ಯಾದಗೀರ್ | 1148 | 909 | 0.79 |
| **ಒಟ್ಟು** | **11526** | **8964** | **0.78** |

ಮೂಲ: ಈ ಎಮ್ ಐ ಎಸ್ 2005–06

**ಮೇಲಿನ ಸಂಗತಿಗಳು ಈಗಿರುವ ಶಾಲಾ ಸೌಲಭ್ಯದ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ ಎಂಬುದನ್ನು ತಿಳಿಸುತ್ತವೆ. ಈಗಿರುವ ಮೂಲಭೂತ ಸೌಲಭ್ಯದ ಮೇಲೆ ಹೆಚ್ಚಿನ ಭಾರ ಬೀಳುತ್ತದೆ.**

**ಈಗ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಕಳವಳಕಾರಿ ಸಂಗತಿಗಳನ್ನು ಚರ್ಚಿಸಬಹುದಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಬಹು ಮುಖ್ಯವಾದ ಸಮಸ್ಯೆಯೆಂದರೆ 6–14 ವಯೋಮಾನದ ಮಕ್ಕಳೆಲ್ಲರೂ ಶಾಲಾ ಪ್ರಕ್ರಿಯೆಯಲ್ಲಿ ಸಹಭಾಗಿಗಳಾಗುವಂತೆ ಮಾಡುವುದಾಗಿದೆ.**

ಇದರ ಜೊತೆಗೆ ಜಿಲ್ಲೆಯಲ್ಲಿ ಶಾಲಾ ಕೊಠಡಿಗಳ ಕೊರತೆಯೂ ಇದೆ. ಶಿಕ್ಷಕರು ಮತ್ತು ಕೊಠಡಿಗಳ ನಡುವಿನ ಅನುಪಾತ 0.7ರಷ್ಟಿದೆ. ಪ್ರತಿ ಶಿಕ್ಷಕರಿಗೆ ಒಂದು ಶಾಲಾ ಕೊಠಡಿಯಿರಬೇಕು. ಇದು ಎನ್‌ಸಿಇಆರ್‌ಟಿ ಮಾನದಂಡ. ಎಲ್ಲ ತಾಲ್ಲೂಕುಗಳ ಸ್ಥಿತಿಯು ನಿಗದಿಪಡಿಸಿದ ಮಾನದಂಡಕ್ಕಿಂತ ಕೆಳಮಟ್ಟದಲ್ಲಿದೆ.

ಮೇಲಿನ ಸಂಗತಿಗಳು ಈಗಿರುವ ಶಾಲಾ ಸೌಲಭ್ಯದ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ ಎಂಬುದನ್ನು ತಿಳಿಸುತ್ತವೆ. ಈಗಿರುವ ಮೂಲಭೂತ ಸೌಲಭ್ಯದ ಮೇಲೆ ಹೆಚ್ಚಿನ ಭಾರ ಬೀಳುತ್ತದೆ. ಈ ಒತ್ತಡದ ಸ್ಥಿತಿಯನ್ನು ಇಲ್ಲಿ ಪ್ರತಿ ಕಿರಿಯ/ಹಿರಿಯ ಶಾಲೆಗಳಿಗಿರುವ ಮಕ್ಕಳ ಸಂಖ್ಯೆ, ಪ್ರತಿ ಶಾಲೆಗೆ ಇರುವ ಶಿಕ್ಷಕರ ಸಂಖ್ಯೆ, ಶಿಕ್ಷಕರು ಮತ್ತು ಮಕ್ಕಳ ನಡುವಿನ ಅನುಪಾತ, ಶಿಕ್ಷಕರು ಮತ್ತು ಶಾಲಾ ಕೊಠಡಿಗಳ ನಡುವಿನ ಅನುಪಾತ ಮುಂತಾದ ಸೂಚಿಗಳ ನೆರವಿನಿಂದ ಅಳೆಯಲಾಗುತ್ತದೆ. ರಾಜ್ಯಮಟ್ಟದಲ್ಲಿರುವ ಮೌಲ್ಯವನ್ನು ಆಧಾರ ಮಾನದಂಡವಾಗಿ ಬಳಸಲಾಗುತ್ತದೆ.

ನಮಗೆ ತಿಳಿದುಬರುವಂತೆ ಜಿಲ್ಲೆಯಲ್ಲಿ ಸ್ಥಿತಿಯು ಆಶಾದಾಯಕವಾಗಿಲ್ಲ. ಅಧಿಕ ಸಂಖ್ಯೆಯ ತಾಲ್ಲೂಕುಗಳು ನಿಗದಿತ ಮಾನದಂಡಕ್ಕಿಂತ ಕೆಳಗಿವೆ. ಪ್ರತಿ ಶಾಲೆಗೆ ಮಕ್ಕಳ ಸಂಖ್ಯೆಯು ಜಿಲ್ಲೆಯಲ್ಲಿ 222 ಇದ್ದರೆ ರಾಜ್ಯಮಟ್ಟದಲ್ಲಿ ಅದು 169 ರಷ್ಟಿದೆ. ಪ್ರತಿ ಶಾಲೆಗೆ ಶಿಕ್ಷಕರ ಸಂಖ್ಯೆ ರಾಜ್ಯ ಮಟ್ಟದಲ್ಲಿ 4.3 ರಷ್ಟಿದ್ದರೆ ಜಿಲ್ಲೆಯಲ್ಲಿ ಅದು 3.8 ರಷ್ಟಿದೆ. ರಾಜ್ಯಮಟ್ಟದಲ್ಲಿ ಶಿಕ್ಷಕರು ಮತ್ತು ಮಕ್ಕಳ ನಡುವಿನ ಅನುಪಾತ 26. ಅದರೆ ಜಿಲ್ಲೆಯಲ್ಲಿ ಅದು 36. ಇದು ಶಾಲಾ ಸೌಲಭ್ಯದ ಮೇಲೆ ಹೆಚ್ಚಿನ ಒತ್ತಡವಿರುವುದನ್ನು ತೋರಿಸುತ್ತದೆ ಮತ್ತು ಇದರಿಂದಾಗಿ ಶಾಲಾ ಗುಣಮಟ್ಟ ಕ್ಷೀಣಿಸುತ್ತಿದೆ.

## ಶೈಕ್ಷಣಿಕ ಮೂಲಭೂತ ಸೌಲಭ್ಯಗಳ ಸ್ಥಿತಿಗತಿ – ಶೈಕ್ಷಣಿಕ ಮೂಲಭೂತ ಸೌಲಭ್ಯ ಸೂಚ್ಯಂಕ

ಪ್ರಾದೇಶಿಕ ಅಸಮಾನತೆಯ ಅಧ್ಯಯನದ ಉನ್ನತಾಧಿಕಾರ ಸಮಿತಿಯು ರಾಜ್ಯದ 175 ತಾಲ್ಲೂಕುಗಳಿಗೂ ಶೈಕ್ಷಣಿಕ ಮೂಲಭೂತ ಸೌಲಭ್ಯ ಸೂಚ್ಯಂಕವನ್ನು ಕೆಳಕಂಡ ಸೂಚಿಗಳನ್ನು ಆಧರಿಸಿ ಲೆಕ್ಕ ಹಾಕಿದೆ.

ಅಲ್ಲಿ ಬಳಸಿದ ಸೂಚಿಗಳು ಹೀಗಿವೆ:

1 ಸಾಕ್ಷರತಾ ಪ್ರಮಾಣ

2 ಮಕ್ಕಳು ಮತ್ತು ಶಿಕ್ಷಕರ ನಡುವಿನ ಅನುಪಾತ

3 ಶಾಲೆಯಿಂದ ಹೊರಗಿರುವ 6–14 ವಯೋಮಾನದ ಮಕ್ಕಳು

4 ಪ್ರತಿ ಲಕ್ಷ ಜನಸಂಖ್ಯೆಗೆ ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ದಾಖಲಾತಿ ಪ್ರಮಾಣ

ಗುಲಬರ್ಗಾ ಜಿಲ್ಲೆಯ ತಾಲ್ಲೂಕುಗಳ ಶೈಕ್ಷಣಿಕ ಮೂಲಭೂತ ಸೌಲಭ್ಯ ಸೂಚ್ಯಂಕಗಳ ವಿವರವನ್ನು ಕೋಷ್ಟಕ–3.9ರಲ್ಲಿ ನೀಡಲಾಗಿದೆ.

ಜಿಲ್ಲೆಯಲ್ಲಿನ ಯಾದಗೀರ್ ತಾಲ್ಲೂಕಿನ ಸ್ಥಾನವು ಇಡೀ ರಾಜ್ಯದಲ್ಲಿ ಕಟ್ಟಕಡೆಯದಾಗಿದೆ. ಜಿಲ್ಲೆಯ ಆರು ತಾಲ್ಲೂಕುಗಳು ಅತ್ಯಂತ ಹಿಂದುಳಿದ ಗುಂಪಿನಲ್ಲಿವೆ. ಗುಲಬರ್ಗಾ ತಾಲ್ಲೂಕು ಮಾತ್ರ ಸಾಪೇಕ್ಷವಾಗಿ ಮುಂದುವರಿದ ಗುಂಪಿನಲ್ಲಿದೆ. ಇದು ಜಿಲ್ಲೆಯು ಶೈಕ್ಷಣಿಕ ಮೂಲಭೂತ ಸೌಲಭ್ಯಕ್ಕೆ ಸಂಬಂಧಿಸಿದಂತೆ ಕೆಳಮಟ್ಟದಲ್ಲಿರುವುದನ್ನು ತೋರಿಸುತ್ತದೆ.

ಇಲ್ಲಿಯವರೆಗಿನ ಚರ್ಚೆಯು ಜಿಲ್ಲೆಯು ಸಾಕ್ಷರತೆಗೆ ಮತ್ತು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಿಂದುಳಿದಿರುವುದನ್ನು ಸ್ಪಷ್ಟಪಡಿಸುತ್ತದೆ.

## ಪ್ರಾಥಮಿಕ ಶಿಕ್ಷಣ – ಕಳವಳಕಾರಿ ಸಂಗತಿಗಳು

ಈಗ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಕಳವಳಕಾರಿ ಸಂಗತಿಗಳನ್ನು ಚರ್ಚಿಸಬಹುದಾಗಿದೆ. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಬಹು ಮುಖ್ಯವಾದ ಸಮಸ್ಯೆಯೆಂದರೆ 6–14 ವಯೋಮಾನದ ಮಕ್ಕಳೆಲ್ಲರೂ ಶಾಲಾ ಪ್ರಕ್ರಿಯೆಯಲ್ಲಿ ಸಹಭಾಗಿಗಳಾಗುವಂತೆ ಮಾಡುವುದಾಗಿದೆ. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗಣನೀಯ ಪ್ರಗತಿ ಸಾಧಿಸಿಕೊಂಡಿದ್ದರೂ ಅಧಿಕ ಸಂಖ್ಯೆಯಲ್ಲಿ

ಮಕ್ಕಳು ಶಾಲಾ ಪ್ರಕ್ರಿಯೆಯಿಂದ ಹೊರಗುಳಿದಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಅದರಿಂದ ಹೊರಬಂದ ಕ್ರಿಯಾಯೋಜನೆಗಳು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಆದ್ಯತೆ ನೀಡಿವೆ. ಡಿಪಿಇಪಿ ಮತ್ತು ಸರ್ವ ಶಿಕ್ಷಾ ಅಭಿಯಾನಗಳೆರಡರಲ್ಲೂ ನೂರಕ್ಕೆ ನೂರರಷ್ಟು ಮಕ್ಕಳ ದಾಖಲಾತಿಯನ್ನು ಸಾಧಿಸುವ ಗುರಿಯಿಟ್ಟುಕೊಂಡು ಕೆಲಸ ಮಾಡುತ್ತಿವೆ.

ಕೋಷ್ಟಕ 3.8

## ಶಾಲಾ ವ್ಯವಸ್ಥೆ ಮೇಲೆ ಒತ್ತಡ

| ತಾಲ್ಲೂಕು | ಪ್ರತಿ ಕಿ.ಪ್ರಾ.ಶಾಲೆಗೆ ಮಕ್ಕಳ ಸಂಖ್ಯೆ | ಪ್ರತಿ ಹಿ.ಪ್ರಾ. ಶಾಲೆಗೆ ಮಕ್ಕಳ ಸಂಖ್ಯೆ | ಪ್ರತಿ ಶಾಲೆಗೆ ಶಿಕ್ಷಕರ ಸಂಖ್ಯೆ | ಮಕ್ಕಳು ಮತ್ತು ಶಿಕ್ಷರ ನಡುವಿನ ಅನುಪಾತ | ಶಿಕ್ಷಕರು ಮತ್ತು ಶಾಲಾ ಕೋಣೆಗಳ ನಡುವಿನ ಅನುಪಾತ |
|---|---|---|---|---|---|
| ಅಫಜಲಪುರ | 290 | 198 | 5.0 | 38 | 0.8 |
| ಅಳಂದ್ | 343 | 140 | 4.3 | 36 | 0.7 |
| ಚಿಂಚೋಳಿ | 154 | 195 | 3.8 | 38 | 0.8 |
| ಚಿತ್ತಾಪುರ | 106 | 155 | 3.9 | 35 | 0.7 |
| ಗುಲಬರ್ಗಾ | 355 | 128 | 3.4 | 38 | 0.7 |
| ಜೇವರ್ಗಿ | 271 | 163 | 4.2 | 41 | 0.7 |
| ಸೇಡವ್ | 154 | 200 | 3.1 | 34 | 0.7 |
| ಶಹಾಪುರ | 231 | 189 | 3.5 | 46 | 0.8 |
| ಶೋರಾಪುರ | 180 | 172 | 3.6 | 41 | 0.8 |
| ಯಾದಗೀರ್ | 184 | 153 | 3.6 | 37 | 0.8 |
| **ಒಟ್ಟು** | **222** | **160** | **3.8** | **38** | **0.8** |
| **ರಾಜ್ಯ** | **169** | **146** | **4.3** | **26** | **6.6** |

ಮೂಲ: ಈ ಎವಮ್ ಐ ಎಸ್ ನಿಂದ ರೂಪಿಸಲಾಗಿದೆ. 2005–06

ಕೋಷ್ಟಕ 3.9

## ಜಿಲ್ಲೆಯಲ್ಲಿ ತಾಲ್ಲೂಕುವಾರು ಶೈಕ್ಷಣಿಕ ಮೂಲಭೂತ ಸೌಲಭ್ಯಗಳ ಸೂಚ್ಯಂಕ

| ತಾಲ್ಲೂಕು | ಶೈಕ್ಷಣಿಕ ಮೂಲಭೂತ ಸೌಲಭ್ಯಗಳ ಸೂಚ್ಯಂಕ | ಜಿಲ್ಲೆಯಲ್ಲಿ ಸ್ಥಾನ District (ಒಟ್ಟು=10) | ರಾಜ್ಯದಲ್ಲಿ ಸ್ಥಾನ (ಒಟ್ಟು=175) | ವರ್ಗೀಕರಣ |
|---|---|---|---|---|
| ಅಫಜಲಪುರ | 0.84 | 6 | 168 | ಅತ್ಯಂತ ಹಿಂದುಳಿದ |
| ಅಳಂದ್ | 0.91 | 3 | 155 | ಅತಿ ಹಿಂದುಳಿದ |
| ಚಿಂಚೋಳಿ | 0.85 | 5 | 165 | ಅತ್ಯಂತ ಹಿಂದುಳಿದ |
| ಚಿತ್ತಾಪುರ | 0.83 | 7 | 169 | ಅತ್ಯಂತ ಹಿಂದುಳಿದ |
| ಗುಲಬರ್ಗಾ | 1.55 | 1 | 32 | ಸಾಪೇಕ್ಷವಾಗಿ ಮುಂದುವರಿದ |
| ಜೇವರ್ಗಿ | 0.76 | 8 | 171 | ಅತ್ಯಂತ ಹಿಂದುಳಿದ |
| ಸೇಡವ್ | 0.91 | 4 | 156 | ಅತಿ ಹಿಂದುಳಿದ |
| ಶಹಾಪುರ | 0.70 | 9 | 174 | ಅತ್ಯಂತ ಹಿಂದುಳಿದ |
| ಶೋರಾಪುರ | 0.93 | 2 | 151 | ಅತ್ಯಂತ ಹಿಂದುಳಿದ |
| ಯಾದಗೀರ್ | 0.68 | 10 | 175 | ಹಿಂದುಳಿದ |

ಮೂಲ: ಡಾ.ಡಿ.ಎವಮ್.ನಂಜುಂಡಪ್ಪ ಸಮಿತಿ ವರದಿ 2002.

**ಪ.ಜಾ. ಮತ್ತು ಪ.ಪಂ. ಮಕ್ಕಳ ದಾಖಲಾತಿಯು ಅಧಿಕವಾಗುತ್ತಿದೆ. ಒಟ್ಟಾರೆ ದಾಖಲಾತಿಯು 2001 ರಿಂದ 2003ರ ಅವಧಿಯಲ್ಲಿ ಏರಿಕೆಯಾಗಿದೆ ಮತ್ತು ತದನಂತರ ಅದು ಒಂದು ನೆಲೆಯಲ್ಲಿ ದೃಢವಾಗಿಬಿಟ್ಟಿದೆ.**

ಶಾಲೆಗಳಲ್ಲಿ ಮಕ್ಕಳ ದಾಖಲಾತಿಯು ಸಾವಕಾಶವಾಗಿ ಏರಿಕೆಯಾಗುತ್ತಿದೆ. ಆದರೆ ದಾಖಲಾತಿಯು ಸಂಖ್ಯೆಯು ಕಾಲಾನುಕ್ರಮಕ್ಕೆ ತಕ್ಕಂತೆ ಏರಿಕೆಯಾಗುತ್ತಿಲ್ಲ. ಇದಕ್ಕೆ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತಿರುವುದು ಕಾರಣವಾಗಿರಬಹುದು. ಆದರೂ ಶಾಲೆಯಿಂದ ಹೊರಗಿರುವ ಮಕ್ಕಳ ಸಂಖ್ಯೆ ಮತ್ತು ಪ್ರಮಾಣ ಕಡಿಮೆಯಾಗುತ್ತಿದೆ. ಜಿಲ್ಲೆಯಲ್ಲಿನ ದಾಖಲಾತಿ ವಿವರಗಳನ್ನು ಕೋಷ್ಟಕ–3.10ರಲ್ಲಿ ನೀಡಲಾಗಿದೆ.

ಮಕ್ಕಳ ದಾಖಲಾತಿಯು 2001–03ರ ಅವಧಿಯಲ್ಲಿ ಶೇ. 3.90ರಷ್ಟು ಏರಿಕೆಯಾಗಿದೆ. ಆದರೆ ತದನಂತರ ಅದು ಕಡಿಮೆಯಾಗುತ್ತಿದೆ. ಅದರ ಬೆಳವಣಿಗೆಯು 2002–03 ಮತ್ತು 2004–05ರ ಅವಧಿಯಲ್ಲಿ ಶೇ. 4.95ರಷ್ಟು ನಕಾರಾತ್ಮಕವಾಗಿತ್ತು. ಮರು ವರ್ಷ ಅದು ಶೇ. 1ರಷ್ಟು ನಕಾರಾತ್ಮಕವಾಗಿತ್ತು. ಇದಕ್ಕೆ ಮುಖ್ಯ ಕಾರಣವೆಂದರೆ ಶಾಲೆಗೆ ಹೋಗುವ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತಿರುವುದಾಗಿದೆ. ವಿವಿಧ ವರ್ಷಗಳಿಗೆ ಎಸ್.ಎಸ್.ಎ. ನೇತೃತ್ವದಲ್ಲಿ ನಡೆಸಿದ 6–14 ವರ್ಷದ ಮಕ್ಕಳ ಗಣತಿಯ ವಿವರಗಳಿಂದ ಇದು ತಿಳಿದುಬರುತ್ತದೆ. ಅದರ ಪ್ರಕಾರ 2001ರಲ್ಲಿದ್ದ ಮಕ್ಕಳ ಸಂಖ್ಯೆ 560780. ಆದರೆ ಅದು 2005ರಲ್ಲಿ 487491ಕ್ಕೆ ಮತ್ತು 2006ರಲ್ಲಿ 371713ಕ್ಕಿಳಿದಿದೆ. ಪ.ಜಾ. ಮತ್ತು ಪ.ಪಂ. ಮಕ್ಕಳ ದಾಖಲಾತಿಯು ಅಧಿಕವಾಗುತ್ತಿದೆ. ಒಟ್ಟಾರೆ ದಾಖಲಾತಿಯು 2001 ರಿಂದ 2003ರ ಅವಧಿಯಲ್ಲಿ ಏರಿಕೆಯಾಗಿದೆ ಮತ್ತು ತದನಂತರ ಅದು ಒಂದು ನೆಲೆಯಲ್ಲಿ ದೃಢವಾಗಿಬಿಟ್ಟಿದೆ. ಪ.ಜಾ. ಮತ್ತು ಪ.ಪಂ. ಮಕ್ಕಳ ದಾಖಲಾತಿಯು ತೀವ್ರಗತಿಯಲ್ಲಿ ಏರಿಕೆಯಾಗುತ್ತಿದೆ. ಪ.ಜಾ. ಮಕ್ಕಳ ದಾಖಲಾತಿಯ ಪ್ರಮಾಣ ಒಟ್ಟು ಮಕ್ಕಳ ದಾಖಲಾತಿಗೆ ಸಾಪೇಕ್ಷವಾಗಿ 2002–03ರಲ್ಲಿ ಶೇ. 25.84 ರಷ್ಟಿದ್ದುದು 2005–06ರಲ್ಲಿ ಶೇ. 27.24ಕ್ಕೇರಿದೆ. ಒಟ್ಟು ದಾಖಲಾತಿಯಲ್ಲಿ ಪ.ಪಂ. ಮಕ್ಕಳ ದಾಖಲಾತಿ ಪ್ರಮಾಣ 2001 ರಿಂದ 2006ರ ಅವಧಿಯಲ್ಲಿ ಶೇ. 4.21 ರಿಂದ ಶೇ. 4.67 ಕ್ಕೇರಿದೆ.

ಜಿಲ್ಲೆಯಲ್ಲಿನ ಸರಾಸರಿ ಒಟ್ಟು ದಾಖಲಾತಿ ಪ್ರಮಾಣ 107.6. ಬಾಲಕರ ದಾಖಲಾತಿ ಪ್ರಮಾಣ 107.7 ಮತ್ತು ಬಾಲಕಿಯರ ದಾಖಲಾತಿ ಪ್ರಮಾಣ 107.5. ಪ.ಜಾ. ಮಕ್ಕಳ ಒಟ್ಟು ದಾಖಲಾತಿ ಪ್ರಮಾಣ 106.5ರಷ್ಟಿದ್ದರೆ ಪ.ಪಂ ಮಕ್ಕಳ ದಾಖಲಾತಿ ಪ್ರಮಾಣ 95.3. ಕಳೆದ ಕೆಲವು ವರ್ಷಗಳಲ್ಲಿ ದಾಖಲಾತಿಯು ಜಿಲ್ಲೆಯಲ್ಲಿ ದೃಢತೆಯನ್ನು ತೋರಿಸುತ್ತಿದೆ. ಆದರೆ ಮಕ್ಕಳನ್ನು ಶಾಲಾವಾಹಿನಿಯಲ್ಲೆ ಉಳಿಯುವಂತೆ ಮಾಡುವುದು ಕಷ್ಟ ಸಾಧ್ಯವಾಗಿದೆ ಈ ವಿವರಗಳನ್ನು ಕೋಷ್ಟಕ 3.11ರಲ್ಲಿ ನೀಡಲಾಗಿದೆ.

ಕೋಷ್ಟಕ 3.10

**ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ : 2001–2006**

| ವರ್ಷ | ಒಟ್ಟು | | | ಪ.ಜಾ. | | | ಪ.ಪಂ. | | |
|---|---|---|---|---|---|---|---|---|---|
| | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು |
| 2001–02 | 292778 (53.05) | 259134 (46.95) | 551912 (100.00) | 77076 (26.32) | 65544 (25.29) | 142620 (25.84) | 12793 (4.37) | 10425 (4.02) | 23218 (4.21) |
| 2002–03 | 301501 (52.57) | 271963 (47.43) | 573464 (100.00) | 78242 (25.95) | 67235 (24.72) | 145477 (25.37) | 13272 (04.40) | 11076 (04.07) | 24348 (04.24) |
| 2004–05 | 288921 (53.00) | 256179 (47.00) | 545100 (100.00) | 78680 (27.23) | 67323 (26.28) | 146003 (26.78) | 13525 (04.68) | 11736 (04.58) | 25261 (04.63) |
| 2005–06 | 284411 (52.69) | 255390 (47.31) | 539801 (100.00) | 79225 (27.86) | 67792 (26.54) | 147017 (27.24) | 13668 (04.81) | 11553 (04.52) | 25221 (04.67) |

ಮೂಲ: ಈ ಎಮ್ ಐ ಎಸ್ 2001–02, 2004, 2006 ಗುಲಬರ್ಗಾ.

ಒಟ್ಟು ದಾಖಲಾದ 5.48 ಲಕ್ಷ ಮಕ್ಕಳಲ್ಲಿ 1–4ನೆಯ ತರಗತಿಗಳಲ್ಲಿದ್ದ ಮಕ್ಕಳ ಸಂಖ್ಯೆ 3.37 ಲಕ್ಷವಾದರೆ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿದ್ದ ಅಂದರೆ 5–8 ನೆಯ ತರಗತಿಯಲ್ಲಿದ್ದ ಮಕ್ಕಳ ಸಂಖ್ಯೆ 2.11 ಲಕ್ಷ. ತರಗತಿಯಿಂದ ತರಗತಿಗೆ ಮಕ್ಕಳ ದಾಖಲಾತಿಯು ಕಡಿಮೆಯಾಗುತ್ತಿರುವುದನ್ನು ನೋಡಬಹುದಾಗಿದೆ. ಉನ್ನತ ತರಗತಿಗಳಿಗೆ ತೆರಳಿದಂತೆ ಕಡಿತ ಅಧಿಕವಾಗುತ್ತದೆ. ಒಟ್ಟು ದಾಖಲಾದ ಮಕ್ಕಳಲ್ಲಿ ಒಂದನೆಯ ತರಗತಿಯಲ್ಲಿರುವ ಮಕ್ಕಳ ಪ್ರಮಾಣ ಶೇ. 17.5 ಮತ್ತು 8ನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಕೇವಲ ಶೇ. 6.1. ಯಾದಗೀರ್ ನಂತಹ ತಾಲ್ಲೂಕಿನಲ್ಲಿ ಒಟ್ಟು ದಾಖಲಾತಿಯಾದ ಮಕ್ಕಳಲ್ಲಿ 8ನೆಯ ತರಗತಿಯಲ್ಲಿನ ಮಕ್ಕಳ ಪ್ರಮಾಣ ಕೇವಲ ಶೇ. 2.81. ಒಟ್ಟಾರೆ ದಾಖಲಾದ ಪ್ರತಿ ನೂರು ಮಕ್ಕಳಲ್ಲಿ ಕೇವಲ ಆರು ಮಕ್ಕಳು ಮಾತ್ರ 8ನೆಯ ತರಗತಿ ಪ್ರವೇಶಿಸುತ್ತಾರೆ. ಈ ರೀತಿಯಲ್ಲಿ ಉನ್ನತ ತರಗತಿಗಳಿಗೆ ತೆರಳಿದಂತೆ ದಾಖಲಾತಿ ಕುಸಿಯುತ್ತಿರುವುದು ಜಿಲ್ಲೆಯಲ್ಲಿನ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಎಷ್ಟು ಅಗಾಧ'ವಾಗಿದೆಯೆಂಬುದನ್ನು ತೋರಿಸುತ್ತಿದೆ. ಇದಕ್ಕೆ ಅನೇಕ ಕಾರಣಗಳಿರಬಹುದು. ಹಿರಿಯ ಪ್ರಾಥಮಿಕ ಶಾಲೆಗಳು ನಡೆದು ಹೋಗಬಹುದಾದ ದೂರದಲ್ಲಿಲ್ಲದಿರುವುದು ಇದಕ್ಕೆ ಒಂದು ಕಾರಣವಾಗಿರಬಹುದು ಸಾಕು. ಪಾಲಕರ ವಲಸೆ ಹಾಗೂ ಶೋರಾಪುರ ಮತ್ತು ಶಹಾಪುರಗ ತಾಲ್ಲೂಕುಗಳಲ್ಲಿ ನೀರಾವರಿ ಪ್ರದೇಶಗಳಲ್ಲಿನ ಕಾರ್ಮಿಕರ ಬೇಡಿಕೆಗಳು ಇಲ್ಲಿನ ಉನ್ನತ ತರಗತಿಗಳಲ್ಲಿನ ದಾಖಲಾತಿ ಕುಸಿತಕ್ಕೆ ಕಾರಣವಾಗಿವೆ.

ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳನ್ನು ಕುರಿತಂತೆ ನಡೆದ ಅಧ್ಯಯನದಲ್ಲಿ ಕಂಡು ಬಂದಂತೆ 5 ರಿಂದ 7ನೆಯ ತರಗತಿಗಳಲ್ಲಿ ಶಾಲೆಯನ್ನು ಮಕ್ಕಳು ಬಿಡುವ ಪ್ರಮಾಣ ಅತ್ಯಧಿಕವೆನ್ನುವುದು ತಿಳಿದು ಬಂದಿದೆ.

ಕೋಷ್ಟಕ 3.11

## ತರಗತಿವಾರು ದಾಖಲಾತಿಯ ಪ್ರಮಾಣ (ಶೇ.) 2005–06

| ತಾಲ್ಲೂಕು | ತರಗತಿವಾರು ದಾಖಲಾತಿಯ ಪ್ರಮಾಣ | | | | | | | | |
|---|---|---|---|---|---|---|---|---|---|
| | ಒಟ್ಟು ದಾಖಲಾತಿ (I-VIII) | I | II | III | IV | V | VI | VII | VIII |
| ಅಫಜಲಪುರ | 38215 | 15.8 | 15.3 | 14.5 | 13.9 | 12.8 | 11.0 | 09.6 | 07.1 |
| ಆಳಂದ್ | 56903 | 15.6 | 13.7 | 14.0 | 13.4 | 15.0 | 11.7 | 10.6 | 08.0 |
| ಚಿಂಚೋಳಿ | 42700 | 16.5 | 14.9 | 14.5 | 14.3 | 14.0 | 11.3 | 08.9 | 05.6 |
| ಚಿತ್ತಾಪುರ | 60075 | 17.8 | 14.9 | 15.2 | 14.2 | 13.2 | 09.8 | 09.3 | 07.6 |
| ಗುಲಬರ್ಗಾ | 87688 | 19.0 | 13.2 | 14.0 | 13.3 | 12.9 | 11.0 | 10.2 | 06.4 |
| ಜೇವರ್ಗಿ | 49398 | 17.9 | 16.4 | 15.0 | 13.7 | 12.8 | 09.8 | 08.6 | 05.8 |
| ಸೇಡಮ್ | 39305 | 17.2 | 14.5 | 14.4 | 14.0 | 13.8 | 10.7 | 09.3 | 05.8 |
| ಶಹಾಪುರ | 58556 | 18.8 | 17.6 | 15.5 | 13.6 | 13.0 | 08.5 | 07.2 | 05.8 |
| ಶೋರಾಪುರ | 87073 | 12.3 | 11.8 | 12.1 | 11.4 | 10.7 | 07.7 | 06.5 | 04.3 |
| ಯಾದಗೀರ್ | 48690 | 19.4 | 16.0 | 15.5 | 15.2 | 14.3 | 08.8 | 08.0 | 02.8 |
| **ಒಟ್ಟು** | **548043** | **17.5** | **15.1** | **14.9** | **14.0** | **13.2** | **10.3** | **09.0** | **06.0** |

ಮೂಲ: ಜಿಲ್ಲಾ ಯೋಜನಾ ಸಂಯೋಜಕರು ವಾರ್ಷಿಕ ಕ್ರಿಯಾ ಯೋಜನೆ :2006–07 ಗುಲಬರ್ಗಾ 2006

ಶೋರಾಪುರ, ಶಹಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಶೇ. 50ಕ್ಕಿಂತ ಅಧಿಕ. ಯಾದಗೀರ್ ತಾಲ್ಲೂಕಿನಲ್ಲಿ ಶಾಲೆ ಬಿಡುವ ಮಕ್ಕಳ ಪ್ರಮಾಣವು ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳೆರಡಲ್ಲೂ ಕಂಡು ಬರುತ್ತದೆ. ಯಾದಗೀರ್, ಶೋರಾಪುರ ಮತ್ತು ಶಹಾಪುರ ತಾಲ್ಲೂಕುಗಳಲ್ಲಿನ ಕೆಳಮಟ್ಟದ ದಾಖಲಾತಿ ಮತ್ತು ಅಧಿಕ ಪ್ರಮಾಣದಲ್ಲಿ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣಗಳೆರಡು ಸೇರಿ ಅವುಗಳಲ್ಲಿ ಶೈಕ್ಷಣಿಕ ಸ್ಥಿತಿಯು ಅತ್ಯಂತ ಕೆಳಮಟ್ಟದಲ್ಲಿರುವುದಕ್ಕೆ ಕಾರಣವಾಗಿದೆ.

## ಶಾಲಾ ವಾಹಿನಿಯಿಂದ ಹೊರಗಿರುವ ಮಕ್ಕಳು

ಶಾಲೆಯಿಂದ ಹೊರಗಿರುವ ಮಕ್ಕಳ ಪ್ರಮಾಣವು ವರ್ಷದಿಂದ ವರ್ಷಕ್ಕೆ ತೀವ್ರ ಕಡಿಮೆಯಾಗುತ್ತಾ ನಡೆದಿದೆ. ಇದಕ್ಕೆ ವಸತಿಯುತ ಸೇತುಬಂಧ ಕಾರ್ಯತಂತ್ರ, ಸೇತುಬಂಧ ಕಾರ್ಯಕ್ರಮ, ಚಿಣ್ಣರ ಅಂಗಳ, ಪರ್ಯಾಯ ವಿನೂತನ ಶಿಕ್ಷಣ

ಕೋಷ್ಟಕ 3.12

### ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳ ಪ್ರಮಾಣದ ವಿಶ್ಲೇಷಣೆ 2005

| ಕ್ರ.ಸಂ. | ತಾಲ್ಲೂಕು | ಶಾಲೆ ಬಿಟ್ಟ ಮಕ್ಕಳು 1–5 (ಮಕ್ಕಳ ದಾಖಲಾತಿ ವರ್ಷ :1999–2000) | | | ಶಾಲೆ ಬಿಟ್ಟ ಮಕ್ಕಳ ಪ್ರಮಾಣ (ಶೇ.) 1–7 (ಮಕ್ಕಳ ದಾಖಲಾತಿ ವರ್ಷ 1997–98) | | |
|---|---|---|---|---|---|---|---|
| | | ಹುಡುಗರು | ಹುಡುಗಿಯರು | ಒಟ್ಟು | ಹುಡುಗರು | ಹುಡುಗಿಯರು | ಒಟ್ಟು |
| 1 | ಅಫಜಲಪುರ | 9.54 | 7.31 | 8.51 | 41.26 | 45.06 | 42.90 |
| 2 | ಆಳಂದ್ | 9.28 | 9.18 | 9.24 | 25.01 | 25.24 | 25.11 |
| 3 | ಚಿಂಚೋಳಿ | 11.24 | 8.61 | 9.9 | 39.91 | 36.73 | 38.65 |
| 4 | ಚಿತ್ತಾಪುರ | 12.55 | 15.45 | 13.92 | 30.38 | 32.06 | 31.13 |
| 5 | ಗುಲಬರ್ಗಾ | 13.33 | 11.24 | 12.40 | 40.78 | 43.09 | 41.85 |
| 6 | ಜೇವರ್ಗಿ | 15.73 | 14.49 | 15.13 | 45.99 | 52.89 | 48.20 |
| 7 | ಸೇಡಮ್ | 16.05 | 14.00 | 15.07 | 41.70 | 35.69 | 38.82 |
| 8 | ಶಹಾಪುರ | 17.19 | 17.03 | 17.10 | 48.43 | 59.48 | 53.67 |
| 9 | ಶೋರಾಪುರ | 19.23 | 21.37 | 20.22 | 44.84 | 52.70 | 48.33 |
| 10 | ಯಾದಗೀರ್ | 23.65 | 24.49 | 24.04 | 46.67 | 54.69 | 49.95 |
| | **ಒಟ್ಟು** | **16.61** | **16.25** | **16.44** | **36.54** | **39.07** | **37.65** |

ಮೂಲ: ಈ.ಎಮ್.ಐ.ಎಸ್. : 2004–05

ಕೊಷ್ಟಕ 3.13

### ಶಾಲೆಯಿಂದ ಹೊರಗಿರುವ ಮಕ್ಕಳು 2001–06

| ಸಮೀಕ್ಷೆಯ ವರ್ಷ | ಮಕ್ಕಳ ಒಟ್ಟು ಸಂಖ್ಯೆ | ಶಾಲೆಯಿಂದ ಹೊರಗಿರುವ ಮಕ್ಕಳು | ಶೇಕಡಾ |
|---|---|---|---|
| 2001 | 560739 | 136667 | 24.37 |
| 2002 | 643458 | 104460 | 16.23 |
| 2003 | 531231 | 56131 | 10.57 |
| 2005 | 487491 | 24261 | 4.97 |
| 2006 | 371713 | 21991 | 5.91 |

ಮೂಲ: ಈ.ಎಮ್.ಐ.ಎಸ್. ಗುಲಬರ್ಗಾ 2001 ನಿಂದ 2006 ಮತ್ತು ಕರ್ನಾಟಕ ಮಾನವ ಅಭಿವೃದ್ಧಿ ವರದಿ: 2005

ಕಾರ್ಯಕ್ರಮ, ಬಾ ಮರಳಿ ಶಾಲೆಗೆ, ಬಾ ಬಾಲೆ ಶಾಲೆಗೆ, ಕೂಲಿಯಿಂದ ಶಾಲೆಗೆ, ಬೀದಿಯಿಂದ ಶಾಲೆಗೆ, ವಿಶೇಷ ದಾಖಲಾತಿ ಅಭಿಯಾನ ಮುಂತಾದವುಗಳು ಕಾರಣಗಳಾಗಿವೆ. ಇದಕ್ಕೆ ಸಂಬಂಧಿಸಿದ ಪ್ರವೃತ್ತಿಯನ್ನು ಕೋಷ್ಟಕ–3.13ರಲ್ಲಿ ತೋರಿಸಲಾಗಿದೆ.

ಶಾಲೆಯಿಂದ ಹೊರಗಿರುವ ಮಕ್ಕಳು ಎರಡು ಗುಂಪುಗಳಿಗೆ ಸೇರಿರುತ್ತರೆ. ಮೊದಲನೆಯದು ದಾಖಲಾಗದ ಮಕ್ಕಳು. ಎರಡನೆಯದು ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳು. ಈ ಎರಡು ಗುಂಪಿನಲ್ಲಿನ ಮಕ್ಕಳ ಪ್ರಮಾಣ ಕಡಿಮೆಯಾಗುತ್ತಿದೆ. ಶಾಲೆಯಿಂದ ಹೊರಗಿರುವ ಮಕ್ಕಳ ಪ್ರಮಾಣವು 2001ರಲ್ಲಿನ ಶೇ. 24.37ರಿಂದ 2006ರಲ್ಲಿ ಶೇ. 5.91ಕ್ಕಿಳಿದಿದೆ.

ಪ್ರಾದೇಶಿಕ ಅಸಮಾನತೆಯ ಅಧ್ಯಯನ ಉನ್ನತಾಧಿಕಾರ ಸಮಿತಿಯ ವರದಿ ಪ್ರಕಾರ ಶೋರಾಪುರ (ಶೇ. 36.50), ಯಾದಗೀರ್ (35.67), ಶಹಾಪುರ (ಶೇ. 27.9), ಸೇಡಮ್ (25.60) ಮತ್ತು ಜೇವರ್ಗಿ (ಶೇ. 25.08) ತಾಲ್ಲೂಕುಗಳಲ್ಲಿ ಶಾಲೆಯಿಂದ್ ಹೊರಗಿರುವ ಮಕ್ಕಳ ಪ್ರಮಾಣ ಅಧಿಕ. ಆದರೆ ಈ ಪ್ರಮಾಣವು ಇತ್ತೀಚಿನ ವರ್ಷಗಳಲ್ಲಿ ಎನ್.ಜಿ.ಒ.ಗಳ ಮತ್ತು ಸ್ವಸಹಾಯ ಸಂಘಗಳ ಮಧ್ಯ ಪ್ರವೇಶದಿಂದಾಗಿ ಕಡಿಮೆಯಾಗುತ್ತಿದೆ. ಮಕ್ಕಳು ಶಾಲೆಗೆ ದಾಖಲಾಗದಿರುವುದಕ್ಕೆ ಮತ್ತು ಮಕ್ಕಳು ಮಧ್ಯದಲ್ಲಿ ಶಾಲೆಯನ್ನು ಬಿಡುವುದಕ್ಕೆ ಅನೇಕ ಕಾರಣಗಳಿವೆ ಮತ್ತು ಅವು ಸಂಕೀರ್ಣವಾಗಿವೆ. ಮಕ್ಕಳ 2003ರ ಗಣತಿ ಪ್ರಕಾರ ಮನೆಕಾರ್ಯ ಕಾರಣದಿಂದಾಗಿ 12131 ಮಕ್ಕಳು ಶಾಲೆಗೆ ದಾಖಲಾಗಿರಲಿಲ್ಲ ಅಥವಾ ಶಾಲೆಯನ್ನು ಮಧ್ಯದಲ್ಲಿ ಬಿಟ್ಟಿದ್ದಾರೆಂಬುದು ತಿಳಿದು ಬಂದಿದೆ. ಯಾದಗೀರ್ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ಇದರ ಪ್ರಮಾಣ ಅಧಿಕ. ಬಾಲ ಕಾರ್ಮಿಕ ವ್ಯವಸ್ಥೆಯು ಇದಕ್ಕೆ ಕಾರಣವಾಗಿದೆ. ಬಾಲಕಾರ್ಮಿಕರ ಪ್ರಮಾಣವು ಶಹಾಪುರ, ಗುಲಬರ್ಗಾ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಹೆಚ್ಚಿಗೆ ಕಂಡು ಬರುತ್ತಾರೆ. ಇದಕ್ಕೆ ಮತ್ತೊಂದು ಕಾರಣವಾಗಿರುವ ಸಂಗತಿಯೆಂದರೆ ಜನರ ವಲಸೆ. ಈ ಕಾರಣದಿಂದಾಗಿ ಶೋರಾಪುರ ಮತ್ತು ಶಹಾಪುರ ತಾಲ್ಲುಕುಗಳಲ್ಲಿ ಶಾಲೆಯನ್ನು ಸೇರದ ಅಥವಾ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣ ಅಧಿಕ. ಗುಲಬರ್ಗಾ ತಾಲ್ಲೂಕಿನಲ್ಲಿ ಎಳೆ ಕೂಸುಗಳನ್ನು ಮನೆಯಲ್ಲಿ ನೋಡಿಕೊಳ್ಳುವ ಕಾರಣದಿಂದಾಗಿ ಬಾಲಕಿಯರು ಶಾಲೆಯನ್ನು ಸೇರುತ್ತಿಲ್ಲ ಅಥವಾ ಶಾಲೆಯನ್ನು

ಕೋಷ್ಟಕ 3.14

## ವಿವಿಧ ಕಾರ್ಯತಂತ್ರಗಳ ಅಡಿಯಲ್ಲಿ ಮಕ್ಕಳ ದಾಖಲಾತಿ

| ತಾಲ್ಲೂಕು | ವಿಶೇಷ ದಾಖಲಾತಿ ಆಂದೋಲನ | ಟೆಂಟ್ ಶಾಲೆಗಳು | ಚಿನ್ನರ ಅಂಗಳ | ಪೂರಕ ಬೋಧನೆ |
|---|---|---|---|---|
| ಅಫಜಲಪುರ | 245 | 58 | 924 | 6160 |
| ಆಳಂದ್ | 231 | 175 | 1433 | 6160 |
| ಚಿಂಚೋಳಿ | 255 | 198 | 638 | 6160 |
| ಚಿತ್ತಾಪುರ | 290 | 206 | 853 | 6160 |
| ಗುಲಬರ್ಗಾ | 280 | 320 | 985 | 12361 |
| ಜೇವರ್ಗಿ | 243 | 120 | 1061 | 6160 |
| ಸೇಡಮ್ | 213 | 58 | 1274 | 6160 |
| ಶಹಾಪುರ | 243 | 315 | 513 | 6160 |
| ಶೋರಾಪುರ | 195 | 120 | 401 | 6160 |
| ಯಾದಗೀರ್ | 205 | 190 | 1286 | 6160 |
| **ಒಟ್ಟು** | **2400** | **1760** | **9368** | **67801** |

ಮೂಲ: ಈ.ಎಮ್.ಐ.ಎಸ್. : 2005–06.

ಮಧ್ಯದಲ್ಲಿ ಬಿಡುತ್ತಿದ್ದಾರೆ. ಇದರ ಜೊತೆಗೆ ಕಲಿಯುವುದರಲ್ಲಿ ಮಂದಗತಿಯಲ್ಲಿರುವ ಮಕ್ಕಳು ಕೂಡ ಶಾಲೆಯನ್ನು ಮಧ್ಯದಲ್ಲಿ ಬಿಡುತ್ತಾರೆ. ಶಾಲೆಯನ್ನು ಮಧ್ಯದಲ್ಲಿ ಬಿಡುವುದಕ್ಕೆ ಮುಖ್ಯ ಕಾರಣವಾಗಿರುವ ಎರಡು ಸಂಗತಿಯೆಂದರೆ ಮನೆ ಕೆಲಸ ಮತ್ತು ಜೀವನಾಧಾರಕ್ಕೆ ದುಡಿಯಬೇಕಾದ ಅನಿವಾರ್ಯತೆ. ಬಾಲಕಿಯರಲ್ಲಿ ಶೇ. 40ರಷ್ಟು ಮನೆ ಕೆಲಸ ಕಾರಣಕ್ಕಾಗಿ ಶಾಲೆಯನ್ನು ಮಧ್ಯದಲ್ಲಿ ಬಿಟ್ಟು ಬಿಡುತ್ತಾರೆ. ಏಕೆಂದರೆ ಅವರು ಮನೆಗಳಲ್ಲಿ ಎಳೆ ಕೂಸುಗಳನ್ನು ನೋಡಿಕೊಳ್ಳಬೇಕಾಗುತ್ತದೆ ಮತ್ತು ಮನೆ ಕೆಲಸ ಹಾಗೂ ಮನೆಯ ಹೊಲ-ತೋಟಗಳಲ್ಲಿ ದುಡಿಯುವುದು ಅವರಿಗೆ ಅನಿವಾರ್ಯವಾಗಿರುತ್ತದೆ.

ಶಾಲೆಯಿಂದ ಹೊರಗಿರುವ ಮಕ್ಕಳನ್ನು ಮತ್ತೆ ಶಾಲಾವಾಹಿನಿಯೊಳಗೆ ಸೇರಿಸಲು ಅನೇಕ ಕಾರ್ಯಕ್ರಮಗಳನ್ನು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಅನುಷ್ಠಾನಗೊಳಿಸಲಾಗಿದೆ. ಶಾಲೆಗೆ ಹೋಗುವ ಮಕ್ಕಳು 20ಕ್ಕಿಂತ ಕಡಿಮೆಯಿರುವ ವಸತಿ ತಾಣಗಳಲ್ಲಿ ಶಿಕ್ಷಣ ಖಾತ್ರಿ ಯೋಜನೆಯಡಿಯಲ್ಲಿ ಶಾಲೆಯನ್ನು ಆರಂಭಿಸಲು ಅವಕಾಶ ನೀಡಲಾಗಿದೆ. ವಸತಿಯುತ ಮತ್ತು ವಸತಿರಹಿತ ಸೇತುಬಂಧ ಕಾರ್ಯಕ್ರಮವನ್ನು ಜಾರಿಗೊಳಿಸಲಾಗಿದೆ. ವಿಶೇಷ ದಾಖಲಾತಿ ಅಭಿಯಾನಗಳನ್ನು ಸಂಘಟಿಸಲಾಗುತ್ತಿದೆ, ವಲಸೆ ಹೋದ ಪಾಲಕರ ಮಕ್ಕಳಿಗಾಗಿ ಟೆಂಟ್ ಶಾಲೆಗಳನ್ನು ತೆರೆಯಲಾಗಿದೆ. ಹೀಗೆ ಅನೇಕ ಕಾರ್ಯಗಳನ್ನು ಅನುಷ್ಠಾನಗೊಳಿಸಲಾಗಿದೆ. ಇದರಲ್ಲಿ ಪ್ರಮುಖ ಕಾರ್ಯಕ್ರಮವಾದ ಚಿಣ್ಣರ ಅಂಗಳದ ಮೂಲಕ 2002-2006ರ ಅವಧಿಯಲ್ಲಿ 55764 ಶಾಲೆಯಿಂದ ಹೊರಗಿದ್ದ ಮಕ್ಕಳನ್ನು ಮತ್ತೆ ಶಾಲಾವಾಹಿನಿಗೆ ಸೇರಿಸಲಾಗಿದೆ.

ಕೋಷ್ಟಕ 3.15

### ವಿವಿಧ ಕಾರ್ಯತಂತ್ರಗಳ ಮೂಲಕ ಶಾಲಾವಾಹಿನಿಗೆ ಮಕ್ಕಳ ಸೇರ್ಪಡೆ

| ವಿವರಗಳು | ಬಾಲಕರು | ಬಾಲಕಿಯರು | ಒಟ್ಟು |
|---|---|---|---|
| ಶಿ.ಖಾ.ಯೋ : ಕಿ.ಪ್ರಾ.ಶಾ. | 138 | 87 | 225 |
| ಸೇತುಬಂಧ (ಆರು ತಿಂಗಳು) | 213 | 199 | 412 |
| ನಾಲ್ಕು ತಿಂಗಳ ಋತುಮಾನ ವಸತಿಯುತ ಶಾಲೆಗಳು | 124 | 100 | 224 |
| ಸೇತುಬಂಧ – ಚಿಣ್ಣರ ಅಂಗಳ(ವಸತಿ ರಹಿತ) | 4414 | 4954 | 9368 |
| ವಿಶೇಷ ದಾಖಲಾತಿ ಆಂದೋಲನ | 1378 | 1022 | 2400 |
| ಟೆಂಟ್ ಶಾಲೆಗಳು | 897 | 863 | 1760 |
| ಇತರೆ ಕ್ರಮಗಳು | 1826 | 2257 | 4083 |
| **ಒಟ್ಟು** | **8990** | **9482** | **18472** |

ಮೂಲ: ಈ.ಎಮ್.ಐ.ಎಸ್. : 2005-06.

ಚೌಕಟ್ಟು 3.1

### ಪ್ರಾಥಮಿಕ ಶಿಕ್ಷಣ – ಗುಲಬರ್ಗಾ ಜಿಲ್ಲೆ ಅಧ್ಯಯನವೊಂದರ ತಥ್ಯಗಳು

ಪ್ರಾಥಮಿಕ ಶಾಲಾ ದೊರೆಯುವಿಕೆ, ಶಾಲಾ ಹಾಜರಾತಿ ಮತ್ತು ಶಾಲಾ ಗುಣಮಟ್ಟ ಕುರಿತ ಅಧ್ಯಯನವೊಂದರ ಮುಖ್ಯ ತಥ್ಯಗಳು ಹೀಗಿವೆ:

- ಪ್ರಾಥಮಿಕ ಶಾಲೆಗಳಲ್ಲಿ ಹಾಜರಾತಿಯು ಅತ್ಯಧಿಕವಾಗಿದೆ. ಗ್ರಾಮೀಣ ಗುಲಬರ್ಗಾ ತಾಲ್ಲೂಕಿನಲ್ಲಿ 5 ರಿಂದ 15 ವರ್ಷದೊಳಗಿನ ಪ್ರತಿ ಮೂರು ಮಕ್ಕಳಲ್ಲಿ ಇಬ್ಬರು ಶಾಲೆಗೆ ಹಾಜರಾಗುತ್ತಿದ್ದಾರೆ.
- ಬಾಲಕರು ಮತ್ತು ಬಾಲಕಿಯರ ನಡುವಿನ ಹಾಜರಾತಿಯಲ್ಲಿ ವ್ಯತ್ಯಾಸ ಕಂಡು ಬರುವುದಿಲ್ಲ ಮತ್ತು ಇಬ್ಬರ ದಾಖಲಾತಿಯು ಉನ್ನತ ತರಗತಿಗಳಿಗೆ ಸಾಗಿದಂತೆ ಕಡಿಮೆಯಾಗುತ್ತದೆ ಹಾಗೂ ಕಿರಿಯ ಪ್ರಾಥಮಿಕ ಶಾಲೆಯಿಂದ ಹಿರಿಯ ಪ್ರಾಥಮಿಕ ಶಾಲೆಗೆ ತೆರಳಿದಾಗ ದಾಖಲಾತಿಯು ಕಡಿಮೆಯಾಗುತ್ತದೆ.
- ಶಾಲೆಯಲ್ಲಿದ್ದ ಮಕ್ಕಳು ಸಾಮಾನ್ಯವಾಗಿ ಮನೆ ಕೆಲಸದಲ್ಲಿ ನಿರತರಾಗಿರುತ್ತಾರೆ ಅಥವಾ ಸ್ವಂಯ ಹೊಲ-ತೋಟಗಳಲ್ಲಿ ದುಡಿಯುತ್ತಿರುತ್ತಾರೆ.
- ಶಾಲೆಗೆ ಮಕ್ಕಳು ದಾಖಲಾಗುವ ಪ್ರಮಾಣವು ಯಾವಾಗ ಅಧಿಕವಾಗಿರುತ್ತದೆಯೆಂದರೆ ಶಾಲೆಯು ಒಂದು ಕಿ.ಮೀ.ನ ವ್ಯಾಪ್ತಿಯಲ್ಲಿದ್ದಾಗ

ಮಾತ್ರ. ಸರ್ಕಾರಿ ಶಾಲೆಗಳಲ್ಲಿ ಶೇ. 90ರಷ್ಟು ಮಕ್ಕಳು ದಾಖಲಾಗುತ್ತಾರೆ.

- ಶಾಲೆಗೆ ಗೈರು ಹಾಜರಾಗುವ ಪ್ರಮಾಣವು ಬಹಳ ಕಡಿಮೆ. ಪ್ರತಿ ಮೂವರು ವಿದ್ಯಾರ್ಥಿಗಳಲ್ಲಿ ಇಬ್ಬರು ಶಾಲೆಗೆ ಹಾಜರಾಗುತ್ತಾರೆ ಅಥವಾ ಐದು ದಿನಕ್ಕಿಂತ ಕಡಿಮೆ ದಿನಗಳು ಶಾಲೆಗೆ ಗೈರುಹಾಜರಾಗುತ್ತಾರೆ.
- ಸರ್ಕಾರದ ಪ್ರೋತ್ಸಾಹದಾಯಕ ಯೋಜನೆಗಳು ಶಾಲಾ ದಾಖಲಾತಿ ಉತ್ತಮಗೊಳ್ಳಲು ಸಹಾಯಕವಾಗಿವೆ. ಸರಿಸುಮಾರು ಶೇ. 80 ರಷ್ಟು ಅರ್ಹರಾದ ಮಕ್ಕಳು ಉಚಿತ ಪಡಿತರ, ಪಠ್ಯಪುಸ್ತಕಗಳು, ಸಮವಸ್ತ್ರಗಳನ್ನು ಪಡೆಯುತ್ತಿದ್ದಾರೆ.
- ಆದರೆ ಕೆಲವು ತಾಲ್ಲೂಕುಗಳಲ್ಲಿ ಪರಿಸ್ಥಿತಿಯು ಆಶಾದಾಯಕವಾಗಿಲ್ಲ. ಶೋರಾಪುರ ಮತ್ತು ಯಾದಗೀರ್ ತಾಲ್ಲುಕುಗಳಲ್ಲಿ ಶಿಕ್ಷಣದ ಸ್ಥಿತಿಯು ಅತ್ಯಂತ ಹೀನಾಯ ಸ್ಥಿತಿಯಲ್ಲಿದೆ. ಅದು ದಾಖಲಾತಿಯಿರಲಿ, ಹಾಜರಾತಿಯಿರಲಿ, ಪಡಿತರ ಪಡೆಯುವುದಾಗಲಿ ಎಲ್ಲದರಲ್ಲೂ ಅವುಗಳ ಸಾಧನೆ ಕೆಳಮಟ್ಟದಲ್ಲಿದೆ. ಶಹಾಪುರ ತಾಲ್ಲೂಕಿನಲ್ಲಿ ಮಾತ್ರ ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿಯು ಉತ್ತಮವಾಗಿದೆ.
- ಮತ್ತೊಂದು ಗಮನಿಸಬೇಕಾದ ತಾಲ್ಲುಕೆಂದರೆ ಚಿತ್ತಾಪುರ. ಅಲ್ಲಿ ದಾಖಲಾತಿ ಮತ್ತು ಹಾಜರಾತಿ ಅತಿ ಕಡಿಮೆ. ಇಲ್ಲಿ ಮಕ್ಕಳು ರೈಲಿನಲ್ಲಿ ಪ್ರಯಾಣ ಮಾಡುತ್ತಾರೆ. ಸರ್ಕಾರದ ಬೆಂಬಲವನ್ನು ಸಂಪೂರ್ಣವಾಗಿ ಪಡೆಯುತ್ತಿಲ್ಲ.
- ಜನರು ಶಾಲೆಗಳಲ್ಲಿನ ಶೌಚಾಲಯ ಮತ್ತು ಕುಡಿಯುವ ನೀರಿನ ವ್ಯವಸ್ಥೆ ಬಗ್ಗೆ ಅಸಮಧಾನ ವ್ಯಕ್ತಪಡಿಸುತ್ತಿದ್ದಾರೆ. ಇದು ಶಹಾಪುರ ತಾಲ್ಲೂಕಿನಲ್ಲಿ ಎದ್ದು ಕಾಣುತ್ತದೆ. ಇಲ್ಲಿ ಜನರು ಶಾಲಾ ಕಟ್ಟಡದ ಬಗ್ಗೆ, ಪಠ್ಯ ಪುಸ್ತಕಗಳ ಗುಣಮಟ್ಟದ ಬಗ್ಗೆ ಮತ್ತು ಸಮವಸ್ತ್ರಗಳ ಬಗ್ಗೆ ಅಸಮಧಾನ ಹೊಂದಿದ್ದಾರೆ.
- ಯಾವ ಹಳ್ಳಿಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಇರುತ್ತದೋ ಅಲ್ಲಿ ಶಾಲಾ ಶಿಕ್ಷಣದ ಗುಣಮಟ್ಟ ಉತ್ತಮವಾಗಿರುವುದು ಕಂಡು ಬರುತ್ತದೆ.

(ಮೂಲ: ಜೈನ್ ಮೊನಿಕ 2003 ' ಕರ್ನಾಟಕದಲ್ಲಿ ಕುಡಿಯುವ ನೀರಿನ ಪೂರೈಕೆ ಮತ್ತು ಪ್ರಾಥಮಿಕ ಶಿಕ್ಷಣ : ಗುಲಬರ್ಗಾ ಜಿಲ್ಲೆಯ ಅಧ್ಯಯನದ ಪ್ರಧಾನ ತಥ್ಯಗಳು' ವಿಶ್ವಬ್ಯಾಂಕಿನ ಅಧ್ಯಯನ)

ಕೋಷ್ಟಕ 3.16

## ಶಾಲಾ ಹೊರಗಿರುವ ಮಕ್ಕಳನ್ನು ಶಾಲಾವಾಹಿನಿಗೆ ಸೇರಿಸಿರುವ ಮಕ್ಕಳ ಸಂಖ್ಯೆ

| ತಾಲ್ಲೂಕು | ಶಾಲಾ ಹೊರಗಿರುವ ಮಕ್ಕಳು –2005 | | | ಶಾಲಾವಾಹಿನಿಗೆ ಸೇರಿಸಿರುವ ಮಕ್ಕಳ ಸಂಖ್ಯೆ | | | ಶಾಲಾ ಹೊರಗೆ ಉಳಿದ ಮಕ್ಕಳು | | |
|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ಅಫಜಲಪುರ | 746 | 871 | 1617 | 660 | 668 | 1328 | 86 | 203 | 289 |
| ಅಳಂದ್ | 883 | 842 | 1725 | 1222 | 1195 | 2417 | –339 | –353 | –692 |
| ಚಿಂಚೋಳಿ | 141 | 863 | 2204 | 935 | 721 | 1656 | 406 | 142 | 548 |
| ಚಿತ್ತಾಪುರ | 1328 | 1394 | 2722 | 845 | 1015 | 1860 | 483 | 379 | 862 |
| ಗುಲಬರ್ಗಾ | 1025 | 1079 | 2104 | 1091 | 1093 | 2184 | –66 | □14 | –80 |
| ಜೇವರ್ಗಿ | 908 | 1088 | 1996 | 915 | 952 | 1867 | –7 | 136 | 129 |
| ಸೇಡಮ್ | 1114 | 1236 | 2350 | 1044 | 1061 | 2105 | 70 | 175 | 245 |
| ಶಹಾಪುರ | 1870 | 2196 | 4066 | 724 | 924 | 1648 | 1146 | 1272 | 2418 |
| ಶೋರಾಪುರ | 627 | 743 | 1370 | 575 | 668 | 1243 | 52 | 75 | 127 |
| ಯಾದಗೀರ್ | 1851 | 2078 | 3929 | 979 | 1185 | 2164 | 872 | 893 | 1765 |
| **ಒಟ್ಟು** | **11693** | **12390** | **24083** | **8990** | **9482** | **18472** | **2703** | **2908** | **5611** |

ಮೂಲ: ಈ.ಎಮ್.ಐ.ಎಸ್. : 2004–05

## ಪ್ರೌಢ ಶಿಕ್ಷಣ

ಜಿಲ್ಲೆಯಲ್ಲಿ 485 ಪ್ರೌಢಶಾಲೆಗಳಿವೆ. ಇತ್ತೀಚಿಗೆ ಪ್ರೌಢಶಾಲೆಗಳ ಸಂಖ್ಯೆ ಹೆಚ್ಚಾಗುತ್ತಿದೆ. ಜಿಲ್ಲೆಯಲ್ಲಿ 1999ರಲ್ಲಿ 87 ಪ್ರೌಡಶಾಲೆಗಳಿದ್ದವು. ಆದರೆ 2005-06ರಲ್ಲಿ ಅವುಗಳ ಸಂಖ್ಯೆ 396 ಕ್ಕೇರಿದೆ. ಇಂದು ಅಲ್ಲಿ 485 ಪ್ರೌಢಶಾಲೆಗಳಿವೆ. ಅವುಗಳಲ್ಲಿ ಶೇ. 59.4 ಸರ್ಕಾರಿ ಪ್ರೌಢಶಾಲೆಗಳಾದರೆ ಶೇ. 27.3 ಅನುದಾನೇತರ ಶಾಲೆಗಳು. ಅನುದಾನ ಪಡೆಯುತ್ತಿರುವ ಖಾಸಗಿ ಶಾಲೆಗಳ ಪ್ರಮಾಣ ಶೇ. 11.7. ಉಳಿದವು ಇತರೆ ಪ್ರಕಾರಕ್ಕೆ ಸೇರುತ್ತವೆ. ಒಟ್ಟು ಪ್ರೌಢಶಾಲೆಗಳಲ್ಲಿ ಶೇ. 71 ಗ್ರಾಮೀಣ ಪ್ರದೇಶದಲ್ಲಿವೆ. ಗ್ರಾಮೀಣ ಪ್ರದೇಶದಲ್ಲಿ ಪ್ರೌಢಶಾಲೆಗಳು ಸಮಾನವಾಗಿ ವಿತರಣೆಯಾಗಿರುವುದು ಕಂಡು ಬರುತ್ತದೆ.

ತಾಲ್ಲೂಕು-ತಾಲ್ಲೂಕುಗಳ ನಡುವೆ ಪ್ರೌಢಶಾಲೆಗಳು ಸಮಾನವಾಗಿ ಜನಸಂಖ್ಯೆಗನುಗುಣವಾಗಿ ವಿತರಣೆಯಾಗಿರುವುದು ಕಂಡು ಬರುವುದಿಲ್ಲ. ಅತ್ಯಧಿಕ ಪ್ರೌಢಶಾಲೆಗಳು (34) ಅಳಂದ್ ತಾಲ್ಲೂಕಿನಲ್ಲಿವೆ. ಅತಿ ಕಡಿಮೆ (15) ಯಾದಗೀರ್ ತಾಲ್ಲೂಕಿನಲ್ಲಿವೆ. ಪ್ರೌಢ ಶಿಕ್ಷಣಕ್ಕೆ ಸಂಬಂಧಿಸಿದಂತೆ ಖಾಸಗಿ ರಂಗದ ಸಹಭಾಗಿತ್ವ ಅಧಿಕವಾಗಿದೆ.

ಚೌಕಟ್ಟು 3.2

| ಪ್ರೌಢ ಶಿಕ್ಷಣ – ಚಾರಿತ್ರಿಕ ಹಿನ್ನೆಲೆ |
|---|
| ಗುಲಬರ್ಗಾದಲ್ಲಿ ಮೊದಲನೆಯ ಪ್ರೌಢಶಾಲೆಯನ್ನು 1885ರಲ್ಲಿ ಸ್ಥಾಪಿಸಲಾಯಿತು. ಅಲ್ಲಿಂದ ಪ್ರೌಢಶಾಲಾ ಶಿಕ್ಷಣ ಜಿಲ್ಲೆಯಲ್ಲಿ ಆರಂಭವಾಯಿತು. ಪ್ರೌಢಶಾಲಾ ಶಿಕ್ಷಣವು ಮೂರು ವರ್ಷದ ಅಭ್ಯಾಸವಾಗಿದೆ. ಇಲ್ಲಿ ಶಾಲಾ ಪ್ರಕ್ರಿಯೆಯ ಅವಧಿ 10 ವರ್ಷಗಳು. |

**ಒಟ್ಟು ದಾಖಲಾತಿಯಲ್ಲಿ ಪ.ಜಾ. ಮಕ್ಕಳ ದಾಖಲಾತಿ ಪ್ರಮಾಣ ಶೇ. 14.58. ಬಾಲಕಿಯರ ದಾಖಲಾತಿಯು ಬಾಲಕರ ದಾಖಲತಿಯ ಶೇ. 59.67ರಷ್ಟಿದೆ. ಇಲ್ಲಿ ವಿಪರೀತವಾದ ಲಿಂಗ ಸಂಬಂಧಿ ಅಸಮಾನತೆಯಿದೆ. ಅದರ ಪ್ರಮಾಣ ಶೇ. 40.33 ರಷ್ಟಿದೆ. ಒಟ್ಟು ದಾಖಲಾತಿಯಲ್ಲಿ ಪ.ಪಂ ಮಕ್ಕಳ ದಾಖಲಾತಿಯು ಶೇ. 2.49. ಇಲ್ಲಿ ಲಿಂಗಸಂಬಂಧಿ ಅಸಮಾನತೆಯ ಪ್ರಮಾಣ ಅಧಿಕವಾಗಿದೆ. ಬಾಲಕಿಯರ ದಾಖಲಾತಿಯು ಬಾಲಕರ ದಾಖಲಾತಿಯ ಶೇ. 56.11.ರಷ್ಟಿದೆ.**

ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿಯು ಅಧಿಕವಾಗುತ್ತಿರುವುದರಿಂದ ಪ್ರೌಢಶಾಲೆಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಈ ಏರಿಕೆಯು ತೀವ್ರ ಸ್ವರೂದಲ್ಲಿಲ್ಲ. ಪ್ರೌಢಶಾಲೆಗಳಲ್ಲಿನ ದಾಖಲಾತಿಯು 1986-87ರಲ್ಲಿ 47285 ರಷ್ಟಿದ್ದದ್ದು 2005-06ರಲ್ಲಿ 77895ಕ್ಕೇರಿತು. ಗುಲಬರ್ಗಾ ಶೈಕ್ಷಣಿಕ ಜಿಲ್ಲೆಯಲ್ಲಿನ ಅಫಜಲಪುರ, ಅಳಂದ್, ಚಿಂಚೋಳಿ, ಚಿತ್ತಾಪುರ. ಗುಲಬರ್ಗಾ, ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿನ ದಾಖಲಾತಿಯು 52686ರಷ್ಟಿದ್ದರೆ ಯಾದಗೀರ್ ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ದಾಖಲಾತಿ 25209. ಒಟ್ಟು ದಾಖಲಾತಿಯಲ್ಲಿ ಯಾದಗೀರ್‌ನ ಪಾಲು ಕೇವಲ ಶೇ. 32.31.ಆದರೆ ಇದರ ಜನಸಂಖ್ಯೆಯಲ್ಲಿನ ಪಾಲು ಶೇ. 36.8. ಅದು ಜನಸಂಖ್ಯೆಗೆ ಸಂಬಂಧಿಸಿದಂತೆ ಏನು ಪಾಲು ಪಡೆದಿದೆಯೋ ಅದಕ್ಕಿಂತ ಕಡಿಮೆ ಪಾಲನ್ನು ಪ್ರೌಢಶಾಲಾ ದಾಖಲಾತಿಯಲ್ಲಿ ಪಡೆದಿದೆ. ಇಲ್ಲಿ ಬಾಲಕಿಯರ ಪಾಲು ಶೇ. 44.22. ಅವರ ದಾಖಲಾತಿಯು ಬಾಲಕರ ದಾಖಲಾತಿಯ ಶೇ. 78.94ರಷ್ಟಿದೆ. ಇಲ್ಲಿ ಲಿಂಗ ಅಸಮಾನತೆ ಶೇ. 21.06ರಷ್ಟು ಉಳಿದಿದೆ. ಈ ಅಂತರ ಯಾದಗೀರ್ ಜಿಲ್ಲೆಯಲ್ಲಿ ಅಧಿಕವಾಗಿದೆ. ಅಲ್ಲಿ ಬಾಲಕಿಯರ ದಾಖಲಾತಿ ಪ್ರಮಾಣ ಬಾಲಕರ ದಾಖಲಾತಿ ಪ್ರಮಾಣದ ಶೇ. 71.55 ರಷ್ಟಿದೆ. ದಾಖಲಾತಿಯಲ್ಲಿ ಲಿಂಗ ಸಂಬಂಧಿ ಅಸಮಾನತೆಯು ಶೇ. 28.45 ಅಂಶಗಳಷ್ಟಿದೆ. ಸರ್ವ ಶಿಕ್ಷಣ ಅಭಿಯಾನದ ಮೂಲಕ ಸಾಕಷ್ಟು ಸಾಧನೆ ಮಾಡಿದ್ದರೂ ಲಿಂಗ ಸಂಬಂಧಿ ಅಸಮಾನತೆಯು ಮುಂದುವರಿದಿದೆ.

ಒಟ್ಟು ದಾಖಲಾತಿಯಲ್ಲಿ ಪ.ಜಾ. ಮಕ್ಕಳ ದಾಖಲಾತಿ ಪ್ರಮಾಣ ಶೇ. 14.58. ಬಾಲಕಿಯರ ದಾಖಲಾತಿಯು ಬಾಲಕರ ದಾಖಲತಿಯ ಶೇ. 59.67ರಷ್ಟಿದೆ. ಇಲ್ಲಿ ವಿಪರೀತವಾದ ಲಿಂಗ ಸಂಬಂಧಿ ಅಸಮಾನತೆಯಿದೆ. ಅದರ ಪ್ರಮಾಣ ಶೇ. 40.33 ರಷ್ಟಿದೆ. ಒಟ್ಟು ದಾಖಲಾತಿಯಲ್ಲಿ ಪ.ಪಂ ಮಕ್ಕಳ ದಾಖಲಾತಿಯು ಶೇ. 2.49. ಇಲ್ಲಿ ಲಿಂಗಸಂಬಂಧಿ ಅಸಮಾನತೆಯ ಪ್ರಮಾಣ ಅಧಿಕವಾಗಿದೆ. ಬಾಲಕಿಯರ ದಾಖಲಾತಿಯು ಬಾಲಕರ ದಾಖಲಾತಿಯ ಶೇ. 56.11.ರಷ್ಟಿದೆ.

ಶಿಕ್ಷಣದ ಸಾರ್ವತ್ರೀಕರಣ ಉದ್ದೇಶಕ್ಕನುಗುಣವಾಗಿ ಸರ್ಕಾರವು ಪ್ರಾಥಮಿಕ ಶಿಕ್ಷಣವನ್ನು ಒದಗಿಸುವ ದಿಶೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ. ಪ್ರೌಢ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಖಾಸಗಿ ವಲಯವು ಪ್ರವೇಶಿಸುತ್ತಿದೆ. ಗುಲಬರ್ಗಾ ತಾಲ್ಲೂಕಿನಲ್ಲಿ ಪ್ರೌಢಶಾಲೆಗಳಿಗೆ ಸಂಬಂಧಿಸಿದಂತೆ ಖಾಸಗಿ ಸಂಸ್ಥೆಗಳ ಪ್ರಮಾಣವು 52.6ರಷ್ಟಾಗಿದೆ.

ಕೋಷ್ಟಕ 3.17

## ಪ್ರೌಢ ಶಾಲಾ ದಾಖಲಾತಿ - 2006

| ವಿಭಾಗಗಳು | ದಾಖಲಾತಿ | | | ಪ.ಜಾ. | | | ಪ.ಪಂ. | | |
|---|---|---|---|---|---|---|---|---|---|
| | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| ಗುಲಬರ್ಗಾ | 28835 (54.73) | 23851 (45.27) | 52686 (100.00) | 4758 (16.50) | 3185 (13.35) | 7943 (15.07) | 172 (0.59) | 115 (0.48) | 287 (0.54) |
| ಯಾದಗೀರ್ | 14695 (58.29) | 10514 (41.71) | 25209 (100.00) | 2356 (16.03) | 1060 (10.08) | 3416 (13.55) | 1070 (07.28) | 582 (05.53) | 1652 (06.55) |
| **ಒಟ್ಟು** | **43530 (55.88)** | **34365 (44.22)** | **77895 (100.00)** | **7114 (16.34)** | **4245 (12.35)** | **11359 (14.58)** | **1242 (02.85)** | **697 (02.02)** | **1939 (02.49)** |

ಅಳಂದ್ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲೂ ಖಾಸಗಿ ಸಂಸ್ಥೆಗಳು ಪ್ರೌಢಶಾಲೆಗಳನ್ನು ಹೆಚ್ಚಾಗಿ ಆರಂಭಿಸುತ್ತಿವೆ. ಈ ಸಂಸ್ಥೆಗಳು ಜಿಲ್ಲೆಯಲ್ಲಿ ಹೆಚ್ಚಾಗಿ ನಗರ ಪ್ರದೇಶಗಳಲ್ಲಿ ಕೇಂದ್ರೀಕರಣಗೊಂಡಿರುತ್ತವೆ. ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಜನರು ಸರ್ಕಾರಿ ಶಾಲೆಗಳನ್ನು ಅವಲಂಬಿಸಿಕೊಂಡಿದ್ದಾರೆ. ಖಾಸಗಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳ ಸ್ಥಿತಿಗತಿಯು ಸಾಪೇಕ್ಷವಾಗಿ ಚೆನ್ನಾಗಿರುತ್ತದೆ. ನಗರ ಪ್ರದೇಶದಲ್ಲಿ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಸಹಯೋಗದಿಂದಾಗಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವುದು ಸಾಧ್ಯವಾಗಿದೆ.

ಇಲ್ಲಿ ಮಕ್ಕಳ ಮತ್ತು ಶಿಕ್ಷಕರ ನಡುವಿನ ಅನುಪಾತ 34.2. ಇದರಿಂದ ಅಗತ್ಯಕ್ಕನುಗುಣವಾಗಿ ಶಿಕ್ಷಕರನ್ನು ನೇಮಿಸಿಕೊಳ್ಳಲಾಗುತ್ತಿದೆಯೆಂಬುದು ತಿಳಿಯುತ್ತದೆ. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಉತ್ತಮವಾದ ತರಬೇತಿಯನ್ನು ಶಿಕ್ಷಕರಿಗೆ ನೀಡುವುದರ ಮೂಲಕ ಮತ್ತು ಬೋಧನಾ ಉಪಕರಣಗಳನ್ನು ಹಾಗೂ ಪ್ರಯೋಗಾಲಯದ ಸೌಲಭ್ಯವನ್ನು ಒದಗಿಸುವುದರ ಮೂಲಕ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ಪ್ರಯತ್ನಿಸಲಾಗುತ್ತಿದೆ. ಇಷ್ಟಾದರೂ ಪ್ರೌಢಶಾಲಾ ಶಿಕ್ಷಣದ ಗುಣಮಟ್ಟವು ಸಾಕಷ್ಟು ಉತ್ತಮಗೊಂಡಿಲ್ಲ. ಇದರಿಂದಾಗಿ

ಕೋಷ್ಟಕ 3.18

## ಶಾಲಾ ಸೌಲಭ್ಯಗಳ ಲಭ್ಯತೆ – ಪ್ರೌಢ ಶಾಲೆಗಳು

| ತಾಲ್ಲೂಕು | ಸರ್ಕಾರಿ | ಅನುದಾನ ಪಡೆಯುತ್ತಿರುವ ಶಾಲೆಗಳು | ಅನುದಾನವಿಲ್ಲದ ಶಾಲೆಗಳು | ಒಟ್ಟು |
|---|---|---|---|---|
| ಅಫಜಲಪುರ | 22 | 08 | 04 | 34 (11.7) |
| ಅಳಂದ್ | 34 | 08 | 14 | 56 (25.0) |
| ಚಿಂಚೋಳಿ | 18 | 02 | 05 | 25 (20.0) |
| ಚಿತ್ತಾಪುರ | 24 | 09 | 19 | 52 (36.5) |
| ಗುಲಬರ್ಗಾ | 27 | 09 | 40 | 76 (52.6) |
| ಜೇವರ್ಗಿ | 25 | 03 | 09 | 37 (24.3) |
| ಸೇಡಮ್ | 22 | 03 | 05 | 30 (16.6) |
| ಶಹಾಪುರ | 24 | 03 | 05 | 32 (15.6) |
| ಶೋರಾಪುರ | 28 | 01 | 08 | 37 (21.6) |
| ಯಾದಗೀರ್ | 15 | 01 | 01 | 17 (05.8) |
| **ಒಟ್ಟು** | **239** | **47** | **170** | **396 (100)** |

ಮೂಲ: ಎಸ್.ಎಸ್.ಎ. : ಸಂಯೋಜಿತ ಅಂಕಿಅಂಶಗಳು 2006

ಎಸ್‌ಎಸ್‌ಎಲ್‌ಸಿ ಫಲಿತಾಂಶವು ರಾಜ್ಯದಲ್ಲೆ ಅತ್ಯಂತ ಕಡಿಮೆಯಿರುವ ಜಿಲ್ಲೆಗಳಲ್ಲಿ ಗುಲಬರ್ಗಾ ಜಿಲ್ಲೆ ಒಂದಾಗಿದೆ. ಮಕ್ಕಳು ಹೆಚ್ಚಾಗಿ ವಿಜ್ಞಾನ, ಗಣಿತ ಮತ್ತು ಇಂಗ್ಲೀಷ್‌ನಲ್ಲಿ ಫೇಲಾಗುತ್ತಿದ್ದಾರೆ. ಫಲಿತಾಂಶವು ಶೇ. 60ನ್ನು 2006ರವರೆಗೆ ಮೀರಿರಲಿಲ್ಲ. ಕಳೆದ ಎರಡು ವರ್ಷಗಳಿಂದ ಫಲಿತಾಂಶದಲ್ಲಿ ಸ್ವಲ್ಪ ಸುಧಾರಣೆ ಕಂಡು ಬಂದಿದೆ. (ನೋಡಿ: ಕೋಷ್ಟಕ-3.19)

ಕೋಷ್ಟಕ 3.19

**ಗುಲಬರ್ಗಾ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶ**

| ವರ್ಷಗಳು | ಹಾಜರಾದ ಮಕ್ಕಳು | | ತೇರ್ಗಡೆಯಾದ ಮಕ್ಕಳು | | ಶೇಕಡಾ ಪ್ರಮಾಣ (ಒಟ್ಟು) |
|---|---|---|---|---|---|
| | ಬಾಲಕರು | ಬಾಲಕಿಯರು | ಬಾಲಕರು | ಬಾಲಕಿಯರು | ಒಟ್ಟು |
| 2000-01 | 14600 | 9570 | 4242 | 3346 | 31.39 |
| 2002-03 | 11524 | 8637 | 4514 | 4102 | 43.33 |
| 2003-04 | 17920 | 12145 | 6705 | 5537 | 40.72 |
| 2004-05 | 12636 | 9849 | 5912 | 5502 | 50.76 |
| 2005-06 | 13339 | 10635 | 7158 | 6270 | 56.01 |
| 2006-07 | 13718 | 11028 | 8367 | 7713 | 64.67 |
| 2007-08 | 15288 | 12268 | 7883 | 8908 | 61.09 |

ಮೂಲ: ಡಿ.ಡಿ.ಪಿ.ಐ. ಗುಲಬರ್ಗಾ,



## ಉನ್ನತ ಶಿಕ್ಷಣ

ಜಿಲ್ಲೆಯಲ್ಲಿ 132 ಪದವಿಪೂರ್ವ ಕಾಲೇಜುಗಳಿವೆ. ಅವುಗಳಲ್ಲಿ 61 ಗುಲಬರ್ಗಾ ತಾಲ್ಲೂಕಿನಲ್ಲೇ ಮಡುಗಟ್ಟಿಕೊಂಡಿದ್ದರೆ ಉಳಿದ 71 ಮಿಕ್ಕ ತಾಲ್ಲೂಕುಗಳಲ್ಲಿ ಹರಡಿಕೊಂಡಿವೆ. ಈ ತರಗತಿಗಳಿಗೆ ದಾಖಲಾದ ಮಕ್ಕಳ ಸಂಖ್ಯೆ 35732. ಅವರಲ್ಲಿ 26933 ಬಾಲಕರಾಗಿದ್ದರೆ 8799 ಬಾಲಕಿಯರಿದ್ದಾರೆ. ಒಟ್ಟು ದಾಖಲಾತಿಯಲ್ಲಿ ಬಾಲಕಿಯರ ದಾಖಲಾತಿಯು ಕೇವಲ ಶೇ. 24.6. ಕಾಲೇಜುಗಳು ತಾಲ್ಲೂಕು ಕೇಂದ್ರದಲ್ಲಿ ನೆಲೆಗೊಂಡಿರುವುದು ಮತ್ತು ಅಲ್ಲಿ ವಿದ್ಯಾರ್ಥಿ ನಿಲಯಗಳು ಇಲ್ಲದಿರುವುದು ಇದಕ್ಕೆ ಪ್ರಮುಖ ಕಾರಣವಾಗಿದೆ.

ಜಿಲ್ಲೆಯಲ್ಲಿರುವ ಪದವಿ ಕಾಲೇಜುಗಳು 26. ಅವುಗಳಲ್ಲಿ 13 ಗುಲಬರ್ಗಾ ನಗರದಲ್ಲಿ ನೆಲೆಗೊಂಡಿವೆ. ಇವುಗಳಲ್ಲಿ ಹೆಚ್ಚಿನವು ಕಲಾ ವಿಭಾಗದ ಕಾಲೇಜುಗಳಾಗಿವೆ. ಶಿಕ್ಷಣದ ಗುಣಮಟ್ಟವು ನಿಧಾನವಾಗಿ ಸುಧಾರಿಸುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಸಾಧಿಸುತ್ತಿರುವ ಯಶಸ್ಸಿನಿಂದ ಇದನ್ನು ತಿಳಿದುಕೊಳ್ಳಬಹುದು. ಈ ದಿಶೆಯಲ್ಲಿ ವಿದ್ಯಾರ್ಥಿಗಳನ್ನು ತರಬೇತಿಗೊಳಿಸುವ ಸಂಸ್ಥೆಗಳ ಅಗತ್ಯವಿದೆ.

ಜಿಲ್ಲೆಯಲ್ಲಿ ನಾಲ್ಕು ಎಂಜಿನಿಯರಿಂಗ್ ಮತ್ತು ಎರಡು ವೈದ್ಯಕೀಯ ಕಾಲೇಜುಗಳು ಗುಲಬರ್ಗಾ ನಗರದಲ್ಲಿ ಸ್ಥಾಪನೆಗೊಂಡಿವೆ. ಇಲ್ಲಿ 75 ನರ್ಸಿಂಗ್ ಕಲೇಜುಗಳಿವೆ. ಎರಡು ಆಯುರ್ವೇದ ಮತ್ತು ಒಂದು ಹೋಮಿಯೋಪಥಿ ಕಾಲೇಜುಗಳು ಕೆಲಸ ಮಾಡುತ್ತಿವೆ. ಇವು ಕೂಡ ಗುಲಬರ್ಗಾ ನಗರದಲ್ಲಿ ನೆಲೆಗೊಂಡಿವೆ. ವೃತ್ತಿಪರ ಕಾಲೇಜುಗಳಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮವಾಗಿದೆ. ಇತ್ತೀಚೆಗೆ ಕೆಲವು ಕಂಪನಿಗಳು

ಚೌಕಟ್ಟು 3.3

**ಶಿಕ್ಷಣದ ಗುಣಮಟ್ಟ ಉತ್ತಮಗೊಳಿಸುವ ದಿಶೆಯಲ್ಲಿ ಸರ್ಕಾರ, ನಾಗರಿಕ ಸಮಾಜ ಮತ್ತು ಎನ್‌ಜಿಒಗಳ ಸಹಯೋಗ**

ಶಿಕ್ಷಣದ ಗುಣಮಟ್ಟವು ಕಡಿಮೆಯಿರುವುದು ಸರ್ಕಾರಕ್ಕೆ ಮತ್ತು ನಾಗರಿಕ ಸಮಾಜಕ್ಕೆ ಅತ್ಯಂತ ಕಳವಳಕಾರಿ ಸಂಗತಿಯಾಗಿ ಪರಿಣಮಿಸಿಬಿಟ್ಟಿದೆ. ಶಾಲಾ ದಾಖಲಾತಿ ಪ್ರಮಾಣವನ್ನು ಉತ್ತಮಪಡಿಸಲು ಮತ್ತು ಶಾಲೆಯನ್ನು ಮಕ್ಕಳು ಮಧ್ಯದಲ್ಲಿ ಬಿಡುವ ಪ್ರಮಾಣವನ್ನು ಕಡಿಮೆ ಮಾಡಲು ಅನೇಕ ಸರ್ಕಾರಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ. ಸರ್ಕಾರೇತರ ಸಂಸ್ಥೆಗಳು, ದತ್ತಿ ಸಂಸ್ಥೆಗಳು, ಸ್ವಯಂಸೇವಾ ಸಂಸ್ಥೆಗಳು ಅನೇಕ ಬಗೆಯಲ್ಲಿ ಮಕ್ಕಳು ಶಾಲೆಯಲ್ಲಿ ಉಳಿಯುವಂತೆ ಮಾಡಲು ಮತ್ತು ಶಾಲಾ ಶಿಕ್ಷಣದ ಗುಣಮಟ್ಟ ಉತ್ತಮವಾಗುವಂತೆ ಮಾಡಲು ಅನೇಕ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

ಅಕ್ಷರ ಪ್ರತಿಷ್ಠಾನವು ಒಂದು ಸ್ವಯಂಸೇವಾ ಸಂಸ್ಥೆ. ಕರ್ನಾಟಕದಲ್ಲಿ ಸಾಕ್ಷರತೆ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ವಿನೂತನವಾದ ಕಾರ್ಯಕ್ರಮಗಳ ಮೂಲಕ ಅದು ಕೆಲಸ ಮಾಡುತ್ತಿದೆ. ತನ್ನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅದು ಸ್ಥಳೀಯ ಸನ್ನಿವೇಶದ ಬಗ್ಗೆ ಪರಿಜ್ಞಾನವಿರುವ ಸ್ವಯಂಸೇವಾ ಸಂಸ್ಥೆಯೊಂದನ್ನು ಆಯ್ಕೆ ಮಾಡಿಕೊಳ್ಳುತ್ತದೆ. ಅಕ್ಷರ ಪ್ರತಿಷ್ಠಾನವು 'ಉದ್ಯಮ ಸಾಹಸಿ' ದೃಷ್ಟಿಕೋನವನ್ನು ಇಲ್ಲಿ ಅಳವಡಿಸಿಕೊಂಡಿದೆ. ಅದು ಶಿಕ್ಷಣದ ಗುಣಮಟ್ಟವನ್ನು ಉತ್ತಮಗೊಳಿಸುವ ಉದ್ದೇಶದಿಂದ ಅನೇಕ ವಿನೂತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅಂತಹ ಮೂರು ಕಾರ್ಯತಂತ್ರಗಳೆಂದರೆ ಶಾಲಾ ಪೂರ್ವ ಮಕ್ಕಳಿಗೆ ಬಾಲವಾಡಿಗಳು, ಸಂಚಾರಿ ಗ್ರಂಥಾಲಯಗಳು ಮತ್ತು ಶಾಲಾ ಮಕ್ಕಳಿಗಾಗಿ 'ವೇಗವರ್ಧಿತ ಓದುವ ಕಾರ್ಯಕ್ರಮ'ಗಳು. ಶಾಲೆಗಳಲ್ಲಿ ವೇಗವರ್ಧಿತ ಓದುವ ಕಾರ್ಯಕ್ರಮವು ಮಕ್ಕಳಿಗೆ ಬಹಳ ಉಪಯೋಗವಾಗಿರುವುದು ಅದರ ಮೌಲ್ಯಮಾಪನ ಅಧ್ಯಯನದಿಂದ ತಿಳಿದು ಬಂದಿದೆ. ಈ ಕಾರ್ಯಕ್ರಮವು ಆರಂಭವಾಗುವುದಕ್ಕೆ ಮುಂಚೆ ಓದುವ ಕುಶಲತೆಯೇ ಬರದಿದ್ದ ಮಕ್ಕಳು ಸದರಿ ಕಾರ್ಯಕ್ರಮದಿಂದಾಗಿ ಶಾಲೆಯಲ್ಲಿನ ಒಟ್ಟು ಮಕ್ಕಳಲ್ಲಿ ಶೇ. 70ರಷ್ಟು ಮಕ್ಕಳು ಓದುವ ಕುಶಲತೆಯನ್ನು ಪಡೆದುಕೊಂಡಿರುವುದು ಕಂಡುಬಂದಿದೆ. ಈ ಮಕ್ಕಳಿಗೆ ನಲವತ್ತೈದು ದಿನಗಳ ಕಾಲ ಪ್ರತಿದಿನ ಓದಲು ಆಕರ್ಷಣೆಯಾದ ಕಥೆಯ ಕಾರ್ಡೊಂದನ್ನು ನೀಡಲಾಯಿತು. ಇದು ಮಕ್ಕಳಲ್ಲಿ ಓದುವ ಮತ್ತು ಕಲಿಯುವ ಬಗ್ಗೆ ಆಸಕ್ತಿಯನ್ನು ಕೆರಳಿಸಿತು. ಈ ಮಕ್ಕಳು ವೇಗವರ್ಧಿತ ಓದುವ ಕಾರ್ಯಕ್ರಮವು ಮುಗಿದ ಮೇಲೂ ಓದುವ ಅಭ್ಯಾಸವನ್ನು ಮುಂದುವರಿಸಿದ್ದು ಅವರು ಗ್ರಂಥಾಲಯದಿಂದ ಪುಸ್ತಕಗಳನ್ನು ತೆಗೆದುಕೊಳ್ಳುತ್ತಿದ್ದ ಕ್ರಮದಿಂದ ತಿಳಿಯುತ್ತದೆ. ಈ ವೇಗವರ್ಧಿತ ಓದುವ ತರಗತಿಗಳಲ್ಲಿ ವಾತಾವರಣವು ಸ್ನೇಹಮಯವಾಗಿಯೂ, ಸೌಹಾರ್ದಯುತವಾಗಿಯೂ ಮತ್ತು ಅನೌಪಚಾರಿಕವಾಗಿಯೂ ಇದ್ದುದನ್ನು ಶೇ. 94.3 ಮಕ್ಕಳು ದೃಢಪಡಿಸಿದ್ದಾರೆ. ಮಕ್ಕಳು ಓದುವ ಕ್ರಮವನ್ನು ಕಲಿಸುವವರ ಬಗ್ಗೆ ಅತ್ಯಂತ ಗೌರವ ಹೊಂದಿದ್ದರು. ಇದರಿಂದ ಅವರಲ್ಲಿ ಅನ್ಯೋನ್ಯತೆ ಬೆಳೆಯಲು ಸಾಧ್ಯವಾಯಿತು. ಕೇವಲ ಶೇ. 5.7ರಷ್ಟು ಮಕ್ಕಳು ಇಲ್ಲಿನ ವಾತಾವರಣವನ್ನು ಇಷ್ಟಪಡಲಿಲ್ಲ.

ಮಕ್ಕಳು ಓದುವುದನ್ನು ಕಲಿಯುತ್ತಿರುವ ರೀತಿಯು ಪಾಲಕರಿಗೂ ಇಷ್ಟವಾಯಿತು. ಕಥೆಯ ಕಾರ್ಡುಗಳನ್ನು ಮನೆಗೆ ತರುವುದು ಮತ್ತು ಅವುಗಳನ್ನು ಓದುವುದು ಅವರಿಗೆ ಹೊಸ ಅನುಭವವಾಗಿತ್ತು. ಇದರಿಂದ ತಮ್ಮ ಮಕ್ಕಳು ಇತರೆ ಶ್ರೀಮಂತ ಮತ್ತು ಮಧ್ಯಮವರ್ಗದ ಮಕ್ಕಳು ಪಡೆಯುತ್ತಿರುವಂತಹ ಶಿಕ್ಷಣವನ್ನು ಪಡೆಯುತ್ತಿದ್ದುದು ಅವರಿಗೆ ಹೆಮ್ಮೆಯನ್ನು ಉಂಟು ಮಾಡಿತ್ತು. ಈ ಕಾರ್ಯಕ್ರಮದ ಶಿಕ್ಷಕರ ಬಗ್ಗೆ ಅವರು ಗೌರವವನ್ನು ಇಟ್ಟುಕೊಂಡಿದ್ದರು. ಈ ಕಾರ್ಯತಂತ್ರವನ್ನು ಅನುಷ್ಠಾನಗೊಳಿಸಿದ ಸಂಸ್ಥೆ ಬಗ್ಗೆ ಗೌರವವಿಟ್ಟುಕೊಂಡಿದ್ದರು.

ಈ ರೀತಿಯಲ್ಲಿ ಬಾಲವಾಡಿಯಲ್ಲಿ ತರಬೇತಿ ಪಡೆದ ಮಕ್ಕಳು ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಯಶಸ್ಸನ್ನು ತೋರಿದರು. ಇದು ಶಾಲಾ ವಾತಾವರಣದ ಮೇಲೆ ಉತ್ತಮ ಪರಿಣಾಮ ಬೀರುವ ಸಾಧ್ಯತೆಯಿದೆ. ಶಾಲೆಯನ್ನು ಮಧ್ಯದಲ್ಲಿ ಬಿಡುವ ಪ್ರವೃತ್ತಿಯು ಕಡಿಮೆಯಾಗುವ ಸಾಧ್ಯತೆಯಿದೆ ಮತ್ತು ಶಿಕ್ಷಣದ ಗುಣಮಟ್ಟವು ಉತ್ತಮವಾಗುತ್ತದೆ.

ಅಜೀಮ್ ಪ್ರೇಮಜೀ ಪ್ರತಿಷ್ಠಾನವೂ ಇಂತಹ ವೇಗವರ್ಧಿತ ಓದುವ ಕಾರ್ಯಕ್ರಮ ಮತ್ತು ಕಂಪ್ಯೂಟರ್ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಇದರಿಂದ ಶಿಕ್ಷಣದ ಗುಣಮಟ್ಟವು ಸುಧಾರಿಸುತ್ತದೆ. ನಿಧಾನವಾಗಿ ಕಲಿಯುವಂತಹ ಮಕ್ಕಳಿಗಾಗಿ ಇಂದು ಸೇತುಬಂಧ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.

ಮೂಲ: ಛಾಯಾ ದೇವಗಾಂಕರ್ 2006 ಅಕ್ಷರ ಪ್ರತಿಷ್ಠಾನದ ಕಾರ್ಯತಂತ್ರಗಳ ಮೌಲ್ಯಮಾಪನ ಅಧ್ಯಯನ, ಅರ್ಥಶಾಸ್ತ್ರ ಅಧ್ಯಯನ ವಿಭಾಗ. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಎಂಜಿನಿಯರಿಂಗ್ ಕಾಲೇಜುಗಳಿಗೆ ಬಂದು ವಿದ್ಯಾರ್ಥಿಗಳನ್ನು ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳುತ್ತಿವೆ.

ಈಗ ಗುಲಬರ್ಗಾ ವಿಶ್ವವಿದ್ಯಾಲಯವು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದೆ. ಇದರ ಚರಿತ್ರೆಯನ್ನು 70 ದಶಕಕ್ಕೆ ಒಯ್ಯಬಹುದಾಗಿದೆ. ಅಂದು ಅನೇಕ ಶಿಕ್ಷಣ ತಜ್ಞರ ಪ್ರಯತ್ನದಿಂದಾಗಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಇಲ್ಲಿ ತನ್ನ ಸ್ನಾತಕೋತ್ತರ ಕೇಂದ್ರವನ್ನು ತೆರೆಯಿತು. ಇದನ್ನು 1980ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವನ್ನಾಗಿ ಮೇಲ್ದರ್ಜೆಗೇರಿಸಲಾಯಿತು. ಹಿಂದುಳಿದ ಪ್ರದೇಶದಲ್ಲಿ ಶಿಕ್ಷಣ ಮತ್ತು ಸಾಕ್ಷರತೆಯನ್ನು

**ರಾಜ್ಯದ ಉಳಿದ ಜಿಲ್ಲೆಗಳಿಗೆ ಸಾಪೇಕ್ಷವಾಗಿ ಇಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶವು ಉತ್ತಮಗೊಳ್ಳುತ್ತಿಲ್ಲ. ಇದರಿಂದ ಇಲ್ಲಿ ಶಿಕ್ಷಣದ ಗುಣಮಟ್ಟವು ಉತ್ತಮವಾಗಿಲ್ಲವೆಂದು ಹೇಳಬಹುದು. ಅದನ್ನು ಉತ್ತಮಪಡಿಸುವುದರ ಬಗ್ಗೆ ಗಮನಹರಿಸಬೇಕಾಗಿದೆ. ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯೆಂಬ ಖ್ಯಾತಿಗೆ ಇದು ಒಳಗಾಗಿದೆ. ಇಂಗ್ಲೀಷ್, ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಜಿಲ್ಲೆಯಲ್ಲಿ ಮಕ್ಕಳ ಸಾಧನೆ ಅತ್ಯಂತ ಕಡಿಮೆ.**

**ವಿಶೇಷವಾಗಿ ಜಿಲ್ಲೆಯ ಶಹಾಪುರ, ಶೋರಾಪುರ, ಅಳಂದ್ ಮತ್ತು ಜೇವರ್ಗಿ ತಾಲ್ಲೂಕುಗಳ ಕ್ಯಾಂಪ್‌ಗಳಲ್ಲಿ ಮತ್ತು ತಾಂಡಾಗಳಲ್ಲಿ ವಾಸಿಸುವ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಅಗತ್ಯವಿದೆ. ಈ ವಸತಿಗಳಲ್ಲಿ ವಾಸಿಸುವವರಲ್ಲಿ ಹೆಚ್ಚಿನವರು ವಲಸೆಯವರಾಗಿದ್ದಾರೆ.**

ಉತ್ತಮಪಡಿಸುವ ಉದ್ದೇಶದಿಂದ ಅದು ಅಸ್ತಿತ್ವಕ್ಕೆ ಬಂದಿತು. ಇಲ್ಲಿ 38 ಸ್ನಾತಕೋತ್ತರ ವಿಭಾಗಗಳಿದ್ದು 35 ವಿವಿಧ ಬಗೆಯ ಕೋರ್ಸುಗಳನ್ನು ನಡೆಸಲಾಗುತ್ತಿದೆ. ಇದು ನಾಲ್ಕು ಸ್ನಾತಕೋತ್ತರ ಕೇಂದ್ರಗಳನ್ನು ಬಳ್ಳಾರಿ, ಬೀದರ್, ರಾಯಚೂರು ಮತ್ತು ಸಂಡೂರುಗಳಲ್ಲಿ ಸ್ಥಾಪಿಸಿದೆ. ಪ್ರತಿ ವರ್ಷ ಸುಮಾರು 2000 ವಿದ್ಯಾರ್ಥಿಗಳು ವಿವಿಧ ಕೋರ್ಸುಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. ಇಲ್ಲಿನ ಸಂಶೋಧನಾ ಚಟುವಟಿಕೆಗಳು ಹಿಂದುಳಿದಿರುವಿಕೆಯ ಬಗ್ಗೆ ಅಧ್ಯಯನ ನಡೆಸುತ್ತವೆ. ಒಟ್ಟಾರೆ ವಿಶ್ವವಿದ್ಯಾಲಯವು ಇಲ್ಲಿನ ಪ್ರದೇಶದ ಅಭಿವೃದ್ಧಿಗಾಗಿ ಮಾನವ ಸಂಪನ್ಮೂಲವನ್ನು ಬೆಳೆಸುತ್ತಿದೆ.

## ಶಿಫಾರಸ್ಸುಗಳು

ಕೆಳಮಟ್ಟದಲ್ಲಿರುವ ಸಾಕ್ಷರತಾ ಪ್ರಮಾಣವು ಜಿಲ್ಲೆಯ ಮಾನವ ಅಭಿವೃದ್ಧಿ ಮಟ್ಟವು ಕಡಿಮೆಯಿರುವುದನ್ನು ಮತ್ತು ಮಾನವ ಸಂಪನ್ಮೂಲದ ಕೊರತೆಯನ್ನು ತೋರಿಸುತ್ತಿದೆ. ಸರ್ಕಾರವು ಅನೇಕ ರೀತಿಯಲ್ಲಿ ಪ್ರಯತ್ನಿಸುತ್ತಿದ್ದರೂ ಸಾಕ್ಷರತೆಯ ಬೆಳವಣಿಗೆ ಪ್ರಮಾಣ ಮಂದಗತಿಯಲ್ಲಿದೆ. ಮಹಿಳೆಯರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ಸಾಕ್ಷರತಾ ಪ್ರಮಾಣ ಕೆಳಮಟ್ಟದಲ್ಲಿರುವುದು ಜಿಲ್ಲೆಯಲ್ಲಿರುವ ಲಿಂಗಸಂಬಂಧಿ ಮತ್ತು ಗ್ರಾಮೀಣ ಹಾಗೂ ನಗರ ಪ್ರದೇಶಗಳ ನಡುವಿನ ಅಸಮಾನತೆಯನ್ನು ತೋರಿಸುತ್ತದೆ. ಈ ಬಗ್ಗೆ ತೀವ್ರ ಕಾಳಜಿ ಇಡಬೇಕಾದ ಅಗತ್ಯವಿದೆ. ಶೋರಾಪುರ. ಶಹಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಸಾಕ್ಷರತಾ ಪ್ರಮಾಣವು ಅತ್ಯಂತ ಕೆಳಮಟ್ಟದಲ್ಲಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಶಾಲಾ ದಾಖಲಾತಿ ಕಡಿಮೆಯಿರುವುದು ಮತ್ತು ಶಾಲೆಯನ್ನು ಮಕ್ಕಳು ಅಧಿಕ ಪ್ರಮಾಣದಲ್ಲಿ ಮಧ್ಯದಲ್ಲಿ ಬಿಡುತ್ತಿರುವುದು. ಶಿಕ್ಷಣದ ಮಹತ್ವದ ಬಗ್ಗೆ ಪಾಲಕರಿಗೆ ಅರಿವಿಲ್ಲ. ಅವರಲ್ಲಿ ಅರಿವನ್ನು ಉಂಟು ಮಾಡುವ ಬಗ್ಗೆ ಆಂದೋಲನವನ್ನು ಕೈಗೆತ್ತಿಕೊಳ್ಳುವ ಅಗತ್ಯವಿದೆ. ಈ ದಿಶೆಯಲ್ಲಿ ಎನ್.ಜಿ.ಒ.ಗಳು ಮಹತ್ವದ ಪಾತ್ರವನ್ನು ನಿರ್ವಹಿಸಬಹುದಾಗಿದೆ.

ಯಾದಗೀರ್ ತಾಲ್ಲೂಕಿನ ಕೆಲವು ಹಳ್ಳಿಗಳಲ್ಲಿ ಸಾಕ್ಷರತಾ ಪ್ರಮಾಣವು ಶೇ. 20 ಮೀರಿಲ್ಲ. ಮಹಿಳೆಯರ ಸಾಕ್ಷರತೆಯು ಶೇ. 10ರಷ್ಟಿದೆ. ಈ ಹಳ್ಳಿಗಳಿಗೆ ವಿಶೇಷ ಗಮನ ನೀಡುವ ಅಗತ್ಯವಿದೆ. ಈ ಹಳ್ಳಿಗಳೆಂದರೆ ಸುತರಹೊಸಹಳ್ಳಿ, ಬೆಳಿಗೆರೆ, ಕುರ್‌ಕುಂಬಾಳ್, ಕಟಿಗಿ, ಶಹಾಪುರ, ತಟಿಲ್‌ಗೆರೆ, ಹಿಮ್ಲಾಪುರ, ಜಿಂಕೆರೆ, ನಾಗಲಾಪುರ, ಹೋಲಿಬೆಟ್ ಮತ್ತು ಚಂದ್ರಾಪುರ.

ಶಾಲಾ ದಾಖಲಾತಿಯು ಕೆಳಮಟ್ಟದಲ್ಲಿರಲು ಒಂದು ಕಾರಣವೆಂದರೆ ಮೂಲಭೂತ ಸೌಲಭ್ಯದ ಕೊರತೆ. ಅನೇಕ ಶಾಲೆಗಳಲ್ಲಿ ಸಾಕಷ್ಟು ಕೊಠಡಿಗಳಿಲ್ಲ. ಲಿಂಗ ಅಸಮಾನತೆಯನ್ನು ಕಡಿಮೆಮಾಡಲು ವಿದ್ಯಾರ್ಥಿ ನಿಲಯಗಳಿರುವ ಪ್ರೌಢಶಾಲೆಗಳನ್ನು ಬಾಲಕಿಯರಿಗಾಗಿ ತೆರೆಯುವ ಅಗತ್ಯವಿದೆ. ಅಂತಹ ಬಾಲಕಿಯರ ವಿದ್ಯಾರ್ಥಿ ನಿಲಯಗಳಿರುವ ಪ್ರೌಢಶಾಲೆಗಳನ್ನು ತಾಲ್ಲೂಕು ಕೇಂದ್ರಗಳಲ್ಲಿ ತೆರೆಯುವುದು ಸೂಕ್ತ.

ರಾಜ್ಯದ ಉಳಿದ ಜಿಲ್ಲೆಗಳಿಗೆ ಸಾಪೇಕ್ಷವಾಗಿ ಇಲ್ಲಿ ಎಸ್.ಎಸ್.ಎಲ್.ಸಿ. ಫಲಿತಾಂಶವು ಉತ್ತಮಗೊಳ್ಳುತ್ತಿಲ್ಲ. ಇದರಿಂದ ಇಲ್ಲಿ ಶಿಕ್ಷಣದ ಗುಣಮಟ್ಟವು ಉತ್ತಮವಾಗಿಲ್ಲವೆಂದು ಹೇಳಬಹುದು. ಅದನ್ನು ಉತ್ತಮಪಡಿಸುವುದರ ಬಗ್ಗೆ ಗಮನಹರಿಸಬೇಕಾಗಿದೆ. ರಾಜ್ಯದಲ್ಲಿ ಅತ್ಯಂತ ಹಿಂದುಳಿದ ಜಿಲ್ಲೆಯೆಂಬ ಖ್ಯಾತಿಗೆ ಇದು ಒಳಗಾಗಿದೆ. ಇಂಗ್ಲೀಷ್, ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಜಿಲ್ಲೆಯಲ್ಲಿ ಮಕ್ಕಳ ಸಾಧನೆ ಅತ್ಯಂತ ಕಡಿಮೆ. ಶಾಲೆಗಳಲ್ಲಿ ಓದುವ ಮತ್ತು ಕಲಿಯುವ ವಾತಾವರಣವನ್ನು ಗ್ರಂಥಾಲಯ ಮತ್ತು ಪ್ರಯೋಗಾಲಯಗಳನ್ನು ನೀಡುವುದರ ಮೂಲಕ ಉತ್ತಮಪಡಿಸಬಹುದಾಗಿದೆ. ಉನ್ನತವಾದ ಶಿಕ್ಷಣವನ್ನು ಶಿಕ್ಷಕರು ಮಕ್ಕಳಿಗೆ ನೀಡಬೇಕಾದರೆ ಅವರಿಗೆ ತಕ್ಕ ತರಬೇತಿಯ ಅಗತ್ಯವಿದೆ. ಅವರಿಗೆ ಆಧುನಿಕ ಬೋಧನ ಉಪಕರಣಗಳನ್ನು ನೀಡಿ ಕಷ್ಟವಾದ ವಿಷಯವನ್ನು ಸುಲಭವಾಗಿ ಮಕ್ಕಳಿಗೆ ತಿಳಿಯುವಂತೆ ಕಲಿಸಲು ಅಗತ್ಯವಾದ ತರಬೇತಿಯನ್ನು ನೀಡಬೇಕು.

ಅಧಿಕ ಸಂಖ್ಯೆಯಲ್ಲಿ ಶಿಕ್ಷಕರು ದೊಡ್ಡ ಪಟ್ಟಣಗಳಿಂದ ಶಾಲೆಗೆ ಪ್ರತಿ ದಿನವೂ ಪ್ರಯಾಣ ಮಾಡುತ್ತಾರೆ. ಇದರಿಂದಾಗಿ ಅವರು ದಕ್ಷತೆಯಿಂದ

ಕೆಲಸ ಮಾಡುವುದು ಸಾಧ್ಯವಾಗುತ್ತಿಲ್ಲ. ಶಿಕ್ಷಕರಿಗೆ, ಅದರಲ್ಲೂ ಮಹಿಳಾ ಶಿಕ್ಷಕಿಯರಿಗೆ ಗ್ರಾಮೀಣ ಪ್ರದೇಶದಲ್ಲಿ ಉತ್ತಮವಾದ ವಸತಿ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದೆ. ಹಳ್ಳಿಗಳಲ್ಲಿ ಶಾಲೆಗಳು ಸರಿಯಾಗಿ ಕೆಲಸ ಮಾಡುತ್ತಿರುವುದನ್ನು ಶಾಲಾ ನಿರ್ವಹಣಾ ಸಮಿತಿಯವರು ಮೇಲ್ವಿಚಾರಣೆ ಮಾಡುವುದು ಅವಶ್ಯಕ.

ವಿಶೇಷವಾಗಿ ಜಿಲ್ಲೆಯ ಶಹಾಪುರ, ಶೋರಾಪುರ, ಅಳಂದ್ ಮತ್ತು ಜೇವರ್ಗಿ ತಾಲ್ಲೂಕುಗಳ ಕ್ಯಾಂಪ್‌ಗಳಲ್ಲಿ ಮತ್ತು ತಾಂಡಾಗಳಲ್ಲಿ ವಾಸಿಸುವ ಮಕ್ಕಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಅಗತ್ಯವಿದೆ. ಈ ವಸತಿಗಳಲ್ಲಿ ವಾಸಿಸುವವರಲ್ಲಿ ಹೆಚ್ಚಿನವರು ವಲಸೆಯುವವರಾಗಿದ್ದಾರೆ. ಇಲ್ಲಿ ವಾಸಿಸುವ ಮಕ್ಕಳ ಸಂಖ್ಯೆಯು 15 ರಿಂದ 20 ಮೀರುವುದಿಲ್ಲ. ಆದ್ದರಿಂದ ಅಲ್ಲಿ ಪ್ರಾಥಮಿಕ ಶಾಲೆಯನ್ನು ನೀಡುವುದಕ್ಕೆ ಬರುವುದಿಲ್ಲ. ಇಂತಹ ಹಲವು ಸ್ಥಳಗಳಲ್ಲಿ ಶಿಕ್ಷಣ ಖಾತ್ರಿ ಯೋಜನೆಯಡಿಯಲ್ಲಿ ಶಾಲೆಗಳನ್ನು ತೆರೆಯಲಾಗಿದೆ. ಆದರೆ ಅವುಗಳ ವ್ಯಾಪ್ತಿಯು ಸೀಮಿತವಾದುದಾಗಿದೆ. ಜಿಲ್ಲೆಯಲ್ಲಿ ಸಾಕ್ಷರತೆ ಮತ್ತು ಶಿಕ್ಷಣವನ್ನು ಸಂಘಟಿತ ರೀತಿಯಲ್ಲಿ ಮತ್ತು ಸಮಗ್ರವಾಗಿ ಅಭಿವೃದ್ಧಿಪಡಿಸಲು ತೀವ್ರ ಪ್ರಯತ್ನ ನಡೆಯಬೇಕಾಗಿದೆ.

ಉನ್ನತ ಶಿಕ್ಷಣದಲ್ಲಿ ದಾಖಲಾತಿ ಅತ್ಯಂತ ಕಡಿಮೆ. ಸಾಕಷ್ಟು ಹಣ ಸಹಾಯ ನೀಡುವ ಮುಲಕ ಉನ್ನತ ಶಿಕ್ಷಣವನ್ನು ಪ್ರೋತ್ಸಾಹಿಸಬೇಕಾಗಿದೆ. ತಾಲ್ಲೂಕು ಮಟ್ಟದಲ್ಲಿ ಕಾಲೇಜುಗಳನ್ನು ತೆರೆಯುವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿದೆ. ಇದು ಉನ್ನತ ಶಿಕ್ಷಣದಲ್ಲಿ ದಾಖಲಾತಿಯು ಅಧಿಕಗೊಳ್ಳಲು ನೆರವಾಗಬಹುದು.

ಪ್ರಾಥಮಿಕ ಶಿಕ್ಷಣದ ದೊರೆಗೊಳ್ಳುವಿಕೆ, ಅದರ ಗುಣಮಟ್ಟ ಮತ್ತು ಅದರ ಮೂಲಭೂತ ಸೌಲಭ್ಯಗಳನ್ನು ಉತ್ತಮಪಡಿಸಲು ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಸಮಗ್ರ ಪ್ರಯತ್ನ ನಡೆದಿದೆ. ಇವೆಲ್ಲವು ದಾಖಲಾತಿಯು ಹೆಚ್ಚಾಗಲು ನೆರವಾಗಬಹುದು. ಈಗ ಗಮನ ನೀಡಬೇಕಾದ ಸಂಗತಿಗಳೆಂದರೆ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮತ್ತು ಮಕ್ಕಳು ಶಾಲೆಯಲ್ಲಿ ಮುಂದುವರಿಯುವಂತೆ ಮಾಡುವುದು.

# ಆರೋಗ್ಯ ಮತ್ತು ಪೌಷ್ಟಿಕತೆ




KALBURGI (GULBARGA) District Map
Bidar
MAHARASHTRA
ANDHRA PRADESH
Bijapur
Raichur
Khajuri
Kinhi
Salgar
Sonath
Aland
Bodhan
Kamlapur
Narona
Mahagaon
Mullamdri
Chincholi
Awarja
Sargapur
Benithora
Ratkal
Sulahpet
Kulali
Nimbarga
Kalgi
KALBURGI
Marhal
Nirgunda
Mannur
Bari
Atanur
Gobur Buzurgr
Tingli
Kogna
Afzalpur
Sedam
Gangapur
Farhatabad
Chitapur
Adki
Firozabad
Mudhol
Nelogi
Wadi
Kolla
Jevargi
Handarki
Aralagundi
Andola
Nalwar
Gajarkot
Ijeri
Yaragol
Yedrami
Gurmatkal
Sirwal
Bhima
Yadgir
Doranahalli
Haligeri
Gugi
Malla Buzurg
Shahpur
Khanapur
Nandepalli
Kembhavi
Sagar
Hattigudur
Ajalapur
Saidapur
Agni
Wadagera
Shorapur
Tumkur
Krishna
Devapur
Kakkera
Tintani
Kodekal
Narayanpur
Map not to Scale
Copyright © 2007 Compare Infobase Limited
LEGEND
State Boundary
District Boundary
Major Road
Railway
District Headquarter
Major Town
Other Town
River
www.mapsofindia.com

ಅಧ್ಯಾಯ 4

# ಆರೋಗ್ಯ ಮತ್ತು ಪೌಷ್ಟಿಕತೆ

ಆರೋಗ್ಯಕ್ಕೆ ಸಂಬಂಧಿಸಿದ ಸಂಗತಿಗಳು ಬಹಳ ಮುಖ್ಯ. ಬದುಕುವ ಹಕ್ಕು ಒಂದು ಮಾನವ ಹಕ್ಕಾಗಿದೆ. ಇದರಿಂದ ಉಳಿದ ಹಕ್ಕುದಾರಿಕೆಗಳು ಪ್ರಾಪ್ತವಾಗುತ್ತವೆ. ಬದುಕು ಸಮೃದ್ಧವಾಗಬೇಕಾದರೆ ಅಗತ್ಯವಾದ ಸಂಗತಿಯೆಂದರೆ ಆರೋಗ್ಯ. ಆರೋಗ್ಯವು ಒಂದು ಮೂಲಭೂತ ಮಾನವ ಹಕ್ಕಾಗಿದೆ. ಇದು ಮಾನವ ಅಭಿವೃದ್ಧಿಗೆ ಅಗತ್ಯವಾದ ಒಂದು ಘಟಕವಾಗಿದೆ. ಜನರ ಆರೋಗ್ಯದ ಸ್ಥಿತಿಗತಿಯ ಮೇಲೆ ಜೀವನಾಯುಷ್ಯವು ನಿಂತಿದೆ. ಇದರ ಮೇಲೆ ಅನೇಕ ಸಂಗತಿಗಳು ಪ್ರಭಾವ ಬೀರುತ್ತವೆ. ಅವು ಯಾವುವೆಂದರೆ ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ಕುಡಿಯುವ ನೀರು, ತಾಯಿ ಮತ್ತು ಮಕ್ಕಳ ಆರೋಗ್ಯ, ಪೌಷ್ಟಿಕತೆಯ ಮಟ್ಟ, ಆರೋಗ್ಯ ಸೇವೆಯ ಲಭ್ಯತೆ, ಅದರ ಕಾರ್ಯಕ್ಷಮತೆ, ದೈಹಿಕ ವಿಕಲತೆಯ ಪ್ರಮಾಣ ಮತ್ತು ಪ್ರದೇಶ ನಿರ್ದಿಷ್ಟವಾದ ಅನೂಚನವಾಗಿ ಹರಿದಿಕೊಂಡು ಬರುತ್ತಿರುವ ರೋಗಗಳು ಇತ್ಯಾದಿ.

ಆರೋಗ್ಯ ಸೇವೆಯ ಮೇಲಿನ ಬಂಡವಾಳ ಹೂಡಿಕೆಯು ಬಡವರ ಬದುಕಿನ ಮೇಲೆ ಎರಡು ರೀತಿಯ ಪರಿಣಾಮ ಬೀರುತ್ತದೆ. ಮೊದಲನೆಯದಾಗಿ ಅವರು ಅಪಾರ ಪ್ರಮಾಣದಲ್ಲಿ ಹಣವನ್ನು ರೋಗ ಚಿಕಿತ್ಸೆಗಾಗಿ ವ್ಯಯಿಸಬೇಕಾಗುವುದರಿಂದ ಅವರ ವರಮಾನದ ಮೇಲೆ ಹೆಚ್ಚಿನ ಒತ್ತಡ ಬೀಳುತ್ತದೆ. ಎರಡನೆಯದಾಗಿ ರೋಗದ ಸಂದರ್ಭದಲ್ಲಿ ಅವರು ದುಡಿಮೆಯಿಲ್ಲದೆ, ಗಳಿಕೆಯಿಲ್ಲದೆ ಇರಬೇಕಾಗುತ್ತದೆ. ಈ ಬಗೆಯ ಸಂಗತಿಗಳು ಕುಟುಂಬಗಳನ್ನು ಸಾಲದ ಕೂಪಕ್ಕೆ ತಳ್ಳಿಬಿಡುತ್ತವೆ. ಆದ್ದರಿಂದ ಸರ್ಕಾರಗಳು ಸಾರ್ವಜನಿಕ ಆರೋಗ್ಯ ಮತ್ತು ವೈದ್ಯಕೀಯ ಸೇವೆಯನ್ನು ಒದಗಿಸಿಕೊಡುವುದು ಅಗತ್ಯ ಮಾತ್ರವಲ್ಲ ಅದು ಅನಿವಾರ್ಯ ಕೂಡ. ಆರೋಗ್ಯಕ್ಕೆ ಸಂಬಂಧಿಸಿದ ಮೂಲಭೂತ ಸೌಲಭ್ಯವನ್ನು ಸಮಾನವಾಗಿ ಒದಗಿಸುವುದರಿಂದ ಮತ್ತು ಸೇವೆಯು ದಕ್ಷತೆಯಿಂದ ಜನರಿಗೆ ದೊರೆಯುವಂತೆ ಮಾಡುವುದರಿಂದ ಬಡವರ ಮತ್ತು ಅಂಚಿನಲ್ಲಿರುವವರ ಆರೋಗ್ಯದ ಮೇಲೆ ಒಳ್ಳೆಯ ಪರಿಣಾಮ ಉಂಟಾಗುತ್ತದೆ. ಜನರ ಆರೋಗ್ಯದ ಅಗತ್ಯಗಳನ್ನು ಖಾಸಗಿ ಆರೋಗ್ಯ ವಲಯವೂ ಪೂರೈಸುತ್ತಿದೆ. ಈ ಬಗೆಯ ಖಾಸಗಿ ವೈದ್ಯಕೀಯ ಸಂಸ್ಥೆಗಳು ನಗರ ಮತ್ತು ಅರೆನಗರ ಪ್ರದೇಶಗಳಲ್ಲಿ ಹಣವಿದ್ದವರು ಆರೋಗ್ಯ ಅಗತ್ಯಗಳನ್ನು ಪೂರೈಸುವುದಕ್ಕಾಗಿ ತಲೆಯೆತ್ತುತ್ತಿವೆ.

ಈ ಅಧ್ಯಾಯದಲ್ಲಿ ಜಿಲ್ಲೆಯ ಆರೋಗ್ಯ ಸಂಬಂಧಿ ಸ್ಥಿತಿಗತಿಗಳನ್ನು ಹಿಡಿದಿಡಲು ಪ್ರಯತ್ನಿಸಲಾಗಿದೆ. ಸಧ್ಯ ಅಸ್ತಿತ್ವದಲ್ಲಿರುವ ವೈದ್ಯಕೀಯ ಮೂಲಸೌಲಭ್ಯ ವ್ಯವಸ್ಥೆಯನ್ನು ಗುರಿತಿಸಲು ಇಲ್ಲಿ ಪ್ರಯತ್ನಿಸಲಾಗಿದೆ ಮತ್ತು ಅದು ಎಷ್ಟರ ಮಟ್ಟಿಗೆ ಜನರಿಗೆ ದೊರೆಯುತ್ತಿದೆ ಎಂಬುದನ್ನು ವಿಶ್ಲೇಷಿಸಲಾಗುತ್ತದೆ. ತಾಯಂದಿರ ಮತ್ತು ಮಕ್ಕಳ ಆರೋಗ್ಯ ಸೂಚಿಗಳು, ಪೌಷ್ಟಿಕತೆ ಮಟ್ಟ, ಜನರನ್ನೂ ಸದಾಕಾಡುವ ರೋಗಗಳನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಕೊನೆಯಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಸಂಗತಿಗಳು ಮತ್ತು ಸರ್ಕಾರವು ತೆಗೆದುಕೊಳ್ಳಬೇಕಾದ ಕ್ರಮಗಳು ಮತ್ತು ಯಾವ ಬಗೆಯ ನೀತಿಗಳು ಬೇಕು ಎಂಬುದನ್ನು ಇಲ್ಲಿ ವಿವರಿಸಲಾಗಿದೆ.

## ಆರೋಗ್ಯ ಮೂಲಸೌಲಭ್ಯ ಸ್ಥಿತಿಗತಿ

ಜನರ ಆರೋಗ್ಯದ ಮಟ್ಟವು ಆರೋಗ್ಯ ಸೌಲಭ್ಯದ ದೊರೆಯುವಿಕೆ, ಆ ಸೌಲಭ್ಯಗಳನ್ನು ಪಡೆದುಕೊಳ್ಳಲು ಅಗತ್ಯವಾದ ಸಾಮರ್ಥ್ಯ ಮತ್ತು ಅವುಗಳ ಕಾರ್ಯಕ್ಷಮತೆ ಮುಂತಾದವುಗಳನ್ನು ಅವಲಂಬಿಸಿದೆ. ಜನರ ಆರೋಗ್ಯ ಅವಶ್ಯಕತೆಗಳನ್ನು ಈಡೇರಿಸುವ ಸಂಸ್ಥೆಗಳೆಂದರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಪ್ರಾಥಮಿಕ ಆರೋಗ್ಯ ಘಟಕ, ಉಪಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸರ್ಕಾರಿ ಆಸ್ಪತ್ರೆಗಳು ಹಾಗೂ ಭಾರತೀಯ ವೈದ್ಯಕೀಯ ವ್ಯವಸ್ಥೆಗೆ ಸೇರಿದ ಆರೋಗ್ಯ

**ಆರೋಗ್ಯದ ಸ್ಥಿತಿಗತಿಯ ಮೇಲೆ ಜೀವನಾಯುಷ್ಯವು ನಿಂತಿದೆ. ಇದರ ಮೇಲೆ ಅನೇಕ ಸಂಗತಿಗಳು ಪ್ರಭಾವ ಬೀರುತ್ತವೆ. ಅವು ಯಾವುವೆಂದರೆ ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ಕುಡಿಯುವ ನೀರು, ತಾಯಿ ಮತ್ತು ಮಕ್ಕಳ ಆರೋಗ್ಯ, ಪೌಷ್ಟಿಕತೆಯ ಮಟ್ಟ, ಆರೋಗ್ಯ ಸೇವೆಯ ಲಭ್ಯತೆ, ಅದರ ಕಾರ್ಯಕ್ಷಮತೆ, ದೈಹಿಕ ವಿಕಲತೆಯ ಪ್ರಮಾಣ ಮತ್ತು ಪ್ರದೇಶ ನಿರ್ದಿಷ್ಟವಾದ ಅನೂಚನವಾಗಿ ಹರಿದಿಕೊಂಡು ಬರುತ್ತಿರುವ ರೋಗಗಳು ಇತ್ಯಾದಿ.**

ಸಂಸ್ಥೆಗಳು, ನರ್ಸಿಂಗ್ ಹೋಮ್‌ಗಳು ಮುಂತಾದವುಗಳು. ಜನರ ಆರೋಗ್ಯ ಅಗತ್ಯಗಳನ್ನು ಒದಗಿಸುವುದಕ್ಕಾಗಿ ನಗರ ಪ್ರದೇಶಗಳಲ್ಲಿ ಖಾಸಗಿ ವೈದ್ಯಕೀಯ ಸಮಸ್ಥೆಗಳು ಕೆಲಸ ಮಾಡುತ್ತಿರುತ್ತವೆ.

ಸರ್ಕಾರ ಕೆಳಕಂಡ ಮಾನದಂಡದ ಆಧಾರದ ಮೇಲೆ ಜನರಿಗೆ ಕನಿಷ್ಠ ಆರೋಗ್ಯ ಸೌಲಭ್ಯವನ್ನು ಒದಗಿಸುವ ಕೆಲಸ ಮಾಡುತ್ತಿದೆ.

ಗುಲಬರ್ಗಾ ಜಿಲ್ಲೆಯು ಅತ್ಯಂತ ಹಿಂದುಳಿದ ಜಿಲ್ಲೆಯಾಗಿದೆ. ಹಿಂದುಳಿದ ಪ್ರದೇಶಕ್ಕೆ ಅನ್ವಯಿಸುವ ಮಾನದಂಡಗಳು ಇಲ್ಲಿ ಅನ್ವಯುವಾಗುತ್ತವೆ. ರಾಜ್ಯದಲ್ಲಿ ಆರೋಗ್ಯ ಸೌಲಭ್ಯವನ್ನು ವಿಸ್ತೃತಗೊಳಿಸುವುದಕ್ಕಾಗಿ ಬಹಳಷ್ಟು ಪ್ರಯತ್ನ ಮಾಡುತ್ತಿದೆ. ಸಧ್ಯ ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ಅನುಷ್ಠಾನಗೊಳಿಸಿರುವ ಆರೋಗ್ಯ ಮೂಲಭೂತ ಸೌಲಭ್ಯಗಳ ಸ್ಥಿತಿಗತಿಗಳನ್ನು ಕೋಷ್ಟಕ-4.1ರಲ್ಲಿ ತೋರಿಸಿದೆ. ಜಿಲ್ಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆಯು 1990ರಲ್ಲಿ 66ರಷ್ಟಿದ್ದುದು 2005-06ರಲ್ಲಿ 91ಕ್ಕೇರಿದೆ. ಉಪಕೇಂದ್ರಗಳ ಸಂಖ್ಯೆಯು 492ಕ್ಕೇರಿದೆ. ಪ್ರತಿ ತಾಲ್ಲೂಕಿಗೆ ಒಂದರಂತೆ ಜಿಲ್ಲೆಯಲ್ಲಿ ನೂರು ಹಾಸಿಗೆಗಳ ಸಾಮರ್ಥ್ಯವಿರುವ ಹತ್ತು ಸಾರ್ವಜನಿಕ ಆಸ್ಪತ್ರೆಗಳಿವೆ. ಗುಲಬರ್ಗಾದಲ್ಲಿ 850 ಹಾಸಿಗೆಗಳ ಸಾಮರ್ಥ್ಯವಿರುವ ಆಸ್ಪತ್ರೆಯಿದೆ.

ಪ್ರತಿ ಪ್ರಾಥಮಿಕ ಕೇಂದ್ರಗಳು ಸೇವೆ ಸಲ್ಲಿಸುತ್ತಿದ್ದ ಜನರ ಸಂಖ್ಯೆಯು 1990-91ರ 24316 ರಿಂದ

ಚೌಕಟ್ಟು 4.1

| ಸಂಸ್ಥೆಗಳು | ಮಾನದಂಡ |
|---|---|
| 1 ಒಂದು ಉಪಕೇಂದ್ರ | ಬಯಲು ಪ್ರದೇಶದಲ್ಲಿ ಪ್ರತಿ 5000 ಜನಸಂಖ್ಯೆಗೆ ಒಂದು, ಗುಡ್ಡಗಾಡು ಪ್ರದೇಶದಲ್ಲಿ ಪ್ರತಿ 3000 ಜನಸಂಖ್ಯೆಗೆ ಒಂದು |
| 2 ಪ್ರಾಥಮಿಕ ಆರೋಗ್ಯ ಕೇಂದ್ರ | ಬಯಲು ಪ್ರದೇಶದಲ್ಲಿ ಪ್ರತಿ 30000 ಜನಸಂಖ್ಯೆಗೆ ಒಂದು, ಗುಡ್ಡಗಾಡು ಪ್ರದೇಶದಲ್ಲಿ ಪ್ರತಿ 20000 ಜನಸಂಖ್ಯೆಗೆ ಒಂದು |
| ಸಮುದಾಯ ಆರೋಗ್ಯ ಕೇಂದ್ರ | ಪ್ರತಿ 1-1.2 ಲಕ್ಷ ಜನಸಂಖ್ಯೆಗೆ ಒಂದು, ಪ್ರತಿ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಒಂದು |

ಕೋಷ್ಟಕ 4.1

## ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಸೇವಾ ವ್ಯವಸ್ಥೆಯ ಲಭ್ಯತೆ 2005-06

| ತಾಲ್ಲೂಕುಗಳ ಹೆಸರು | ಗ್ರಾಮೀಣ ಜನಸಂಖ್ಯೆ | ಹಳ್ಳಿಗಳ ಸಂಖ್ಯೆ | ಉಪ ಕೇಂದ್ರಗಳು | ಪ್ರಾ.ಆ.ಕೇಂ. | ಹಾಸಿಗೆಗಳ ಸಂಖ್ಯೆ | ವೈದ್ಯರ ಸಂಖ್ಯೆ | ಆಯುರ್ವೇದ ಆಸ್ಪತ್ರೆಗಳು | ಆಸ್ಪತ್ರೆಗಳಲ್ಲಿ ಹಾಸಿಗೆಗಳು |
|---|---|---|---|---|---|---|---|---|
| ಅಫಜಲಪುರ | 160736 | 89 | 42 | 8 | 48 | 16 | 1 | 100 |
| ಅಳಂದ್ | 261891 | 135 | 55 | 12 | 72 | 30 | 1 | 100 |
| ಚಿಂಚೋಳಿ | 206502 | 137 | 42 | 10 | 60 | 19 | 1 | 100 |
| ಚಿತ್ತಾಪುರ | 238532 | 122 | 54 | 8 | 48 | 34 | 1 | 100 |
| ಗುಲಬರ್ಗಾ | 245414 | 136 | 52 | 9 | 54 | 28 | 1 | 850 |
| ಜೇವರ್ಗಿ | 216075 | 145 | 44 | 9 | 54 | 23 | 1 | 100 |
| ಸೇಡಮ್ | 156026 | 109 | 33 | 7 | 42 | 20 | 1 | 100 |
| ಶಹಾಪುರ | 249819 | 145 | 55 | 12 | 72 | 15 | 1 | 100 |
| ಶೋರಾಪುರ | 293133 | 190 | 59 | 12 | 72 | 14 | 1 | 100 |
| ಯಾದಗೀರ್ | 250173 | 155 | 56 | 15 | 90 | 37 | 1 | 100 |
| **ಒಟ್ಟು** | **2278301** | **1360** | **492** | **102** | **612** | **236** | **10** | **1850** |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿಅಂಶ ನೋಟ : 2005-06

2005–06ರಲ್ಲಿ 21906ಕ್ಕಿಳಿದಿದೆ. ಆದರೆ ಚಿತ್ತಾಪುರ, ಶೋರಾಪುರ, ಸೇಡಮ್, ಜೇವರ್ಗಿ ಮತ್ತು ಗುಲಬರ್ಗಾ ತಾಲ್ಲೂಕುಗಳಲ್ಲಿ ಸ್ಥಿತಿಯು ಕೆಳಮಟ್ಟದಲ್ಲಿದೆ.

ಅಫ್‌ಜಲಪುರ ಮತ್ತು ಯಾದಗೀರ್ ತಾಲ್ಲೂಕುಗಳನ್ನು ಬಿಟ್ಟರೆ ಉಳಿದೆಲ್ಲ ತಾಲ್ಲೂಕುಗಳಲ್ಲಿ ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರ ಸೇವೆ ಸಲ್ಲಿಸುತ್ತಿರುವ ಜನಸಂಖ್ಯೆಯು 20000ಕ್ಕಿಂತ ಅಧಿಕವಿದೆ. ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ಪ್ರತಿ ಉಪಕೇಂದ್ರವು 4000 ಜನರಿಗೆ ಸೇವೆ ಒದಗಿಸುತ್ತಿದೆ. ಇದು ಮಾನದಂಡದ ಮೌಲ್ಯವಾದ 3000ಕ್ಕಿಂತ ಅಧಿಕವಾಯಿತು.

ಈ ಎಲ್ಲ ಕಾರಣಗಳಿಂದಾಗಿ ಜಿಲ್ಲೆಯು ಆರೋಗ್ಯ ಸೌಲಭ್ಯಕ್ಕೆ ಸಂಬಂಧಿಸಿದಂತೆ ಕೊರತೆಯನ್ನು ಎದುರಿಸುತ್ತದೆಯೆಂದು ಹೇಳಬಹುದು.

ಜಿಲ್ಲೆಯು ಅತ್ಯಂತ ಕಡಿಮೆ ಜನಸಾಂದ್ರತೆಯನ್ನು ಹೊಂದಿದ್ದು ಹಳ್ಳಿಗಳು ಎಲ್ಲ ಕಡೆ ಹರಡಿಕೊಂಡಿವೆ. ಭೂಗೋಳಿಕ ಸಂಗತಿಯಿಂದಾಗಿ ಜನರು ಆರೋಗ್ಯ ಸೌಲಭ್ಯಕ್ಕೆ ಸಂಬಂಧಿಸಿದಂತೆ ದುಸ್ಥಿತಿಯನ್ನು ಎದುರಿಸುತ್ತಿದ್ದಾರೆಂದು ಹೇಳಬಹುದು. ಶೋರಾಪುರ ಮತ್ತು ಶಹಾಪುರಗಳ ಆರೋಗ್ಯ ಅಗತ್ಯಗಳನ್ನು ಬೇರೊಂದು ನೆಲೆಯಿಂದ ಪರಿಶೀಲಿಸಬೇಕಾಗುತ್ತದೆ. ಜನಸಂಖ್ಯೆಯ ಸಂಗತಿಯಲ್ಲದೆ, ಇಲ್ಲಿ ಹಳ್ಳಿಗಳು ದೂರದೂರದಲ್ಲಿ ನೆಲೆಗೊಂಡಿರುವುದರಿಂದ ಮತ್ತು ಜನರ ವಾಸಸ್ಥಳ ಕ್ಯಾಂಪ್ ಮತ್ತು ತಾಂಡಗಳ ರೂಪದಲ್ಲಿರುವುದರಿಂದ ಇಲ್ಲಿನ ಆರೋಗ್ಯದ ಅಗತ್ಯಗಳನ್ನು ಭಿನ್ನ ನೆಲೆಯಲ್ಲಿ ನೋಡಬೇಕಾಗುತ್ತದೆ. ಚಿತ್ತಾಪುರ, ಗುಲಬರ್ಗಾ, ಜೇವರ್ಗಿ, ಸೇಡಮ್ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ವೈದ್ಯಕೀಯ ವ್ಯವಸ್ಥೆಯ ಮೇಲೆ ಅಪಾರ ಭಾರ ಬೀಳುತ್ತಿದೆ. ಸುಮಾರು 1820 ಚ.ಕಿ.ಮೀ. ವ್ಯಾಪ್ತಿಯಿರುವ ಶೋರಾಪುರ ತಾಲ್ಲೂಕಿನಲ್ಲಿ 12 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜನರಿಗೆ ಸೇವೆ ಒದಗಿಸುತ್ತಿದ್ದರೂ ಅಲ್ಲಿ ಸಮುದಾಯ ಆರೋಗ್ಯ ಕೇಂದ್ರವಿಲ್ಲ. (ಸರ್ಕಾರವು ನಿಗದಿಪಡಿಸಿರುವ ಮಾನದಂಡದ ಪ್ರಕಾರ ಮೂರು ಸಮುದಾಯ ಆರೋಗ್ಯ ಕೇಂದ್ರಗಳು ಇಲ್ಲಿರಬೇಕು. ಜಿಲ್ಲೆಯಲ್ಲಿ 104 ಪ್ರಾಥಮಿಕ ಆರೋಗ್ಯ ಕೇಂದ್ರಗಳಿದ್ದರೆ ಅಲ್ಲಿ ಕೇವಲ 10 ಸಮುದಾಯ ಆರೋಗ್ಯ ಕೇಂದ್ರಗಳಿವೆ.

ಕೋಷ್ಟಕ 4.2

**ಗುಲಬರ್ಗಾ ಜಿಲ್ಲೆಯಲ್ಲಿ ಆರೋಗ್ಯ ಸೌಲಭ್ಯ ಸೇವೆ ಕುರಿತ ಮೂಲಭೂತ ಸೂಚಿಗಳು : 2005–06**

| ಕ್ರ.ಸಂ. | ತಾಲ್ಲೂಕುಗಳು | ಪ್ರತಿ 10000 ಜನಸಂಖ್ಯೆಗೆ ಹಾಸಿಗೆಗಳು (ಗ್ರಾಮೀಣ) | ಪ್ರತಿ ಲಕ್ಷ ಜನಸಂಖ್ಯೆಗೆ ವೈದ್ಯರ ಸಂಖ್ಯೆ (ಗ್ರಾಮೀಣ) | ಪ್ರತಿ ಉಪಕೇಂದ್ರ ಸೇವೆ ಸಲ್ಲಿಸುತ್ತಿರುವ ಜನಸಂಖ್ಯೆ | ಪ್ರತಿ ಪ್ರಾ.ಆ.ಕೇ. ಸೇವೆ ಸಲ್ಲಿಸುತ್ತಿರುವ ಜನರ ಸಂಖ್ಯೆ | ಜನಸಂಖ್ಯೆ ಮತ್ತು ಹಾಸಿಗೆಗಳ ನಡುವಿನ ಅನುಪಾತ |
|---|---|---|---|---|---|---|
| 1 | ಅಫ಼ಜಲಪುರ | 2.98 | 9.9 | 3827.04 | 17859.55 | 928.20 |
| 2 | ಅಳಂದ್ | 2.75 | 11.5 | 4594.57 | 21824.25 | 1280.75 |
| 3 | ಚಿಂಚೋಳಿ | 2.9 | 9.2 | 4489.17 | 20650.20 | 1177.08 |
| 4 | ಚಿತ್ತಾಪುರ | 2.0 | 14.25 | 4184.77 | 26503.55 | 1479.04 |
| 5 | ಗುಲಬರ್ಗಾ | 2.2 | 11.4 | 4231.27 | 27268.22 | 722.65 |
| 6 | ಜೇವರ್ಗಿ | 2.5 | 10.6 | 4501.56 | 24008.33 | 1527.62 |
| 7 | ಸೇಡಮ್ | 2.7 | 12.8 | 4589.00 | 22289.42 | 1101.98 |
| 8 | ಶಹಾಪುರ | 2.9 | 6.0 | 4542.16 | 20818.25 | 1411.14 |
| 9 | ಶೋರಾಪುರ | 2.45 | 5.6 | 4805.45 | 24427.75 | 1891.88 |
| 10 | ಯಾದಗೀರ್ | 3.6 | 14.8 | 4240.22 | 16678.20 | 1273.07 |
| | **ಒಟ್ಟು** | **2.68** | **10.36** | **4449.80** | **21906.74** | **1129.07** |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿಅಂಶ ನೋಟ : 2005–06



ಅಗತ್ಯವಾಗಿರುವ ಸಂಸ್ಥೆಗಳ ಸಂಖ್ಯೆ 26. ಚಿತ್ತಾಪುರದಲ್ಲಿ ಮೂರು ಸಮುದಾಯ ಆರೋಗ್ಯ ಕೇಂದ್ರಗಳಿವೆ. ಇದರಿಂದಾಗಿ ಅಲ್ಲಿ ಸರಿಯಾದ ವೈದ್ಯಕೀಯ ಸಲಹೆ ಮತ್ತು ಉಪಚಾರ ದೊರೆಯುತ್ತಿಲ್ಲವೆಂದು ಹೇಳಬಹುದು.

ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಂಖ್ಯೆಯು 1991ರಲ್ಲಿ 1278 ರಷ್ಟಿದ್ದುದು 2005-06ರಲ್ಲಿ 2773ಕ್ಕೇರಿದೆ. ಆದರೆ ಪ್ರತಿ ಹಾಸಿಗೆಗಳಿಗೆ ಜನರ ಸಂಖ್ಯೆ ಮಾತ್ರ 1129ರಷ್ಟಿದೆ. ಇದು 2003-04ರಲ್ಲಿ 1552ರಷ್ಟಿತ್ತು. ರೋಗಿಗಳು ಮತ್ತು ಹಾಸಿಗೆಗಳ ನಡುವಿನ ಅನುಪಾತ ರಾಜ್ಯ ಮಟ್ಟದಲ್ಲಿರುವ ಅನುಪಾತಕ್ಕೆ ಸಮವಾಗಿದೆ.

ಆರೋಗ್ಯ ವ್ಯವಸ್ಥೆಯು ಕಾರ್ಯಕ್ಷಮತೆಯು ತೃಪ್ತಿಕರವಾಗಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ವೈದ್ಯರ ಕೊರತೆ, ನರ್ಸುಗಳ ಕೊರತೆ, ಇತರೆ ಸಿಬ್ಬಂದಿಯ ಕೊರತೆ ಮುಂತಾದವು ಕಾರಣ. ಎಲ್ಲ ಮಟ್ಟದಲ್ಲಿರುವ ಸಾರ್ವಜನಿಕ ಆಸ್ಪತ್ರೆಯಲ್ಲಿ ಲಭ್ಯವಿರುವ ಹಾಸಿಗೆಗಳ ಸಂಖ್ಯೆ 850. ಆದರೆ ವಾಸ್ತವವಾಗಿ ದೊರೆಯುವ ಹಾಸಿಗೆಗಳ ಪ್ರಮಾಣ ಕೇವಲ ಶೇ. 54.2. ಅಲ್ಲಿ ಇತರೆ ಸೌಲಭ್ಯಗಳಿಲ್ಲದಿರುವ ಕಾರಣದಿಂದಾಗಿ ಮತ್ತು ವೈದ್ಯಕೀಯ ಸಿಬ್ಬಂದಿಯ ಕೊರತೆಯಿಂದಾಗಿ ಪರಿಸ್ಥಿತಿಯು ಹದಗೆಟ್ಟಿದೆ. ಇದರಿಂದಾಗಿ ಸಧ್ಯ ಅಲ್ಲಿರುವ ಸೌಲಭ್ಯವನ್ನು ಪೂರ್ಣ ಪ್ರಮಾಣದಲ್ಲಿ ಉಪಯೋಗಿಸುವುದು ಸಾಧ್ಯವಿಲ್ಲವಾಗಿದೆ. ಇಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯು ವಸತಿಯ ಸಮಸ್ಯೆಯಿಂದಾಗಿ ಅವರು ಹಳ್ಳಿಗಳಲ್ಲಿ ವಾಸಿಸುತ್ತಿಲ್ಲ.

ಕೋಷ್ಟಕ-4.2ರಲ್ಲಿ ಜಿಲ್ಲೆಯಲ್ಲಿನ ವೈದ್ಯಕೀಯ ವ್ಯವಸ್ಥೆಗೆ ಸಂಬಂಧಿಸಿದಂತೆ ಇರುವ ಕೊರತೆಯನ್ನು ತೋರಿಸಲಾಗಿದೆ. ಶೋರಾಪುರ ತಾಲ್ಲೂಕಿನಲ್ಲಿ ಅತಿ ಹೆಚ್ಚಿನ ಹಳ್ಳಿಗಳಿವೆ (190). ಆದರೆ ಅಲ್ಲಿರುವ ಪ್ರಾ.ಆ.ಕೇ.ಗಳು ಮಾತ್ರ 12. ಅಂದರೆ ಒಂದು ಕೇಂದ್ರವು ಪ್ರತಿ 15 ಹಳ್ಳಿಗೆ ಸೇವೆ ಒದಗಿಸಬೇಕಾಗಿದೆ. ಯಾದಗೀರ್ ತಾಲ್ಲೂಕಿನಲ್ಲಿ ಪ್ರತಿ ಪ್ರ.ಆ.ಕೇ.ವು 10 ಹಳ್ಳಿಗೆ ಸೇವೆ ಒದಗಿಸುತ್ತಿವೆ. ದೊಡ್ಡ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಭೂಗೋಳಿಕ ದೂರವೆ ತೀವ್ರ ಸಮಸ್ಯೆಯಾಗಿ ಬಿಟ್ಟಿದೆ. ಬಡವರಿಗೆ ಇದರಿಂದ ಹೆಚ್ಚಿನ ಅನಾನುಕೂಲವಾಗಿದೆ. ಅವರು ಪರ್ಯಾಯ ವ್ಯವಸ್ಥೆ ಮಾಡಿಕೊಂಡರೆ ಅದಕ್ಕಾಗಿ ಅವರು ಹಣ ನೀಡಬೇಕಾಗುತ್ತದೆ ಮತ್ತು ದಿನದ ಕೂಲಿಯನ್ನು ಕಳೆದುಕೊಳ್ಳಬೇಕಾಗುತ್ತದೆ.

ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿನ ವೈದ್ಯಕೀಯ ಮೂಲಭೂತ ಸೌಲಭ್ಯ ಸೂಚ್ಯಂಕವನ್ನು ಪ್ರಾದೇಶಿಕ ಅಸಮಾನತೆಯ ಅಧ್ಯಯನ ಸಮಿತಿಯು ಲೆಕ್ಕಹಾಕಿದೆ. ಈ ಸೂಚ್ಯಂಕಕ್ಕೆ ಅದು ಕೆಳಕಂಡ ಸೂಚಿಗಳನ್ನು ಬಳಸಿದೆ.

1 ಪ್ರತಿ 10000 ಜನರಿಗೆ ಇರುವ ವೈದ್ಯರ ಸಂಖ್ಯೆ

2 ಪ್ರತಿ 10000 ಜನರಿಗೆ ದೊರೆಯುತ್ತಿರುವ ಸರ್ಕಾರಿ ಆಸ್ಪತ್ರೆಗಳಲ್ಲಿನ ಹಾಸಿಗೆಗಳ ಸಂಖ್ಯೆ ಒಟ್ಟು ವಸತಿ ತಾಣಗಳಲ್ಲಿ ಕುಡಿಯುವ ನೀರು 40 ಎಲ್‌ಪಿಸಿಡಿ ಲಭ್ಯವಿರುವ ವಸತಿಗಳ ಪ್ರಮಾಣ

ಜಿಲ್ಲೆಯಲ್ಲಿನ ಆರೋಗ್ಯ ಮೂಲಭೂತ ಸೌಲಭ್ಯ ಸೂಚ್ಯಂಕದ ಸ್ಥಿತಿಯನ್ನು ಕೋಷ್ಟಕ-4.3ರಲ್ಲಿ ತೋರಿಸಿದೆ.

ಚೌಕಟ್ಟು 4.2

**ಆರೋಗ್ಯ, ಸೇವೆ ಮತ್ತು ದೊರೆಗೊಳ್ಳುವಿಕೆ**

ಗುಲಬರ್ಗಾ ನಗರದಿಂದ 15 ಕಿ.ಮೀ. ದೂರದಲ್ಲಿರುವ ಹಳ್ಳಿ ಡೊಂಗರಗಾಂವ್. ಇದು ರಾಜ್ಯ ಹೆದ್ದಾರಿಯಿಂದ 1.5 ಕಿ.ಮೀ ದೂರದಲ್ಲಿದೆ. ಅಲ್ಲಿ ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ನಿರ್ಮಿಸಲಾಗಿದೆ. ಅಲ್ಲಿ ತನ್ನದೇ ಆದ ಕೊಳವೆ ಬಾವಿಯಿದೆ. ಆದರೆ ಅಲ್ಲಿ ನೀರಿಲ್ಲ. ಬಾವಿಯು ನೀರಿಲ್ಲದೆ ಬತ್ತಿ ಹೋಗಿದೆ. ಅಲ್ಲಿ ನಿಯಮಿತವಾದ ವೈದ್ಯರಿಲ್ಲ. ಒಬ್ಬ ವೈದ್ಯರನ್ನು ಪ್ರತಿ ನಿಯೋಜನೆ ಮೇಲೆ ನೇಮಕವಾಗಿದ್ದಾರೆ. ಆದರೆ ವೈದ್ಯರು ವಾರಕ್ಕೊಮ್ಮೆ ಮಾತ್ರ ದೊರೆಯುತ್ತಾರೆ. ಅವರು ವಾರದಲ್ಲಿ ಯಾವ ದಿನ ಬರುತ್ತಾರೆಂಬುದು ನಿಶ್ಚಿತವಿಲ್ಲ. ಇತ್ತೀಚಿಗೆ ಹೆಂಗಸೊಂದು ಆಸ್ಪತ್ರೆ ತಲುಪುವುದಕ್ಕೆ ಮುಂಚೆಯೆ ಮಗುವಿಗೆ ಜನ್ಮ ನೀಡಿದಳು. ಆದರೆ ಮಗು ಕೊನೆಯುಸಿರೆಳೆಯಿತು.

ಕೋಷ್ಟಕ 4.3

### ಜಿಲ್ಲೆಯಲ್ಲಿ ತಾಲ್ಲೂಕುವಾರು ಆರೋಗ್ಯ ಮೂಲಭೂತ ವೈದ್ಯಕೀಯ ಸೌಲಭ್ಯಗಳ ಸೂಚ್ಯಂಕ

| ತಾಲ್ಲೂಕುಗಳು | ಆರೋಗ್ಯ ಮೂಲಭೂತ ವೈದ್ಯಕೀಯ ಸೌಲಭ್ಯಗಳ ಸೂಚ್ಯಂಕ | ಜಿಲ್ಲೆಯಲ್ಲಿ ಸ್ಥಾನ (ಒಟ್ಟು 10) | ರಾಜ್ಯದಲ್ಲಿ ಸ್ಥಾನ (ಒಟ್ಟು 175) | ವರ್ಗೀಕರಣ |
|---|---|---|---|---|
| ಅಫಜಲಪುರ | 0.66 | 6 | 141 | ಅತ್ಯಂತ ಹಿಂದುಳಿದ |
| ಅಳಂದ್ | 0.58 | 7 | 152 | ಅತ್ಯಂತ ಹಿಂದುಳಿದ |
| ಚಿಂಚೋಳಿ | 0.47 | 10 | 169 | ಅತ್ಯಂತ ಹಿಂದುಳಿದ |
| ಚಿತ್ತಾಪುರ | 0.49 | 9 | 166 | ಅತ್ಯಂತ ಹಿಂದುಳಿದ |
| ಗುಲಬರ್ಗಾ | 1.41 | 1 | 20 | ಸಾಪೇಕ್ಷವಾಗಿ ಮುಂದುವರಿದ |
| ಜೇವರ್ಗಿ | 0.86 | 3 | 91 | ಹಿಂದುಳಿದ |
| ಸೇಡಮ್ | 0.75 | 4 | 115 | ಅತಿ ಹಿಂದುಳಿದ |
| ಶಹಾಪುರ | 0.66 | 5 | 137 | ಅತ್ಯಂತ ಹಿಂದುಳಿದ |
| ಶೋರಾಪುರ | 0.56 | 8 | 159 | ಅತ್ಯಂತ ಹಿಂದುಳಿದ |
| ಯಾದಗೀರ್ | 0.89 | 2 | 81 | ಹಿಂದುಳಿದ |

ಮೂಲ: ಪ್ರಾದೇಶೀಕ ಅಸಮಾನತೆ ಅಧ್ಯಯನದ ಉನ್ನತಾಧಿಕಾರ ಸಮಿತಿ ವರದಿ : 2002

ಸರ್ಕಾರಿ ಆರೋಗ್ಯ ವ್ಯವಸ್ಥೆಯಲ್ಲಿ ಸೌಲಭ್ಯಗಳು ಸಾಕಷ್ಟು ಇಲ್ಲದ ಕಾರಣ ಮತ್ತು ಔಷಧಿಗಳ ಕೊರತೆಯಿಂದಾಗಿ ಸಾರ್ವಜನಿಕರು ಖಾಸಗಿ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಾರೆ. ಅನೇಕ ಸಂದರ್ಭದಲ್ಲಿ ಜನರು ವೈದ್ಯಕೀಯ ಬಿಲ್ಲನ್ನು ಸಾಲದ ಮೂಲಕ ತುಂಬುತ್ತಾರೆ.. ಪ.ಜಾ ಮತ್ತು ಪ.ಪಂ ಜನರು ಸ್ಥಳೀಯ ನಾಟಿ ವೈದ್ಯರನ್ನು ಮೊರೆ ಹೋಗುತ್ತಾರೆ. ಏಕೆಂದರೆ ಅವರು ಯಾವಾಗ ಬೇಕು ಆಗ ದೊರೆಯುತ್ತಾರೆ, ರೋಗಿಗಳ ಅನುಕೂಲಕ್ಕೆ ತಕ್ಕಂತೆ ದೊರೆಯುತ್ತಾರೆ, ಶುಲ್ಕವು ಕಡಿಮೆ, ಮತ್ತು ರೋಗಕ್ಕೆ ಚಿಕಿತ್ಸೆ ದೊರೆಯಿತೆಂಬ ಮಾನಸಿಕ ಸಮಾಧಾನವಿರುತ್ತದೆ. ಅವರು ಎದುರಿಸುತ್ತಿರುವ ಸಾಮಾಜಿಕ ಅನಿಷ್ಟದಿಂದಾಗಿ, ಅನಕ್ಷರತೆಯಿಂದಾಗಿ ಮತ್ತು ಮಾಹಿತಿಯ ಕೊರತೆಯಿಂದಾಗಿ ಅವರು ಸ್ಥಳೀಯ ನಾಟಿ ವೈದ್ಯರನ್ನು ಮೊರೆ ಹೋಗುತ್ತಾರೆ. ಮಹಿಳೆಯರ ವೈದ್ಯಕೀಯ ಸೌಲಭ್ಯಕ್ಕೆ ಸಂಬಂಧಿಸಿದಂತೆ ಸಮಯದ ಪಾತ್ರ ತುಂಬಾ ಮುಖ್ಯ.

ಜನರ ಆರೋಗ್ಯ ಸ್ಥಿತಿಗತಿಯು ಕೆಳಮಟ್ಟದಲ್ಲಿರುವುದಕ್ಕೆ ಮುಖ್ಯ ಕಾರಣವೆಂದರೆ ವೈದ್ಯಕೀಯ ಮೂಲ ಸೌಲಭ್ಯಗಳ ಕೊರತೆ ಮತ್ತು ಕೆಳಮಟ್ಟದ ಜನಸಂಖ್ಯಾ ಸ್ಥಿತಿಗತಿ. ಕೆಳಗಿನ ಕೋಷ್ಟಕ–4.4ರಲ್ಲಿ ಇದಕ್ಕೆ ಸಂಬಂಧಿಸಿದ ವಿವರಗಳನ್ನು ನೀಡಲಾಗಿದೆ.

ಆರೋಗ್ಯದ ಮತ್ತು ಜನಸಂಖ್ಯೆಗೆ ಸಂಬಂಧಿಸಿದ ಸೂಚಿಗಳಲ್ಲಿ ಜಿಲ್ಲೆಯ ಸ್ಥಾನವು ಅತ್ಯಂತ ಅನನುಕೂಲ ಸ್ಥಿತಿಯಲ್ಲಿದೆ. ಕಳೆದ ದಶಕದಲ್ಲಿ ಜನನ ಪ್ರಮಾಣದಲ್ಲಿ ಉಂಟಾದ ಇಳಿಕೆ ಕೇವಲ ಪ್ರತಿ ಸಾವಿರಕ್ಕೆ ಮೂರು. ಮರಣ ಪ್ರಮಾಣದಲ್ಲಿ ಸಾವಿರಕ್ಕೆ 0.8ರಷ್ಟು ಮಾತ್ರ ಇಳಿಕೆಯುಂಟಾಗಿದೆ. ಇದು ರಾಜ್ಯ ಮಟ್ಟದ ಸ್ಥಿತಿಗಿಂತ ಕಡಿಮೆಯಾಗಿದೆ. ಶಿಶು ಮರಣ ಪ್ರಮಾಣ 67. ಇದು ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸ್ಥಿತಿಗಿಂತ ಕಡಿಮೆಯಾಗಿದೆ.

## ಮಹಿಳೆ ಮತ್ತು ಮಕ್ಕಳ ಆರೋಗ್ಯ

ಸಮಾಜದಲ್ಲಿನ ಪುರುಷಶಾಹಿ ಮೌಲ್ಯಗಳಿಂದಾಗಿ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ತಾಯಂದಿರ ಮತ್ತು ಮಕ್ಕಳ ಆರೋಗ್ಯ ಸ್ಥಿತಿಯು ಕೆಳಮಟ್ಟದಲ್ಲಿದೆ. ಈ ಕಾರಣದಿಂದಾಗಿ ಇಲ್ಲಿ ಕಡಿಮೆ ವಯಸ್ಸಿಗೆ ಹೆಣ್ಣು ಮಕ್ಕಳ ಮದುವೆ ನಡೆಯುತ್ತದೆ. ಇದರಿಂದಾಗಿ ಜನನ ಪ್ರಮಾಣವು ಅಧಿಕ ಹಾಗೂ ಸಂತಾನೋತ್ಪತ್ತಿ ಸಾಮರ್ಥ್ಯವೂ ಅಧಿಕ. ಮಹಿಳೆಯರು ಮತ್ತು ಮಕ್ಕಳು

**ಸಮಾಜದಲ್ಲಿನ ಪುರುಷಶಾಹಿ ಮೌಲ್ಯಗಳಿಂದಾಗಿ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ತಾಯಂದಿರ ಮತ್ತು ಮಕ್ಕಳ ಆರೋಗ್ಯ ಸ್ಥಿತಿಯು ಕೆಳಮಟ್ಟದಲ್ಲಿದೆ. ಈ ಕಾರಣದಿಂದಾಗಿ ಇಲ್ಲಿ ಕಡಿಮೆ ವಯಸ್ಸಿಗೆ ಹೆಣ್ಣು ಮಕ್ಕಳ ಮದುವೆ ನಡೆಯುತ್ತದೆ. ಇದರಿಂದಾಗಿ ಜನನ ಪ್ರಮಾಣವು ಅಧಿಕ ಹಾಗೂ ಸಂತಾನೋತ್ಪತ್ತಿ ಸಾಮರ್ಥ್ಯವೂ ಅಧಿಕ.**

**ಶಿಶು ಮರಣ ಪ್ರಮಾಣವು ರಾಷ್ಟ್ರಮಟ್ಟದ 64ಕ್ಕಿಂತ ಅಧಿಕವಾಗಿದೆ. ಜಿಲ್ಲೆಯಲ್ಲಿ ಶಿಶು ಮರಣ ಪ್ರಮಾಣವು ಅಧಿಕವಿರಲು ಕಾರಣಗಳೆಂದರೆ ಮಹಿಳೆಯರ ಕೆಳಮಟ್ಟದ ಸಾಕ್ಷರತಾ ಪ್ರಮಾಣ, ಬಡತನ, ಅಧಿಕ ಜನನ ಪ್ರಮಾಣ, ತಾಯಿ ಮತ್ತು ಮಕ್ಕಳಲ್ಲಿ ಕಂಡು ಬರುತ್ತಿರುವ ಅಪೌಷ್ಟಿಕತೆ,ಮುಂತಾದವು.**

ಕುಟುಂಬ ಮಟ್ಟದಲ್ಲಿ ತಾರತಮ್ಯವನ್ನು ಎದುರಿಸುತ್ತಿರುವುದರಿಂದ ಮತ್ತು ಮಹಿಳೆಯರ ಆರೋಗ್ಯದ ಅಗತ್ಯಗಳು ಆದ್ಯತೆಯ ಸಂಗತಿಯಾಗಿಲ್ಲದಿರುವುದರಿಂದ ಅಲ್ಲಿ ಅವರು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಮಹಿಳೆಯರ ಸರಾಸರಿ ವಿವಾಹದ ವಯಸ್ಸು ಕೇವಲ 17.7 ವರ್ಷಗಳು. ಇದು ರಾಜ್ಯಮಟ್ಟದಲ್ಲಿರುವ 19.1 ವರ್ಷಕ್ಕಿಂತ ಕಡಿಮೆಯಾಗಿದೆ. ಶಾಸನದ ಪ್ರಕಾರ ಮಹಿಳೆಯರ ವಿವಾಹದ ವಯಸ್ಸು 18. ಜಿಲ್ಲೆಯಲ್ಲಿ ಸುಮಾರು ಶೇ. 49ರಷ್ಟು ಮಹಿಳೆಯರು ತಮ್ಮ 18ನೆಯ ವಯಸ್ಸಿಗೆ ಮೊದಲೇ ವಿವಾಹವಾಗುತ್ತಾರೆ. ಅಪ್ರಾಪ್ತ ವಯಸ್ಸಿನಲ್ಲಿ ಮಹಿಳೆಯರು ಗರ್ಭಿಣಿಯರಾಗುವುದರಿಂದ ಅವರು ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದು ದೊಡ್ಡ ಕುಟುಂಬಕ್ಕೆ ಕಾರಣವಾಗಿರುವ ಒಂದು ಸಂಗತಿಯಾಗಿರುವುದರಿಂದ ಇದು ಜನಸಂಖ್ಯೆಯು ತೀವ್ರಗತಿಯಲ್ಲಿ ಏರುವುದಕ್ಕೆ ಕಾರಣವಾಗಿದೆ. ಇದು ಮಹಿಳೆಯರ ಸಶಕ್ತೀಕರಣದ ಮೇಲೆ ಮತ್ತು ಮಹಿಳೆಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತದೆ. ಅವರ ಉದ್ಯೋಗದ ಅವಕಾಶಗಳನ್ನು ಅದು ಸೀಮಿತಗೊಳಿಸಿಬಿಡುತ್ತದೆ. ಅವರು ಆರ್ಥಿಕವಾಗಿ ಪರಾವಲಂಬಿಗಳಾಗ ಬೇಕಾಗುತ್ತದೆ. ಇದು ಅನೇಕ ಬಗೆಯ ರೋಗಗಳಿಗೆ ಕಾರಣವಾಗಬಲ್ಲುದು. ಇದರಿಂದಾಗಿ ರಕ್ತಹೀನತೆ, ಭ್ರೂಣದಲ್ಲಿನ ವಿಕಾರ, ಸಮಯ ಮೀರುವುದಕ್ಕೆ ಮೊದಲೇ ಜನನ, ಹುಟ್ಟಿದ ಮಗುವಿನ ತೂಕ ಕಡಿಮೆಯಿರುವುದು ಮುಂತಾದವು ಉಲ್ಬಣಗೊಳ್ಳಬಹುದು. ಒಟ್ಟು ಸಂತಾನೋತ್ಪತ್ತಿ ಪ್ರಮಾಣ 5.6ರಷ್ಟಿದೆ (1998–99) ಇದು ರಾಜ್ಯದಲ್ಲೆ ಎರಡನೆಯ ಅತಿ ಹೆಚ್ಚಿನ ಮಟ್ಟವಾಗಿದೆ. ಜಿಲ್ಲೆಯಲ್ಲಿನ ಜನನ ಪ್ರಮಾಣವಾದ 28 ರಾಜ್ಯದಲ್ಲೇ ಅತಿ ಹೆಚ್ಚಿನದ್ದಾಗಿದೆ.

ರಾಜ್ಯ ಮತ್ತು ಮುಂದುವರಿದ ಜಿಲ್ಲೆಗಳಿಗೆ ಹೋಲಿಸಿದರೆ ಗುಲಬರ್ಗಾ ಜಿಲ್ಲೆಯ ಸಂತಾನೋತ್ಪತ್ತಿ ಸೂಚಿಗಳಿಗೆ ಸಂಬಂಧಿಸಿದಂತೆ ಸ್ಥಿತಿಯು ಅತ್ಯಂತ ನಿರಾಶಾದಾಯಕವಾಗಿದೆ. ಇದು ವಿವಾಹದ ವಯಸ್ಸು ಕಡಿಮೆಯಿರುವುದರಲ್ಲಿ, ಜನನ ಪ್ರಮಾಣ ಹೆಚ್ಚಿಗೆ ಇರುವುದರಲ್ಲಿ, ರೋಗ ನಿರೋಧಕ ಚುಚ್ಚು ಮದ್ದು ನೀಡುವ ಕಾರ್ಯಕ್ರಮದ ವ್ಯಾಪ್ತಿಯು ತುಂಬ ಸೀಮಿತವಾಗಿರುವುದರಲ್ಲಿ ಮತ್ತು ಸಂತಾನೋತ್ಪತ್ತಿ ಆರೋಗ್ಯ ನಿರ್ಲಕ್ಷ್ಯಕ್ಕೆ ಒಳಗಾಗಿರುವುದರಲ್ಲಿ ತಿಳಿಯಬಹುದಾಗಿದೆ. ಶಿಶು ಮರಣ ಪ್ರಮಾಣವು 1991ರಲ್ಲಿ 94ರಷ್ಟಿದ್ದುದು 2001ರಲ್ಲಿ ಅದು 67ಕ್ಕಿಳಿದಿದೆ. ಆದರೆ ಇದು ರಾಜ್ಯಮಟ್ಟದ ಪ್ರಮಾಣವಾದ 55ಕ್ಕಿಂತ ಅಧಿಕವಾಗಿದೆ. ಜಿಲ್ಲೆಯಲ್ಲಿ ಇದರ ಇಳಿಕೆ ಪ್ರಮಾಣ ಶೇ 28.72 ರಷ್ಟಾದರೆ ರಾಜ್ಯಮಟ್ಟದಲ್ಲಿ ಅದು ಶೇ33ರಷ್ಟು ಕಡಿಮೆಯಾಗಿದೆ. ಶಿಶು ಮರಣ ಪ್ರಮಾಣವು ಜಿಲ್ಲೆಯಲ್ಲಿ ಕಡಿಮೆಯಾಗಲು ಮುಖ್ಯ ಕಾರಣವಾಗಿರುವ ಸಂಗತಿಯೆಂದರೆ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದ ಅನುಷ್ಠಾನ. ಇದಕ್ಕೆ ಕಾರಣವಾಗಿರಬಹುದಾದ ಮತ್ತೊಂದು ಸಂಗತಿಯೆಂದರೆ ರೋಗ ನಿರೋಧಕ ಚುಚ್ಚು ಮದ್ದು ಕಾರ್ಯಕ್ರಮವನ್ನು 1991ರಲ್ಲಿ ಆರಂಭ ಮಾಡಿದ್ದಾಗಿದೆ. ಶಿಶು ಮರಣ ಪ್ರಮಾಣವು ರಾಷ್ಟ್ರಮಟ್ಟದ 64ಕ್ಕಿಂತ ಅಧಿಕವಾಗಿದೆ. ಜಿಲ್ಲೆಯಲ್ಲಿ ಶಿಶು ಮರಣ ಪ್ರಮಾಣವು ಅಧಿಕವಿರಲು ಕಾರಣಗಳೆಂದರೆ ಮಹಿಳೆಯರ ಕೆಳಮಟ್ಟದ ಸಾಕ್ಷರತಾ ಪ್ರಮಾಣ, ಬಡತನ, ಅಧಿಕ ಜನನ ಪ್ರಮಾಣ, ತಾಯಿ ಮತ್ತು ಮಕ್ಕಳಲ್ಲಿ ಕಂಡು ಬರುತ್ತಿರುವ ಅಪೌಷ್ಟಿಕತೆ, ಮುಂತಾದವು.

## ತಾಯಂದಿರ ಮತ್ತು ಮಕ್ಕಳ ಆರೋಗ್ಯ ಸೇವೆಗಳು

ಜಿಲ್ಲೆಯಲ್ಲಿ ತಾಯಂದಿರ ಮತ್ತು ಮಕ್ಕಳ ಆರೋಗ್ಯ ಸೇವೆಯನ್ನು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ನೀಡಲಾಗುತ್ತಿದೆ. ಇದರ ಗುರಿಗಳು ಹೀಗಿವೆ:

1 ರೋಗನಿರೋಧಕ ಗುಣವನ್ನು ಹೆಚ್ಚಿಸುವುದು,

2 ಸಾಂಸ್ಥಿಕ ಹೆರಿಗೆಗಳನ್ನು ಪ್ರೋತ್ಸಾಹಿಸುವುದು,

3 ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣವನ್ನು ಕಡಿಮೆ ಮಾಡುವುದು,

ಇದಕ್ಕಾಗಿ ಅಳವಡಿಸಿಕೊಂಡಿರುವ ಕಾರ್ಯತಂತ್ರವೆಂದರೆ,

1 ಸಂಚಾರಿ ವೈದ್ಯಕೀಯ ಸೇವೆಯನ್ನು ಜಾರಿಗೆ ತರುವುದು,

2 ರಾತ್ರಿಹೊತ್ತಿನಲ್ಲಿ ನಡೆಯುವ ಹೆರಿಗೆಗಳಿಗೆ ಉತ್ತೇಜನಾರ್ಥವಾಗಿ ಹೆಚ್ಚುವರಿ ವೇತನ ನೀಡುವುದು,

3 ರೋಗನಿರೋಧಕ ಚುಚ್ಚುಮದ್ದು ಕಾರ್ಯಕ್ರಮದ ಯಶಸ್ವಿಗೊಂದೋಳನ ಮಾದರಿ ವಿಧಾನವನ್ನು ಅಳವಡಿಸಿಕೊಳ್ಳುವುದು,

4 ತುರ್ತು ಹೆರಿಗೆ ಮತ್ತು ಆರೆಗುಳಿಗೆ ಸೇವೆಯನ್ನು ಒದಗಿಸುವುದು,

5 ಹೆರಿಗೆಗಾಗಿ ವಿಶೇಷ ಕೋಣೆಯನ್ನು ಒದಗಿಸುವುದು ಮತ್ತು ಶಸ್ತ್ರ ಚಿಕಿತ್ಸಾ ಕೋಣೆಯನ್ನು ಒದಗಿಸುವುದು

6 ಪ್ರಸವ ಪೂರ್ವ ವೈದ್ಯಕೀಯ ಸೇವೆಯನ್ನು ಒದಗಿಸುವುದು

ಕೋಷ್ಟಕ 4.4

## ಜಿಲ್ಲೆಯ ಆರೋಗ್ಯದ ಮೂಲಭೂತ ಸೌಲಭ್ಯದ ಸೂಚಿಗಳು : 1991–2001

| ಕ್ರ.ಸಂ | ಸೂಚಿಗಳು | ಗುಲಬರ್ಗಾ | | ಕರ್ನಾಟಕ | | ಭಾರತ |
|---|---|---|---|---|---|---|
| | | 1991 | 2001 | 1991 | 2001 | 2001–02 |
| 1 | ಒಟ್ಟು ಸಂತಾನೋತ್ಪತ್ತಿ ಪ್ರಮಾಣ | 4.75 | 3.5 | 3.87 | 2.4 | 3.2 |
| 2 | ಶಿಶು ಮರಣ ಪ್ರಮಾಣ | 94 | 67 | 82 | 55 | 63 |
| 3 | ಕಚ್ಚಾ ಜನನ ಪ್ರಮಾಣ | 31.2 | 28 | 27 | 22.4 | 25.0 |
| 4 | ಕಚ್ಚಾ ಮರಣ ಪ್ರಮಾಣ | 9.9 | 9.1 | 8.6 | 7.5 | 8.1 |
| 5 | ಜೀವನಾಯುಷ್ಯ ಒಟ್ಟು | 59.5 | 62.9 | 62.1 | 65.8 | 64.8 |
| | ಪುರುಷರು | 58.5 | 61.9 | 61.0 | 64.5 | 64.1 |
| | ಮಹಿಳೆಯರು | 60.4 | 63.9 | 63.2 | 67.0 | 65.4 |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ–2005

ಕೋಷ್ಟಕ 4.5

## ಗುಲಬರ್ಗಾ ಜಿಲ್ಲೆಯಲ್ಲಿ ಸಂತಾನೋತ್ಪತ್ತಿ ಆರೋಗ್ಯದ ಸೂಚಿಗಳು : 2004

| ಕ್ರ.ಸಂ | ಸೂಚಿಗಳು | ಜಿಲ್ಲೆ | ರಾಜ್ಯ | ಉನ್ನತ ಮಟ್ಟದಲ್ಲಿರುವ ಜಿಲ್ಲೆಗಳು |
|---|---|---|---|---|
| 1 | ಹದಿನೆಂಟು ವರ್ಷಕ್ಕೆ ಮೊದಲು ವಿವಾಹವಾಗುವ ಮಹಿಳೆಯರ ಪ್ರಮಾಣ | 48.9 | 31.4 | 1.1 (ಉಡುಪಿ) |
| 2 | ವಿವಾಹದ ಸರಾಸರಿ ವಯಸ್ಸು | | | (ಉಡುಪಿ) |
| | ಬಾಲಕರು | 24 | 25.1 | 28.5 |
| | ಬಾಲಕಿಯರು | 17.7 | 19.1 | 23.3 |
| 3 | ಈಗ ಬಳಸುತ್ತಿರುವ ಕುಟುಂಬ ಯೋಜನೆ ವಿಧಾನದ ಪ್ರಮಾಣ (ಎಲ್ಲ ವಿಧಾನಗಳು) | 41.7 | 59.3 | 73.5 (ಮಂಡ್ಯ) |
| 4 | ಪ್ರಸವ ಪೂರ್ವ ಸೇವೆ (ಮೂರು ಭೇಟಿ, ಒಂದು ಟಿಟಿ ಮತ್ತು ಐಎಫ್ಎ ಮಾತ್ರೆಗಳು) | 14.6 | 29.9 | 55.7 (ಬೆಂಗಳೂರು) (ಗ್ರಾ) |
| 5 | ಸಂಪೂರ್ಣ ರೋಗನಿರೋಧಕ ಚುಚ್ಚುಮದ್ದು | 48.4 | 74.1 | 93.2 (ಬೆಂಗಳೂರು(ನ)) |
| 6 | ಮೂರು ಮಕ್ಕಳಿಗಿಂತ ಹೆಚ್ಚಿರುವ ಕುಟುಂಬಗಳ ಪ್ರಮಾಣ | 51.1 | 29.6 | 12.0 (ಹಾಸನ) |

ಮೂಲ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯ, ಜಿಲ್ಲಾ ಮಟ್ಟದ ಕುಟುಂಬ ಘಟಕಗಳ ಮತ್ತು ಸೌಲಭ್ಯಗಳ ಸಮೀಕ್ಷೆ : 2004 ಐಯುಪಿಎಸ್ ಮುಂಬೈ.

ಜಿಲ್ಲೆಯಲ್ಲಿ ಗಡಿ ಜಿಲ್ಲೆಗಳ ಗುಂಪು ಕಾರ್ಯತಂತ್ರವನ್ನು ಆರಂಭಿಸಲಾಗಿದೆ. ಇದರ ಗುರಿಯೆಂದರೆ ನೂರಕ್ಕೆ ನೂರರಷ್ಟು ರೋಗನಿರೋಧಕ ಚುಚ್ಚು ಮದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು, ಶಿಶು ಮರಣ ಪ್ರಮಾಣವನ್ನು ತಗ್ಗಿಸುವುದು, ತಾಯಂದಿರ ಮರಣ ಪ್ರಮಾಣವನ್ನು ಈಗಿರುವ ಮಟ್ಟದಿಂದ ಶೇ. 50ರಷ್ಟು ಕಡಿಮೆ ಮಾಡುವುದು, ನೂರಕ್ಕೆ ನೂರರಷ್ಟು ಹೆರಿಗೆಗಳನ್ನು ಸಂಸ್ಥೆಗಳಲ್ಲೇ ನಡೆಯುವಂತೆ ಮಾಡುವುದು. ಆದರೆ ಜಿಲ್ಲೆಯು ಈ ಗುರಿಗಳನ್ನು ಸಾಧಿಸಿಕೊಳ್ಳುವುದರಲ್ಲಿ ಬಹಳ ಹಿಂದೆ ಬಿದ್ದಿದೆ. ಸಾಂಸ್ಥಿಕ ಹೆರಿಗೆಗಳ ಪ್ರಮಾಣ 2003–04ರಲ್ಲಿ ಕೇವಲ ಶೇ. 31.94. ರಾಜ್ಯದಲ್ಲಿ ಇದು ಅತ್ಯಂತ ಕೆಳಮಟ್ಟದ ಸಾಧನೆಯಾಗಿದೆ.

ಜಿಲ್ಲೆಯೊಳಗೆ ಶೋರಾಪುರ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ಇದು ಅತ್ಯಂತ ಕೆಳಮಟ್ಟದಲ್ಲಿದೆ. ಆದರೆ ಜೇವರ್ಗಿ ತಾಲ್ಲೂಕಿನಲ್ಲಿ ಶೇ. 44.5ರಷ್ಟು ಹೆರಿಗೆಗಳನ್ನು ತರಬೇತಿ ಪಡೆದ ದಾಯಿಯರಿಂದ ಮತ್ತು ಶೇ. 32ರಷ್ಟು ಆಸ್ಪತ್ರೆ ಸಿಬ್ಬಂದಿಯಿಂದ ನಡೆಯುತ್ತಿದೆ. ಶೋರಾಪುರ ತಾಲ್ಲೂಕಿನಲ್ಲಿ ಶೇ. 52ರಷ್ಟು ಹೆರಿಗೆಗಳು ತರಬೇತಿ ಪಡೆದ ದಾಯಿಯರಿಂದ ನಡೆಯುತ್ತಿದೆ. ಆದರೂ ಇಲ್ಲಿ ಅಪಾಯವಿದ್ದೇ ಇರುತ್ತದೆ.

ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮದಡಿಯಲ್ಲಿ ಪ್ರಸವ ಪೂರ್ವ ವೈದ್ಯಕೀಯ ಸೇವೆಯನ್ನು ಒದಗಿಸಲಾಗುತ್ತಿದೆ. ಪ್ರಸವಪೂರ್ವ ಸೇವೆಗಳು ಒಳಗೊಳ್ಳುವ ಸಂಗತಿಗಳೆಂದರೆ

ಆರೋಗ್ಯ ಸಹಾಯಕರಿಂದ ನೊಂದಾವಣೆ

ಆರೋಗ್ಯ ಸಹಾಯಕರಿಂದ ತಪಾಸಣೆ

ಟಿಟೇನಸ್, ಟಾಕ್ಸಾಯಿಡ್ ಮಾತ್ರೆಗಳನ್ನು ನೀಡುವುದು

ಐರನ್ ಫೋಲಿಕ್ ಆಸಿಡ್ ಮಾತ್ರೆಗಳನ್ನು ನೀಡುವುದು ಮತ್ತು

ಪ್ರಸವ ನಂತರದ ವೈದ್ಯಕೀಯ ಸೇವೆ ಹಾಗೂ ಮೂರು ಭಾರಿ ತಪಾಸಣೆ

ಸಂತಾನೋತ್ಪತ್ತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿದ ಮೇಲೂ ಮಹಿಳೆಯರ ಆರೋಗ್ಯ ಕೆಳಮಟ್ಟದಲ್ಲೆ ಮುಂದುವರಿದಿದೆ. ಇದು ಕೋಷ್ಟಕ 4.7 ರಲ್ಲಿನ ಮಾಹಿತಿಯಿಂದ ಸ್ಪಷ್ಟವಾಗುತ್ತದೆ.

ಭೂಗೋಳಿಕವಾಗಿ ಬೃಹತ್ತಾಗಿರುವ ಮತ್ತು ಜನಸಾಂದ್ರತೆಯು ಕಡಿಮೆಯಿರುವ ಶೋರಾಪುರ ತಾಲ್ಲೂಕಿನಲ್ಲಿ ಸಾಂಸ್ಥಿಕ ಹೆರಿಗೆಗಳ ಪ್ರಮಾಣ ಶೇ. 21.27. ಭೂಗೋಳಿಕ ದೂರದ ಕಾರಣವಾಗಿ ಇಲ್ಲಿ ವೈದ್ಯಕೀಯ ಸೇವೆ ಪಡೆಯುವುದು ಸಾಧ್ಯವಾಗುತ್ತಿಲ್ಲ. ಗುಲಬರ್ಗಾ ತಾಲ್ಲೂಕಿನಲ್ಲಿ ಮಾತ್ರ ಅದರಲ್ಲೂ ಅಲ್ಲಿನ ನಗರ ಪ್ರದೇಶದಲ್ಲಿ ಸಾರ್ವಜನಿಕ ಹಾಗೂ ಖಾಸಗಿ ವೈದ್ಯಕೀಯ ಸಂಸ್ಥೆಗಳು ಕೆಲಸ ಮಾಡುತ್ತಿರುವುದರಿಂದ ಸಾಂಸ್ಥಿಕ ಹೆರಿಗೆಗಳ ಪ್ರಮಾಣವು ಶೇ. 57.41 ರಷ್ಟಿದೆ.ಜಿಲ್ಲೆಯಲ್ಲಿ ಐರನ್ ಫೋಲಿಕ್ ಆಸಿಡ್ ಮಾತ್ರೆಗಳು ದೊರೆಯುತ್ತಿರುವುದು ಶೇ. 36.29 ಗರ್ಭಿಣಿಯರಿಗೆ ಮಾತ್ರ. ಚಿಂಚೋಳಿ ತಾಲ್ಲೂಕಿನಲ್ಲಿ ಇದು ಅತ್ಯಂತ ಕಡಿಮೆ ಶೇ. 28.45ರಷ್ಟಿದೆ. ಗರ್ಭಿಣಿಯರಾಗಿದ್ದಾಗ ಮತ್ತು ಬಾಣಂತಿಯರಾಗಿದ್ದಾಗ ಮಹಿಳೆಯರು ಅತಂತ ಅಪಾಯಗಳಿಗೆ ಒಳಗಾಗುತ್ತಾರೆ. ಇದಕ್ಕೆ ಕಾರಣಗಳೆಂದರೆ ಜನನ ಪ್ರಮಾಣ ಅಧಿಕವಾಗಿರುವುದು, ಪ್ರಸವ ಪೂರ್ವ ವೈದ್ಯಕೀಯ ಸೇವೆ ದೊರೆಯದಿರುವುದು, ಹುಟ್ಟಿದ ಮಕ್ಕಳ ತೂಕ ಕಡಿಮೆಯಿರುವುದು, ಮತ್ತು ಸುರಕ್ಷಿತ ಹೆರಿಗೆ ಮುಂತಾದವು. ಇದಲ್ಲದೆ ಶೇ. 99.8ರಷ್ಟು ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆಯು ಕೇವಲ ಮಹಿಳೆಯರ ಮೇಲೆ ಮಾತ್ರ ನಡೆಯುತ್ತಿದೆ. ಇದರಿಮದ ಸಮಾಜದಲ್ಲಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರಣಗಳಿಂದಾಗಿ ಲಿಂಗಸಂಬಂಧಿ ತಾರತಮ್ಯ ವ್ಯಾಪಕವಾಗಿರುವುದನ್ನು ತಿಳಿದುಕೊಳ್ಳಬಹುದು. ಮಹಿಳೆಯರಿಗೆ ತಮ್ಮ ದೇಹದ ಮೇಲೆ ಮತ್ತು ಸಂತಾನೋತ್ಪತ್ತಿ ಹಕ್ಕುಗಳ ಬಗ್ಗೆ ನಿಯಂತ್ರಣವಿಲ್ಲವಾಗಿದೆ.

ಕೋಷ್ಟಕ 4.6

## ಜಿಲ್ಲೆಯಲ್ಲಿ ಹೆರಿಗೆಗಳ ಶೇಕಡಾವಾರು ಹಂಚಿಕೆ : 2005–06

| ತಾಲ್ಲೂಕು | ಸಾಂಸ್ಥಿಕ | ಆರೋಗ್ಯ ಸಿಬ್ಬಂದಿ | ತರಬೇತಾದ ದಾಯಿ | ತರಬೇತಿ ಪಡೆಯದ ದಾಯಿ |
|---|---|---|---|---|
| ಅಫಜಲಪುರ | 41.47 | 13.89 | 39.68 | 4.96 |
| ಆಳಂದ್ | 28.73 | 28.16 | 42.94 | 0.17 |
| ಚಿಂಚೋಳಿ | 29.67 | 28.00 | 39.38 | 2.92 |
| ಚಿತ್ತಾಪುರ | 26.08 | 35.93 | 37.55 | 0.44 |
| ಗುಲಬರ್ಗಾ | 57.41 | 13.74 | 26.88 | 1.97 |
| ಜೇವರ್ಗಿ | 20.05 | 32.05 | 44.50 | 3.40 |
| ಸೇಡಮ್ | 36.50 | 12.27 | 50.88 | 0.35 |
| ಶಹಾಪುರ | 23.49 | 7.85 | 58.48 | 10.18 |
| ಶೋರಾಪುರ | 21.27 | 24.1 | 52.04 | 2.59 |
| ಯಾದಗೀರ್ | 26.93 | 21.40 | 49.6 | 2.07 |
| **ಜಿಲ್ಲೆ** | **30.73** | **22.16** | **44.22** | **2.89** |

ಮೂಲ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ : 2007.

ಗುಲಬರ್ಗಾ ಜಿಲ್ಲೆಯ ಅಫಜಲಪುರ, ಗುಲಬರ್ಗಾ ಮತ್ತು ಜೇವರ್ಗಿ ತಾಲ್ಲೂಕುಗಳನ್ನು ಬಿಟ್ಟರೆ ಉಳಿದೆಲ್ಲ ತಾಲ್ಲೂಕುಗಳಲ್ಲಿ ಒಟ್ಟು ಮಹಿಳೆಯರಲ್ಲಿ ಪೋಲಿಕ್ ಆಸಿಡ್ ಮತ್ತು ಐರನ್ ಮಾತ್ರೆಗಳನ್ನು ಪಡೆಯುತ್ತಿರುವವರ ಪ್ರಮಾಣ ಶೇ. 50 ಮಾತ್ರ. ಇದರಿಂದ ಜಿಲ್ಲೆಯಡಿಯಲ್ಲಿ ಶೇ. 50ರಷ್ಟು ಮಹಿಳೆಯರು ರಕ್ತಹೀನತೆಯಿಂದ ನರಳುತ್ತಿದ್ದಾರೆಂದು ತಿಳಿಯಬಹುದು. ಇದಕ್ಕೆ ಇಬ್ಬಗೆಯ ದುಡಿಮೆ ಮತ್ತು ಪೌಷ್ಟಿಕ ಆಹಾರವಿಲ್ಲದಿರುವುದು ಮುಖ್ಯ ಕಾರಣವಾಗಿವೆ. ಮಹಿಳೆಯರು ಕಾಲುಗಳಲ್ಲಿ ನೋವು ಉಂಟಾಗುವುದನ್ನು ಮತ್ತು ಸಂಜೆಯ ಸಮಯದಲ್ಲಿ ತಲೆ ತಿರುಗುವುದರ ಸಮಸ್ಯೆಯನ್ನು ಹೇಳಿಕೊಳ್ಳುತ್ತಿರುತ್ತಾರೆ.

ಇತ್ತೀಚೆಗೆ ವೈದ್ಯಕೀಯ ಮೂಲಭೂತ ಸೌಲಭ್ಯವನ್ನು ಉತ್ತಮಪಡಿಸುತ್ತಿರುವುದರಿಂದ ಮತ್ತು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿರುವುದರಿಂದ ಜಿಲ್ಲೆಯಲ್ಲಿ ಜನರ ಆರೋಗ್ಯ ಸ್ಥಿತಿಗತಿ ಉತ್ತಮಗೊಳ್ಳುವ ಸಾಧ್ಯತೆಯಿದೆ ಮತ್ತು ಶಿಶುಗಳ ಮರಣ ಪ್ರಮಾಣ ಕಡಿಮೆಯಾಗುವ ಹಾಗೂ ಜನರ ಜೀವನಾಯುಷ್ಯವು ಅಧಿಕಗೊಳ್ಳುವ ಸಾಧ್ಯತೆಯಿದೆ.

ಸಾಂಸ್ಥಿಕ ಹೆರಿಗೆಗಳ ಪ್ರಮಾಣವನ್ನು ಅಧಿಕಗೊಳಿಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮನೆಯಲ್ಲಾಗುವ ಹೆರಿಗೆಗಳು ತರಬೇತಿ ಹೊಂದಿದ ದಾದಿಯರಿಂದ ನಡೆಯುವಂತೆ ನೋಡಿಕೊಳ್ಳಲಾಗುತ್ತಿದೆ. ಹೆರಿಗೆ ಮಾಡಿಸುವ ದಾದಿಯರ ತರಬೇತಿ ಕಾರ್ಯಕ್ರಮವು ಎರಡನೆಯ ಯೋಜನೆ ಕಾಲದಲ್ಲಿ ಆರಂಭಗೊಂಡಿದ್ದರೂ ಅದನ್ನು ಇನ್ನೂ ಮುಂದುವರಿಸಲಾಗಿದೆ. ಪ್ರತಿ ಸಾವಿರ ಜನಸಂಖ್ಯೆಗೆ ಒಬ್ಬ ದಾಯಿಯನ್ನು ತರಬೇತಿಗೊಳಿಸುವ ಉದ್ದೇಶವಿದೆ. ಇಷ್ಟಾದರೂ ಸುರಕ್ಷಿತ ಹೆರಿಗೆಗಳ ಪ್ರಮಾಣ ಅಧಿಕಗೊಳ್ಳುತ್ತಿಲ್ಲ. ಜಿಲ್ಲೆಯಲ್ಲಿ 2005–06 ರಲ್ಲಿ ಜನಿಸಿದ ಕಡಿಮೆ ತೂಕದ ಮಕ್ಕಳ ಸಂಖ್ಯೆ 583. ಅವರಲ್ಲಿ ಶೇ. 56.4ರಷ್ಟು ಹೆಣ್ಣು ಮಕ್ಕಳಾಗಿದ್ದಾರೆ. ಮಹಿಳೆಯರಲ್ಲಿ ಅಪೌಷ್ಟಿಕತೆ ಯಾವ ಪ್ರಮಾಣದಲ್ಲಿದೆಯೆಂಬುದು ಇದರಿಂದ ತಿಳಿಯುತ್ತದೆ.

**ಇತ್ತೀಚೆಗೆ ವೈದ್ಯಕೀಯ ಮೂಲಭೂತ ಸೌಲಭ್ಯವನ್ನು ಉತ್ತಮಪಡಿಸುತ್ತಿರುವುದರಿಂದ ಮತ್ತು ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮಗಳನ್ನು ಜಾರಿಗೊಳಿಸುತ್ತಿರುವುದರಿಂದ ಜಿಲ್ಲೆಯಲ್ಲಿ ಜನರ ಆರೋಗ್ಯ ಸ್ಥಿತಿಗತಿ ಉತ್ತಮಗೊಳ್ಳುವ ಸಾಧ್ಯತೆಯಿದೆ ಮತ್ತು ಶಿಶುಗಳ ಮರಣ ಪ್ರಮಾಣ ಕಡಿಮೆಯಾಗುವ ಹಾಗೂ ಜನರ ಜೀವನಾಯುಷ್ಯವು ಅಧಿಕಗೊಳ್ಳುವ ಸಾಧ್ಯತೆಯಿದೆ.**

ಕೋಷ್ಟಕ 4.7

## ಮಹಿಳೆಯರ ಆರೋಗ್ಯದ ಸೂಚಿಗಳು 2005-06

| ತಾಲ್ಲೂಕು | ಎಷ್ಟು ಬೇಕೋ ಅಷ್ಟು ಐರನ್ ಮತ್ತು ಫೋಲಿಕ್ ಆಸಿಡ್ ಮಾತ್ರೆಗಳನ್ನು ಪಡೆಯುತ್ತಿರುವ ತಾಯಂದಿರ ಪ್ರಮಾಣ | ಸಾಂಸ್ಥಿಕ ಹೆರಿಗೆಗಳ ಪ್ರಮಾಣ | ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಮಹಿಳೆಯರ ಪ್ರಮಾಣ |
|---|---|---|---|
| ಅಫಜಲಪುರ | 57.00 | 41.47 | 100.0 |
| ಅಳಂದ್ | 41.39 | 28.73 | 100.0 |
| ಚಿಂಚೋಳಿ | 28.45 | 29.67 | 100.0 |
| ಚಿತ್ತಾಪುರ | 34.00 | 26.08 | 99.97 |
| ಗುಲಬರ್ಗಾ | 57.23 | 57.41 | 100.0 |
| ಜೇವರ್ಗಿ | 60.00 | 20.05 | 100.0 |
| ಸೇಡಮ್ | 39.29 | 36.50 | 100.0 |
| ಶಹಾಪುರ | 35.00 | 23.49 | 100.0 |
| ಶೋರಾಪುರ | 47.00 | 21.27 | 100.0 |
| ಯಾದಗೀರ್ | 30.40 | 26.93 | 100.0 |
| **ಜಿಲ್ಲೆ** | **36.29** | **30.73** | **99.99** |

ಮೂಲ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ : 2007.

## ಮಕ್ಕಳ ಆರೋಗ್ಯ ಮತ್ತು ಪೌಷ್ಟಿಕತೆ

ಶಿಶು ಮರಣ ಪ್ರಮಾಣವನ್ನು ಮತ್ತು ಮಕ್ಕಳ ಮರಣ ಪ್ರಮಾಣವನ್ನು ಸಾಕಷ್ಟು ಮಟ್ಟಿಗೆ ಕಡಿಮೆ ಮಾಡಬಹುದಾಗಿದೆ. ಅದಕ್ಕೆ ರೋಗನಿರೋಧಕ ಚುಚ್ಚುಮದ್ದು ಕಾರ್ಯಾಚರಣೆಯ ವ್ಯಾಪ್ತಿಯನ್ನು ವಿಸ್ತೃತಗೊಳಿಸಬೇಕು. ವಿಶ್ವ ಆಹಾರ ಸಂಸ್ಥೆಯು 1974ರಿಂದ ರೋಗ ನಿರೋಧಕ ಚುಚ್ಚುಮದ್ದು ಕಾರ್ಯಕ್ರಮಕ್ಕೆ ನೆರವು ನೀಡುತ್ತಿದೆ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಅಭಯ ಮಾರ್ಗದರ್ಶನ ಮತ್ತು ಬೆಂಬಲ ನೀಡುತ್ತಿದೆ. ರೋಗ ನಿರೋಧಕ ಚುಚ್ಚುಮದ್ದು ಕಾರ್ಯಕ್ರಮವನ್ನು ಒಂದು ನಿರ್ದಿಷ್ಟ ನಿಯಮದೊಳಗೆ ತರಲಾಗಿದೆ. ಚುಚ್ಚುಮದ್ದು ತಾಂತ್ರಿಕತೆಯನ್ನು ಉತ್ತಮಪಡಿಸಲಾಗಿದೆ. ಚುಚ್ಚು ಮದ್ದುಗಳನ್ನು ದಾಸ್ತಾನಿಡುವ ಮತ್ತು ಅವು ಕಾಲಕಾಲಕ್ಕೆ ದೊರೆಯುವಂತೆ ಮಾಡಲಾಗಿದೆ. ಶೈತ್ಯಾಗಾರದಲ್ಲಿ ಚುಚ್ಚುಮದ್ದನ್ನು ದಾಸ್ತಾನಿಡುವ ಕ್ರಮವನ್ನು ಜಾರಿಗೊಳಿಸಲಾಗಿದೆ. ಅದರ ನಿರ್ವಹಣೆಗೆ ವಿಸ್ತೃತವಾದ ಕಾರ್ಯ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಈ ಕಾರ್ಯಯೋಜನೆ ಪ್ರಕಾರ ಪ್ರತಿಯೊಂದು ದೇಶದಲ್ಲಿ ಶೇ. 80ರಷ್ಟು ಮಕ್ಕಳಿಗೆ ಲಸಿಕೆ ನೀಡುವಂತಹ ಗುರಿಯಿಟ್ಟುಕೊಳ್ಳಲಾಗಿದೆ. ಈ ಯೋಜನೆಯಲ್ಲಿ ಮೂರು ಬಾರಿ ಡಿಫ್ತೀರಿಯಾ, ಮೀಸಲ್ಸ್ ಮತ್ತು ಟಿಟೇನಸ್ ನೀಡುವ ಗುರಿಯಿದೆ.

ಚೌಕಟ್ಟು 4.3

| ಸುರಕ್ಷಿತ ಹೆರಿಗೆ |
|---|
| ಅಂತಾರಾಷ್ಟ್ರೀಯ ಜನಸಂಖ್ಯಾ ಯೋಜನೆ-III ಕರ್ನಾಟಕ ಇದರಡಿಯಲ್ಲಿ 1992-93ರಲ್ಲಿ ನಡೆದ ಮೌಲ್ಯಮಾಪನ ಅಧ್ಯಯನದಿಂದ ಕಂಡು ಬಂದ ಸಂಗತಿಯೆಂದರೆ ಗುಲಬರ್ಗಾ ಮತ್ತು ಬೆಳಗಾವಿ ವಿಭಾಗಗಳಲ್ಲಿ ಮನೆಯಲ್ಲೇ ಹೆರಿಗೆಗಳು ನಡೆಯುವುದು ಅಧಿಕವೆನ್ನುವುದು ತಿಳಿದು ಬಂದಿದೆ. ಗುಲಬರ್ಗಾ ವಿಭಾಗದಲ್ಲಿ ಶೇ. 83ರಷ್ಟು ಹೆರಿಗೆಗಳು ಮನೆಯಲ್ಲೇ ನಡೆಯುತ್ತಿರುವುದನ್ನು ಅಧ್ಯಯನವು ಗುರುತಿಸಿದೆ. ಹೀಗೆ ಮನೆಯಲ್ಲೇ ನಡೆದ ಹೆರಿಗೆಗಳಲ್ಲಿ ಶೇ. 50ರಷ್ಟು ತರಬೇತಾದ ದಾಯಿಯರಿಂದ ನಡೆದಿವೆ. ಇತ್ತೀಚೆಗೆ ಪರಿಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆಯಾಗಿದೆ. ಪ್ರಾದೇಶಿಕ ಅಸಮಾನತೆ ಅಧ್ಯಯನ ಸಮಿತಿಯು ಕೂಡ ತನ್ನ ವರದಿಯಲ್ಲಿ ಅಸುರಕ್ಷಿತ ಹೆರಿಗೆಗಳ ಪ್ರಮಾಣ ಶೇ 50.27 ಎಂದು ದಾಖಲಿಸಿದೆ (ರಾಜ್ಯದಲ್ಲಿ ಇದು ಅತಿ ಹೆಚ್ಚಾದ ಸೂಚಿಯಾಗಿದೆ). |

ಚೌಕಟು 4.4

| ಪೌಷ್ಟಿಕತೆ |
|---|
| ಜನರ, ಅದರಲ್ಲೂ ಮಹಿಳೆಯರ ಮತ್ತು ಮಕ್ಕಳ ಆರೋಗ್ಯವನ್ನು ನಿರ್ಧರಿಸುವ ಮಹತ್ವದ ಒಂದು ಸಂಗತಿಯೆಂದರೆ ಪೌಷ್ಟಿಕತೆ. ಪೌಷ್ಟಿಕತೆಯು ಅನುಭೋಗವನ್ನು ಮತ್ತು ಅನು ಜೋಳದ ರೊಟ್ಟಿ ಮತ್ತು ಬೇಳೆಕಾಳು. ಹಣ್ಣು, ಹಾಲು ಮತ್ತು ತರಕಾರಿಗಳ ಅನುಭೋಗ ಕಡಿಮೆ. ಅದು ಕೂಡ ಸಾಕಷ್ಟು ಪ್ರಮಾಣದಲ್ಲಿ ಬಡ ಮಹಿಳೆಯರಿಗೆ ಮತ್ತು ಹೆಣ್ಣುಮಕ್ಕಳಿಗೆ ಲಭ್ಯವಿರುವುದಿಲ್ಲ. ಕಟ್ಟುನಿಟ್ಟಾದ ಧಾರ್ಮಿಕ ಆಚರಣೆಯಿಂದಾಗಿ ಮತ್ತು ಮಹಿಳೆಯರ ಬಗೆಗಿನ ತಾರತಮ್ಯ ದೃಷ್ಟಿಕೋನದಿಂದಾಗಿ ಜಿಲ್ಲೆಯಲ್ಲಿ ಮಹಿಳೆಯರು ಮನೆಯಲ್ಲಿ ಎಲ್ಲರ ಊಟವಾದ ಮೇಲೆ ಊಟ ಮಾಡುವ ಪದ್ಧತಿಯಿದೆ. ಇದರಿಂದಾಗಿ ಮಹಿಳೆಯರ ಪೌಷ್ಟಿಕತೆ ಮಟ್ಟವು ಅತ್ಯಂತ ಕೆಳಮಟ್ಟದಲ್ಲಿದೆ. ಜಿಲ್ಲೆಯಲ್ಲಿ ಸಾಕಷ್ಟು ಫೋಲಿಕ್ ಆಸಿಡ್ ಮತ್ತು ಐರನ್ ಮಾತ್ರೆಗಳನ್ನು ತೆಗೆದುಕೊಳ್ಳುವ ಮಹಿಳೆಯರ ಪ್ರಮಾಣ ಶೇ. 36.29ಕ್ಕಿಂತ ಕಡಿಮೆ. ಮಹಿಳೆಯರು ಸಾಮಾನ್ಯವಾಗಿ ತಲೆ ತಿರುಗುವಿಕೆ, ಬೆನ್ನುನೋವು, ದೈಹಿಕ ನೋವುಗಳಿಂದ ಸದಾಕಾಲ ನರಳುತ್ತಿರುತ್ತಾರೆ. |

ಚೌಕಟ್ಟು 4.5

| ಗಂಡು ಮಗುವಿನ ವ್ಯಾಮೋಹ |
|---|
| ಜಿಲ್ಲೆಯಲ್ಲಿ ಜನನ ಪ್ರಮಾಣ ಪ್ರತಿ ಸಾವಿರಕ್ಕೆ 28ರಷ್ಟಿದೆ. ಕುಟುಂಬ ಯೋಜನೆಯಡಿಯಲ್ಲಿ ರಕ್ಷಿತರಾದ ದಂಪತಿಗಳ ಪ್ರಮಾಣವು 1998–99 ರಲ್ಲಿ ಶೇ. 34 ರಿಂದ 2003–04ರಲ್ಲಿ ಶೇ. 37.06ಕ್ಕೇರಿದೆ. ಅದು 2005–06ರಲ್ಲಿ ಶೇ. 39.3ಕ್ಕೇರಿದೆ. ಅಂತರಾಷ್ಟ್ರೀಯ ಜನಸಂಖ್ಯಾ ಯೋಜನೆಯಡಿಯಲ್ಲಿ ನಡೆದ ಮೌಲ್ಯಮಾಪನ ಅಧ್ಯಯನದಲ್ಲಿ ಕಂಡು ಬಂದಿರುವಂತೆ ಕುಟುಂಬ ಯೋಜನೆಯನ್ನು ಅಳವಡಿಸಿಕೊಳ್ಳಲು ಇರುವ ಬಹು ಮುಖ್ಯ ಕಾರಣಗಳೆಂದರೆ ಅಲ್ಲಿನ 'ಗಂಡು ಮಗುವಿನ ಬಗೆಗಿನ ಅತಿಯಾದ ವ್ಯಾಮೋಹ, ಕೆಳಮಟ್ಟದ ಸಾಕ್ಷರತಾ ಪ್ರಮಾಣ, ಧಾರ್ಮಿಕ ನಂಬಿಕೆಗಳು ಮುಂತಾದವು. ಹಡನೂರು ಹಳ್ಳಿಯ ಸಮೀಕ್ಷೆಯಿಂದ ತಿಳಿದು ಬಂದಿರುವ ಸಂಗತಿಯೆಂದರೆ ಅಲ್ಲಿ ಮೂರು–ನಾಲ್ಕು ಮಕ್ಕಳಾದ ನಂತರ, ಅದರಲ್ಲೂ ಒಂದಾದರೂ ಗಂಡು ಮಗುವಿದ್ದಾಗ ಮಾತ್ರ ದಂಪತಿಗಳೂ ಕುಟುಂಬ ಯೋಜನೆ ಅಳವಡಿಸಿಕೊಳ್ಳಲು ಸಿದ್ಧರಾಗುತ್ತಾರೆ. ಗುಲಬರ್ಗಾ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ವಿದ್ಯಾರ್ಥಿಗಳು ನಡೆಸಿದ ಸಮೀಕ್ಷೆಯಿಂದಲೂ ದೃಢಪಟ್ಟಿದೆ. |

ಗುಲಬರ್ಗಾ ಜಿಲ್ಲೆಯಲ್ಲಿ ರೋಗನಿರೋಧಕ ಚುಚ್ಚುಮದ್ದು ಕಾರ್ಯಕ್ರಮದ ಅನುಷ್ಠಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತೆಯರು ಮತ್ತು ಇತರೆ ಆರೋಗ್ಯ ಇಲಾಖಾ ಕಾರ್ಯಕರ್ತರು ತೊಡಗಿಕೊಂಡಿದ್ದಾರೆ. ಇದನ್ನು ಆಂದೋಲನ ರೀತಿಯಲ್ಲಿ ಕೈಗೊಂಡು ಅದು ಸಾರ್ವತ್ರೀಕರಣಗೊಳ್ಳುವಂತೆ ಮಾಡಲು ಪ್ರಯತ್ನಿಸಲಾಗುತ್ತಿದೆ ಹಾಗೂ ಅದು ದಕ್ಷತೆಯಿಂದ ನಡೆಯುವಂತೆ ಮಾಡಲಾಗುತ್ತಿದೆ. ಪ್ರತಿ ಹಳ್ಳಿಯಲ್ಲೂ ಪ್ರತಿ ಗುರುವಾರ ರೋಗನಿರೋಧಕ ಚುಚ್ಚುಮದ್ದು ನೀಡುವ ದಿನವನ್ನಾಗಿ ಘೋಷಿಸಲಾಗಿದೆ. ಈ ಕಾರ್ಯಕ್ರಮದ ಮೂಲಕ ಶೇ. 48.4ರಷ್ಟು ಮಕ್ಕಳಿಗೆ ರೋಗನಿರೋಧಕ ಚುಚ್ಚುಮದ್ದು ನೀಡುವುದು ಸಾಧ್ಯವಾಗಿದೆ. ಆದರೆ ಜಿಲ್ಲೆಯು ಇದರಲ್ಲಿ ಶೇಕಡಾ ನೂರಕ್ಕೆ ನೂರು ಗುರಿಯನ್ನು ಸಾಧಿಸಿಕೊಳ್ಳುವುದರಲ್ಲಿ ಬಹಳ ಹಿಂದೆ ಬಿದ್ದಿದೆ. ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಅಂಗನವಾಡಿ ಕೇಂದ್ರಗಳನ್ನು ಆರಂಭಿಸಲಾಗಿದೆ. ಅಲ್ಲಿ 0–5 ವಯೋಮಾನದ ಮಕ್ಕಳಿಗೆ ಹಾಗೂ ಗರ್ಭಿಣಿ ಸ್ತ್ರೀಯರಿಗೆ ಪೌಷ್ಟಿಕತೆ ಅಗತ್ಯವನ್ನು ಪೂರೈಸಲಾಗುತ್ತಿದೆ. ಜಿಲ್ಲೆಯಲ್ಲಿ 3373 ಅಂಗನವಾಡಿ ಕೇಂದ್ರಗಳು ಕೆಲಸ ಮಾಡುತ್ತಿವೆ. ಈ ಕೇಂದ್ರಗಳಲ್ಲಿನ ದಾಖಲಾತಿ, ಭೂಗೋಳಿಕ ವ್ಯಾಪ್ತಿ, ಮಕ್ಕಳ ಪ್ರಮಾಣ ಮುಂತಾದವುಗಳನ್ನು ಕೆಳಗಿನ ಕೋಷ್ಟಕ–4. 8ರಲ್ಲಿ ನೀಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದ ಮತ್ತು ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳು ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿರುವ ಸಂಗತಿಯೆಂದರೆ ಅಂಗನವಾಡಿಗಳು ಗ್ರಾಮೀಣ ಪ್ರದೇಶದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿವೆ ಮತ್ತು ಅಂಗನವಾಡಿ ಕಾರ್ಯಕರ್ತೆಯರು ಅನೇಕ ಸಂದರ್ಭಗಳಲ್ಲಿ ಅವರು ಸಮಾಲೋಚನೆ

**ಗುಲಬರ್ಗಾ ಜಿಲ್ಲೆಯಲ್ಲಿ ರೋಗನಿರೋಧಕ ಚುಚ್ಚುಮದ್ದು ಕಾರ್ಯಕ್ರಮದ ಅನುಷ್ಠಾನದಲ್ಲಿ ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತೆಯರು ಮತ್ತು ಇತರೆ ಆರೋಗ್ಯ ಇಲಾಖಾ ಕಾರ್ಯಕರ್ತರು ತೊಡಗಿಕೊಂಡಿದ್ದಾರೆ. ಇದನ್ನು ಆಂದೋಲನ ರೀತಿಯಲ್ಲಿ ಕೈಗೊಂಡು ಅದು ಸಾರ್ವತ್ರೀಕರಣಗೊಳ್ಳುವಂತೆ ಮಾಡಲು ಪ್ರಯತ್ನಿಸಲಾಗುತ್ತಿದೆ ಹಾಗೂ ಅದು ದಕ್ಷತೆಯಿಂದ ನಡೆಯುವಂತೆ ಮಾಡಲಾಗುತ್ತಿದೆ.**

**ಸಾರ್ವಜನಿಕ ವೈದ್ಯಕೀಯ ಸೇವೆ ದೊರೆಯದಿರುವುದು ಮತ್ತು ಅದಕ್ಕೆ ಸಂಬಂಧಿಸಿದ ಮೂಲಭೂತ ಸೌಲಭ್ಯ ಸಾಕಷ್ಟಿಲ್ಲದಿರುವುದು ಮುಂತಾದವುಗಳನ್ನು ಇಲ್ಲಿ ಅನೇಕ ಸೂಚಿಗಳ ಮೂಲಕ ಇಲ್ಲಿ ತೋರಿಸಲಾಗಿದೆ.**

ಮಾಡುವ ಮೊದಲ ಕೇಂದ್ರವಾಗಿದ್ದಾರೆ ಮತ್ತು ಬಹುಪಾಲು ಗ್ರಾಮೀಣ ಮಹಿಳೆಯರಿಗೆ ಅವರು ಆಪ್ತ ಸಮಾಲೋಚಕರಾಗಿ ಕೆಲಸ ಮಾಡಿಕೊಡುತ್ತಾರೆ. ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡಗಳನ್ನು ನೀಡುವುದರ ಮೂಲಕ ಅವುಗಳನ್ನು ಸಶಕ್ತವಾಗುವಂತೆ ಮಾಡಲಾಗುತ್ತಿದೆ. ಇವುಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಬಿ.ಆರ್.ಜಿ.ಎಫ್. ಯೋಜನೆಯಡಿಯಲ್ಲಿ ನೀಡಲಾಗುತ್ತಿದೆ (ಹಿಂದೆ ಇದನ್ನು ರಾಷ್ಟ್ರೀಯ ಸಮವಿಕಾಸ ಯೋಜನೆಯೆಂದು ಕರೆಯಲಾಗುತ್ತಿತ್ತು)

## ಕಳವಳಕಾರಿ ಸಂಗತಿಗಳು

ಈ ಪ್ರದೇಶದಲ್ಲಿ ಜನಸಂಖ್ಯೆಯ ಬೆಳವಣಿಗೆ ಗತಿ ತೀವ್ರವಾಗಿದೆ. ಆರ್ಥಿಕ ಅಭಿವೃದ್ಧಿ ಮತ್ತು ಮಾನವ ಅಭಿವೃದ್ಧಿ ಕೆಳಮಟ್ಟದಲ್ಲಿರಲು ಇದು ಮುಖ್ಯವಾದ ಕಾರಣವಾಗಿದೆ. ಇದನ್ನು ಸೂಕ್ತವಾದ ಕ್ರಮಗಳ ಮೂಲಕ, ಅಂದರೆ ಮಹಿಳೆಯರ ಸಾಕ್ಷರತೆಯನ್ನು ಅಧಿಕಗೊಳಿಸುವುದರ ಮೂಲಕ ಮತ್ತು ಲಿಂಗ ಸಮಾನತೆ ಬಗ್ಗೆ ಜನಜಾಗೃತಿ ಮೂಡಿಸುವುದರ ಮೂಲಕ ನಿಯಂತ್ರಿಸಬೇಕಾಗಿದೆ. ಶಿಶು ಮರಣ ಪ್ರಮಾಣ ಮತ್ತು ಮಕ್ಕಳ ಮರಣ ಪ್ರಮಾಣವನ್ನು ತಗ್ಗಿಸುವುದರ ಮೂಲಕ, ತಾಯಂದಿರ ಮತ್ತು ಮಕ್ಕಳ ಆರೋಗ್ಯದ ಬಗ್ಗೆ ಗಮನ ನೀಡುವುದರ ಮೂಲಕ, ಸಣ್ಣ ಕುಟುಂಬದ ಪರವಾಗಿ ಜನರ ಮನೋಭಾವವನ್ನು ಬದಲಾಯಿಸುವುದರ ಮೂಲಕ ಮತ್ತು ಅವುಗಳ ಬಗ್ಗೆ ಸೂಕ್ತವಾದ ನೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜನಸಂಖ್ಯೆಯ ಬೆಳವಣಿಗೆ ಗತಿಯನ್ನು ತಗ್ಗಿಸಬಹುದು. ಕುಟುಂಬ ಯೋಜನೆ ಅನುಸರಿಸುವ ಕುಟುಂಬಗಳ ಪ್ರಮಾಣವನ್ನು ಹೆಚ್ಚಿಸಬೇಕು. ಒಂದು ಮಗು ಮತ್ತು ಮತ್ತೊಂದು ಮಗುವಿನ ನಡುವಿನ ಅಂತರ ಹೆಚ್ಚಾಗುವಂತೆ ಜನರಿಗೆ ತಿಳಿ ಹೇಳಬೇಕು. ಅದಕ್ಕಾಗಿ ಮಾಹಿತಿ, ಶಿಕ್ಷಣ ಮತ್ತು ಅರಿವಿನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

ಸಾರ್ವಜನಿಕ ವೈದ್ಯಕೀಯ ಸೇವೆ ದೊರೆಯದಿರುವುದು ಮತ್ತು ಅದಕ್ಕೆ ಸಂಬಂಧಿಸಿದ ಮೂಲಭೂತ ಸೌಲಭ್ಯ ಸಾಕಷ್ಟಿಲ್ಲದಿರುವುದು ಮುಂತಾದವುಗಳನ್ನು ಇಲ್ಲಿ ಅನೇಕ ಸೂಚಿಗಳ ಮೂಲಕ ಇಲ್ಲಿ ತೋರಿಸಲಾಗಿದೆ. ಇದನ್ನೆಲ್ಲಾ ಪ್ರತಿ ಉಪಕೇಂದ್ರವು ಸೇವೆ ಒದಗಿಸುತ್ತಿರುವ ಜನರ ಸಂಖ್ಯೆ, ಪ್ರತಿ ಪ್ರಾ. ಆ.ಕೇ.ವು ಸೇವೆ

ಕೋಷ್ಟಕ 4.8

**ಅಂಗನವಾಡಿ ಕೇಂದ್ರಗಳು ಮತ್ತು ಮಕ್ಕಳ ನೋಂದಾವಣಿ 2005-07**

| ತಾಲ್ಲೂಕು | ಅಂಗನವಾಡಿ ಕೇಂದ್ರಗಳು | ಮಕ್ಕಳ ನೋಂದಾವಣಿ 2005-06 | 2006-07 | ಮಕ್ಕಳ ನೋಂದಾವಣಿ 2005-06 | ಮಕ್ಕಳ ನೋಂದಾವಣಿ 2006-07 |
|---|---|---|---|---|---|
| ಅಫಜಲಪುರ | 192 | 14139 | 18856 | 89 | 89 |
| ಅಳಂದ್ | 338 | 22524 | 32236 | 75 | 94 |
| ಚಿಂಚೋಳಿ | 274 | 17633 | 24329 | 98 | 87 |
| ಚಿತ್ತಾಪುರ | 433 | 28640 | 38537 | 94 | 88 |
| ಗುಲಬರ್ಗಾ | 300 | 33417 | 43778 | 89 | 96 |
| ಜೇವರ್ಗಿ | 295 | 19002 | 23900 | 99 | 97 |
| ಸೇಡಮ್ | 209 | 14339 | 20316 | 98 | 98 |
| ಶಹಾಪುರ | 318 | 24889 | 32132 | 98 | 97 |
| ಶೋರಾಪುರ | 357 | 27348 | 38215 | 98 | 99 |
| ಯಾದಗೀರ್ | 398 | 24218 | 37941 | 86 | 94 |
| **ಜಿಲ್ಲೆ** | **3373** | **226149** | **310240** | **93** | **94** |

ಮೂಲ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ : 2007

ಒದಗಿಸುತ್ತಿರುವ ಜನರ ಸಂಖ್ಯೆ, ಪ್ರತಿ ಹತ್ತು ಸಾವಿರ ಜನಸಂಖ್ಯೆಗೆ ಲಭ್ಯವಿರುವ ಆಸ್ಪತ್ರೆ ಹಾಸಿಗೆಗಳ ಸಂಖ್ಯೆ ಮುಂತಾದ ಸೂಚಿಗಳು ಸ್ಪಷ್ಟವಾಗಿ ತೋರಿಸುತ್ತಿವೆ. ಶೋರಾಪುರ, ಶಹಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಜನರು ದೂರ ದೂರದ ತಾಂಡಾಗಳಲ್ಲಿ, ಕ್ಯಾಂಪುಗಳಲ್ಲಿ, ದೊಡ್ಡಿಗಳಲ್ಲಿ, ಹಳ್ಳಿಗಳಲ್ಲಿ ವಾಸಿಸುತ್ತಿರುವುದರಿಂದ ಸಾರ್ವಜನಿಕ ಆರೋಗ್ಯ ಸೇವೆ ದೊರೆಯುವುದು ಬಹಳ ಕಡಿಮೆ ಮತ್ತು ಅದಕ್ಕೆ ತಕ್ಕ ರೀತಿಯಲ್ಲಿ ಮೂಲ ಸೌಲಭ್ಯಗಳು ಜಿಲ್ಲೆಯಲ್ಲಿಲ್ಲ. ಈ ಸೌಲಭ್ಯಗಳು ಜನಸಂಖ್ಯೆಗೆ ಮತ್ತು ಭೂಗೋಳಿಕ ವಿಸ್ತೀರ್ಣಕ್ಕನುಗುಣವಾಗಿ ದೊರೆಯುತ್ತಿಲ್ಲ.

## ನೀತಿ ಕಾರ್ಯಕ್ರಮಗಳು

ಸಾರ್ವಜನಿಕ ವೈದ್ಯಕೀಯ ಸೇವೆ ಜನರಿಗೆ ಸುಲಭವಾಗಿ ದೊರೆಯುವಂತೆ ಮಾಡಬೇಕಾಗಿದೆ. ಅದಕ್ಕಾಗಿ ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸಬೇಕಾಗಿದೆ ಮತ್ತು ಅವುಗಳ ಕಾರ್ಯಕ್ಷಮತೆಯನ್ನು ಉತ್ತಮಪಡಿಸಬೇಕಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸರಿಯಾಗಿ ಔಷಧಿಗಳನ್ನು ಒದಗಿಸಬೇಕು, ಕನಿಷ್ಠ ವೈದ್ಯಕೀಯ ಸೌಲಭ್ಯವಿರುವಂತೆ ಮಾಡಬೇಕು.

## ಅಗತ್ಯವಾಗಿರುವ ನೀತಿಗಳು

ವೈದ್ಯಕೀಯ ಸಂಸ್ಥೆಗಳ ಸಂಖ್ಯೆಯನ್ನು ಅಧಿಕಗೊಳಿಸಬೇಕು ಮತ್ತು ಅಲ್ಲಿ ಉತ್ತಮ ಗುಣಮಟ್ಟದ ಸೇವೆ ದೊರೆಯುವಂತೆ ಮಾಡಬೇಕು. ಆ ಮೂಲಕ ಜನರಿಗೆ ವೈದ್ಯಕೀಯ ಸೇವೆ ದೊರೆಯುವ ಪ್ರಕ್ರಿಯೆ ಉತ್ತಮವಾಗಬೇಕು.

ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಾಕಷ್ಟು ಔಷಧಿಗಳನ್ನು ಸರಬರಾಜು ಮಾಡಬೇಕು ಮತ್ತು ಕನಿಷ್ಟ ವೈದ್ಯಕೀಯ ಸೌಲಭ್ಯವು ದೊರೆಯುವಂತಿರಬೇಕು.

**ಶೋರಾಪುರ, ಶಹಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಜನರು ದೂರ ದೂರದ ತಾಂಡಾಗಳಲ್ಲಿ, ಕ್ಯಾಂಪುಗಳಲ್ಲಿ, ದೊಡ್ಡಿಗಳಲ್ಲಿ, ಹಳ್ಳಿಗಳಲ್ಲಿ ವಾಸಿಸುತ್ತಿರುವುದರಿಂದ ಸಾರ್ವಜನಿಕ ಆರೋಗ್ಯ ಸೇವೆ ದೊರೆಯುವುದು ಬಹಳ ಕಡಿಮೆ ಮತ್ತು ಅದಕ್ಕೆ ತಕ್ಕ ರೀತಿಯಲ್ಲಿ ಮೂಲ ಸೌಲಭ್ಯಗಳು ಜಿಲ್ಲೆಯಲ್ಲಿಲ್ಲ. ಈ ಸೌಲಭ್ಯಗಳು ಜನಸಂಖ್ಯೆಗೆ ಮತ್ತು ಭೂಗೋಳಿಕ ವಿಸ್ತೀರ್ಣಕ್ಕನುಗುಣವಾಗಿ ದೊರೆಯುತ್ತಿಲ್ಲ.**

ಚೌಕಟ್ಟು 4.6

### ಆರೋಗ್ಯ ಸೇವೆಯನ್ನು ಒದಗಿಸುವುದರಲ್ಲಿ ಖಾಸಗಿ ಮತ್ತು ಸಾರ್ವಜನಿಕ ವಲಯಗಳ ನಡುವೆ ಸಹಯೋಗ

ಗುಲಬರ್ಗಾ ಜಿಲ್ಲೆಯ ಅಳಂದ್ ತಾಲ್ಲೂಕಿನ ವಿ.ಕೆ.ಸಲಹಗಾರ್ ಗ್ರಾಮದ ಪ್ರಾ.ಆ.ಕೇ.ದ ನಿರ್ವಹಣೆಯ ಜವಾಬುದಾರಿಯನ್ನು ಬೆಂಗಳೂರಿನ ಕರುಣ ಟ್ರಸ್ಟ್(ಖಾಸಗಿ ನೊಂದಾಯಿಸಿದ ಸಂಸ್ಥೆ) ದತ್ತು ತೆಗೆದುಕೊಂಡಿದೆ. ಈ ಒಪ್ಪಂದವು ಎರಡು ವರ್ಷದ್ದಾಗಿದೆ. ಇದರ ಉದ್ದೇಶ ಪ್ರತಿ ದಿನ 24 ಗಂಟೆಗಳ ಕಾಲ ವೈದ್ಯಕೀಯ ಸೇವೆಯನ್ನು ಯೋಗ್ಯ ಶುಲ್ಕದಲ್ಲಿ ಒದಗಿಸುವುದು. ಸರ್ಕಾರವು ನೀಡುವ ಸಂಬಳದ ಶೇ. 75ರಷ್ಟನ್ನು ಮಾತ್ರ ಪಡೆದು ನಿವೃತ್ತ ವೈದ್ಯರೊಬ್ಬರು ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಎಷ್ಟು ಇರಬೇಕೋ ಅಷ್ಟು ಸಿಬ್ಬಂದಿ ಇದೆ. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ದಕ್ಷ ವೈದ್ಯರೊಬ್ಬರ ಮತ್ತು ನರ್ಸ್‌ರೊಬ್ಬರ ಅಗತ್ಯವಿದೆ. ಆರೋಗ್ಯ ವಿಷಯಕ್ಕೆ ಸಂಬಂದಿಸಿದಂತೆ ಜನರಿಗೆ ಸೂಕ್ತ ತಿಳುವಳಿಕೆ ಹಾಗೂ ಮಾರ್ಗದರ್ಶನ ನೀಡಬಲ್ಲ ಆಪ್ತ ಸಮಾಲೋಜಕರೊಬ್ಬರನ್ನು ಟ್ರಸ್ಟ್ ನೇಮಿಸಿದೆ. ರೋಗಿಗಳ ರೋಗದ ವಿವರಗಳನ್ನು ದಾಖಲೆ ರೂಪದಲ್ಲಿ ಕಾಯ್ದಿಡಲಿಕ್ಕಾಗಿ ಟ್ರಸ್ಟ್ ಕಂಪ್ಯೂಟರ್ ಆಪರೇಟರ್ ಒಬ್ಬರನ್ನು ನೇಮಿಸಿದೆ.

ಈಗ ಪ್ರಾ.ಆ.ಕೇಂ.ಗಳು ದಿನದ 24 ಗಂಟೆ ಕೆಲಸ ಮಾಡುತ್ತದೆ. ಎನ್‌ಆರ್‌ಎಚ್‌ಎಮ್‌ನ ಜನನಿ ಸುರಕ್ಷಾ ಯೋಜನೆಯಡಿಯಲ್ಲಿ ರಾತ್ರಿ ವೇಳೆಯಲ್ಲಾಗುವ ಹೆರಿಗೆಗಳನ್ನು ನಿರ್ವಹಿಸಲಾಗುತ್ತಿದೆ. ಆರೋಗ್ಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಹೊರರೋಗಿಗಳ ವಿಭಾಗವು ಬೆಳಿಗ್ಗೆ 9.30 ರಿಂದ ಸಂಜೆ 4.30 ರವರೆಗೆ ತೆರೆದಿರುತ್ತದೆ. ಆಸ್ಪತ್ರೆಗೆ ಬರುತ್ತಿರುವ ರೋಗಿಗಳ ಸಂಖ್ಯೆ ಮೊದಲಿನ ಸರಾಸರಿ 20–30 ಕ್ಕೆ ಪ್ರತಿಯಾಗಿ ಈಗ 90 ರೋಗಿಗಳು ಬರುತ್ತಿದ್ದಾರೆ. ಕರುಣಾ ಟ್ರಸ್ಟ್ ಕೇಂದ್ರವನ್ನು ತನ್ನ ವಶಕ್ಕೆ ಮೇ 12, 2008ರಂದು ತೆಗೆದುಕೊಂಡಿತು. ಅಲ್ಲಿಂದ ಇಲ್ಲಿಯವರೆಗೆ ಅಲ್ಲಿ ಚಿಕಿತ್ಸೆ ಪಡೆದ ಹೊರರೋಗಿಗಳ ಸಂಖ್ಯೆ 29000. ಆದರೆ ಸರ್ಕಾರದಿಂದ ಸರಬರಾಜಾಗುತ್ತಿರುವ ಔಷಧಿಗಳ ಪ್ರಮಾಣ ಎಷ್ಟು ಬೇಕೋ ಅಷ್ಟಿಲ್ಲ ಮತ್ತು ಅದು ಸರಿಯಾದ ಸಮಯಕ್ಕೆ ಸರಬರಾಜಾಗುತ್ತಿಲ್ಲ. ಆರೋಗ್ಯ ಸಿಬ್ಬಂದಿಗೆ ವಸತಿ ಸೌಲಭ್ಯ ಇಲ್ಲಿಲ್ಲ. ಏಕೆಂದರೆ ಇರುವ ವಸತಿ ಗೃಹಗಳು ಜನರು ವಾಸಿಸುವ ಸ್ಥಿತಿಯಲ್ಲಿಲ್ಲ.

ಈಗ ಅಲ್ಲಿ ಆಸ್ಪತ್ರೆ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಅನುಕೂಲಕರವಾಗಿದೆ. ಈಗ ದಿನದ ಎಲ್ಲ ಸಮಯದಲ್ಲೂ ವೈದ್ಯಕೀಯ ಸೇವೆ ದೊರೆಯುತ್ತದೆಯೆಂದು ಜನರು ಹೇಳುತ್ತಿದ್ದಾರೆ. ರೋಗ್ಯಕ್ಕೆ ಸಂಬಂಧಿಸಿದಂತೆ ಸರಿಯಾದ ಮಾರ್ಗದರ್ಶನ ಮತ್ತು ಸಲಹೆ ದೊರೆಯುತ್ತಿರುವುದರ ಬಗ್ಗೆ ಸಾರ್ವಜನಿರು ಸಂತೋಷದಿಂದಿದ್ದಾರೆ. ಈಗ ಕೇಂದ್ರದ ಸುತ್ತಮುತ್ತ ಇರುವ ಸುಮಾರು ಏಳು ಹಳ್ಳಿಗಳ ಮತ್ತು ತಾಂಡಾಗಳ ಆರೋಗ್ಯ ಸ್ಥಿತಿಗತಿ ಉತ್ತಮಗೊಂಡಿದೆ. ಜನರಿಗೆ ಪ್ರಸ್ತುತ ಸಹಯೋಗದಿಂದಾಗಿ ಆರೋಗ್ಯ ಸೌಲಭ್ಯವು ಜನರಿಗೆ ದೊರೆಯುವಂತಾಗಿದೆ.

**ಆರೋಗ್ಯ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡಬೇಕಾದರೆ ಮತ್ತು ಜನರಿಗೆ ಆರೋಗ್ಯ ಸೌಲಭ್ಯವು ಪರಿಣಾಮಕಾರಿಯಾಗಿ ದೊರೆಯಬೇಕಾದರೆ ಆರೋಗ್ಯ ವ್ಯವಸ್ಥೆಯ ಆಡಳಿತವು ಎನ್‌ಜಿಒ ಮತ್ತು ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ನಡೆಯಬೇಕು. ಭೂಗೋಳಿಕವಾಗಿ ದೂರ ದೂರದ ತಾಂಡಾ, ಕ್ಯಾಂಪು, ದೊಡ್ಡಿ, ಹಳ್ಳಿಗಳಲ್ಲಿ ವೈದ್ಯಕೀಯ ಸೇವೆ ಜನರಿಗೆ ದೊರೆಯಬೇಕಾದರೆ ಸಂಚಾರಿ ವೈದ್ಯಕೀಯ ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ.**

ತಕ್ಷಣ ವೈದ್ಯರ ಮತ್ತು ಇತರೆ ಅರೆ ವೈದ್ಯಕೀಯ ಸಿಬ್ಬಂದಿ ನೇಮಿಸಿಕೊಳ್ಳುವ ಪ್ರಕ್ರಿಯೆಯು ಚುರುಕಾಗಬೇಕು. ಒಳ್ಳೆಯ ವಸತಿ ಸೌಲಭ್ಯವನ್ನು ನೀಡುವುದರ ಮೂಲಕ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಹಳ್ಳಿಗಳಲ್ಲಿ ವಾಸಿಸುವಂತೆ ಮಾಡಬೇಕು. ಕರ್ತವ್ಯಲೋಪದ ಸಂದರ್ಭದಲ್ಲಿ ಮತ್ತು ಕೆಲಸಕ್ಕೆ ಗೈರುಹಾಜರಾದಾಗ ದಂಡ ವಿಧಿಸಬೇಕು ಮತ್ತು ಅದಕ್ಕೆ ಶಿಕ್ಷೆಯಾಗಬೇಕು.

ವೈದ್ಯಕೀಯ ಸೇವೆಯ ಗುಣಮಟ್ಟವು ಉತ್ತಮಗೊಳ್ಳಬೇಕು ಉತ್ತರದಾಯಿತ್ವವನ್ನು ನಿಗದಿ ಪಡಿಸುವುದರ ಮೂಲಕ ಮತ್ತು ಉತ್ತೇಜನಗಳನ್ನು ನೀಡುವುದರ ಮೂಲಕ ದಕ್ಷತೆಯಿಂದ ಕೆಲಸ ಮಾಡುವವರಿಗೆ ಪ್ರೋತ್ಸಾಹ ದೊರೆಯುವಂತಿರಬೇಕು. ಆರೋಗ್ಯ ಸೌಲಭ್ಯವು ಜನರಿಗೆ ಸರಿಯಾಗಿ ದೊರೆಯುತ್ತಿದೆಯೋ ಇಲ್ಲವೋ ಎಂಬುದರ ಮೇಲೆ ನಿಗಾ ಇಡಲು ಗ್ರಾಮ ಪಂಚಾಯಿತಿಮಟ್ಟದಲ್ಲಿ ಗ್ರಾಮ ಆರೋಗ್ಯ ಸಮಿತಿಗಳನ್ನು ಸ್ಥಾಪಿಸಬೇಕು. ಈ ಸಮಿತಿಗಳು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕು.

ಆರೋಗ್ಯ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡಬೇಕಾದರೆ ಮತ್ತು ಜನರಿಗೆ ಆರೋಗ್ಯ ಸೌಲಭ್ಯವು ಪರಿಣಾಮಕಾರಿಯಾಗಿ ದೊರೆಯಬೇಕಾದರೆ ಆರೋಗ್ಯ ವ್ಯವಸ್ಥೆಯ ಆಡಳಿತವು ಎನ್‌ಜಿಒ ಮತ್ತು ಖಾಸಗಿ ಸಂಸ್ಥೆಗಳ ಸಹಯೋಗದಲ್ಲಿ ನಡೆಯಬೇಕು. ಭೂಗೋಳಿಕವಾಗಿ ದೂರ ದೂರದ ತಾಂಡಾ, ಕ್ಯಾಂಪು, ದೊಡ್ಡಿ, ಹಳ್ಳಿಗಳಲ್ಲಿ ವೈದ್ಯಕೀಯ ಸೇವೆ ಜನರಿಗೆ ದೊರೆಯಬೇಕಾದರೆ ಸಂಚಾರಿ ವೈದ್ಯಕೀಯ ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ.

ರೋಗನಿರೋಧಕ ಚುಚ್ಚುಮದ್ದು ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು ಮತ್ತು ನೂರಕ್ಕೆ ನೂರು ಮಕ್ಕಳಿಗೆ ರೋಗನಿರೋಧಕ ಚುಚ್ಚುಮದ್ದು ದೊರೆಯುವಂತೆ ಮಾಡಬೇಕು. ತಕ್ಷಣ 'ಆರೋಗ್ಯ ನಿರ್ವಹಣಾ ಮಾಹಿತಿ ವ್ಯವಸ್ಥೆ (ಎಚ್‌ಆರ್‌ಎಸ್‌ಎಮ್)ಯನ್ನು ಜಾರಿಗೊಳಿಸಬೇಕು ಮತ್ತು ಅದು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಬೇಕು. ಆರೋಗ್ಯ ಕಾರ್ಯಕ್ರಮಗಳನ್ನು ರೂಪಿಸಲು ಅಗತ್ಯವಾದ ಮಾಹಿತಿಯು ಅಲ್ಲಿಂದ ಸುಸೂತ್ರವಾಗಿ ಹರಿದು ಬರುವಂತೆ ಮಾಡಬೇಕು. ಉದ್ದೇಶಿತ ಗುರಿಗಳನ್ನು ಇಡೇರಿಸುವಲ್ಲಿ ವಿಫಲವಾಗಿರುವುದಕ್ಕೆ ಮುಖ್ಯ ಕಾರಣವೇನೆಂದರೆ ಅಗತ್ಯವಾದ ಮಾಹಿತಿಯ ಕೊರತೆ ಮತ್ತು ಮಾಹಿತಿ ಇಲ್ಲದಿರುವುದು. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಶಿಶು ಮರಣ ಪ್ರಮಾಣ, ರೋಗನಿರೋಧಕ ಚುಚ್ಚು ಮದ್ದು ಕಾರ್ಯಕ್ರಮದಲ್ಲಿ ಸೇವೆ ಪಡೆದ ಮಕ್ಕಳ ಪ್ರಮಾಣ, ಅಂಗವಿಕಲತೆ ಮುಂತಾದವುಗಳ ಬಗ್ಗೆ ಮಾಹಿತಿ ದೊರೆಯುವುದಿಲ್ಲ. ಈ ಅಂತರವನ್ನು ತಕ್ಷಣ ತುಂಬಬೇಕು.

ಸಣ್ಣ ಕುಟುಂಬದ ಪರವಾಗಿ ಜನರ ಮನೋಭಾವವನ್ನು ಬದಲಾಯಿಸಬೇಕು. ಅದಕ್ಕಾಗಿ ಜನಸಂಖ್ಯೆ ಶಿಕ್ಷಣವನ್ನು ಜನರಿಗೆ ನೀಡಬೇಕು. ಎನ್‌ಜಿಒ ಮೂಲಕ, ಸ್ವಸಹಾಯ ಗುಂಪುಗಳ ಮೂಲಕ ಮತ್ತು ಅವುಗಳ ಸಹಯೋಗದ ಮೂಲಕ ಇದನ್ನು ನೆರವೇರಿಸಬಹುದು. ಇದರಿಂದ ಜನಸಂಖ್ಯಾ ಬೆಳವಣಿಗೆಯನ್ನು ನಿಯಂತ್ರಿಸಬಹುದು. ಈ ಪ್ರದೇಶದ ಮಂದಗತಿ ಅಭಿವೃದ್ಧಿಗೆ ಇದು ಬಹು ಮುಖ್ಯವಾದ ಕಾರಣವಾಗಿದೆ.

ಗ್ರಾಮೀಣ ಪ್ರದೇಶದಲ್ಲಿರುವ ಲಿಂಗಸಂಬಂಧಿ ತಾರತಮ್ಯವನ್ನು ಹೋಗಲಾಡಿಸಲು ಪ್ರಯತ್ನಿಸಬೇಕು. ಅದಕ್ಕಾಗಿ ಜನಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಈ ದಿಶೆಯಲ್ಲಿ ಮಹಿಳಾ ವೈದ್ಯರನ್ನು ಮತ್ತು ಮಹಿಳಾ ಆರೋಗ್ಯ ಸಹಾಯಕರನ್ನು ಹೆಚ್ಚು ಹೆಚ್ಚು ನೇಮಿಸಿಕೊಳ್ಳುವುದು ಅತ್ಯಂತ ಅವಶ್ಯಕ.

# ಆದಾಯ, ಉದ್ಯೋಗ ಹಾಗೂ ಬಡತನ




KALBURGI (GULBARGA) District Map
MAHARASHTRA
Bidar
N
ANDHRA PRADESH
Bijapur
Raichur
Khajuri
Aland
Salgar
Kinhi
Sonath
Bodhan
Kamlapur
Mahagaon
Narona
Sargapur
Ratkal
Mullamdri
Chincholi
Sulahpet
Awarja
Benithora
Kulali
Nimbarga
KALBURGI
Kalgi
Marhal
Mannur
Bari
Nirgunda
Atanur
Gobur Buzurgr
Tingli
Kogna
Afzalpur
Sedam
Gangapur
Farhatabad
Chitapur
Adki
Firozabad
Nelogi
Wadi
Kolis
Mudhol
Jevargi
Andola
Nalwar
Handarki
Aralagundi
Ijeri
Gajarkot
Yaragol
Yedrami
Gurmatkal
Sirwal
Bhima
Yadgir
Doranahalli
Haligeri
Malla Buzurg
Gugi
Shahpur
Khanapur
Nandepalli
Kembhavi
Sagar
Hattigudur
Ajalapur
Saidapur
Agni
Wadagera
Shorapur
Tumkur
Krishna
Devapur
Kakkera
Tintani
Kodekal
Narayanpur
Map not to Scale
Copyright © 2007 Compare Infobase Limited
LEGEND
State Boundary
District Boundary
Major Road
Railway
District Headquarter
Major Town
Other Town
River
www.mapsofindia.com

ಅಧ್ಯಾಯ 5

# ಆದಾಯ, ಉದ್ಯೋಗ ಹಾಗೂ ಬಡತನ

ವರವಮಾನವನ್ನು ಒದಗಿಸುವಂತಹ ಉದ್ಯೋಗಗಳನ್ನು ಸೃಷ್ಟಿಸುವುದು ಬಡತನವನ್ನು ನಿವಾರಿಸಲು ಅತ್ಯಗತ್ಯವಾಗಿದೆ. ಉತ್ತಮವಾದ ಜೀವನ ಮಟ್ಟವನ್ನು ಸಾಧಿಸಿಕೊಳ್ಳಲು ವರಮಾನದ ಭದ್ರತೆಯ ಅಗತ್ಯವಿದೆ. ವರಮಾನ ಮತ್ತು ಉದ್ಯೋಗಗಳು ಬಹುಮುಖ್ಯವಾಗಿ ಆರ್ಥಿಕತೆಯ ಸಂರಚನೆಯಿಂದ ಪ್ರಭಾವಿತಗೊಳ್ಳುತ್ತವೆ. ವೈವಿದ್ಯತೆಯಿಂದ ಕೂಡಿರುವ ಆರ್ಥಿಕತೆಯು ಬೆಳೆಯುತ್ತಿರುವ ಕಾರ್ಮಿಕ ಶಕ್ತಿಗೆ ಪರ್ಯಾಯ ಉದ್ಯೋಗವನ್ನು ನೀಡುವ ಸಾಮರ್ಥ್ಯವನ್ನು ಪಡೆದಿರುತ್ತದೆ. ಪ್ರಸ್ತುತ ಅಧ್ಯಾಯದಲ್ಲಿ ಜಿಲ್ಲೆಯ ಆರ್ಥಿಕ ರಚನೆ, ಮತ್ತು ಜನರ ಜೀವನಾಧಾರದ ಸ್ವರೂಪ ಮತ್ತು ಪ್ರವೃತ್ತಿಯನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಾಯವು ಜಿಲ್ಲಾ ವರಮಾನ, ದುಡಿಮೆಯ ಸಹಭಾಗಿತ್ವ ಪ್ರಮಾಣ, ಮತ್ತು ಜಿಲ್ಲೆಯಲ್ಲಿರುವ ವೃತ್ತಿಗಳ ರಚನೆ ಮುಂತಾದ ಸಂಗತಿಗಳನ್ನು ಚರ್ಚೆಗೆ ಎತ್ತಿಕೊಂಡಿದೆ. ಈ ಅಧ್ಯಾಯದಲ್ಲಿ ಜನರ ಜೀವನೋಪಾಯಕ್ಕಾಗಿ ಕಾರ್ಮಿಕ ಮಾರುಕಟ್ಟೆಯನ್ನು ಸರ್ಕಾರವು ಪ್ರವೇಶಿಸಿ ಉದ್ಯೋಗದ ಅವಕಾಶಗಳನ್ನು ವಿಸ್ತೃತಗೊಳಿಸುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡುತ್ತದೆ. ಇದು ಜಿಲ್ಲೆಯ ಜನರ ಜೀವನ ಮಟ್ಟದ ವಿನ್ಯಾಸವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.

## ಆರ್ಥಿಕ ಬೆಳವಣಿಗೆ ಮತ್ತು ವರಮಾನ

ಗುಲ್ಬರ್ಗಾ ಜಿಲ್ಲೆಯ ಆರ್ಥಿಕತೆಯಲ್ಲಿ ಈಗಲೂ ಪ್ರಾಥಮಿಕ ವಲಯವೇ ಪ್ರಾಬಲ್ಯ ಹೊಂದಿದೆ. ವರವಮಾನಕ್ಕೆ ಈ ವಲಯದ ಕೊಡುಗೆಯು ಶೇ.30 ರಷ್ಟಾದರೆ ಉದ್ಯೋಗದಲ್ಲಿ ಇದರ ಪಾಲು ಶೇ. 67.1 ರಷ್ಟಾಗಿದೆ. (2001) ಜಿಲ್ಲೆಯಲ್ಲಿ ಕೃಷಿಯ ಮೇಲೆ ಅವಲಂಬಿತರಾಗಿರುವವರ ಪ್ರಮಾಣ ಅಧಿಕವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ರಾಜ್ಯದ ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ 1960-1961 ರಿಂದ 1979-1980 ರ ಅವಧಿಯಲ್ಲಿ ಗುಲಬರ್ಗಾ ಜಿಲ್ಲೆಯು ಅಭಿವೃದ್ಧಿಯಲ್ಲಿ ಕೆಳಮಟ್ಟದ ಸ್ಥಾನ ಪಡೆದಿತ್ತು. ಈ ಅವಧಿಯಲ್ಲಿ ಜಿಲ್ಲೆಯ ಸ್ಥಾನ 19 ಆಗಿತ್ತು. ಇದರ ಅಭಿವೃದ್ಧಿ ಸೂಚ್ಯಂಕ ಶೇ. 65.7 ಆಗಿತ್ತು. ನಾಲ್ಕೂವರೆ ದಶಕಗಳಲ್ಲಿ ಜಿಲ್ಲಾ ವರಮಾನದಲ್ಲಾದ ಬೆಳವಣಿಗೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

**ಗುಲ್ಬರ್ಗಾ ಜಿಲ್ಲೆಯ ಆರ್ಥಿಕತೆಯಲ್ಲಿ ಈಗಲೂ ಪ್ರಾಥಮಿಕ ವಲಯವೇ ಪ್ರಾಬಲ್ಯ ಹೊಂದಿದೆ. ವರಮಾನಕ್ಕೆ ಈ ವಲಯದ ಕೊಡುಗೆಯು ಶೇ.30 ರಷ್ಟಾದರೆ ಉದ್ಯೋಗದಲ್ಲಿ ಇದರ ಪಾಲು ಶೇ. 67.1 ರಷ್ಟಾಗಿದೆ. (2001) ಜಿಲ್ಲೆಯಲ್ಲಿ ಕೃಷಿಯ ಮೇಲೆ ಅವಲಂಬಿತರಾಗಿರುವವರ ಪ್ರಮಾಣ ಅಧಿಕವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ.**

ಕೋಷ್ಟಕ 5.1

**ಜಿಲ್ಲಾ ವರಮಾನದಲ್ಲಿ ಬೆಳವಣಿಗೆ (ಚಾಲ್ತಿ ಬೆಲೆಗಳಲ್ಲಿ)**

| ವರ್ಷಗಳು | ಒಟ್ಟು ಜಿಲ್ಲಾ ಆಂತರಿಕ ಉತ್ಪನ್ನ (ಲಕ್ಷ ರೂ.ಗಳಲ್ಲಿ) | ಒಟ್ಟು ಜಿಲ್ಲಾ ಆಂತರಿಕ ಉತ್ಪನ್ನದಲ್ಲಿ ವಾರ್ಷಿಕ ಬೆಳವಣಿಗೆ ಪ್ರಮಾಣ (ಶೇ) | ಒಟ್ಟು ತಲಾ ಜಿಲ್ಲಾ ಆಂತರಿಕ ಉತ್ಪನ್ನ (ರೂ. ಗಳಲ್ಲಿ) | ಒಟ್ಟು ತಲಾ ಜಿಲ್ಲಾ ಆಂತರಿಕ ಉತ್ಪನ್ನದಲ್ಲಿ ವಾರ್ಷಿಕ ಬೆಳವಣಿಗೆ ಪ್ರಮಾಣ (ಶೇ) |
|---|---|---|---|---|
| 1960-61 | 3093 | | 223 | |
| 1970-71 | 10702 | 24.6 | 622 | 17.9 |
| 1980-81 | 28427 | 16.5 | 1381 | 28.2 |
| 1990-91 | 103770 | 26.5 | 3922 | 18.4 |
| 2001-02 | 421592 | 27.84 | 13346 | 24.02 |
| 2005-06 | 676191 | 15.09 | 20386 | 13.18 |

ಮೂಲ: 1 ಯೋಜನಾ ಇಲಾಖೆ ತಾಲ್ಲೂಕುವಾರು ಯೋಜನಾ ಅಂಕಿಅಂಶ 1980-81
2 ಕರ್ನಾಟಕ ಸರ್ಕಾರ ಎಚ್.ಡಿ.ಆರ್. 1999
3 ಕರ್ನಾಟಕ ಸರ್ಕಾರ ಎಚ್.ಡಿ.ಆರ್. 2005
4 ಡಿ.ಈ.ಎಸ್. ಬೆಂಗಳೂರು 2006

ಜಿಲ್ಲಾ ವರಮಾನವು 1980-1981ರಿಂದ 2005-2006 ರ ಅವಧಿಯಲ್ಲಿ ರೂ. 3093 ಲಕ್ಷದಿಂದ ರೂ. 6,76,191 ಲಕ್ಷಕ್ಕೆ ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ ತಲಾ ವರಮಾನವು ರೂ. 223 ರಿಂದ ರೂ. 20386 ಕ್ಕೆ ಅಧಿಕವಾಗಿದೆ. ರಾಜ್ಯ ಮತ್ತು ಇತರೆ ಜಿಲ್ಲೆಗಳೊಂದಿಗೆ ಗುಲಬರ್ಗಾ ಜಿಲ್ಲೆಯ ಸ್ಥಾನವನ್ನು ಹೋಲಿಕೆ ಮಾಡಿದಾಗ, 2001-2002 ರಲ್ಲಿ ಗುಲ್ಬರ್ಗಾ ಜಿಲ್ಲೆಯ ತಲಾ ವರಮಾನ ರೂ. 13346 ಗಳಷ್ಟು ಇರುವುದು ಕಂಡು ಬರುತ್ತದೆ. ತುಲಾನಾತ್ಮಕವಾಗಿ ಇದು ರಾಜ್ಯದ ಸರಾಸರಿ ರೂ. 19821 ಕ್ಕಿಂತಲೂ ಕಡಿಮೆಯಾಗಿದೆ. ರಾಯಚೂರು ಮತ್ತು ಬೀದರ್ ಜಿಲ್ಲೆಗಳಿಗಿಂತ ಮಾತ್ರ ಇದು ಸ್ವಲ್ಪ ಮೇಲ್ಪಟ್ಟದಲ್ಲಿದೆ. ತಲಾ ವರಮಾನಕ್ಕೆ ಸಂಬಂಧಿಸಿದಂತೆ ರಾಜ್ಯದಲ್ಲಿ ಜಿಲ್ಲೆಯ ಸ್ಥಾನ 25. ಸ್ಥಿರ ಬೆಲೆಗಳಲ್ಲಿ ತಲಾ ವರಮಾನಕ್ಕೆ ಸಂಬಂಧಿಸಿದಂತೆಯೂ ಜಿಲ್ಲೆಯ ಸ್ಥಾನ ಮೇಲಿನಂತೆಯೇ ಇದೆ. ತಲಾ ವರಮಾನವು 2005-2006ರಲ್ಲಿ ರೂ. 20386ಕ್ಕೆ ಹೆಚ್ಚಳವಾಗಿದೆ. 1993-1994 ರಲ್ಲಿ ಶೇ. 45.5 ರಷ್ಟಿದ್ದ ಬಡತನದ ತೀವ್ರತೆಯು 1999-2000 ಶೇ. 26.8 ಕ್ಕೆ ಕಡಿಮೆಯಾಗಿದೆ. ಎರಡು ಅವಧಿಗಳಿಗೆ- 1999-2000 ಮತ್ತು 2005-2006- ತಾಲೂಕು ಮಟ್ಟದಲ್ಲಿ ಚಾಲ್ತಿ ಮತ್ತು ಸ್ಥಿರ ಬೆಲೆಗಳಲ್ಲಿ ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನವನ್ನು ಪ್ರಸ್ತುತ ಅಧ್ಯಯನಕ್ಕಾಗಿ ಅಂದಾಜು ಮಾಡಲಾಗಿದೆ. ಚಾಲ್ತಿ ಬೆಲೆಗಳಲ್ಲಿ ಒಟ್ಟು ಮತ್ತು ನಿವ್ವಳ ತಾಲ್ಲೂಕು ಆಂತರಿಕ ಉತ್ಪನ್ನ ಮತ್ತು ತಲಾ ಒಟ್ಟು ಮತ್ತು ನಿವ್ವಳ ತಾಲ್ಲೂಕು ಆಂತರಿಕ ಉತ್ಪನ್ನ ಮಟ್ಟವನ್ನು ಕೋಷ್ಟಕ 5.2 ಮತ್ತು 5.3 ರಲ್ಲಿ ನೀಡಲಾಗಿದೆ.

ವರಮಾನವು ತಾಲ್ಲೂಕು-ತಾಲ್ಲೂಕುಗಳ ನಡುವೆ ಸಮಾನವಾಗಿ ವಿತರಣೆಯಾಗಿಲ್ಲ. ಚಿಂಚೋಳಿ ತಾಲ್ಲೂಕಿನ ನಿವ್ವಳ ತಾಲ್ಲೂಕು ಆಂತರಿಕ ಉತ್ಪನ್ನ ರೂ. 15,749. ಇದು ಅತ್ಯಂತ ಕಡಿಮೆ ನಿವ್ವಳ ಆಂತರಿಕ ಉತ್ಪನ್ನವನ್ನು ಹೊಂದಿರುವ ತಾಲ್ಲೂಕ್ಕಾಗಿದೆ. ಅಳಂದ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಸಹ ಇದು ಕಡಿಮೆ ಪ್ರಮಾಣದಲ್ಲಿದೆ. ಒಟ್ಟು ತಾಲ್ಲೂಕು ಆಂತರಿಕ ಉತ್ಪನ್ನ ಮತ್ತು ತಲಾ ನಿವ್ವಳ ತಾಲ್ಲೂಕು ಆಂತರಿಕ ಉತ್ಪನ್ನ ಸೇಡಂ ತಾಲ್ಲೂಕಿನಲ್ಲಿ ಉತ್ತಮ ಮಟ್ಟದಲ್ಲಿದೆ. ಈ ತಾಲ್ಲೂಕಿನಲ್ಲಿ

ಕೋಷ್ಟಕ 5.2

## ತಾಲ್ಲೂಕುವಾರು ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನ (ಚಾಲ್ತಿ ಬೆಲೆಗಳಲ್ಲಿ) 2005-06

| ತಾಲ್ಲೂಕುಗಳು | ಒ.ತಾ. ಆ.ಉ. (ಒಟ್ಟು) | ತಲಾ ಒ.ತಾ. ಆ.ಉ. (ರೂ) | ನಿ.ತಾ. ಆ.ಉ. (ಒಟ್ಟು) | ತಲಾ ನಿ. ತಾ. ಆ. ಉ. (ರೂ) |
|---|---|---|---|---|
| ಅಫಜಲಪುರ | 37847 | 19835 | 34631 | 18150 |
| ಆಳಂದ | 55275 | 17559 | 50548 | 16057 |
| ಚಿಂಚೋಳಿ | 40846 | 17242 | 37310 | 15749 |
| ಚಿತ್ತಾಪರ | 83025 | 21365 | 75587 | 19451 |
| ಗುಲಬರ್ಗಾ | 152015 | 21237 | 134116 | 18737 |
| ಜೇವರ್ಗಿ | 48375 | 19412 | 44605 | 17899 |
| ಸೇಡಂ | 46420 | 22339 | 41440 | 19942 |
| ಶಹಾಪುರ | 66140 | 21267 | 60462 | 19441 |
| ಶೋರಾಪರ | 67406 | 18892 | 61843 | 17333 |
| ಯಾದಗಿರ್ | 62851 | 18202 | 56772 | 16441 |
| **ಗುಲಬರ್ಗಾ ಜಿಲ್ಲೆ** | **664748** | **20386** | **609926** | **18388** |

ಒ.ತಾ.ಆ.ಉ.-ಒಟ್ಟು ತಾಲ್ಲೂಕು ಆಂತರಿಕ ಉತ್ಪನ್ನ

ಮೂಲ: ಡಿ.ಈ.ಎಸ್. ಬೆಂಗಳೂರು 2005-06

ಕೈಗಾರಿಕೆಗಳು ಕೇಂದ್ರೀಕರಣಗೊಂಡಿರುವುದೇ ಇದಕ್ಕೆ ಕಾರಣವಾಗಿದೆ. ಈ ಪ್ರದೇಶದಲ್ಲಿ ಎರಡು ದೊಡ್ಡ ಸಿಮೆಂಟ್ ಕಾರ್ಖಾನೆಗಳು ಅಸ್ತಿತ್ವದಲ್ಲಿವೆ. ಶಹಾಪುರ ತಾಲ್ಲೂಕಿನ ನಿವ್ವಳ ಆಂತರಿಕ ಉತ್ಪನ್ನವು ಸೇಡಂ ತಾಲ್ಲೂಕಿನ ನಿವ್ವಳ ಆಂತರಿಕ ಉತ್ಪನ್ನಕ್ಕೆ ಸನಿಹದಲ್ಲಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯು ಪೂರ್ಣಗೊಂಡನಂತರ ಈ ಪ್ರದೇಶದಲ್ಲಿ ನೀರಾವರಿ ಪ್ರದೇಶವು ವಿಸ್ತರಣೆಗೊಳ್ಳುತ್ತಿರುವುದರಿಂದ, ಇತ್ತೀಚಿನ ವರ್ಷಗಳಲ್ಲಿ ಈ ತಾಲ್ಲೂಕುಗಳ ವರವಮಾನದಲ್ಲಿ ಗಣನೀಯ ಏರಿಕೆ ಕಂಡು ಬರುತ್ತಿದೆ.

ಸ್ಥಿರ ಬೆಲೆಗಳಲ್ಲಿ ಜಿಲ್ಲೆಯ ಒಟ್ಟು ಆಂತರಿಕ ಉತ್ಪನ್ನವು 1990–1991 ರಲ್ಲಿ ರೂ. 1,45,642 ಲಕ್ಷವಿದ್ದದ್ದು, 2001–2002ರ ವೇಳೆಗೆ (1993–1994 ರ ಬೆಲೆಗಳಲ್ಲಿ) ರೂ.2,72,157 ಲಕ್ಷಕ್ಕೆ ಅಧಿಕಗೊಂಡಿದೆ, ಮತ್ತು 2005–2006ರಲ್ಲಿ ಅದು ರೂ. 5,40,131 ಲಕ್ಷಕ್ಕೆ ಹೆಚ್ಚಳವಾಗಿದೆ. (1999–2000 ಬೆಲೆಗಳಲ್ಲಿ). ಜಿಲ್ಲೆಯ ತಲಾ ಒಟ್ಟು ಆಂತರಿಕ ಉತ್ಪನ್ನ (ಸ್ಥಿರ ಬೆಲೆಗಳಲ್ಲಿ) 1990–91 ರಿಂದ 2001–02ರಲ್ಲಿ ರೂ. 5505 ರಿಂದ ರೂ. 8616 ಕ್ಕೆ ಮತ್ತು 2005–2006 ರಲ್ಲಿ ರೂ. 16,596 (1990–2000ರ ಬೆಲೆಗಳಲ್ಲಿ)ಕ್ಕೆ ಅಧಿಕವಾಗಿದೆ. ತಾಲ್ಲೂಕುಗಳ ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನ ಮತ್ತು ತಾಲ್ಲೂಕು ಮಟ್ಟಗಳಲ್ಲಿರುವ ತಲಾ ತಾಲೂಕಾ ಆಂತರಿಕ ಉತ್ಪನ್ನ (ಸ್ಥಿರ ಬೆಲೆಗಳಲ್ಲಿ) ಗಳನ್ನು ಕೋಷ್ಟಕ – 5.3 ರಲ್ಲಿ ನೀಡಲಾಗಿದೆ.

ಒಟ್ಟು ತಲಾ ಆಂತರಿಕ ಉತ್ಪನ್ನದಲ್ಲಿ ಸೇಡಮ್ ತಾಲ್ಲೂಕು ಮೊದಲ ಸ್ಥಾನದಲ್ಲಿದ್ದರೆ ಶಹಾಪುರ ತಾಲ್ಲೂಕು ಎರಡನೇ ಸ್ಥಾನದಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ನೀರಾವರಿ ಮತ್ತು ವರಮಾನದಲ್ಲಿನ ಬೆಳವಣಿಗೆಯು ಇದಕ್ಕೆ ಕಾರಣವಾಗಿದೆ. ಗುಲಬರ್ಗಾ ತಾಲ್ಲೂಕು ಮೂರನೇ ಸ್ಥಾನ ಪಡೆದಿದ್ದು, ನಗರ ಪ್ರದೇಶದ ಸೇವಾ ಚಟುವಟಿಕೆಗಳ ಬೆಳೆವಣಿಗೆಯ ಕಾರಣದಿಂದಾಗಿ ಈ ತಾಲ್ಲೂಕು ವರವಮಾನದಲ್ಲಿ ಉತ್ತಮ ಸ್ಥಾನ ಪಡೆದಿದೆ. ಆಳಂದ ತಾಲ್ಲೂಕು ಒಣ ಬೇಸಾಯದ ಮೇಲೆ ಹೆಚ್ಚು ಅವಲಂಬಿತವಾಗಿರುವುದರಿಂದ ಅದರ ತಲಾ ವರವಮಾನವು ಅತ್ಯಂತ ಕೆಳಮಟ್ಟದಲ್ಲಿದೆ.

## ವರಮಾನದ ವಲಯವಾರು ಸಂರಚನೆ

ವರವಮಾನದ ವಲಯುವಾರು ಪಲ್ಲಟದ ಪ್ರಕ್ರಿಯೆಯು, ಆ ಪ್ರದೇಶದಲ್ಲಿನ ಆರ್ಥಿಕ ಅಭಿವೃದ್ಧಿಯು ವಿಸ್ತೃತಗೊಳ್ಳುತ್ತಿರುವುದನ್ನು ಸೂಚಿಸುತ್ತದೆ. ಪ್ರಾಥಮಿಕ ವಲಯುದಿಂದ

ಕೋಷ್ಟಕ 5.3

### ತಾಲ್ಲೂಕುವಾರು ಒಟ್ಟು ಮತ್ತು ನಿವ್ವಳ ಆಂತರಿಕ ಉತ್ಪನ್ನ (ಸ್ಥಿರ ಬೆಲೆಗಳಲ್ಲಿ) 2005–06

| ತಾಲ್ಲೂಕುಗಳು | ಒ.ತಾ.ಆ.ಉ (ಒಟ್ಟು) | ತಲಾ ಒ.ತಾ.ಆ.ಉ.(ರೂ) | ಒ.ತಾ.ಆ.ಉ ದಲ್ಲಿ ಸ್ಥಾನ | ನಿ.ತಾ.ಆ.ಉ. (ಒಟ್ಟು) | ತಲಾ ನಿ.ತಾ.ಆ.ಉ.(ರೂ) |
|---|---|---|---|---|---|
| ಅಫಜಲಪುರ | 32178 | 16864 | 5 | 31422 | 15420 |
| ಆಳಂದ | 44146 | 14024 | 10 | 40560 | 12884 |
| ಚಿಂಚೋಳಿ | 33420 | 14107 | 9 | 30690 | 12955 |
| ಚಿತ್ತಾಪುರ | 68361 | 17592 | 3 | 62418 | 16062 |
| ಗುಲಬರ್ಗಾ | 123786 | 17293 | 4 | 110136 | 15386 |
| ಜೀವರ್ಗಿ | 39449 | 15830 | 6 | 36543 | 14664 |
| ಸೇಡಂ | 37072 | 17840 | 1 | 33260 | 16006 |
| ಶಹಾಪುರ | 55033 | 17695 | 2 | 50585 | 16265 |
| ಶೋರಾಪುರ | 55841 | 15651 | 7 | 51492 | 14432 |
| ಯಾದಗೀರ್ | 50845 | 14725 | 8 | 46222 | 13386 |
| **ಗುಲಬರ್ಗಾ ಜಿಲ್ಲೆ** | **540131** | **16596** | | **493328** | **15056** |

ಮೂಲ: ಡಿ.ಈ.ಎಸ್. ಬೆಂಗಳೂರು 2005–06

ಬರುವ ವರಮಾನವು ಕಡಿಮೆಯಾಗಿ ಮತ್ತು ದ್ವಿತೀಯ ಮತ್ತು ತೃತೀಯ ವಲಯಗಳಿಂದ ಬರುವ ವರಮಾನದ ಕೊಡುಗೆಯಲ್ಲಿ ಏರಿಕೆಯನ್ನು ಅಭಿವೃದ್ಧಿಯ ಸೂಚನೆಯಾಗಿ ಪರಿಗಣಿಸಬಹುದು. ಜಿಲ್ಲೆಯಲ್ಲಿ ಅಭಿವೃದ್ಧಿ ಪ್ರಕ್ರಿಯೆಯ ಮೂಲಕ ಉಂಟಾಗುತ್ತಿರುವ ಪಲ್ಲಟದ ಪ್ರವೃತ್ತಿ ಅತ್ಯಂತ ಮಂದಗತಿಯಲ್ಲಿರುವುದನ್ನು ಗಮನಿಸಬಹುದಾಗಿದೆ. "ಜಿಲ್ಲೆಯಲ್ಲಿ 1990–1991ರ ಅವಧಿಯಲ್ಲಿ ವರಮಾನದ ಬಹುತೇಕ ಭಾಗವು ಪ್ರಾಥಮಿಕ ವಲಯದಿಂದ ಶೇಖರಗೊಳ್ಳುತ್ತಿತ್ತು. ಕಳೆದ ಹದಿನೈದು ವರ್ಷಗಳಲ್ಲಿ (1990–1991ರಿಂದ 2005–2006) ಪ್ರಾಥಮಿಕ ವಲಯದ ಪಾಲು ಕಡಿಮೆಯಾಗುತ್ತಾ ನಡೆದಿದೆ. ವರಮಾನಕ್ಕೆ ಪ್ರಾಥಮಿಕ ವಲಯದ ಕೊಡುಗೆಯು 1990–91 ರಲ್ಲಿ ಶೇ. 46 ರಷ್ಟಿದ್ದುದು 2001–02ರಲ್ಲಿ ಶೇ. 30.8ಕ್ಕೆ ಮತ್ತು 2005–2006 ರಲ್ಲಿ ಅದು ಶೇ. 29.57 ಇಳಿಕೆಯಾಗಿದೆ",

**"ಜಿಲ್ಲೆಯಲ್ಲಿ 1990–1991ರ ಅವಧಿಯಲ್ಲಿ ವರಮಾನದ ಬಹುತೇಕ ಭಾಗವು ಪ್ರಾಥಮಿಕ ವಲಯದಿಂದ ಶೇಖರಗೊಳ್ಳುತ್ತಿತ್ತು. ಕಳೆದ ಹದಿನೈದು ವರ್ಷಗಳಲ್ಲಿ (1990–1991 ರಿಂದ 2005–2006) ಪ್ರಾಥಮಿಕ ವಲಯದ ಪಾಲು ಕಡಿಮೆಯಾಗುತ್ತಾ ನಡೆದಿದೆ. ವರಮಾನಕ್ಕೆ ಪ್ರಾಥಮಿಕ ವಲಯದ ಕೊಡುಗೆಯು 1990–91 ರಲ್ಲಿ ಶೇ. 46 ರಷ್ಟಿದ್ದುದು 2001–02ರಲ್ಲಿ ಶೇ. 30.8ಕ್ಕೆ ಮತ್ತು 2005–2006 ರಲ್ಲಿ ಅದು ಶೇ. 29.57 ಇಳಿಕೆಯಾಗಿದೆ".**

ರಾಜ್ಯದ ವರಮಾನದಲ್ಲಿ ಪ್ರಾಥಮಿಕ ವಲಯದ ಪಾಲು 2001–2002 ರಲ್ಲಿ ಶೇ. 24.8 ರಷ್ಟಿತ್ತು. ಅದರ ಪಾಲು 1991ರಲ್ಲಿ ಶೇ. 34.5 ರಷ್ಟಿದ್ದುದು 2001–02ಕ್ಕೆ ಶೇ. 24.8 ಕ್ಕೆ ಇಳಿದಿದೆ. ರಾಜ್ಯದ ಸರಾಸರಿ ಹೋಲಿಸಿದರೆ ಜಿಲ್ಲೆಯಲ್ಲಿ ಪ್ರಾಥಮಿಕ ವಲಯದ ಕೊಡುಗೆಯ ಪ್ರಮಾಣವು ಸಾಕಷ್ಟು ಕಡಿಮೆಯಾಗಿದೆ. ಜಿಲ್ಲೆಯ ವರಮಾನಕ್ಕೆ ಪ್ರಾಥಮಿಕ ವಲಯದ ಕೊಡುಗೆ ಪ್ರಮಾಣವು ಉತ್ತರ ಕರ್ನಾಟಕ ಪ್ರದೇಶದ ರಾಯಚೂರು (ಶೇ. 41.1), ಬಾಗಲಕೋಟೆ (ಶೇ. 40), ಬಿಜಾಪುರ (ಶೇ.33), ಮತ್ತು ಬಳ್ಳಾರಿ (ಶೇ.31.9) ಜಿಲ್ಲೆಗಳಲ್ಲಿನ ಪ್ರಮಾಣಕ್ಕಿಂತಲೂ ಕಡಿಮೆಯಿದೆ. ಆದರೆ 1990–1991 ರ ನಂತರದ ಬದಲಾವಣೆಗಳನ್ನು ಅವಲೋಕಿಸಿದರೆ, ಅದು ತೃತೀಯ ವಲಯದ ಪರವಾಗಿರುವುದು ಕಂಡು ಬರುತ್ತದೆ. ಇದೇ ಅವಧಿಯಲ್ಲಿ ತೃತೀಯ ವಲಯದ ಪಾಲು ಶೇ. 33.8 ರಿಂದ ಶೇ.43.8ಕ್ಕೆ ಹೆಚ್ಚಳಗೊಂಡಿದೆ. ದ್ವಿತೀಯ ವಲಯವು ನೀಡುವ ಕೊಡುಗೆಯ ಪ್ರಮಾಣದಲ್ಲಿ ಬದಲಾವಣೆಯು ಅತಲ್ಪವಾಗಿದೆ. ಅಂದರೆ ಅದರ ಪಾಲು ಶೇ.20.2 ರಿಂದ ಶೇ.21.3 ಕ್ಕೆ ಹೆಚ್ಚಳವಾಗಿದೆ. ತಾಲ್ಲೂಕು ಹಂತದಲ್ಲಿ ಅವಲೋಕಿಸುವುದಾದರೆ, ಕೆಲವು ತಾಲ್ಲೂಕುಗಳಲ್ಲಿ ಪ್ರಾಥಮಿಕ ವಲಯದ ಪ್ರಾಬಲ್ಯ ಮುಂದುವರಿದಿದೆ ಮತ್ತು ಇನ್ನುಳಿದ ತಾಲ್ಲೂಕುಗಳಲ್ಲಿ ಅದು ಪ್ರಾಥಮಿಕ ವಲಯದಿಂದ ತೃತೀಯ ವಲಯಕ್ಕೆ ಬದಲಾವಣೆಯಾಗಿದೆ.

ಜೇವರ್ಗಿ, ಶಹಾಪುರ ಮತ್ತು ಸುರಪುರಗಳಲ್ಲಿ ಪ್ರಾಥಮಿಕ ವಲಯವೇ ಪ್ರಮುಖವಾದ ವಲಯವಾಗಿದೆ ಎಂಬುದನ್ನು ಗಮನಿಸಬಹುದು. ಈ ತಾಲೂಕುಗಳಲ್ಲಿ ಒಟ್ಟು ವರಮಾನಕ್ಕೆ ಪ್ರಾಥಮಿಕ ವಲಯದ ಪಾಲು ಶೇ.40ಕ್ಕಿಂತಲೂ ಅಧಿಕವಾಗಿದೆ. ಕೃಷ್ಣ ಮೇಲ್ದಂಡೆ ಯೋಜನೆಯು ಪೂರ್ಣಗೊಂಡ ನಂತರ ನೀರಾವರಿ ಸೌಲಭ್ಯಗಳು ಅಲ್ಲಿ ವಿಸ್ತರಣೆಗೊಂಡಿರುವುದು ಇದಕ್ಕೆ ಕಾರಣವಾಗಿದೆ. ಚಿತ್ತಾಪುರ ತಾಲೂಕಿನಲ್ಲಿ ಇದರ ಕೊಡುಗೆಯು ಶೇ.21.7 ರಿಂದ ಶೇ.30.8 ಕ್ಕೆ ಹೆಚ್ಚಳಗೊಂಡಿದೆ. ಮತ್ತೊಂದೆಡೆ ಸೇಡಮ್ ತಾಲ್ಲೂಕಿನಲ್ಲಿ ಪ್ರಾಥಮಿಕ ವಲಯದ ಕೊಡುಗೆಯ ಪ್ರಮಾಣವು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ. ಹೀಗೆ ವಿವಿಧ ತಾಲ್ಲೂಕುಗಳಲ್ಲಿ ವರಮಾನದ ವಲಯವಾರು ಬದಲಾವಣೆಯ ಪ್ರವೃತ್ತಿಯು ಪರಸ್ಪರ ವ್ಯತ್ಯಾಸದಿಂದ ಕೂಡಿದೆ. ಸೇಡಮ್, ಗುಲ್ಬರ್ಗಾ, ಅಫಜಲಪುರ, ಆಳಂದ, ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಇಳಿಕೆಯ ಪ್ರವೃತ್ತಿ ಕಂಡು ಬಂದಿದೆ. ಗುಲಬರ್ಗಾ ತಾಲ್ಲೂಕನ್ನು ಗಮನಿಸಿದರೆ, ತಾಲ್ಲೂಕಿನ ಒಟ್ಟು ವರಮಾನಕ್ಕೆ ದ್ವಿತೀಯ ವಲಯದ ಕೊಡುಗೆಯು ಅತ್ಯಧಿಕವಾಗಿದೆ. ಅಂದರೆ ಅದು ಶೇ.26.9 ರಷ್ಟಾಗಿದೆ. ರಾಜ್ಯದ ಸರಾಸರಿ ಪ್ರಮಾಣ ಶೇ.24.2 ಕ್ಕಿಂತಲೂ ಅಧಿಕವಾಗಿದೆ. ನಂತರದಲ್ಲಿ ಸೇಡಂ ತಾಲ್ಲೂಕಿದೆ.

ಕೋಷ್ಟಕ 5.4

**ಜಿಲ್ಲಾ ಆಂತರಿಕ ಉತ್ಪನ್ನದ ಸಂರಚನೆ: 1990–91 ರಿಂದ 2005–06**

| ವರ್ಷಗಳು | ಪ್ರಾಥಮಿಕ | ದ್ವಿತೀಯ | ತೃತೀಯ |
|---|---|---|---|
| 1990–91 | 46.0 | 20.2 | 33.8 |
| 1998–99 | 36.4 | 22.6 | 40.9 |
| 2001–02 | 30.8 | 20.9 | 48.3 |
| 2005–06 | 29.57 | 21.3 | 49.13 |

ಮೂಲ: 1 ಯೋಜನಾ ಇಲಾಖೆ ತಾಲ್ಲೂಕುವಾರು ಯೋಜನಾ ಅಂಕಿಅಂಶ 1980–81
2 ಕರ್ನಾಟಕ ಸರ್ಕಾರ ಎಚ್‌ಡಿಆರ್ 1999
3 ಕರ್ನಾಟಕ ಸರ್ಕಾರ ಎಚ್‌ಡಿಆರ್ 2005
4 ಡಿಇಎಸ್ ಬೆಂಗಳೂರು 2006

ಕೋಷ್ಟಕ 5.5

**ವಲಯವಾರು ಒಟ್ಟು ತಾಲ್ಲೂಕು ಆಂತರಿಕ ಉತ್ಪನ್ನ – 2005–06**

| ತಾಲ್ಲೂಕು | 1999–00 | | | 2005–06 | | |
|---|---|---|---|---|---|---|
| | ಪ್ರಾಥಮಿಕ | ದ್ವಿತೀಯ | ತೃತೀಯ | ಪ್ರಾಥಮಿಕ | ದ್ವಿತೀಯ | ತೃತೀಯ |
| ಅಫಜಲಪುರ | 51.44 ( 49.68) | 0.34 | 38.22 | 37.58 (36.34) | 36.34 | 16.98 |
| ಆಳಂದ | 43.73 (41.44) | 14.35 | 41.92 | 36.38 (34.73) | 18.36 | 45.26 |
| ಚಿಂಚೋಳಿ | 44.27 (41.52) | 14.68 | 41.05 | 33.58 (31.33) | 18.64 | 47.77 |
| ಚಿತ್ತಾಪುರ | 21.17 (19.48) | 27.79 | 51.04 | 30.81 (21.11) | 18.85 | 50.34 |
| ಗುಲಬರ್ಗಾ | 22.57 (16.34) | 23.31 | 54.1 | 12.73 (11.71) | 26.90 | 60.37 |
| ಜೇವರ್ಗಿ | 50.07 (48.0) | 1.13 | 38.80 | 47.07 (46.11) | 12.41 | 40.52 |
| ಸೇಡಂ | 40.68 (38.03) | 14.32 | 40.88 | 24.44 (23.33) | 26.29 | 49.27 |
| ಶಹಾಪುರ | 43.52 (40.69) | 5.32 | 41.16 | 42.06 (40.16) | 16.02 | 41.92 |
| ಶೋರಾಪುರ | 43.94 (41.48) | 14.39 | 41.67 | 40.69 (38,.54) | 14.62 | 44.69 |
| ಯಾದಗೀರ್ | 36.57 (33.85) | 16.99 | 46.44 | 26.86 (24.38) | 21.10 | 52.04 |
| **ಗುಲಬರ್ಗಾ ಜಿಲ್ಲೆ** | **34.50 (31.37)** | **19.92** | **45.58** | **29.57 (27.03)** | **21.30** | **49.13** |

ಮೂಲ : ಡಿಈಎಸ್ 2005–06
ಟಿಪ್ಪಣಿ : ಆವರಣದಲ್ಲಿರುವ ಅಂಕಿಗಳು ಕೃಷಿಯಲ್ಲಿನ ಪಾಲನ್ನು ತೋರಿಸುತ್ತವೆ.

ಚಿತ್ತಾಪುರ ತಾಲ್ಲೂಕಿನಲ್ಲಿ ದ್ವಿತೀಯ ವಲಯದ ಪಾಲು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುತ್ತಿದೆ. ಅದು ಶೇ.27.8 ರಿಂದ ಶೇ.18.8 ಕ್ಕೆ ಕುಸಿದಿದೆ. ಇಲ್ಲಿ ಕೆಲ ದೊಡ್ಡ ಕೈಗಾರಿಕೆಗಳು ಮುಚ್ಚಿರುವುದು ಇದಕ್ಕೆ ಕಾರಣವಾಗಿದೆ. ಜಿಲ್ಲೆಯಲ್ಲಿ 1991 ರಿಂದ 2001ರ ದಶಕದಲ್ಲಿ ತೃತೀಯ ವಲಯದ ಪಾಲು ತೀವ್ರಗತಿಯಲ್ಲಿ ಅಂದರೆ ಶೇ.33.8 ರಿಂದ ಶೇ. 48.3 ಕ್ಕೆ ಏರಿಕೆಯಾಗಿದೆ. ರಾಜ್ಯದ ಸರಾಸರಿ ಏರಿಕೆಯ ಪ್ರಮಾಣಕ್ಕಿಂತಲೂ ಇದು ಅಧಿಕವಾಗಿದೆ. ಗುಲ್ಬರ್ಗಾ ತಾಲ್ಲೂಕಿನಲ್ಲಿ ಈ ವಲಯದ ಕೊಡುಗೆಯ ಪ್ರಮಾಣವು (ಶೇ.60.37) ಬೆಂಗಳೂರು ನಗರದ ತೃತೀಯ ವಲಯದ ಪ್ರಮಾಣಕ್ಕೆ (2001) ಹತ್ತಿರವಾಗಿದೆ.

## ದುಡಿಮೆಗಾರ ವರ್ಗದ ಉದ್ಯೋಗವಾರು ರಚನೆ ಮತ್ತು ಅದರಲ್ಲಿ ಬದಲಾವಣೆಯ ಪ್ರವೃತ್ತಿ

ವಲಯವಾರು ವರಮಾನದಲ್ಲಿ ಉಂಟಾಗಿರುವ ರಾಚನಿಕ ಬದಲಾವಣೆಯು ಉದ್ಯೋಗದ ರಚನೆಯಲ್ಲಿ ಕಂಡುಬರುವುದಿಲ್ಲ. ಏಕೆಂದರೆ ತಮ್ಮ ಜೀವನೋಪಾಯಕ್ಕಾಗಿ ಈಗಲೂ ಕೃಷಿಯ ಮೇಲೆ ಅವಲಂಬಿತರಾಗಿರುವ ದುಡಿಮೆಗಾರರ ಪ್ರಮಾಣವು ಜಿಲ್ಲೆಯಲ್ಲಿ ಶೇ. 67 ರಷ್ಟಿದೆ. ಅಂದರೆ ಜನರ ಉದ್ಯೋಗ ರಚನೆಯ ಮೇಲೆ ವರಮಾನದ ವಲಯವಾರು ಬದಲಾವಣೆಯು ಪ್ರಭಾವ ಬೀರಿಲ್ಲ. ಒಟ್ಟು ದುಡಿಮೆಗಾರರ ಸಂಖ್ಯೆಯು 1960–61 ರಲ್ಲಿ 6,62,166 ಇದ್ದದ್ದು, 2001ರ ವೇಳೆಗೆ 13,50,072ಕ್ಕೆ ಹೆಚ್ಚಳವಾಗಿದೆ. ನಲವತ್ತು ವರ್ಷಗಳ ಅವಧಿಯಲ್ಲಿ ಅದು ಶೇ. 104 ರಷ್ಟು ಅಧಿಕವಾಗಿದೆ. ಈ ನಲವತ್ತು ವರ್ಷಗಳ ಅವಧಿಯಲ್ಲಿ ಶ್ರಮಶಕ್ತಿಯ ಸರಾಸರಿ ವಾರ್ಷಿಕ ಬೆಳವಣಿಗೆಯ ಪ್ರಮಾಣವು ಶೇ. 2.6. ಕಳೆದ ಐವತ್ತು ವರ್ಷಗಳ ಅಭಿವೃದ್ಧಿಯನ್ನು ಪರಿಶೀಲಿಸಿದರೆ ಜಿಲ್ಲೆಯಲ್ಲಿ ದುಡಿಮೆಗಾರರ ಕೃಷಿ ಅವಲಂಬನೆಯು ಮುಂದುವರಿದಿದೆ. ಅದರಲ್ಲಿ ತೀವ್ರ ಬದಲಾವಣೆಯು ಕಂಡು ಬಂದಿಲ್ಲ. ಅಭಿವೃದ್ಧಿಯ ಪರಿಣಾಮ ಉದ್ಯೋಗ ರಚನೆ ಮೇಲೆ ಉಂಟಾದಂತೆ ಕಾಣುವುದಿಲ್ಲ. ಆದರೂ ಕಳೆದ ದಶಕದಲ್ಲಿ ಸ್ವಲ್ಪ ಬದಲಾವಣೆಗಳು ಗೋಚರಿಸಿವೆ. ದುಡಿಮೆಗಾರರ ಬಹುಪಾಲು ಪ್ರಮಾಣವು ಕೃಷಿ ವಲಯದಲ್ಲಿಯೇ ನಿರತವಾದಿದ್ದ

**ಜಿಲ್ಲೆಯಲ್ಲಿ 1991 ರಿಂದ 2001ರ ದಶಕದಲ್ಲಿ ತೃತೀಯ ವಲಯದ ಪಾಲು ತೀವ್ರಗತಿಯಲ್ಲಿ ಅಂದರೆ ಶೇ. 33.8 ರಿಂದ ಶೇ. 48.3 ಕ್ಕೆ ಏರಿಕೆಯಾಗಿದೆ. ರಾಜ್ಯದ ಸರಾಸರಿ ಏರಿಕೆಯ ಪ್ರಮಾಣಕ್ಕಿಂತಲೂ ಇದು ಅಧಿಕವಾಗಿದೆ. ಗುಲ್ಬರ್ಗಾ ತಾಲ್ಲೂಕಿನಲ್ಲಿ ಈ ವಲಯದ ಕೊಡುಗೆಯ ಪ್ರಮಾಣವು (ಶೇ.60.37) ಬೆಂಗಳೂರು ನಗರದ ತೃತೀಯ ವಲಯದ ಪ್ರಮಾಣಕ್ಕೆ (2001) ಹತ್ತಿರವಾಗಿದೆ.**

**ಆದರೆ 1991–2001ರ ಅವಧಿಯಲ್ಲಿ ಕೃಷಿಯ ಮೇಲೆ ಅವಲಂಬಿತರಾಗಿರುವ ಜನರ ಪ್ರಮಾಣವು ಶೇ.85 ರಿಂದ ಶೇ. 67 ಕ್ಕೆ ಇಳಿದಿದೆ ಮತ್ತು ಆರ್ಥಿಕತೆಯಲ್ಲಿ ತೃತೀಯ ವಲಯದ ದುಡಿಮೆಗಾರರ ಪ್ರಮಾಣ ಅಧಿಕಗೊಂಡಿದೆ. ಒಟ್ಟು ದುಡಿಮೆಗಾರರಲ್ಲಿ ಇತರೆ ದುಡಿಮೆಗಾರರ ಪ್ರಮಾಣವು ಕಳೆದ 10 ವರ್ಷಗಳಲ್ಲಿ ಶೇ.12.6 ರಿಂದ ಶೇ. 30.4 ಕ್ಕೆ ಏರಿಕೆಯಾಗಿದೆ.**

1961–91ರ ಅವಧಿಯಲ್ಲಿ ಉದ್ಯೋಗ ಪ್ರವೃತ್ತಿಗಳಲ್ಲಿ ಗಣನೀಯ ಬದಲಾವಣೆಗಳು ಸಂಭವಿಸಲಿಲ್ಲ. ಆದರೆ 1991–2001ರ ಅವಧಿಯಲ್ಲಿ ಕೃಷಿಯ ಮೇಲೆ ಅವಲಂಬಿತರಾಗಿರುವ ಜನರ ಪ್ರಮಾಣವು ಶೇ.85 ರಿಂದ ಶೇ. 67 ಕ್ಕೆ ಇಳಿದಿದೆ ಮತ್ತು ಆರ್ಥಿಕತೆಯಲ್ಲಿ ತೃತೀಯ ವಲಯದ ದುಡಿಮೆಗಾರರ ಪ್ರಮಾಣ ಅಧಿಕಗೊಂಡಿದೆ. ಒಟ್ಟು ದುಡಿಮೆಗಾರರಲ್ಲಿ ಇತರೆ ದುಡಿಮೆಗಾರರ ಪ್ರಮಾಣವು ಕಳೆದ 10 ವರ್ಷಗಳಲ್ಲಿ ಶೇ.12.6 ರಿಂದ ಶೇ. 30.4 ಕ್ಕೆ ಏರಿಕೆಯಾಗಿದೆ. ಜಿಲ್ಲೆಯಲ್ಲಿ ಭೂರಹಿತ ಕೃಷಿ ಕಾರ್ಮಿಕರ ಪ್ರಮಾಣವು ಅಧಿಕವಾಗಿದ್ದು ಅದು ನಿರಂತರವಾಗಿ ಮುಂದುವರಿದಿದೆ. ಇದು 1961–91 ರ ಅವಧಿಯಲ್ಲಿ ಶೇ. 26.44 ರಿಂದ ಶೇ.50.15 ರಷ್ಟು ಅಧಿಕವಾಗಿದೆ. ಆದರೆ 2001 ರಲ್ಲಿ ಅದು ಶೇ.40ಕ್ಕೆ ಇಳಿಕೆಯಾಗಿದೆ. ವರಮಾನದಲ್ಲಿ ಪ್ರಾಥಮಿಕ ವಲಯದ ಕೊಡುಗೆಯ ಶೇ. 44.5 ರಿಂದ ಶೇ.32.1 ಕ್ಕೆ ಇಳಿಕೆಯಾಗಿದ್ದರೂ. ಉದ್ಯೋಗಕ್ಕೆ ಸಂಬಂಧಿಸಿದಂತೆ ಇದರ ಕೊಡುಗೆಯು ಈಗಲೂ ಗಣನೀಯವಾಗಿದ್ದು ಅದು ಶೇ. 67.1 ರಷ್ಟಿದೆ.

**Occupational Pattern of the Workforce (Main Workers-2001)**




## ಉದ್ಯೋಗ

ಒಟ್ಟಾರೆ ದುಡಿಮೆಯ ಸಹಭಾಗಿತ್ವ ಪ್ರಮಾಣವು 1991–2001 ರ ಅವಧಿಯಲ್ಲಿ ಶೇ.43.07 ರಿಂದ ಶೇ. 43.12 ಕ್ಕೆ ಅತ್ಯಲ್ಪ ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಪುರುಷರ ದುಡಿಮೆಯ ಸಹಭಾಗಿತ್ವ ಪ್ರಮಾಣವು ಸ್ಥಿರವಾಗಿಳಿದಿದೆ (ಶೇ.51.1). ಆದರೆ ಮಹಿಳೆಯರ ದುಡಿಮೆಯ ಸಹಭಾಗಿತ್ವ ಪ್ರಮಾಣವು ಶೇ.32.5 ರಿಂದ ಶೇ. 34.9 ಕ್ಕೆ ಹೆಚ್ಚಳವಾಗಿದೆ. ದುಡಿಮೆಯ ಸಹಭಾಗಿತ್ವ ಪ್ರಮಾಣದಲ್ಲಿ ಬದಲಾವಣೆ ನಡೆಯುದಿರುವುದರಿಂದ ಉದ್ಯೋಗದಲ್ಲಿನ ಬೆಳವಣಿಗೆಯು ಪ್ರಚಲಿತ ಸ್ಥಿತಿಯನ್ನು ಕಾಯ್ದುಕೊಳ್ಳಲು ಮಾತ್ರ ಸಾಕಾಗುತ್ತದೆ. ರಾಜ್ಯದಲ್ಲಿ ದುಡಿಮೆಯ ಸಹಭಾಗಿತ್ವ ಪ್ರಮಾಣವು 1991–2001 ರ ಅವಧಿಯಲ್ಲಿ ಶೇ.42 ರಿಂದ ಶೇ.44.6 ಕ್ಕೆ ಅಧಿಕವಾಗಿದೆ. ಆದರೆ ಜಿಲ್ಲೆಯಲ್ಲಿ ಅದು ಶೇ. 1 ರಷ್ಟು ಮಾತ್ರ ಹೆಚ್ಚಳವಾಗಿದೆ. ಲಿಂಗವಾರು ಗಮನಿಸುವುದಾದರೆ. ರಾಜ್ಯಮಟ್ಟದಲ್ಲಿ ಮಹಿಳೆಯರ ಸಹಭಾಗಿತ್ವ ಪ್ರಮಾಣದಲ್ಲಿ ಗಣನೀಯ(ಶೇ.29.3 ರಿಂದ ಶೇ.44.6)ವಾಗಿ ಏರಿಕೆಯಾಗಿದೆ. ಜಿಲ್ಲೆಯಲ್ಲಿ ಕಳೆದ ದಶಕದಲ್ಲಿ ಜನರ ಜೀವನ ಸ್ಥಿತಿಗತಿಗಳಲ್ಲಿ ಮತ್ತು ವರಮಾನದಲ್ಲಿ ಗಣನೀಯವಾದ ಬದಲಾವಣೆಯಾಗಿಲ್ಲ ಎಂಬುದನ್ನು ದುಡಿಮೆಯ ಸಹಭಾಗಿತ್ವ ಪ್ರಮಾಣದಲ್ಲಿನ ಗಣನೀಯವಲ್ಲದ ಬದಲಾವಣೆಯು ತೋರಿಸುತ್ತದೆ.

ಇದಕ್ಕೆ ವಿರುದ್ಧವಾಗಿ ದುಡಿಮೆಗಾರರ ಬಹುಪಾಲು ಪ್ರಮಾಣವು ಪ್ರಸ್ತುತ ಉತ್ಪಾದನಾ ಪ್ರಕ್ರಿಯೆಯಲ್ಲಿ ಅಂಚಿನ ದುಡಿಮೆಗಾರರಾಗಿ ಭಾಗವಹಿಸುತ್ತಿರುವುದರಿಂದ ಅವರ ಜೀವನ ಸ್ಥಿತಿಯು ಕ್ಷೀಣಿಸಬಹುದಾದ ಸಾಧ್ಯತೆ ಇದೆ. ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ದುಡಿಮೆಗಾರರ ಪ್ರಮಾಣವು 1991–2001 ರ ಅವಧಿಯಲ್ಲಿ ಶೇ.34.6 ರಿಂದ ಶೇ. 32.3 ಕ್ಕೆ ಇಳಿಕೆಯಾಗಿದೆ. ರಾಜ್ಯ ಮತ್ತು ಜಿಲ್ಲಾಮಟ್ಟಗಳೆರಡರಲ್ಲಿಯೂ. ಮುಖ್ಯ ದುಡಿಮೆಗಾರರ ಪ್ರಮಾಣದಲ್ಲಿ ಇಳಿಕೆಯಾಗಿರುವುದು ಗೋಚರಿಸುತ್ತದೆ. ಅದೇ

ಕೋಷ್ಟಕ 5.6

**ದುಡಿಮೆಗಾರ ವರ್ಗದ ಉದ್ಯೋಗವಾರು ರಚನೆ (ಮುಖ್ಯ ದುಡಿಮೆಗಾರರು)**

| ಜನಗಣತಿ ವರ್ಷ | ಸಾಗುವಳಿದಾರರು | ಕೃಷಿ ಕಾರ್ಮಿಕರು | ಕೌಟುಂಬಿಕ ಕೈಗಾರಿಕೆಗಳು | ಇತರೆ ದುಡಿಮೆಗಾರರು | ಒಟ್ಟು |
|---|---|---|---|---|---|
| 1961 | 45.55 | 26.44 | 9.21 | 18.80 | 100.00 |
| 1971 | 34.13 | 36.55 | 4.40 | 24.92 | 100.00 |
| 1981 | 36.78 | 43.95 | 2.66 | 16.61 | 100.00 |
| 1991 | 35.19 | 50.15 | 2.06 | 12.60 | 100.00 |
| 2001 | 27.10 | 40.00 | 2.50 | 30.40 | 100.00 |

ಮೂಲ: ಸೆನ್ಸಸ್ ಆಫ್ ಇಂಡಿಯಾ 1961–2001

ಕಾಲಕ್ಕೆ ಮುಖ್ಯ ಪುರುಷ ದುಡಿಮೆಗಾರರ ಪ್ರಮಾಣದಲ್ಲಿ ಶೇ.50.9 ರಿಂದ ಶೇ. 44.72 ಕ್ಕೆ ಇಳಿಕೆಯಾಗಿದ್ದು. ಮುಖ್ಯ ಮಹಿಳಾ ದುಡಿಮೆಗಾರರ ಪ್ರಮಾಣದಲ್ಲಿ ಶೇ. 29.2 ರಿಂದ ಶೇ. 19.4 ಕ್ಕೆ ಗಣನೀಯವಾದ ಇಳಿಕೆ ಕಂಡು ಬಂದಿದೆ. ಅಂಚಿನ ದುಡಿಮೆಗಾರರಾಗಿ ಮಹಿಳೆಯರ ಸಹಭಾಗಿತ್ವ ಅಧಿಕಗೊಳ್ಳುತ್ತಿದೆ ಎಂಬುದನ್ನು ಇದು ತಿಳಿಸುತ್ತದೆ. ಪುರುಷ ದುಡಿಮೆಗಾರರಿಗೆ ಸಂಬಂಧಿಸಿದಂತೆ, ಅಫ್‌ಜಲಪುರ, ಚಿಂಚೋಳಿ, ಜೇವರ್ಗಿ, ಶಹಾಪುರ ತಾಲ್ಲೂಕುಗಳಲ್ಲಿ ಮುಖ್ಯ ದುಡಿಮೆಗಾರರ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗಿದೆ.

ಈ ಇಳಿಕೆಯ ಪ್ರಮಾಣವು ರಾಜ್ಯಮಟ್ಟದಲ್ಲಿ ಸಹ ಗೋಚರಿಸಿದೆ. ಆದರೆ ಜಿಲ್ಲೆಗೆ ಹೋಲಿಸಿದರೆ, ರಾಜ್ಯ ಮಟ್ಟದ ಇಳಿಕೆಯ ಪ್ರಮಾಣದ ಕಡಿಮೆಯಾಗಿದೆ. ಮುಖ್ಯ ದುಡಿಮೆಗಾರರಾಗಿ ಮಹಿಳೆಯರ ಸಹಭಾಗಿತ್ವವು ಕಡಿಮೆಯಾಗುತ್ತಿರುವ ಕಡೆಗೆ ತುರ್ತಾಗಿ ಗಮನ ಹರಿಸಬೇಕಾದ ಅಗತ್ಯವಿದೆ. ಗ್ರಾಮೀಣ ಪ್ರದೇಶದಲ್ಲಿ ಮುಖ್ಯ ದುಡಿಮೆಗಾರರ ಪ್ರಮಾಣವು ಶೇ. 44.4 ರಿಂದ ಶೇ. 34.9 ಕ್ಕೆ ಕುಸಿದಿದೆ. ಪುರುಷ ಮತ್ತು ಮಹಿಳಾ ದುಡಿಮೆಗಾರರ ಪ್ರಮಾಣವು ಶೇ.53.5 ರಿಂದ ಶೇ. 46.4ಕ್ಕೆ ಇಳಿಕೆಯಾಗಿದೆ. ಮಹಿಳಾ ದುಡಿಮೆಗಾರರ ಪ್ರಮಾಣದಲ್ಲಿ ಶೇ. 35.1 ರಿಂದ ಶೇ. 23 ರಷ್ಟು ಇಳಿಕೆ ಕಂಡು ಬಂದಿದೆ. ಅಂಚಿನ ದುಡಿಮೆಗಾರರಲ್ಲಿ ಗಣನೀಯ ಏರಿಕೆಯಾಗಿದೆ. ಜಿಲ್ಲೆಯಲ್ಲಿ 1991–2001ರ ಅವಧಿಯಲ್ಲಿ ಒಟ್ಟು ದುಡಿಮೆಗಾರರಲ್ಲಿ ಅಂಚಿನ ದುಡಿಮೆಗಾರರ ಪ್ರಮಾಣವು ಶೇ. 11 ರಿಂದ ಶೇ.25ಕ್ಕೆ ಏರಿಕೆ ಕಂಡುಬಂದಿದೆ. ಇದು ಜಿಲ್ಲೆಯಲ್ಲಿ ದುಡಿಮೆಗಾರರು ನಿಕೃಷ್ಟಿಕರಣಕ್ಕೆ ಒಳಗಾಗುತ್ತಿರುವುದನ್ನು ಪ್ರವೃತ್ತಿಯನ್ನು ಸೂಚಿಸುತ್ತದೆ. ಮಹಿಳಾ ದುಡಿಮೆಗಾರರಿಗೆ ಸಂಬಂಧಿಸಿದಂತೆ ಈ ಪ್ರವೃತ್ತಿ ಹೆಚ್ಚು ತೀವ್ರತೆಯಿಂದ ನಡೆದಿದೆ.

## ಜೀವನಾಧಾರದ ಸದಾವಕಾಶ ಸೂಚ್ಯಂಕ

ಜೀವನಾಧಾರದ ಸದಾವಕಾಶ ಸೂಚ್ಯಂಕವನ್ನು ಇಲ್ಲಿ ಅಂದಾಜು ಮಾಡಲಾಗಿದೆ. ಈ ಸೂಚ್ಯಂಕವು ಅವಕಾಶಾಧಾರಿತವಾಗಿದ್ದು ಮತ್ತು ಜಿಲ್ಲೆಯ ಜನರ ಪ್ರಚಲಿತ ದುಡಿಮೆ ಮತ್ತು ಜೀವಾನೋಪಾಯಗಳ ಸಂಬಂಧವನ್ನು ಅದು ತಿಳಿಸುತ್ತದೆ. ಜನರಿಗೆ

**ಜಿಲ್ಲೆಯಲ್ಲಿ 1991–2001ರ ಅವಧಿಯಲ್ಲಿ ಒಟ್ಟು ದುಡಿಮೆಗಾರರಲ್ಲಿ ಅಂಚಿನ ದುಡಿಮೆಗಾರರ ಪ್ರಮಾಣವು ಶೇ. 11 ರಿಂದ ಶೇ. 25 ಕ್ಕೆ ಏರಿಕೆ ಕಂಡುಬಂದಿದೆ. ಇದು ಜಿಲ್ಲೆಯಲ್ಲಿ ದುಡಿಮೆಗಾರರು ನಿಕೃಷ್ಟಿಕರಣಕ್ಕೆ ಒಳಗಾಗುತ್ತಿರುವುದನ್ನು ಪ್ರವೃತ್ತಿಯನ್ನು ಸೂಚಿಸುತ್ತದೆ. ಮಹಿಳಾ ದುಡಿಮೆಗಾರರಿಗೆ ಸಂಬಂಧಿಸಿದಂತೆ ಈ ಪ್ರವೃತ್ತಿ ಹೆಚ್ಚು ತೀವ್ರತೆಯಿಂದ ನಡೆದಿದೆ.**



ಕೋಷ್ಟಕ 5.7

**ದುಡಿಮೆಯ ಸಹಭಾಗಿತ್ವ ಪ್ರಮಾಣ – ಪುರುಷರು ಮತ್ತು ಮಹಿಳೆಯರು**

| ಕ್ರ.ಸಂ. | ತಾಲ್ಲೂಕು | ಒಟ್ಟು ದುಡಿಮೆಗಾರರು | | ಪುರುಷರು | | ಮಹಿಳೆಯರು | |
|---|---|---|---|---|---|---|---|
| | | 1991 | 2001 | 1991 | 2001 | 1991 | 2001 |
| 1 | ಅಫಜಲಪುರ | 43.83 | 42.68 | 51.61 | 51.50 | 35.60 | 33.40 |
| 2 | ಅಳಂದ್ | 45.98 | 51.36 | 47.00 | 56.10 | 38.45 | 46.40 |
| 3 | ಚಿಂಚೋಳಿ | 48.60 | 50.08 | 53.26 | 53.80 | 43.83 | 46.20 |
| 4 | ಚಿತ್ತಾಪುರ | 40.20 | 38.5 | 39.61 | 48.80 | 27.23 | 27.90 |
| 5 | ಗುಲಬರ್ಗಾ | 32.49 | 32.95 | 40.70 | 45.50 | 16.16 | 19.50 |
| 6 | ಜೀವರ್ಗಿ | 48.30 | 46.28 | 52.92 | 51.30 | 43.60 | 41.10 |
| 7 | ಸೇಡಂ | 47.57 | 46.58 | 48.61 | 53.20 | 37.55 | 40.00 |
| 8 | ಶಹಾಪುರ | 44.99 | 44.56 | 47.80 | 52.20 | 33.64 | 36.80 |
| 9 | ಶೋರಾಪುರ | 46.20 | 43.42 | 48.29 | 51.00 | 37.00 | 35.70 |
| 10 | ಯಾದಗೀರ್ | 48.33 | 51.35 | 44.80 | 56.10 | 37.68 | 46.50 |
| | **ಗುಲಬರ್ಗಾ ಜಿಲ್ಲೆ** | **42.07** | **43.12** | **47.91** | **51.10** | **32.53** | **34.90** |
| | **ಕರ್ನಾಟಕ ರಾಜ್ಯ** | **42.00** | **44.60** | **54.01** | **56.09** | **29.30** | **44.60** |

ಮೂಲ: ಸೆನ್ಸಸ್ ಆಫ್ ಇಂಡಿಯಾ 1991–2001

ದೊರೆಯುಬಹುದಾದ ಜೀವನಾಧಾರದ ಅವಕಾಶಗಳು ಜನರ ವರಮಾನದ ಮಟ್ಟನ್ನು ನಿರ್ಧರಿಸುತ್ತವೆ. ಜಿಲ್ಲೆಯಲ್ಲಿ ಕೃಷಿ ಭೂಮಿಯ ಮೇಲೆ ಜನಸಂಖ್ಯೆ ಒತ್ತಡ ಅಧಿಕವಾಗಿದೆ. ಜಿಲ್ಲೆಯ ಆರ್ಥಿಕತೆಯಲ್ಲಿ ಸಂಪನ್ಮೂಲಗಳ ಕೊರತೆಯಿಂದಾಗಿ ಪ್ರಾಥಮಿಕ ವಲಯದಲ್ಲಿಯೇ ಹೆಚ್ಚು ಉದ್ಯೋಗಾವಕಾಶಗಳು ದೊರೆಯುತ್ತಿವೆ. ಅವಕಾಶಾಧಾರಿತ ಸೂಚ್ಯಂಕವನ್ನು ಅಂದಾಜಿಸಲು ಮೂರು ಮುಖ್ಯ ಸೂಚಿಗಳನ್ನು ಇಲ್ಲಿ ಬಳಸಲಾಗಿದೆ. ಅವುಗಳೆಂದರೆ, ದುಡಿಮೆಯ ಸಹಭಾಗಿತ್ವ ಪ್ರಮಾಣ, ಒಟ್ಟು ದುಡಿಮೆಗಾರರಲ್ಲಿ ಮುಖ್ಯ ದುಡಿಮೆಗಾರರ ಶೇಕಡಾವಾರು ಪ್ರಮಾಣ ಮತ್ತು ಒಟ್ಟು ದುಡಿಮೆಗಾರರಲ್ಲಿ ಇತರೆ ದುಡಿಮೆಗಾರರ ಪ್ರಮಾಣ.

ಜನಗಣತಿಯಲ್ಲಿಯ ದುಡಿಮೆಯ ಸಹಭಾಗಿತ್ವ ಪ್ರಮಾಣದ ಮೂಲಕ ದುಡಿಮೆಯ ಸಹಭಾಗಿತ್ವ ಪ್ರಮಾಣದ ಸೂಚಿಯನ್ನು ಮಾಪನ ಮಾಡಲಾಗಿದೆ (ಒಟ್ಟು ಜನಸಂಖ್ಯೆಯಲ್ಲಿ ದುಡಿಮೆಗಾರರ ಪ್ರಮಾಣ), ಜಿಲ್ಲೆಯಲ್ಲಿ ದುಡಿಮೆಯ ಸಹಭಾಗಿತ್ವದ ಪ್ರಮಾಣ ಶೇ. 43.12 ರಷ್ಟಿದೆ. ಆಳಂದ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಜನರಿಗೆ ಗರಿಷ್ಟ ಉದ್ಯೋಗಾವಕಾಶಗಳು ದೊರೆತಿರುವುದು ಕಂಡು ಬರುತ್ತದೆ.

ಈ ತಾಲ್ಲೂಕುಗಳಲ್ಲಿ ದುಡಿಮೆಯ ಸಹಭಾಗಿತ್ವ ಪ್ರಮಾಣವು ಕ್ರಮವಾಗಿ ಶೇ. 51.36 ಮತ್ತು ಶೇ. 51.35 ರಷ್ಟಾಗಿದೆ. ಜಿಲ್ಲೆಯ ಗುಲಬರ್ಗಾ ತಾಲ್ಲೂಕಿನ ದುಡಿಮೆಯ ಸಹಭಾಗಿತ್ವ ಪ್ರಮಾಣ ಶೇ. 32.35 ಆಗಿದ್ದು ಇದು ಜಿಲ್ಲೆಯಲ್ಲಿಯೇ ಅತ್ಯಂತ ಕೆಳಮಟ್ಟದ್ದಾಗಿದೆ. ಜಿಲ್ಲೆಯಲ್ಲಿ ದುಡಿಮೆಯ ಸಹಭಾಗಿತ್ವ ಪ್ರಮಾಣ ಶೇ. 40 ಕ್ಕಿಂತಲೂ ಕಡಿಮೆ ಇರುವ ತಾಲ್ಲೂಕುಗಳೆಂದರೆ ಚಿತ್ತಾಪುರ. ಜನರು ಪ್ರಧಾನ ದುಡಿಮೆಗಾರರೆಂದು ಉದ್ಯೋಗವು ಪಡೆಯದೆ ಇರುವ ಸಂದರ್ಭದಲ್ಲಿ ಪ್ರಸ್ತುತ ಲಭ್ಯವಿರುವ ಉದ್ಯೋಗವಕಾಶಗಳು ಜನರಿಗೆ ಬದುಕು ಮಾಡಲು ಸಾಕಾಗುವಷ್ಟು ವರಮಾನವು ನೀಡದೇ ಇರಬಹುದು ಒಟ್ಟು ದುಡಿಮೆಗಾರರಲ್ಲಿ ಮುಖ್ಯ ದುಡಿಮೆಗಾರರ ಪ್ರಮಾಣ ಎಷ್ಟಿದೆ ಎಂಬುದರಿಂದ ಇದು

ಕೋಷ್ಟಕ 5.8

**ಲಿಂಗವಾರು ಮುಖ್ಯ ದುಡಿಮೆಗಾರರ ಪ್ರಮಾಣ (ಗ್ರಾಮೀಣ ಮತ್ತು ನಗರ)**

| ಕ್ರ.ಸಂ. | ತಾಲ್ಲೂಕು | ಮುಖ್ಯ ದುಡಿಮೆಗಾರರು | | ಪುರುಷರು | | ಮಹಿಳೆಯರು | |
|---|---|---|---|---|---|---|---|
| | | 1991 | 2001 | 1991 | 2001 | 1991 | 2001 |
| 1 | ಅಫಜಲಪುರ | 41.00 | 30.54 | 51.35 | 44.57 | 30.06 | 15.77 |
| 2 | ಆಳಂದ್ | 43.52 | 35.74 | 46.66 | 46.93 | 33.94 | 23.98 |
| 3 | ಚಿಂಚೋಳಿ | 45.64 | 36.21 | 53.05 | 47.07 | 38.04 | 25.06 |
| 4 | ಚಿತ್ತಾಪುರ | 37.52 | 33.75 | 39.34 | 43.77 | 22.55 | 18.19 |
| 5 | ಗುಲಬರ್ಗಾ | 31.38 | 26.93 | 20.61 | 40.74 | 14.10 | 12.21 |
| 6 | ಜೇವರ್ಗಿ | 43.90 | 33.51 | 52.54 | 44.76 | 35.08 | 21.88 |
| 7 | ಸೇಡಂ | 43.58 | 33.83 | 48.07 | 46.73 | 30.15 | 21.01 |
| 8 | ಶಹಾಪುರ | 41.63 | 33.77 | 47.52 | 45.97 | 27.27 | 21.31 |
| 9 | ಶೋರಾಪುರ | 42.18 | 32.56 | 48.01 | 45.08 | 29.28 | 19.77 |
| 10 | ಯಾದಗೀರ್ | 45.54 | 36.47 | 44.56 | 48.43 | 32.61 | 24.23 |
| | **ಗುಲಬರ್ಗಾ ಜಿಲ್ಲೆ** | **40.3** | **32.30** | **50.9** | **44.72** | **29.2** | **19.38** |
| | **ಕರ್ನಾಟಕ ರಾಜ್ಯ** | **38.5** | **36.6** | **53.5** | **51.7** | **22.7** | **21.1** |

ಮೂಲ: ಸೆನ್ಸ್‌ಸ್ ಆಫ್ ಇಂಡಿಯ 1991–2001

ಸ್ಪಷ್ಟವಾಗುತ್ತದೆ. ಜಿಲ್ಲೆಯ ಹಲವಾರು ತಾಲ್ಲೂಕುಗಳಲ್ಲಿ ಅಂಚಿನ ದುಡಿಮೆಗಾರರ ಪ್ರಮಾಣವು ಶೇ. 25 ಕ್ಕಿಂತಲೂ ಅಧಿಕವಾಗಿದೆ. ಅಂತಹ ತಾಲ್ಲೂಕುಗಳೆಂದರೆ, ಅಫಜಲಪುರ, ಆಳಂದ, ಚಿಂಚೋಳಿ, ಜೇವರ್ಗಿ, ಸೇಡಮ್ ಮತ್ತು ಯಾದಗಿರಿ.

ಜಿಲ್ಲೆಯ ಎರಡು ತಾಲ್ಲೂಕುಗಳಲ್ಲಿ ಮಾತ್ರ ಜೀವನಾಧಾರದ ಹೊಸ ಅವಕಾಶಗಳು ನಿರ್ಮಾಣವಾಗುತ್ತಿವೆ.. ಒಟ್ಟು ದುಡಿಮೆಗಾರರಲ್ಲಿ ಇತರೆ ದುಡಿಮೆಗಾರರ ಪ್ರಮಾಣ ಎಷ್ಟಿದೆ ಎಂಬುದರಿಂದ ಇದು ಸ್ಪಷ್ಟಗೊಳ್ಳುತ್ತದೆ. ಅಂತಹ ತಾಲ್ಲೂಕುಗಳೆಂದರೆ ಗುಲಬರ್ಗಾ ಮತ್ತು ಚಿತ್ತಾಪುರ. ಗುಲಬರ್ಗಾ ತಾಲ್ಲೂಕಿನ ಒಟ್ಟು ಮುಖ್ಯ ದುಡಿಮೆಗಾರರಲ್ಲಿ ಶೇ. 60ರಷ್ಟು ದುಡಿಮೆಗಾರರು ಇತರೆ ದುಡಿಮೆಗಾರರಾಗಿ ದುಡಿಯುತ್ತಿದ್ದಾರೆ. ಅಧಿಕ ಸಂಭಾವನೆ ದೊರೆಯುತ್ತಿರುವ ತೃತೀಯ ವಲಯದಲ್ಲಿ ಈ ದುಡಿಮೆಗಾರರು ನಿರತರಾಗಿದ್ದಾರೆ. ಸೇಡಮ್ ತಾಲ್ಲೂಕಿನ ಆರ್ಥಿಕತೆಯು ಕೈಗಾರಿಕಾಧಾರಿತವಾಗಿದ್ದು ಅಲ್ಲಿ ಜನರಿಗೆ ಉತ್ತಮ ಉದ್ಯೋಗಾವಕಾಶಗಳು ದೊರೆಯುತ್ತಿವೆ. ಇತರೆ ತಾಲೂಕುಗಳಲ್ಲಿ ಶೇ. 75ರಿಂದ ಶೇ. 80ರಷ್ಟು ಮುಖ್ಯ ದುಡಿಮೆಗಾರರು ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಗಳಲ್ಲಿ ನಿರತರಾಗಿದ್ದಾರೆ.

ಕೆಳಮಟ್ಟದ ದುಡಿಮೆಯ ಸಹಭಾಗಿತ್ವ ಪ್ರಮಾಣ ಮತ್ತು ಒಟ್ಟು ದುಡಿಮೆಗಾರರಲ್ಲಿ ಇತರೆ ದುಡಿಮೆಗಾರರ ಪ್ರಮಾಣ ಕಡಿಮೆಯಿರುವುದು–ಇವೆರಡು ಜೀವನಾಧಾರಗಳು ಕೆಳಮಟ್ಟದಲ್ಲಿರುವುದನ್ನು ಪ್ರತಿಬಿಂಬಿಸುತ್ತದೆ. ದುಡಿಮೆಯ ಅವಕಾಶಗಳಲ್ಲಿನ ಕೊರತೆ ಮತ್ತು ಬದಲಾವಣೆಗೆ ತೆರೆದುಕೊಳ್ಳದ ದುಡಿಮೆಯ ರಚನೆಗಳು ಇದಕ್ಕೆ ಕಾರಣಗಳಾಗಿವೆ. ಜೀವನಾಧಾರ ಸದಾವಕಾಶ ಸೂಚ್ಯಂಕ ಜಿಲ್ಲೆಯಲ್ಲಿ 0.49 ರಷ್ಟಿದ್ದು ಇದು 0.5 ಕ್ಕಿಂತಲೂ





ಕೋಷ್ಟಕ 5.9

**ಜೀವನಾಧಾರ ಅವಕಾಶ ಸೂಚ್ಯಂಕ**

| ತಾಲ್ಲೂಕುಗಳು | ದುಡಿಮೆಯ ಸಹಭಾಗಿತ್ವ ಪ್ರಮಾಣ(ಶೇ) | ಒಟ್ಟು ದುಡಿಮೆಗಾರರಲ್ಲಿ ಮುಖ್ಯ ದುಡಿಮೆಗಾರರ ಪ್ರಮಾಣ(ಶೇ) | ಮುಖ್ಯ ದುಡಿಮೆಗಾರರಲ್ಲಿ ಇತರೆ ದುಡಿಮೆಗಾರರ ಪ್ರಮಾಣ(ಶೇ) | ಜೀವನಾಧಾರ ಅವಕಾಶ ಸೂಚ್ಯಂಕ |
|---|---|---|---|---|
| ಅಫಜಲಪುರ | 42.68 | 71.41 | 19.5 | 0.44 |
| ಆಳಂದ್ | 51.36 | 69.6 | 15.8 | 0.46 |
| ಚಿಂಚೋಳಿ | 50.08 | 72.3 | 19.8 | 0.47 |
| ಚಿತ್ತಾಪುರ | 38.5 | 80.48 | 43.4 | 0.54 |
| ಗುಲಬರ್ಗಾ | 32.95 | 81.73 | 59.8 | 0.58 |
| ಜೇವರ್ಗಿ | 46.28 | 72.41 | 17.7 | 0.45 |
| ಸೇಡಂ | 46.58 | 72.63 | 31.6 | 0.50 |
| ಶಹಾಪುರ | 44.56 | 75.8 | 23.1 | 0.48 |
| ಶೋರಾಪುರ | 43.42 | 74.98 | 23.8 | 0.47 |
| ಯಾದಗೀರ್ | 51.35 | 70.90 | 25.0 | 0.49 |
| **ಗುಲಬರ್ಗಾ ಜಿಲ್ಲೆ** | **43.12** | **74.84** | **30.4** | **0.49** |

ಮೂಲ: ಸೆನ್ಸಸ್ ಆಫ್ ಇಂಡಿಯ –2001



**ಕೆಳಮಟ್ಟದ ದುಡಿಮೆಯ ಸಹಭಾಗಿತ್ವ ಪ್ರಮಾಣ. ಅಧಿಕ ಅಂಚಿನ ದುಡಿಮೆಗಾರರ ಪ್ರಮಾಣ, ವೈವಿಧ್ಯಮಯವಾದ ಆರ್ಥಿಕ ಚಟುವಟಿಕೆಗಳ ಕೊರತೆ ಇವುಗಳು ಅಗತ್ಯವಿರುವಷ್ಟು ಉದ್ಯೋಗಾವಕಾಶಗಳು ಇಲ್ಲದಿರುವುದನ್ನು ಸೂಚಿಸುತ್ತವೆ.**

ಕಡಿಮೆಯಾಗಿದೆ. ಇದು ಅಗತ್ಯ ಜೀವನಾಧಾರದ ಕೊರತೆಯ ಮೂಲಕ ಜನರ ದುಸ್ಥಿತಿಯ ಹರವನ್ನು ಸೂಚಿಸುತ್ತದೆ. ಜಿಲ್ಲೆಯ ಆರು ತಾಲ್ಲೂಕುಗಳಲ್ಲಿ ಜಿಲ್ಲೆಯ ಸರಾಸರಿ ಪ್ರಮಾಣಕ್ಕಿಂತಲೂ ಜೀವನಾಧಾರ ಅವಕಾಶ ಸೂಚ್ಯಂಕವು ಕೆಳಮಟ್ಟದಲ್ಲಿದೆ. ಅಫಜಲಪುರ ತಾಲ್ಲೂಕಿನ ಜೀವನಾಧಾರ ಸದವಕಾಶ ಸೂಚ್ಯಂಕವು ಅತ್ಯಂತ ಕೆಳಮಟ್ಟದಲ್ಲಿದೆ. ಕೆಳಮಟ್ಟದ ದುಡಿಮೆಯ ಸಹಭಾಗಿತ್ವ ಪ್ರಮಾಣ. ಅಧಿಕ ಅಂಚಿನ ದುಡಿಮೆಗಾರರ ಪ್ರಮಾಣ, ವೈವಿಧ್ಯಮಯವಾದ ಆರ್ಥಿಕ ಚಟುವಟಿಕೆಗಳ ಕೊರತೆ ಇವುಗಳು ಅಗತ್ಯವಿರುವಷ್ಟು ಉದ್ಯೋಗಾವಕಾಶಗಳು ಇಲ್ಲದಿರುವುದನ್ನು ಸೂಚಿಸುತ್ತವೆ. ಇದು ಜೀವನಾಧಾರ ಸದವಕಾಶ ಸೂಚ್ಯಂಕವು ಕೆಳಮಟ್ಟದಲ್ಲಿರುವುದಕ್ಕೆ ಕಾರಣವಾಗಿದೆ. ಆದ್ದರಿಂದ ಜಿಲ್ಲೆಯ ಮೂರು ತಾಲೂಕುಗಳಲ್ಲಿ–ಗುಲಬರ್ಗಾ, ಚಿತ್ತಾಪುರ ಮತ್ತು ಸೇಡಂ ಮಾತ್ರ ಜೀವನಾಧಾರ ಸದವಕಾಶ ಸೂಚ್ಯಂಕವು 0.5 ಮತ್ತು ಅದಕ್ಕಿಂತಲೂ ಅಧಿಕಮಟ್ಟದಲ್ಲಿದೆ.

## ಗ್ರಾಮೀಣ ಜೀವನಾಧಾರ ಅವಕಾಶಗಳ ಸ್ವರೂಪ

ಜಿಲ್ಲೆಯಲ್ಲಿ ಗ್ರಾಮೀಣ ಜೀವನಾಧಾರ ಸ್ವರೂಪವನ್ನು ನಿರ್ಧರಿಸುವ ಬಹು ಮುಖ್ಯ ಸಂಗತಿಯೆಂದರೆ ಜಿಲ್ಲೆಯಲ್ಲಿರುವ ಭೂಮಿಯ ಲಭ್ಯತೆ. ತಾಲ್ಲೂಕು–ತಾಲ್ಲೂಕುಗಳ ನಡುವೆ ಸಾಗುವಳಿಗೆ ಲಭ್ಯವಿರುವ ಭೂಮಿಯು ಸಮಾನವಾಗಿಲ್ಲ. ಗುಲಬರ್ಗಾ ತಾಲ್ಲೂಕಿನಲ್ಲಿ ತಲಾ ಭೂಮಿಯ ಲಭ್ಯತೆಯು ಕನಿಷ್ಟವಾಗಿದ್ದು ಅದು 0.17 ರಷ್ಟಾದರೆ ಜೇವರ್ಗಿ ತಾಲ್ಲೂಕಿನಲ್ಲಿ ತಲಾ ಭೂಮಿಯ ಲಭ್ಯತೆಯು ಗರಿಷ್ಟವಾಗಿದ್ದು ಅದು 0.67 ರಷ್ಟಿದೆ. ಗುಲಬರ್ಗಾ ತಾಲೂಕಿನಲ್ಲಿ ಭೂಮಿಯ ಲಭ್ಯತೆಯು ಕಡಿಮೆ ಇರುವುದರಿಂದ ಅಲ್ಲಿ ವೈವಿಧ್ಯಮಯ ಆರ್ಥಿಕ ಚಟುವಟಿಕೆಗಳಿಗೆ ದಾರಿಯಾಗಿದೆ. ಇದರಿಂದಾಗಿ ಈ ತಾಲ್ಲೂಕಿನಲ್ಲಿ ಕೃಷಿಯ ಮೇಲೆ ಅವಲಂಬಿತರಾದವರ ಪ್ರಮಾಣ ಅತ್ಯಂತ ಕಡಿಮೆ. ಈ ತಾಲ್ಲೂಕಿನ ಒಟ್ಟು ದುಡಿಮೆಗಾರರಲ್ಲಿ ಶೇ. 38.2. ರಷ್ಟು ದುಡಿಮೆಗಾರರು ಮಾತ್ರ ಕೃಷಿ ಕೆಲಸ ಕಾರ್ಯಗಳಲ್ಲಿ ನಿರತರಾಗಿದ್ದಾರೆ. ಮತ್ತೊಂದೆಡೆ ಜೇವರ್ಗಿ ತಾಲ್ಲೂಕಿನ ಒಟ್ಟು ದುಡಿಮೆಗಾರರಲ್ಲಿ ಶೇ. 81 ರಷ್ಟು ದುಡಿಮೆಗಾರರು ಕೃಷಿ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯ ಪೂರ್ಣಗೊಂಡ ನಂತರ ಜೇವರ್ಗಿ, ಶಹಾಪುರ, ಮತ್ತು ಸುರಪುರ ತಾಲ್ಲೂಕುಗಳು ನೀರಾವರಿಗೆ ಒಳಪಟ್ಟಿವೆ. ಆದ್ದರಿಂದ ಕೃಷಿಯಲ್ಲಿ ನಿರತರಾದ ಜನರ ವರಮಾನ ಅಧಿಕಗೊಳ್ಳುತ್ತಿದೆ. ಆದರೆ ಇತರೆ ತಾಲ್ಲೂಕುಗಳಲ್ಲಿ ಮುಖ್ಯವಾಗಿ ಅಫಜಲಪುರ, ಆಳಂದ, ಚಿಂಚೋಳಿ, ಯಾದಗಿರಿ ಮತ್ತು ಸೇಡಮ್ ತಾಲ್ಲೂಕುಗಳಲ್ಲಿ ಕೃಷಿಯಲ್ಲಿ ನಿರತರಾಗಿರುವವರ ಪ್ರಮಾಣ ಅಧಿಕವಾಗಿದೆ. ಈ ತಾಲ್ಲೂಕುಗಳಲ್ಲಿ ಒಣ ಬೇಸಾಯ ಅಸ್ತಿತ್ವದಲ್ಲಿರುವುದರಿಂದ ಜನರ ವರಮಾನದಲ್ಲಿ ಅಧಿಕ ಅನಿಶ್ಚಿತತೆಗಳಿವೆ.

## ಕೃಷಿ ಅಡಿಪಾಯ

ಜಿಲ್ಲೆಯು ಕೃಷಿಯಾಧಾರಿತ ಆರ್ಥಿಕತೆಯನ್ನು ಹೊಂದಿದೆ. ಇಲ್ಲಿ ಶೇ.67ರಷ್ಟು ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಸಂಪನ್ಮೂಲ ಕೊರತೆಯಿಂದಾಗಿ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಯಲ್ಲಿಯೂ ಅಷ್ಟೇನೂ ಸುಧಾರಣೆ ಕಂಡುಬಂದಿಲ್ಲ. 'ಸುಣ್ಣದ ಕಲ್ಲು' ಜಿಲ್ಲೆಯಲ್ಲಿ ದೊರೆಯುವ ಪ್ರಮುಖ ಖನಿಜ ಸಂಪನ್ಮೂಲವಾಗಿದೆ. ಜಿಲ್ಲೆಯಲ್ಲಿ ಸಿಮೆಂಟ್ ಉತ್ಪಾದಿಸುವ ಪ್ರಮುಖ ಮೂರು ಕಾರ್ಖಾನೆಗಳಿದ್ದು, ಅವುಗಳು ಚಿತ್ತಾಪುರ ಮತ್ತು ಸೇಡಂ ತಾಲ್ಲೂಕುಗಳಲ್ಲಿ ಕೇಂದ್ರೀಕರಣಗೊಂಡಿವೆ. ಸಾಗುವಳಿ ಲಭ್ಯವಿರುವ ಬಹುಪಾಲು ಕೃಷಿ ಭೂಮಿಯು ಒಣ ಬೇಸಾಯಕ್ಕೆ ಒಳಪಟ್ಟಿದೆ. ನಿವ್ವಳ ಬಿತ್ತನೆ ಪ್ರದೇಶದ ಶೇ. 22ರಷ್ಟು ಪ್ರದೇಶ ಮಾತ್ರ ನೀರಾವರಿಗೆ ಒಳಪಟ್ಟಿದೆ. ಜಿಲ್ಲೆಯಲ್ಲಿ 1991 – 2001ರ ಅವಧಿಯಲ್ಲಿ ಸಣ್ಣ ಹಿಡುವಳಿಗಳ ಪ್ರಮಾಣ ಅಧಿಕಗೊಳ್ಳುತ್ತಿದೆ. ಅಂಚಿನ ಹಿಡುವಳಿಗಳು 62,205 ರಿಂದ 1,12,331 ರಷ್ಟು ಅಂದರೆ ಶೇ. 80.58% ರಷ್ಟು ಅಧಿಕಗೊಂಡಿವೆ. ಒಟ್ಟು ಹಿಡುವಳಿಗಳ ಸಂಖ್ಯೆಯಲ್ಲಿ ಸಣ್ಣ ಮತ್ತು ಅಂಚಿನ ಹಿಡುವಳಿಗಳ ಪ್ರಮಾಣ 55.3ರಷ್ಟಿದ್ದರೂ ಒಟ್ಟು ವಿಸ್ತೀರ್ಣದಲ್ಲಿ ಶೇ.25ರಷ್ಟು ಮಾತ್ರ ಇವುಗಳ ಹಿಡಿತದಲ್ಲಿದೆ. ಹಿಡುವಳಿಗಳ ಸರಾಸರಿ ಗಾತ್ರ ಕಡಿಮೆ ಇರುವುದು ಮತ್ತು ಕಡಿಮೆ

ಉತ್ಪಾದಕತೆ ಇವುಗಳು ಕೃಷಿಯಲ್ಲಿ ಹೊಸ ತಾಂತ್ರಿಕತೆಯನ್ನು ಅಳವಡಿಸುವಲ್ಲಿ ವಿಳಂಬವಾಗುತ್ತಿರುವುದನ್ನು ಸೂಚಿಸುತ್ತದೆ.

"ಸಾಗುವಳಿ ಪದ್ಧತಿಯಲ್ಲಿ ಆಹಾರ ಬೆಳೆಗಳ ಪ್ರಾಬಲ್ಯ ಅಧಿಕವಾಗಿದೆ. ತೊಗರಿ ಮತ್ತು ಜೋಳ ಜಿಲ್ಲೆಯ ಪ್ರಮುಖ ಬೆಳೆಗಳು. ಶೇಂಗಾ ಮತ್ತು ಸೂರ್ಯಕಾಂತಿ ಜಿಲ್ಲೆಯಲ್ಲಿ ಬೆಳೆಯುವ ಎರಡು ಪ್ರಮುಖ ಎಣ್ಣೆಕಾಳು ಬೆಳೆಗಳು. ರಾಜ್ಯದಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು 'ತೊಗರಿ ಕಣಜ' ಎಂದು ಕರೆಯಲಾಗುತ್ತದೆ. ಮುಂಗಾರು ಬೆಳೆಯ ಶೇ. 60ರಷ್ಟು ಭೂಮಿಯು ಈ ಬೆಳೆಯಿಂದಲೇ ಆವರಿಸುತ್ತದೆ.

ಚಿತ್ತಾಪುರ, ಸೇಡಂ, ಗುಲ್ಬರ್ಗಾ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಕೆಂಪು ಪಿಂಗಾಣಿ ಮಣ್ಣು ಅಸ್ತಿತ್ವದಲ್ಲಿದ್ದು, ಇದು ತೊಗರಿ ಸಾಗುವಳಿಗೆ ಹೆಚ್ಚು ಯೋಗ್ಯವಾಗಿದೆ. ತೊಗರಿ ಬೆಳೆಯು ರಫ್ತು ಗುಣಮಟ್ಟವನ್ನು ಹೊಂದಿದೆ. ತೊಗರಿಯನ್ನು 3.25 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಿದ್ದು, ಒಣಭೂಮಿಯಲ್ಲಿ ಇದರ ಸರಾಸರಿ ಇಳುವರಿ 500 ಕೆ.ಜಿ. ಆಗಿದ್ದರೆ, ನೀರಾವರಿ ಪ್ರದೇಶದಲ್ಲಿ 2000 ಕೆ.ಜಿ. ಆಗಿದೆ. ಆದರೆ ಅನಿಯಮಿತ ಮಳೆ ಮತ್ತು ನಿರಂತರ ಕೀಟ ಭಾದೆಯಿಂದಾಗಿ ಬೆಳೆಗಳ ಉತ್ಪಾದನೆಯು ಅನಿಶ್ಚಿತವಾಗಿದೆ.

ಕಳೆದ ದಶಕದಿಂದ ಕೃಷಿ ಉತ್ಪಾದನೆಯ ಏರಿಕೆಯು ಸ್ಥಗಿತಗೊಂಡಿದೆ. ಒಂಭತ್ತನೆಯ ಯೋಜನಾವಧಿಯಲ್ಲಿ ವಾರ್ಷಿಕ ಬೆಳವಣಿಗೆಯ ಪ್ರಮಾಣವು ಶೇ. 2 ರಷ್ಟಿದ್ದರೆ ಹತ್ತನೆಯ ಯೋಜನಾವಧಿಯಲ್ಲಿ ಅದು ಶೇ. 2.7 ರಷ್ಟಾಗಿದೆ. ರಾಜ್ಯದ ಸರಾಸರಿ ಮಟ್ಟಕ್ಕೆ ಹೋಲಿಸಿದರೆ ಪ್ರಮುಖ ಕೃಷಿ ಬೆಳೆಗಳ ಉತ್ಪಾದಕತೆಯು ಜಿಲ್ಲೆಯಲ್ಲಿ ಕೆಳಮಟ್ಟದಲ್ಲಿದೆ.

ಒಣಭೂಮಿ ಪ್ರದೇಶದಲ್ಲಿ 180 ಮಾನವ ದಿನಗಳಷ್ಟು ಉದ್ಯೋಗವು ಒದಗಿಬರುತ್ತಿದ್ದರೆ ನೀರಾವರಿ ಪ್ರದೇಶದಲ್ಲಿ ಅದು 270 ಮಾನವ ದಿನಗಳಾಗಿದೆ. ಪುರುಷ ಕಾರ್ಮಿಕರ

**"ಸಾಗುವಳಿ ಪದ್ಧತಿಯಲ್ಲಿ ಆಹಾರ ಬೆಳೆಗಳ ಪ್ರಾಬಲ್ಯ ಅಧಿಕವಾಗಿದೆ. ತೊಗರಿ ಮತ್ತು ಜೋಳ ಜಿಲ್ಲೆಯ ಪ್ರಮುಖ ಬೆಳೆಗಳು. ಶೇಂಗಾ ಮತ್ತು ಸೂರ್ಯಕಾಂತಿ ಜಿಲ್ಲೆಯಲ್ಲಿ ಬೆಳೆಯುವ ಎರಡು ಪ್ರಮುಖ ಎಣ್ಣೆಕಾಳು ಬೆಳೆಗಳು. ರಾಜ್ಯದಲ್ಲಿ ಗುಲ್ಬರ್ಗಾ ಜಿಲ್ಲೆಯನ್ನು 'ತೊಗರಿ ಕಣಜ' ಎಂದು ಕರೆಯಲಾಗುತ್ತದೆ. ಮುಂಗಾರು ಬೆಳೆಯ ಶೇ. 60ರಷ್ಟು ಭೂಮಿಯು ಈ ಬೆಳೆಯಿಂದಲೇ ಆವರಿಸುತ್ತದೆ.**

ಕೋಷ್ಟಕ 5.10

## ಗುಲಬರ್ಗಾ ಜಿಲ್ಲೆಯಲ್ಲಿ ಭೂಮಿ ಮತ್ತು ಕೃಷಿ ದುಡಿಮೆಗಾರರ ನಡುವಿನ ಸಂಬಂಧ

| ತಾಲ್ಲೂಕು | ಸಾಗುವಳಿ ಭೂಮಿ | ಜನಸಂಖ್ಯೆ | ಸಾಗುವಳಿಗಾರರು | ಕೃಷಿ ಕಾರ್ಮಿಕರು | ಸಾಗುವಳಿಗಾರರು ಮತ್ತು ಕೃಷಿ ಕಾರ್ಮಿಕರು | ತಲಾ ಸಾಗುವಳಿ ಭೂಮಿ (ಹೆಕ್ಟೇರುಗಳಲ್ಲಿ) | ತಲಾ ಕೃಷಿ ಕಾರ್ಮಿಕರಿಗೆ ಭೂಮಿ (ಹೆಕ್ಟೇರುಗಳಲ್ಲಿ) | ಒಟ್ಟು ದುಡಿಮೆಗಾರರಲ್ಲಿ ಕೃಷಿ ದುಡಿಮೆಗಾರರ ಪ್ರಮಾಣ |
|---|---|---|---|---|---|---|---|---|
| ಅಫಜಲಪುರ | 105931 | 180071 | 22616 | 37105 | 59721 | 0.59 | 1.77 | 77.77 |
| ಅಳಂದ್ | 143619 | 297136 | 47759 | 76917 | 124676 | 0.48 | 1.15 | 81.7 |
| ಚಿಂಚೋಳಿ | 102114 | 223646 | 33452 | 53234 | 86686 | 0.45 | 1.18 | 77.4 |
| ಚಿತ್ತಾಪುರ | 131361 | 366802 | 30177 | 46906 | 77083 | 0.36 | 1.70 | 54.6 |
| ಗುಲಬರ್ಗಾ | 114994 | 675679 | 34063 | 50896 | 84959 | 0.17 | 1.35 | 38.2 |
| ಜೇವರ್ಗಿ | 158576 | 235254 | 30656 | 57121 | 87777 | 0.67 | 1.80 | 80.7 |
| ಸೇಡಂ | 78957 | 196154 | 23480 | 36906 | 60386 | 0.40 | 1.30 | 66.1 |
| ಶಹಾಪುರ | 111760 | 293518 | 43392 | 54633 | 98025 | 0.38 | 1.14 | 75.0 |
| ಶೋರಾಪುರ | 121976 | 336755 | 44422 | 63268 | 107690 | 0.36 | 1.13 | 73.7 |
| ಯಾದಗೀರ್ | 98661 | 325907 | 55250 | 62575 | 117825 | 0.30 | 0.83 | 70.4 |
| ಗುಲಬರ್ಗಾ ಜಿಲ್ಲೆ | 1167449 | 3130922 | 365267 | 539561 | 904828 | 0.37 | 1.29 | 67 |

ಮೂಲ: ಸೆನ್ಸಸ್ ಆಫ್ ಇಂಡಿಯಾ – 2001

ದಿನಗೂಲಿಯು ದಿನಕ್ಕೆ ಸರಾಸರಿ ರೂ. 50-60 ರಷ್ಟಾಗಿದ್ದರೆ, ಮಹಿಳಾ ಕಾರ್ಮಿಕರ ದಿನಗೂಲಿಯು ರೂ. 30 ರಷ್ಟಾಗಿದೆ.. ಬಹುಪಾಲು ಪ್ರದೇಶ ಒಣ ಬೇಸಾಯದಿಂದ ಕೂಡಿರುವುದು ಹಾಗೂ ಜೀವನಾಧಾರ ಸಾಗುವಳಿ ಪದ್ಧತಿಗಳು, ಕೃಷಿಯ ಮೇಲೆ ಅವಲಂಬನೆಯಾಗಿರುವ ಬಹುಪಾಲು ಜನರ ವರಮಾನ ಮತ್ತು ಜೀವನೋಪಾಯ ಮಟ್ಟಗಳು ಕೆಳಮಟ್ಟದಲ್ಲಿರುವುದನ್ನು, ಸೂಚಿಸುತ್ತದೆ.

## ಗಂಡಾಂತರದಲ್ಲಿರುವ ಜನ ಸಮುದಾಯ :

ಮಾನವ ಅಭಿವೃದ್ಧಿಯು ಜನರ ಆಯ್ಕೆ ಮತ್ತು ಅವಕಾಶಗಳ ವರ್ಧನೆಯ ಮೇಲೆ ಬೆಳಕು ಚೆಲ್ಲುತ್ತದೆ. ಆದರೆ ಈ ಅವಕಾಶಗಳು ಎಲ್ಲಾ ಸಮುದಾಯಗಳು ಅಥವಾ ಗುಂಪುಗಳ ನಡುವೆ ಏಕರೂಪವಾಗಿ ಹಂಚಿಕೆಯಾಗಿರದೇ ಇರಬಹುದು. ಜನಸಂಖ್ಯೆಯ ಕೆಲ ನಿರ್ದಿಷ್ಟ ವರ್ಗಗಳು ಅವಕಾಶಗಳನ್ನು ಪಡೆದಿರಬಹುದು. ಆದ್ದರಿಂದ ಆ ವರ್ಗಗಳು ಅಧಿಕ ಪ್ರಯೋಜನಗಳನ್ನು ಪಡೆದಿರಬಹುದು. ಮುಂದುವರಿದು ಸಮಾಜದ ಕೆಲ ವರ್ಗಗಳು ನೈಸರ್ಗಿಕ ವಿಕೋಪಗಳು, ಬಡತನ, ಪ್ರತ್ಯೇಕತೆ ಮತ್ತು ತಾರತಮ್ಯ ಮುಂತಾದವುಗಳಿಂದ ಉಂಟಾಗುವ ಅಪಾಯಗಳ ಸ್ಥಿತಿಯಲ್ಲಿಯೇ ಜೀವಿಸಬೇಕಾಗುತ್ತದೆ. ನೋವುಗಳಿಗೆ ಒಳಪಟ್ಟ, ಅಭಿವೃದ್ಧಿಯ ಫಲಗಳಿಂದ ವಂಚಿತವಾಗಿರುವ ಇಂತಹ ವರ್ಗ ಸಮುದಾಯಗಳನ್ನು ಗುರುತಿಸುವುದು ಅತ್ಯಗತ್ಯವಾಗಿದ್ದು, ಅವರ ಸ್ಥಿತಿಗತಿಗಳನ್ನು

ಕೋಷ್ಟಕ 5.11

### ಕೃಷಿಯಲ್ಲಿ ಇಳುವರಿ

| | ಬೆಳೆಗಳು | ಮಳೆಯಾಧಾರಿತ ಇಳುವರಿ ಪ್ರತಿ ಹೆಕ್ಟೇರಿಗೆ (ಕೆ.ಜಿ.ಗಳಲ್ಲಿ) | ನೀರಾವರಿಯಾಧಾರಿತ ಇಳುವರಿ ಪ್ರತಿ ಹೆಕ್ಟೇರಿಗೆ(ಕೆ.ಜಿ.ಗಳಲ್ಲಿ) |
|---|---|---|---|
| ಏಕದಳ ಧಾನ್ಯಗಳು | ಭತ್ತ | 1000 | 3000 |
| | ಜೋಳ | 850 | 1750 |
| | ಗೋವಿನ ಜೋಳ | 750 | 2500 |
| | ಬಾಜ್ರ ಮತ್ತು | | |
| | ಇತರೆ | 1000 | 1500 |
| | ಗೋಧಿ | 450 | 1500 |
| | ಸರಾಸರಿ | 810 | 2050 |
| ದ್ವಿದಳ ಕಾಳು | ತೊಗರಿ | 500 | 1200 |
| | ಕಡಲೆ ಬೇಳೆ | 1000 | 2000 |
| | ಹೆಸರು/ಉದ್ದು | 500 | - |
| | ಇತರೆ | 500 | - |
| | ಸರಾಸರಿ | 625 | 1600 |
| ಎಣ್ಣೆ ಕಾಳು | ಸೇಂಗಾ | 500 | 1500 |
| | ಸೂರ್ಯಕಾಂತಿ | 750 | 1500 |
| | ಕುಸುಬೆ | 500 | 1250 |
| | ಇತರೆ | 750 | 1000 |
| | ಸರಾಸರಿ | 625 | 1370 |

ಮೂಲ; ಕೃಷಿ ಇಲಾಖೆ 2006-07

ಸುಧಾರಿಸಲು ಕೇಂದ್ರೀಕರಿಸದ ಹಸ್ತಕ್ಷೇಪದ ಅಗತ್ಯವಿದೆ.

ಗುಲಬರ್ಗಾ ಜಿಲ್ಲೆಯಲ್ಲಿ ಜನರು ಎದುರಿಸಬಹುದಾದ ಗಂಡಾಂತರಗಳ ಸಂದರ್ಭಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

1 ನೈಸರ್ಗಿಕ ವಿಕೋಪಗಳಿಂದಾಗಿ ಜೀವನೋಪಾಯವನ್ನು ಕಳೆದುಕೊಳ್ಳುವ, ಆಹಾರ ಅಭದ್ರತೆಯನ್ನು ಎದುರಿಸಬೇಕಾದ ಸಂದರ್ಭ

2 ವಲಸೆ

3 ಬಡತನ

4 ಬಾಲ ಕಾರ್ಮಿಕರು

**ಆಹಾರ ಅಭದ್ರತೆ** : ಗ್ರಾಮೀಣ ಪ್ರದೇಶದ ಬಡವರಿಗೆ ಸಂಬಂಧಿಸಿದಂತೆ, ಸಣ್ಣ ಮತ್ತು ಅಂಚಿನ ರೈತರು ಅಗತ್ಯವಾದ ಆಹಾರ ದೊರೆಗೊಳ್ಳುವಿಕೆಯ ಕೊರತೆಯ ಕಾರಣದಿಂದಾಗಿ ಅಲಕ್ಷ್ಯಕ್ಕೆ/ದುಸ್ಥಿತಿಗೆ ಒಳಗಾಗಿದ್ದಾರೆ. ಅವರಿಗೆ ಆಹಾರ ಭದ್ರತೆ ಎಂಬುದು ಜೀವನೋಪಾಯ ಮೂಲಗಳಿಂದ ಕುಟುಂಬದ ಎಲ್ಲ ಸದಸ್ಯರಿಗೆ ಎರಡು ಹೊತ್ತಿನ ಊಟದ ನಿರ್ವಹಣೆ ಎಂದೇ ಅರ್ಥ. ಅನಿಶ್ಚಿತ ಹಾಗೂ ಅನಿರ್ದಿಷ್ಟ ಮಳೆಯಿಂದಾಗಿ ಕೃಷಿಯಲ್ಲಿಯ ಅನಿಶ್ಚತತೆಗಳನ್ನು ನಿರ್ವಹಿಸಲು ಸಣ್ಣ ಮತ್ತು ಅಂಚಿನ ರೈತರ ಬಳಿಯಿರುವ ಸಂಪನ್ಮೂಲ ಮತ್ತು ಸಾಮರ್ಥ್ಯ ಅತ್ಯಂತ ಸೀಮಿತವಾಗಿರುತ್ತವೆ. ಇವರು ಎದುರಿಸಬೇಕಾದ ಗಂಡಾಂತರಗಳು ಪರ್ಯಾಯ ಉದ್ಯೋಗಗಳನ್ನು ಪಡೆಯುವಲ್ಲಿನ ಅನಿಶ್ಚಿತತೆಯಿಂದಾಗಿ ಮತ್ತು ಕಡಿಮೆ ಕೂಲಿಯಿಂದಾಗಿ ಉಲ್ಬಣಗೊಳ್ಳುತ್ತವೆ. ಇದರಿಂದಾಗಿ ಅವರು ಲೇವಾದೇವಿಗಾರರನ್ನು ಅವಲಂಬಿಸಬೇಕಾದುದು ಅನಿವಾರ್ಯವಾಗುತ್ತದೆ. ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವರು ತಮ್ಮ ಜಮೀನನ್ನು ಮಾರಾಟ ಮಾಡಬೇಕಾಗುತ್ತದೆ. ಈ ಎಲ್ಲ ಕಾರಣಗಳಿಂದಾಗಿ ಗಂಡಾಂತರದ ತೀವ್ರತೆಯು ಅಧಿಕವಾಗುತ್ತದೆ. ಅತಿ ಸಣ್ಣ ಮತ್ತು ಅಂಚಿನ ರೈತರು ಕೃಷಿ ಕಾರ್ಮಿಕರಾಗಿಯೂ ದುಡಿಯುತ್ತಿದ್ದಾರೆ. ಬರಗಾಲದಂತಹ ಸನ್ನಿವೇಶಗಳಲ್ಲಿ ಅವರಿಗೆ ಕನಿಷ್ಟ ಅಗತ್ಯ ಉದ್ಯೋಗಗಳಾದರೂ ದೊರೆಯಬೇಕು. ಇಲ್ಲವೇ ತಮ್ಮ ಭೂಮಿಯಿಂದ ಅಗತ್ಯ ಆಹಾರವನ್ನಾದರೂ ಪಡೆಯಬೇಕು. ಸಣ್ಣ ಮತ್ತು ಅಂಚಿನ ರೈತರು ಪರಿಧಿಯಲ್ಲಿದ್ದು ಮಳೆಯ ವಿಫಲತೆ, ಕೀಟ ಭಾದೆಗಳಂಥ ಕೆಲ ಸಣ್ಣ ಆಘಾತಗಳು ಅವರನ್ನು ಬಡತನ ಕೂಪಕ್ಕೆ ತಳ್ಳಬಹುದು.

"ಕ್ಷಾಮ/ಬರಗಾಲಗಳು ಜಿಲ್ಲೆಯ ಸಾಮಾನ್ಯ ಲಕ್ಷಣವಾಗಿವೆ. ನಿವ್ವಳ ಬಿತ್ತನೆ ಪ್ರದೇಶದ ಶೇ. 22 ರಷ್ಟು ಬಿತ್ತನೆ ಪ್ರದೇಶ ಮಾತ್ರ ನೀರಾವರಿ ಪ್ರದೇಶವಾಗಿದ್ದು, ಶೇ. 78 ಮಳೆಯಾಶ್ರಿತ ಪ್ರದೇಶವಾಗಿದೆ ಮತ್ತು ಮಳೆಯು ಅನಿಶ್ಚಿತತೆ ಮತ್ತು ಅಕಾಲಿಕವಾಗಿದೆ. ಮಳೆಯ ಸರಾಸರಿ ವಾರ್ಷಿಕ ಪ್ರಮಾಣ 777 ಮಿ.ಮಿ. ಸಾಮಾನ್ಯವಾಗಿ ಮಳೆಯ ದಿನಗಳು ಕೇವಲ ವರ್ಷದಲ್ಲಿ 46. ಕಳೆದ ಐದು ವರ್ಷಗಳಲ್ಲಿ ಬಿದ್ದ ಮಳೆ ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ."

**ಕ್ಷಾಮ/ಬರಗಾಲಗಳು ಜಿಲ್ಲೆಯ ಸಾಮಾನ್ಯ ಲಕ್ಷಣವಾಗಿವೆ. ನಿವ್ವಳ ಬಿತ್ತನೆ ಪ್ರದೇಶದ ಶೇ. 22 ರಷ್ಟು ಬಿತ್ತನೆ ಪ್ರದೇಶ ಮಾತ್ರ ನೀರಾವರಿ ಪ್ರದೇಶವಾಗಿದ್ದು, ಶೇ. 78 ಮಳೆಯಾಶ್ರಿತ ಪ್ರದೇಶವಾಗಿದೆ ಮತ್ತು ಮಳೆಯು ಅನಿಶ್ಚಿತತೆ ಮತ್ತು ಅಕಾಲಿಕವಾಗಿದೆ. ಮಳೆಯ ಸರಾಸರಿ ವಾರ್ಷಿಕ ಪ್ರಮಾಣ 777 ಮಿ.ಮಿ. ಸಾಮಾನ್ಯವಾಗಿ ಮಳೆಯ ದಿನಗಳು ಕೇವಲ ವರ್ಷದಲ್ಲಿ 46.**

ಕೋಷ್ಟಕ 5.12

**ಕಳೆದ ಐದು ವರ್ಷಗಳಲ್ಲಿ ಮಳೆ**

| ಕ್ರ.ಸಂ | ವರ್ಷ | ಜನವರಿ | ಫೆಬ್ರವರಿ | ಮಾರ್ಚ್ | ಏಪ್ರಿಲ್ | ಮೇ | ಜೂನ್ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋ | ನವೆಂ | ಡಿಸೆ | ಒಟ್ಟು |
|---|---|---|---|---|---|---|---|---|---|---|---|---|---|---|
| 1 | ಸಾಮಾನ್ಯ | 3.90 | 4.50 | 13.70 | 35.60 | 13.90 | 117.00 | 226.8 | 181.6 | 204.8 | 81.4 | 13.20 | 4.20 | 930.60 |
| 2 | 2002 | 12.75 | 2.60 | 1.06 | 8.43 | 25.61 | 75.89 | 69.64 | 126.95 | 70.84 | 131.33 | 0.9 | 0 | 525.99 |
| 3 | 2003 | 0.2 | 0.91 | 1.06 | 0 | 0 | 54.67 | 134.58 | 159.92 | 125.22 | 27.58 | 0 | 0 | 504.14 |
| 4 | 2004 | 8.26 | 0 | 0.6 | 33.55 | 105.7 | 53.19 | 134.04 | 32.01 | 141.78 | 69.50 | 0 | 0 | 578.64 |
| 5 | 2005 | 17.08 | 2.33 | 1.52 | 69.37 | 16.5 | 56.37 | 200.99 | 142.58 | 217.91 | 65.47 | 0 | 0 | 790.12 |
| 6 | 2006 | 0 | 0 | 26.10 | 25.02 | 64.53 | 96.78 | 44.71 | 44.23 | 169.00 | 41.82 | 29.43 | 0 | 508.60 |

ಮೂಲ: ಜಿಲ್ಲಾ ಅಂಕಿಅಂಶ ನೋಟ–2006





ಈ ಹಿಂದೆ ಬರಗಾಲ ನಿರಂತರವಾಗಿ ಸಂಭವಿಸುತ್ತಿತ್ತು. ಇತಿಹಾಸದ ದಾಖಲೆಗಳು ಇದಕ್ಕೆ ಆಧಾರವಾಗಿವೆ. ಮಳೆಯ ಅನಿರ್ದಿಷ್ಟವಾದ ಪ್ರವೃತ್ತಿಯು ಕೋಷ್ಟಕದಿಂದ ಸ್ಪಷ್ಟವಾಗುತ್ತದೆ. ಮಳೆಯ ಪ್ರಮಾಣವು 2003 ಅತ್ಯಂತ ಕಡಿಮೆ ಅಂದರೆ 504 ಮಿ.ಮೀ. ಆಗಿತ್ತು. ಇಲ್ಲಿ ಪ್ರತಿ ಮೂರು ವರ್ಷಗಳಲ್ಲಿ ಒಂದು ವರ್ಷ ಕ್ಷಾಮದ ಸ್ಥಿತಿ ಇರುತ್ತದೆ. ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ನೀರಾವರಿ ಆಯೋಗವು ಬರಪೀಡಿತ ತಾಲ್ಲೂಕುಗಳೆಂದು ವರ್ಗೀಕರಿಸಿದೆ. ಜಿಲ್ಲೆಯ ಅಫಜಲ್‌ಪುರ ಮತ್ತು ಚಿತ್ತಾಪುರಗಳು ಪದೇ ಪದೇ ಬರಕ್ಕೆ ಒಳಗಾಗುತ್ತಿರುವ ತಾಲ್ಲೂಕುಗಳಾಗಿವೆ. ಇದರಿಂದಾಗಿ ಕೃಷಿಯಲ್ಲಿ ಅನಿಶ್ಚಿತತೆ ಅಧಿಕ ಪ್ರಮಾಣದಲ್ಲಿದೆ. ಜನಸಂಖ್ಯೆಯ ಶೇ. 67ರಷ್ಟು ಜನರು ಕೃಷಿಯ ಮೇಲೆ ಅವಲಂಭಿಸಿದ್ದಾರೆ. 17ನೇ ಶತಮಾನದಿಂದ ಕ್ಷಾಮ ಸಂಭವಿಸುತ್ತಿದ್ದು, 1630, 1650, 1659, 1681, 1685, 1713, 1733, 1747, 1749, 1787, 1792, 1793, 1804, 1819, 1833, 1854, 1873, 1877, 1878, 1897, 1900, 1909, 1922, 1923, 1934, 1945, 1971, 1972, 1980 ಈ ವರ್ಷಗಳಲ್ಲಿ ಭೀಕರ ಕ್ಷಾಮಗಳು ಸಂಭವಿಸಿವೆ.

ಈ ಬರಗಾಲಗಳು ಜನರ ಜೀವಕ್ಕೆ, ಜಾನುವಾರುಗಳ ಪ್ರಾಣಕ್ಕೆ ಮತ್ತು ಆಸ್ತಿ-ಪಾಸ್ತಿಗಳಿಗೂ ಅಪಾರ ಹಾನಿಯನ್ನು ಉಂಟು ಮಾಡುತ್ತವೆ. ಸಣ್ಣ ಮತ್ತು ಅಂಚಿನ ಕುಟುಂಬಗಳಲ್ಲಿ ಸಂದರ್ಭದಲ್ಲಿ ಸಂಪನ್ಮೂಲ ಕೊರತೆಯಿಂದಿರುವುದರಿಂದ ಮತ್ತು ಗಂಡಾಂತರಗಳನ್ನು ಎದುರಿಸುವ ಸಾಮರ್ಥ್ಯವು ಇಲ್ಲದಿರುವುದರಿಂದ ಬರಗಾಲವನ್ನು ಅರಗಿಸಿಕೊಳ್ಳುವ ಅವರ ಸಾಮರ್ಥ್ಯವು ಅತ್ಯಂತ ಕಡಿಮೆ. ಇಂತಹ ಸಂದರ್ಭದಲ್ಲಿ ಆಹಾರ ಪಡೆಯುವುದು ಮತ್ತು ಬದುಕುಳಿಯುವುದು ಅತ್ಯಂತ ಕಷ್ಟಕರವಾಗುತ್ತದೆ.

ಬರಗಾಲದ ಪರಿಸ್ಥಿತಿಯಿಂದಾಗಿ, ಮಣ್ಣು ಮತ್ತು ಮೇಲ್ಮೈ ಜಲವನ್ನು ಸಂರಕ್ಷಿಸುವುದು ಮತ್ತು ಪುನರ್ ಪ್ರತಿಷ್ಠಾಪಿಸುವಂತಹ ಸಂಗತಿಗಳು, ಮನುಕುಲದ ಉಳಿವು, ಬದುಕಿಗಾಗಿ ಅತ್ಯಂತ ಅಗತ್ಯವಾದ ಮತ್ತು ಕಡೆಗಣಿಸಲಾರದ ಅಂಶಗಳಾಗಿವೆ. ಈ ಉದ್ದೇಶಗಳ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ.

**ಬರಗಾಲದ ಪರಿಸ್ಥಿತಿಯಿಂದಾಗಿ, ಮಣ್ಣು ಮತ್ತು ಮೇಲ್ಮೈ ಜಲವನ್ನು ಸಂರಕ್ಷಿಸುವುದು ಮತ್ತು ಪುನರ್ ಪ್ರತಿಷ್ಠಾಪಿಸುವಂತಹ ಸಂಗತಿಗಳು, ಮನುಕುಲದ ಉಳಿವು, ಬದುಕಿಗಾಗಿ ಅತ್ಯಂತ ಅಗತ್ಯವಾದ ಮತ್ತು ಕಡೆಗಣಿಸಲಾರದ ಅಂಶಗಳಾಗಿವೆ. ಈ ಉದ್ದೇಶಗಳ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಬೃಹತ್ ಪ್ರಮಾಣದಲ್ಲಿ ಕೈಗೊಳ್ಳಲಾಗಿದೆ.**

ರಾಷ್ಟ್ರೀಯ ಜಲಾನಯದ ಅಭಿವೃದ್ಧಿ ಕಾರ್ಯಕ್ರಮ, ಬರಪೀಡಿತ ಪ್ರದೇಶ ಕಾರ್ಯಕ್ರಮ, ಸಮಗ್ರ ಬಂಜರು ಪ್ರದೇಶ ಅಭಿವೃದ್ಧಿ ಕಾರ್ಯಕ್ರಮ, ಸಂಪೂರ್ಣ ಗ್ರಾಮೀಣ ರೋಜಗಾರ ಯೋಜನೆ, ರಾಷ್ಟ್ರೀಯ ಸಮ ವಿಕಾಸ ಯೋಜನೆ ಮುಂತಾದ ಹಲವಾರು ಕಾರ್ಯಕ್ರಮಗಳ ಅಡಿಯಲ್ಲಿ ಜಲಾನಯನ ಪ್ರದೇಶ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ ಒಟ್ಟು ಪ್ರದೇಶದ ಸುಮಾರು ಶೇ. 22.16ರಷ್ಟು ಪ್ರದೇಶವನ್ನು ಜಲಾನಯದ ಅಭಿವೃದ್ಧಿ ಕಾರ್ಯಕ್ರಮಗಳ ಅಡಿಯಲ್ಲಿ ತರಲಾಗಿದೆ. ಚೆಕ್ ಡ್ಯಾಮ್ಸ್, ಬಂಡಾರ, ನಾಲಾ ಬಂದ, ನಾಲಾ ಹರಿಯುವಿಕೆ ಕೃಷಿಹೊಂಡಗಳಂಥ ನೀರು ತಡೆ ರಚನೆ/ಕಾರ್ಯಕ್ರಮಗಳು ಜಾರಿಯಲ್ಲಿ ತರಲಾಗಿದೆ. ಈ ಬಗೆಯ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎನ್‌ಜಿಓಗಳು, ಸ್ವಸಹಾಯ ಗುಂಪುಗಳು ಮತ್ತು ಗ್ರಾಮ ಪಂಚಾಯಿತಿಗಳು ತೊಡಗಿಕೊಂಡಿವೆ. ಮತ್ತು ಮಣ್ಣು ಮತ್ತು ಜಲರಕ್ಷಣೆ ಹಾಗೂ ಕೃಷಿ ಉತ್ಪಾದಕತೆಯನ್ನು ಹೆಚ್ಚಿಸುವಲ್ಲಿ ಜಲಾನಯದ ಅಭಿವೃದ್ಧಿ ಕಾರ್ಯಕ್ರಮಗಳು ಸಹಾಯಕಾರಿಯಾಗಿವೆ. ಇದು ಬಡತನದ ತೀವ್ರತೆ ಮತ್ತು ನಿರುದ್ಯೋಗ ಕಡಿಮೆ ಮಾಡುವಲ್ಲಿ ಸಹಕಾರಿಯಾಗಿದೆ.

ಜನರಿಗೆ ಭದ್ರತೆಯನ್ನು ಒದಗಿಸುವ ದಿಶೆಯಲ್ಲಿ ತೆಗೆದುಕೊಂಡ ಮತ್ತೊಂದು ಕಾರ್ಯಕ್ರಮವೆಂದರೆ ಸಾರ್ವಜನಿಕ ವಿತರಣಾ ಪದ್ಧತಿ. ನ್ಯಾಯಬೆಲೆ ಅಂಗಡಿಗಳ ಮೂಲಕ ಆಹಾರ ಧಾನ್ಯಗಳು ಮತ್ತು ಇತರೆ ಅಗತ್ಯತೆಗಳನ್ನು ವಿತರಿಸಲು ಕುಟುಂಬಗಳನ್ನು ಬಡತನ ರೇಖೆಯ ಕೆಳಗಿನ(ಬಿಪಿಎಲ್) ಮತ್ತು ಬಡತನ ರೇಖೆಯ ಮೇಲಿನ(ಎಪಿಎಲ್) ಕುಟುಂಬಗಳೆಂದು ಗುರುತಿಸಲಾಗುತ್ತದೆ. ಸಾರ್ವಜನಿಕ ಪಡಿತರ ಪದ್ಧತಿಯು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲಿಯೂ ಅನುಷ್ಠಾನದಲ್ಲಿದೆ. ಆದರೆ ಇದರ ಕಾರ್ಯಾನುಷ್ಠಾನವು ತೃಪ್ತಿಕರವಾಗಿಲ್ಲ.

ಬಡತನಕ್ಕೆ ಒಳಪಟ್ಟ ಗುಂಪುಗಳನ್ನು ಗುರುತಿಸುವಲ್ಲಿ ಕೆಲ ದೋಷಗಳಾಗಿವೆ. ಬಡತನಕ್ಕೆ ಒಳಪಟ್ಟ ಗುಂಪುಗಳನ್ನು ತಪ್ಪಾಗಿ ಗುರುತಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆಯ ಕೆಳಗಿನ ಕುಟುಂಬಗಳಿಗೆ ಪಡಿತರ ಕಾರ್ಡ್‌ಗಳನ್ನು ವಿತರಿಸಿಲ್ಲ. ಸಾರ್ವಜನಿಕ ವಿತರಣಾ ಪದ್ಧತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ದೊರೆಯುವ ಆಹಾರ ಧಾನ್ಯಗಳು ಉತ್ತಮ ಗುಣಮಟ್ಟದಲ್ಲಿರುವುದಿಲ್ಲ. ಅಲ್ಲದೇ, ಪೂರೈಕೆಯು ಸಹ ನಿರಂತರವಾಗಿರುವುದಿಲ್ಲ (ವೈನಾರಿಟಿ ಸರ್ವೇ ರಿಪೋರ್ಟ್ 2008).

ಪ್ರತಿಕೂಲ ನೈಸರ್ಗಿಕ ಪರಿಸ್ಥಿತಿಯಿಂದಲೂ ಸಹ ಜನರು ತೊಂದರೆಗೆ ಒಳಗಾಗಿದ್ದಾರೆ. ಬೇಸಿಗೆ ಕಾಲ ಅತಿ ಉಷ್ಣದಿಂದ ಕೂಡಿರುತ್ತದೆ ಮತ್ತು ಇದರ ಅವಧಿಯು ಅಧಿಕವಾಗಿರುತ್ತದೆ. ಏಪ್ರಿಲ್, ಮೇ, ಜೂನ್ ತಿಂಗಳಲ್ಲಿ ಉಷ್ಣಾಂಶವು 44 ಡಿಗ್ರಿ ಸೆಲ್ಸಿಯಸ್‌ಗಳಷ್ಟು ಮತ್ತು ಕೆಲ ಸಂದರ್ಭಗಳಲ್ಲಿ ಅದಕ್ಕಿಂತಲೂ ಹೆಚ್ಚಿರುತ್ತದೆ. ವರ್ಷದಲ್ಲಿ ಆರು ತಿಂಗಳು ಕಾಲ ಈ ಬಿಸಿ ವಾತಾವರಣ ಇರುತ್ತದೆ. ಬೇಸಿಗೆ ಕಾಲವು ದುಡಿಮೆಯ ಕಾರ್ಯಕ್ಷಮತೆಯ ಮೇಲೆ ಕೆಟ್ಟ ಪರಿಣಾಮ ಉಂಟು ಮಾಡುತ್ತದೆ. ಸೂರ್ಯನ ಪ್ರಖರ ಬಿಸಿಲಿನಲ್ಲಿ ಬಡವರು ಅನಿವಾರ್ಯವಾಗಿ ಒತ್ತಾಯ ಪೂರ್ವಕವಾಗಿ ದುಡಿಯಬೇಕಾಗುತ್ತದೆ. ಮಹಿಳೆಯರು ನೀರಿಗಾಗಿ ಬಹುದೂರ ಕ್ರಮಿಸಬೇಕಾಗುತ್ತದೆ. ಬೇಸಿಗೆ ಕಾಲದಲ್ಲಿ ನೀರಿನ ಕೊರತೆ ಸಾಮಾನ್ಯವಾಗಿದ್ದು, ಜಿಲ್ಲೆಯ ಎಲ್ಲ ಭಾಗಗಳಲ್ಲಿ ಕಂಡುಬರುತ್ತದೆ.

## ಬಡತನ

ಮಾನವತೆಗೆ ಬಡತನ ಒಂದು ಶಾಪ. ಜಿಲ್ಲೆಯಲ್ಲಿ ಶೇ. 22ರಷ್ಟು ಕುಟುಂಬಗಳು ಬಡತನ ರೇಖೆಯ ಕೆಳಗಿನ ಪಡಿತರ ಕಾರ್ಡ್‌ಗಳನ್ನು ಹೊಂದಿರುವ ಕುಟುಂಬಗಳಾಗಿವೆ. ಬಡತನ ರೇಖೆಯ ಕೆಳಗಿರುವ ಜನಸಂಖ್ಯೆಯ ಪ್ರಮಾಣ ಶೇ.33.8ರಷ್ಟಿದೆ.

ಜಿಲ್ಲೆಯಲ್ಲಿ ಶೇ. 67ರಷ್ಟು ಜನರ ಜೀವನೋಪಾಯ ಮೂಲ ಕೃಷಿ. ಸಾಗುವಳಿ ಪ್ರದೇಶದ ಶೇ. 80ರ ಪ್ರದೇಶದಲ್ಲಿ ತೊಗರಿಬೇಳೆ ಮತ್ತು ಜೋಳದ ಬೆಳೆ ಬೆಳೆಯುತ್ತಾರೆ. ಈ ಬೆಳೆಗಳ ಸಾಗುವಳಿಗೆ ಸಾಂಪ್ರದಾಯಿಕ ಪದ್ಧತಿಯ ಅನುಸರಣೆ ಮತ್ತು ಏಕರೂಪ ಬೆಳೆ ಪದ್ಧತಿ ಕೃಷಿಯಲ್ಲಿ ಇಳುವರಿ ಮತ್ತು ಉತ್ಪಾದನೆ ಬಹಳ ಕಡಿಮೆಯಿರಲು ಕಾರಣಗಳಾಗಿವೆ. ಒಂಭತ್ತು ಮತ್ತು ಹತ್ತನೇ ಯೋಜನಾ ಅವಧಿಗಳಲ್ಲಿ ಕೃಷಿ ಉತ್ಪಾದನೆಯ ಬೆಳವಣಿಗೆಯ ಪ್ರಮಾಣವು ಶೇ. 2.5ಕ್ಕಿಂತಲೂ ಕಡಿಮೆಯಿತ್ತು. ಕೃಷಿಯ ಮೇಲೆ ಅವಲಂಬನೆಯಾಗಿರುವ ಜನರ ಕಷ್ಟದ ಸ್ಥಿತಿಯನ್ನು ಇದು ತಿಳಿಸುತ್ತದೆ.

ಜೀವನೋಪಾಯಕ್ಕೆ ದೊರೆಯುವ ಸ್ವಯಂ ಮತ್ತು ಕೂಲಿಯಾಧಾರಿತ ಉದ್ಯೋಗಗಳು ಅಧಿಕ ಅನಿಶ್ಚಿತತೆಯಿಂದ ಕೂಡಿವೆ. ಇದು ಮುಂದಿನ ಕೋಷ್ಟಕದಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.56.88ರಷ್ಟು ದುಡಿಮೇತರರಾಗಿದ್ದಾರೆ ಮತ್ತು ಶೇ. 10.80ರಷ್ಟು ದುಡಿಮೆಗಾರರು ಅಂಚಿನ ದುಡಿಮೆಗಾರರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇದು ಗ್ರಾಮೀಣ ಪ್ರದೇಶದಲ್ಲಿಯ ಉದ್ಯೋಗ ಕುರಿತಂತೆ ಮಾಹಿತಿಯನ್ನು ನೀಡುತ್ತದೆ. ''ಒಟ್ಟು ದುಡಿಮೆಗಾರರಲ್ಲಿ ಶೇ.40ರಷ್ಟು ಕೃಷಿ ಕಾರ್ಮಿಕರಿದ್ದಾರೆ. ಇವರಿಗೆ ಮಳೆಯಾಧಾರಿತ ಕೃಷಿ ಪ್ರದೇಶದಲ್ಲಿ ವರ್ಷಕ್ಕೆ ಆರರಿಂದ ಏಳು ತಿಂಗಳುಗಳ ಉದ್ಯೋಗ ದೊರೆಯುತ್ತದೆ. ಕೂಲಿಯ ಪ್ರಮಾಣವು ಅಲ್ಪವಾಗಿದ್ದು, ಪುರುಷ ಕಾರ್ಮಿಕರಿಗೆ ದಿನಕ್ಕೆ ಕೂಲಿ ರೂ. 50 ರಿಂದ ರೂ.60 ರಷ್ಟಾಗಿದ್ದರೆ ಮಹಿಳಾ ಕಾರ್ಮಿಕರ ಕೂಲಿ ಪ್ರಮಾಣ ದಿನ ಒಂದಕ್ಕೆ ರೂ.30ರಿಂದ ರೂ.40 ರಷ್ಟಗಿದೆ." ಒಟ್ಟು ದುಡಿಮೆಗಾರರಲ್ಲಿ ಶೇ. 25ರಷ್ಟು ಅಂಚಿನ ದುಡಿಮೆಗಾರರಾಗಿದ್ದು, ಅವರ ಗಳಿಕೆಯು, ಅವರ ಮತ್ತು ಅವರ ಕುಟುಂಬದ ಅಗತ್ಯತೆಗಳನ್ನು ಪೂರೈಸುವಷ್ಟು ಸಹ ಇಲ್ಲ.

ಬಡತನದ ವಿಸ್ತಾರವು ವರಮಾನದ ಮಟ್ಟ ಮತ್ತು ವರಮಾನವನ್ನು ಗಳಿಸುವ ಸಾಮರ್ಥ್ಯಗಳಿಂದ ಪ್ರತಿಬಿಂಬಿತವಾಗುತ್ತದೆ. ಆದುದರಿಂದ ಬಡತನದ ಸೂಚ್ಯಾಂಕವನ್ನು ಅಂದಾಜು ಮಾಡಿ, ಅದರ ಮೂಲಕ ಜಿಲ್ಲೆಯ ಬಡತನದ ವಿಶ್ಲೇಷಣೆಯನ್ನು ಮಾಡಲಾಗಿದೆ.

**ಒಟ್ಟು ದುಡಿಮೆಗಾರರಲ್ಲಿ ಶೇ.40ರಷ್ಟು ಕೃಷಿ ಕಾರ್ಮಿಕರಿದ್ದಾರೆ. ಇವರಿಗೆ ಮಳೆಯಾಧಾರಿತ ಕೃಷಿ ಪ್ರದೇಶದಲ್ಲಿ ವರ್ಷಕ್ಕೆ ಆರರಿಂದ ಏಳು ತಿಂಗಳುಗಳ ಉದ್ಯೋಗ ದೊರೆಯುತ್ತದೆ. ಕೂಲಿಯ ಪ್ರಮಾಣವು ಅಲ್ಪವಾಗಿದ್ದು, ಪುರುಷ ಕಾರ್ಮಿಕರಿಗೆ ದಿನಕ್ಕೆ ಕೂಲಿ ರೂ. 50 ರಿಂದ ರೂ.60 ರಷ್ಟಾಗಿದ್ದರೆ ಮಹಿಳಾ ಕಾರ್ಮಿಕರ ಕೂಲಿ ಪ್ರಮಾಣ ದಿನ ಒಂದಕ್ಕೆ ರೂ.30ರಿಂದ ರೂ. 40 ರಷ್ಟಗಿದೆ.**

**ಜಿಲ್ಲೆಯ ಒಟ್ಟು ಹಿಡುವಳಿಗಳಲ್ಲಿ ಶೇ. 55.32ರಷ್ಟು ಸಣ್ಣ ಮತ್ತು ಅಂಚಿನ ಹಿಡುವಳಿಗಳಿವೆ (2 ಹೆಕ್ಟೇರ್‌ಗಿಂತ ಕಡಿಮೆ) ಮಳೆಯಾಧಾರಿತ ಪ್ರದೇಶದಲ್ಲಿ ಇಂಥ ಸಣ್ಣ ಹಿಡುವಳಿಗಳ ಕುಟುಂಬಗಳು ತಮ್ಮ ಜೀವನೋಪಾಯಕ್ಕೆ ಭೂಮಿಯನ್ನು ಸಾಗುವಳಿ ಮಾಡುವುದರ ಜೊತೆಯಲ್ಲಿ ವರಮಾನದ ಇತರೆ ಪರ್ಯಾಯ ಮೂಲಗಳನ್ನು ಕಂಡುಕೊಳ್ಳುವುದರ ಮೂಲಕ ತಮ್ಮ ಕುಟುಂಬಗಳನ್ನು ನಿರ್ವಹಣೆ ಮಾಡುತ್ತವೆ.**

ಐದು ಸೂಚಿಗಳ ಆಧಾರದ ಮೇಲೆ ಬಡತನ ಸೂಚ್ಯಂಕವನ್ನು ಅಂದಾಜು ಮಾಡಲಾಗಿದೆ. ಆ ಸೂಚಿಗಳೆಂದರೆ ಅನಕ್ಷರತೆಯ ಶೇಕಡಾ ಪ್ರಮಾಣ, ದುಡಿಮೇತರರ ಶೇಕಡಾ ಪ್ರಮಾಣ, ಒಟ್ಟು ಮುಖ್ಯ ಕೆಲಸಗಾರರಲ್ಲಿ ಕೃಷಿ ಕಾರ್ಮಿಕರ ಶೇಕಡಾ ಪ್ರಮಾಣ, ಜಿಲ್ಲೆಯ ಅಂಚಿನ ದುಡಿಮೆಗಾರರ ಪ್ರಮಾಣ, ಬಡತನ ರೇಖೆಯ ಕೆಳಗಿರುವ ಜನರ ಶೇಕಡಾ ಪ್ರಮಾಣ (ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ಮಾನವ ಅಭಿವೃದ್ಧಿ ವರದಿಯ ಅಧ್ಯಯನ ವಿಧಾನವನ್ನು ಇಲ್ಲಿ ಅನುಸರಿಸಲಾಗಿದೆ.) ಬಡತನ ಸೂಚ್ಯಂಕವು ಜೇವರ್ಗಿಯಲ್ಲಿ ಅತ್ಯಧಿಕವಾಗಿದ್ದು, ನಂತರದಲ್ಲಿ ಶಹಾಪುರ, ಶೋರಾಪುರ ಮತ್ತು ಅಫಜಲಪುರ ತಾಲ್ಲೂಕುಗಳಾಗಿವೆ. ಶಹಾಪುರ ಮತ್ತು ಸುರಪುರ ತಾಲ್ಲೂಕುಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯು ಅನುಷ್ಠಾನಗೊಂಡ ಮೇಲೆ ನೀರಾವರಿ ವಿಸ್ತರಣೆಯಾಗಿದ್ದು ಮುಂದಿನ ದಿನಮಾನಗಳಲ್ಲಿ ಈ ತಾಲ್ಲೂಕುಗಳಲ್ಲಿ ಬಡತನದ, ಪ್ರಮಾಣವು ಕಡಿಮೆಯಾಗಬಹುದೆಂದು ನಿರೀಕ್ಷಿಸಲಾಗಿದೆ.

ಬಡತನದ ವಿಸ್ತಾರ ಮತ್ತು ಆಳ ಕುರಿತಂತೆ ತಾಲ್ಲೂಕು-ತಾಲ್ಲೂಕುಗಳ ನಡುವೆ ಅಂತಹ ಅಧಿಕ ವ್ಯತ್ಯಾಸಗಳು ಕಂಡು ಬರುವುದಿಲ್ಲ.

## ಭೂ ಹಿಡುವಳಿಗಳ ಸ್ವರೂಪ ಮತ್ತು ವಲಸೆ

ಮಳೆಯಾಧಾರಿತ ಮತ್ತು ಅಭಿವೃದ್ಧಿ ಕೆಳಮಟ್ಟದಲ್ಲಿರುವ ಕೃಷಿ ಪ್ರದೇಶಗಳಲ್ಲಿ ಸಣ್ಣ ಮತ್ತು ಅಂಚಿನ ಕೃಷಿಕರ ಪ್ರಮಾಣ ಅಧಿಕವಿದ್ದು ಅವರಲ್ಲಿ ದುರ್ಬಲರ ಪ್ರಮಾಣ ಹೆಚ್ಚಿರುತ್ತದೆ. ಈ ಕೆಳಗಿನ ಕೋಷ್ಟಕವು ಜಿಲ್ಲೆಯಲ್ಲಿಯ ಭೂ ಹಂಚಿಕೆಯ ಸ್ವರೂಪವನ್ನು ಸೂಚಿಸುತ್ತದೆ (ಕೊಷ್ಟಕ-5.15)

ಜಿಲ್ಲೆಯ ಒಟ್ಟು ಹಿಡುವಳಿಗಳಲ್ಲಿ ಶೇ. 55.32ರಷ್ಟು ಸಣ್ಣ ಮತ್ತು ಅಂಚಿನ ಹಿಡುವಳಿಗಳಿವೆ (2 ಹೆಕ್ಟೇರ್‌ಗಿಂತ ಕಡಿಮೆ) ಮಳೆಯಾಧಾರಿತ ಪ್ರದೇಶದಲ್ಲಿ ಇಂಥ ಸಣ್ಣ ಹಿಡುವಳಿಗಳ ಕುಟುಂಬಗಳು ತಮ್ಮ ಜೀವನೋಪಾಯಕ್ಕೆ ಭೂಮಿಯನ್ನು ಸಾಗುವಳಿ ಮಾಡುವುದರ ಜೊತೆಯಲ್ಲಿ ವರಮಾನದ ಇತರೆ ಪರ್ಯಾಯ ಮೂಲಗಳನ್ನು ಕಂಡುಕೊಳ್ಳುವುದರ ಮೂಲಕ ತಮ್ಮ ಕುಟುಂಬಗಳನ್ನು ನಿರ್ವಹಣೆ ಮಾಡುತ್ತವೆ.

ಕೋಷ್ಟಕ 5.13

**ಜಿಲ್ಲೆಯಲ್ಲಿ ಬಡತನದ ಪ್ರಮಾಣ**

| ಕ್ರ. ಸಂ. | ತಾಲ್ಲೂಕು | ಅಂಚಿನ ದುಡಿಮೆಗಾರರ ಪ್ರಮಾಣ(ಶೇ) | ಕೃಷಿ ಕಾರ್ಮಿಕರ ಪ್ರಮಾಣ(ಶೇ) | ದುಡಿಮೆಯೇತರರ ಪ್ರಮಾಣ(ಶೇ) | ಪ.ಜಾ.ಮತ್ತು ಪ.ಪಂ. ಜನರ ಪ್ರಮಾಣ(ಶೇ) | ಬಡತನದ ರೇಖೆಯ ಕೆಳಗಿನ ಕುಟುಂಬಗಳ ಪ್ರಮಾಣ(ಶೇ) |
|---|---|---|---|---|---|---|
| 1. | ಅಫಜಲಪುರ | 12.20 | 48.27 | 57.31 | 17.8 | 34.04 |
| 2. | ಆಳಂದ್ | 15.60 | 50.39 | 48.63 | 22.8 | 34.38 |
| 3. | ಚಿಂಚೋಳಿ | 13.90 | 47.52 | 49.91 | 33.2 | 36.12 |
| 4. | ಚಿತ್ತಾಪುರ | 7.50 | 30.48 | 61.49 | 29.3 | 34.99 |
| 5. | ಗುಲಬರ್ಗಾ | 6.00 | 22.85 | 67.04 | 20.4 | 31.97 |
| 6. | ಜೇವರ್ಗಿ | 12.80 | 52.45 | 53.71 | 19.9 | 35.36 |
| 7. | ಸೇಡಂ | 12.70 | 39.50 | 53.42 | 25.8 | 30.24 |
| 8. | ಶಹಾಪುರ | 10.80 | 41.76 | 55.43 | 22.7 | 33.99 |
| 9. | ಶೋರಾಪುರ | 10.90 | 43.26 | 56.57 | 18.2 | 33.89 |
| 10. | ಯಾದಗೀರ್ | 14.90 | 37.38 | 48.64 | 22.3 | 32.57 |
| | ಗುಲಬರ್ಗಾ ಜಿಲ್ಲೆ | **10.80** | **39.96** | **56.88** | **22.9** | **33.85** |

ಮೂಲ: ಸೆನ್ಸಸ್ ಆಫ್ ಇಂಡಿಯಾ 2001 ಮತ್ತು ಗುಲಬರ್ಗಾ ಜಿಲ್ಲಾ ಅಂಕಿಅಂಶ ನೋಟ 2001 ಬಡತನದ ಅಂದಾಜು, ಜಿಲ್ಲಾ ಪಂಚಾಯಿತಿ, ಗುಲಬರ್ಗಾ 2004-05.

ಕೋಷ್ಟಕ 5.14

## ಗುಲಬರ್ಗಾ ಜಿಲ್ಲೆಯಲ್ಲಿ ಬಡತನದ ಪ್ರಮಾಣ

| ತಾಲ್ಲೂಕು | ಅನಕ್ಷರತೆ(ಶೇ) | ದುಡಿಮೆಯೇತರ ವರ್ಗ(ಶೇ) | ಮುಖ್ಯ ದುಡಿಮೆಗಾರರಲ್ಲಿ ಕೃಷಿ ಕಾರ್ಮಿಕರ ಪ್ರಮಾಣ(ಶೇ) | ಅಂಚಿನ ದುಡಿಮೆಗಾರರ ಪ್ರಮಾಣ(ಶೇ) | ಬಡತನದ ರೇಖೆಯ ಕೆಳಗಿನ ಕುಟುಂಬಗಳ ಪ್ರಮಾಣ(ಶೇ) | ಎಚ್‌ಪಿಐ |
|---|---|---|---|---|---|---|
| ಅಫಜಲಪುರ | 49.1 | 57.32 | 48.30 | 12.20 | 34.04 | 0.401 |
| ಅಳಂದ್ | 47.1 | 48.64 | 50.40 | 15.60 | 34.38 | 0.392 |
| ಚಿಂಚೋಳಿ | 51.4 | 49.92 | 47.50 | 13.90 | 36.12 | 0.397 |
| ಚಿತ್ತಾಪುರ | 51.5 | 61.50 | 33.20 | 7.50 | 34.09 | 0.375 |
| ಗುಲಬರ್ಗಾ | 33.5 | 67.05 | 22.90 | 6.0 | 31.97 | 0.323 |
| ಜೇವರ್ಗಿ | 55.9 | 53.72 | 52.50 | 12.80 | 35.36 | 0.421 |
| ಸೇಡಂ | 55.2 | 52.42 | 40.40 | 12.70 | 30.24 | 0.384 |
| ಶಹಾಪುರ | 61.2 | 55.44 | 41.80 | 10.80 | 33.99 | 0.406 |
| ಶೋರಾಪುರ | 56.6 | 56.58 | 43.30 | 10.90 | 33.89 | 0.402 |
| ಯಾದಗೀರ್ | 62.8 | 48.65 | 37.40 | 14.90 | 32.57 | 0.393 |
| **ಗುಲಬರ್ಗಾ ಜಿಲ್ಲೆ** | **50.0** | **56.88** | **40.0** | **10.80** | **33.85** | **0.383** |

ಮೂಲ: ಸೆನ್ಸ್ಸ್ ಆಫ್ ಇಂಡಿಯ 2001 ಮತ್ತು ಗುಲಬರ್ಗಾ ಜಿಲ್ಲ ಅಂಕಿಅಂಶ ನೋಟ 2001 ಬಡತನದ ಅಂದಾಜು, ಜಿಲ್ಲ ಪಂಚಾಯಿತಿ, ಗುಲಬರ್ಗಾ 2004–05.

ಕೋಷ್ಟಕ 5.15

## ತಾಲ್ಲೂಕುವಾರು ಭೂಹಿಡುವಳಿಗಳ ಹಂಚಿಕೆ

| ತಾಲ್ಲೂಕು | ಅತಿಸಣ್ಣ | ಸಣ್ಣ | ಅರೆ ಮಧ್ಯಮ | ಮಧ್ಯಮ | ದೊಡ್ಡ | ಒಟ್ಟು |
|---|---|---|---|---|---|---|
| ಅಫಜಲಪುರ | 8.69 | 38.18 | 34.12 | 15.55 | 3.46 | 100 |
| ಅಳಂದ್ | 15.40 | 38.35 | 30.36 | 13.38 | 2.51 | 100 |
| ಚಿಂಚೋಳಿ | 20.46 | 35.89 | 27.91 | 13.21 | 2.53 | 100 |
| ಚಿತ್ತಾಪುರ | 17.58 | 33.97 | 30.76 | 14.86 | 2.83 | 100 |
| ಗುಲಬರ್ಗಾ | 15.56 | 33.54 | 30.42 | 16.90 | 3.58 | 100 |
| ಜೇವರ್ಗಿ | 11.52 | 34.45 | 34.15 | 16.85 | 3.03 | 100 |
| ಸೇಡಂ | 29.87 | 30.91 | 24.51 | 12.44 | 2.27 | 100 |
| ಶಹಾಪುರ | 23.00 | 33.69 | 29.59 | 11.90 | 1.82 | 100 |
| ಶೋರಾಪುರ | 21.85 | 36.55 | 27.40 | 12.82 | 1.38 | 100 |
| ಯಾದಗೀರ್ | 36.72 | 32.70 | 21.16 | 8.31 | 1.11 | 100 |
| **ಗುಲಬರ್ಗಾ ಜಿಲ್ಲೆ** | **20.47** | **34.85** | **28.88** | **13.44** | **2.36** | **100** |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿಅಂಶ ನೋಟ 2005–06.

ಚೌಕಟ್ಟು 5.1

| ಜೀವನಾಧಾರಕ್ಕಾಗಿ ವಲಸೆ |
|---|
| ಜಿಲ್ಲೆಯ ಮುಸ್ಲಿಂ ಸಮುದಾಯದಲ್ಲಿ ವಲಸೆ ಅಧಿಕ ಪ್ರಮಾಣದಲ್ಲಿದೆ. ಇಲ್ಲಿ ಗಮನಿಸಿದಂತೆ ಬಡ ಕುಟುಂಬಗಳು ಅನಾರೋಗ್ಯ ಮತ್ತು ಬೆಳೆ ವಿಫಲತೆಯಿಂದಾಗಿ ಅಧಿಕ ಅನಿರೀಕ್ಷಿತ ವೆಚ್ಚಕ್ಕೆ ಗುರಿಯಾಗುತ್ತವೆ. ಬಹುತೇಕವಾಗಿ ಸಾಲಗಳ ಮೂಲಕ ಈ ವೆಚ್ಚಗಳನ್ನು ಭರಿಸಲಾಗುತ್ತದೆ. ಸಾಲದ ಬಾಧೆಯಿಂದ ಕುಟುಂಬದ ಸದಸ್ಯರು ನಗರ ಪ್ರದೇಶಗಳಿಗೆ ವಲಸೆ ಹೋಗಿ ಹೆಚ್ಚು ವರಮಾನ ತರುವಂತಹ ಉದ್ಯೋಗಳನ್ನು ಪಡೆದು ಮಾಡಿದ ಸಾಲವನ್ನು ತೀರಿಸುವ ಅನಿವಾರ್ಯತೆಗೆ ಅವರು ಸಿಲುಕಿಕೊಳ್ಳುತ್ತಾರೆ. ಸಾಲವನ್ನು ಹಿಂದುರುಗಿಸಲು ಒತ್ತಾಯ ಉಂಟಾಗುತ್ತದೆ. ಕುಟುಂಬದ ಯುವಕರು ವಯಸ್ಸಾದ ಪಾಲಕರನ್ನು ಬಿಟ್ಟು ಬೆಂಗಳೂರು ಮತ್ತು ಹೈದರಾಬಾದ್‌ಗಳ ಕಡೆಗೆ ಸಾಗುತ್ತಾರೆ. ಇನ್ನು ಕೆಲವು ಪ್ರಕರಣಗಳಲ್ಲಿ ಕೇವಲ ಪುರುಷ ಸದಸ್ಯರು ತಮ್ಮ ಹೆಂಡತಿ ಮತ್ತು ಮಕ್ಕಳನ್ನು ಬಿಟ್ಟು ಹೊರ ಹೋಗುತ್ತಾರೆ. ದುಡಿಮೆ ಮತ್ತು ಕುಟುಂಬವನ್ನು ನೋಡಿಕೊಳ್ಳುವ ಎರಡೂ ಹೊರೆಗಳು ಮಹಿಳೆಯ ಮೇಲೆ ಬೀಳುತ್ತದೆ. ಈ ಇಡೀ ಪ್ರಕ್ರಿಯೆಯಲ್ಲಿ ಮಕ್ಕಳು ಶಿಕ್ಷಣ ಪಡೆಯುವುದರಿಂದ ವಂಚಿತರಾಗುತ್ತಾರೆ. |

**"ಸಾಮಾನ್ಯ ವೇಳೆಯಲ್ಲಿಯೂ ಸಹ ಈ ಹಿಡುವಳಿಗಳು ಕುಟುಂಬಗಳಿಗೆ ಅಗತ್ಯ ಆಹಾರವನ್ನು ಪೂರೈಸಲಾರವು. ಆದುದರಿಂದ ಅವರು ಕೃಷಿ ಕಾರ್ಮಿಕರಾಗಿ ದುಡಿಯಬೇಕಾಗುತ್ತದೆ. ಮತ್ತು ಹೈನುಗಾರಿಕೆಗಾಗಿ ಆಕಳು ಅಥವಾ ಎಮ್ಮೆಗಳನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಅಥವಾ ಕುಟುಂಬದ ಕೆಲ ಸದಸ್ಯರು ನಗರ ಮತ್ತು ಅರೆನಗರ ಪ್ರದೇಶಗಳಿಗೆ ಉದ್ಯೋಗಗಳನ್ನರಿಸಿ ಹಳ್ಳಿಗಳನ್ನು ತೊರೆದು ವಲಸೆ ಹೋಗಬೇಕಾಗುತ್ತದೆ.**

ಯಾದಗಿರಿ ತಾಲ್ಲೂಕಿನ ಹಿಡುವಳಿಗಳಲ್ಲಿ ಶೇ. 65ರಷ್ಟು ಹಿಡುವಳಿಗಳು ಶೇ. 2 ಹೆಕ್ಟೇರುಗಳಿಗಿಂತ ಕಡಿಮೆ ವಿಸ್ತೀರ್ಣದ ಹಿಡುವಳಿಗಳಾಗಿವೆ. ಈ ಹಿಡುವಳಿಗಳ ಕುಟುಂಬಗಳು ಮಳೆಯ ಅಭಾವ, ಬೆಳೆ ನಾಶ, ಕೀಟಗಳ ಹಾವಳಿ ಮುಂತಾದ ಕೆಟ್ಟ ಸಂದರ್ಭಗಳಲ್ಲಿ ವರಮಾನದ ವಿವಿಧ ಪರ್ಯಾಯ ಮೂಲಗಳು ಮತ್ತು ಉದ್ಯೋಗಗಳನ್ನು ಹುಡುಕಬೇಕಾಗುತ್ತದೆ. ಸಾಮಾನ್ಯವಾಗಿ ಬಹುತೇಕ ರೈತರು ತೊಗರಿ ಮತ್ತು ಜೋಳಗಳನ್ನು ಬೆಳೆಯುತ್ತಾರೆ. ತೊಗರಿಗೆ ಕೀಟ ಬಾಧೆ ಉಂಟಾದರೆ ಬೆಳೆ ವಿಫಲವಾಗಬಹುದು ಮತ್ತು ರೈತರು ವಿವಿಧ ಮೂಲಗಳ ಮೂಲಕ ಹಣ ಪಡೆದು, ಸಾಲದ ಸುಳಿಗೆ ಈಡಾಗಬಹುದು "ಸಾಮಾನ್ಯ ವೇಳೆಯಲ್ಲಿಯೂ ಸಹ ಈ ಹಿಡುವಳಿಗಳು ಕುಟುಂಬಗಳಿಗೆ ಅಗತ್ಯ ಆಹಾರವನ್ನು ಪೂರೈಸಲಾರವು. ಆದುದರಿಂದ ಅವರು ಕೃಷಿ ಕಾರ್ಮಿಕರಾಗಿ ದುಡಿಯಬೇಕಾಗುತ್ತದೆ. ಮತ್ತು ಹೈನುಗಾರಿಕೆಗಾಗಿ ಆಕಳು ಅಥವಾ ಎಮ್ಮೆಗಳನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಅಥವಾ ಕುಟುಂಬದ ಕೆಲ ಸದಸ್ಯರು ನಗರ ಮತ್ತು ಅರೆನಗರ ಪ್ರದೇಶಗಳಿಗೆ ಉದ್ಯೋಗಗಳನ್ನಾರಿಸಿ ಹಳ್ಳಿಗಳನ್ನು ತೊರೆದು ವಲಸೆ ಹೋಗಬೇಕಾಗುತ್ತದೆ. ಹೆಚ್ಚು ಸಾಲ ಬಾದೆಗೆ ಒಳಗಾಗಿರುವ ಕುಟುಂಬಗಳು ತಮ್ಮ ಭೂಮಿಗಳನ್ನು ಲೇವಾದೇವಿಗಾರರಿಗೆ ಒತ್ತೆ ಇಡಬೇಕಾಗುತ್ತದೆ. ಮತ್ತು ಜೀವನೋಪಾಯಕ್ಕಾಗಿ ಮುಂಬೈ ಅಥವಾ ಬೆಂಗಳೂರುಗಳಂತ ಬೃಹತ್ ನಗರ ಪ್ರದೇಶಗಳಿಗೆ ವಲಸೆ ಹೋಗಬೇಕಾಗುತ್ತದೆ. ಹೀಗೆ ಎಂದಿಗೂ ಅವರ ಜೀವನವು ಸುರಕ್ಷಿತ ಮತ್ತು ಸುಭದ್ರತೆಯಿಂದ ಇರುವುದಿಲ್ಲ. ಅಫಜಲಪುರ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಪ್ರತಿ 2–3 ವರ್ಷಗಳಿಗೊಮ್ಮೆ ಬರಗಾಲವು ಮರುಕಳಿಸುತ್ತದೆ. ಇಂಥ ಸನ್ನಿವೇಶಗಳಲ್ಲಿ ಕುಟುಂಬಗಳು ಸಂಪೂರ್ಣವಾಗಿ ಸಂಕಷ್ಟಕ್ಕೆ ಒಳಗಾಗುತ್ತವೆ ಮತ್ತು ಮುಂದಿನ ಒಂದರಿಂದ

ಚೌಕಟ್ಟು 5.2

| ಬಾಲ ಕಾರ್ಮಿಕರು–ಎನ್‌ಜಿಒ ಮಧ್ಯಸ್ಥಿಕೆ |
|---|
| ಅಕ್ಷರ ಫೌಂಡೇಶನ್ ಎಂಬ ನಾಗರಿಕ ಸಮಾಜದ ಸಂಸ್ಥೆಯು ಗ್ರಾಮ ಕಲಿಕಾ ಕೇಂದ್ರವನ್ನು ಸ್ಥಾಪಿಸಿದೆ. ಶಾಲೆ ಬಿಟ್ಟ ಮಕ್ಕಳನ್ನು ಹಾಗೂ ಕೃಷಿ ಮತ್ತು ಇತರೆ ವಲಯಗಳಲ್ಲಿ ದುಡಿಮೆಯಲ್ಲಿ ನಿರತವಾಗಿರುವ ಮಕ್ಕಳನ್ನು ಶಾಲಾ ವಾಹಿನಿ ಕರೆತರುವ ಕಾರ್ಯದಲ್ಲಿ ಅದು ನಿರತವಾಗಿದೆ. ಈ ಯೋಜನೆಯು ಗಂಡಾಂತರದಲ್ಲಿರುವ ಮಕ್ಕಳನ್ನು ತಲುಪುತ್ತಿದೆ. ಈ ಯೋಜನೆಯಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಉತ್ತಮ ಪಡಿಸುವ ಉದ್ದೇಶವನ್ನು ಇಟ್ಟುಕೊಂಡಿದೆ. ಅದರಲ್ಲಿ ಗ್ರಾಮ ಕಲಿಕಾ ಕೇಂದ್ರದ ಮೂಲಕ ಮಕ್ಕಳನ್ನು ಶಾಲಾವಾಹಿನಿಗೆ ಸೇರಿಸುವ ಸೇತುಬಂಧ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳಲಾಗಿದೆ. ಈ ಕೇಂದ್ರವು ಅನೇಕ ವಿನೂತನ ತಂತ್ರಗಳನ್ನು ಅಳವಡಿಸಿಕೊಂಡು, ಧಾರ್ಮಿಕ ಗುರುಗಳಿಂದ ಹೇಳಿಸುವುದರ ಮೂಲಕ ಮಕ್ಕಳು ಶಾಲೆಗೆ ಬರುವಂತೆ ಮಾಡಲಾಗುತ್ತಿದೆ. ಅನೇಕ ಯಶಸ್ವಿ ನಿದರ್ಶನಗಳು ನಮಗೆ ಇಲ್ಲಿ ದೊರೆಯುತ್ತವೆ. ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದಿರುವ ಶಹಾಪುರ, ಶೋರಾಪುರ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ಮಕ್ಕಳನ್ನು ಶಾಲಾ ವಾಹಿನಿಗೆ ಸೇರಿಸುವಲ್ಲಿ ಯೋಜನೆಯು ಸಫಲವಾಗಿದೆ. |

ಎರಡು ವರ್ಷಗಳವರೆಗೆ ಅವುಗಳಿಗೆ ಬಲವೇ ಇಲ್ಲದಂತಾಗುತ್ತದೆ. ಇದು ಮಕ್ಕಳ ಶಿಕ್ಷಣದ ಮೇಲೆ ಪರಿಣಾಮಗಳು ಉಂಟು ಮಾಡುತ್ತದೆ. ಕುಟುಂಬಕ್ಕೆ ಅಗತ್ಯವಾದ ಆರೋಗ್ಯ ಮತ್ತು ಪೌಷ್ಠಿಕಾಂಶಗಳು ಅಗತ್ಯಕ್ಕೆ ತಕ್ಕಂತೆ ದೊರೆಯದಂತಾಗುತ್ತದೆ. ಇದು ಅನಿರ್ದಿಷ್ಟ ವಲಸೆ ಮತ್ತು ಋಣಬಾರಕ್ಕೆ ಹಾದಿ ಮಾಡಿಕೊಡುತ್ತದೆ. ಸುಗ್ಗಿಯ ಸಂದರ್ಭದಲ್ಲಿ ಒಂದು ಹಳ್ಳಿಯಿಂದ ಅಕ್ಕಪಕ್ಕದ ಹಳ್ಳಿಗೆ ವಲಸೆ ಹೋಗುವುದು ಸಾಮಾನ್ಯವಾದುದು. ಆಳಂದ ತಾಲ್ಲೂಕಿನ ಗಡಿಭಾಗದಲ್ಲಿ ಪಕ್ಕದ ಮಹಾರಾಷ್ಟ್ರದ ಪ್ರದೇಶಗಳಿಗೆ ವಲಸೆ ಹೋಗುವುದು ಗಣನೀಯ ಪ್ರಮಾಣದಲ್ಲಿದೆ. ಇತ್ತೀಚಿನ ದಿನಗಳಲ್ಲಿ ಸರಕಾರದ ಕಾರ್ಯಕ್ರಮಗಳಿಂದ ಕರ್ನಾಟಕ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಮತ್ತು ರಾಷ್ಟ್ರೀಯ ಸಮ ವಿಕಾಸ ಯೋಜನೆದಂತಹ ಕಾರ್ಯಕ್ರಮಗಳು ಹೊರ ವಲಸೆಯನ್ನು ತಡೆಯಲು ಸಹಾಯಕವಾಗಿವೆ. ಗ್ರಾಮೀಣ–ನಗರ ವಲಸೆ ಅಧಿಕಗೊಳ್ಳುತ್ತಿದ್ದು, ಬಹಳಷ್ಟು ಕುಟುಂಬಗಳು ಗುಲ್ಬರ್ಗಾ, ಚಿತ್ತಾಪುರ, ಶಹಾಪುರ ಕಡೆ ವಲಸೆ ಹೋಗುತ್ತಿದ್ದಾರೆ.

## ಬಾಲ ಕಾರ್ಮಿಕರು

ಗುಲಬರ್ಗಾ ಜಿಲ್ಲೆಯಲ್ಲಿ ಬಾಲಕಾರ್ಮಿಕತೆಯು ದುಡಿಮೆಗಾರರು ಎದುರಿಸಬೇಕಾಗಿರುವ ಮತ್ತೊಂದು ಗಂಡಾಂತರವಾಗಿದೆ. ಮುಖ್ಯ ವಯಸ್ಕ ದುಡಿಮೆಗಾರರ ಬಡತನ ಮತ್ತು ಅಗತ್ಯ ಉದ್ಯೋಗಾವಕಾಶಗಳ ಕೊರತೆಯು ಮಕ್ಕಳನ್ನು ಕೆಲಸಕ್ಕೆ ದೂಡುವುದನ್ನು ಅನಿವಾರ್ಯವನ್ನಾಗಿಸುತ್ತದೆ. ಆ ಮೂಲಕ ಕುಟುಂಬದಲ್ಲಿಯ ವರಮಾನದ ಅಂತರವನ್ನು ತುಂಬಲು ಕಾರಣವಾಗುತ್ತಿದೆ. ನೀರಾವರಿ ಪ್ರದೇಶದಲ್ಲಿ ಕೃಷಿ ಚಟುವಟಿಕೆಗಳಿಗಾಗಿ ಕಾರ್ಮಿಕರ ಬೇಡಿಕೆ ಅಧಿಕವಾಗುತ್ತಿದ್ದು, ಈ ಬೇಡಿಕೆಯನ್ನು ಬಾಲಕಾರ್ಮಿಕರ ಮೂಲಕ ಪೂರೈಸಲಾಗುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯವಾಗಿ ಬಿತ್ತನೆ, ಕೊಯ್ಲು, ದನ ಮೇಯಿಸುವುದು ಮುಂತಾದ ಕೃಷಿ ಚಟುವಟಿಕೆಗಳಲ್ಲಿ ಬಾಲ ಕಾರ್ಯಕರನ್ನು ನೇಮಿಸಿಕೊಳ್ಳಲಾಗುತ್ತದೆ. ಅನೇಕ ಕೃಷಿ ಚಟುವಟಿಕೆಗಳಲ್ಲಿ ಮಕ್ಕಳು ಸಹಾಯಕರಾಗಿ ದುಡಿಯುತ್ತಾರೆ. “ನಗರ ಪ್ರದೇಶದಲ್ಲಿ ಗ್ಯಾರೇಜ್, ರಿಪೇರಿ ಕೇಂದ್ರಗಳು, ಹೊಟೇಲ್ ಮತ್ತು ರೆಸ್ಟೋರೆಂಟ್, ಕೌಟುಂಬಿಕ ಕೆಲಸ ನಿರ್ವಹಣೆ ಮತ್ತು ಇತರೆ ಅಸಂಘಟಿತ ವಲಯ ಚಟುವಟಿಕೆಗಳಲ್ಲಿ ಬಾಲ ಕಾರ್ಮಿಕರು ಕಂಡುಬರುತ್ತಾರೆ. ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಗಣಿ ಕೆಲಸಗಳಲ್ಲಿ ಸಹ ಇವರು ಕಂಡುಬರುತ್ತಾರೆ.”

ಬಹುಪಾಲು ಬಾಲ ಕಾರ್ಮಿಕರ ಪ್ರಕರಣಗಳು ವರದಿಯಾಗುವುದೇ ಇಲ್ಲ. ಬಾಲ ಕಾರ್ಮಿಕರನ್ನು ಗುರುತಿಸುವುದು ಬಹು ಕಷ್ಟಕರ ಕೆಲಸ. ಗುಲಬರ್ಗಾ ಜಿಲ್ಲೆಯಲ್ಲಿ ಕೈಗೊಂಡ ಅಧ್ಯಯನಗಳ ಪ್ರಕಾರ ಬಡತನವೇ ಬಾಲ ಕಾರ್ಮಿಕತೆಗೆ ಪ್ರಮುಖ ಕಾರಣವಾಗಿದೆ. ಪಾಲಕರ ಮರಣ ಅಥವಾ ಕುಟುಂಬದಲ್ಲಿ ವರಮಾನ ಗಳಿಸುವವರ ನಿರುದ್ಯೋಗ ಮುಂತಾದವು ಮಕ್ಕಳನ್ನು ದುಡಿಮೆಗೆ ಕಳುಹಿಸಲು ಒತ್ತಾಯಿಸುವ ಪ್ರಮುಖ ಕಾರಣಗಳಾಗಿವೆ. ಕಾರಣಗಳು ಏನೇ ಇದ್ದರೂ, ಬಾಲ ಕಾರ್ಮಿಕರ ನೇಮಕಾತಿಯು ಮಕ್ಕಳನ್ನು ಸಮಾಜದ ಒಬ್ಬ ಸದಸ್ಯರಾಗಿ, ಉತ್ತಮವಾಗಿ ಜೀವನ ನಡೆಸಬಹುದಾದ ಅವಕಾಶಗಳಿಂದ ವಂಚಿತರನ್ನಾಗಿ ಮಾಡುತ್ತದೆ.

ರಾಷ್ಟ್ರೀಯ ಬಾಲ ಕಾರ್ಮಿಕರ ನಿರ್ಮೂಲನಾ ಯೋಜನೆಯು ಮಕ್ಕಳಿಗೆ ಶಿಕ್ಷಣವನ್ನು ನೀಡುವ ಸಲುವಾಗಿ ಜಿಲ್ಲೆಯಲ್ಲಿ 35 ಕೇಂದ್ರಗಳನ್ನು ಸ್ಥಾಪಿಸಿದೆ. ಪ್ರತಿ ಒಂದು ಕೇಂದ್ರದಲ್ಲಿ 50 ಮಕ್ಕಳಿಗಾಗಿ ಅವಕಾಶ ಒದಗಿಸಲಾಗಿದೆ. ವರ್ಲ್ಡ್ ವಿಜನ್, ವಿಶ್ವ ಸೇವಾ ಮಿಷನ್‌ಗಳಂಥ ಕೆಲವು ಸರಕಾರೇತರ ಸಂಸ್ಥೆಗಳು ಸಹ ಬಾಲ ಕಾರ್ಮಿಕರ ನಿರ್ಮೂಲನೆಗಾಗಿ ಶ್ರಮಿಸುತ್ತಿವೆ. ಆದರೆ ಇದು ಕಷ್ಟಕರ ಸಂಗತಿಯಾಗಿ ಗೋಚರಿಸುತ್ತದೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಕೈಗೊಂಡ ಹಲವಾರು ಅಧ್ಯಯನಗಳು ತಿಳಿಸುವಂತೆ ಬಾಲಕಾರ್ಮಿಕರ ಬಹುಪಾಲು ಪ್ರಮಾಣವು ಗ್ರಾಮೀಣ ಪ್ರದೇಶದಲ್ಲಿ ಕಂಡುಬರುತ್ತದೆ. ಆದ್ದರಿಂದ, ಬಡತನವನ್ನು ಹೊಡೆದೋಡಿಸದ ಹೊರತು ಬಾಲ ಕಾರ್ಮಿಕರ ಸಮಸ್ಯೆಯು ಖಾಯಮ್ಮಾಗಿ ನಿರ್ಮೂಲನ ಮಾಡಲು ಸಾಧ್ಯವಿಲ್ಲ.

ಸಮುದಾಯದಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸುವಂಥ ಪ್ರಯತ್ನಗಳು ಸಹ ನಡೆದಿವೆ. ಪಾಲಕರಿಗೆ ಆಪ್ತ ಸಮಾಲೋಚನಾ ಕಾರ್ಯಕ್ರಮಗಳನ್ನು ಸಂಘಟಿಸಲಾಗುತ್ತದೆ. ಬಾಲ

**“ನಗರ ಪ್ರದೇಶದಲ್ಲಿ ಗ್ಯಾರೇಜ್, ರಿಪೇರಿ ಕೇಂದ್ರಗಳು, ಹೊಟೇಲ್ ಮತ್ತು ರೆಸ್ಟೋರೆಂಟ್, ಕೌಟುಂಬಿಕ ಕೆಲಸ ನಿರ್ವಹಣೆ ಮತ್ತು ಇತರೆ ಅಸಂಘಟಿತ ವಲಯ ಚಟುವಟಿಕೆಗಳಲ್ಲಿ ಬಾಲ ಕಾರ್ಮಿಕರು ಕಂಡುಬರುತ್ತಾರೆ. ಸೇಡಂ ಮತ್ತು ಚಿತ್ತಾಪುರ ತಾಲ್ಲೂಕುಗಳಲ್ಲಿ ಗಣಿ ಕೆಲಸಗಳಲ್ಲಿ ಸಹ ಇವರು ಕಂಡುಬರುತ್ತಾರೆ.”**





ಕಾರ್ಮಿಕತೆಯ ದುಷ್ಪರಿಣಾಮಗಳ ಕುರಿತಂತೆ ಪಂಚಾಯಿತಿ ಪ್ರತಿನಿಧಿಗಳು, ಪ್ರಗತಿಪರ ರೈತರು, ನಾಲಾ ಉಸ್ತುವಾರಿ ಸದಸ್ಯರುಗಳೊಂದಿಗೆ ಸಂವಾದಗಳನ್ನು ಏರ್ಪಡಿಸಲಾಗಿದೆ. ಬಾಲ ಕಾರ್ಮಿಕರು ಇರುವ ಕುಟುಂಬಗಳಿಗೆ ಬಡತನ ನಿರ್ಮೂಲನಾ ಕಾರ್ಯಕ್ರಮಗಳು ಮತ್ತು ಉದ್ಯೋಗ ಖಾತ್ರಿ ಕಾರ್ಯಕ್ರಮಗಳ ಪ್ರಯೋಜನವನ್ನು ನೀಡುವುದರ ಮೂಲಕ ಅವರ ಕುಟುಂಬದ ವರವಮಾನವನ್ನು ಅಧಿಕಗೊಳಿಸಿದ ಪ್ರಯತ್ನ ನಡೆದಿದೆ. ದುಡಿಮೆಯಲ್ಲಿ ನಿರತರಾಗಿರುವ ಮಕ್ಕಳು ಶಾಲೆಗೆ ಹಾಜರಾಗುವಂತೆ ಮಾಡಲಾಗುತ್ತಿದೆ.

ಜಿಲ್ಲೆಯ ಜನಸಂಖ್ಯೆಯಲ್ಲಿ ಬಹುಪಾಲು ಜನರು ಗಂಡಾಂತರಕ್ಕೆ ಒಳಗಾಗಿದ್ದಾರೆ. ಇದಕ್ಕೆ ಬಹು ಮುಖ್ಯ ಕಾರಣವೆಂದರೆ ಕೃಷಿಯಲ್ಲಿನ ಅನಿಶ್ಚಿತತೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ನಿರಂತರವಾಗಿ ಜೀವನೋಪಾಯಕ್ಕೆ ಅವಕಾಶ ನೀಡುವಂತಹ ಕೃಷಿಯೇತರ ಚಟುವಟಿಕೆಗಳನ್ನು ಸೃಷ್ಟಿಮಾಡುವಂತಹ ಕಡೆಗೆ ಗ್ರಾಮೀಣ ಆರ್ಥಿಕತೆಯನ್ನು ಬದಲಾಯಿಸಬೇಕಾದ ಅನಿವಾರ್ಯತೆ ಇದೆ. ಜನರ ಬಡತನದ ಯಾತನೆಯನ್ನು ಕಡಿಮೆ ಮಾಡಲು, ಕೆ.ಆರ್.ಈ.ಜಿ.ಎಸ್., ಸ್ತ್ರೀಶಕ್ತಿ, ಮತ್ತು ಎಸ್.ಜಿ.ಎಸ್.ವೈ.ಗಳಂತಹ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನದಲ್ಲಿ ತರಬೇಕಾಗಿದೆ.

## ಪ್ರಭುತ್ವದ ಮಧ್ಯಸ್ಥಿಕೆ

ಅನಿರ್ದಿಷ್ಟ ಮತ್ತು ಕಡಿಮೆ ಸಂಭಾವನೆಯ ಉದ್ಯೋಗಳಿಂದಾಗಿ, ಜಿಲ್ಲೆಯಲ್ಲಿ ವರವಮಾನವು ಕೆಳಮಟ್ಟದಲ್ಲಿದೆ. ಉದ್ಯೋಗಗಳನ್ನು ಪೂರೈಸುವ ಮೂಲಕ ಬಡವರ್ಗಗಳ ಹಿತ ಕಾಪಾಡಲು ಪ್ರಭುತ್ವದ ಹಸ್ತಕ್ಷೇಪ ಅಗತ್ಯವಾಗಿದೆ. ಸ್ವಯಂ ಉದ್ಯೋಗ ಮತ್ತು ಕೂಲಿ ಕಾರ್ಯಕ್ರಮಗಳ ಮೂಲಕ ಸರಕಾರವು ಬಡ ಭೂರಹಿತ ಕೃಷಿ ಕಾರ್ಮಿಕರಿಗೆ ಸಹಾಯ ಮಾಡಬಹುದಾಗಿದೆ. ನಿರುದ್ಯೋಗಿ ಜನರಿಗೆ ಕನಿಷ್ಠ ಉದ್ಯೋಗಾವಕಾಶಗಳನ್ನು ಪಡೆಯಲು ಸಹ ನೆರವಾಗಬಹುದಾಗಿದೆ.. ಸ್ವಂತ ಉದ್ಯೋಗ ಕಾರ್ಯಕ್ರಮವಾದ ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆ (ಎಸ್.ಜಿ.ಎಸ್.ವೈ) ಮತ್ತು ಕೂಲಿ ಉದ್ಯೋಗ ಕಾರ್ಯಕ್ರಮವಾದ ಸಂಪೂರ್ಣ ಗ್ರಾಮೀಣ ರೋಜಗಾರ್ ಯೋಜನೆ ಮತ್ತು ಕರ್ನಾಟಕ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳು ಜಿಲ್ಲೆಯಲ್ಲಿ ಅನುಷ್ಠಾನಗೊಳ್ಳುತ್ತಿವೆ. ಕೆಆರ್‌ಈಜಿಎಸ್ ಅಡಿಯಲ್ಲಿ ಜಿಲ್ಲೆಯಲ್ಲಿ 369 ಯೋಜನೆಗಳು ಪೂರ್ಣಗೊಂಡಿವೆ ಮತ್ತು 1834 ಯೋಜನೆಗಳು ಕಾರ್ಯಾನುಷ್ಠಾನದಲ್ಲಿದೆ. ಈ ಕೆಲಸ ಕಾರ್ಯಗಳಲ್ಲಿ ಶೇ. 70ರಷ್ಟು ಕೆಲಸಗಳು ಭೂ ಮತ್ತು ಜಲ ಸಂರಕ್ಷಣೆಗೆ ಸಂಬಂಧಿಸಿವೆ. ಇವು ಅನಿರ್ದಿಷ್ಟ ಮಳೆಯಿಂದಾಗಿ ಉತ್ಪಾದನೆಯಲ್ಲಿ ಉಂಟಾಗುವ ಅನಿಶ್ಚತೆಯನ್ನು ನಿಯಂತ್ರಿಸುವಲ್ಲಿ ಉಪಯುಕ್ತವಾಗಿದೆ.

**ಕೆಆರ್‌ಈಜಿಎಸ್ ಅಡಿಯಲ್ಲಿ ಜಿಲ್ಲೆಯಲ್ಲಿ 369 ಯೋಜನೆಗಳು ಪೂರ್ಣಗೊಂಡಿವೆ ಮತ್ತು 1834 ಯೋಜನೆಗಳು ಕಾರ್ಯಾನುಷ್ಠಾನದಲ್ಲಿದೆ. ಈ ಕೆಲಸ ಕಾರ್ಯಗಳಲ್ಲಿ ಶೇ. 70ರಷ್ಟು ಕೆಲಸಗಳು ಭೂ ಮತ್ತು ಜಲ ಸಂರಕ್ಷಣೆಗೆ ಸಂಬಂಧಿಸಿವೆ. ಇವು ಅನಿರ್ದಿಷ್ಟ ಮಳೆಯಿಂದಾಗಿ ಉತ್ಪಾದನೆಯಲ್ಲಿ ಉಂಟಾಗುವ ಅನಿಶ್ಚತೆಯನ್ನು ನಿಯಂತ್ರಿಸುವಲ್ಲಿ ಉಪಯುಕ್ತವಾಗಿದೆ.**

ಕರ್ನಾಟಕ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು (ಕೆ.ಆರ್.ಈ.ಸಿ.ಸಿ.ಎಸ್) ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿದೆ. ಉದ್ಯೋಗ ಕಾರ್ಡ್‌ಗಳ ಹಂಚಿಕೆ ಮತ್ತು ಮಾಹಿತಿಯ ದಾಖಲೀಕರಣಗಳನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ 2007ರ ಅವಧಿಯಲ್ಲಿ 3642100 ಮಾನವ ದಿನಗಳಷ್ಟು ಉದ್ಯೋಗವನ್ನು ಸೃಜಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿಯ ಬಡ ರೈತರಿಗೆ ಅನುಕೂಲವಾಗುವಂಥ ಕಾರ್ಯಕ್ರಮಗಳನ್ನು ಈ ಯೋಜನೆಯಲ್ಲಿ ಅನುಷ್ಠಾನದಲ್ಲಿ ತರಲಾಗಿದೆ. ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯು ಏಪ್ರಿಲ್ 1999ರಲ್ಲಿ ಆರಂಭಗೊಂಡಿದೆ. ಈ ಹಿಂದಿನ ಸ್ವಉದ್ಯೋಗ ಕಾರ್ಯಕ್ರಮಗಳನ್ನು ಅಂದರೆ ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ(ಐ.ಆರ್.ಡಿ.ಪಿ.), ಸ್ವ-ಉದ್ಯೋಗಕ್ಕಾಗಿ ಗ್ರಾಮೀಣ ಯುವಕರಿಗೆ ತರಬೇತಿ (ಟ್ರೈಸೆಮ್) ಮತ್ತು ಗ್ರಾಮೀಣ ಪ್ರದೇಶದಲ್ಲಿ ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ (ಡ್ವ್ಯಾಕ್ರ) ಕಾರ್ಯಕ್ರಮಗಳನ್ನು ಇಂದು ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯಲ್ಲಿ ವಿಲೀನಗೊಳಿಸಲಾಗಿದೆ (ಎಸ್.ಜಿ.ಎಸ್.ವೈ,). ಇದೊಂದು ಸಮಗ್ರವಾದ ಕಾರ್ಯಕ್ರಮವಾಗಿದೆ. ಬಡವರನ್ನು ಸ್ವಸಹಾಯ ಗುಂಪುಗಳಾಗಿ ಸಂಘಟಿಸುವುದು, ತರಬೇತಿ, ಸಾಲ ವ್ಯವಸ್ಥೆ, ಮಾರುಕಟ್ಟೆಗೆ ಮೂಲ ಸೌಲಭ್ಯಗಳನ್ನು ಒಳಗೊಂಡಂತೆ ಎಲ್ಲಾ ಆಯಾಮಗಳನ್ನು ಈ ಕಾರ್ಯಕ್ರಮ ಒಳಗೊಂಡಿದೆ.

ಕೊಷ್ಟಕ–5.16

## ಕೂಲಿ ಕಾರ್ಯಕ್ರಮಗಳ ಪ್ರಗತಿ – 2006–07

| ವರ್ಷ | ಯೋಜನೆಯ ಹೆಸರು | ವೆಚ್ಚ (ಲಕ್ಷ ರೂ.ಗಳಲ್ಲಿ) | | ಮಾನವ ದಿನಗಳು | | |
|---|---|---|---|---|---|---|
| | | ಕೂಲಿ ವೆಚ್ಚ | ಒಟ್ಟು | ಪುರುಷರು | ಮಹಿಳೆಯರು | ಒಟ್ಟು |
| 2007 | ಕರ್ನಾಟಕ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ | 4108.159 | 4108.159 | 1847990 | 1794110 | 3642100 |

ಜಿಲ್ಲಾ ಪಂಚಾಯಿತಿ, ಗುಲಬರ್ಗಾ 2006–07.

ಕೋಷ್ಟಕ 5.17

## ಸ್ವಯಂ ಉದ್ಯೋಗ ಯೋಜನೆಗಳು

| ವರ್ಷಗಳು | ಯೋಜನೆಯ ಹೆಸರು | ಗ್ರಾಮೀಣ/ನಗರ | ವೆಚ್ಚ (ಲಕ್ಷ ರೂ.ಗಳಲ್ಲಿ) | ಎಸ್‌ಎಚ್‌ಜಿ ಸಂಖ್ಯೆ. | ಮಾನವ ದಿನಗಳು | | |
|---|---|---|---|---|---|---|---|
| | | | | | ಪುರುಷರು | ಮಹಿಳೆಯರು | ಒಟ್ಟು |
| 2006–07 | ಎಸ್‌ಜಿಎಸ್‌ವೈ | ಗ್ರಾಮೀಣ | 301.598 | 150 | 13 | 2089 | 2103 |
| 2007–08 | ಎಸ್‌ಜಿಎಸ್‌ವೈ | ಗ್ರಾಮೀಣ | 217.980 | 106 | – | 1378 | 1378 |

ಜಿಲ್ಲಾ ಪಂಚಾಯಿತಿ, ಗುಲಬರ್ಗಾ 2007–08.

ಚೌಕಟ್ಟು 5.3

### ಎಸ್‌ಜಿಎಸ್‌ವೈನ ಪರಿಣಾಮ – ಒಂದು ತಳಮಟ್ಟದ ಅಧ್ಯಯನದಿಂದ ಕಂಡುಕೊಂಡ ಪುರಾವೆ

ಗುಲಬರ್ಗಾ ಜಿಲ್ಲೆಯಲ್ಲಿ ಎಸ್‌ಜಿಎಸ್‌ವೈ ಕಾರ್ಯಕ್ರಮದ ಪರಿಣಾಮವನ್ನು ಗುರುತಿಸುವುದಕ್ಕಾಗಿ ಕರ್ನಾಟಕದ ಗುಲಬರ್ಗಾ ಜಿಲ್ಲೆಯಲ್ಲಿ ಕೈಗೊಂಡ ಅಧ್ಯಯನ ಇದಾಗಿದೆ.

ಈ ಕಾರ್ಯಕ್ರಮದಡಿ ನೆರವನ್ನು 'ಗುಂಪು ಪರಿಕಲ್ಪನೆ'ಯ ಆಧಾರದಲ್ಲಿ ನೀಡಲಾಗುತ್ತಿದೆ.. ಸ್ವಸಹಾಯ ಗುಂಪುಗಳನ್ನು ಸಂಘಟಿಸಿ ಅವುಗಳು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರೇರೇಪಿಸಲಾಗುತ್ತಿದೆ. ಸಣ್ಣ ಉದ್ದಿಮೆಗಳನ್ನು ಪ್ರಾರಂಭಿಸುವ ಮುನ್ನ ಅವುಗಳಿಗೆ ವಿವಿಧ ಚಟುವಟಿಕೆಗಳ ಕುರಿತಂತೆ ತರಬೇತಿಯನ್ನು ನೀಡಲಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ವೈಯಕ್ತಿಕವಾಗಿ ಸಹ ನೆರವನ್ನು ನೀಡಲಾಗುತ್ತದೆ. ಈ ಕಾರ್ಯಕ್ರಮದಡಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಕೋಷ್ಟಕ– 5.17ರಲ್ಲಿ ನೀಡಲಾಗಿದೆ. ಈ ಹಿಂದಿನ ಸ್ವ–ಉದ್ಯೋಗ ಕಾರ್ಯಕ್ರಮಗಳಿಗೆ ಹೋಲಿಸಿದರೆ, ಎಸ್.ಜಿ.ಎಸ್.ವೈ ಪ್ರಗತಿಯು ಉತ್ತಮವಾಗಿದೆ.

## ಅಧ್ಯಯನದ ವಿಧಾನ

ಈ ಅಧ್ಯಯನವನ್ನು ಪ್ರಾಥಮಿಕ ಮಾಹಿತಿಗಳ ಆಧಾರದ ಮೇಲೆ ಕೈಗೊಳ್ಳಲಾಗಿದೆ. ಗುಲಬರ್ಗಾ ಜಿಲ್ಲೆಯ ಮೂರು ತಾಲ್ಲೂಕುಗಳನ್ನು ಈ ಅಧ್ಯಯನಕ್ಕಾಗಿ ಆಯ್ದುಕೊಳ್ಳಲಾಗಿದೆ. ಜಿಲ್ಲೆಯಲ್ಲಿ 2003–04ರ ಅವಧಿಯಲ್ಲಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಯೋಜನೆಯು ಸ್ಥಾಪನೆಯಾದ 1999–2000 ಮತ್ತು 2000–01ರ ಅವಧಿಯಲ್ಲಿ ನೆರವು ಪಡೆದ ವೈಯಕ್ತಿಕ ಫಲಾನುಭವಿಗಳನ್ನು ಅಧ್ಯಯನಕ್ಕಾಗಿ ಗುರುತಿಸಲಾಗಿದೆ. ಎಸ್.ಜಿ.ಎಸ್.ವೈ. ಅಡಿಯಲ್ಲಿ ನೆರವು ಪಡೆದು ಮೂರು ವರ್ಷ ಪೂರೈಸಿದ ಕುಟುಂಬಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲು ಜಾಗೃತಿ ವಹಿಸಲಾಗಿದೆ. ಅಲ್ಲದೇ ಈ ಮೂರು ವರ್ಷಗಳ ಅವಧಿಯಲ್ಲಿ ಆ ಕುಟುಂಬಗಳು ಬಡತನ ರೇಖೆಯಿಂದ ಮೇಲಕ್ಕೇರಲು ಸಾಧ್ಯವಾಗಿದೆಯೇ ಎಂಬುದನ್ನು ತಿಳಿಯುವಲ್ಲಿ ಸಹ ಎಚ್ಚರಿಕೆ ವಹಿಸಲಾಗಿದೆ.

ಈ ಅಧ್ಯಯನಕ್ಕಾಗಿ 110 ಸ್ವ ರೋಜಗಾರಿಗಳನ್ನು ಸ್ಯಾಂಪಲ್‌ಗಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರಲ್ಲಿ 70 ಮಹಿಳೆಯರು ಮತ್ತು 40 ಪುರುಷ ಸದಸ್ಯರಾಗಿದ್ದಾರೆ. ಈ 70 ಮಹಿಳೆಯರಲ್ಲಿ, 55 ಸದಸ್ಯರು 10 ವಿವಿಧ ಸ್ವ–ಸಹಾಯ ಗುಂಪುಗಳಿಗೆ ಸಂಬಂಧಿಸಿದ



ಸದಸ್ಯರು ಮತ್ತು ಉಳಿದ 15 ವೈಯುಕ್ತಿಕ ಸದಸ್ಯರು. ಪುರುಷರಲ್ಲಿ ಸ್ವ-ಸಹಾಯ ಗುಂಪುಗಳ ಪ್ರಮಾಣ ಕಡಿಮೆ. ಈ ಮಾದರಿಯಲ್ಲಿ 10 ಸದಸ್ಯರು ಎರಡು ಸ್ವ-ಸಹಾಯ ಗುಂಪುಗಳಿಗೆ ಸಂಬಂಧಿಸಿದ್ದರೆ, ಉಳಿದ 30 ವೈಯುಕ್ತಿಕವಾಗಿ ನೆರವನ್ನು ಪಡೆದವರಾಗಿದ್ದಾರೆ. ಹಲವಾರು ಚಲಕಗಳ ಮೂಲಕ - ಕೈಗೊಂಡ ಆರ್ಥಿಕ ಚಟುವಟಿಕೆಗಳ ಸ್ವರೂಪ, ತರಬೇತಿಗಳ ಮೂಲಕ ಸಾಮರ್ಥ್ಯಾಭಿವೃದ್ಧಿ, ವಿವಿಧ ಚಟುವಟಿಕೆಗಳ ಮೂಲಕ ವರಮಾನ ಉತ್ಪತ್ತಿ ಮತ್ತು ಅದರ ಪರಿಣಾಮಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

## ಫಲಾನುಭಾವಿಗಳ ಸಾಮಾಜಿಕ ಹಿನ್ನೆಲೆ

ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ನೆರವು ನೀಡುವುದೇ ಈ ಕಾರ್ಯಕ್ರಮದ ಪ್ರಮುಖ ಉದ್ದೇಶವಾಗಿದೆ. ಆದ್ದರಿಂದ ಫಲಾನುಭವಿಗಳ ಜಾತಿಯ ಹಿನ್ನೆಲೆಯನ್ನು ಅರಿಯುವುದು ಅತ್ಯಾವಶ್ಯಕವಾಗಿದ್ದು, ಇದನ್ನು ಈ ಕೆಳಗಡೆ ವಿವರಿಸಲಾಗಿದೆ.

ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದ ಫಲಾನುಭವಿಗಳಲ್ಲಿ ಮೇಲ್ಜಾತಿಗೆ ಸೇರಿದ ವರ್ಗದವರ ಪ್ರಮಾಣವೇ ಅಧಿಕವಾಗಿದೆ. ಒಟ್ಟು ಫಲಾನುಭವಿಗಳಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸೇರಿದವರ ಪಾಲು ಕೇವಲ ಶೇ.31.82 ಮತ್ತು ಮಹಿಳೆಯರ ಪಾಲು ಶೇ.41.81 ಆಗಿದ್ದು, ಪುರುಷರ ಪಾಲು ಅದು ಶೇ.40 ರಷ್ಟಾಗಿದೆ. ನಿಗದಿತ ಗುರಿಗೆ ಹೋಲಿಸಿದರೆ ವಿಶೇಷ ಗುಂಪುಗಳಿಗೆ ನೀಡಿದ ನೆರವಿನ ಪ್ರಮಾಣವು ಅತ್ಯಲ್ಪವಾಗಿದೆ. ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಜನಸಂಖ್ಯೆ ಅಧಿಕವಾಗಿದ್ದರೂ, ಈ ಯೋಜನೆ ಅಡಿಯಲ್ಲಿ ಅವರಿಗೆ ದೊರೆತಿರುವ ನೆರವಿನ ಪ್ರಮಾಣವು ಕಡಿಮೆ ಮಟ್ಟದಲ್ಲಿದೆ. ಇತರೆ ಹಿಂದುಳಿದ ಜಾತಿಗಳು ಸಹ ಸಮಪಾಲನ್ನು ಪಡೆದಿಲ್ಲ. ಆದ್ದರಿಂದ ಯೋಜನೆಯ ಪ್ರಯೋಜನೆಗಳು ಮೇಲ್ವರ್ಗದವರಲ್ಲಿ ಕೇಂದ್ರೀಕರಣಗೊಂಡಿದೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಗಣನೆಗೆ ಬಂದಂತೆ, ಈ ಮೇಲ್ವರ್ಗಕ್ಕೆ ಸೇರಿದ ಕೆಲವರು ಬಡತನ ರೇಖೆಯ ಕೆಳಗಿನ ಕುಟುಂಬಗಳಲ್ಲ ಎಂಬ ಅನುಮಾನವೂ ಇದೆ.

ಗುಂಪುಗಳಲ್ಲಿ ಮಹಿಳೆಯರಿಗೆ ನಿರ್ದಿಷ್ಟ ಪ್ರತಿನಿಧೀಕರಣವಿದೆ. ಆದರೆ ಅವರಲ್ಲಿ ಶೇ. 55ರಷ್ಟು ಮಹಿಳೆಯರು ಮೇಲ್ವರ್ಗಗಳಿಗೆ ಸೇರಿದವರಾಗಿದ್ದಾರೆ.

## ಶಿಕ್ಷಣ

ಉದ್ಯಮ ಮತ್ತು ಇತರೆ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಅವುಗಳ ಉತ್ತಮ ನಿರ್ವಹಣೆಗೆ ಕನಿಷ್ಟ ಮಟ್ಟದಲ್ಲಾದರೂ ಶಿಕ್ಷಣದ ಅಗತ್ಯವಿರುತ್ತದೆ. ಆದ್ದರಿಂದ ಫಲಾನುಭವಿಗಳ ಶೈಕ್ಷಣಿಕ ಹಿನ್ನೆಲೆಯನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ 5.18

**ಫಲಾನುಭವಿಗಳ ಜಾತಿ ಸ್ವರೂಪ**

| ಜಾತಿ | ಮಹಿಳೆಯರು | | ಪುರುಷರು | | ಒಟ್ಟು |
|---|---|---|---|---|---|
| | ಗುಂಪು | ವೈಯುಕ್ತಿಕ | ಗುಂಪು | ವೈಯುಕ್ತಿಕ | |
| ಪ.ಜಾ. | 18 (32.72) | 05(33.33) | 04(40.0) | 08(26.66) | 35(31.82) |
| ಪ.ಪಂ. | 05 (9.09) | - | - | 02 (6.67) | 07(6.36) |
| ಇತರೆ ಹಿಂದುಳಿದ ವರ್ಗ | 02(3.64) | - | - | | 02 (1.82) |
| ಮುಂದುವರಿದ ಜಾತಿ (ಲಿಂಗಾಯತರು) | 30 (54.54) | 10 (66.67) | 06(60.0) | 20 (66.67) | 66 (60.0) |
| **ಒಟ್ಟು** | **55 (50.0)** | **15(13.64)** | **10(9.09)** | **30 (27.27)** | **110 (100.0)** |

ಮೂಲ: ಪ್ರಾಥಮಿಕ ಮೂಲ.

ಕೋಷ್ಟಕ 5.19

**ಶಿಕ್ಷಣದ ಮಟ್ಟ**

| ಶಿಕ್ಷಣದ ಮಟ್ಟ | ಮಹಿಳೆಯರು | ಪುರುಷರು | ಒಟ್ಟು |
|---|---|---|---|
| ಅನಕ್ಷರಸ್ಥರು | 48 (68.57) | 10 (25.00) | 58 (52.73) |
| ಪ್ರಾಥಮಿಕ | 12 (17.15) | 07 (17.5) | 19 (17.27) |
| ಪ್ರೌಢ | 07 (10.00) | 14 (35.0) | 21 (19.09) |
| ಉನ್ನತ | 03 (04.28) | 09 (22.5) | 12 (10.91) |
| **ಒಟ್ಟು** | 70 (63.63) | 40 (36.37) | 110 (100.0) |

ಮೂಲ: ಪ್ರಾಥಮಿಕ ಮೂಲ.

ಕೋಷ್ಟಕ 5.20

**ಸರಾಸರಿ ಹಣಕಾಸು ನೆರವು**

| ಮೊತ್ತ (ರೂಪಾಯಿಗಳಲ್ಲಿ) | ಮಹಿಳೆಯರು | ಪುರುಷರು | ಒಟ್ಟು |
|---|---|---|---|
| 5000–10000 | 38 (54.29) | 18 (45.0) | 56 (50.91) |
| 10000–15000 | 26 (37.14) | 14 (35.0) | 40 (36.36) |
| 15000–20000 | 06 (8.57) | 08 (20.0) | 14 (12.73) |
| 20,000 & above | – | – | – |
| **ಒಟ್ಟು** | **70** | **40** | **110** |

ಮೂಲ: ಪ್ರಾಥಮಿಕ ಮೂಲ.

ಕೋಷ್ಟಕ–5.19ರಲ್ಲಿ ಕಂಡು ಬರುವಂತೆ ಫಲಾನುಭವಿಗಳಲ್ಲಿ ಶೇ.52ರಷ್ಟು ಫಲಾನುಭವಿಗಳು ಅನಕ್ಷರಸ್ಥರು. ಅದರಲ್ಲಿ ಅನಕ್ಷರಸ್ಥರ ಮಹಿಳಾ ಫಲಾನುಭವಿಗಳ ಪ್ರಮಾಣ ಶೇ69. ಅವರಲ್ಲಿ ಶೇ.17ರಷ್ಟು ಫಲಾನುಭವಿಗಳು ಪ್ರಾಥಮಿಕ ಶಿಕ್ಷಣ ಪಡೆದವರಾಗಿದ್ದು, ಶೇ.30ರಷ್ಟು ಫಲಾನುಭವಿಗಳು ತಮ್ಮ ಚಟುವಟಿಕೆಗಳನ್ನು ದಕ್ಷತೆಯಿಂದ ನಡೆದುಕೊಂಡು ಹೋಗಲು ಬೇಕಾಗಿರುವ ಅಗತ್ಯ ಮಟ್ಟದ ಶಿಕ್ಷಣವನ್ನು ಪಡೆದಿದ್ದಾರೆ.

## ಹಣಕಾಸಿನ ನೆರವು

ಫಲಾನುಭವಿಗಳು ಉತ್ಪಾದನೆಯನ್ನು ಪ್ರಾರಂಭಿಸಲು ಅಗತ್ಯವಾದ ಹಣಕಾಸಿನ ನೆರವನ್ನು ನೀಡುವುದು, ಆ ಮೂಲಕ ನಿರಂತರ ಉತ್ಪಾದನಾ ಘಟಕವನ್ನು ಪ್ರಾರಂಭಿಸಿ, ಸ್ವಂತ ಉದ್ಯೋಗವನ್ನು ಪಡೆಯುವಂತೆ ಮಾಡುವುದು ಎಸ್‌ಜಿಎಸ್‌ವೈನ ಪ್ರಮುಖ ಉದ್ದೇಶಗಳಲ್ಲಿ ಒಂದು. ಪ್ರತಿ ಸದಸ್ಯರು ಪಡೆದ ಸರಾಸರಿ ಹಣಕಾಸಿನ ನೆರವಿನ ಮಾಹಿತಿಯನ್ನು ಕೋಷ್ಟಕ–5.20 ರಲ್ಲಿ ನೀಡಲಾಗಿದೆ.

ಬಹುಪಾಲು ಮಹಿಳೆಯರು (ಶೇ.54) ರೂ.5000/–ದಿಂದ ರೂ.10000/–ಗಳ ನಡುವಿನ ಸರಾಸರಿ ಹಣಕಾಸಿನ ನೆರವನ್ನು ಪಡೆದಿದ್ದಾರೆ. ಸಾಮಾನ್ಯವಾಗಿ ಪುರುಷರು ಅಧಿಕ ಮೊತ್ತದ ನೆರವನ್ನು ಪಡೆದಿದ್ದಾರೆ. ಇದು ಗ್ರಾಮೀಣ ಸಮಾಜದಲ್ಲಿ ಪಿತೃ ಪ್ರಧಾನ ವ್ಯವಸ್ಥೆಯು ಇಂದಿಗೂ ಆಳವಾಗಿ ಬೇರು ಬಿಟ್ಟಿರುವುದನ್ನು ಸೂಚಿಸುತ್ತದೆ. ಅದರಲ್ಲಿ ಕೇವಲ ಶೇ. 9 ರಷ್ಟು ಮಹಿಳಾ ಫಲಾನುಭವಿಗಳು ಮಾತ್ರ ಅಧಿಕ ಮೊತ್ತದ ಹಣಕಾಸಿನ ನೆರವನ್ನು ಪಡೆದಿದ್ದಾರೆ. ಅಧಿಕ ಮೊತ್ತದ ನೆರವನ್ನು ಪಡೆದವರೆಲ್ಲರೂ ಮೇಲ್ಜಾತಿಗೆ ಸೇರಿದವರಾಗಿದ್ದಾರೆ. ಮಹಿಳೆಯರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಅಧಿಕ ಮೊತ್ತದ ಬಂಡವಾಳದ ಹೂಡಿಕೆಯ ಅಗತ್ಯವಿಲ್ಲ. ಆದ್ದರಿಂದ ಮಹಿಳೆಯರಿಗೆ ಅಧಿಕ ಮೊತ್ತದ ನೆರವಿನ ಅಗತ್ಯವಿಲ್ಲ ಎಂಬ ಮತ್ತೊಂದು ಕಾರಣವನ್ನು ನೀಡಲಾಗುತ್ತಿದೆ. ಪುರುಷರ ಪೈಕಿ ಶೇ.55ರಷ್ಟು ಫಲಾನುಭವಿಗಳು ಉತ್ತಮ ಹಣಕಾಸಿನ ನೆರವನ್ನು ಪಡೆದಿದ್ದಾರೆ. ಅವರು ಸಹ ಮೇಲಿನ ಕಾರಣವು



ಸಮಂಜಸವಾದದೆಂದು ಹೇಳಿದ್ದಾರೆ. ಅಲ್ಪ ಪ್ರಮಾಣದ ಬಂಡವಾಳ ಹೂಡಿಕೆಯ ಉದ್ಯಮಗಳು ಈ ಕಾರ್ಯಕ್ರಮಕ್ಕೆ ಉತ್ತಮವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. (ಸ್ವಸಹಾಯ ಗುಂಪುಗಳಿಗೂ ಸಹ)

## ಆರ್ಥಿಕ ಚಟುವಟಿಕೆಗಳ ಸ್ವರೂಪ

ಸದಸ್ಯರು ಕೈಗೊಂಡ ಆರ್ಥಿಕ ಚಟುವಟಿಕೆಗಳನ್ನು ಕೋಷ್ಟಕ-5.21ರಲ್ಲಿ ನೀಡಲಾಗಿದೆ. ಕೋಷ್ಟಕದಿಂದ ತಿಳಿಯುವಂತೆ ಬಹುತೇಕ ಸದಸ್ಯರು ಸಾಂಪ್ರದಾಯಿಕ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಇದು ಚಾಪೆ ಮಾಡುವುದು, ಬುಟ್ಟಿ ಹೆಣೆಯುವುದು, ಹೊಟೇಲ್, ಕಿರಾಣಿ ಅಂಗಡಿ, ಟೇಲರಿಂಗ್, ಹೈನುಗಾರಿಕೆ, ಪಶುಸಂಗೋಪನೆ, ಅಗರಬತ್ತಿ ಮಾಡುವುದು ಇತ್ಯಾದಿಗಳನ್ನು ಒಳಗೊಂಡಿವೆ. ಐಆರ್‌ಡಿಪಿ ಯೋಜನೆಗಳಲ್ಲಿ ಸಹ ಇದೇ ರೀತಿಯ ಚಟುವಟಿಕೆಗಳನ್ನು ಕೈಗೊಳ್ಳುತ್ತಿದ್ದು, ಇವು ಐಆರ್‌ಡಿಪಿಯ ಚಟುವಟಿಕೆಗಳನ್ನೇ ಹೋಲುತ್ತವೆ.

ಆದಾಗ್ಯೂ ಅನೇಕ ಫಲಾನುಭವಿಗಳು ತೋಟಗಾರಿಕೆ ಮತ್ತು ತರಕಾರಿ ಸಾಗುವಳಿಯಂಥ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ. ಕೇವಲ ಒಬ್ಬ ಸದಸ್ಯರು ಮಾತ್ರ ಹೂವುಗಳ ಬೇಸಾಯವನ್ನು ಕೈಗೊಂಡಿದ್ದಾರೆ. ಜಿಲ್ಲೆಯ ನೀರಾವರಿ ಪ್ರದೇಶದಲ್ಲಿ ಇದನ್ನು ಗಮನಿಸಬಹುದಾಗಿದೆ. ಕೆಲವು ಫಲಾನುಭವಿಗಳು ಈ ನೆರವಿನಿಂದ ನೀರಾವರಿ ಸೌಲಭ್ಯವನ್ನು ಪಡೆದುಕೊಂಡಿದ್ದಾರೆ. ಇತ್ತೀಚಿನ ದಿನಗಳನ್ನು ಕೃಷಿ ಸಲಕರಣೆಗಳ ಉಪಯೋಗವು ನಿರಂತರವಾಗಿ ಹೆಚ್ಚುತ್ತಿದೆ. ಆದರೆ ಯಾವೊಬ್ಬ ಫಲಾನುಭವಿಯೂ ರಿಪೇರಿಯಂಥ ಚಟುವಟಿಕೆಗಳನ್ನು ಕಲಿತುಕೊಂಡು ಅದನ್ನು ಕೈಗೊಂಡಿಲ್ಲ. ಫಲಾನುಭವಿಗಳಲ್ಲಿ ಕೌಶಲ್ಯ, ಶಿಕ್ಷಣ ಮತ್ತು ತರಬೇತಿಗಳ ಕೊರತೆಯೇ ಇದಕ್ಕೆ ಕಾರಣವಾಗಿದೆ. ಇಂಥ ಚಟುವಟಿಕೆಗಳು ಹೆಚ್ಚು ಯೋಗ್ಯವಾಗಿವೆ ಮತ್ತು ವರಮಾನ ಉತ್ಪಾದನಾ ಸಾಮರ್ಥ್ಯವನ್ನು ಹೊಂದಿವೆ.

## ಬಡತನದ ಮೇಲೆ ವರಮಾನ ಹರಿಯುವಿಕೆಯ ಪರಿಣಾಮ

ವಿವಿಧ ಚಟುವಟಿಕೆಗಳಿಂದ ಪ್ರಾಪ್ತವಾದ ವರಮಾನದ ವಿವರಗಳನ್ನು ಕೋಷ್ಟಕ-5.22ರಲ್ಲಿ ನೀಡಲಾಗಿದೆ. ಕಳೆದ ಎರಡು ವರ್ಷಗಳಲ್ಲಿ ಮಾಸಿಕ ಗಳಿಸಿದ ವರಮಾನವನ್ನು ಇಲ್ಲಿ ಗಣನೆಗೆ ತೆಗೆದುಕೊಳ್ಳಲಾಗಿದೆ. ವರಮಾನ ಕುರಿತಂತೆ ಫಲಾನುಭವಿಗಳು ತಿಳಿಸಿದ ಮಾಹಿತಿಯನ್ನು ಕ್ಷೇತ್ರ ಕಾರ್ಯಕರ್ತರು ವೈಯುಕ್ತಿಕವಾಗಿ ಅವಲೋಕಿಸಿದ್ದಾರೆ. ಈ ಚಟುವಟಿಕೆಗಳಿಗೆ ಉತ್ಪತ್ತಿಯಾದ ವರಮಾನವು ಅಪೇಕ್ಷಿತ ಮಟ್ಟವನ್ನು ತಲುಪಿಲ್ಲ.

ಕೋಷ್ಟಕ 5.21

**ಕೈಗೊಂಡ ಆರ್ಥಿಕ ಚಟುವಟಿಕೆಗಳು**

| ಚಟುವಟಿಕೆಗಳು | ಮಹಿಳೆಯರು | ಪುರುಷರು | ಒಟ್ಟು |
|---|---|---|---|
| ಗ್ರಾಮೀಣ ಕೈಗಾರಿಕೆ | – | 02 | 02 |
| ಬಟ್ಟೆ ಹೊಲಿಯುವುದು | 05 | 01 | 06 |
| ಕರಕುಶಲ ಕಲೆ | 09 | 04 | 13 |
| ನೀರಾವರಿ | 03 | 06 | 09 |
| ಪುಟ್ಟ ವ್ಯಾಪಾರ | 14 | 11 | 25 |
| ಡೈರಿ | 22 | 01 | 23 |
| ಹೈನುಗಾರಿಕೆ | 08 | 05 | 13 |
| ಸೇವೆ ಮತ್ತು ರಿಪೇರಿ | – | 03 | 03 |
| ಸಾಗುವಳಿ* | 09 | 07 | 16 |
| **ಒಟ್ಟು** | **70** | **40** | **110** |

* ತೋಟಗಾರಿಕೆ, ಪುಷ್ಪೋದ್ಯಮ ಮತ್ತು ತರಕಾರಿ ಬೇಸಾಯ

ಮೂಲ: ಪ್ರಾಥಮಿಕ ಮೂಲ.

ಕೋಷ್ಟಕ 5.22

**ವರಮಾನದ ಹರಿವು**

| ವರಮಾನದ ಗುಂಪು | ಮಹಿಳೆಯರು | ಪುರುಷರು | ಒಟ್ಟು |
|---|---|---|---|
| ರೂ 500 ಕ್ಕಿಂತ ಕಡಿಮೆ | 05 (7.14) | 03 (7.5) | 08 (7.27) |
| 500–1000 | 16 (22.86) | 06 (15.0) | 22 (20.00) |
| 1000–1500 | 22 (31.43) | 07 (17.5) | 29 (26.36) |
| 1500–2000– | 21 (30.00) | 13 (32.5) | 34 (30.91) |
| 2000–2500 | 05 (7.14) | 06 (15.0) | 11 (10.00) |
| 2500–3000 | 01 (1.43) | 03 (7.5) | 04 (3.64) |
| 3000 ಮತ್ತು ಅದಕ್ಕಿಂತ ಅಧಿಕ | – | 02 (5.0) | 02 (1.82) |
| **ಒಟ್ಟು** | **70 (100.0)** | **40 (100.0)** | **110 (100.0)** |

ಮೂಲ: ಪ್ರಾಥಮಿಕ ಮೂಲ.

ಕೋಷ್ಟಕದಲ್ಲಿ ತೋರಿಸಿರುವಂತೆ ಶೇ7.27 ರಷ್ಟು ಫಲಾನುಭವಿಗಳ ವರಮಾನ ರೂ. 500ಕ್ಕಿಂತ ಕಡಿಮೆ ಇದೆ. ಒಟ್ಟಾರೆ ಶೇ.84 ರಷ್ಟು ಫಲಾನುಭವಿಗಳ ವರಮಾನ ರೂ.2000/–ಕ್ಕಿಂತ ಕಡಿಮೆ ಇದೆ. ಆದರೂ ರೂ.1500–2000ದ ಮಧ್ಯದ ವರಮಾನ ಇರುವ ಗುಂಪು ಬಡತನ ರೇಖೆಯನ್ನು ದಾಟುವ ಸಾಮರ್ಥ್ಯವನ್ನು ಹೊಂದಿವೆ. ಇಬ್ಬರು ಪುರುಷ ಫಲಾನುಭವಿಗಳು ತಿಂಗಳಿಗೆ ರೂ.3000/–ಕ್ಕಿಂತಲೂ ಅಧಿಕ ವರಮಾನ ಪಡೆಯುವಲ್ಲಿ ಸಮರ್ಥರಾಗಿದ್ದಾರೆ. ಇಲ್ಲಿ 17 ಫಲಾನುಭವಿಗಳು (ಶೇ. 15) ನಿಚ್ಚಳವಾಗಿ ಬಡತನ ರೇಖೆಯನ್ನು ದಾಟಲು ಸಮರ್ಥರಾಗಿದ್ದಾರೆ. ಒಟ್ಟಾರೆ ಶೇ. 35ರಷ್ಟು ಫಲಾನುಭವಿಗಳು ಮುಂದಿನ ದಿನಗಳಲ್ಲಿ ಬಡತನ ರೇಖೆಯನ್ನು ದಾಟಬಲ್ಲವರಾಗಿದ್ದಾರೆ.

ಸಾಂಪ್ರದಾಯಿಕ ಸ್ವರೂಪವುಳ್ಳ ಚಟುವಟಿಕೆಗಳನ್ನು ಕೈಗೊಂಡಿರುವುದು ಇಲ್ಲಿ ಫಲಾನುಭವಿಗಳ ವರಮಾನ ಗಳಿಕೆಯು ಕೆಳಮಟ್ಟದಲ್ಲಿರುವುದಕ್ಕೆ ಕಾರಣವಾಗಿದೆ. ಫಲಾನುಭವಿಗಳು ಮಾರುಕಟ್ಟೆ ಸೌಲಭ್ಯ, ಸಂಗ್ರಹಣೆ, ಸಂಸ್ಕರಣೆ ಮುಂತಾದವುಗಳ ಕುರಿತಂತೆ ಎದುರಿಸುತ್ತಿರುವ ಸಮಸ್ಯೆಗಳು ಸಹ ಕಡಿಮೆ ವರಮಾನಕ್ಕೆ ಇರುವ ಕಾರಣಗಳಾಗಿವೆ. ಫಲಾನುಭವಿಗಳಿಗೆ ತರಬೇತಿಗಳನ್ನು ನೀಡುವಲ್ಲಿ ಹೆಚ್ಚಿನ ಕಾಳಜಿಯನ್ನು ವಹಿಸಲಾಗಿಲ್ಲ. ಫಲಾನುಭವಿಗಳಿಗೆ ಉದ್ಯಮಗಳ ನಿರ್ವಹಣೆ ಕುರಿತಂತೆ ಅಗತ್ಯದ ಜ್ಞಾನದ ಕೊರತೆ ಇದೆ. ಅಲ್ಲದೇ, ಮೂಲಭೂತ ಸೌಕರ್ಯಗಳ ಕೊರತೆಯು ಸಹ ಕೆಳಮಟ್ಟದ ವರಮಾನಕ್ಕೆ ಕಾಣಿಕೆ ನೀಡುತ್ತಿದೆ.

ಈ ಹಿಂದಿನ ಸ್ವಯಂ ಉದ್ಯೋಗ ಕಾರ್ಯಕ್ರಮಗಳಿಗೆ ಹೋಲಿಸಿದರೆ, ಸ್ವಸಹಾಯ ಗುಂಪುಗಳನ್ನು ರಚಿಸುವಲ್ಲಿ, ವೈವಿಧ್ಯಮಯ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಮತ್ತು ಅಧಿಕಮಟ್ಟದ ಹಣಕಾಸಿನ ನೆರವನ್ನು ಪಡೆಯುವಲ್ಲಿ ಸ್ವಸಹಾಯ ಗುಂಪುಗಳು ಉತ್ತಮ ಸಾಧನೆ ತೋರಿವೆ. ಆದರೆ ಬದಲಾವಣೆಯ ಪ್ರಮಾಣವು ನಿರೀಕ್ಷಿದ ಮಟ್ಟದಲ್ಲಿಲ್ಲ ಮತ್ತು ಅದರ ಪರಿಣಾಮವು ಹೇಳಿಕೊಳ್ಳುವ ರೀತಿಯಲ್ಲಿಲ್ಲ.

## ಸಮಾರೋಪ

ಭಾರತದ ಸಂದರ್ಭದಲ್ಲಿ ಸ್ವಯಂ ಉದ್ಯೋಗ ಕಾರ್ಯಕ್ರಮವು ಸೂಕ್ತ ದೀರ್ಘಾವಧಿ ನಿರುದ್ಯೋಗ ನಿವಾರಣಾ ಕ್ರಮವಾಗಿದೆ. ಏಕೆಂದರೆ ನಮ್ಮ ಆರ್ಥಿಕತೆಯಲ್ಲಿ ಖಾಯಂ ಉದ್ಯೋಗದ ಅವಕಾಶಗಳು ನಿಯಮಿತವಾಗಿ ದೊರೆಯುವುದಿಲ್ಲ. ಈ ಹಿಂದಿನ ಸ್ವಯಂ ಉದ್ಯೋಗ ಕಾರ್ಯಕ್ರಮಗಳು ಎಷ್ಟು ಪ್ರಮಾಣದಲ್ಲಿರಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಇರಲಿಲ್ಲ ಮತ್ತು ಅವು ಅಪರಿಪೂರ್ಣವಾಗಿದ್ದವು. ಆದ್ದರಿಂದ ಎಲ್ಲ ಅಂಶಗಳನ್ನು ಒಳಗೊಂಡ ಸಮಗ್ರವಾದ ಉದ್ಯೋಗ ಕಾರ್ಯಕ್ರಮದ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ ಎಸ್.ಜಿ.ಎಸ್.ವೈ. ಒಂದು ಉತ್ತಮ ಪ್ರಯತ್ನ.



**ಈ ಹಿಂದಿನ ಸ್ವಯಂ ಉದ್ಯೋಗ ಕಾರ್ಯಕ್ರಮಗಳು ಎಷ್ಟು ಪ್ರಮಾಣದಲ್ಲಿರಬೇಕಾಗಿತ್ತೋ ಅಷ್ಟು ಪ್ರಮಾಣದಲ್ಲಿ ಇರಲಿಲ್ಲ ಮತ್ತು ಅವು ಅಪರಿಪೂರ್ಣವಾಗಿದ್ದವು. ಆದ್ದರಿಂದ ಎಲ್ಲ ಅಂಶಗಳನ್ನು ಒಳಗೊಂಡ ಒಂದು ಸಮಗ್ರವಾದ ಉದ್ಯೋಗ ಕಾರ್ಯಕ್ರಮದ ಅಗತ್ಯವಿತ್ತು. ಈ ಹಿನ್ನೆಲೆಯಲ್ಲಿ ಎಸ್.ಜಿ.ಎಸ್.ವೈ. ಒಂದು ಉತ್ತಮ ಪ್ರಯತ್ನ.**







ಗುಂಪು ಪರಿಕಲ್ಪನೆ, ತರಬೇತಿಗಳನ್ನು ನೀಡುವುದು, ಸಾಲ ಸೌಲಭ್ಯ ನೀಡುವುದು, ವಿವಿಧ ಏಜೆನ್ಸಿಗಳನ್ನು ಒಳಗೊಳ್ಳುವುದು, ಕಾರ್ಯಕ್ರಮದ ಮೇಲುಸ್ತುವಾರಿ ಇವುಗಳು ಈ ಕಾರ್ಯಕ್ರಮದ ಉತ್ತಮ ಅಂಶಗಳಾಗಿವೆ. ಈ ಕಾರ್ಯಕ್ರಮದೊಳಗೆ ಅನೇಕ್ ನಿಯಂತ್ರಣ ಕ್ರಮಗಳು ಅಂತರ್ಗತಗೊಂಡಿವೆ. ಆದ್ದರಿಂದ ಇಲ್ಲಿ ಒಳ್ಳೆಯ ಫಲಿತಾಂಶವನ್ನು ನಿರೀಕ್ಷಿಸಬಹುದಾಗಿದೆ.

ಈ ಮೌಲ್ಯಮಾಪನ ಅಧ್ಯಯನವು ತಿಳಿಸುವಂತೆ ಈ ಕಾರ್ಯಕ್ರಮವನ್ನು ಪರಿಷ್ಕಾರಕ್ಕೆ ಒಳಪಡಿಸಬೇಕಾಗಿದೆ ಮತ್ತು ಅದನ್ನು ಮರುನಿರ್ಮಾಣ ಮಾಡಬೇಕಾಗಿದೆ. ಈ ಕಾರ್ಯಕ್ರಮವು ಐ.ಆರ್.ಡಿ.ಪಿ. ಮತ್ತು ಡ್ವಾಕ್ರಾಗಳಂತೆ ಕೆಲಸ ಮಾಡಬಾರದು. ಈ ಕಾರ್ಯಕ್ರಮವು ಗ್ರಾಮೀಣ ಸಮುದಾಯಕ್ಕೆ ಬದಲಾಗುತ್ತಿರುವ ಅವರ ಬೇಡಿಕೆಯ ಹಿನ್ನೆಲೆಯಲ್ಲಿ ಹೆಚ್ಚು ಯೋಗ್ಯವಾದ ಮತ್ತು ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ಗುರುತಿಸಬೇಕು. ನಿಯಮಿತವಾಗಿ ತರಬೇತಿಗಳನ್ನು ನೀಡಬೇಕು ಮತ್ತು ಫಲಾನುಭವಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡಬೇಕು ಮತ್ತು ಮಾರುಕಟ್ಟೆಯ ಅಗತ್ಯಗಳನ್ನು ಪೂರೈಸಬೇಕು. ಯೋಜನೆಯ ಪರಿಣಾಮಕಾರಿ ಅನುಷ್ಠಾನವು ಈ ನೆಲೆಯಲ್ಲಿ ನೆರವಾಗಬಹುದಾಗಿದೆ. ಈ ಕಾರ್ಯಕ್ರಮವು ಉತ್ತಮವಾದ ಸಾಮರ್ಥ್ಯವನ್ನು ಹೊಂದಿದೆ ಮತ್ತು ಇದು ನಿಯಮಿತವಾಗಿ ಅನುಷ್ಠಾನಗೊಂಡರೆ, ಮುಂದಿನ ದಿನಗಳಲ್ಲಿ ಗ್ರಾಮೀಣ ಬಡಜನರನ್ನು ಬಡತನ ಬಂಧನದಿಂದ ಬಿಡುಗಡೆಗೊಳಿಸಬಹುದಾಗಿದೆ..

(ಇದು ಡಾ.ಛಾಯಾ ದೇಂಗಾವಕರ್ ಅವರ ಬಡತನ ನಿವಾರಣೆಗೆ ಸಮಗ್ರವಾದ ಪರಿಕಲ್ಪನೆ ಪತ್ರಿಕೆಯ ಒಂದು ಭಾಗ.. ಇದು ಭಗಚಿ ಅವರು ಸಂಪಾದಿಸಿದ 'ಭಾರತದಲ್ಲಿ ಉದ್ಯೋಗ ಮತ್ತು ಬಡತನ ನಿವಾರಣೆ, ಅಭಿಜಿತ್ ಪ್ರಕಾಶನ, ನವದೆಹಲಿ 2007 ಇಲ್ಲಿ ಪ್ರಕಟಗೊಂಡಿದೆ.)

## ಗಮನ ಹರಿಸಬೇಕಾದ ಸಂಗತಿಗಳು

ಕಳೆದ ನಲವತ್ತು ವರ್ಷಗಳಿಂದಲೂ ಜಿಲ್ಲೆಯನ್ನು ಹಿಂದುಳಿದಿರುವ ಜಿಲ್ಲೆಯೆಂದೇ ಗುರುತಿಸಿಕೊಂಡು ಬರಲಾಗುತ್ತಿದೆ. ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣವು ಶೇ. 67ರಷ್ಟರಲ್ಲಿ ಮುಂದುವರಿಯುತ್ತಿದ್ದರೂ ಅದು ಜಿಲ್ಲೆಯ ವರಮಾನಕ್ಕೆ ನೀಡುವ ಕಾಣಿಕೆಯು ಮಾತ್ರ ಕಡಿಮೆಯಾಗುತ್ತ ನಡೆದಿದೆ. ಈಗ ಜಿಲ್ಲೆಯ ವರಮಾನಕ್ಕೆ ಅದರ ಕಾಣಿಕೆ ಕೇವಲ ಶೇ. 29.7. ಜಿಲ್ಲೆಯ ಕೆಲವು ಭಾಗವು ಈಗ ನೀರಾವರಿಯ ಸೌಲಭ್ಯವನ್ನು ಪಡೆಯುತ್ತಿದ್ದರೂ ಹತ್ತರಲ್ಲಿ ಏಳು ತಾಲ್ಲೂಕುಗಳು ಬರಪೀಡಿತ ಪ್ರದೇಶದಲ್ಲಿ ಸೇರುವುದರಿಂದಾಗಿ ಅಲ್ಲಿನ ಕೃಷಿಯು ಅನಿಶ್ಚಿತತೆಯಿಂದ ಇಂದಿಗೂ ನರಳುತ್ತಿದೆ. ಕಳೆದ ದಶಕದಲ್ಲಿ ಕೃಷಿಯ ಬೆಳವಣಿಗೆ ಪ್ರಮಾಣ ಶೇ. 3.

ಇಲ್ಲಿ ಒಟ್ಟು ದುಡಿಮೆಗಾರರಲ್ಲಿ ಕೃಷಿ ಕೂಲಿಕಾರರ ಪ್ರಮಾಣವು ಅಧಿಕವಾಗಿದೆ. ಕೃಷಿಯಲ್ಲಿನ ಕೂಲಿಯು ಪ್ರಮಾಣ ಕಡಿಮೆ. ಉದ್ಯೋಗದ ಅವಕಾಶಗಳು ದೊರೆಯುವ ಅವಧಿ ಕಡಿಮೆ. ಏಕೆಂದರೆ ಇದು ಒಣ ಭೂಮಿ ಬೇಸಾಯವು ಅಧಿಕವಾಗಿರುವ ಪ್ರದೇಶವಾಗಿದೆ. ಇದರಿಂದಾಗಿ ಇಲ್ಲಿ ಬಡತನದ ಪ್ರಮಾಣವು ಅಧಿಕ.

ಬೃಹತ್ ಪ್ರಮಾಣದಲ್ಲಿ ಮಹಿಳಾ ದುಡಿಮೆಗಾರರು ಅಂಚಿನ ದುಡಿಮೆಗಾರರಾಗಿ ಉದ್ಯೋಗದಲ್ಲಿ ಭಾಗವಹಿಸುತ್ತಿದ್ದಾರೆ. ಇದರಿಂದಾಗಿ ಅವರು ಉದ್ಯೋಗ ಅನಿಶ್ಚಿತತೆಯನ್ನು ಅನುಭವಿಸುತ್ತಿದ್ದಾರೆ. ಉದ್ಯೋಗದ ಅವಕಾಶಗಳು ಕಡಿಮೆಯಿರುವುದು, ಕೂಲಿಯು ಕೆಳಮಟ್ಟದಲ್ಲಿರುವುದು(ದಿನಕ್ಕೆ ರೂ. 30 ರಿಂದ ಮತ್ತು ರೂ. 35) ಮತ್ತು ಅವರು ಕೃಷಿಯಲ್ಲಿ ಅರಕುಶಲ ಕೆಲಸಗಳನ್ನು ಮಾತ್ರ ಮಾಡಬಲ್ಲವರಾಗಿರುವುದರಿಂದ ಅಲ್ಲಿ ಬಡತನದ ಮಹಿಳೀಕರಣ ಪ್ರಕ್ರಿಯೆಯು ನಡೆಯುತ್ತಿದೆ.

ಮತ್ತೊಂದು ಗಮನ ಹರಿಸಬೇಕಾಗಿರುವ ಸಂಗತಿಯೆಂದರೆ ಬಾಲ ಕಾರ್ಮಿಕರ ಸಮಸ್ಯೆ. ಶಾಲೆಯಿಂದ ಹೊರಗಿರುವ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತಿದ್ದರೂ ಜಿಲ್ಲೆಯಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಸಂಖ್ಯೆ 24261 ಎಂದು ತಿಳಿದು ಬಂದಿದೆ. ಅನೇಕ ಕ್ಷೇತ್ರಕಾರ್ಯ ಆಧರಿಸಿದ ಅಧ್ಯಯನಗಳು ತಿಳಿಸುವಂತೆ 8 ರಿಂದ 10ನೆಯ ತರಗತಿಯಲ್ಲಿನ ದಾಖಲಾತಿಯು ತೀವ್ರವಾಗಿ ಏರಿಕೆಯಾಗುತ್ತಿಲ್ಲ. ಇದು ಜಿಲ್ಲೆಯಲ್ಲಿ ಬಾಲಕಾರ್ಮಿಕರ ಪ್ರಮಾಣವು

ಅಧಿಕವಾಗಿರುವುದನ್ನು ತೋರಿಸುತ್ತದೆ. ಇವರು ಸಾಮಾನ್ಯವಾಗಿ ನಗರ ಪ್ರದೇಶದಲ್ಲಿನ ಅಸಂಘಟಿತ ವಲಯದಲ್ಲಿ ದುಡಿಯುತ್ತಿದ್ದಾರೆ ಇದರಿಂದಾಗಿ ಇದನ್ನು ಗುರಿತಿಸುವುದು ಕಷ್ಟ ಮತ್ತು ಅದು ಎಲ್ಲೂ ದಾಖಲಾಗುವುದಿಲ್ಲ.

ಉದ್ಯೋಗವು ಸಂಘಟಿತ ಕ್ಷೇತ್ರದಲ್ಲಿ ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗುತ್ತಿಲ್ಲ. ಜಿಲ್ಲೆಯಲ್ಲಿ ಸಿಮೆಂಟ್ ಉತ್ಪಾದನೆಯಲ್ಲಿ ನಿರತವಾಗಿದ್ದ ಸಣ್ಣ ಕಾರ್ಖಾನೆಗಳು ಮುಚ್ಚಿದ್ದರಿಂದ ಉದ್ಯೋಗದ ಅವಕಾಶಗಳು ಕಡಿಮೆಯಾಗುತ್ತಿವೆ.

ಸಾರಿಗೆ, ಬ್ಯಾಂಕಿಂಗ್, ಸಂಪರ್ಕ, ನಿರ್ಮಾಣ ಮುಂತಾದ ಸೇವಾ ಚಟುವಟಿಕೆಗಳ ವಿಸ್ತರಣೆಯಿಂದಾಗಿ ತೃತೀಯ ವಲಯದಲ್ಲಿ ಉದ್ಯೋಗದ ಅವಕಾಶಗಳು ಅಧಿಕವಾಗುತ್ತಿವೆ. ಆದರೆ ಇವೆಲ್ಲವೂ ಅಸಂಘಟಿತ ವಲಯದಲ್ಲಿ ಬೆಳೆಯುತ್ತಿವೆ. ಇದರಿಂದಾಗಿ ಬೆಳೆಯುತ್ತಿರುವ ಉದ್ಯೋಗಗಳು ಕೈತುಂಬಾ ಸಂಬಳ ತರುತ್ತಿಲ್ಲ ಮತ್ತು ಅವು ಸುಸ್ಥಿರಗತಿಯ ಸ್ವರೂಪವೂ ಅಲ್ಲ.

## ಸಲಹೆಗಳು

ಬಡತನ ಮತ್ತು ಉದ್ಯೋಗದ ಅವಕಾಶಗಳ ಕೊರತೆಯನ್ನು ನೀಗಬೇಕಾದರೆ ಕೃಷಿಯಲ್ಲಿ ಉತ್ಪಾದಕತೆಯನ್ನು ಅಧಿಕಗೊಳಿಸುವುದು ಅಗತ್ಯ. ಕೃಷಿಯನ್ನು ಕಾಡುತ್ತಿರುವ ಅನಿಶ್ಚಿತತೆ ಮತ್ತು ಗಂಡಾಂತರವನ್ನು ಬಗೆಹರಿಸಲು ನೀರಾವರಿ ಪ್ರದೇಶವನ್ನು ವಿಸ್ತರಿಸಬೇಕಾಗುತ್ತದೆ. ಒಣಭೂಮಿ ಬೇಸಾಯಕ್ಕೆ ಸಂಬಂಧಿಸಿದ ತಂತ್ರಜ್ಞಾನ ಮತ್ತು ಅದರ ಸುಸ್ಥಿರಗತಿ ಗುಣವನ್ನು ಉತ್ತಮಪಡಿಸುವುದರ ಮೂಲಕ ಕೃಷಿಯನ್ನು ಸಶಕ್ತಗೊಳಿಸಬೇಕಾಗಿದೆ ಮತ್ತು ಅದರ ಸುಸ್ಥಿರಗತಿ ಗುಣವನ್ನು ಉತ್ತಮಪಡಿಸಬೇಕಾಗಿದೆ. ರೈತರು ಏಕಬೆಳೆ ಪದ್ಧತಿಯನ್ನು ಅನುಸರಿಸುತ್ತಿರುವುದರಿಂದ ಕೃಷಿಯಲ್ಲಿ ಗಂಡಾಂತರದ ಪ್ರಮಾಣ ಅಧಿಕ. ರೈತರಿಗೆ ಬೆಳೆಯನ್ನು ಆಯ್ಕೆ ಮಾಡಿಕೊಳ್ಳುವುದರ ಬಗ್ಗೆ ಮತ್ತು ಬೆಳೆಗಳನ್ನು ಆವರ್ತಗೊಳಿಸುವುದರ ಬಗ್ಗೆ ತರಬೇತಿ ನೀಡಬೇಕಾಗಿದೆ. ಅವರಿಗೆ ಕೀಟ ನಿಯಂತ್ರಣ ಮತ್ತು ಸಾವಯವ ಕೃಷಿಯ ಬಗ್ಗೆಯೂ ತರಬೇತಿ ನೀಡಬೇಕಾಗುತ್ತದೆ.

ರೈತರು ಆಧುನಿಕ ಕೃಷಿ ಪದ್ಧತಿಯನ್ನು ಅನುಸರಿಸುವಂತೆ ಮತ್ತು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವಂತೆ ರೈತರ ಮನವೊಲಿಸಬೇಕಾಗಿದೆ.

ಜನರಿಗೆ ಸಾಕಷ್ಟು ಉದ್ಯೋಗ ಮತ್ತು ವರಮಾನ ದೊರೆಯುವಂತೆ ಮಾಡಲು ಕೃಷಿಯೇತರ ಚಟುವಟಿಕೆಗಳಾದ ಕೋಳಿ ಸಾಕಾಣಿಕೆ, ರೇಷ್ಮೆ, ಹೈನುಗಾರಿಕೆ ಮುಂತಾದವುಗಳನ್ನು ಪ್ರೋತ್ಸಾಹಿಸ ಬೇಕಾಗುತ್ತದೆ. ಜಿಲ್ಲೆಯಲ್ಲಿ ತೋಟಗಾರಿಕೆ ಮತ್ತು ರೇಷ್ಮೆ ಅಭಿವೃದ್ಧಿಗೆ ಅಪಾರವಾದ ಸಾಮರ್ಥ್ಯವಿದೆ. ಮೂಲಭೂತ ಸೌಲಭ್ಯವನ್ನು ಸರಿಯಾಗಿ ಬೆಳೆಸುವುದರ ಮೂಲಕ ಅಭಿವೃದ್ಧಿ ಸಾಮರ್ಥ್ಯವನ್ನು ಬಳಸಿಕೊಳ್ಳಬೇಕಾಗಿದೆ. ನೀರಾವರಿಯನ್ನು ಅಪಾರವಾಗಿ ಪಡೆಯುತ್ತಿರುವ ಜೇವರ್ಗಿ, ಶೋರಾಪುರ ಮತ್ತು ಶಹಾಪುರ ತಾಲ್ಲೂಕುಗಳಲ್ಲಿ ಕೃಷಿಯೇತರ ಚಟುವಟಿಕೆಗಳನ್ನು ಪ್ರೋತ್ಸಾಹಿಸಬೇಕು. ಈ ಪ್ರದೇಶದಲ್ಲಿ ತರಬೇತಿ, ಮಾಹಿತಿ ಮತ್ತು ಇತರೆ ಅಗತ್ಯಗಳನ್ನು ಪರಿಣಾಮಕಾರಿ ರೀತಿಯಲ್ಲಿ ಒದಗಿಸುವುದಕ್ಕಾಗಿ ಕೃಷಿ ವಿಸ್ತರಣಾ ಚಟುವಟಿಕೆಗಳನ್ನು ಬಲಪಡಿಸಬೇಕು. ರೈತರ ಅನುಕೂಲಕ್ಕಾಗಿ ತರಬೇತಿಯನ್ನು ರೈತರ ಮನೆ ಬಾಗಿಲಿನಲ್ಲೇ ಅವರಿಗೆ ಅನುಕೂಲವಾಗುವಂತೆ ನೀಡಬೇಕು.



ಈ ಪ್ರದೇಶದಲ್ಲಿ ಸೇವಾ ವಲಯವು ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಸಾಲ ಸೌಲಭ್ಯ, ತರಬೇತಿ ಸೌಲಭ್ಯ ಮತ್ತು ಮಾರುಕಟ್ಟೆ ಸೌಲಭ್ಯ ಮುಂತಾದವುಗಳನ್ನು ಒದಗಿಸುವ ಜಾಲವನ್ನು ಬಲಪಡಿಸುವುದರ ಮೂಲಕ ಸೇವಾ ವಲಯವನ್ನು ಸದೃಢಪಡಿಸ ಬೇಕಾಗಿದೆ.

**ಈ ಪ್ರದೇಶದಲ್ಲಿ ಸೇವಾ ವಲಯವು ತೀವ್ರಗತಿಯಲ್ಲಿ ಬೆಳೆಯುತ್ತಿದೆ. ಸಾಲ ಸೌಲಬ್ಯ, ತರಬೇತಿ ಸೌಲಬ್ಯ ಮತ್ತು ಮಾರುಕಟ್ಟೆ ಸೌಲಭ್ಯ ಮುಂತಾದವುಗಳನ್ನು ಒದಗಿಸುವ ಜಾಲವನ್ನು ಬಲಪಡಿಸುವುದರ ಮೂಲಕ ಸೇವಾ ವಲಯವನ್ನು ಸದೃಢಪಡಿಸ ಬೇಕಾಗಿದೆ.**

ಜಿಲ್ಲೆಯ ಮುಂದಿರುವ ಬಹು ಮುಖ್ಯವಾದ ಸಮಸ್ಯೆ ಬಡತನ. ಒಣಭೂಮಿ ಪ್ರದೇಶದಲ್ಲಿ ವಾರ್ಷಿಕವಾಗಿ ದೊರೆಯುವ ಉದ್ಯೋಗದ ಅವಕಾಶಗಳು ಕೇವಲ 180 ದಿನಗಳು ಮಾತ್ರ. ಕೂಲಿಯು ಇಲ್ಲಿ ಸುಗ್ಗಿಯಲ್ಲಿ ಮತ್ತು ಸುಗ್ಗಿಯಿಲ್ಲದಿದ್ದಾಗ ರೂ. 50 ರಿಂದ 70 ರ ಆಸುಪಾಸಿನಲ್ಲಿರುತ್ತದೆ. ಜಿಲ್ಲೆಯಲ್ಲಿ ಬಡತನ ನಿವಾರಣಾ ಕಾರ್ಯಕ್ರಮವೇನೋ ಜಾರಿಯಲ್ಲಿದೆ. ಆದರೆ ಅದರ ಪರಿಣಾಮ ಪ್ರೋತ್ಸಾಹದಾಯಕವಾಗಿಲ್ಲ. ಅಗತ್ಯವಿರುವಷ್ಟು ಮಾರುಕಟ್ಟೆ ಸೌಲಭ್ಯವಿಲ್ಲದಿರುವುದರಿಂದಾಗಿ ಸ್ವಯಂ ಉದ್ಯೋಗ ಕಾರ್ಯಕ್ರಮಗಳಡಿಯಲ್ಲಿ



> **ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾದರೆ ಮೊದಲು ಜಿಲ್ಲೆಯ ಆರ್ಥಿಕತೆಯನ್ನು ಸದೃಢ ಪಡಿಸಬೇಕು. ಇದನ್ನು ಸಾಧಿಸಿಕೊಳ್ಳಲು ಕೃಷಿಯಲ್ಲಿನ ಉತ್ಪಾದನೆಯನ್ನು ಮತ್ತು ಉತ್ಪಾದಕತೆಗಳೆರಡನ್ನು ಉತ್ತಮ ಪಡಿಸಬೇಕಾಗುತ್ತದೆ. ಸೂಕ್ತ ನೀತಿಗಳ ಮೂಲಕ ಜಿಲ್ಲೆಯಲ್ಲಿರುವ ವರಮಾನ ವಿತರಣೆಯಲ್ಲಿನ ಅಸಮಾನತೆಯನ್ನು ನಿವಾರಣೆ ಮಾಡಬೇಕು. ಗೌರವಯುತವಾಗಿ ಬದುಕು ಮಾಡಲು ಜನರಿಗೆ ಸಾಕಷ್ಟು ಮತ್ತು ಹೆಚ್ಚು ಕೂಲಿ ತರಬಲ್ಲಂತಹ ಉದ್ಯೋಗಗಳನ್ನು ಒದಗಿಸುವುದು ಮುಖ್ಯ.**

ತೆಗೆದುಕೊಂಡ ಚಟುವಟಿಕೆಗಳು ಲಾಭದಾಯಕವಾಗಿ ಪರಿಣಮಿಸಲಿಲ್ಲ. ಸ್ವಸಹಾಯ ಗುಂಪುಗಳಲ್ಲಿ ನಡೆಯುವ ಚಟುವಟಿಕೆಗಳಿಗೆ ಅಗತ್ಯವಾದ ಮಾರುಕಟ್ಟೆ ಸೌಲಭ್ಯವನ್ನು ಒದಗಿಸಿ ಕೊಡಬೇಕಾಗುತ್ತದೆ. ಗ್ರಾಮ ಸಭೆಗಳಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುವುದರ ಮೂಲಕ ಸ್ವಯಂ ಉದ್ಯೋಗ ಮತ್ತು ಕೂಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕು.

ಜಿಲ್ಲೆಯಲ್ಲಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಜಾರಿಯಲ್ಲಿದೆ. ಗ್ರಾಮೀಣ ಪ್ರದೇಶದಲ್ಲಿ ವಲಸೆಯನ್ನು ತಡೆಗಟ್ಟುವುದಕ್ಕೆ ಸಾಕಾಗುವಷ್ಟು ಉದ್ಯೋಗಗಳನ್ನು ನೀಡಬೇಕು ಮತ್ತು ಅದಕ್ಕಾಗಿ ಕೆಆರ್‌ಜಿಈಎಸ್ ಮತ್ತು ಅದರಂತೆ ಇತರೆ ಸಾಮಾನ್ಯವಾಗಿ ಕೃಷಿಯಲ್ಲಿ ದುಡಿಯುತ್ತಿರುತ್ತಾರೆ. ಅಲ್ಲಿ ಕೂಲಿ ಕಡಿಮೆ ಮತ್ತು ಉದ್ಯೋಗದ ಲಭ್ಯತೆಯೂ ಕಡಿಮೆ. ಹೆಚ್ಚು ಕೂಲಿ ತರಬಲ್ಲ ಉದ್ಯೋಗಗಳನ್ನು ಮಹಿಳೆಯರಿಗೆ ಒದಗಿಸುವುದಕ್ಕೆ ಅವರಿಗೆ ಸೂಕ್ತ ತರಬೇತಿ ಮತ್ತು ಕುಶಲತೆಯನ್ನು ಒದಗಿಸಬೇಕು. ಮಹಿಳೆಯರಲ್ಲಿ ಸ್ವಯಂ ಉದ್ಯೋಗದ ಪ್ರಮಾಣ ಅಧಿಕವಾಗುತ್ತಿದೆ. ಈ ದಿಶೆಯಲ್ಲಿ ಸ್ತ್ರೀಶಕ್ತಿ ಗುಂಪುಗಳು ಜಿಲ್ಲೆಯಲ್ಲಿ ತೀವ್ರವಾಗಿ ಬೆಳೆಯುತ್ತಿರುವುದು ಆಶಾದಾಯಕ ಸೂಚಿಯಾಗಿದೆ. ಆದರೆ ಅವರು ಕೇವಲ ಅಸಂಘಟಿತ ಅಥವಾ ಅನೌಪಚಾರಿಕ ವಲಯದ ಚಟುವಟಿಕೆಗಳಲ್ಲಿ ಮಾತ್ರ ನಿರತರಾಗಿದ್ದಾರೆ.

ಬಡತನವು ಬಾಲಕಾರ್ಮಿಕ ಸಮಸ್ಯೆಗೆ ಮೂಲ ಕಾರಣವಾಗಿದೆ. ಮಕ್ಕಳಲ್ಲಿ ಶಿಕ್ಷಣದ ಬಗ್ಗೆ ಆಸಕ್ತಿ ಮೂಡುವಂತೆ ಮಾಡಬೇಕು ಮತ್ತು ಅದರ ಬಗ್ಗೆ ಅವರಲ್ಲಿ ಅರಿವನ್ನು ಮೂಡಿಸಬೇಕು. ಈ ದಿಶೆಯಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಎನ್‌ಜಿಒಗಳು ಅದ್ಭುತ ಕಾರ್ಯ ಮಾಡುತ್ತಿವೆ. ಅವುಗಳ ಪಾತ್ರವನ್ನು ಬಲಪಡಿಸಬೇಕಾಗಿದೆ.

ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಬೇಕಾದರೆ ಮೊದಲು ಜಿಲ್ಲೆಯ ಆರ್ಥಿಕತೆಯನ್ನು ಸದೃಢ ಪಡಿಸಬೇಕು. ಇದನ್ನು ಸಾಧಿಸಿಕೊಳ್ಳಲು ಕೃಷಿಯಲ್ಲಿನ ಉತ್ಪಾದನೆಯನ್ನು ಮತ್ತು ಉತ್ಪಾದಕತೆಗಳೆರಡನ್ನು ಉತ್ತಮ ಪಡಿಸಬೇಕಾಗುತ್ತದೆ. ಸೂಕ್ತ ನೀತಿಗಳ ಮೂಲಕ ಜಿಲ್ಲೆಯಲ್ಲಿರುವ ವರಮಾನ ವಿತರಣೆಯಲ್ಲಿನ ಅಸಮಾನತೆಯನ್ನು ನಿವಾರಣೆ ಮಾಡಬೇಕು. ಗೌರವಯುತವಾಗಿ ಬದುಕು ಮಾಡಲು ಜನರಿಗೆ ಸಾಕಷ್ಟು ಮತ್ತು ಹೆಚ್ಚು ಕೂಲಿ ತರಬಲ್ಲಂತಹ ಉದ್ಯೋಗಗಳನ್ನು ಒದಗಿಸುವುದು ಮುಖ್ಯ.



# ವಸತಿ, ಕುಡಿಯುವ ನೀರು ಮತ್ತು ನೈರ್ಮಲ್ಯ




KALBURGI (GULBARGA) District Map
Bidar
MAHARASHTRA
ANDHRA PRADESH
Bijapur
Raichur
Khajuri
Aland
Bodhan
Saigar
Kinhi
Sonath
Kamlapur
Mahagaon
Narona
Sargapur
Ratkal
Chincholi
Sulahpet
Mullamdri
Awarja
Benithora
Kulali
Nimbarga
KALBURGI
Kalgi
Marhal
Mannur
Bari
Atanur
Gobur Buzurgr
Tingli
Nirgunda
Kogna
Sedam
Afzalpur
Gangapur
Farhatabad
Chitapur
Adki
Firozabad
Mudhol
Nelogi
Wadi
Kona
Jevargi
Addola
Nalwar
Handarki
Aralagundi
Ijeri
Gajarkot
Yaragol
Yedrami
Gurmatkal
Sirwal
Bhima
Yadgir
Doranahalli
Gugi
Haligeri
Malla Buzurg
Shahpur
Khanapur
Nandepalli
Kembhavi
Sagar
Hattigudur
Ajalapur
Saidapur
Agni
Wadagera
Shorapur
Tumkur
Krishna
Devapur
Kakkera
Tintani
Kodekal
Narayanpur
Map not to Scale
Copyright © 2007 Compare Infobase Limited
LEGEND
State Boundary
District Boundary
Major Road
Railway
District Headquarter
Major Town
Other Town
River
www.mapsofindia.com

ಅಧ್ಯಾಯ 6

# ವಸತಿ, ಕುಡಿಯುವ ನೀರು ಮತ್ತು ನೈರ್ಮಲ್ಯ

ಆಹಾರ, ಆಶ್ರಯ ಮತ್ತು ಅರಿವೆ – ಇವು ಮೂರು ಜೀವನಾಧಾರಕ್ಕೆ ಅಗತ್ಯವಾದ ಮೂಲಭೂತ ಅಂಶಗಳಾಗಿವೆ. ಆಶ್ರಯ ಎಂಬುದು ವಿಶಾಲವಾದ ಅರ್ಥವನ್ನು ಹೊಂದಿದ್ದು, ಇದು ಮೂಲಭೂತ ಅಗತ್ಯಗಳಾದ ಕುಡಿಯುವ ನೀರು, ನೈರ್ಮಲ್ಯ ಮತ್ತು ವಿದ್ಯುಚ್ಛಕ್ತಿ ಸೌಲಭ್ಯ ಹೊಂದಿರುವ ವಸತಿ ಎಂದಾಗುತ್ತದೆ. ಉತ್ತಮ ಜೀವನಕ್ಕೆ ಇವು ಮೂಲಭೂತ ಅಗತ್ಯಗಳಾಗಿವೆ. ವಸತಿಯು ಆಶ್ರಯವನ್ನು ನೀಡುತ್ತದೆ ಎಂಬಷ್ಟಕ್ಕೆ ಮಾತ್ರ ಮುಖ್ಯವಲ್ಲ, ವ್ಯಕ್ತಿಯ ಗುರುತಿಗೆ ಮತ್ತು ವಿಳಾಸಕ್ಕೆ ವಸತಿಯು ಮುಖ್ಯವೆನಿಸುತ್ತದೆ. ಅಲ್ಲದೇ ವಸತಿಯೊಂದಿಗೆ ಇತರೆ ಅನುಕೂಲಗಳು ಸಹ ಸಂಬಂಧ ಕಲ್ಪಿಸಿಕೊಂಡಿವೆ. ಬಹಳಷ್ಟು ಬಡಜನತೆ ಅದರಲ್ಲಿಯೂ ಮುಖ್ಯವಾಗಿ ನಗರ ಪ್ರದೇಶದ ಬಡಜನತೆ ಅನೇಕ ಮೂಲಭೂತ ಮಾಹಿತಿಗಳಿಂದ ಮತ್ತು ಪಡಿತರ ಚೀಟಿಗಳಿಂದ ಮೂಲಭೂತ ಅಗತ್ಯಗಳಿಂದ ವಂಚಿತರಾಗಿದ್ದಾರೆ. ಅವರಿಗೊಂದು ಶಾಶ್ವತವಾದ ವಿಳಾಸ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ.

ಕುಡಿಯುವ ನೀರು ಮತ್ತು ನೈರ್ಮಲ್ಯ ದೊರೆಗೊಳ್ಳುವಿಕೆಯು ಜನರ ಆರೋಗ್ಯದ ಸ್ಥಿತಿಯ ಮೇಲೆ ಮಹತ್ವದ ಪರಿಣಾಮವನ್ನು ಬೀರುತ್ತದೆ. ಪ್ರತಿ 10000 ಜನರಿಗೆ ಇರುವ ನಳಗಳ ಸಂಖ್ಯೆಯು, ಪ್ರತಿ 10000 ಜನರಿಗೆ ಇರುವ ಆಸ್ಪತ್ರೆ ಹಾಸಿಗೆಗಳ ಸಂಖ್ಯೆಯು ಸೂಚಿಯಷ್ಟೇ ಸಮಾನ ಪ್ರಾಮುಖ್ಯತೆ ಹೊಂದಿರುವ ಸೂಚಿಯಾಗಿದೆ. ಇವೆರಡು ಒಂದಕ್ಕೊಂದು ವಿಲೋಮ/ವಿರೋಧ ಸಂಬಂಧವನ್ನು ಹೊಂದಿವೆ. ಕುಡಿಯುವ ನೀರು ಮತ್ತು ನೈರ್ಮಲ್ಯಗಳಲ್ಲಿ ಸುಧಾರಣೆಯಾದರೆ ಅದು ಜನರ ಉತ್ತಮ ಆರೋಗ್ಯಕ್ಕೆ ಕಾರಣವಾಗುತ್ತದೆ. ಮತ್ತು ವೈದ್ಯಕೀಯ ಸೇವೆ ಮೇಲಿನ ಬೇಡಿಕೆಯನ್ನು ಕಡಿಮೆ ಮಾಡುತ್ತದೆ. ಅಲ್ಲದೇ ಇದು ಮಹಿಳೆಯರು ಕುಡಿಯುವ ನೀರು ತರುವುದಕ್ಕೆ ಪಡಬೇಕಾದ ತೊಂದರೆಯನ್ನು ಸಹ ಕಡಿಮೆ ಮಾಡುತ್ತದೆ. ಉತ್ತಮ ಜೀವನಕ್ಕೆ ಬೇಕಾದ ಈ ಎಲ್ಲ ಅಂಶಗಳು ಒಂದು ಪ್ರದೇಶದ ಮಾನವ ಅಭಿವೃದ್ಧಿಯ ಸ್ಥಿತಿಯೊಂದಿಗೆ ಸನಿಹದ ಸಂಬಂಧವನ್ನು ಹೊಂದಿರುತ್ತವೆ.

ಪ್ರಸ್ತುತ ಅಧ್ಯಾಯದಲ್ಲಿ ಪ್ರಚಲಿತ ಇರುವ ವಸತಿ, ನೀರಿನ ಪೂರೈಕೆ, ನೈರ್ಮಲ್ಯಗಳ ಪರಾಮರ್ಶನ ಮಾಡುವುದರ ಮೂಲಕ ಜಿಲ್ಲೆಯ ಜನರ ಜೀವನದ ಸ್ಥಿತಿಗತಿಗಳನ್ನು ತಿಳಿಯುವ ಪ್ರಯತ್ನವನ್ನು ಮಾಡಲಾಗಿದೆ. ಮುಂದಿನ ಅಗತ್ಯಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅನುಷ್ಠಾನದಲ್ಲಿರುವ ವಿವಿಧ ಯೋಜನೆಗಳ ಮತ್ತು ಕುಡಿಯುವ ನೀರು ಮತ್ತು ನೈರ್ಮಲ್ಯ ಕಾರ್ಯಕ್ರಮಗಳು ಮತ್ತು ಅವುಗಳ ಅನುಷ್ಠಾನವನ್ನು ತಿಳಿಯಲು ಪ್ರಯತ್ನ ಮಾಡಲಾಗಿದೆ.

## ವಸತಿ

ಜಿಲ್ಲೆಯಲ್ಲಿ 1991–2001ರ ಅವಧಿಯಲ್ಲಿ ಶಾಶ್ವತವಾಗಿ ವಸತಿ ಹೊಂದಿರುವವರ ಪ್ರಮಾಣ ಶೇ.57 ರಿಂದ ಶೇ.60ಕ್ಕೆ ಅಧಿಕವಾಗಿದೆ. ಗ್ರಾಮೀಣ ಪ್ರದೇಶಕ್ಕೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಉತ್ತಮ ವಸತಿ ಸೌಲಭ್ಯಗಳಿವೆ. ಗ್ರಾಮೀಣ ಪ್ರದೇಶಗಳಲ್ಲಿ 2001ರಲ್ಲಿಯೂ ಸಹ ಶೇ. 43.35ರಷ್ಟು ಜನರು ಅರೆ ಶಾಶ್ವತ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಇದು 1991ರ ಪ್ರಮಾಣಕ್ಕಿಂತ (41.8%) ಕೇವಲ ಶೇಕಡಾ ಒಂದು ಅಂಶದಷ್ಟು ಮಾತ್ರ ಅಧಿಕವಾಗಿದೆ. ಇದರಲ್ಲಿ ಕೇವಲ ಶೇ. 50ರಷ್ಟು ಜನರು ಮಾತ್ರ ಶಾಶ್ವತ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ನಗರ ಪ್ರದೇಶಗಳಲ್ಲಿ ಶಾಶ್ವತ ಮನೆಗಳಲ್ಲಿ ವಾಸಿಸುವ ಜನತೆಯ ಪ್ರಮಾಣವು 1991ರಿಂದ 2001ರ ಅವಧಿಯಲ್ಲಿ ಶೇ.83ರಿಂದ ಶೇ. 86ಕ್ಕೆ ಏರಿಕೆಯಾಗಿದೆ. ಇಲ್ಲಿ 1991ರಲ್ಲಿ ಬಹುಪಾಲು ಅಂದರೆ ಶೇ. 77ರಷ್ಟು ಕುಟುಂಬಗಳು ಒಂದು ಕೋಣೆ ಅಥವಾ ಎರಡು ಕೋಣೆಗಳ ಮನೆಗಳಲ್ಲಿ ವಾಸಿಸುತ್ತಿದ್ದು, ಅವರ ಪ್ರಮಾಣವು 2001ರಲ್ಲಿ

**ಆಹಾರ, ಆಶ್ರಯ ಮತ್ತು ಅರಿವೆ – ಇವು ಮೂರು ಜೀವನಾಧಾರಕ್ಕೆ ಅಗತ್ಯವಾದ ಮೂಲಭೂತ ಅಂಶಗಳಾಗಿವೆ. ಆಶ್ರಯ ಎಂಬುದು ವಿಶಾಲವಾದ ಅರ್ಥವನ್ನು ಹೊಂದಿದ್ದು, ಇದು ಮೂಲಭೂತ ಅಗತ್ಯಗಳಾದ ಕುಡಿಯುವ ನೀರು, ನೈರ್ಮಲ್ಯ ಮತ್ತು ವಿದ್ಯುಚ್ಛಕ್ತಿ ಸೌಲಭ್ಯ ಹೊಂದಿರುವ ವಸತಿ ಎಂದಾಗುತ್ತದೆ. ಉತ್ತಮ ಜೀವನಕ್ಕೆ ಇವು ಮೂಲಭೂತ ಅಗತ್ಯಗಳಾಗಿವೆ.**



ಸ್ವಲ್ಪ ಕಡಿಮೆ, ಅಂದರೆ ಶೇ. 75ಕ್ಕೆ ಇಳಿದಿದೆ. ಮತ್ತೊಂದೆಡೆ, ಗ್ರಾಮೀಣ ಪ್ರದೇಶಗಳಲ್ಲಿ ಶೇ. 80ರಷ್ಟು ಕುಟುಂಬಗಳು ಒಂದರಿಂದ ಎರಡು ಕೋಣೆಗಳಿರುವ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಬಹುಸಂಖ್ಯಾತ ಮನೆಗಳು ಹುಲ್ಲು ಗುಡಿಸಲುಗಳಾಗಿವೆ. ಈ ಗುಡಿಸಲುಗಳು ಅವಶ್ಯಕ ಗಾಳಿ ಮತ್ತು ಬೆಳಕಿನ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಮತ್ತೊಂದೆಡೆ ಮಣ್ಣಿನ ಗೋಡೆಗಳನ್ನು ಹೊಂದಿರುವ ಮತ್ತು ಹುಲ್ಲಿನ ಮೇಲ್ಛಾವಣಿ ಇರುವ ಮನೆಗಳು ಸಹ ಇವೆ. ಈ ರೀತಿಯ ಮನೆಗಳು ಗಾಳಿಗಾಗಿ ಸಣ್ಣ ಕಿಟಕಿಗಳನ್ನು ಹೊಂದಿರುತ್ತವೆ. ಆದರೆ ಬಹುಸಂಖ್ಯಾತ ಮನೆಗಳು ಅಗತ್ಯಕ್ಕೆ ತಕ್ಕಂತೆ ಗಾಳಿಗಾಗಿ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಮಹಿಳೆಯರು ಮನೆಯ ಒಳಗಡೆಯೇ ಇರಬೇಕಾಗಿರುವುದರಿಂದ ಅವರು ಸ್ವಚ್ಛ ಗಾಳಿ ಸೇವನೆಯಿಂದ ವಂಚಿತರಾಗುತ್ತಾರೆ. ಮನೆ ಮುಂದಿನ ವರಾಂಡವನ್ನು ಸಾಮಾನ್ಯವಾಗಿ ಪುರುಷರು ಕುಳಿತುಕೊಳ್ಳಲು, ಮಲಗಲು, ಆಹಾರ ಸೇವನೆಗೆ ಬಳಸುತ್ತಾರೆ.

ತಾಲ್ಲೂಕುವಾರು ಗಮನಿಸುವುದಾದರೆ, ಅಫಜಲಪುರ, ಜೇವರ್ಗಿ, ಶಹಾಪುರ, ಸುರಪುರ, ಯಾದಗಿರಿ ತಾಲ್ಲೂಕುಗಳಲ್ಲಿ ವಸತಿ ಸೌಲಭ್ಯಗಳು ಉತ್ತಮ ಸ್ಥಿತಿಯಲ್ಲಿಲ್ಲ. ಈ ತಾಲ್ಲೂಕುಗಳಲ್ಲಿ ಶೇ. 30ಕ್ಕಿಂತಲೂ ಕಡಿಮೆ ಜನರು ಶಾಶ್ವತ (ಪಕ್ಕಾ) ಮನೆಗಳಲ್ಲಿ ವಾಸಿಸುತ್ತಿದ್ದಾರೆ (ಜೇವರ್ಗಿ ಶೇ. 32). ಅತ್ಯಂತ ಕಡಿಮೆ ಅಂದರೆ ಶೇ. 17.7 ಸುರಪುರ ತಾಲ್ಲೂಕಿನಲ್ಲಿದ್ದರೆ ಮತ್ತು ಶಹಾಪುರ ತಾಲ್ಲೂಕುಗಳಲ್ಲಿ ಆ ಪ್ರಮಾಣ ಶೇ. 19.8 ರಷ್ಟಿದೆ.(ಕೋಷ್ಟಕವನ್ನು ನೋಡಿ) ಶಹಾಪುರ, ಯಾದಗಿರಿ, ಅಫಜಲಪುರ ಮತ್ತು ಸುರಪುರ ತಾಲ್ಲೂಕುಗಳಲ್ಲಿ ತಾತ್ಕಾಲಿಕ ಮನೆಗಳಲ್ಲಿ ವಾಸಿಸುವ ಜನರ ಪ್ರಮಾಣ ಅಧಿಕವಾಗಿದೆ.

ಅಫಜಲಪುರ ತಾಲ್ಲೂಕು ಒಂದನ್ನು ಹೊರತು ಪಡಿಸಿದರೆ, ಉಳಿದ ತಾಲ್ಲೂಕುಗಳಲ್ಲಿ ಯಾವಾಗಲೂ ಸಂಚಾರದಲ್ಲಿರುವ ಜನರ ಸಂಖ್ಯೆ ಅಧಿಕವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇಲ್ಲಿ ನೀರಾವರಿ ಅಭಿವೃದ್ಧಿ ಹೊಂದಿತ್ತಿರುವುದೇ ಇದಕ್ಕೆ ಕಾರಣವಾಗಿದೆ. ಈ ಪ್ರದೇಶಗಳ ಸುತ್ತಮುತ್ತಲಿನ ಜನ ಮುಖ್ಯವಾಗಿ ಆಂಧ್ರಪ್ರದೇಶದಿಂದ ಇಲ್ಲಿಗೆ ಕೃಷಿ ಕಾರ್ಮಿಕರ ಕೆಲಸಕ್ಕೆ ಬರುತ್ತಿದ್ದಾರೆ. ಈ

ಕೋಷ್ಟಕ 6.1

**ವಸತಿಗಳ ಶೇಕಡವಾರು ಹಂಚಿಕೆ(2001)**

| ಕ್ರ.ಸಂ. | ತಾಲ್ಲೂಕುಗಳು | ವಸತಿಗಳ ಶೇಕಡವಾರು ಹಂಚಿಕೆ (2001) | | | | | |
|---|---|---|---|---|---|---|---|
| | | ಒಟ್ಟು | | | ಗ್ರಾಮೀಣ | | |
| | | ಕಾಯಂ | ಅರೆ ಕಾಯಂ. | ಹಂಗಾಮಿ | ಕಾಯಂ | ಅರೆ ಕಾಯಂ. | ಹಂಗಾಮಿ |
| 1 | ಅಫಜಲಪುರ | 27.60 | 62.30 | 10.10 | 27.00 | 62.00 | 11.00 |
| 2 | ಅಳಂದ್ | 45.10 | 51.40 | 3.50 | 41.90 | 54.60 | 3.50 |
| 3 | ಚಿಂಚೋಳಿ | 95.60 | 3.10 | 1.30 | 95.30 | 3.30 | 1.40 |
| 4 | ಚಿತ್ತಾಪುರ | 95.70 | 3.70 | 0.60 | 94.50 | 4.90 | 0.60 |
| 5 | ಗುಲಬರ್ಗಾ | 89.00 | 10.00 | 1.00 | 77.60 | 20.20 | 2.20 |
| 6 | ಜೇವರ್ಗಿ | 32.10 | 64.80 | 3.10 | 26.70 | 70.00 | 3.30 |
| 7 | ಸೇಡಮ್ | 96.20 | 2.80 | 1.00 | 95.60 | 3.30 | 1.10 |
| 8 | ಶಹಾಪುರ | 19.80 | 65.90 | 14.30 | 15.60 | 69.30 | 15.10 |
| 9 | ಶೋರಾಪುರ | 17.70 | 72.80 | 9.50 | 15.40 | 74.60 | 10.00 |
| 10 | ಯಾದಗೀರ್ | 38.50 | 50.00 | 11.50 | 30.20 | 56.60 | 13.20 |
| | **ಜಿಲ್ಲೆ** | **59.49** | **35.34** | **5.13** | **50.30** | **43.35** | **6.31** |

ಮೂಲ: ಸೆನ್ಸಸ್ ಆಫ್ ಇಂಡಿಯಾ ಕರ್ನಾಟಕ 2001.

ಜನರು ಈ ತಾಲ್ಲೂಕುಗಳಲ್ಲಿ ಅರೆ ಶಾಶ್ವತ ಅಥವಾ ತಾತ್ಕಾಲಿಕ (ಕಚ್ಚಾ) ಮನೆಗಳಲ್ಲಿ ವಾಸಿಸುತ್ತಾರೆ. ಈ ರೀತಿಯ ಮನೆಗಳ ಸಮೂಹಗಳನ್ನು 'ಕ್ಯಾಂಪ್'ಗಳೆಂದು ಕರೆಯುತ್ತಾರೆ. ಪರಿಶಿಷ್ಟ ಪಂಗಡದ ಜನಸಂಖ್ಯೆಯು ಸಹ ಇಲ್ಲಿ ಹೆಚ್ಚಿದೆ. ಇವರು ತಾಂಡಾಗಳಲ್ಲಿ ವಾಸಿಸುತ್ತಿದ್ದು, ಇವರು ಅರೆ ಶಾಶ್ವತ ಮತ್ತು ತಾತ್ಕಾಲಿಕ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಈ ರೀತಿಯ ತಾಂಡಾಗಳು ಸಣ್ಣ ವಿಸ್ತೀರ್ಣದಲ್ಲಿದ್ದು ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿರುವುದಿಲ್ಲ. ಈ ಅಂಶಗಳಿಂದಾಗಿ ಈ ತಾಲ್ಲೂಕುಗಳಲ್ಲಿ ಅರೆ ಶಾಶ್ವತ ಮತ್ತು ತಾತ್ಕಾಲಿಕ ಮನೆಗಳಲ್ಲಿ ವಾಸಿಸುವವರ ಪ್ರಮಾಣ ಅಧಿಕವಾಗಿದೆ.

ಬಡತನದಿಂದಾಗಿ ಇವರ ವಸತಿಯ ಬಯಕೆಗಳು ಈಡೇರಿಲ್ಲ. ಈ ಸಂಗತಿಗಳನ್ನು ಮನಗಂಡು ಇತ್ತೀಚಿನ ವರ್ಷಗಳಲ್ಲಿ ಅನೇಕ ರೀತಿಯ ವಸತಿ ಯೋಜನೆಗಳನ್ನು ಪರಿಚಯಿಸಲಾಗಿದ್ದು, ಅವು ಜನರ ವಸತಿಯ ಸ್ಥಿತಿಗಳನ್ನು ಸುಧಾರಿಸಲು ನೆರವಾಗಿವೆ. ರಾಷ್ಟ್ರೀಯ ವಸತಿ ಮತ್ತು ವಾಸಸ್ಥಾನ ನೀತಿ 1998 ದೇಶದಲ್ಲಿ ಮತ್ತು ರಾಜ್ಯಗಳಲ್ಲಿ ವಿವಿಧ ವಸತಿ ಯೋಜನೆಗಳನ್ನು ಅನುಷ್ಠಾನದಲ್ಲಿ ತರಲು ಬುನಾದಿಯನ್ನು ನಿರ್ಮಾಣ ಮಾಡಿಕೊಟ್ಟಿತು. ರಾಜ್ಯ ಸರಕಾರವು 1993–94ರಲ್ಲಿ ಆಶ್ರಯ ಯೋಜನೆ ಮತ್ತು ಅಂಬೇಡ್ಕರ್ ವಸತಿ ಕಾರ್ಯಕ್ರಮಗಳನ್ನು ಪ್ರಾರಂಭಿಸಿತು. ಇಂದಿರಾ ಆವಾಸ್ ಯೋಜನೆ ಮತ್ತು ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆಗಳು ಕೇಂದ್ರ ವಲಯಗಳಲ್ಲಿದ್ದು, ಇವುಗಳು ಬಡಜನರ ವಸತಿ ಸೌಕರ್ಯಗಳ ಬಗ್ಗೆ ಗಮನ ಹರಿಸುತ್ತವೆ.

ಕರ್ನಾಟಕ ಗೃಹ ಮಂಡಳಿಯು ಕಡಿಮೆ ಮತ್ತು ಮಧ್ಯಮ ವರಮಾನ ಹೊಂದಿರುವ ಕುಟುಂಬಗಳಿಗೆ ಕಡಿಮೆ ದರಗಳಲ್ಲಿ ವಸತಿ ಸೌಕರ್ಯಗಳನ್ನು ನೀಡುತ್ತಿದೆ. ಮತ್ತು ಕೊಳಚೆ ನಿರ್ಮೂಲನಾ ಮಂಡಳಿಯು ಕೊಳಚೆ ವಾಸಿಗಳ ಬಗ್ಗೆ ಕಾಳಜಿ ವಹಿಸುತ್ತದೆ. ಹುಲ್ಲಿನ ಮೇಲ್ಛಾವಣಿಯುಳ್ಳ ಮನೆಗಳನ್ನು ಬದಲಾಯಿಸಲು ನೆರಳಿನ ಭಾಗ್ಯ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಕೆಳ ಮಧ್ಯಮ ವರ್ಗದ ವೇತನವನ್ನು ಪಡೆಯುತ್ತಿರುವವರಿಗೆ ಸ್ವಂತ ವಸತಿ ಸೌಲಭ್ಯ ಪಡೆಯಲು ಅನುಕೂಲವಾಗುವಂತೆ ಬ್ಯಾಂಕ್‌ಗಳು ಮತ್ತು ಹಣಕಾಸಿನ ಕಾರ್ಪೋರೇಶನ್‌ಗಳು ಸಾಲವನ್ನು ನೀಡುವುದರ ಮೂಲಕ ನೆರವಾಗುತ್ತಿದೆ.

## ವಸತಿ ಯೋಜನೆಗಳ ಅನುಷ್ಠಾನ

- ಜಿಲ್ಲೆಯಲ್ಲಿ ರಾಜ್ಯ ಸರಕಾರದ ಅಂಬೇಡ್ಕರ್ ಮತ್ತು ಆಶ್ರಯ ಯೋಜನೆಗಳು ಮತ್ತು ಕೇಂದ್ರ ಸರಕಾರದ ಇಂದಿರಾ ಯೋಜನೆ, ನವಗ್ರಾಮ, ದೇವದಾಸಿಯರ ವಸತಿ ಯೋಜನೆಗಳು 2001–2004ರ ಅವಧಿಯಲ್ಲಿ ಅನುಷ್ಠಾನಗಳೊಂಡಿವೆ. ಈ ಯೋಜನೆಗಳು ಪ್ರಸ್ತುತ ಜಾರಿಯಲ್ಲಿಲ್ಲ.
- ವಸತಿ ಯೋಜನೆಗಳ ಅನುಷ್ಠಾನವು ಮಂದಗತಿಯಲ್ಲಿದೆ. ವಿವಿಧ ಯೋಜನೆಗಳ ಭೌತಿಕ ಮತ್ತು ಹಣಕಾಸಿನ ಸಾಧನೆಗಳು ಅತ್ಯಂತ ಕಡಿಮೆ ಇರುವುದು ಇದನ್ನು ದೃಢಪಡಿಸುತ್ತದೆ. ಯಾವ ವರ್ಷದಲ್ಲಿ ಯೋಜನೆಯನ್ನು ಆರಂಭಿಸಲಾಗಿದೆಯೋ ಅದೇ ವರ್ಷದಲ್ಲಿ ಅದನ್ನು ಪೂರ್ಣಗೊಳಿಸಲು ಸಾಧ್ಯವಾಗಿಲ್ಲ. ಅಂಬೇಡ್ಕರ್ ಯೋಜನೆ ಅಡಿಯಲ್ಲಿ 2003–2004ರಲ್ಲಿ ಮಂಜೂರಾದ ವಸತಿಗಳು 2006–07ನೇ ವರ್ಷದಲ್ಲಿಯೂ ಸಹ ಪೂರ್ಣಗೊಂಡಿಲ್ಲ. ಹಣಕಾಸಿನ ಪ್ರಗತಿಯು ಸಹ ಇದಕ್ಕೆ ಭಿನ್ನವಾಗಿಲ್ಲ. 2003–04, 2005–06ರಲ್ಲಿ ಮಂಜೂರಾದ ಹಣಕಾಸನ್ನು 2006–07ನೇ ವರ್ಷದಲ್ಲಿ ಸಹ ಪೂರ್ಣವಾಗಿ ಬಳಸಿಕೊಂಡಿಲ್ಲ. ಇತರೆ ಯೋಜನೆಗಳಿಗೆ ಹೋಲಿಸಿದರೆ ಇಂದಿರಾ ಆವಾಸ್ ಯೋಜನೆಯ ಭೌತಿಕ ಮತ್ತು ಹಣಕಾಸಿನ ಪ್ರಗತಿಯು ಉತ್ತಮವಾಗಿದೆ.
- ವಸತಿ ಯೋಜನೆಗಳ ಕುರಿತಂತೆ ಅನೇಕ ದೂರುಗಳಿವೆ. ಗ್ರಾಮ ಸಭೆಗಳ ಮೂಲಕ ಫಲಾನುಭವಿಗಳ ಆಯ್ಕೆ ಆಗುತ್ತಿಲ್ಲ. ವಸತಿಗಳ ಗುಣಮಟ್ಟವು ನಿರ್ದಿಷ್ಟ ಪ್ರಮಾಣದಲ್ಲಿರುವುದಿಲ್ಲ. ಅಂಬೇಡ್ಕರ್ ಯೋಜನೆಯಲ್ಲಿ ನಿರ್ಮಿಸಲಾದ ಮನೆಗಳು ಹಳ್ಳಿ / ವಸತಿ ಪ್ರದೇಶಗಳಿಗಿಂತಲೂ ದೂರದಲ್ಲಿದೆ. ಅಲ್ಲದೇ ಅವುಗಳಿಗೆ ನೀರು

ಮತ್ತು ವಿದ್ಯುಚ್ಛಕ್ತಿಗಳ ಪೂರೈಕೆ ಇಲ್ಲ. ಕಾಲಾಂತರದಲ್ಲಿ ಈ ಮನೆಗಳು ಖಾಲಿ ಇದ್ದು, ಕಟ್ಟಡಗಳಿಗೆ ಹಾನಿಯಾಗುತ್ತಿದೆ. ಹಣಕಾಸನ್ನು ವಿಳಂಬವಾಗಿ ಬಿಡುಗಡೆ ಮಾಡುತ್ತಿರುವುದರಿಂದ ಹಣಕಾಸಿನ ಬಳಕೆ ಸಹ ಮಂದಗತಿಯಲ್ಲಿದೆ. ವಸತಿಗಳ ನಿರ್ವಹಣೆ ಉತ್ತಮವಾಗಿಲ್ಲ ಅಥವಾ ಫಲಾನುಭವಿಗಳಿಗೆ ನಿರ್ವಹಣೆಗಾಗಿ ನೀಡಲಾಗುವ ನೆರವಿನ ಅನುಪಾಲನೆಯು ಸಹ ತೃಪ್ತಿಕರವಾಗಿಲ್ಲ.

## ಆತಂಕಕಾರಿ ಸಂಗತಿಗಳು

- ಯೋಜನೆಗಳ ಅನುಷ್ಠಾನದ ಪ್ರಗತಿಯು ಅತ್ಯಂತ ಮಂದಗತಿಯಲ್ಲಿದೆ. ಇದರ ಫಲವಾಗಿ ಹಣಕಾಸನ್ನು ಪೂರ್ಣ ಬಳಸುವಲ್ಲಿ ವಿಳಂಬವಾಗುತ್ತದೆ. ಅಲ್ಲದೇ ನಂತರದಲ್ಲಿ ಬರಬೇಕಾದ ಹಣಕಾಸಿನ ಪೂರೈಕೆಯ ಮೇಲೆ ಸಹ ಅದರ ಪ್ರಭಾವ ಬೀರುತ್ತದೆ. ಅಲ್ಲದೇ ಬಡಜನರಿಗೆ ದೊರೆಯಬೇಕಾದ ವಸತಿ ಸೌಕರ್ಯಗಳಲ್ಲಿ ಸಹ ಮಂದಗತಿಯ ಪ್ರವೃತ್ತಿ ಕಂಡುಬರುತ್ತದೆ. ಫಲಾನುಭವಿಗಳ ಆಯ್ಕೆಯಲ್ಲಿಯ ತೊಂದರೆಗಳು, ನಿಯಮಗಳು, ಆಡಳಿತಾತ್ಮಕ ಅನುಮತಿ ನೀಡುವಲ್ಲಿ ವಿಳಂಬ ಮುಂತಾದ ಕಾರಣಗಳಿಂದಾಗಿ ಕೆಲಸದಲ್ಲಿ ನಿಧಾನಗತಿಯ ಪ್ರಗತಿ ಕಂಡುಬರುತ್ತಿದೆ. ವಸತಿಗಳ ಗುಣಮಟ್ಟವು ಸಹ ಅತ್ಯಂತ ಕೆಳಮಟ್ಟದಲ್ಲಿದೆ. ಇದರ ಫಲವಾಗಿ ಮನೆಗಳು ತಕ್ಷಣವೇ ಕ್ಷೀಣವಾಗುತ್ತವೆ. ನಿಯಮಿತವಾಗಿ ಗ್ರಾಮ ಸಭೆಗಳ ಮೂಲಕ ಫಲಾನುಭವಿಗಳ ಆಯ್ಕೆ ಆಗುತ್ತಿಲ್ಲ. ಇದರಿಂದಾಗಿ ಬಡಜನರು ವಸತಿ ಯೋಜನೆಗಳಿಂದ ಪಡೆಯಬೇಕಾದ ಅನುಕೂಲಗಳ ದೃಷ್ಟಿಯಿಂದ ಹಿನ್ನಡೆಯಲ್ಲಿದ್ದಾರೆ.

## ಕುಡಿಯುವ ನೀರು ಮತ್ತು ನೈರ್ಮಲ್ಯ

ಕುಡಿಯುವ ನೀರು ಮತ್ತು ನೈರ್ಮಲ್ಯಗಳು ಸಾರ್ವಜನಿಕ ಸರಕುಗಳು. ಇವುಗಳು ಜನರ ಆರೋಗ್ಯ ಸ್ಥಿತಿಗತಿಯೊಂದಿಗೆ ಆಂತರಿಕ ಸಂಬಂಧವನ್ನು ಹೊಂದಿವೆ. ಆರೋಗ್ಯಕ್ಕೆ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯಗಳು ಮೂಲಭೂತವಾಗಿ ಬೇಕಾದ ಅಗತ್ಯಗಳು. ಹೀಗಾಗಿ ಇವೆರಡು ಆರೋಗ್ಯಕ್ಕೆ ಸಂಬಂಧಿಸಿದಂತೆ ಗರಿಷ್ಠ ಪ್ರಯೋಜನಕಾರಿ ಸಂಗತಿಗಳೆಂಬುದು ಸಾಬೀತಾದ ಸತ್ಯ ಸಂಗತಿಯಾಗಿದೆ. ಈ ಸಾರ್ವಜನಿಕ ಸರಕುಗಳು ನಿರ್ದಿಷ್ಟ ಪ್ರಮಾಣದಲ್ಲಿ ದೊರೆಯದೇ ಇರುವುದು ಮತ್ತು ಇವುಗಳಲ್ಲಿ ಕೀಳುಮಟ್ಟದ ಸರಕುಗಳಿಂದಾಗಿ ಅದು ಹಲವಾರು ಕಾಯಿಲೆಗಳಿಗೆ ಕಾರಣವಾಗುತ್ತದೆ. ಈ ಸ್ಥಿತಿಯಲ್ಲಿ ಜೀವನಾಧಾರವಾದ ನೀರು ಸಾವಿಗೂ ಸಹ ಕಾರಣವಾಗಬಹುದು. ಹಲವಾರು ಕಾಯಿಲೆಗಳು ಉದಾಹರಣೆಗೆ ಡೈಯೇರಿಯಾ, ಪೋಲಿಯೋ, ಮೈಸೆಲ್ಸ್, ಹೈಟಾಟಿಟಸ್, ಅಮಿಬಿಯಾಸಿಸ್, ಜಂತುಹುಳು, ಟೈಫಾಯಿಡ್ ಮುಂತಾದವುಗಳು ನೀರಿನ ಸೋಂಕಿನಿಂದ ಬರುವಂಥ ಕಾಯಿಲೆಗಳಾಗಿವೆ. ಆಹಾರ ಮತ್ತು ಸ್ವಚ್ಛತೆಗಳು ಸಹ ಆರೋಗ್ಯಕ್ಕೆ ತಮ್ಮ ಕೊಡುಗೆಯನ್ನು ನೀಡುತ್ತಿದ್ದರೂ, ಮಾನವ ದೇಹವು ರೋಗಕ್ಕೆ ತಾಗದಂತೆ ತಡೆಯುವಲ್ಲಿ ನೀರಿನ ಪಾತ್ರವು ಪ್ರಮುಖವಾದುದಾಗಿದೆ. ಮುಂದುವರೆಯುತ್ತಿರುವ ದೇಶಗಳಲ್ಲಿ ಶೇ.80ರಷ್ಟು ಕಾಯಿಲೆಗಳು, ಸ್ವಚ್ಛತೆ ಇಲ್ಲದೇ ಇರುವುದು, ನೀರಿನ ಮಲೀನತೆ, ನೈರ್ಮಲ್ಯದ ಕೊರತೆಯ ಫಲವಾಗಿ ಬರುತ್ತಿವೆ.

**ಕುಡಿಯುವ ನೀರು ಮತ್ತು ನೈರ್ಮಲ್ಯಗಳು ಸಾರ್ವಜನಿಕ ಸರಕುಗಳು. ಇವುಗಳು ಜನರ ಆರೋಗ್ಯ ಸ್ಥಿತಿಗತಿಯೊಂದಿಗೆ ಆಂತರಿಕ ಸಂಬಂಧವನ್ನು ಹೊಂದಿವೆ. ಆರೋಗ್ಯಕ್ಕೆ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯಗಳು ಮೂಲಭೂತವಾಗಿ ಬೇಕಾದ ಅಗತ್ಯಗಳು. ಹೀಗಾಗಿ ಇವೆರಡು ಆರೋಗ್ಯಕ್ಕೆ ಸಂಬಂಧಿಸಿದಂತೆ ಗರಿಷ್ಠ ಪ್ರಯೋಜನಕಾರಿ ಸಂಗತಿಗಳೆಂಬುದು ಸಾಬೀತಾದ ಸತ್ಯ ಸಂಗತಿಯಾಗಿದೆ.**

ಈ ಹಿನ್ನೆಲೆಯಲ್ಲಿ ಬಹು ಹಿಂದೆಯೇ ವಿಶ್ವ ಆರೋಗ್ಯ ಸಂಸ್ಥೆಯ ಡಾ. ಮಹರ್ ಅವರು ತಿಳಿಸಿದಂತೆ ಪ್ರತಿ ಸಾವಿರ ಜನರಿಗೆ ಇರುವ ಆಸ್ಪತ್ರೆಯ ಹಾಸಿಗೆಗಳಿಗಿಂತಲೂ ಪ್ರತಿ ಸಾವಿರ ಜನರಿಗೆ ಇರುವ ನಳಗಳ ಸಂಖ್ಯೆಯ ಆರೋಗ್ಯ ಸೂಚಿಯಾಗಬಲ್ಲದು. ಇದರೊಂದಿಗೆ ರಸಾಯನಿಕಗಳಿಂದ ಉಂಟಾಗುವ ನೀರಿನ ಮಾಲಿನ್ಯವು ಫ್ಲೋರೋಸಿಸ್, ಅರಸಿನಿಯೋಸಿಸ ಗಳಂಥ ಕಾಯಿಲೆಗಳಿಗೂ ಕಾರಣವಾಗುತ್ತದೆ. ಆದ್ದರಿಂದ ಮಾನವ ಜೀವನಕ್ಕೆ ಶುದ್ಧ ಕುಡಿಯುವ ನೀರು ದೊರೆಯುವಿಕೆಯು ಅತ್ಯಂತ ಅವಶ್ಯಕವಾಗಿ ಬೇಕಾದ ಅಂಶವಾಗಿದೆ. 'ಎಲ್ಲರಿಗೂ ಆರೋಗ್ಯ' ಘೋಷಣೆಗಿಂತಲೂ 'ಎಲ್ಲರಿಗೂ ಶುದ್ಧ ಕುಡಿಯುವ ನೀರು ಮತ್ತು ನೈರ್ಮಲ್ಯ' ಎಂಬುದನ್ನು ಮುಂಚಿತವಾಗಿ ಸೇರಿಸಿಕೊಳ್ಳುವುದು ಉತ್ತಮ.

ಗುಲಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಲಭ್ಯತೆ, ಅದರ ದೊರೆಗೊಳ್ಳುವಿಕೆ, ಗುಣಮಟ್ಟ, ಅಂತರ ಮತ್ತು ಕಾರ್ಯಾನುಷ್ಠಾನಗಳ ಮೂಲಕ ತಿಳಿದುಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಶೇ. 19.5 ಕುಟುಂಬಗಳಿಗೆ ಮಾತ್ರ ತಮ್ಮ ಆವರಣದಲ್ಲಿಯೇ ಕುಡಿಯುವ ನೀರು ದೊರೆಯುತ್ತಿದೆ. ಇದು ರಾಜ್ಯ ಸರಾಸರಿ ಪ್ರಮಾಣ ಶೇ.31ಕ್ಕಿಂತಲೂ ಕಡಿಮೆಯಾಗಿದೆ. ಇಲ್ಲಿ ಶೇ 44.8 ಕುಟುಂಬಗಳು ಕುಡಿಯುವ ನೀರಿಗಾಗಿ ತಮ್ಮ ಮನೆಯ ಆವರಣವನ್ನು ಬಿಟ್ಟು ಹೊರಗಡೆ ಹೋಗಬೇಕಾದ ಪರಿಸ್ಥಿತಿ ಇದೆ. (ಆವರಣದಿಂದ ಹೊರಗಡೆ ಎಂದರೆ, ಕುಡಿಯುವ ನೀರಿನ ಮೂಲವು ಗ್ರಾಮೀಣ ಪ್ರದೇಶದಲ್ಲಿ ವಾಸ ಸ್ಥಳದಿಂದ 500ಮೀ. ಅಂತರದಲ್ಲಿರುವುದೆಂದೂ ಮತ್ತು ನಗರ ಪ್ರದೇಶದಲ್ಲಿ ವಾಸಸ್ಥಳದಿಂದ 100ಮೀ ಅಂತರದಲ್ಲಿರುವುದೆಂದೂ ವ್ಯಾಖಾನಿಸಲಾಗಿದೆ) ಗ್ರಾಮೀಣ ಪ್ರದೇಶದಲ್ಲಿ ಶೇ.10ರಷ್ಟು ಕುಟುಂಬಗಳು ಮಾತ್ರ ತಮ್ಮ ಆವರಣದಲ್ಲಿಯೇ ಕುಡಿಯುವ ನೀರನ್ನು ಪಡೆಯುತ್ತಿವೆ. ಇದು ಕುಡಿಯುವ ನೀರಿಗೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವೆ ಇರುವ ಅಂತರವನ್ನು ಕಣ್ಣಿಗೆ ಕಾಣುವಂತೆ ತಿಳಿಸುತ್ತದೆ. ಗ್ರಾಮೀಣ ಜನತೆ ಕುಡಿಯುವ ನೀರಿನ ಅಗತ್ಯಕ್ಕಾಗಿ ನಳ, ಕೊಳವೆ ಬಾವಿ ಮತ್ತು ಬಾವಿಗಳಂಥ ಹಲವಾರು ಮೂಲಗಳನ್ನು ಅವಲಂಬಿಸಿದ್ದಾರೆ. ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಲಭ್ಯತೆಯು ಉತ್ತಮವಾಗಿದೆ. ಇಲ್ಲಿ ಶೇ. 46.9ರಷ್ಟು ಕುಟುಂಬಗಳು ತಮ್ಮ ಮನೆಯ ಆವರಣದಲ್ಲಿಯೇ ಕುಡಿಯುವ ನೀರನ್ನು ಪಡೆಯುತ್ತಿದ್ದಾರೆ. ಅಲ್ಲದೇ ನಗರ ಪ್ರದೇಶಗಳಲ್ಲಿ ಕೇವಲ ಶೇ.20.5ರಷ್ಟು ಕುಟುಂಬಗಳು ಮಾತ್ರ ಕುಡಿಯುವ ನೀರಿಗಾಗಿ ತಮ್ಮ ಆವರಣವನ್ನು ಬಿಟ್ಟು ಹೊರಗಡೆ ಹೋಗಬೇಕಾದ ಪರಿಸ್ಥಿತಿ ಇದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಇದರ ಶೇಕಡಾ ಪ್ರಮಾಣ ನಿರ್ದಿಷ್ಟವಾಗಿ ಎರಡು ಪಟ್ಟು ಇದೆ. ಅಂದರೆ ಶೇ. 40.9. ಆದ್ದರಿಂದ ಗ್ರಾಮೀಣ–ನಗರ ಪ್ರದೇಶಗಳ ನಡುವಿನ ಅಂತರ ಅಧಿಕಗೊಳ್ಳುತ್ತಿದೆ ಮತ್ತು ಗ್ರಾಮೀಣ ಕುಡಿಯುವ ನೀರಿನ ಪೂರೈಕೆಯು ತೃಪ್ತಿಕರವಾಗಿಲ್ಲ.

ನಗರ ಪ್ರದೇಶದಲ್ಲಿ ನಳವು ನೀರಿನ ಪ್ರಮುಖ ಮೂಲ (ಶೇ. 70.9 ಕುಟುಂಬಗಳು)ವಾಗಿದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ನಳ, ಕೊಳವೆಬಾವಿಗಳು ಮತ್ತು ಬಾವಿಗಳು ಎಲ್ಲವೂ ಕೂಡಿಕೊಂಡು ಕುಟುಂಬಗಳ ಕುಡಿಯುವ ನೀರಿನ ಅಗತ್ಯತೆಯನ್ನು ಪೂರೈಸುತ್ತಿವೆ. ಈ ಮೂಲಗಳಿಂದ ಕ್ರಮವಾಗಿ ಶೇ. 36.8, ಶೇ.33.6 ಮತ್ತು ಶೇ. 30ರಷ್ಟು ಕುಟುಂಬಗಳು ಕುಡಿಯುವ ನೀರನ್ನು ಪಡೆಯುತ್ತಿದೆ. ಗ್ರಾಮೀಣ ಜನತೆಯ ಸುಮಾರು ಶೇ. 3.8ರಷ್ಟು ಪ್ರಮಾಣವು ಕುಡಿಯುವ ನೀರಿಗಾಗಿ ಕೆರೆಗಳು, ಹೊಂಡಗಳು, ನದಿಗಳು, ತೊರೆಗಳು ಮತ್ತು ಕಾಲುವೆಗಳ ಮೂಲವನ್ನು ಅವಲಂಬಿಸಿವೆ. ಆದರೆ ಈ ಮೂಲಗಳ ನೀರು ಕುಡಿಯುವುದಕ್ಕೆ ಅಷ್ಟು ಸುರಕ್ಷಿತವಾಗಿಲ್ಲ. ಮುಂದುವರಿದು ಶೇ. 20ರಷ್ಟು ಗ್ರಾಮೀಣ ಜನರು ತೆರೆದ ಬಾವಿಗಳನ್ನು ಅವಲಂಬಿಸಿದ್ದು, ಇದು ಸಹ ಕುಡಿಯುವ ನೀರಿಗಾಗಿ ಇರುವ ಸುರಕ್ಷಿತವಾದ ಮೂಲವಲ್ಲ. ಈ ಮೂಲದಿಂದ ದೊರೆಯುವ ನೀರು ಕುಡಿಯುವುದಕ್ಕೆ ಸುರಕ್ಷಿತವಾಗಿಲ್ಲ.

ಅಸ್ತಿತ್ವದಲ್ಲಿರುವ ಸರಕಾರಿ ಯೋಜನೆಗಳು, ಗ್ರಾಮೀಣ ಪ್ರದೇಶದಲ್ಲಿ ಶೇ. 75 ಕುಟುಂಬಗಳಿಗೆ ಮಾತ್ರ ಅನ್ವಯಿಸುತ್ತದೆ.

ಕೋಷ್ಟಕ 6.2

**ಕುಡಿಯುವ ನೀರಿನ ನೆಲೆಗನುಗುಣವಾಗಿ ಮನೆಗಳ ಹಂಚಿಕೆ – 2001**

| ನೆಲೆ | ಒಟ್ಟು | ಶೇಕಡಾ | ಗ್ರಾಮೀಣ | ಶೇಕಡಾ | ಗ್ರಾಮೀಣ | ಶೇಕಡಾ |
|---|---|---|---|---|---|---|
| ಮನೆಯ ಆವರಣದೊಳಗೆ | 1.06194 | 19.5 | 40297 | 10.0 | 65897 | 46.9 |
| ಮನೆಯ ಆವರಣದ ಹತ್ತಿರ | 24322 | 44.8 | 17449 | 49.0 | 45823 | 32.6 |
| ಮನೆಯ ಆವರಣದಿಂದ ದೂರ | 193471 | 35.7 | 164560 | 40.9 | 28911 | 20.5 |

ಮೂಲ: ರಿಜಿಸ್ಟ್ರಾರ್ ಆಫ್ ಇಂಡಿಯಾ : ಸೆನ್ಸಸ್ ಆಫ್ ಇಂಡಿಯಾ 2001: ಮನೆಗಳ ವಿವರ, ಕರ್ನಾಟಕ.

### ಕುಡಿಯುವ ನೀರಿನ ನೆಲೆಗನುಗುಣವಾಗಿ ಮನೆಗಳ ಹಂಚಿಕೆ – 2001




ಕೋಷ್ಟಕ 6.3

### ಕುಡಿಯುವ ನೀರಿನ ಮೂಲಗಳು

| ಕುಡಿಯುವ ನೀರಿನ ಮೂಲಗಳು | ಒಟ್ಟು | ಶೇಕಡಾ | ಗ್ರಾಮೀಣ | | ನಗರ | |
|---|---|---|---|---|---|---|
| | | | ಒಟ್ಟು | ಶೇಕಡಾ | ಒಟ್ಟು | ಶೇಕಡಾ |
| ಕೈಪಂಪುಗಳು | 1552 | 28.6 | 1351 | 38.3 | 201 | 20.00 |
| ನಳ | 2478 | 45.6 | 1481 | 36.8 | 997 | 70.9 |
| ಕೊಳವೆ ಬಾವಿಗಳು | 359 | 6.6 | 230 | 5.7 | 128 | 9.1 |
| ಬಾವಿಗಳು | 8.6 | 15.9 | 807 | 20.0 | 5.3 | 3.8 |
| ಇತರೆ ಮೂಲಗಳು | 179 | 3.3 | 152 | 3.8 | 26 | 1.9 |

ಮೂಲ: ರಿಜಿಸ್ಟ್ರಾರ್ ಆಫ್ ಇಂಡಿಯಾ : ಸೆನ್ಸಸ್ ಆಫ್ ಇಂಡಿಯಾ 2001 : ಮನೆಗಳ ವಿವರ, ಕರ್ನಾಟಕ.

ಅಲ್ಲದೇ, ಕೊಳವೆಗಳಲ್ಲಿಯ ಸೋರಿಕೆ ಕ್ರಮಬದ್ಧವಲ್ಲದ ವಿದ್ಯುತ್ ಪೂರೈಕೆಗಳ ಕಾರಣಗಳಿಂದಾಗಿ ಕುಡಿಯುವ ನೀರಿನ ಪೂರೈಕೆಯು ಸಹ ವ್ಯತಿರಿಕ್ತವಾಗಿದೆ. ಗ್ರಾಮೀಣ ಜನರು ಅಸುರಕ್ಷಿತ ಮೂಲಗಳ ನೀರನ್ನು ಬಳಸುತ್ತಿದ್ದಾರೆ.

## ಗ್ರಾಮೀಣ ಕುಡಿಯುವ ನೀರಿನ ಪೂರೈಕೆ

ಪ್ರತಿದಿನ, ಪ್ರತಿಯೊಬ್ಬರಿಗೂ ಕನಿಷ್ಠ 55 ಲೀಟರ್ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕೆಂಬುದು ಕರ್ನಾಟಕದಲ್ಲಿ, ಗ್ರಾಮೀಣ ನೀರು ಪೂರೈಕೆ ಯೋಜನೆಗಳ ಪ್ರಮುಖ ಉದ್ದೇಶವಾಗಿದೆ. ಈ ಗುರಿಯನ್ನು ಸಾಧಿಸುವುದಕ್ಕಾಗಿ ಸರಕಾರಿ ನೀತಿಗಳ ಪ್ರಕಾರ 500 ಜನಸಂಖ್ಯೆಕ್ಕಿಂತಲೂ ಕಡಿಮೆ

ಇರುವ ಜನವಸತಿ ಪ್ರದೇಶಗಳಿಗೆ ಕೊಳವೆ ಬಾವಿಗಳ ಕೈಪಂಪುಗಳನ್ನು ಒದಗಿಸಲಾಗುತ್ತಿದೆ. ಜನಸಂಖ್ಯೆ 500ರಿಂದ 1000ವಿರುವ ಜನವಸತಿ ಪ್ರದೇಶಗಳಿಗೆ ಕಿರು ನೀರು ಪೂರೈಕೆ ಯೋಜನೆಗಳ ಮೂಲಕ ನೀರನ್ನು ಒದಗಿಸಲಾಗುತ್ತದೆ ಮತ್ತು 1000ಕ್ಕಿಂತಲೂ ಅಧಿಕ ಜನಸಂಖ್ಯೆ ಇರುವ ಜನವಸತಿ ಪ್ರದೇಶಗಳಿಗೆ ನಳಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ.

ಜಿಲ್ಲೆಯಲ್ಲಿ ಹಲವಾರು ಯೋಜನೆಗಳು ಅನುಷ್ಠಾನಗೊಂಡಿರುವುದರಿಂದ ಕುಡಿಯುವ ನೀರಿನ ಲಭ್ಯತೆಯು ಅಧಿಕವಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಜಿಲ್ಲೆಯ ವಿವಿಧ' ಪ್ರದೇಶದಲ್ಲಿರುವ ಯೋಜನೆಗಳನ್ನು ಕೋಷ್ಟಕ 6.4 ಮತ್ತು 6.5ರಲ್ಲಿ ಸೂಚಿಸಲಾಗಿದೆ.

ಯೋಜನೆಗಳ ಲಭ್ಯತೆಯು ಅಗತ್ಯಕ್ಕಿಂತಲೂ ಕೆಳಮಟ್ಟದಲ್ಲಿದೆ. ಅಗತ್ಯವಾಗಿರುವ ಕಿರು ನೀರು ಸರಬರಾಜು ಯೋಜನೆಗಳು 3037. ಆದರೆ ಇನ್ನೂ 1666 ಯೋಜನೆಗಳ ಕೊರತೆ ಇದೆ. ಮತ್ತು ಕೊಳವೆ ನೀರಿಗೆ ಸಂಬಂಧಿಸಿದಂತೆ 2278 ಯೋಜನೆಗಳ್ ಅಗತ್ಯವಿದೆ. ಆದರೆ ಪ್ರಸ್ತುತ ಇರುವ ಕೊಳವೆ ನೀರಿವ ಯೋಜನೆಗಳು ಕೇವಲ 985 (ಜನಸಂಖ್ಯೆಯ ಆಧಾರದ ಮೇಲೆ ಅಂದಾಜಿಸಲಾಗಿದೆ).

ಅಫಜಲಪುರ, ಶಹಾಪುರ, ಸುರಪುರ, ಚಿತ್ತಾಪುರ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿ ಬೇಸಿಗೆ ಕಾಲದಲ್ಲಿ ಅಸುರಕ್ಷಿತ ಮೂಲಗಳಾದ ನದಿ, ಹೊಂಡಗಳು ಮೇಲೆ ಬಹುಪಾಲು ಕುಟುಂಬಗಳು ಕುಡಿಯುವ ನೀರಿಗಾಗಿ ಅವಲಂಬನೆ ಹೊಂದಿವೆ. ಬೇಸಿಗೆ ಕಾಲದಲ್ಲಿ ಎಲ್ಲಾ ತಾಲ್ಲೂಕುಗಳು ಕುಡಿಯುವ ಕೊರತೆಯನ್ನು ಎದುರಿಸುತ್ತವೆ. ಸುಮಾರು 244 ಜನವಸತಿ ಪ್ರದೇಶಗಳು (ಶೇ. 20.3) ರಸಾಯನಿಕಗಳ ಪ್ರಭಾವಕ್ಕೆ ಒಳಗಾದ ನೀರಿನ ಪೂರೈಕೆಯು ಸಮಸ್ಯೆಯನ್ನು ಎದುರಿಸುತ್ತಿದೆ. ಅವೆಂದರೆ

1. ಉಪ್ಪು ನೀರು ಹೊಂದಿರುವ ಗ್ರಾಮಗಳು – 27
2. ಕುಡಿಯುವ ನೀರಿನಲ್ಲಿ ಫ್ಲೋರೈಡ್ ಅಂಶಗಳನ್ನು ಹೊಂದಿರುವ ಹಳ್ಳಿಗಳು – 38
3. ನಾರುಹುಣ್ಣಿನ ಹುಳದಿಂದ ಬಾದಿತವಾಗಿರುವ ಹಳ್ಳಿಗಳು – 179

ಚಿತ್ತಾಪುರ ಮತ್ತು ಸುರಪುರ ತಾಲ್ಲೂಕುಗಳ ಬಹಳಷ್ಟು ಗ್ರಾಮಗಳು ರಸಾಯನಿಕಗಳಿಂದ ಬಾಧಿತವಾದ ನೀರಿನ ಪೂರೈಕೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಇದು ಜನರ ಆರೋಗ್ಯದ ಮೇಲೆ ತನ್ನ ಪರಿಣಾಮವನ್ನು ಬೀರುತ್ತವೆ.

ನಗರದಲ್ಲಿ ನೀರಿನ ಸಂಪರ್ಕಗಳ ಸಂಖ್ಯೆ 23497. ಕೇವಲ ಶೇ. 75ರಷ್ಟು ಕುಟುಂಬಗಳಿಗೆ ಮಾತ್ರ ನೀರು ಪೂರೈಕೆ ಯೋಜನೆ ಅಡಿಯಲ್ಲಿ ನೀರನ್ನು ಪೂರೈಸಲಾಗುತ್ತಿದೆ. ನಳಗಳ ಮೂಲಕ ನೀರಿನ ಪೂರೈಕೆ, ಮನೆ ಸಂಪರ್ಕ ಹೊಂದಿದೆ ನಳಗಳು, ಸಾರ್ವಜನಿಕ ನಳಗಳು, ಕೊಳವೆ ಬಾವಿಗಳು, ಖಾಸಗಿ ಕೊಳವೆ ಬಾವಿಗಳು,

**ಚಿತ್ತಾಪುರ ಮತ್ತು ಸುರಪುರ ತಾಲ್ಲೂಕುಗಳು ಬಹಳಷ್ಟು ಗ್ರಾಮಗಳು ರಸಾಯನಿಕಗಳಿಂದ ಬಾಧಿತವಾದ ನೀರಿನ ಪೂರೈಕೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಇದು ಜನರ ಆರೋಗ್ಯದ ಮೇಲೆ ತನ್ನ ಪರಿಣಾಮವನ್ನು ಬೀರುತ್ತವೆ.**

ಕೋಷ್ಟಕ 6.4

**ಗುಲಬರ್ಗಾ ಜಿಲ್ಲೆಯಲ್ಲಿ ಕುಡಿಯುವ ನೀರಿನ ಕಾರ್ಯ ಯೋಜನೆಗಳ ಪ್ರಗತಿ – 1999–2006**

| ವರ್ಷಗಳು | ಕೊಳವೆ ಬಾವಿಗಳು | ಕಿರು ಕುಡಿಯುವ ನೀರಿನ ಯೋಜನೆಗಳು | ಕೊಳವೆ ನೀರಿನ ಯೋಜನೆಗಳು |
|---|---|---|---|
| 1999–2000 | 7145 | 1056 | 832 |
| 2001–2002 | 8077 | 1060 | 684 |
| 2002–2003 | 8832 | 1238 | 842 |
| 2003–2004 | 9463 | 1200 | 846 |
| 2004–2005 | 11277 | 1371 | 956 |
| 2005–2006 | 11588 | 1389 | 985 |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿಅಂಶಗಳ ನೋಟ : ವಿವಿಧ ವರ್ಷಗಳು.

ಖಾಸಗಿ ಟ್ಯಾಂಕ್‌ಗಳು ಇವೆಲ್ಲವೂ ಅಸ್ತಿತ್ವದಲ್ಲಿರುವ ನೀರಿನ ಪೂರೈಕೆ ಯೋಜನೆಯಲ್ಲಿ ಒಳಗೊಂಡಿರುತ್ತವೆ. ಮನೆಗೆ ನಳ ಸಂಪರ್ಕ ಹೊಂದಿದ ಕುಟುಂಬಗಳಿಗೆ ಮನೆ ಬಳಕೆಗಾಗಿ ತಿಂಗಳಿಗೆ ರೂ. 45 ಶುಲ್ಕ ವಿಧಿಸಲಾಗುತ್ತಿದೆ. ಜಿಲ್ಲೆಯು ಪದೇ ಪದೇ ಬರಗಾಲಕ್ಕೆ ಒಳಗಾಗುತ್ತಿರುತ್ತದೆ. ಇದರಿಂದಾಗಿ ಜಿಲ್ಲೆಯು ಬೇಸಿಗೆ ಕಾಲದಲ್ಲಿ ನೀರಿನ ಕೊರತೆಯನ್ನು ಅನುಭವಿಸುತ್ತದೆ. ಈ ಅವಧಿಯಲ್ಲಿ ಖಾಸಗಿ ನೀರು ಪೂರೈಕೆದಾರರಿಗೆ ಹೆಚ್ಚಿನ ಬೇಡಿಕೆ ಇರುತ್ತದೆ. ಈ ಪೂರೈಕೆದಾರರು ಟ್ಯಾಂಕ್‌ಗಳ ಮೂಲಕ ಕುಡಿಯುವುದಕ್ಕೂ ಸಹ ನೀರನ್ನು ಪೂರೈಸುತ್ತಾರೆ. ಇಂಥ ವ್ಯವಸ್ಥೆಯನ್ನು ಸಾಮಾನ್ಯವಾಗಿ ಮಧ್ಯಮ ಮತ್ತು ಮೇಲ್ವರ್ಗದ ಜನರು ಬಳಸಿಕೊಳ್ಳುತ್ತಾರೆ. ಬಡ ಮತ್ತು ಕೆಳ ಮಧ್ಯಮ ವರ್ಗಕ್ಕೆ ಸೇರಿದ ಕುಟುಂಬಗಳು ದೂರದ ಪ್ರದೇಶಗಳಿಂದ ನೀರನ್ನು ಹೊತ್ತು ತರುತ್ತಾರೆ. (ನಗರ ಪ್ರದೇಶದ ಶೇ.60ರಷ್ಟು ಪ್ರದೇಶ ಮಾತ್ರ ನೈರ್ಮಲ್ಯ ವ್ಯವಸ್ಥೆಗೆ ಒಳಗಾಗಿದೆ.

ಕೋಷ್ಟಕ 6.5

## ತಾಲ್ಲೂಕುವಾರು ಯೋಜನೆಗಳ ಹಂಚಿಕೆ 2005–06

| ತಾಲ್ಲೂಕು | ಕೊಳವೆ ಬಾವಿಗಳು | ಕಿರು ನೀರು ಯೋಜನೆಗಳು | ಕೊಳವೆ ನೀರು ಯೋಜನೆಗಳು |
|---|---|---|---|
| ಅಫಜಲಪುರ | 1089 | 114 | 87 |
| ಅಳಂದ್ | 1185 | 121 | 105 |
| ಚಿಂಚೋಳಿ | 1033 | 125 | 71 |
| ಚಿತ್ತಾಪುರ | 1310 | 123 | 114 |
| ಗುಲಬರ್ಗಾ | 1127 | 183 | 127 |
| ಜೇವರ್ಗಿ | 1369 | 113 | 84 |
| ಸೇಡಮ್ | 826 | 92 | 86 |
| ಶಹಾಪುರ | 1183 | 144 | 94 |
| ಶೋರಾಪುರ | 1082 | 103 | 91 |
| ಯಾದಗೀರ್ | 1384 | 271 | 126 |
| **ಜಿಲ್ಲೆ** | **11588** | **1389** | **985** |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿಅಂಶಗಳ ನೋಟ : 2006

ಚೌಕಟ್ಟು 6.1

### ತಾಲ್ಲೂಕುಗಳಲ್ಲಿ ನೀರಿನ ಲಭ್ಯತೆ

ಗುಲಬರ್ಗಾ ತಾಲ್ಲೂಕನ್ನು ಹೊರತುಪಡಿಸಿದರೆ, ಕುಟುಂಬಗಳ ಆವರಣದಲ್ಲಿಯೇ ದೊರೆಯುವ ನೀರಿನ ಲಭ್ಯತೆಯ ಪ್ರಮಾಣವು ಎಲ್ಲಾ ತಾಲ್ಲೂಕುಗಳಲ್ಲಿಯೂ ಹೀನಾಯ ಸ್ಥಿತಿಯಲ್ಲಿದೆ. ಎಂಟು ತಾಲ್ಲೂಕುಗಳಲ್ಲಿ ಸ್ಥಿತಿಯು ಜಿಲ್ಲೆಯ ಸರಾಸರಿ ಪ್ರಮಾಣ ಶೇ.19ಕ್ಕಿಂತಲೂ ಕೆಳಮಟ್ಟದಲ್ಲಿದೆ. ಗ್ರಾಮೀಣ ಪ್ರದೇಶಗಳ ಸ್ಥಿತಿಯು ಇದಕ್ಕಿಂತಲೂ ಹೀನಾಯವಾಗಿದ್ದು, ಶೇ. 10ರಷ್ಟು ಕುಟುಂಬಗಳು ಮಾತ್ರ ತಮ್ಮ ಆವರಣದಲ್ಲಿ ನೀರನ್ನು ಪಡೆಯುತ್ತಿವೆ. ಚಿತ್ತಾಪುರ, ಜೇವರ್ಗಿ, ಶಹಾಪುರ ಮತ್ತು ಸುರಪುರಗಳಂಥ ತಾಲ್ಲೂಕುಗಳಲ್ಲಿ ಸ್ಥಿತಿಯು ಜಿಲ್ಲೆಯ ಸರಾಸರಿಗಿಂತಲೂ ಇನ್ನು ಕೆಳಮಟ್ಟದಲ್ಲಿದೆ. ಇಲ್ಲಿ ಶೇ.41ರಷ್ಟು ಗ್ರಾಮೀಣ ಕುಟುಂಬಗಳು 500 ಮೀ. ಅಂತರ ಮತ್ತು ಅದಕ್ಕಿಂತಲೂ ದೂರದ ಪ್ರದೇಶಗಳಿಂದ ನೀರನ್ನು ಹೊತ್ತು ತರುತ್ತಾರೆ. ಇಂಥ ಕುಟುಂಬಗಳ ಪ್ರಮಾಣವು ಚಿತ್ತಾಪುರ ಮತ್ತು ಶಹಾಪುರಗಳಲ್ಲಿ ಶೇ. 48, ಜೇವರ್ಗಿ ಮತ್ತು ಸುರಪುರಗಳಲ್ಲಿ ಶೇ. 44ರಷ್ಟು ಮತ್ತು ಆಳಂದ ಮತ್ತು ಚಿಂಚೊಳಿ ತಾಲ್ಲೂಕುಗಳಲ್ಲಿ ಶೇ. 40ರಷ್ಟು ಇದೆ.

ಚೌಕಟ್ಟು 6.2

| ನಗರ ಪ್ರದೇಶದಲ್ಲಿ ನೀರು ಪೂರೈಕೆ – ಗುಲಬರ್ಗಾ ನಗರದ ಅಧ್ಯಯನದ ತಥ್ಯಗಳು |
| --- |
| ಗುಲಬರ್ಗಾ ನಗರವು ಗುಲಬರ್ಗಾ ಜಿಲ್ಲೆಯ ಕೇಂದ್ರ ಸ್ಥಾನವಾಗಿದೆ. ಅಲ್ಲದೇ ಇದು ಗುಲಬರ್ಗಾ ವಿಭಾಗದ ಕೇಂದ್ರಸ್ಥಾನವೂ ಆಗಿದೆ. ನಗರವು ಇತ್ತೀಚಿನ ದಿನಗಳಲ್ಲಿ ತೀವ್ರ ಪ್ರಮಾಣದಲ್ಲಿ ಬೆಳೆಯುತ್ತಿದೆ. ಶೈಕ್ಷಣಿಕ ಸಂಸ್ಥೆಗಳು, ಸರಕಾರಿ ಕಛೇರಿಗಳು, ವ್ಯಾಪಾರ ಮತ್ತು ವಾಣಿಜ್ಯಗಳ ಬೆಳವಣಿಗೆ ಮುಂತಾದವುಗಳು ನಗರವು ಬೆಳವಣಿಗೆಯಾಗುತ್ತಿರುವುದಕ್ಕೆ ಪ್ರಮುಖ ಕಾರಣಗಳಾಗಿವೆ. ಈ ನಗರದ 2001ರಲ್ಲಿ ಜನಸಂಖ್ಯೆ 4.3 ಲಕ್ಷ ಎಂದು ಅಂದಾಜಿಸಲಾಗಿದೆ. ಜನಸಂಖ್ಯೆಯ ಬೆಳವಣಿಗೆಯನ್ನು ಕೋಷ್ಟಕ 6.6ರಲ್ಲಿ ನೀಡಲಾಗಿದೆ. |

ಅಧ್ಯಯನದಲ್ಲಿ ಸೇರಿದ ಎಲ್ಲ ಕಾಲೋನಿಗಳಲ್ಲಿ ವಿವಿಧ ಮೂಲಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.

ಈ ಕಾಲೋನಿಗಳಲ್ಲಿ ಜಾಗೃತಿ ಕಾಲೋನಿ ನಗರದ ವಿಸ್ತರಣಾ ಪ್ರದೇಶದಲ್ಲಿರುವ ಕಾಲೋನಿ, ಈ ಕಾಲೋನಿಯಲ್ಲಿ ಕೊಳವೆ ಬಾವಿಗಳು ಮತ್ತು ಕಿರು ನೀರು ಪೂರೈಕೆ ಯೋಜನೆ ಮತ್ತು ಸಾರ್ವಜನಿಕ ನಳಗಳ ಮೂಲಕ ನೀರನ್ನು ಪೂರೈಸಲಾಗುತ್ತಿದೆ. ಸುಂದರ ನಗರವು ಕೊಳಚೆ ಪ್ರದೇಶವಾಗಿದ್ದು, ಇಲ್ಲಿ ಬಡ ಮತ್ತು ಕೆಳವರ್ಗದ ಜನರು ವಾಸಿಸುತ್ತಾರೆ. ಇಲ್ಲಿ ಬಹುಪಾಲು ಕುಟುಂಬಗಳು ಸಾರ್ವಜನಿಕ ನಳಗಳ ಮೂಲಕ ನೀರನ್ನು ಹೊತ್ತು ತರುತ್ತಾರೆ. ವೆಂಕಟೇಶ ನಗರದಲ್ಲಿ ಶ್ರೀಮಂತ ಜನರು ವಾಸಿಸುತ್ತಿದ್ದು ಇಲ್ಲಿಯ ಕುಟುಂಬಗಳು ಮನೆಯ ಬಳಕೆಗೆ ನೀರಿನ ಸಂಪರ್ಕ ಹೊಂದಿದ್ದು, ಖಾಸಗಿ ಕೊಳವೆ ಬಾವಿಗಳನ್ನು ಹೊಂದಿವೆ. ಮೊಮಿನ್‌ಪುರ, ಬ್ರಹ್ಮಪುರ ಮತ್ತು ಜಗತ್ ಪ್ರದೇಶಗಳ ಜನರು ಮನೆಗೆ ನಳಗಳ ಸಂಪರ್ಕ, ಸಾರ್ವಜನಿಕ ನಳಗಳು, ಕೈ ಪಂಪುಗಳು ಮುಂತಾದ ವಿವಿಧ ನೀರಿನ ಮೂಲಗಳನ್ನು ಹೊಂದಿವೆ. ಇವು ಜನನಿಬಿಡ ಪ್ರದೇಶಗಳಾಗಿದ್ದು, ಇಲ್ಲಿ ನೀರಿನ ಪೂರೈಕೆಯು ಸಮರ್ಪಕವಾಗಿಲ್ಲ. ಈ ಜನನಿಬಿಡ ಪ್ರದೇಶಗಳಲ್ಲಿ ನೀರಿನ ಕೊರತೆಯು ಅಧಿಕ ಪ್ರಮಾಣದಲ್ಲಿದ್ದು, ಕಾಲೋನಿಗಳಲ್ಲಿ ಆಯ್ದ ಕುಟುಂಬಗಳಿಗೆ ಕುಡಿಯುವ ನೀರಿಗಾಗಿ ಲಭ್ಯವಿರುವ ವ್ಯವಸ್ಥೆಯನ್ನು ಕೋಷ್ಟಕ 6.7ರಲ್ಲಿ ನೀಡಲಾಗಿದೆ.

## ತಥ್ಯಗಳು ಮತ್ತು ಚರ್ಚೆ

ಜನರ ಅಗತ್ಯಕ್ಕೆ ತಕ್ಕಂತೆ ನೀರು ಪೂರೈಕೆಯನ್ನು ಮಾಡುತ್ತಿಲ್ಲ. ವರ್ಷದಲ್ಲಿ ಆರು ತಿಂಗಳುಗಳ ಕಾಲ ನೀರಿನ ಕೊರತೆ ಇರುತ್ತದೆ. ನಗರದ ಹಲವಾರು ಪ್ರದೇಶಗಳಲ್ಲಿ ನೀರು ಪೂರೈಕೆಯು ಅವ್ಯವಸ್ಥಿತವಾಗಿದ್ದು, ಕ್ರಮಬದ್ಧವಾಗಿಲ್ಲ. ಈ ಅವಧಿಯಲ್ಲಿ ಮಹಿಳೆಯರು ದಿನಾಲು ನೀರಿಗಾಗಿ ಕೈಯಲ್ಲಿ ಕೊಡಗಳನ್ನು ಹಿಡಿದು ನೀರಿನ ಮೂಲಗಳಿಂದ ಸಾರ್ವಜನಿಕ ಬಾವಿಗಳು, ಕೈ ಪಂಪಗಳು, ಸಾರ್ವಜನಿಕ ನಳಗಳು ಮುಂತಾದ ಕಡೆ ಅಲೆಯಬೇಕಾದಂಥ ಪರಿಸ್ಥಿತಿ ಇದೆ.

ಕೋಷ್ಟಕ 6.6

### ಗುಲಬರ್ಗಾ ನಗರದಲ್ಲಿ ಜನಸಂಖ್ಯೆಯ ಬೆಳವಣಿಗೆ

| ವರ್ಷಗಳು | ಜನಸಂಖ್ಯೆ | ಬೆಳವಣಿಗೆ ಪ್ರಮಾಣ |
| --- | --- | --- |
| 1971 | 1,45,588 | |
| 1981 | 2,18,621 | 5.01 |
| 1991 | 3,03,139 | 3.86 |
| 2001 | 4,30,000 | 4.18 |

ಮೂಲ: ಡಿಸ್ಟ್ರಿಕ್ಟ್ ಸೆನ್ಸಸ್ ಹ್ಯಾಂಡ್ ಬುಕ್ : ಗುಲಬರ್ಗಾ 1971, 1981, 1991 ಮತ್ತು 2001

ನಿಯಮಿತವಾಗಿ ನೀರು ಪೂರೈಕೆಯಾಗುತ್ತಿದೆಯೋ ಇಲ್ಲವೋ ಎಂಬುದರ ಬಗ್ಗೆ ಕುಟುಂಬಗಳ ಅಭಿಮತವನ್ನು ಈ ಕೆಳಗೆ ದಾಖಲಿಸಲಾಗಿದೆ. (ಕೋಷ್ಟಕ 6.8)

ಶ್ರೀಮಂತರು ಹೆಚ್ಚಾಗಿ ವಾಸಿಸುವ ವೆಂಕಟೇಶ ನಗರದಲ್ಲಿ ಯಥೇಚ್ಛವಾಗಿ ನೀರಿನ ಪೂರೈಕೆ ಇದ್ದು, ಕುಟುಂಬಗಳು ನಿಗದಿತವಾಗಿ ಮತ್ತು ಅಗತ್ಯಕ್ಕೆ ತಕ್ಕಂತೆ ನೀರನ್ನು ಪಡೆಯುತ್ತಿದ್ದಾರೆ. ಬಡಾವಣೆ ಪ್ರದೇಶವಾದ ಜಾಗೃತಿ ಮತ್ತು ಜನನಿಬಿಡ ಪ್ರದೇಶವಾದ ಮೊಯೆಸ್‌ಪುರಗಳಲ್ಲಿ ಸ್ಥಿತಿಯು ಅತ್ಯಂತ ನಿಕೃಷ್ಟವಾಗಿದೆ. ಕೊಳಚೆ ಪ್ರದೇಶಗಳಲ್ಲಿ ಸಹ ನೀರಿನ ಪೂರೈಕೆಯ ವ್ಯವಸ್ಥೆಯು ಕ್ರಮಬದ್ಧವಾಗಿಲ್ಲ. ಬಡಾವಣೆ ಪ್ರದೇಶಗಳಲ್ಲಿ ಕೊಳವೆಗಳು ಒಡೆದಿರುವುದರಿಂದ, ಸೋರುತ್ತಿರುವ ಕಾರಣದಿಂದಾಗಿ ನೀರಿನ ಪೂರೈಕೆಯು ನಿಗದಿತವಾಗಿಲ್ಲ. ನೀರಿನ ಪೂರೈಕೆಯು ನಿಗದಿತವಾಗಿಲ್ಲದ ಕಾರಣದಿಂದಾಗಿ ನೀರಿನ ಕೊರತೆ ಉಂಟಾಗುತ್ತದೆ.

ಕೋಷ್ಟಕ 6.7

## ನಮೂನೆಯಲ್ಲಿನ ಆಯ್ದ ಬಡಾವಣೆಗಳಲ್ಲಿ ಕುಡಿಯುವ ನೀರಿನ ವಿವಿಧ ವ್ಯವಸ್ಥೆಗಳು

| ಕ್ರ.ಸಂ. | ಬಡಾವಣೆಗಳು | ಕುಟುಂಬ ಘಟಕಗಳ ಸಂಖ್ಯೆ | ನೀರಿನ ಮೂಲಗಳು (%) | | | | |
|---|---|---|---|---|---|---|---|
| | | | ಮನೆಯೊಳಗೆ ನಳ | ಸಾರ್ವಜನಿಕ ನಳ | ಕೈ ಪಂಪುಗಳು | ಖಾಸಗಿ ಕೊಳವೆ ಬಾವಿಗಳು | ಖಾಸಗಿ ಟಾಂಕರ್‌ಗಳು (ಬೇಸಿಗೆಯಲ್ಲಿ) |
| 1 | ಬ್ರಹ್ಮಪುರ | 20 | 75 | 25 | 50 | 10 | 10 |
| 2 | ಜಾಗೃತಿ ಕಾಲೋನಿ | 20 | ಇಲ್ಲ | 100 | 65 | 90 | 45 |
| 3 | ಜಗತ್ | 20 | 100 | ಇಲ್ಲ | 20 | 30 | 25 |
| 4 | ಮೋಮಿನಿಪುರ ದರ್ಗಾ | 30 | 100 | ಇಲ್ಲ | 37 | 10 | 10 |
| 5 | ವೆಂಕಟೇಶ್ ನಗರ | 10 | 100 | ಇಲ | ಇಲ್ಲ | 90 | 90 |
| 6 | ಸುಂದರ ನಗರ | 20 | 05 | 95 | 80 | ಇಲ್ಲ | ಇಲ್ಲ |

ಮೂಲ: ಪ್ರಾಥಮಿಕ ಆಕರ

ಕೋಷ್ಟಕ 6.8

## ಕುಡಿಯುವ ನೀರಿನ ಪೂರೈಕೆಯಲ್ಲಿ ನಿಯಮಿತತನ ಮತ್ತು ಅಗತ್ಯ ಪ್ರಮಾಣ

| ಬಡಾವಣೆ | ನಿಯಮಿತತನ | | ಅಗತ್ಯವಿರುವಷ್ಟು ಪ್ರಮಾಣ | |
|---|---|---|---|---|
| | ಕುಟುಂಬ ಘಟಕಗಳು | ಶೇಕಡಾ | ಕುಟುಂಬ ಘಟಕಗಳು | ಶೇಕಡಾ |
| ಬ್ರಹ್ಮಪುರ | 11 | 55 | 08 | 40 |
| ಜಾಗೃತಿ ಕಾಲೊನಿ | 03 | 15 | 02 | 10 |
| ಜಗತ್ | 15 | 75 | 12 | 60 |
| ಮೋಮಿನಿಪುರ ದರ್ಗಾ | 10 | 33.33 | 06 | 20 |
| ವೆಂಕಟೇಶ್ ನಗರ | 07 | 35 | 03 | 15 |
| ಸುಂದರ ನಗರ | 09 | 90 | 07 | 70 |

ಮೂಲ: ಪ್ರಾಥಮಿಕ ಆಕರ

## ನೀರು ಮತ್ತು ಆರೋಗ್ಯ

- ವರ್ಷದ ಬಹುಪಾಲು ಭಾಗವು ನೀರಿನ ಪೂರೈಕೆಯ ಕೊರತೆಯಿಂದಿರುತ್ತದೆ ಮತ್ತು ಅನಿಶ್ಚಿತವಾಗಿರುತ್ತದೆ.. ಇದರಿಂದಾಗಿ ಕುಟುಂಬಗಳು ಅನಿವಾರ್ಯವಾಗಿ ನೀರು ಎಲ್ಲಿ ದೊರೆಯುತ್ತದೋ ಅಲ್ಲಿನ ಮೂಲಗಳಿಂದ ನೀರನ್ನು ತರಬೇಕಾದಂಥ ಪರಿಸ್ಥಿತಿ ಇದೆ. ಇದು ನಗರದ ಸಾಮಾನ್ಯ ಲಕ್ಷಣ. ಕುಡಿಯುವ ನೀರು ಮತ್ತು ನೈರ್ಮಲ್ಯಗಳಿಗೆ ಸಂಬಂಧಿಸಿದ ಕೊರತೆಯಿಂದಾಗಿ ನಗರವು ಅನಾರೋಗ್ಯಕರವಾದ ಅಪಾಯದ ಪರಿಸ್ಥಿತಿಗೆ ಈಡಾಗುತ್ತದೆ.
- ನಗರದಲ್ಲಿ ನೀರು ಸಂಬಂಧಿ ರೋಗಗಳ ತೀವ್ರತೆ ಅಧಿಕವಿರುವುದು ಕಂಡು ಬರುತ್ತದೆ. ಉದರಬಾಧೆ ಪ್ರಕರಣಗಳ ಸಂಖ್ಯೆ ಅಧಿಕ ಪ್ರಮಾಣದಲ್ಲಿದೆ. ನೀರು ಸಂಬಂಧಿ ರೋಗಗಳ ಪ್ರಮಾಣವು ಇತ್ತೀಚಿಗೆ ಹೆಚ್ಚಾಗಿರುವ ಬಗ್ಗೆ ವರದಿಯಾಗಿದೆ. ಈ ಪ್ರಕರಣವು ಕೇವಲ ಸರಕಾರಿ ಆಸ್ಪತ್ರೆಗಳಲ್ಲಿ ಮಾತ್ರ ದಾಖಲೆಯಾಗಿರುವುದನ್ನು ತಿಳಿಸುವುದರಿಂದ ಇದು ನೈಜ ಸ್ಥಿತಿಯನ್ನು ತಿಳಿಸಲಾರದು. ನಗರದಲ್ಲಿ ಬಹುಸಂಖ್ಯೆಯಲ್ಲಿ ಖಾಸಗಿ ಆಸ್ಪತ್ರೆಗಳಿವೆ. ಮೇಲ್ವರ್ಗ ಮತ್ತು ಮಧ್ಯಮ ವರ್ಗಕ್ಕೆ ಸೇರಿದ ಬಹುಪಾಲು ಜನರು ಖಾಸಗಿ ಆಸ್ಪತ್ರೆಗಳಿಂದ ಆರೋಗ್ಯ ಸೇವೆಗಳನ್ನು ಪಡೆಯುತ್ತಿದ್ದಾರೆ. ಆದರೆ ಇಂಥ ಸೇವೆಯನ್ನು ಪಡೆಯುತ್ತಿರುವವರ ಬಗೆಗೆ ನಮಗೆ ಅಂಕಿ ಅಂಶಗಳು ದೊರೆಯುವುದಿಲ್ಲ. ನೀರಿನಿಂದ ಬರುವ

ಜಾಂಡೀಸ್ (ಹೆಪಟೈಟಸ್-ಎ) ನಗರದಲ್ಲಿ ಸಾಮಾನ್ಯವಾಗಿ ಕಂಡುಬರುವ ಖಾಯಿಲೆಯಾಗಿದೆ. ಗುಲಬರ್ಗಾ ನಗರದ ಜಗತ್, ಬ್ರಹ್ಮಪುರ ಮತ್ತು ಸುಂದರನಗರ ಪ್ರದೇಶಗಳಲ್ಲಿ ಈ ಕಾಯಿಲೆಯ ಪ್ರಮಾಣ ಅಧಿಕವಾಗಿದೆ.

- ಬೇಸಿಗೆ ಮತ್ತು ಮಳೆಗಾಲದಲ್ಲಿ ಈ ರೋಗಗಳು ಹೆಚ್ಚಾಗಿ ಸಂಭವಿಸುತ್ತವೆ. ಬೇಸಿಗೆಯ ಕಾಲದಲ್ಲಿ ಇಲ್ಲಿ ನೀರು ದೊರೆಯುತ್ತದೋ ಅಲ್ಲಿ ನೀರನ್ನು ತರಬೇಕಿದೆ. ಆದರೆ ಈ ನೀರಿನ ಮೂಲಗಳು ಅಶುದ್ಧವಾಗಿರುತ್ತವೆ ಮತ್ತು ಮಳೆಗಾಲದ ಸಂದರ್ಭದಲ್ಲಿ ನಳಗಳಿಂದ ನೀರನ್ನು ಹಿಡಿಯಲು ತಗ್ಗು ತೆಗೆದಿರುತ್ತದೆ. ಆ ಸ್ಥಳದಲ್ಲಿ ನಳದ ನೀರಿನೊಂದಿಗೆ ಮಳೆಯ ನೀರು ಪೈಪ್‌ಗಳನ್ನು ಸೇರುವ ಸಾಧ್ಯತೆ ಇರುತ್ತದೆ. ಅಂತಹ ಸ್ಥಳದಿಂದ ನೀರು ತರಲಾಗುತ್ತದೆ. ಇಂಥ ನೀರಿನಲ್ಲಿ ಮಳೆಯ ನೀರು ಸಹ ಪೈಪ್ ಲೈನ್‌ಗಳಲ್ಲಿ ಸೇರಿಕೊಂಡಿರುತ್ತದೆ. ಇದರಿಂದಾಗಿ ನಳದ ನೀರು ಮತ್ತು ಮಳೆಯ ನೀರುಗಳು ಸೇರಿಕೊಂಡು ಕುಡಿಯುವ ನೀರು ಮಲೀನಗೊಳ್ಳುತ್ತವೆ.
- ಇದಲ್ಲದೇ ನಗರದಲ್ಲಿ ಚರಂಡಿ ಪೈಪ್‌ಗಳು ಮತ್ತು ಕುಡಿಯುವ ನೀರಿನ ಪೈಪ್ (ಕೊಳವೆ)ಗಳು ಜೊತೆಯಲ್ಲಿ ಸಾಗಿವೆ. ಈ ಪೈಪ್‌ಗಳಲ್ಲಿ ಏನಾದರೂ ಬಿರುಕು ಕಂಡುಬಂದರೆ ನೀರು ಸಹ ಮಲೀನಗೊಳ್ಳುತ್ತದೆ. ಜನತೆಗೆ ಅದರಲ್ಲಿಯೂ ಕೊಳಚೆ ಪ್ರದೇಶದಲ್ಲಿರುವ ಜನರಿಗೆ ಸ್ವಚ್ಛತೆಯ ಬಗ್ಗೆ ತಿಳುವಳಿಕೆ ಕಡಿಮೆ ಇದೆ.

ಕೋಷ್ಟಕ 6.9

## ಗುಲಬರ್ಗಾ ನಗರದಲ್ಲಿ ವರದಿಯಾದ ನೀರಿನ ಸೋಂಕು ಮತ್ತು ನೀರಿಗೆ ಸಂಬಂಧಿಸಿದ ರೋಗಗಳು (1995–2002)

| ವರ್ಷ | ಕಾಲರಾ | ಟೈಫಾಯಿಡ್ | ಕರುಳು ಬೇನೆ | ಕಾಮಾಲೆ | ಭೇದಿ | ಅತಿ ಭೇದಿ | ಒಟ್ಟು |
|---|---|---|---|---|---|---|---|
| 1995–96 | 17 | 90 | 800 | 65 | 140 | 09 | 1121 |
| 1996–97 | 25 | 85 | 755 | 70 | 125 | 12 | 1072 |
| 1997–98 | 20 | 105 | 889 | 72 | 140 | 15 | 1241 |
| 1998–99 | 15 | 250 | 895 | 75 | 75 | 13 | 1323 |
| 1999–00 | 05 | 302 | 785 | 80 | 65 | 15 | 1252 |
| 2000–01 | 55 | 455 | 662 | 70 | 60 | 08 | 1310 |
| 2001–02 | N.A. | 278 | 1076* | | | | 1354 |

ಮೂಲ: ವಿವಿಧ ವರ್ಷಗಳಿಗೆ ಸಂಬಂಧಿಸಿದ ಮಹಾ ನಗರಸಭೆ ದಾಖಲೆಗಳು.

* ಇದು ಅತಿಸಾರ, ಅತಿ ಭೇದಿ ಮತ್ತು ಕರುಳು ಬೇನೆಗಳನ್ನು ಒಳಗೊಂಡಿದೆ.

ಕೋಷ್ಟಕ 6.10

## ನೀರಿನ ಸೋಂಕು ಮತ್ತು ನೀರಿಗೆ ಸಂಬಂಧಿಸಿದ ರೋಗಗಳು

(ಪ್ರತಿ 10000 ಜನಸಂಖ್ಯೆಗೆ)

| ವರ್ಷ | ಕಾಲರಾ | ಟೈಫಾಯಿಡ್ | ಕರುಳು ಬೇನೆ | ಕಾಮಾಲೆ | ಭೇದಿ | ಅತಿ ಭೇದಿ |
|---|---|---|---|---|---|---|
| 1995–96 | 0.3 | 2.1 | 18.6 | 1.5 | 3.2 | 0.2 |
| 1996–97 | 0.6 | 3.6 | 17.6 | 1.5 | 2.9 | 0.3 |
| 1997–98 | 0.5 | 2.4 | 20.6 | 1.6 | 3.3 | 0.3 |
| 1998–99 | 0.3 | 5.8 | 20.8 | 1.7 | 0.3 | 0.3 |
| 1999–00 | 0.1 | 7.0 | 18.3 | 1.7 | 1.4 | 0.3 |
| 2000–01 | 1.3 | 3.9 | 15.4 | 1.6 | 1.3 | 0.2 |
| 2001–02 | 0.5 | 6.8 | 22.6 | | | |

ಮೂಲ: ಕೋಷ್ಟಕ-6.10ರಿಂದ ಪಡೆದುಕೊಳ್ಳಲಾಗಿದೆ.

ನೀರು ಎಲ್ಲಿ ಸಿಗುತ್ತದೋ ಅಲ್ಲಿಯೇ ಬಟ್ಟೆ ಹೊಗೆಯುವುದು, ಸ್ನಾನ ಮಾಡುವುದು ಮತ್ತು ಸ್ವಚ್ಛತಾ ಕೆಲಸ ಕಾರ್ಯಗಳನ್ನು ಮಾಡುತ್ತಾರೆ. ಇದು ಸಹ ನೀರು ಮಲೀನಗೊಳ್ಳಲು ತನ್ನ ಕಾಣಿಕೆಯನ್ನು ನೀಡುತ್ತದೆ. ಜನರು ಜಾಂಡೀಸ್ ಕಾಯಿಲೆಗೆ ಹರ್ಬಲ್ ಮತ್ತು ಆಯುರ್ವೇದ ಔಷಧಿಗಳಿಗೆ ಮೊರೆ ಹೋಗುವುದರಿಂದ ಜಾಂಡೀಸ್ ರೋಗಕ್ಕೆ ಈಡಾಗಿರುವ ರೋಗಿಗಳ ಸಂಖ್ಯೆಯು ಸರಿಯಾಗಿ ವರದಿಯಾಗುವುದಿಲ್ಲ. ಇಷ್ಟಾದರೂ ಅಲ್ಲಿ ಸಾಕಷ್ಟು ರೋಗಗಳಿಂದ ಜನರು ಸಂಕಷ್ಟ ಎದುರಿಸುತ್ತಿರುವುದನ್ನು ಕಾಣಬಹುದಾಗಿದೆ. ಕೆಲ ಬಡ ಕುಟುಂಬಗಳು ಅನಾರೋಗ್ಯದ ಸಂದರ್ಭದಲ್ಲಿ ತಕ್ಷಣವೇ ವೈದ್ಯರ ಬಳಿ ಅಥವಾ ಆಸ್ಪತ್ರೆಗೆ ಹೋಗುವುದಿಲ್ಲ. ಅದಕ್ಕೆ ಅವರಿಗೆ ಸಮಯದ ಅಭಾವ, ದಿನದ ದುಡಿಮೆಯನ್ನು ಕಳೆದುಕೊಳ್ಳಬೇಕಾದ ಸ್ಥಿತಿಯಿದೆ.

- ಕುಟುಂಬಗಳ ಸಮೀಕ್ಷೆಯನ್ನು ನಡೆಸಿದಾಗ ಮನೆಯಲ್ಲಿ ಕಳೆದ ಆರು ತಿಂಗಳಲ್ಲಿ ಯಾರಾದರೂ ಯಾವುದಾದರು ರೋಗಕ್ಕೆ ತುತ್ತಾಗಿದ್ದಾರೆಯೆ ಎಂಬ ಪ್ರಶ್ನೆಯನ್ನು ಕೇಳಲಾಗಿತ್ತು. ಈ ಪ್ರಶ್ನೆಗೆ ಶೇ. 78.33ರಷ್ಟು ಕುಟುಂಬಗಳು ಸಕರಾತ್ಮಕವಾಗಿ ಉತ್ತರ ನೀಡಿವೆ. ಯಾವ ಬಗೆಯ ರೋಗಗಳಿಗೆ ಜನರು ತುತ್ತಾಗಿದ್ದರು ಎಂಬುದರ ವಿವರವನ್ನು ಕೋಷ್ಟಕ 6.11ಕ್ಕೆ ಮತ್ತು 6.12 ರಲ್ಲಿ ನೀಡಲಾಗಿದೆ. ಉತ್ತರಗಳು ಬಹುರೂಪದಲ್ಲಿದೆ.

- ಕುಟುಂಬಗಳಲ್ಲಿ ವರದಿ ಮಾಡಿದರಂತೆ ಭೇದಿ, ಜಾಂಡೀಸ್ ನಂತರ ಟೈಫಾಯಿಡ್‌ಗಳು ಹೆಚ್ಚಿನ ಪ್ರಮಾಣದಲ್ಲಿವೆ. ಕೇವಲ ಶೇ.23 ಕುಟುಂಬಗಳು ಮಾತ್ರ ಕಳೆದ ಆರು ತಿಂಗಳುಗಳಲ್ಲಿ ಕುಟುಂಬದ ಸದಸ್ಯರಲ್ಲಿ ಯಾರೂ ಕೂಡ ಯಾವ ರೋಗಕ್ಕೂ ತುತ್ತಾಗಿಲ್ಲವೆಂಬ ಮಾಹಿತಿ ನೀಡಿದ್ದಾರೆ. ಜನನಿಬಿಡ ಮತ್ತು ಅಶುದ್ಧ ಸ್ಥಿತಿಗಳಿಂದ ಸುಂದರನಗರ, ಪೋಮಿನ್‌ಪುರ ಮತ್ತು ಬ್ರಹ್ಮಪುರಗಳಲ್ಲಿ ರೋಗಗಳ ತೀವ್ರತೆಯ ಪ್ರಮಾಣ ಹೆಚ್ಚಿದೆ.

- ಕುಟುಂಬಗಳು ತಮ್ಮ ಆರೋಗ್ಯ ಸೇವೆಗಳಿಗಾಗಿ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ವೆಚ್ಚ ಮಾಡುವ ಸರಾಸರಿ ವೆಚ್ಚದ ಪ್ರಮಾಣವನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಕ್ರಮಬದ್ಧವಲ್ಲದ ಮತ್ತು ಒಳ್ಳೆಯ ಗುಣಮಟ್ಟವಿಲ್ಲದ ನೀರು ಮತ್ತು ನೈರ್ಮಲ್ಯಗಳಿಂದಾಗಿ ಉಂಟಾಗುವ ಆರೋಗ್ಯದ ಅಪಾಯಗಳಿಗೆ ಕುಟುಂಬಗಳು ತಮ್ಮ ಕೊರತೆಯ ಸಂಪನ್ಮೂಲದ ಕೆಲಭಾಗಗಳನ್ನು ವ್ಯಯ ಮಾಡುತ್ತಿರುವುದನ್ನು ಗಮನಿಸಬಹುದಾಗಿದೆ. ಅಲ್ಲದೇ ಈ ಬಡ ಕುಟುಂಬಗಳಿಗೆ ಅನಾರೋಗ್ಯದ ಸಂದರ್ಭದಲ್ಲಿ ಆ ದಿನಗಳ ಕೂಲಿಯು ಸಹ ತಪ್ಪಿದಂತಾಗುತ್ತದೆ. ನಗರದಲ್ಲಿ ನೀರಿನ ಪೂರೈಕೆ ಮತ್ತು ನೈರ್ಮಲ್ಯೀಕರಣ ವ್ಯವಸ್ಥೆಗಳು ಉತ್ತಮವಾಗಿಲ್ಲ. ಇದರಿಂದಾಗಿ ಬರುವ ರೋಗಗಳಲ್ಲಿ ನೀರು ಸಂಬಂಧಿ ರೋಗಗಳ ಪ್ರಮಾಣ ಹೆಚ್ಚು ತೀವ್ರತೆಯಿಂದ ಕೂಡಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಮತ್ತು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಗಣನೀಯ ಪ್ರಮಾಣದಲ್ಲಿ ಹಣಕಾಸು ಹರಿದು ಬಂದಿದ್ದರೂ, ಹಣದ ಸರಿಯಾದ ಬಳಕೆಯ ಕೊರತೆ, ಅನಾವಶ್ಯಕ ವೆಚ್ಚ, ಹಣಕಾಸಿನ ನಿರ್ವಹಣೆಯ ವ್ಯವಸ್ಥೆ ಸರಿಯಿಲ್ಲದೇ ಇರುವ ಕಾರಣ ಅಂತಹ ಸುಧಾರಣೆ ಏನೂ ಕಂಡುಬಂದಿಲ್ಲ. (ಇದು ಡಾ. ದೇಗಾಂವಕರ್ ಅವರು ಮದರಾಸನ ವಿಶ್ವವಿದ್ಯಾಲಯ (ಚೆನ್ನೈ)ದಲ್ಲಿ ಡಿಸೆಂಬರ್ 2004ರಲ್ಲಿ ನಡೆದ 'ಪರಿಸರ ಮತ್ತು ಆರೋಗ್ಯ' ಕುರಿತಂತೆ ನಡೆದ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಬಂಧ ಮಂಡಿಸುವ ಸಲುವಾಗಿ ಕೈಗೊಂಡ ಅಧ್ಯಯನವಾಗಿದೆ).

ಕೋಷ್ಟಕ 6.11

### ನೀರಿಗೆ ಸಂಬಂಧಿಸಿದ ರೋಗಗಳ ನಮೂನೆ ಮಾಹಿತಿ

| ರೋಗಗಳು | ಕುಟುಂಬ ಘಟಕಗಳ ಸಂಖ್ಯೆ | ಶೇಕಡಾ ಪ್ರಮಾಣ ಒಟ್ಟು = 120 |
|---|---|---|
| ಕಾಲರಾ | 14 | 11.66 |
| ಕಾಮಾಲೆ | 52 | 43.33 |
| ಟೈಫಾಯಿಡ್ | 49 | 40.83 |
| ಅತಿಭೇದಿ | 78 | 65.00 |
| ರೋಗಗಳಿಲ್ಲದ ಸ್ಥಿತಿ | 26 | 22.66 |

ಕೋಷ್ಟಕ 6.12

### ಕುಟುಂಬ ಘಟಕಗಳು ಮಾಡುವ ಆರೋಗ್ಯ ಸೇವೆ ಮೇಲಿನ ಖರ್ಚು

(ಕಳೆದ ಮೂರು ತಿಂಗಳುಗಳಲ್ಲಿ)

| ಖರ್ಚು | ಕುಟುಂಬ ಘಟಕಗಳು |
|---|---|
| ರೂ. 100–200 | 65 (54.17) |
| ರೂ. 200–300 | 44 (36.67) |
| ರೂ. 300–400 | 09 (07.50) |
| ರೂ. 400–500 | 02 (01.66) |
| ರೂ. 500 ಮತ್ತು ಅದಕ್ಕಿಂತಲೂ ಅಧಿಕ | Nil |

ಮೂಲ: ಪ್ರಾಥಮಿಕ ಆಕರ

ಚೌಕಟ್ಟು 6.3

### 24 ಗಂಟೆಗಳ ನೀರು ಪೂರೈಕೆ ಯೋಜನೆ

ಇತ್ತೀಚೆಗೆ ವಿಶ್ವ ಬ್ಯಾಂಕಿನ ನೆರವಿನಲ್ಲಿ 24 ಗಂಟೆಗಳ ನೀರು ಪೂರೈಕೆ ಯೋಜನೆಯು ಗುಲಬರ್ಗಾ ನಗರದ 58 ವಾರ್ಡ್‌ಗಳ ಪೈಕಿ 11 ವಾರ್ಡ್‌ಗಳಲ್ಲಿ ಪ್ರಾರಂಭವಾಗಿದೆ. ಯೋಜನೆಯು ತೃಪ್ತಿದಾಯಕವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಜನರು ನಿಗದಿತವಾಗಿ ತಮ್ಮ ಬಳಕೆಯ ಶುಲ್ಕವನ್ನು ಪಾವತಿಸುತ್ತಿದ್ದಾರೆ. ನೀರಿನ ಬಳಕೆಯೊಂದಿಗೆ, ಬಳಕೆ ವೆಚ್ಚವನ್ನು ಸಹ ನಿಗದಿಗೊಳಿಸಿರುವುದರಿಂದ, ನೀರು ಪೋಲಾಗುವುದನ್ನು ತಡೆಯಲು ಇದು ನೆರವಾಗಿದೆ. ಸರಕಾರದ ಈ ಯೋಜನೆಯನ್ನು ನಗರದ ಎಲ್ಲಾ ವಾರ್ಡುಗಳಿಗೂ ವಿಸ್ತರಿಸಬೇಕೆಂಬ ಬೇಡಿಕೆಯನ್ನು ಜನರು ಸಾರ್ವಜನಿಕ ಸಭೆಗಳಲ್ಲಿ ಒತ್ತಾಯ ಮಾಡುತ್ತಿದ್ದಾರೆ.

## ಗ್ರಾಮೀಣ ಕುಡಿಯುವ ನೀರು ಪೂರೈಕೆ – ಅಧ್ಯಯನದ ಫಲಿತಗಳು (ಪ್ರಾಯೋಜನೆ ಜಿಲ್ಲಾ ಪಂಚಾಯತ್)

ಪ್ರಾದೇಶಿಕ ಅಸಮಾನತೆ ನಿವಾರಣೆಯ ಉನ್ನತಾಧಿಕಾರಿ ಸಮಿತಿ (ನಂಜುಂಡಪ್ಪ ಸಮಿತಿ)ಯು ಕರ್ನಾಟಕದಲ್ಲಿ ನೀರಿನ ದೊರೆಯುವಿಕೆ ಮತ್ತು ಪೂರೈಕೆ ಕುರಿತಂತೆ ಅಧ್ಯಯನವನ್ನು ಮಾಡಿದೆ. ಇದರ ಆಧಾರದ ಮೇಲೆ ಕುಡಿಯುವ ನೀರಿನ ದೊರೆಯುವಿಕೆಯ ಹಿನ್ನೆಲೆಯನ್ನು ರಾಜ್ಯದಲ್ಲಿ ತಾಲ್ಲೂಕುಗಳನ್ನು ವಿವಿಧ ರ‍್ಯಾಂಕುಗಳನ್ನಾಗಿ ವಿಂಗಡಿಸಿದೆ. ಗುಲಬರ್ಗಾ ಜಿಲ್ಲೆಯ ಎರಡು ತಾಲ್ಲೂಕುಗಳು ಅಂದರೆ ಸುರಪುರ ಮತ್ತು ಚಿತ್ತಾಪುರ ತಾಲ್ಲೂಕುಗಳು ಕೆಳಮಟ್ಟದ ಸ್ಥಾನ ಪಡೆದಿದ್ದರೆ ಸುರಪುರ ತಾಲ್ಲೂಕು ಸ್ಥಾನ 132ರಯದ್ದಾಗಿದೆ (175 ತಾಲ್ಲೂಕುಗಳಲ್ಲಿ). ಚಿತ್ತಾಪುರ ರಾಜ್ಯದಲ್ಲಿ ಅತ್ಯಂತ ಕೆಳಮಟ್ಟದಲ್ಲಿದ್ದು ಅದು 173ನೆಯ ಸ್ಥಾನ ಪಡೆದಿದೆ. ಈ ಹಿನ್ನೆಲೆಯಲ್ಲಿ ಈ ಎರಡು ತಾಲ್ಲೂಕುಗಳಲ್ಲಿ ವಿವಿಧ ನೀರು ಪೂರೈಕೆ ಯೋಜನೆಗಳ ಕಾರ್ಯಾನುಷ್ಠಾನ ಕುರಿತು ಗ್ರಾಮ ಮಟ್ಟದಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿತ್ತು. ಅಧ್ಯಯನಕ್ಕಾಗಿ

ಚಿತ್ತಾಪುರ ತಾಲ್ಲೂಕಿನ 127 ಗ್ರಾಮಗಳಲ್ಲಿ ಮತ್ತು ಸುರಪುರ ತಾಲ್ಲೂಕಿನ 185 ಗ್ರಾಮಗಳಲ್ಲಿ ಸಮೀಕ್ಷೆ ಮಾಡಲಾಗಿದೆ. ಗ್ರಾಮವಾರು ಮತ್ತು ಸಮಗ್ರ ಮಟ್ಟದಲ್ಲಿ ಅಧ್ಯಯನದ ಸಂಗತಿಗಳನ್ನು ವಿಶ್ಲೇಷಿಸಿ ಫಲಿತಗಳನ್ನು ಕಂಡುಕೊಳ್ಳಲಾಗಿದೆ(ಅಧ್ಯಯನವನ್ನು 2004ರಲ್ಲಿ ಕೈಗೊಳ್ಳಲಾಗಿತ್ತು) ಮತ್ತು ಈ ಅಧ್ಯಯನವನ್ನು ಜಿಲ್ಲಾ ಪಂಚಾಯಿತಿ, ಗುಲಬರ್ಗಾ ಇವರು ಪ್ರಾಯೋಜಿಸಿದ್ದರು).

ಈ ಅಧ್ಯಯನದಲ್ಲಿ ಎಲ್ಲ ಮೂರು ಯೋಜನೆಗಳನ್ನು ಅಂದರೆ, ಕೈಪಂಪು ಇರುವ ಕೊಳವೆ ಬಾವಿಗಳು, ಕೆರೆ ನೀರು ಪೂರೈಕೆ ಯೋಜನೆ, ನಳಗಳ ಮೂಲಕ ನೀರು ಪೂರೈಕೆಗಳ ಕುರಿತಂತೆ ಜನಸಂಖ್ಯೆಗೆ ಅನುಗುಣವಾಗಿ ಇರಬೇಕಾದ ಸೌಲಭ್ಯಗಳ ವಿವರವನ್ನು ಮತ್ತು ಇರುವ ಯೋಜನೆಗಳ ಸಂಖ್ಯೆಯು ವಿವರಗಳನ್ನು ಈ ಕೆಳಗಿನ ಕೋಷ್ಟಕಗಳಲ್ಲಿ ನೀಡಲಾಗಿದೆ.

ಇರುವ ನೀರು ಪೂರೈಕೆ ಯೋಜನೆಗಳು ಅಗತ್ಯಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿದೆ. ಇದು ಕುಟುಂಬಗಳಿಗೆ ನೀರನ್ನು ನಿರ್ದಿಷ್ಟವಾಗಿ ಪೂರೈಸಲಾಗುತ್ತಿಲ್ಲ ಎಂಬುದನ್ನು ಸೂಚಿಸುತ್ತದೆ.

**ಕೋಷ್ಟಕ 6.13**

**ಚಿತ್ತಾಪುರ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಯೋಜನೆಗಳು**

| ಯೋಜನೆ | ಚಿತ್ತಾಪುರ (ಸಧ್ಯ ಅಸ್ತಿತ್ವದಲ್ಲಿರುವ) | ಶೋರಾಪುರ (ಸಧ್ಯ ಅಸ್ತಿತ್ವದಲ್ಲಿರುವ) | ಚಿತ್ತಾಪುರ ಅಗತ್ಯವಾಗಿರುವ | ಶೋರಾಪುರ ಅಗತ್ಯವಿರುವ |
|---|---|---|---|---|
| ಕೈ ಪಂಪುಗಳಿರುವ ಕೊಳವೆ ಬಾವಿಗಳು | 764 | 940 | 860 | 1120 |
| ಕಿರು ಕುಡಿಯುವ ನೀರಿನ ಯೋಜನೆಗಳು | 112 | 106 | 134 | 127 |
| ಕೊಳಾಯಿಯಲ್ಲಿ ಕುಡಿಯುವ ನೀರಿನ ಪೂರೈಕೆ | 88 | 80 | 145 | 118 |

**ಕೋಷ್ಟಕ 6.14**

**ಕುಡಿಯುವ ನೀರಿನ ಯೋಜನೆಗಳ ಕಾರ್ಯಕ್ಷಮತೆ**

| ಕೊಳವೆ ಭಾವಿಗಳು | ಚಿತ್ತಾಪುರ | ಶೋರಾಪುರ |
|---|---|---|
| ಒಟ್ಟು | 764 | 940 |
| ಕೆಲಸ ಮಾಡುತ್ತಿರುವ ಕೊಳವೆ ಬಾವಿಗಳು | 461 (60.0) | 592 (62.9) |
| ಕೆಲಸ ಮಾಡದಿರುವ ಕೊಳವೆ ಬಾವಿಗಳು | 303 | 348 |
| ಅ) ದುರಸ್ತಿ ಮಾಡಬಲ್ಲ ಕೊಳವೆ ಬಾವಿಗಳು | 216 (71.3) | 184 (52.8) |
| ಆ) ದುರಸ್ತಿ ಮಾಡಲಾಗದ ಕೊಳವೆ ಬಾವಿಗಳು | 087 | 164 |
| **ಕಿರು ಕುಡಿಯುವ ಯೋಜನೆಗಳು** | **ಚಿತ್ತಾಪುರ** | **ಶೋರಾಪುರ** |
| ಕೆಲಸ ಮಾಡುತ್ತಿರುವ | 92 (82.1) | 85 (80.1) |
| ಕೆಲಸ ಮಾಡದಿರುವ | 20 | 21 |
| ಒಟ್ಟು 112 | 106 | |
| **ಕುಡಿಯುವ ನೀರಿನ ಕೊಳಾಯಿ ಮೂಲಕ ನೀರಿನ ಪೂರೈಕೆ** | **ಚಿತ್ತಾಪುರ** | **ಶೋರಾಪುರ** |
| ಒಟ್ಟು 88 | 80 | |
| ಕೆಲಸ ಮಾಡುತ್ತಿರುವ | 16 (18.18) | 14 (17.5) |
| ಭಾಗಶಃ ಕೆಲಸ ಮಾಡುವ | 53 (60.22) | 47 ( 58.8) |
| ಕೆಲಸ ಮಾಡದಿರುವ | 19 (21.6) | 19 (23.7) |

## ಚಿತ್ತಾಪುರ ಮತ್ತು ಸುರಪುರಗಳಲ್ಲಿ ನೀರು ಪೂರೈಕೆ ಯೋಜನೆಗಳು

ಹಲವಾರು ಯೋಜನೆಗಳು ಇದ್ದಾಗಲೂ ನೀರಿನ ಪೂರೈಕೆಯಲ್ಲಿ ಕೊರತೆ ಇದೆ. ಬೇಸಿಗೆಯಲ್ಲಿ ಸಮಸ್ಯೆಯು ತೀಕ್ಷ್ಣವಾಗಿದ್ದು, ನೀರಿನ ಕೊರತೆಯು ಈ ಅವಧಿಯಲ್ಲಿ ಸಾಮಾನ್ಯ ಲಕ್ಷಣವಾಗಿರುತ್ತದೆ. ಚಿತ್ತಾಪುರ ತಾಲ್ಲೂಕಿನಲ್ಲಿ 35 ಗ್ರಾಮ ಪಂಚಾಯಿತಿಗಳಿವೆ. ಪ್ರತಿ ಗ್ರಾಮ ಪಂಚಾಯಿತಿಯು ಒಂದು ಅಥವಾ ಎರಡು ಗ್ರಾಮಗಳು ನಿರಂತರವಾಗಿ ನೀರಿನ ಸಮಸ್ಯೆಯನ್ನು ಎದುರಿಸುತ್ತವೆ. (ಶೇ. 90ಕ್ಕಿಂತ ಹೆಚ್ಚು ಗ್ರಾಮ ಪಂಚಾಯಿತಿಗಳು ಒಂದಕ್ಕಿಂತ ಅಧಿಕ ಹಳ್ಳಿಗಳನ್ನು ಹೊಂದಿವೆ).

77 ಗ್ರಾಮಗಳು ಎಲ್ಲ ಅವಧಿಗಳಲ್ಲಿ ಅಥವಾ ಬೇಸಿಗೆಯ ಸಮಯದಲ್ಲಿ (ಒಟ್ಟು ಗ್ರಾಮಗಳಲ್ಲಿ ಶೇ. 60.6ರಷ್ಟು ಗ್ರಾಮಗಳು) ನೀರಿನ ಪೂರೈಕೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಅವುಗಳಲ್ಲಿ ಕೆಲವು ಗ್ರಾಮಗಳು ಅಧಿಕ ಫ್ಲೋರೈಡ್ (ನಾಲ್ಕು ಗ್ರಾಮಗಳು) ಸಮಸ್ಯೆ ಈಡಾಗಿವೆ. ಮತ್ತು 15 ಗ್ರಾಮಗಳು ನೀರಿನ ಮಲೀನತೆಯಿಂದ ಸಮಸ್ಯೆಗೆ ತುತ್ತಾಗಿವೆ.

ಕೋಷ್ಟಕ 6.15

**ಯೋಜನೆಗಳು ಕೆಲಸ ಮಾಡದಿರುವ ಕಾಲಾವಧಿ**

| ಕಾಲಾವಧಿ | ಚಿತ್ತಾಪುರ (ಯೋಜನೆಗಳ ಸಂಖ್ಯೆ) | ಶೋರಾಪುರ |
|---|---|---|
| 3–12 ತಿಂಗಳು | 2 | 3 |
| 12–24 ತಿಂಗಳು | 4 | 1 |
| 24–36 ತಿಂಗಳು | 3 | 3 |
| 36–48 ತಿಂಗಳು | 1 | – |
| 48–60 ತಿಂಗಳು | 1 | 8 |
| **ಒಟ್ಟು** | **11** | **15** |

## ಯೋಜನೆಗಳ ಕಾರ್ಯ ಚಟುವಟಿಕೆ

ಯೋಜನೆಗಳು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಆದ್ದರಿಂದ ಅವುಗಳ ಕಾರ್ಯಾಚರಣೆಯು ಹೆಚ್ಚು ಅಧ್ಯಕ್ಷತೆಯಿಂದ ಕೂಡಿವೆ. ಚಿತ್ತಾಪುರ ತಾಲ್ಲೂಕಿನಲ್ಲಿ ಕೇವಲ ಶೇ. 18ರಷ್ಟು (ಪಿ.ಡಬ್ಲ್ಯೂ.ಎಸ್) ನಳಗಳ ಮೂಲಕ ನೀರು ಪೂರೈಕೆ ಯೋಜನೆಗಳು ತೃಪ್ತಿದಾಯಕವಾಗಿ ಕಾರ್ಯ ನಿರ್ವಹಿಸುತ್ತಿವೆ. ಶೇ. 60ರಷ್ಟು ನಳಗಳ ಮೂಲಕ ನೀರು ಯೋಜನೆಗಳು ಯಾವಾಗಲೂ ಪೈಪ್ ರಿಪೇರಿ, ವಾಲ್ಯೂ ಸೋರುವಿಕೆ, ಟ್ಯಾಪ್ ರಿಪೇರಿ, ಮುಂತಾದ ರೀಪೇರಿಗಳಂಥ ಸಮಸ್ಯೆಗಳನ್ನು ಎದುರಿಸುತ್ತಿವೆ. ಮತ್ತು ಸುಮಾರು ಶೇ.21.6ರಷ್ಟು ಯೋಜನೆಗಳು ಸರಿಯಾದ ಸ್ಥಳದಲ್ಲಿ ಟ್ಯಾಂಕ್ ನಿರ್ಮಾಣ ಮಾಡದೇ ಇರುವುದು ವ್ಯವಸ್ಥಿತ ಪೈಪ್ ಲೈನ್ ಮಾಡದೇ ಇರುವುದು, ನೀರಿನ ಕೊರತೆ, ಮೋಟಾರ್ ರಿಪೇರಿ ಮತ್ತು ನಿರ್ವಹಣೆಗೆ ಸಿಬ್ಬಂದಿಯ ಕೊರತೆಗಳಂಥ ಕಾರಣಗಳಿಂದಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಕೆಲವು ಯೋಜನೆಗಳು ದೀರ್ಘ ಅವಧಿಯವರೆಗೂ ಕಾರ್ಯನಿರ್ವಹಿಸದೇ ಇದ್ದರೂ ಸಹ, ಅದು ಆಡಳಿತಗಾರರ ಗಮನ ಸೆಳೆದಿಲ್ಲ. ಕಾರ್ಯ ನಿರ್ವಹಿಸದೇ ಇರುವ ಹಲವು ಯೋಜನೆಗಳನ್ನು ಕೋಷ್ಟಕ 6.15ರಲ್ಲಿ ಸೂಚಿಸಲಾಗಿದೆ. ಇನ್ನೂ ಇತರೆ ಯೋಜನೆಗಳ ಕೆಲಸ ಪೂರ್ಣಗೊಳ್ಳದೇ ಇರುವುದರಿಂದ ಅಥವಾ ಇತ್ತೀಚಿನ ಅವಧಿಗಳಲ್ಲಿ ಕಾರ್ಯ ನಿರ್ವಹಿಸುತ್ತಿಲ್ಲ.

ಸುರಪುರ ತಾಲ್ಲೂಕಿನಲ್ಲಿ ಶೇ. 25ರಷ್ಟು ಯೋಜನೆಗಳು, ನಿರ್ವಹಣೆಯ ಕೊರತೆ, ರಿಪೇರಿಯಲ್ಲಿ ವಿಳಂಬ, ಫ್ಲೋರೈಡ್ ಪ್ರಮಾಣ ಅಧಿಕವಾಗಿರುವುದು, ಸೋರುವಿಕೆ ಮತ್ತು

ಮುರಿಯುವಿಕೆ, ಪೈಪ್ ಲೈನ್ ಮತ್ತು ನಿರ್ಮಾಣ ಸ್ಥಳದ ಸಮಸ್ಯೆಗಳು, ನೀರಿನ ಮೂಲ ಬಸಿಯುವಿಕೆ ಮುಂತಾದ ಹಲವಾರು ಕಾರಣಗಳಿಂದ ಕಾರ್ಯ ನಿರ್ವಹಿಸುತ್ತಿಲ್ಲ. ಹಲವು ಯೋಜನೆಗಳು ಅಂದರೆ 11 ಯೋಜನೆಗಳು 2–4 ವರ್ಷಗಳಿಂದ ಕಾರ್ಯನಿರ್ವಹಿಸುತ್ತಿಲ್ಲ. ಇದು ರಿಪೇರಿಯಂಥ ನಿರ್ವಹಣೆ ಕೆಲಸ ಕಾರ್ಯಗಳಲ್ಲಿ ನಿರ್ಲಕ್ಷತೆಯನ್ನು ಸೂಚಿಸುತ್ತದೆ. ಕೆಲವನ್ನು ರಿಪೇರಿ ಮಾಡಲು ಸಾಧ್ಯವಿಲ್ಲ. ಆದರೆ ಅವುಗಳನ್ನು ಇನ್ನೂ ಬದಲಾಯಿಸಿಲ್ಲ.

- ಕಿರು ನೀರು ಪೂರೈಕೆ ಯೋಜನೆಗಳನ್ನು ಗಮನಿಸಿದರೆ, ಚಿತ್ತಾಪುರದಲ್ಲಿ 20 ಮತ್ತು ಸುರಪುರ ತಾಲ್ಲೂಕಿನಲ್ಲಿ 21 ಯೋಜನೆಗಳು ಕಾರ್ಯ ನಿರ್ವಹಿಸುತ್ತಿಲ್ಲ. ಅಂದರೆ ಶೇ.17.86 ಮತ್ತು ಶೇ. 24.7ರಷ್ಟು ಯೋಜನೆಗಳು ಕಾರ್ಯಾನುಷ್ಠಾನದಲ್ಲಿಲ್ಲ. ಸಂಗ್ರಹ ಟ್ಯಾಂಕ್‌ಗಳನ್ನು ನಿರಂತರವಾಗಿ ಸ್ವಚ್ಛಗೊಳಿಸುತ್ತಿಲ್ಲ. ಮತ್ತು ಟ್ಯಾಪ್ ಮತ್ತು ಪೈಪ್‌ಗಳಲ್ಲಿಯ ಸೋರುವಿಕೆಯು ಸಾಮಾನ್ಯ ಸಂಗತಿಯಾಗಿದ್ದು, ಇದು ನೀರು ಪೋಲಾಗುವುದಕ್ಕೆ ಕಾರಣವಾಗುತ್ತಿದೆ.

- ಸುರಪುರ ತಾಲ್ಲೂಕಿನ ಯಲಿಗಿ, ಸುಗೂರ್, ಇಸ್ಲಾಪುರ, ಶಾಕಾಪುರ ಮತ್ತು ಇತರೆ ಹಲವಾರು ಗ್ರಾಮಗಳ ಜನರು ಈ ಯೋಜನೆಗಳು ಕಾರ್ಯ ನಿರ್ವಹಿಸದೇ ಇರುವುದರ ಪರಿಣಾಮವಾಗಿ ಕುಡಿಯುವ ನೀರಿಗಾಗಿ, ಕುಡಿಯುವುದಕ್ಕೆ ಅಸುರಕ್ಷಿತ ಮೂಲಗಳಾದ ನದಿ ಮತ್ತು ಕಾಲುವೆಗಳ ನೀರನ್ನು ಅವಲಂಬಿಸಿದ್ದಾರೆ. ಹಲವಾರು ಗ್ರಾಮಗಳಲ್ಲಿ ಮಹಿಳೆಯರು 2 ರಿಂದ 3 ಕಿ.ಮೀ. ದೂರದಿಂದ ನೀರನ್ನು ಹೊತ್ತು ತರುತ್ತಾರೆ.

- ಕೈ ಪಂಪ್ ಇರುವ ಕೊಳವೆ ಬಾವಿಗಳನ್ನು ಗಮನಿಸಿದರೆ, ಎರಡೂ ತಾಲ್ಲೂಕುಗಳಲ್ಲಿಯೂ ಶೇ.40ರಷ್ಟು ಕೊಳವೆ ಬಾವಿಗಳು ಕಾರ್ಯ ನಿರ್ವಹಿಸುತ್ತಿಲ್ಲ. ಚಿತ್ತಾಪುರ ತಾಲ್ಲೂಕಿನಲ್ಲಿ ಶೇ. 71ರಷ್ಟು ಮತ್ತು ಸುರಪುರ ತಾಲ್ಲೂಕಿನಲ್ಲಿ ಶೇ. 52.8ರಷ್ಟು ಕೈ ಪಂಪ್‌ಗಳನ್ನು ರಿಪೇರಿ ಮಾಡಬಹುದಾಗಿದೆ. ಆದರೆ ವಿಳಂಬವಾಗಿ ರಿಪೇರಿ ಮಾಡಲಾಗುತ್ತಿದ್ದು ಇದರಿಂದ ಜನರಿಗೆ ಅನಾನುಕೂಲವಾಗುತ್ತದೆ.

## ಸಲಹೆಗಳು

ಎರಡು ತಾಲ್ಲೂಕುಗಳಲ್ಲಿಯೂ ನೀರು ಪೂರೈಕೆ ಯೋಜನೆಗಳಿಗಾಗಿ ಬಹಳಷ್ಟು ಬಂಡವಾಳವನ್ನು ತೊಡಗಿಸಲಾಗಿದೆ. ಆದರೆ ಅನುಷ್ಠಾನದಲ್ಲಿ ಮತ್ತು ನಿರ್ವಹಣೆಗಳಲ್ಲಿಯ ಕೊರತೆಯಿಂದಾಗಿ ಅವುಗಳ ಕಾರ್ಯಾನುಚರಣೆಯು ತೃಪ್ತಿದಾಯಕವಾಗಿಲ್ಲ. ಇದರಿಂದಾಗಿ ಜನರು ಪದೇ ಪದೇ ನೀರಿನ ಕೊರತೆಯಂಥ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಎಲ್ಲಾ ಅವಧಿಗಳಲ್ಲಿ ಸಹ ನೀರಿನ ಪೂರೈಕೆ ಸಾಕಷ್ಟು ಪ್ರಮಾಣದಲ್ಲಿಲ್ಲ ಬೇಸಿಗೆ ಕಾಲದಲ್ಲಿ ನೀರಿನ ಕೊರತೆಯು ತೀವ್ರವಾಗಿರುತ್ತದೆ. ಸಹಭಾಗಿತ್ವ ನೀರು ಪೂರೈಕೆ ಯೋಜನೆಗಳು ಜನರಲ್ಲಿ ಹೆಚ್ಚು ಪ್ರಸಿದ್ಧಿಗೊಂಡಿಲ್ಲ. ಇವುಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕಾದ ಅಗತ್ಯವಿದೆ. ಇನ್ನು ಮುಂದಿನ ದಿನಗಳಲ್ಲಿ ಯೋಜನೆಗಳ ಅನುಷ್ಠಾನದಲ್ಲಿ 'ಪಾವತಿಸಿ ಮತ್ತು ಬಳಸಿ' ಎಂಬ ತತ್ವವನ್ನು ಅಳವಡಿಸಬೇಕು.

ಈ ನೀರು ಪೂರೈಕೆ ಯೋಜನೆಗಳ ವ್ಯವಸ್ಥಾಪನೆ ಮತ್ತು ನಿರ್ವಹಣೆಯು ಪಂಚಾಯತ್‌ಗಳ ಜವಾಬ್ದಾರಿಯಾಗಿದೆ. ಆದರೆ ಪಂಚಾಯಿತಿಗಳು ಈ ದೃಷ್ಟಿಯಲ್ಲಿ ಹೆಚ್ಚು ಅದಕ್ಷತೆಯಿಂದ ಕೂಡಿರುವಂತೆ ಕಂಡುಬರುತ್ತಿದೆ. ಪಂಚಾಯತ್‌ಗಳು ಬಳಕೆಯ ವೆಚ್ಚವನ್ನು ಸಂಗ್ರಹಿಸಿ, ಆ ಹಣವನ್ನು ಈ ನೀರು ಪೂರೈಕೆ ಯೋಜನೆಗಳ ಅನುಷ್ಠಾನ ಮತ್ತು ನಿರ್ವಹಣೆಗಾಗಿ ಬಳಸಬಹುದಾಗಿದೆ. ಜನರಿಗೆ ನಿಗದಿತವಾಗಿ ನೀರು ಪೂರೈಕೆಯ ಭರವಸೆಯನ್ನು ನೀಡಿದರೆ ಜನರು ಬಳಕೆಯ ವೆಚ್ಚವನ್ನು ನೀಡಲು ಸಿದ್ಧರಿದ್ದಾರೆ.

## ನೈರ್ಮಲ್ಯ

ಜಿಲ್ಲೆಯಲ್ಲಿ ನೈರ್ಮಲ್ಯೀಕರಣದ ಪ್ರಗತಿಯು ಅಸಮರ್ಪಕ, ಅತೃಪ್ತಿದಾಯಕವಾಗಿದೆ. ಕೇವಲ ಶೇ. 18.6ರಷ್ಟು ಕುಟುಂಬಗಳು ಮಾತ್ರ ಶೌಚಾಲಯಗಳ ವ್ಯವಸ್ಥೆಯನ್ನು ಹೊಂದಿವೆ. ಜಿಲ್ಲೆಯಲ್ಲಿಯ ಎಲ್ಲಾ ತಾಲ್ಲೂಕುಗಳು ಜಿಲ್ಲೆಯ ಸರಾಸರಿ ಮಟ್ಟಕ್ಕಿಂತಲೂ ಕೆಳಹಂತದಲ್ಲಿವೆ. ಅಫ್ಜಲಪುರ, ಚಿಂಚೋಳಿ ಮತ್ತು ಜೇವರ್ಗಿ ತಾಲ್ಲೂಕುಗಳಲ್ಲಿಯ ಸ್ಥಿತಿಯು

ಶೋಚನೀಯವಾಗಿದ್ದು, ಇಲ್ಲಿ ಕೇವಲ ಶೇ.5 ಕುಟುಂಬಗಳಷ್ಟು ಮಾತ್ರ ಶೌಚಾಲಯದ ವ್ಯವಸ್ಥೆಯನ್ನು ಪಡೆದುಕೊಂಡಿದೆ. ಗುಲಬರ್ಗಾವನ್ನು ಹೊರತುಪಡಿಸಿದರೆ ಇತರೆ ಎಲ್ಲ ತಾಲ್ಲೂಕುಗಳಲ್ಲಿ ಶೌಚಾಲಯಗಳನ್ನು ಹೊಂದಿರುವವರ ಜನಸಂಖ್ಯೆಯ ಪ್ರಮಾಣ ಶೇ.15ಕ್ಕಿಂತಲೂ ಕಡಿಮೆ ಇದೆ. ಕೇವಲ ಗುಲಬರ್ಗಾ ತಾಲ್ಲೂಕಿನಲ್ಲಿ ಮಾತ್ರ ಶೇ. 43.3 ರಷ್ಟು ಕುಟುಂಬಗಳು ಶೌಚಾಲಯಗಳನ್ನು ಹೊಂದಿದ್ದು, ಇದು ಜಿಲ್ಲೆಯಲ್ಲಿಯೇ ಅಧಿಕ ಮಟ್ಟದಲ್ಲಿದೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆ ಅಗಾಧ ಅಂತರವಿದೆ. ಜಿಲ್ಲೆಯಲ್ಲಿ ಗ್ರಾಮೀಣ ನೈರ್ಮಲ್ಯೀಕರಣವು ಅತ್ಯಂತ ದುಸ್ಥಿತಿಯಲ್ಲಿದೆ. ಎಲ್ಲ ತಾಲ್ಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ಶೌಚಾಲಯಗಳನ್ನು ಹೊಂದಿರುವ ಕುಟುಂಬಗಳ ಪ್ರದೇಶವು ಶೇ.10 ಕ್ಕಿಂತಲೂ ಕಡಿಮೆ ಇದೆ. ಏಳು ತಾಲ್ಲೂಕುಗಳಲ್ಲಿ ಅಂದರೆ, ಅಫ್ಜಲಪುರ, ಆಳಂದ, ಚಿಂಚೋಳಿ, ಚಿತ್ತಾಪುರ, ಗುಲಬರ್ಗಾ, ಜೇವರ್ಗಿ ಮತ್ತು ಯಾದಗಿರಿಗಳಲ್ಲಿ ಅವುಗಳ ಪ್ರಮಾಣವು ಶೇ.5ಕ್ಕಿಂತಲೂ ಕಡಿಮೆ ಇದೆ. ಚಿತ್ತಾಪುರ ಮತ್ತು ಗುಲಬರ್ಗಾ ತಾಲ್ಲೂಕುಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿಯೂ ಅಂತರವು ಅಗಾಧ ಪ್ರಮಾಣದಲ್ಲಿದೆ. (ಕ್ರಮೀಣ ಶೇ. 73.94 ಮತ್ತು ಶೇ. 70.2) ಈ ಎರಡು ತಾಲ್ಲೂಕುಗಳನ್ನು ಹೊರತು ಪಡಿಸಿದರೆ, ಉಳಿದ ಇತರ ಎಲ್ಲ ತಾಲ್ಲೂಕುಗಳ ನಗರ ಪ್ರದೇಶಗಳಲ್ಲಿಯೂ ನೈರ್ಮಲ್ಯೀಕರಣ ಪ್ರಮಾಣ ಶೇ. 50ಕ್ಕಿಂತಲೂ ಕಡಿಮೆ. ಅಫ್ಜಲಪುರ ತಾಲ್ಲೂಕಿನಲ್ಲಿ ಇದು ಕೇವಲ ಶೇ.15 ಆಗಿದೆ.

ಶೌಚಾಲಯಗಳ ಮಾದರಿಗಳಿಗೆ ಸಂಬಂಧಿಸಿದಂತೆ ಅನುಪಯುಕ್ತ ನೀರು ಸಂಪರ್ಕ ಹೊಂದಿರುವ ಕುಣಿಗಳ ಮಾದರಿಯನ್ನು ಹೊಂದಿರುವ ಶೌಚಾಲಯಗಳು ಗ್ರಾಮೀಣ ಪ್ರದೇಶದಲ್ಲಿ ಅಧಿಕ ಪ್ರಮಾಣದಲ್ಲಿದ್ದು, ಅದು ಶೇ. 74.31 ಆಗಿದೆ. ಮುಚ್ಚಿದ ಚರಂಡಿ ವ್ಯವಸ್ಥೆಯು ಕೇವಲ ನಗರ

ಕೋಷ್ಟಕ 6.16

**ಸ್ನಾನದ ಮನೆ, ಶೌಚಾಲಯ ಮತ್ತು ಒಳಚರಂಡಿ ಸೌಲಭ್ಯಗಳಿರುವ ಕುಟುಂಬ ಘಟಕಗಳ ಸಂಖ್ಯೆ**

| ಕ್ರ.ಸಂ. | ಸೌಲಭ್ಯಗಳ ವಿಧಗಳು | ಒಟ್ಟು | % | ಗ್ರಾಮೀಣ | % | ನಗರ | % |
|---|---|---|---|---|---|---|---|
| 1 | ಒಟ್ಟು ಕುಟುಂಬ ಘಟಕಗಳು | 542937 | – | 402306 | – | 140831 | – |
| 2 | ಸ್ನಾನದ ಮನೆಗಳಿರುವ ಕುಟುಂಬ ಘಟಕಗಳು | 162733 | 30.0 | 87187 | 21.7 | 75546 | 53.7 |
| 3 | ಮನೆಯೊಳಗಿರುವ ಸೌಚಾಲಯಗಳ ವಿಧ | | | | | | |
| | ಅ) ಗುಂಡಿಗಳಿರುವ ಶೌಚಾಲಯಗಳು | 29029 | 5.35 | 9571 | 2.38 | 19458 | 13.84 |
| | ಆ) ನೀರಿನ ಪೂರೈಕೆಯಿರುವ ಶೌಚಾಲಯಗಳು | 26703 | 4.92 | 4772 | 1.18 | 21931 | 15.6 |
| | ಇ) ಇತರೆ ಶೌಚಾಲಯಗಳು | 45372 | 8.36 | 6372 | 1.58 | 39000 | 27.73 |
| | ಶೌಚಾಲಯಗಳಿರುವ ಮನೆಗಳು | 101104 | 18.63 | 20715 | 5.14 | 80389 | 57.17 |
| | ಶೌಚಾಲಯಗಳಿಲ್ಲದ ಮನೆಗಳು | 441833 | 81.37 | 381591 | 94.86 | 60242 | 42.83 |
| 4 | ಕೊಳಚೆ ನೀರಿಗೆ ಒಳಚರಂಡಿ ವ್ಯವಸ್ಥೆಯ ವಿಧ | | | | | | |
| | ಅ) ಮುಚ್ಚಿದ ಒಳಚರಂಡಿ | 48074 | 8.85 | 9948 | 2.48 | 38126 | 27.11 |
| | ಆ) ತೆರೆದ ಒಳಚರಂಡಿ | 151896 | 27.98 | 93404 | 23.21 | 58492 | 41.60 |
| | ಚರಂಡಿಯಿರುವ ಮನೆಗಳು | 199970 | 36.83 | 103352 | 25.69 | 96618 | 68.71 |
| | ಚರಂಡಿಗಳಿಲ್ಲದ ಮನೆಗಳು | 342967 | 63.17 | 298954 | 74.31 | 44013 | 31.29 |

ಪ್ರದೇಶದಲ್ಲಿ (ಶೇ. 27.1) ಮಾತ್ರ ಕಂಡುಬರುತ್ತದೆ. ತೆರೆದ ಚರಂಡಿ ವ್ಯವಸ್ಥೆಯು ನಗರ ಮತ್ತು ಗ್ರಾಮೀಣ ಪ್ರದೇಶಗಳೆರಡರಲ್ಲಿಯೂ ಸಾಮಾನ್ಯವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಅದು 23.1 ಆಗಿದ್ದರೆ, ನಗರ ಪ್ರದೇಶದಲ್ಲಿ ಶೇ. 42 ಆಗಿದೆ. ಆರೋಗ್ಯ ಮತ್ತು ಶುಚಿತ್ವದ ದೃಷ್ಟಿಯಿಂದ ನೋಡುವುದಾದರೆ ತೆರೆದ ಚರಂಡಿ ವ್ಯವಸ್ಥೆಯು ಉತ್ತಮವಾದುದಲ್ಲ.

ಇವುಗಳ ಹಿನ್ನೆಲೆಯಲ್ಲಿ ಗಮನಿಸಿದಂತೆ ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯೀಕರಣ ವ್ಯವಸ್ಥೆಯ ಲಭ್ಯತೆಯು ಉತ್ತಮವಾಗಿಲ್ಲ. ಅದು ದುಸ್ಥಿತಿಯಲ್ಲಿದೆ. ನಗರಪ್ರದೇಶದಲ್ಲಿಯೂ ಸಹ ಪರಿಸ್ಥಿತಿಯು ತೃಪ್ತಿದಾಯಕವಾಗಿಲ್ಲ. ಆದ್ದರಿಂದ ಜನರ ಜೀವನ ಸ್ಥಿತಿ–ಗತಿಯನ್ನು ಉತ್ತಮ ಪಡಿಸಬೇಕಾದರೆ ಜನರ ಮೂಲಭೂತ ಅವಶ್ಯಕತೆಗಳಲ್ಲಿಯ ಕೊರತೆಯನ್ನು ನೀಗಿಸಬೇಕಾಗಿದೆ. ಮಾನವ ಅಭಿವೃದ್ಧಿಯನ್ನು ಉದ್ದೀಪನಗೊಳಿಸುವುದಕ್ಕೆ ನೈರ್ಮಲ್ಯೀಕರಣ ಅತ್ಯಂತ ಅಗತ್ಯವಾದ ಅಂಶವಾಗಿದೆ. ಜಿಲ್ಲೆಯಲ್ಲಿ ಸಂಪೂರ್ಣ ನೈರ್ಮಲ್ಯ ಆಂದೋಲನ ಕಾರ್ಯಕ್ರಮವು ಆಚರಣೆಯಲ್ಲಿದ್ದರೂ ಅದರ ಪ್ರಗತಿಯು ತೃಪ್ತಿದಾಯಕವಾಗಿಲ್ಲ.

ಗ್ರಾಮೀಣ ಪ್ರದೇಶದಲ್ಲಿ (ಅಧ್ಯಯನಗಳು ಗುರುತಿಸಿದಂತೆ) ಎರಡು ಅಂಶಗಳು ವೈಯಕ್ತಿಕ ಕುಟುಂಬಗಳ ಶೌಚಾಲಯಗಳ ನಿರ್ಮಾಣಕ್ಕೆ ತೊಂದರೆದಾಯಕವಾಗಿರುವ ಅಂಶವಾಗಿದೆ. ಅವುಗಳೆಂದರೆ ಸ್ಥಳ ಮತ್ತು ಸಂಸ್ಕೃತಿ. ಮನೆಗಳು ಒಂದಕ್ಕೊಂದು ಅತ್ಯಂತ ಸನಿಹದಲ್ಲಿರುತ್ತವೆ. ಮನೆಗಳ ನಡುವೆ ಶೌಚಾಲಯಗಳ ನಿರ್ಮಾಣಕ್ಕಾಗಿ ಸ್ಥಳವನ್ನು ಬಿಟ್ಟಿರುವುದಿಲ್ಲ. ಇದು ಸಂಪೂರ್ಣ ಶೌಚಾಲಯಗಳ ಆಂದೋಲನ ಕಾರ್ಯಕ್ರಮದಲ್ಲಿ ನಿಗದಿತ ಗುರಿಯನ್ನು ತಲುಪದೇ ಇರುವುದಕ್ಕೆ ಕಾರಣವಾದ ಪ್ರಮುಖ ಅಂಶವಾಗಿದೆ. ಮತ್ತೊಂದು ಎಂದರೆ ಸಂಸ್ಕೃತಿಗೆ ಸಂಬಂಧಿಸಿದ್ದು. ಸಾಂಸ್ಕೃತಿಕ ಮತ್ತು ವರ್ತನೆಯಂಥ ಅಂಶಗಳಿಂದಾಗಿ ಜನರು ತಮ್ಮ ಮನೆಯ ಶೌಚಾಲಯಗಳ ನಿರ್ಮಾಣವನ್ನು ಬಯಸುವುದಿಲ್ಲ. ಜನರಿಗೆ ಶುಚಿತ್ವದ ಪ್ರಾಮುಖ್ಯತೆ ಬಗ್ಗೆ ಜಾಗೃತಿಯನ್ನುಂಟು ಮಾಡಬೇಕಾದ ಅಗತ್ಯವಿದೆ ಮತ್ತು ಅವರುಗಳು ಶೌಚಾಲಯಗಳನ್ನು ಉಪಯೋಗಿಸುವಂತೆ ಪ್ರೇರೇಪಿಸಬೇಕಾಗಿದೆ. ಮುಂದುವರಿದು, ಗ್ರಾಮೀಣ ಪ್ರದೇಶದಲ್ಲಿ ನೀರಿನ ಕೊರತೆಯು ಸಹ ಶೌಚಾಲಯಗಳನ್ನು ಬಳಸದೇ ಇರುವುದಕ್ಕೆ ಮತ್ತೊಂದು ಕಾರಣವಾಗಿದೆ.

## ಆತಂಕಕಾರಿ ಸಂಗತಿಗಳು

ಗುಲಬರ್ಗಾ ಜಿಲ್ಲೆಯ ವಸತಿ, ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣದ ಸ್ಥಿತಿಯನ್ನು ಅವಲೋಕಿಸಿದೆ. ಜಿಲ್ಲೆಯ ಜನರ ಜೀವನ ಸ್ಥಿತಿಯು ಅತ್ಯಂತ 'ದುಸ್ಥಿತಿಯಲ್ಲಿದೆ. ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಇನ್ನು ತಾತ್ಕಾಲಿಕ ವಸತಿಯನ್ನು ಹೊಂದಿರುವವರ ಪ್ರಮಾಣ ಅಧಿಕ ಮಟ್ಟದಲ್ಲಿರುವುದು ಕಂಡುಬರುತ್ತದೆ. ಇದು ಗ್ರಾಮೀಣ ಬಡವರ ಆಶ್ರಯದಂಥ ಮೂಲಭೂತ ಅವಶ್ಯಕತೆಯನ್ನು ಇನ್ನು ಪೂರೈಸಲು ಸಾಧ್ಯವಾಗಿಲ್ಲ ಎಂಬುದನ್ನು ತೋರಿಸುತ್ತಿದೆ. ಜಿಲ್ಲೆಯಲ್ಲಿ ಹಲವಾರು ಗ್ರಾಮೀಣ ವಸತಿ ಕಾರ್ಯಕ್ರಮಗಳು ಅನುಷ್ಠಾನಗೊಳ್ಳುತ್ತಿದ್ದರೂ, ಈ ಪರಿಸ್ಥಿತಿ ಇರುವುದು ದುರದೃಷ್ಟಕರ ಸಂಗತಿಯಾಗಿದೆ. ಜಿಲ್ಲೆಯಲ್ಲಿ ಜನಸಂಖ್ಯೆಯು ಅಧಿಕಗೊಳ್ಳುತ್ತಿರುವುದು, ಕಾರ್ಯಕ್ರಮಗಳು ಹೆಚ್ಚು ವಿಸ್ತಾರಗೊಳ್ಳದೇ ಇರುವುದು ಮತ್ತು ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸದೇ ಇರುವುದು ಈ ಪರಿಸ್ಥಿತಿಗೆ ಕಾರಣವಾಗಿರಬಹುದಾಗಿದೆ. ಇರುವ ಮನೆಗಳ ಕಟ್ಟಡಗಳಿಗೆ ಗಾಳಿ ಮತ್ತು ಬೆಳಕಿನಂಥ ಮೂಲ ಅಗತ್ಯಗಳ ಕೊರತೆ ಇದ್ದು, ಮಹಿಳೆಯರು ಮತ್ತು ಮಕ್ಕಳು ಶುದ್ಧ ಗಾಳಿಯ ಸೇವನೆಯಿಂದ ವಂಚಿತರಾಗುತ್ತಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಪ್ರಸ್ತುತ ಇರುವ ಕುಡಿಯುವ ನೀರಿನ ಪೂರೈಕೆಯ ವ್ಯವಸ್ಥೆಯು ಸಮರ್ಪಕವಾಗಿಲ್ಲ. ಕುಟುಂಬಗಳಿಗೆ ಕನಿಷ್ಠವಾದ ಅಗತ್ಯವಾಗಿರುವ 55 ಲೀಟರ್ ನೀರನ್ನು ಸಮರ್ಪಕವಾಗಿ ಪೂರೈಸಲು ಸಾಧ್ಯವಾಗುತ್ತಿಲ್ಲ. ಅತ್ಯಂತ ಮುಖ್ಯವಾದ ಸಂಗತಿ ಎಂದರೆ, ಗ್ರಾಮಗಳಿಗೆ ಹಲವಾರು ನೀರು ಪೂರೈಕೆ ಯೋಜನೆಗಳನ್ನು ಒದಗಿಸಲಾಗಿದೆ. ಅವುಗಳಲ್ಲಿ ಬಹಳಷ್ಟು ಪ್ರಮಾಣದ ಯೋಜನೆಗಳ ಹಲವಾರು ಕಾರಣಗಳಿಂದ ಅಂದರೆ ತಪ್ಪು ಮೂಲವನ್ನು ಗುರುತಿಸುವಿಕೆ, ಸ್ಥಳ, ನಿರ್ವಹಣೆಯಲ್ಲಿಯ

ಕೊರತೆಗಳಿಂದಾಗಿ ಅವು ಕಾರ್ಯ ನಿರ್ವಹಿಸುತ್ತಿಲ್ಲ. ನಿರ್ವಹಣೆಯ ಅವಕಾಶದಲ್ಲಿಯ ಕೊರತೆಯೇ ಈ ಯೋಜನೆಗಳ ಪ್ರಮುಖ ಅನಾನುಕೂಲವಾಗಿದೆ. ಸಹಭಾಗಿತ್ವ ಯೋಜನೆಗಳಿಂದ 'ಸ್ವಜಲಧಾರ' ಯೋಜನೆಗಳ ಪ್ರಮಾಣ ಕಡಿಮೆ. ಇಲ್ಲಿ ಗಮನ ಹರಿಸಬೇಕಾದ ಸಂಗತಿಯೆಂದರೆ ಇರುವ ಯೋಜನೆ ರಿಪೇರಿ ಮಾಡುವುದರ ಮೂಲಕ ಅವುಗಳ ಕಾರ್ಯ ನಿರ್ವಹಣೆಯನ್ನು ಸುಧಾರಿಸಬೇಕು. ಮತ್ತು ಹೆಚ್ಚುವರಿ ಯೋಜನೆಗಳಲ್ಲಿ ಹೂಡಿಕೆಯನ್ನು ಮಾಡಬೇಕು. ಜೊತೆಯಲ್ಲಿ ಸಹಭಾಗಿತ್ವವಾದಿ ಯೋಜನೆಗಳಿಗೆ ಒತ್ತಾಯ ಮಾಡಬೇಕು. ಮತ್ತು ಸೌಲಭ್ಯಗಳನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳುವಂತೆ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕು.

ಚೌಕಟ್ಟು 6.4

### ವಲಸಿಗರ ಜೀವನ ಸ್ಥಿತಿ

ಶಹಾಪುರ ಮತ್ತು ಸುರಪುರ ತಾಲ್ಲೂಕುಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಮೂಲಕ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದ ರೈತರು ಹಳ್ಳಿಗಳಿಗೆ ಬಂದು ಅಲ್ಲಿಯ ಭೂಮಿಯನ್ನು ಲೀಜ್ ಮೂಲಕ ಪಡೆದು, ಭತ್ತದ ಸಾಗುವಳಿಯನ್ನು ಮಾಡುತ್ತಿದ್ದಾರೆ. ಅವು ತಮ್ಮೊಂದಿಗೆ ಕೆಲ ಕಾರ್ಮಿಕರನ್ನು ಸಹ ಕರೆತಂದಿರುತ್ತಾರೆ. ಇಂಥ ಜನರು ಗ್ರಾಮದಿಂದ ದೂರ, ಗದ್ದೆಗಳ ಸನಿಹದಲ್ಲಿ ನೆಲೆಸಿರುತ್ತಾರೆ. ಇಂಥ ಸ್ಥಳಗಳನ್ನು 'ಕ್ಯಾಂಪ್‌ಗಳು' ಎಂದು ಕರೆಯಲಾಗುತ್ತದೆ. ಇಂಥ ಕ್ಯಾಂಪ್‌ಗಳ ಸಂಖ್ಯೆಗಳು ನಿರಂತರವಾಗಿ ಅಧಿಕವಾಗುತ್ತಿದೆ. ಪ್ರತಿ ಕ್ಯಾಂಪ್ 15ರಿಂದ 20 ಮನೆಗಳ ಅಥವಾ ಅದಕ್ಕಿಂತ ಹೆಚ್ಚು ಮನೆಗಳಿಂದ ಕೂಡಿರುತ್ತವೆ. ಇಂಥ ಮನೆಗಳು ಮಣ್ಣಿನ ಗೋಡೆಗಳಿಂದ ಮತ್ತು ಹುಲ್ಲಿನ ಮೇಲ್ಛಾವಣಿಯಿಂದ ನಿರ್ಮಿಸಲಾಗುತ್ತದೆ.

ಇವುಗಳಲ್ಲಿ ಕೆಲವು ಕ್ಯಾಂಪ್‌ಗಳು ಕೊಳವೆ ಬಾವಿಗಳ ಮೂಲಕ ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿರುತ್ತವೆ. ಇತರೆ ಕೆಲವು ಕುಡಿಯುವ ನೀರಿಗಾಗಿ ಕಾಲುವೆ ಅಥವಾ ನದಿಗಳನ್ನು ಅವಲಂಬಿಸಿರುತ್ತದೆ. ಜನರು ಗೃಹ ಕೆಲಸಗಳಿಗೆ ಬೇಕಾಗುವ ಕಿರಾಣಿ ಸಾಮಾನುಗಳನ್ನು ಗ್ರಾಮಗಳ ಅಂಗಡಿಗಳಿಂದ ಖರೀದಿಸುತ್ತಾರೆ. ಕೆಲವು ಕ್ಯಾಂಪ್‌ಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಇನ್ನು ಕೆಲವು ಕ್ಯಾಂಪ್‌ಗಳಲ್ಲಿ ಈ ವ್ಯವಸ್ಥೆ ಇಲ್ಲ. ರೈತರ ಮಕ್ಕಳನ್ನು ಸನಿಹದ ಶಾಲೆಗಳಿಗೆ ಕಳುಹಿಸಲಾಗುತ್ತದೆ. ಆದರೆ ಕಾರ್ಮಿಕರ ಮಕ್ಕಳಿಗೆ ಶಿಕ್ಷಣದ ಅವಕಾಶಗಳು ಕಡಿಮೆ. ಸುರಪುರ ತಾಲ್ಲೂಕಿನ ಕಿರದಳ್ಳಿ ಕ್ಯಾಂಪ್‌ನಲ್ಲಿ ಶಿಕ್ಷಣ ಪಡೆದ ಯುವಕರು ಪೂರ್ವ–ಪ್ರಾಥಮಿಕ ಶಾಲೆಯನ್ನು ನಡೆಸುತ್ತಿದ್ದಾರೆ. ಪ್ರಾಥಮಿಕ ಶಿಕ್ಷಣಕ್ಕಾಗಿ ಮಕ್ಕಳನ್ನು ಕಿರದಳ್ಳಿ ಅಥವಾ ಕೆಂಭಾವಿಗೆ ಕಳುಹಿಸಲಾಗುತ್ತದೆ. ಇಂಥ ಕುಟುಂಬಗಳ ಪ್ರಮಾಣವು ಶೇ. 15ಕ್ಕಿಂತಲೂ ಕಡಿಮೆ ಇದೆ.

ನೊಂದಾಯಿತ ಆರೋಗ್ಯ ವೈದ್ಯರು ವಾರದಲ್ಲಿ ಎರಡು ಬಾರಿ ಕ್ಯಾಂಪ್‌ಗೆ ಭೇಟಿಗಾಗಿ ನೀಡಿ ಜನರ ಆರೋಗ್ಯ ಅಗತ್ಯಗಳನ್ನು ಒದಗಿಸುತ್ತಾರೆ. ಜನರು ತಮ್ಮದೇ ಆದ ಸಾಂಸ್ಕೃತಿಕ ಆಚರಣೆಗಳನ್ನು ಜೀವನ ಗತಿಯನ್ನು ಅನುಸರಿಸುತ್ತಿದ್ದು, ಗ್ರಾಮದ ಜನರಿಂದ ದೂರ ಉಳಿದಿದ್ದಾರೆ. ಇಂಥ ಕ್ಯಾಂಪುಗಳಲ್ಲಿ ವಾಸಿಸುತ್ತಿರುವ ಬಡ ಕಾರ್ಮಿಕರು ಶಿಕ್ಷಣ, ಜ್ಞಾನ, ಅಲ್ಲದೇ ಅಗತ್ಯ ಜೀವನಾವಶ್ಯಕತೆಗಳಿಂದ ವಂಚಿತರಾಗಿದ್ದಾರೆ. ಅವರ ಆರೋಗ್ಯ ಅಗತ್ಯಗಳನ್ನು ಸಮರ್ಪಕವಾಗಿ ಒದಲಾಗಿಸುತ್ತಿಲ್ಲ. ಮನೆಗಳಲ್ಲಿ ನಡೆಯುವ ಹೆರಿಗೆಗಳ ಪ್ರಮಾಣ ಸಹ ಅಧಿಕ. ಒಂದು ವೇಳೆ ಈ ಸ್ಥಳವನ್ನು ಬಿಟ್ಟು ಬೇರೆ ಸ್ಥಳಗಳಿಗೆ ಹೋಗಬೇಕೆಂದು ನಿರ್ಧರಿಸಿದರೆ ಅಥವಾ ತಮ್ಮ ಮೂಲ ವಾಸಸ್ಥಳಗಳಿಗೆ ಹೊಂದಿರಬೇಕೆಂದು ಬಯಸಿದರೆ ಜನರು ಕ್ಯಾಂಪ್‌ನ್ನು ಬಿಡುವ ಮುನ್ನ ತಮ್ಮ ವಾಸಸ್ಥಳಗಳ ಕಟ್ಟಡಗಳನ್ನು ಹಾಳು ಮಾಡುತ್ತಾರೆ.

ಜೇವರ್ಗಿ, ಚಿತ್ತಾಪುರ, ಸುರಪುರ ಮತ್ತು ಶಹಪುರ ತಾಲ್ಲೂಕುಗಳಲ್ಲಿಯ ಸಮಸ್ಯೆಗಳಿಗೆ ತುರ್ತಾಗಿ ಗಮನ ಹರಿಸಬೇಕಾದ ಅಗತ್ಯವಿದೆ. ಎಲ್ಲ ತಾಲ್ಲೂಕುಗಳಲ್ಲಿ ನಗರ ಪ್ರದೇಶಗಳನ್ನು ಒಳಗೊಂಡಂತೆ ಬೇಸಿಗೆಯ ಕಾಲದಲ್ಲಿ ನೀರಿನ ಸಮಸ್ಯೆಯು ತೀಕ್ಷ್ಣವಾಗಿರುತ್ತದೆ. ಪ್ರತಿ ವರ್ಷದ ಬೇಸಿಗೆ ಕಾಲದಲ್ಲಿ ನಾಲ್ಕು ತಿಂಗಳುಗಳಲ್ಲಿ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ನೀರಿನ ತೀವ್ರ ಕೊರತೆ ಕಂಡುಬರುತ್ತದೆ. ಆಗ ತಾತ್ಕಾಲಿಕ ವ್ಯವಸ್ಥೆಯನ್ನು ಕಲ್ಪಿಸುವುದರ ಮೂಲಕ ಸಮಸ್ಯೆಯನ್ನು ನಿವಾರಿಸಲಾಗುತ್ತದೆ. ಆದರೆ ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವನ್ನು ಕಂಡುಕೊಳ್ಳಬೇಕಾಗಿದೆ. ಸಮರ್ಪಕ ನೀರು ಪೂರೈಕೆಯ ಭರವಸೆಗೆ ಸಮಗ್ರ ರೂಪುರೇಷೆ, ಚೌಕಟ್ಟಿನ ಅಗತ್ಯವಿದೆ. ನಗರ ಪ್ರದೇಶದ ಜಲಮಂಡಳಿಗಳು ಮತ್ತು ಸಂಬಂಧಿತ ಇಲಾಖೆಗಳು ಸಮಸ್ಯೆಯ ಪರಿಹಾರಕ್ಕಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಬೇಕು.

## ಶಿಫಾರಸ್ಸುಗಳು

ಜಿಲ್ಲೆಯಲ್ಲಿ ವಸತಿ ಯೋಜನೆಗಳು ದಕ್ಷತೆಯಿಂದ ಅನುಷ್ಠಾನಗೊಳ್ಳಬೇಕು ಮತ್ತು ಯೋಜನೆಗಳ ಭೌತಿಕ ಮತ್ತು ಹಣಕಾಸಿನ ಗುರಿಯನ್ನು ಪ್ರತಿವರ್ಷವೂ ಪೂರೈಸುವಂತಾಗಿರಬೇಕು.

ಯೋಜನೆಗಳ ತೀವ್ರ ಅನುಷ್ಠಾನಕ್ಕಾಗಿ ಅನುಷ್ಠಾನ ವ್ಯವಸ್ಥೆಯನ್ನು ಬಲಿಷ್ಠಪಡಿಸಬೇಕಾದ ಅಗತ್ಯತೆ ಇದೆ. ಪ್ರತಿವರ್ಷದ ಪ್ರಾರಂಭದಲ್ಲಿಯೇ ಹಣಕಾಸನ್ನು ಬಿಡುಗಡೆ ಮಾಡಬೇಕು. ಮತ್ತು ಫಲಾನುಭವಿಗಳ ಆಯ್ಕೆ, ಮತ್ತು ಅನುದಾನ ಕುರಿತಂತೆ ಗ್ರಾಮ ಪಂಚಾಯಿತಿಗಳಿಗೆ ಮಾಹಿತಿಯನ್ನು ನೀಡಬೇಕು. ಕಟ್ಟುನಿಟ್ಟಿನ ವೇಳಾಪಟ್ಟಿಯನ್ನು ರೂಪಿಸಿ, ಅದನ್ನು ವರ್ಷದ ಪ್ರಾರಂಭದ ಅವಧಿಯಲ್ಲಿ ಕಳುಹಿಸಿಕೊಡಬೇಕು. ಜಿಲ್ಲಾ ಪಂಚಾಯಿತಿಯ ಇಡೀ ಕಾರ್ಯಕ್ರಮವನ್ನು ಗಂಭೀರವಾಗಿ ಎಚ್ಚರ ವಹಿಸಬೇಕು.

ಗ್ರಾಮದ ಜನರಿಗೆ ಯೋಜನೆಯ ಬಗ್ಗೆ ಮಾಹಿತಿಯನ್ನು ನೀಡಬೇಕು ಇದರಿಂದ ಅವರು ಯೋಜನೆಯ ಅನುಷ್ಠಾನದಲ್ಲಿ ಪಾಲ್ಗೊಳ್ಳಲು ಸಹಾಯವಾಗುತ್ತದೆ. ಪ್ರಸ್ತುತ ಯೋಜನೆಯ ಅನುಷ್ಠಾನದಲ್ಲಿ ಪಾರದರ್ಶಕತೆ ಇಲ್ಲ. ಮನೆಗಳ ಗುಣಮಟ್ಟವನ್ನು ಮೇಲ್ದರ್ಜೆಗೇರಿಸಬೇಕು ಮತ್ತು ಸಾಮಗ್ರಿಗಳ ಗುಣಮಟ್ಟವನ್ನು ವ್ಯವಸ್ಥಿತವಾಗಿ ಪರಿಶೀಲಿಸಬೇಕು.

ಫಲಾನುಭವಿಗಳನ್ನು ಗ್ರಾಮಸಭೆಗಳ ಮೂಲಕ ಗುರುತಿಸಬೇಕು ಮತ್ತು ಗ್ರಾಮಸಭೆಗಳನ್ನು ನಡೆಸುವುದರ ಕುರಿತಂತೆ ಅಗತ್ಯ ದಾಖಲೆಗಳನ್ನು ಸಜ್ಜುಗೊಳಿಸಬೇಕು. ಇಲಾಖೆ ಮೇಲ್ವಿಚಾರಣೆ ಮತ್ತು ಪರಿಶೀಲನೆ ಅತ್ಯಗತ್ಯವಾದುದು. ಇಡೀ ವ್ಯವಸ್ಥೆಯು ಹೆಚ್ಚು ಪಾರದರ್ಶಕತೆಯಿಂದ ಕೂಡಿರಬೇಕು ಮತ್ತು ಎಲ್ಲರ ಉಪಯೋಗಕ್ಕಾಗಿ ದತ್ತಾಂಶಗಳು ದೊರೆಯುವಂತಾಗಬೇಕು.

ವಸತಿಯ ಪರಿಕಲ್ಪನೆಯು ಸಮಗ್ರವಾಗಿರಬೇಕು. ಒಂದು ಕಾಲೋನಿ ಅದರೊಂದಿಗೆ ಅದಕ್ಕೆ ಎಲ್ಲ ಕನಿಷ್ಠ ಅಗತ್ಯತೆಗಳನ್ನು ಒದಗಿಸುವಂಥ ಪರಿಕಲ್ಪನೆಯನ್ನು ಪ್ರಾರಂಭಿಸಬೇಕು. ಈಗ ಪ್ರಸ್ತುತ ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಆದರೆ ಅವುಗಳಿಗೆ ವಿದ್ಯುತ್ ನೀರು ಪೂರೈಕೆ ಅಥವಾ ರಸ್ತೆ ಸಂಪರ್ಕಗಳಂಥ ವ್ಯವಸ್ಥೆಗಳಿರುವುದಿಲ್ಲ. ಮನೆಯ ಜೊತೆಯಲ್ಲಿ ಎಲ್ಲಾ ಕನಿಷ್ಠ ಅಗತ್ಯಗಳನ್ನು ಪೂರೈಸುವಂಥ ತಂತ್ರವನ್ನು ಅಳವಡಿಸಿಕೊಳ್ಳಬೇಕು. ಇಂಥ ವಾಸಸ್ಥಳಗಳನ್ನು ಯೂನಿಟ್‌ಗಳನ್ನು ನಿರ್ಮಾಣ ಮಾಡಬೇಕು.

ಕುಟುಂಬಗಳಿಗೆ ಕನಿಷ್ಠ ಎಲ್‌ಪಿಸಿಡಿ ನೀರನ್ನು ನೀಡುವಲ್ಲಿ ಜಿಲ್ಲೆಯಲ್ಲಿಯ ಕುಡಿಯುವ ನೀರು ಮತ್ತು ನೈರ್ಮಲ್ಯೀಕರಣಗಳ ಪೂರೈಕೆಗಳು ಅಸಮರ್ಪಕವಾಗಿವೆ. ಜಿಲ್ಲೆಯ ಚಿತ್ತಾಪುರ, ಜೇವರ್ಗಿ, ಶಹಾಪುರ, ಆಳಂದ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ನೀರು ಪೂರೈಕೆ ಯೋಜನೆಗಳಿಗೆ ಹೆಚ್ಚುವರಿಯಾಗಿ ಹೂಡಿಕೆ ಮಾಡಬೇಕಾದ ಅಗತ್ಯ ಇದೆ. ಯೋಜನೆಗಳು ಸಮರ್ಪಕ ರೀತಿಯಲ್ಲಿ ಕಾರ್ಯ ನಿರ್ವಹಿಸಲು, ಅವುಗಳ ನಿರ್ವಹಣೆ ಮತ್ತು ಸಿಬ್ಬಂದಿಗಳಿಗೆ ಅಗತ್ಯ ಹಣಕಾಸಿನ ಲಭ್ಯತೆಯ ಭರವಸೆಯ ಅಗತ್ಯತೆ ಇದೆ. ಯೋಜನೆಯ ನಿರ್ವಹಣೆ ಮತ್ತು ಕಾರ್ಯಾಚರಣೆಗಳನ್ನು ಹೊರಗುತ್ತಿಗೆ ನೀಡಬಹುದಾಗಿದೆ. ಗ್ರಾಮಮಟ್ಟದಲ್ಲಿ, ಸ್ವ ಸಹಾಯ ಗುಂಪುಗಳಿಗೆ ಅಥವಾ ನೀರು ಬಳಕೆದಾರ ಅಸೋಸಿಯೇಷನ್‌ಗಳಿಗೆ ಯೋಜನೆಗಳ ಕಾರ್ಯಾಚರಣೆಯ ಕುರಿತಂತೆ ಮೇಲ್ವಿಚಾರಣೆಯನ್ನು ವಹಿಸಿಕೊಡಬೇಕಾಗಿದೆ. ಅಲ್ಲದೇ ಸಾರ್ವಜನಿಕರಲ್ಲಿ ನೀರನ್ನು ಯೋಗ್ಯ ರೀತಿಯಲ್ಲಿ ಉಪಯೋಗಿಸುವ ಕುರಿತಂತೆ ಜಾಗೃತಿಯನ್ನು ಮೂಡಿಸಬೇಕಾದ ಅನಿವಾರ್ಯತೆ ಇದೆ.

ಬೇಸಿಗೆಯ ಸಂದರ್ಭದಲ್ಲಿ ನೀರಿನ ಕೊರತೆಯ ಸಮಸ್ಯೆಯನ್ನು ನಿವಾರಿಸಲು ಶಾಶ್ವತವಾದ ಪರಿಹಾರವನ್ನು ಶೀಘ್ರವಾಗಿ ಕಂಡುಕೊಳ್ಳಬೇಕಾಗಿದೆ. ರಸಾಯನಿಕಗಳಿಂದ ಕೂಡಿದ ನೀರು ಪೂರೈಕೆಯಂಥ ಸಮಸ್ಯೆಯನ್ನು ಎದುರಿಸುತ್ತಿರುವ ಗ್ರಾಮಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಬೇಕು.

ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯೀಕರಣ ವ್ಯವಸ್ಥೆಯು ಶೋಚನೀಯವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಅಗತ್ಯ ಪ್ರೋತ್ಸಾಹಗಳು ಮತ್ತು ಮಧ್ಯಸ್ಥಿಕೆಗಳಿಂದ ಸಂಪೂರ್ಣ ಸ್ವಚ್ಛತಾ

ಆಂದೋಲನವನ್ನು ಸದೃಢಗೊಳಿಸಬೇಕು. ಜನರು ಖಾಸಗಿ ಶೌಚಾಲಯಗಳನ್ನು ನಿರ್ಮಿಸಿಕೊಳ್ಳುವುದಕ್ಕಾಗಿ ಸಮರ್ಪಕ ನೀರು ಪೂರೈಕೆಯ ಭರವಸೆಯನ್ನು ನೀಡಬೇಕು. ನೈರ್ಮಲ್ಯೀಕರಣಕ್ಕೆ ಗ್ರಾಮ ಪಂಚಾಯಿತಿಗಳನ್ನು ಜವಾಬ್ದಾರಿಯನ್ನಾಗಿ ಮಾಡಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಖಾಸಗಿ ಶೌಚಾಲಯಗಳ ವ್ಯವಸ್ಥೆ ಮತ್ತು ಸ್ಥಳದ ಅಭಾವ ಇರುವಲ್ಲಿ ಸಾರ್ವಜನಿಕ ಶೌಚಾಲಯಗಳನ್ನು ನಿರ್ಮಾಣ ಮಾಡಬಹುದು. ಜಿಲ್ಲೆಯ ಎಲ್ಲ ಭಾಗಗಳ ಗ್ರಾಮೀಣ ಜನರಿಗೆ ನೈರ್ಮಲ್ಯೀಕರಣ ಕುರಿತಂತೆ ಜಾಗೃತಿಯನ್ನು ಮೂಡಿಸಬೇಕಾದ ಅಗತ್ಯ ಇದೆ. ಇಂಥ ಜಾಗೃತಿ ಅಭಿಯಾನದಲ್ಲಿ ಸ್ವಸಹಾಯ ಸಂಘಗಳು, ಸರಕಾರೇತರ ಸಂಘ ಸಂಸ್ಥೆಗಹಳು, ಗ್ರಾಮ ಪಂಚಾಯಿತಿಗಳು, ಮತ್ತು ಗ್ರಾಮ ಮಟ್ಟದ ಸಂಘಟನೆಗಳು ಜೊತೆಗೂಡಬೇಕಾಗಿದೆ.

# ಲಿಂಗಸಂಬಂಧಗಳು ಮತ್ತು ಮಾನವ ಅಭಿವೃದ್ಧಿ




FEMALE LITERACY STATUS DURING 2001 CENSUS
Aland
39.2
Gulbarga
56.1
Chincholi
34.7
Afzalpur
37.5
Chitapur
37.7
Sedam
33.4
Jevargi
29.86
Yadgir
26.9
Shahpur
27.5
Shorapur
30.4
N
LEGEND
Talukas showing Female literacy higher than District average
Talukas showing Female literacy less than District average
State boundary
District boundary
Taluk boundary
SCALE 1:1100000
0 5 10 20 30 40 KM
76°30'0"E
77°0'0"E
77°30'0"E
18°0'0"N
17°30'0"N
17°0'0"N
16°30'0"N
16°0'0"N

ಅಧ್ಯಾಯ 7

# ಲಿಂಗಸಂಬಂಧಗಳು ಮತ್ತು ಮಾನವ ಅಭಿವೃದ್ಧಿ

## ಪ್ರಸ್ತಾವನೆ

ಸಮಾಜದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಅರ್ಧಭಾಗದಷ್ಟು ಮಹಿಳೆಯರಿದ್ದಾರೆ. ಆದಾಗ್ಯೂ ಅವರು ಜೀವನದ ಮೂಲಭೂತ ಅವಶ್ಯಕತೆಗಳಿಂದ ವಂಚಿತರಾಗಿದ್ದಾರೆ. ಪುರುಷಶಾಹಿ ವ್ಯವಸ್ಥೆ ಇರುವ ಸಮಾಜದಲ್ಲಿ ಲಿಂಗ ಅಸಮಾನತೆಗಳು ಅಸ್ತಿತ್ವದಲ್ಲಿರುತ್ತವೆ. ಇಂಥ ಸಮಾಜಗಳಲ್ಲಿ ಲಿಂಗಸಂಬಂಧಗಳನ್ನು ವಿಶ್ಲೇಷಣೆ ಮಾಡದೇ ಮಾನವ ಅಭಿವೃದ್ಧಿಯ ನೈಜ ಚಿತ್ರವನ್ನು ಪಡೆಯಲು ಸಾಧ್ಯವಾಗುವುದಿಲ್ಲ. ಪುರುಷಶಾಹಿ ಎಂಬುದು ಸಾಂಪ್ರದಾಯಿಕ ಸಮಾಜದ ಒಂದು ಪ್ರಬಲವಾದ ಲಕ್ಷಣವಾಗಿದೆ. ಗುಲಬರ್ಗಾ ಜಿಲ್ಲೆಯ ಸಮಾಜ ವ್ಯವಸ್ಥೆಯು ಸಾಂಪ್ರದಾಯಿಕವಾದುದಾಗಿದೆ. ಸಾಮಾಜಿಕ ಸಂಸ್ಥೆಗಳು ಮತ್ತು ಮೌಲ್ಯ ಪದ್ಧತಿಯು ಇಂದಿಗೂ ಪುರುಷಶಾಹಿ ವ್ಯವಸ್ಥೆಯನ್ನು ಬೆಂಬಲಿಸುತ್ತಿವೆ. ಈ ಪ್ರದೇಶದಲ್ಲಿ ಮಹಿಳೆಯರ ಕುರಿತಂತೆ ಇರುವ ವಿವಿಧ ರೀತಿಯ ತಾರತಮ್ಯಗಳೇ ಈ ವ್ಯವಸ್ಥೆ ಇರುವುದಕ್ಕೆ ನಿದರ್ಶನಗಳಾಗಿವೆ. ಜಿಲ್ಲೆಯ ವಿವಿಧ ವರ್ಗಗಳಲ್ಲಿ, ಜಾತಿಗಳಲ್ಲಿ ಮತ್ತು ಧರ್ಮಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಅಸಮಾನತೆಗಳು ವಿಭಿನ್ನವಾಗಿವೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣ, ಆರೋಗ್ಯ, ಉದ್ಯೋಗ ವಲಯಗಳಲ್ಲಿ ಸರಕಾರರ ಪ್ರಬಲವಾದ ನೀತಿಗಳು ಮತ್ತು ಸರಕಾರೇತರ ಸಂಸ್ಥೆಗಳ ಬೆಂಬಲದಿಂದಾಗಿ ಜಿಲ್ಲೆಯಲ್ಲಿ ಮಹಿಳೆಯರ ಸ್ಥಿತಿಯು ಸುಧಾರಿಸುತ್ತಿದೆ.

ಈ ಅಧ್ಯಾಯವು ಗುಲಬರ್ಗಾ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯ ಲಿಂಗಸಂಬಂಧಿ ಆಯಾಮಗಳನ್ನು ತಿಳಿಸುತ್ತದೆ. ಈ ಅಧ್ಯಾಯದಲ್ಲಿ ಶಿಕ್ಷಣ ರಂಗದಲ್ಲಿ ಮಹಿಳೆಯರ ಪ್ರಗತಿ, ಅವರಿಗೆ ದೊರೆಯುತ್ತಿರುವ ಆರೋಗ್ಯ ಸೇವೆಗಳು, ಆರ್ಥಿಕ ಚಟುವಟಿಕೆಗಳಲ್ಲಿ ಅವರ ಪಾಲ್ಗೊಳ್ಳುವಿಕೆ ಮತ್ತು ಸ್ವಸಹಾಯ ಗುಂಪುಗಳ ಮೂಲಕ ಪ್ರಾಪ್ತವಾಗುತ್ತಿರುವ ಅವರ ಸಬಲೀಕರಣಕ್ಕೆ ಸಂಬಂಧಿಸಿದ ಅಂಶಗಳು ಮತ್ತು ಸರಕಾರೇತರ ಸಂಸ್ಥೆಗಳ ಪಾಲ್ಗೊಳ್ಳುವಿಕೆಯ ಸಂಗತಿಗಳ ವಿಶ್ಲೇಷಣೆಯನ್ನು ಮಾಡಲಾಗಿದೆ.

## ಶಿಕ್ಷಣ

ಮಹಿಳೆಯರಿಗೆ ಶಿಕ್ಷಣ ಒದಗಿಸುವುದು ಅತ್ಯಂತ ಪ್ರಮುಖವಾದ ಸಂಗತಿಯಾಗಿದೆ. ಇದು ಬಹು ಆಯಾಮಗಳಲ್ಲಿ ತನ್ನ ಪ್ರಭಾವವನ್ನು ಬೀರುತ್ತದೆ. ಇದು ಸಾಮಾಜಿಕ ವ್ಯವಸ್ಥೆ ಮತ್ತು ಮೌಲ್ಯಗಳಲ್ಲಿ ಬದಲಾವಣೆಗಳನ್ನು ತರುತ್ತದೆ. ಮಹಿಳೆಯರು ಉತ್ತಮ ಉದ್ಯೋಗಾವಕಾಶಗಳನ್ನು ಪಡೆಯಲು ಅವಶ್ಯಕವಾಗಿರುವ ಧಾರಣಶಕ್ತಿಗಳನ್ನು ಅಭಿವೃದ್ಧಿ ಪಡಿಸಲು ಇದು ನೆರವಾಗುತ್ತದೆ. ಆದ್ದರಿಂದ ಶಿಕ್ಷಣವು ಮಹಿಳೆಯರ ಸಬಲೀಕರಣಕ್ಕೆ ಮೂಲಭೂತವಾದ ಅಗತ್ಯವಾಗಿದೆ.

ಗುಲಬರ್ಗಾ ಜಿಲ್ಲೆಯ ಮಹಿಳೆಯರ ಶಿಕ್ಷಣದ ಮಟ್ಟವು ಅತ್ಯಂತ ಕೆಳಗಿದೆ. ಇದು ಮಹಿಳೆಯರ ಸಾಕ್ಷರತೆಯು ಕಡಿಮೆಯಿರುವುದರಲ್ಲಿ ಮತ್ತು ಶಿಕ್ಷಣದಲ್ಲಿರುವ ಲಿಂಗ ಅಸಮಾನತೆಯಿಂದ ವೇದ್ಯಲಾಗುತ್ತದೆ. ಮಹಿಳಾ ಸಾಕ್ಷರತಾ ಪ್ರಮಾಣ ಜಿಲ್ಲೆಯಲ್ಲಿ ಕೇವಲ ಶೇ. 38.4 ರಷ್ಟಿದೆ ಮತ್ತು ಅದರಲ್ಲಿನ ಲಿಂಗ ಅಸಮಾನತೆಯ ಪ್ರಮಾಣ ಶೇ.24 ಅಂಶಗಳಷ್ಟಿದೆ. ಜಿಲ್ಲೆಯ ಆರು ತಾಲ್ಲೂಕುಗಳ ಸಾಕ್ಷರತಾ ಪ್ರಮಾಣವು ಜಿಲ್ಲೆಯ ಸರಾಸರಿ ಪ್ರಮಾಣಕ್ಕಿಂತಲೂ ಕಡಿಮೆ ಇದೆ. ಕೇವಲ ಗುಲಬರ್ಗಾ ತಾಲ್ಲೂಕಿನ ಸಾಕ್ಷರತಾ ಪ್ರಮಾಣ ಮಾತ್ರ ಶೇ. 50 ಕ್ಕಿಂತಲೂ ಹೆಚ್ಚಿದೆ. ಶಹಾಪುರ, ಜೇವರ್ಗಿ ಮತ್ತು ಯಾದಗಿರಿ ತಾಲ್ಲೂಕುಗಳ ಚಿತ್ರಣವು ವಿಷಾದಕರವಾಗಿದ್ದು, ಈ ತಾಲ್ಲೂಕುಗಳಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು ಶೇ.30ಕ್ಕಿಂತಲೂ ಕಡಿಮೆ ಇದೆ.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಯಾದಗಿರಿ ತಾಲ್ಲೂಕಿನಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣ ಕೇವಲ ಶೇ. 18.7 ರಷ್ಟಿದ್ದು ಶಹಾಪುರ ತಾಲ್ಲೂಕಿನಲ್ಲಿ ಅದು ಶೇ. 23ರಷ್ಟಿದೆ.

**ಗುಲಬರ್ಗಾ ಜಿಲ್ಲೆಯ ಮಹಿಳೆಯರ ಶಿಕ್ಷಣದ ಮಟ್ಟವು ಅತ್ಯಂತ ಕೆಳಗಿದೆ. ಇದು ಮಹಿಳೆಯರ ಸಾಕ್ಷರತೆಯು ಕಡಿಮೆಯಿರುವುದರಲ್ಲಿ ಮತ್ತು ಶಿಕ್ಷಣದಲ್ಲಿರುವ ಲಿಂಗ ಅಸಮಾನತೆಯಿಂದ ವೇದ್ಯಲಾಗುತ್ತದೆ. ಮಹಿಳಾ ಸಾಕ್ಷರತಾ ಪ್ರಮಾಣ ಜಿಲ್ಲೆಯಲ್ಲಿ ಕೇವಲ ಶೇ. 38.4 ರಷ್ಟಿದೆ ಮತ್ತು ಅದರಲ್ಲಿನ ಲಿಂಗ ಅಸಮಾನತೆಯ ಪ್ರಮಾಣ ಶೇ.24**

ಒಟ್ಟಾರೆ ಸಾಕ್ಷರತೆ ಪ್ರಮಾಣಕ್ಕೆ ಸಂಬಂಧಿಸಿದಂತೆ ಗುಲಬರ್ಗಾ ತಾಲ್ಲೂಕಿನಲ್ಲಿ ಮಹಿಳೆ ಮತ್ತು ಪುರುಷರ ನಡುವಿನ ಅಂತರ ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಈ ಅಂತರ ಗಣನೀಯ ಪ್ರಮಾಣದಲ್ಲಿದೆ. ನಗರ ಪ್ರದೇಶದಲ್ಲಿ ಇದು ಕೇವಲ ಶೇ.16 ರಷ್ಟಿದೆ.

ಶಹಾಪುರ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಪುರುಷರ ಸಾಕ್ಷರತಾ ಪ್ರಮಾಣವು ಕಡಿಮೆ ಇರುವುದರಿಂದ ಈ ತಾಲ್ಲೂಕುಗಳಲ್ಲಿ ಲಿಂಗ ಅಸಮಾನತೆ ಸಹ ಕಡಿಮೆ ಇದೆ. ಸಾಕ್ಷರತಾ ಪ್ರಮಾಣ ಅಧಿಕಗೊಳ್ಳುತ್ತಿರುವ ಪ್ರದೇಶಗಳಲ್ಲಿ ಸಾಕ್ಷರತೆಯಲ್ಲಿಯ ಲಿಂಗ ಅಸಮಾನತೆಯು ಸಹ ಹೆಚ್ಚಳವಾಗುತ್ತಿದೆ. ಇದು ಜಿಲ್ಲೆಯಲ್ಲಿ ಮಹಿಳೆಯರು ದುಸ್ಥಿತಿಗೆ ಒಳಗಾಗುತ್ತಿರುವುದನ್ನು ಸೂಚಿಸುತ್ತದೆ. ಜೇವರ್ಗಿ ತಾಲ್ಲೂಕಿನಲ್ಲಿ ಅಂತರವು ಅತೀ ಹೆಚ್ಚಿನ ಪ್ರಮಾಣದಲ್ಲಿದೆ. ಇದು ಶೇ. 28 ಅಂಶಗಳಷ್ಟಿದೆ. ಚಿಂಚೋಳಿ, ಗುಲಬರ್ಗಾ, ಅಫಜಲಪುರ, ಆಳಂದ ಮತ್ತು ಯಾದಗಿರಿ ತಾಲ್ಲೂಕುಗಳ ಗ್ರಾಮೀಣ ಪ್ರದೇಶಗಳಲ್ಲಿ ಇದು ಶೇ.24 ಅಂಶಕ್ಕಿಂತಲೂ ಅಧಿಕವಾಗಿದೆ. ನಗರ ಪ್ರದೇಶಗಳಿಗಿಂತ ಗ್ರಾಮೀಣ ಪ್ರದೇಶಗಳಲ್ಲಿ ಲಿಂಗ ಅಸಮಾನತೆಯು ಪ್ರಮಾಣವು ಅಧಿಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ ಸಾಂಪ್ರದಾಯಿಕ ಮೌಲ್ಯ ಪದ್ಧತಿ ಮತ್ತು ಲಿಂಗ ಅಸಮಾನತೆಗಳೇ ಇದಕ್ಕೆ ಕಾರಣವಾಗಿದೆ.

1991–2001ರ ಅವಧಿಯಲ್ಲಿ ಕಡಿಮೆ ಸಾಕ್ಷರತಾ ಪ್ರಮಾಣ ಹೊಂದಿರುವ ತಾಲ್ಲೂಕುಗಳಾದ ಚಿಂಚೋಳಿ, ಶಹಾಪುರ, ಜೇವರ್ಗಿ, ಯಾದಗಿರಿ, ಅಫ್ಜಲಪುರ ಮತ್ತು ಆಳಂದ ತಾಲ್ಲೂಕುಗಳಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು ಅಧಿಕಗೊಂಡಿದೆ. ಇದು ಡಿಪಿಈಪಿ ಮತ್ತು ಎಸ್ಎಸ್ಎ ಕಾರ್ಯಕ್ರಮಗಳ ಫಲಶೃತಿಯಾಗಿದೆ. ಆದರೂ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತಾ ಪ್ರಮಾಣವು ಶೇ. 40ಕ್ಕಿಂತಲೂ ಕಡಿಮೆ ಇದೆ. ಶೇ. 60ರಷ್ಟು ಮಹಿಳೆಯರು ಈಗಲೂ ಜ್ಞಾನ ಮತ್ತು ಮಾಹಿತಿಗಳನ್ನು ಪಡೆಯುವುದರಿಂದ ವಂಚಿತರಾಗಿರುವುದನ್ನು ಇದು ಸೂಚಿಸುತ್ತದೆ.

ಕೋಷ್ಟಕ 7.1

## ಗುಲಬರ್ಗಾ ಜಿಲ್ಲೆಯಲ್ಲಿ ಸಾಕ್ಷರತೆಯ ಲಿಂಗಸಂಬಂಧಿ ಸ್ವರೂಪ – 2001

| ತಾಲ್ಲೂಕು | ಪುರುಷರ ಸಾಕ್ಷರತಾ ಪ್ರಮಾಣ | ಮಹಿಳೆಯರ ಸಾಕ್ಷರತಾ ಪ್ರಮಾಣ | ಸಾಕ್ಷರತೆಯಲ್ಲಿ ಲಿಂಗ ಸಂಬಂಧಿ ಅಂತರ | ಮಹಿಳೆಯರ ಸಾಕ್ಷರತಾ ಪ್ರಮಾಣ (ಗ್ರಾಮೀಣ) | ಸಾಕ್ಷರತೆಯಲ್ಲಿ ಲಿಂಗ ಸಂಬಂಧಿ ಅಂತರ (ಗ್ರಾಮೀಣ) | ಮಹಿಳೆಯರ ಸಾಕ್ಷರತಾ ಪ್ರಮಾಣ (ನಗರ) | ಸಾಕ್ಷರತೆಯಲ್ಲಿ ಲಿಂಗ ಸಂಬಂಧಿ ಅಂತರ (ನಗರ) |
|---|---|---|---|---|---|---|---|
| ಅಫಜಲಪುರ | 63.6 | 37.5 | 26.1 | 35.8 | 26.8 | 51.9 | 19.8 |
| ಆಳಂದ್ | 66.0 | 39.2 | 26.8 | 37.6 | 26.5 | 51.5 | 21.1 |
| ಚಿಂಚೋಳಿ | 62.3 | 34.7 | 27.6 | 33.2 | 27.9 | 53.3 | 22.5 |
| ಚಿತ್ತಾಪುರ | 61.0 | 37.7 | 23.3 | 29.3 | 24.0 | 53.4 | 21.4 |
| ಗುಲಬರ್ಗಾ | 76.3 | 56.1 | 20.2 | 35.5 | 27.1 | 67.8 | 16.0 |
| ಜೇವರ್ಗಿ | 57.9 | 29.9 | 28.0 | 28.0 | 28.4 | 51.7 | 23.1 |
| ಸೇಡಮ್ | 56.4 | 33.4 | 23.0 | 27.9 | 23.3 | 55.3 | 20.4 |
| ಶಹಾಪುರ | 49.9 | 27.5 | 22.4 | 23.1 | 22.6 | 52.2 | 20.3 |
| ಶೋರಾಪುರ | 56.3 | 30.4 | 25.9 | 37.1 | 16.3 | 52.7 | 22.4 |
| ಯಾದಗೀರ್ | 47.5 | 26.9 | 20.6 | 18.7 | 20.3 | 53.2 | 21.2 |
| **ಜಿಲ್ಲೆ** | **61.8** | **37.9** | **23.9** | **29.4** | **25.5** | **60.5** | **18.7** |
| **ರಾಜ್ಯ** | **76.10** | **56.87** | **19.23** | **48.01** | **22.44** | **74.13** | **12.53** |

ಮೂಲ: ಸೆನ್ಸಸ್ ಆಫ್ ಇಂಡಿಯಾ–2001

ಕೋಷ್ಟಕ 7.2

## ಮಹಿಳೆಯರ ಸಾಕ್ಷರತಾ ಪ್ರಮಾಣ ಮತ್ತು ಅದರ ಬೆಳವಣಿಗೆ ಪ್ರಮಾಣ

| ಕ್ರ.ಸಂ. | ತಾಲ್ಲೂಕು | ಮಹಿಳೆಯರ ಸಾಕ್ಷರತಾ ಪ್ರಮಾಣ | | | | | ಸಾಕ್ಷರತಾ ಬೆಳವಣಿಗೆ ಪ್ರಮಾಣ | | | |
|---|---|---|---|---|---|---|---|---|---|---|
| | | 1961 | 1971 | 1981 | 1991 | 2001 | 1961–71 | 1971–81 | 1981–91 | 1991–01 |
| 1 | ಅಫಜಲಪುರ | 3.17 | 5.80 | 11.78 | 22.09 | 37.5 | 45.34 | 103.10 | 87.52 | 72.56 |
| 2 | ಅಳಂದ್ | 4.60 | 6.60 | 11.37 | 22.45 | 39.2 | 43.47 | 72.27 | 97.44 | 77.90 |
| 3 | ಚಿಂಚೋಳಿ | 4.10 | 5.90 | 9.06 | 18.28 | 34.7 | 93.90 | 53.55 | 101.76 | 92.66 |
| 4 | ಚಿತ್ತಾಪುರ | 4.70 | 8.30 | 13.82 | 24.70 | 37.7 | 76.59 | 66.50 | 72.72 | 54.89 |
| 5 | ಗುಲಬರ್ಗಾ | 11.60 | 18.60 | 25.57 | 43.41 | 56.1 | 60.34 | 37.47 | 69.76 | 31.60 |
| 6 | ಜೇವರ್ಗಿ | 2.60 | 15.20 | 8.63 | 17.09 | 29.9 | 100.00 | 65.38 | 98.03 | 74.72 |
| 7 | ಸೇಡಮ್ | 4.60 | 6.50 | 10.89 | 21.13 | 33.4 | 41.30 | 67.53 | 94.03 | 58.30 |
| 8 | ಶಹಾಪುರ | 3.30 | 4.90 | 7.95 | 17.04 | 27.5 | 48.48 | 62.24 | 114.33 | 58.27 |
| 9 | ಶೋರಾಪುರ | 3.20 | 6.70 | 10.18 | 18.84 | 30.4 | 109.37 | 51.94 | 85.06 | 62.26 |
| 10 | ಯಾದಗೀರ್ | 4.70 | 6.90 | 9.55 | 15.62 | 26.9 | 46.80 | 38.90 | 63.56 | 72.79 |
| | **ಜಿಲ್ಲೆ** | **5.20** | **8.50** | **13.30** | **24.49** | **37.9** | **63.46** | **56.47** | **84.13** | **56.80** |

ಮೂಲ: ಸೆನ್ಸಸ್ ಆಫ್ ಇಂಡಿಯಾ–1961–2001

ಕೋಷ್ಟಕ 7.3

## ಪ್ರೌಢಶಾಲೆಗಳಲ್ಲಿ ಬಾಲಕಿಯರ ದಾಖಲಾತಿ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಬಾಲಕಿಯರ ದಾಖಲಾತಿ–2006

| ತಾಲ್ಲೂಕು | ಪ್ರೌಢಶಾಲೆ | | | ಪದವಿ ಪೂರ್ವ ಕಾಲೇಜು | | |
|---|---|---|---|---|---|---|
| | ಬಾಲಕರು | ಬಾಲಕಿಯರು | ಶೇಕಡಾ ಬಾಲಕಿಯರ ಪ್ರಮಾಣ | ಬಾಲಕರು | ಬಾಲಕಿಯರು | ಶೇಕಡಾ ಬಾಲಕಿಯರ ಪ್ರಮಾಣ |
| ಅಫಜಲಪುರ | 4081 | 2830 | 69.34 | 2440 | 518 | 21.22 |
| ಅಳಂದ್ | 6461 | 4929 | 76.28 | 2780 | 820 | 29.49 |
| ಚಿಂಚೋಳಿ | 3463 | 3293 | 95.09 | 1311 | 547 | 41.72 |
| ಚಿತ್ತಾಪುರ | 6068 | 5646 | 93.04 | 2768 | 1115 | 40.28 |
| ಗುಲಬರ್ಗಾ | 13113 | 12083 | 92.14 | 11320 | 4880 | 43.10 |
| ಜೇವರ್ಗಿ | 4262 | 2786 | 65.36 | 1055 | 316 | 29.95 |
| ಸೇಡಮ್ | 3698 | 2978 | 80.53 | 1352 | 482 | 35.65 |
| ಶಹಾಪುರ | 4549 | 2987 | 65.66 | 2812 | 831 | 29.55 |
| ಶೋರಾಪುರ | 5074 | 4035 | 79.52 | 3020 | 891 | 29.50 |
| ಯಾದಗೀರ್ | 5492 | 3807 | 69.31 | 3516 | 913 | 25.96 |
| **ಜಿಲ್ಲೆ** | **56261** | **45374** | **80.64** | **32374** | **11313** | **34.94** |

ಮೂಲ: ಗುಲಬರ್ಗಾ ಜಿಲ್ಲೆಯ ಅಂಕಿಅಂಶ ನೋಟ : 2006

**ಜಿಲ್ಲೆಯ ಮಹಿಳಾ ಶ್ರಮಶಕ್ತಿಯಲ್ಲಿ ಬಹಳಷ್ಟು ಮಹಿಳಾ ದುಡಿಮೆಗಾರರು ಕೃಷಿ ವಲಯದಲ್ಲಿ ಕೇಂದ್ರೀಕರಣಗೊಂಡಿದ್ದಾರೆ. ಕೃಷಿ ಕಾರ್ಮಿಕರ ಪ್ರಮಾಣ ಶೇ. 64.7 ರಷ್ಟಿದೆ. ಮಹಿಳಾ ದುಡಿಮೆಗಾರರು ಸಾಗುವಳಿದಾರರಾಗಿರುವ ಪ್ರಮಾಣ ಶೇ. 16.1. ಅಂದರೆ ಶೇ. 81ರಷ್ಟು ಮಹಿಳಾ ದುಡಿಮೆಗಾರರು ಕೃಷಿ ವಲಯದಲ್ಲಿದ್ದಾರೆ.**

ಗುಲಬರ್ಗಾ, ಯಾದಗಿರಿ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಬಾಲಕಿಯರ ದಾಖಲಾತಿ ಪ್ರಮಾಣ (1 ರಿಂದ 7) ಅತ್ಯಧಿಕವಾಗಿದೆ. ಉನ್ನತ ತರಗತಿಗೆ ಹೋದಂತೆಲ್ಲಾ ದಾಖಲಾತಿ ಪ್ರಮಾಣ ಇಳಿಕೆಯಾಗುತ್ತಾ ಸಾಗಿದೆ. ಯಾದಗಿರಿ ವಿಭಾಗದಲ್ಲಿ 10ನೇ ತರಗತಿಯ ದಾಖಲಾತಿ ಪ್ರಮಾಣಕ್ಕೆ ಸಂಬಂಧಿಸಿದಂತೆ ಬಾಲಕರ ಶೇ.74 ರಷ್ಟು ಮಾತ್ರ ಬಾಲಕಿಯರ ದಾಖಲಾತಿ ಪ್ರಮಾಣ ಇದೆ.

ಬಾಲಕಿಯರಿಗಾಗಿ ಕೆಲವು ಪ್ರತ್ಯೇಕ ಶಾಲೆಗಳಿವೆ. ಸಹಶಿಕ್ಷಣ ಇರುವಲ್ಲಿ ಪಾಲಕರು ತಮ್ಮ ಬಾಲಕಿಯರು ಶಿಕ್ಷಣ ಮುಂದುವರೆಸಲು ಬಿಡುತ್ತಿಲ್ಲ. ಇದರಿಂದಾಗಿ ಜೇವರ್ಗಿ, ಶಹಾಪುರ ಮತ್ತು ಯಾದಗಿರಿಗಳಂಥ ತಾಲ್ಲೂಕುಗಳಲ್ಲಿ ಬಾಲಕಿಯರು ಪ್ರಾಥಮಿಕ ಶಿಕ್ಷಣ ಪೂರೈಸಿದ ನಂತರ ಶಾಲೆಯನ್ನು ಬಿಡುತ್ತಿದ್ದಾರೆ. ಹೈಸ್ಕೂಲ್ ಮತ್ತು ಪದವಿ ಪೂರ್ವ ಶಿಕ್ಷಣಗಳಲ್ಲಿಯ ಪರಿಸ್ಥಿತಿಯನ್ನು ಕೋಷ್ಟಕ 7.3ರಲ್ಲಿ ನೀಡಲಾಗಿದೆ.

ಪ್ರೌಢ ಶಿಕ್ಷಣದ ಹಂತದಲ್ಲಿ ಬಾಲಕಿಯರ ದಾಖಲಾತಿ ಪ್ರಮಾಣ ಅಧಿಕಗೊಂಡಿರುವುದನ್ನು ಕೋಷ್ಟಕದಿಂದ ಗಮನಿಸಬಹುದಾಗಿದ್ದು ಅದು ಜಿಲ್ಲಾ ಮಟ್ಟದಲ್ಲಿ ಬಾಲಕರ ಶೇ. 80.6 ರಷ್ಟು ಇದೆ. ಜೇವರ್ಗಿ ಮತ್ತು ಶಹಪುರಗಳಲ್ಲಿ ಅದು ಶೇ. 70ಕ್ಕಿಂತಲೂ ಕಡಿಮೆ ಇದೆ. ಅಫ್ಜಲಪುರ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಅದು ಶೇ.70ರ ಹತ್ತಿರದಲ್ಲಿದೆ. ಆದರೆ ದಾಖಲಾತಿ ಪ್ರಮಾಣವು ಪದವಿಪೂರ್ವ ಶಿಕ್ಷಣದ ಹಂತದಲ್ಲಿ ಗಣನೀಯವಾಗಿ ಇಳಿಕೆಯಾಗಿದೆ. ಅದು ಅಫ್ಜಲಪುರ ತಾಲ್ಲೂಕಿನಲ್ಲಿ ಅತ್ಯಂತ ಕಡಿಮೆಯಾಗಿದ್ದು ಅದು ಶೇ. 20 ರಷ್ಟು ಆಗಿದೆ. ಗುಲಬರ್ಗಾ, ಚಿಂಚೋಳಿ, ಚಿತ್ತಾಪುರ ಮತ್ತು ಸೇಡಂ ತಾಲ್ಲೂಕುಗಳನ್ನು ಹೊರತುಪಡಿಸಿದರೆ, ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ಅದು ಶೇ.30ಕ್ಕಿಂತಲೂ ಕಡಿಮೆ ಇದೆ. ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯು ಅತ್ಯಂತ ಕಡಿಮೆ ಪ್ರಮಾಣದಲ್ಲಿದೆ ಎಂಬುದನ್ನು ಇದು ಸೂಚಿಸುತ್ತದೆ. ಅವರ ಮಾನವ ಬಂಡವಾಳದ ಪ್ರಮಾಣ ಅತ್ಯಂತ ಕಡಿಮೆ. ಇದರಿಂದಾಗಿ ಅವರು ಕಡಿಮೆ ಸಂಭಾವನೆ ಬರುವ ಕೆಲಸಗಳಲ್ಲಿ ಕೇಂದ್ರೀಕರಣಗೊಳ್ಳುತ್ತಿದ್ದಾರೆ. ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣಗಳಲ್ಲಿ ಇವರ ಪಾಲ್ಗೊಳ್ಳುವಿಕೆಯು ಅತ್ಯಂತ ಕಡಿಮೆ ಇದೆ. ಇದರಿಂದಾಗಿ ಜಾಗತಿಕ ವಲಯಗಳಂಥ ಮಾಹಿತಿ ತಂತ್ರಜ್ಞಾನಗಳಲ್ಲಿ ಅಧಿಕ ವೇತನ ಬರುವಂಥ ಕೆಲಸಗಳನ್ನು ಪಡೆಯಲು ಸಾಧ್ಯವಾಗುತ್ತಿಲ್ಲ.

ಯಾದಗಿರಿ ಮತ್ತು ಶಹಾಪುರ ತಾಲ್ಲೂಕುಗಳ ಹಳ್ಳಿಗಳಲ್ಲಿ ಬಾಲಕಿಯರು ತಮ್ಮ ಮನೆಯಲ್ಲಿರುವ ಸಣ್ಣ ಮಕ್ಕಳನ್ನು ನೋಡಿಕೊಳ್ಳುವ ಸಲುವಾಗಿ ಶಾಲೆ ಬಿಡುತ್ತಿದ್ದಾರೆ. ಇಲ್ಲವೇ ಶಾಲೆಗೆ ದಾಖಲಾತಿಯನ್ನು ಮಾಡಿಸುತ್ತಿಲ್ಲ. ಹೀಗೆ ಮಹಿಳೆಯರ ಕೆಲಸದ ಸ್ಥಳಗಳಲ್ಲಿ ಶಿಶುಗಳ ಪಾಲನಾ ಕೇಂದ್ರಗಳು ಲಭ್ಯವಿರದೇ ಇರುವುದು ಸಹ ಬಾಲಕಿಯರ ಶಿಕ್ಷಣದ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರುತ್ತದೆ.

## ಉದ್ಯೋಗ ಪ್ರವೃತ್ತಿ

### ದುಡಿಮೆಯ ಸಹಭಾಗಿತ್ವ ಪ್ರಮಾಣ

ಪುರುಷ ದುಡಿಮೆಗಾರರಿಗೆ ಸಂಬಂಧಿಸಿದಂತೆ ದುಡಿಮೆಯ ಸಹಭಾಗಿತ್ವ ಪ್ರಮಾಣವು ಯಾವುದೇ ಬದಲಾವಣೆಯಾಗದೇ ಸ್ಥಿರವಾಗಿದೆ. ಆದಾಗ್ಯೂ 1991-2001ರಲ್ಲಿ ಅಲ್ಪ ಪ್ರಮಾಣದಲ್ಲಿ ಅದು ಏರಿಕೆಯಾಗಿದೆ. ಆದರೆ ಪುರುಷ ದುಡಿಮೆಗಾರರಲ್ಲಿ ಶೇ. 44.7ರಷ್ಟು ದುಡಿಮೆಗಾರರು ಮುಖ್ಯ ದುಡಿಮೆಗಾರರಾಗಿದ್ದಾರೆ. ಆದರೆ ಮಹಿಳೆಯರಲ್ಲಿ ಅದು ಕೇವಲ ಶೇ. 19.4ರಷ್ಟಿದೆ. ಮಹಿಳಾ ದುಡಿಮೆಗಾರರಲ್ಲಿ ಬಹುಪ್ರಮಾಣದ ಮಹಿಳೆಯರು (ಶೇ. 44.46) ಅಂಚಿನ ದುಡಿಮೆಗಾರರಾಗಿದ್ದಾರೆ. ಯಾದಗಿರಿ ತಾಲ್ಲೂಕಿನಲ್ಲಿ ಅದು ಅತ್ಯಧಿಕವಾಗಿದ್ದು, ಅದು ಶೇ. 48 ರಷ್ಟಿದೆ.

ಜಿಲ್ಲೆಯ ಮಹಿಳಾ ಶ್ರಮಶಕ್ತಿಯಲ್ಲಿ ಬಹಳಷ್ಟು ಮಹಿಳಾ ದುಡಿಮೆಗಾರರು ಕೃಷಿ ವಲಯದಲ್ಲಿ ಕೇಂದ್ರೀಕರಣಗೊಂಡಿದ್ದಾರೆ. ಕೃಷಿ ಕಾರ್ಮಿಕರ ಪ್ರಮಾಣ ಶೇ. 64.7 ರಷ್ಟಿದೆ. ಮಹಿಳಾ ದುಡಿಮೆಗಾರರು ಸಾಗುವಳಿದಾರರಾಗಿರುವ ಪ್ರಮಾಣ ಶೇ. 16.1. ಅಂದರೆ ಶೇ. 81ರಷ್ಟು ಮಹಿಳಾ ದುಡಿಮೆಗಾರರು ಕೃಷಿ ವಲಯದಲ್ಲಿದ್ದಾರೆ. ಮಹಿಳಾ ಕೃಷಿ ಕಾರ್ಮಿಕರ ಕೂಲಿ ಸುಗ್ಗಿ ಮತ್ತು ನಾಟಿ ಕಾಲದಲ್ಲಿ

ರೂ. 30/– ರಷ್ಟಿದ್ದರೆ ಮಂದ ಸಮಯದಲ್ಲಿ ರೂ. 25/– ರಷ್ಟಿರುತ್ತದೆ. ಪುರುಷ ದುಡಿಮೆಗಾರರ ಕೂಲಿಯು ಪ್ರಮಾಣ ರೂ. 50– ರಿಂದ ರೂ. 60/–ರ ಅಂತರದಲ್ಲಿರುತ್ತದೆ. ಹೀಗೆ ಮಹಿಳಾ ದುಡಿಮೆಗಾರರ ಕೂಲಿಯು ಪುರುಷ ದುಡಿಮೆಗಾರರ ಕೂಲಿಯ ಅರ್ಧದಷ್ಟಿದೆ. ಜಿಲ್ಲೆಯ ಒಣ ಬೇಸಾಯ ಪ್ರದೇಶಗಳಲ್ಲಿ ಮಹಿಳೆಯರು ಕಡಿಮೆ ಕೂಲಿ, ಕಡಿಮೆ ಉದ್ಯೋಗ ದಿನಗಳೊಂದಿಗೆ ಕೃಷಿಯ ಮೇಲೆ ಅವಲಂಬನೆಯಾಗಿರುವ ಪರಿಸ್ಥಿತಿ ಒಂದೆಡೆ ಇದ್ದರೆ, ಮತ್ತೊಂದೆಡೆ ನಿಕೃಷ್ಟೀಕರಣ ಪ್ರವೃತ್ತಿಯು ಅಧಿಕಗೊಳ್ಳುತ್ತಿದ್ದು, ಇವು ಜಿಲ್ಲೆಯಲ್ಲಿ ಬಡತನದ ಮಹಿಳೀಕರಣಕ್ಕೆ ಬೆಂಬಲವಾಗುತ್ತದೆ.

ಸಮಾಜದಲ್ಲಿ ಲಿಂಗಸಂಬಂಧಗಳ ಬಗೆಗಿನ ಪಕ್ಷಪಾತ ಲಿಂಗಾಧಾರಿತ ಶ್ರಮ ವಿಭಜನೆಗೆ ಕಾರಣವಾಗಿದೆ. ಇಲ್ಲಿ ಕಡಿಮೆ ಕೌಶಲ್ಯದ, ಏಕರೂಪವಾದ, ಕಡಿಮೆ ಸಂಭಾವನೆ ಇರುವ ಕೆಲಸಗಳಲ್ಲಿ ಮಹಿಳೆಯರು ದುಡಿಯಬೇಕಾಗುತ್ತದೆ. ಆದಾಗ್ಯೂ ಕೃಷಿಯಲ್ಲಿ ವಾಣಿಜ್ಯೀಕರಣ ಮತ್ತು ಜಾಗತೀಕರಣಗಳಿಂದಾಗಿ ಜೊತೆಗೆ ನೀರಾವರಿ ಪ್ರದೇಶ ಅಧಿಕಗೊಂಡಂತೆ ಮಹಿಳಾ ಕಾರ್ಮಿಕರ ಬೇಡಿಕೆ ಅಧಿಕವಾಗುತ್ತಿದೆ. ಆದರೆ ಅವರ ಕೂಲಿಯ ದರಗಳು ಅಧಿಕಗೊಂಡಿಲ್ಲ. ಮಹಿಳಾ ಕೂಲಿಕಾರರ ಪೂರೈಕೆಯು ಅಧಿಕಗೊಳ್ಳುತ್ತಿರುವುದರಿಂದ ಪುರುಷ ಮತ್ತು ಮಹಿಳೆಯರ ನಡುವಿನ ಕೂಲಿಯಲ್ಲಿನ ವ್ಯತ್ಯಾಸಗಳು ಹಾಗೆಯೇ ಮುಂದುವರಿದಿವೆ.

ಗ್ರಾಮೀಣ ಪ್ರದೇಶದಲ್ಲಿ ಮೌಲ್ಯ ಪದ್ಧತಿಗಳಿಂದಾಗಿ ಈಗಲೂ ಸಹ ಮಹಿಳೆಯರ ಗಳಿಕೆಯನ್ನು ಕೇವಲ ಕುಟುಂಬದಕ್ಕೆ ಪೂರಕ ಎಂದೇ ಪರಿಗಣಿಸಲಾಗುತ್ತಿದೆ.

ಚೌಕಟ್ಟು 7.1

### ಬಾಲಕಿಯರ ಶಿಕ್ಷಣ

ಪ್ರಾದೇಶಿಕ ಅಸಮತೋಲನ ನಿವಾರಣೆಯ ಉನ್ನತಾಧಿಕಾರ ಸಮಿತಿಯು ಶಾಲೆಗಳಲ್ಲಿ ಬಾಲಕಿಯರ ಕಡಿಮೆ ದಾಖಲಾತಿ ಪ್ರಮಾಣ ಮತ್ತು ಕಡಿಮೆ ಸಾಕ್ಷರತಾ ಪ್ರಮಾಣಗಳಿರುವುದನ್ನು ಗಮನಿಸಿದೆ. ಸಮಿತಿಯು ಬಾಲಕಿಯರಿಗೆ ಉಚಿತ ವಸತಿ, ಊಟ, ಶಿಕ್ಷಣ ಸೌಲಭ್ಯಗಳನ್ನು ಒಳಗೊಂಡಂತೆ ಪ್ರತಿ ತಾಲ್ಲೂಕಿನಲ್ಲಿಯೂ ಬಾಲಕಿಯರ ಪ್ರೌಢಶಾಲೆಯನ್ನು ಪ್ರಾರಂಭಿಸುವಂತೆ ಶಿಫಾರಸ್ಸು ಮಾಡಿದೆ. ಅಲ್ಲದೇ ಇದರೊಂದಿಗೆ ಬಾಲಕಿಯರಿಗೆ ನಿರ್ದಿಷ್ಟ ಸುರಕ್ಷತೆ ಮತ್ತು ಸುಭದ್ರತೆಗಳು ಇರಬೇಕು. ಇದು ಬಾಲಕಿಯರು ಉನ್ನತ ಶಿಕ್ಷಣವನ್ನು ಪಡೆಯುವಲ್ಲಿ ಸುಧಾರಣೆಯನ್ನು ತರಬಹುದಾಗಿದೆ.

ಈ ನಿಟ್ಟಿನಲ್ಲಿ 2006–07ರಿಂದ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ಬಾಲಕಿಯರ ಶಿಕ್ಷಣದ ಪ್ರೋತ್ಸಾಹಕ್ಕಾಗಿ ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯಗಳನ್ನು ಪ್ರಾರಂಭಿಸಲಾಗಿದೆ. ಈ ಯೋಜನೆಯಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾದ ತಾಲ್ಲೂಕುಗಳಿಗೆ ಮಾತ್ರ ಅನ್ವಯವಾಗುತ್ತದೆ. 2001ರ ಜನಗಣತಿ ಪ್ರಕಾರ ಗ್ರಾಮೀಣ ಮಹಿಳಾ ಸಾಕ್ಷರತಾ ಪ್ರಮಾಣವು ರಾಷ್ಟ್ರೀಯ ಮಟ್ಟಕ್ಕಿಂತ ಕಡಿಮೆ ಇದ್ದು, ಲಿಂಗಸಂಬಂಧಿ ಸಾಕ್ಷರತಾ ಅಂತರವು ರಾಷ್ಟ್ರೀಯ ಮಟ್ಟಕ್ಕಿಂತಲೂ ಅಧಿಕವಾಗಿರುವ ತಾಲ್ಲೂಕುಗಳನ್ನು ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಲಾಗುತ್ತದೆ. ಇಂತಹ ತಾಲ್ಲೂಕುಗಳಲ್ಲಿ

1. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಅಧಿಕವಾಗಿರುವ ಜೊತೆಗೆ ಕಡಿಮೆ ಮಹಿಳಾ ಸಾಕ್ಷರತಾ ಪ್ರಮಾಣ ಹೊಂದಿರುವ ಅಧಿಕ ಪ್ರಮಾಣದಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿರುವ ಪ್ರದೇಶದಲ್ಲಿ.
2. ಚದುರಿದಂತೆ ಸಣ್ಣ ಪ್ರಮಾಣದ ವಸತಿಯಿರುವ ಪ್ರದೇಶಗಳಲ್ಲಿ ಶಾಲೆಗಳನ್ನು ಪ್ರಾರಂಭಿಸುವುದು.

ಗುಲಬರ್ಗಾ ಜಿಲ್ಲೆಯಲ್ಲಿ ಕೆ.ಜಿ.ಬಿ.ವಿ. ವಸತಿ ಶಾಲೆಗಳನ್ನು ಪ್ರಾರಂಭಿಸಲು ಒಂಭತ್ತು ತಾಲ್ಲೂಕುಗಳನ್ನು ಗುರುತಿಸಲಾಗಿದೆ. ಇವೆಲ್ಲವೂ ಶೈಕ್ಷಣಿಕವಾಗಿ ಹಿಂದುಳಿದ ತಾಲ್ಲೂಕುಗಳಾಗಿವೆ.

ಚೌಕಟ್ಟು 7.2

## ಕೃಷಿ ತಂತ್ರಜ್ಞಾನವು ಮಹಿಳೆಯರಿಗೆ ದೊರೆಯುವಿಕೆ

ಡ್ಯಾನಿಷ್ ಅಂತರ ರಾಷ್ಟ್ರೀಯ ಅಭಿವೃದ್ಧಿ ನೆರವು ಎಂಬ ಸಂಸ್ಥೆಯು ಕರ್ನಾಟಕ ಸರಕಾರದ ಕೃಷಿ ಇಲಾಖೆಯ ಸಹಯೋಗದಲ್ಲಿ ವೈಟೆಪ್ (WYTEP) ಯೋಜನೆ ಅನುಷ್ಠಾನದಲ್ಲಿ ತಂದಿದೆ. ಈ ಯೋಜನೆಯು 1983ರಿಂದಲೂ ಜಾರಿಯಲ್ಲಿದ್ದು ಇದರಲ್ಲಿ ಕೃಷಿಯಲ್ಲಿನ ಮಹಿಳೆಯರಿಗೆ ಆದ್ಯತೆಯನ್ನು ನೀಡಲಾಗುತ್ತದೆ. ಯೋಜನೆಯು ಮೂರು ಹಂತಗಳಲ್ಲಿ ಅನುಷ್ಠಾನಗೊಳ್ಳುತ್ತಿದೆ. ಮೊದಲ ಎರಡು ಹಂತಗಳಲ್ಲಿ ತಾಂತ್ರಿಕತೆ, ತಂತ್ರಜ್ಞಾನ, ಕೃಷಿಯಲ್ಲಿ ಮಹಿಳೆಯರ ಪಾತ್ರ ಕುರಿತಂತೆ ತರಬೇತಿಯನ್ನು ನೀಡಲಾಗುತ್ತದೆ. ಮಹಿಳೆಯರಿಗೆ ಕೃಷಿ ತಾಂತ್ರಿಕತೆ ಕುರಿತಂತೆ ತರಬೇತಿ ನೀಡಲು ಮತ್ತು ಅವರಿಗೆ ತರಬೇತಿ ಮತ್ತು ಸುಧಾರಣೆ ದೊರೆಗೊಳ್ಳುವ ರೀತಿಯಲ್ಲಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಅವರಿಗೆ ಬೆಳೆ ಆಯ್ಕೆ, ವಿಭಿನ್ನ ಬೀಜಗಳ ಆಯ್ಕೆ, ಬಿತ್ತನೆ, ಕಳೆ ನಿಯಂತ್ರಣ, ರಾಸಾಯನಿಕ ಗೊಬ್ಬರಗಳು, ಕೊಯ್ಲು ಪೂರ್ವ ಮತ್ತು ಕೊಯ್ಲು ನಂತರದ ಪ್ರಕ್ರಿಯೆ, ಮೊದಲಾದವುಗಳನ್ನು ಕುರಿತಂತೆ ತಿಳುವಳಿಕೆಯನ್ನು ನೀಡಲಾಗುತ್ತದೆ. ಮೂರನೇ ಹಂತದಲ್ಲಿ ಕೃಷಿಯಲ್ಲಿ ತೊಡಗಿರುವ ಮಹಿಳೆಯರಿಗೆ ಆದ್ಯತೆಯನ್ನು ನೀಡಲಾಗುವುದು ಮತ್ತು ಅವರಿಗೆ ವಿಶೇಷ ಗಮನ ನೀಡಲಾಗುವುದು. ಗುಲ್ಬರ್ಗಾ ಜಿಲ್ಲೆಯ ಕೋಟ್‌ನೂರ್‌ನಲ್ಲಿ ವೈಟೆಪ್ (WYTEP) ತರಬೇತಿ ಕೇಂದ್ರವಿದೆ. ಇಲ್ಲಿ ಕೃಷಿಗೆ ಸಮಬಂಧಿಸಿದಂತೆ ತಾಂತ್ರಿಕ ತರಬೇತಿಯನ್ನು ಮಹಿಳೆಯರಿಗೆ ನೀಡಲಾಗುತ್ತದೆ.

ಜೇವರ್ಗಿ ತಾಲ್ಲೂಕಿನ ಜನಿವಾರ್ ಗ್ರಾಮದ ರತ್ನಮ್ಮ ಎಂಬ ಮಹಿಳೆಯು ಕಾಂಪೋಸ್ಟ್ ಸಾವಯವ ಗೊಬ್ಬರ ತಯಾರಿಕೆ ಬಗ್ಗೆ ವೈಟೆಪ್ (WYTEP) ಯೋಜನಯಡಿ ಧಾರವಾಡದ ತರಬೇತಿ ಕೇಂದ್ರದಲ್ಲಿ ತರಬೇತಿಯನ್ನು ಪಡೆದಳು. ಈಕೆ ತನ್ನ ಗ್ರಾಮದಲ್ಲಿ ಎರೆಹುಳು ಗೊಬ್ಬರ ಘಟಕವನ್ನು ಪ್ರಾರಂಭಿಸಿದಳು. ಈಕೆ ಅನಕ್ಷರಸ್ಥೆ, ಇದು ಆಕೆಯ ಕುಟುಂಬದ ಭೂಮಿಯಲ್ಲಿ ಉತ್ಪಾದಕತೆಯನ್ನು ಹೆಚ್ಚಿಸಲು ಮತ್ತು ಅದರ ಮೂಲಕ ವರಮಾನ ಉತ್ಪತ್ತಿಗೂ ಸಹಾಯವಾಯಿತು. ಪ್ರಸ್ತುತ ಆಕೆಯು ಸುತ್ತಮುತ್ತಲಿನ ಗ್ರಾಮಗಳಲ್ಲಿ ಉತ್ತಮ ಸ್ಥಿತಿವಂತ ಮಹಿಳೆಯಾಗಿದ್ದಾಳೆ. ಅಲ್ಲದೇ ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರಿಗೆ ಎರೆಹುಳು ಗೊಬ್ಬರವನ್ನು ತಯಾರಿಸುವ ಕುರಿತಂತೆ ತರಬೇತಿಯನ್ನು ನೀಡುತ್ತಿದ್ದಾಳೆ. ಚಿತ್ತಾಪುರ ತಾಲ್ಲೂಕಿನ ಇಟಗಿ ಗ್ರಾಮದ ಶಿವಕಾಂತಮ್ಮ ಆರನೇ ತರಗತಿಯವರೆಗೆ ಶಿಕ್ಷಣ ಪಡೆದ ಮಹಿಳೆ ಮತ್ತು ಶಕುಂತಲಾ ಅನಕ್ಷರಸ್ಥೆ. ಇವರು ಕಾಂಪೋಸ್ಟ್ ಮತ್ತು ಸಾವಯವ ಗೊಬ್ಬರ ತಯಾರಿಕೆ ಕುರಿತಂತೆ ತರಬೇತಿಯನ್ನು ಪಡೆದರು. ಇದು ಅವರಿಗೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಲ್ಲಿ ಮತ್ತು ಉತ್ಪಾದಕತೆಯನ್ನು ಅಧಿಕಗೊಳಿಸುವಲ್ಲಿ ನೆರವಾಯಿತು. ಇಬ್ಬರೂ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದು ಕಾಂಪೋಸ್ಟ್‌ನ್ನು ಬಳಸುತ್ತಿದ್ದಾರೆ. ಇದರಿಂದಾಗಿ ಅವರ ಉತ್ಪಾದನೆ ಮತ್ತು ವರಮಾನಗಳೆರಡೂ ಅಧಿಕಗೊಂಡಿದೆ. ಶಿವಕಾಂತಮ್ಮ ವೈಟೆಪ್ (WYTEP) ಸೊಸೈಟಿಯ ಅಧ್ಯಕ್ಷೆ. ಶಕುಂತಲಾ ಸ್ವಸಹಾಯ ಗುಂಪಿನ ಅಧ್ಯಕ್ಷೆ. ಅವರು ಇತರೆ ಮಹಿಳೆಯರಿಗೆ ಕಾಂಪೋಸ್ಟ್‌ನ ತಯಾರಿಕೆ ಮತ್ತು ಬಳಕೆ ಕುರಿತು ತರಬೇತಿ ನೀಡುತ್ತಿದ್ದಾರೆ. ಇಬ್ಬರೂ ಕೃಷಿ ತಾಂತ್ರಿಕತೆ ಕುರಿತಂತೆ ಇನ್ನೂ ಹೆಚ್ಚಿನ ತರಬೇತಿಗಳನ್ನು ಪಡೆಯಲು ಉತ್ಸುಕರಾಗಿದ್ದಾರೆ.

ಕೋಷ್ಟಕ 7.4

## ತಾಲ್ಲೂಕುಗಳಲ್ಲಿ ಲಿಂಗ ಅನುಪಾತ 1981–2001

| ಕ್ರ.ಸಂ. | ತಾಲ್ಲೂಕು | ಲಿಂಗ ಅನುಪಾತ | | | ಲಿಂಗ ಅನುಪಾತ (0–6 ವಯೋಮಾನ) |
|---|---|---|---|---|---|
| | | 1981 | 1991 | 2001 | 2001 |
| 1 | ಅಫಜಲಪುರ | 984 | 946 | 946 | 940 |
| 2 | ಅಳಂದ್ | 974 | 955 | 952 | 917 |
| 3 | ಚಿಂಚೋಳಿ | 992 | 976 | 974 | 932 |
| 4 | ಚಿತ್ತಾಪುರ | 984 | 966 | 968 | 938 |
| 5 | ಗುಲಬರ್ಗಾ | 935 | 923 | 938 | 918 |
| 6 | ಜೇವರ್ಗಿ | 1006 | 981 | 967 | 934 |
| 7 | ಸೇಡಮ್ | 1013 | 987 | 1008 | 964 |
| 8 | ಶಹಾಪುರ | 1009 | 979 | 979 | 942 |
| 9 | ಶೋರಾಪುರ | 979 | 976 | 980 | 951 |
| 10 | ಯಾದಗೀರ್ | 1006 | 982 | 988 | 964 |
| | **ಜಿಲ್ಲೆ** | **981** | **962** | **966** | **938** |
| | **ರಾಜ್ಯ** | **963** | **960** | **965** | **946** |

ಮೂಲ: ಸೆನ್ಸಸ್ ಆಫ್ ಇಂಡಿಯಾ – 1981 – 1991 – 2001

## ಕಾಣೆಯಾದ ಮಹಿಳೆಯರು

ಜಿಲ್ಲೆಯ ಲಿಂಗ ಪರಿಮಾಣ 966 (ರಾಜ್ಯದ ಸರಾಸರಿ 965ಕ್ಕೆ ಸನಿಹ). ಆದರೆ 0–6 ವಯೋಮಾನದಲ್ಲಿ ಲಿಂಗ ಪರಿಮಾಣ ಕೇವಲ 938 (ರಾಜ್ಯದ ಸರಾಸರಿ 948). ಲಿಂಗ ಪ್ರಮಾಣವು ಆಳಂದ (914), ಗುಲಬರ್ಗಾ (918), ಚಿಂಚೋಳಿ (932) ಮತ್ತು ಜೇವರ್ಗಿ (934)ಗಳಲ್ಲಿ ಅತ್ಯಂತ ಕಡಿಮೆ ಇದೆ. ಸಾಂಪ್ರದಾಯಿಕ ಕುಟುಂಬಗಳ ಲಕ್ಷಣವಾದ ಪುತ್ರ ವ್ಯಾಮೋಹದಿಂದಾಗಿ ಲಿಂಗ ಪ್ರಮಾಣವು ಕಡಿಮೆ ಇರುವುದಕ್ಕೆ ಕಾರಣವಾಗಿದೆ. ಇಂಥ ಸಮಾಜಗಳಲ್ಲಿ ಮಹಿಳೆಯು ಯಾವುದೇ ಸ್ಥಾನಮಾನ ಅಂತಸ್ತನ್ನು ಪಡೆಯಲಾರಳು.

ಕೋಷ್ಟಕ 7.5

### ಮಹಿಳೆಯರು ಮತ್ತು ಅವರ ಆರೋಗ್ಯ ಸಂಬಂಧಿ ಸಂಗತಿಗಳು

| ಕ್ರ.ಸಂ. | ವಿವರಗಳು | ಉತ್ತರಿಸಿದವರು (N=30) | ಶೇಕಡಾ |
|---|---|---|---|
| 1 | ಆಹಾರ ಸೇವನೆ | | |
| | a) ಹಸಿವಾಗಿದ್ದಾಗ | 3 | 10.00 |
| | b) ಬೇರೆಯವರು ಸೇವಿಸುತ್ತಿದ್ದಾಗ | 4 | 13.33 |
| | c) ದಿನದ ಕೊನೆಯಲ್ಲಿ | 23 | 76.67 |
| 2 | ಯಾರಿಗೆ ನೀನು ಹಾಲು ಮತ್ತು ಹಣ್ಣು ಸೇವಿಸಲು ನೀಡುತ್ತಿಯಾ? | | |
| | a) ಮಗ | 25 | 83.33 |
| | b) ಮಗಳು | 01 | 03.33 |
| | c) ಇಬ್ಬರಿಗೂ | 04 | 13.33 |
| 3 | ಮೊದಲು ಘರ್ಭಿಣಿಯಾಗಿದ್ದಾಗ ಯಾರನ್ನು ಸಲಹೆ ಕೇಳುತ್ತಿಯಾ? | | |
| | a) ಮನೆಯಲ್ಲಿನ ಹಿರಿಯ ಮಹಿಳೆ ಅಥವಾ ನೆರೆ ಮನೆಯ ಹಿರಿಯ ಮಹಿಳೆ. | 25 | 83.33 |
| | b) ಅಂಗನವಾಡಿ ಕಾರ್ಯಕರ್ತೆ | 03 | 10.00 |
| | c) ಆರೋಗ್ಯ ಸಹಾಯಕಿ | 01 | 03.33 |
| | d) ಪಿ.ಎಚ್.ಸಿ.ಯಲ್ಲಿ ವೈದ್ಯರು | 01 | 03.33 |
| 4 | ಅನುಸರಿಸುತ್ತಿರುವ ಕುಟುಂಬ ಯೋಜನೆ ಯಾವುದು? | | |
| | a) ತಾತ್ಕಾಲೀನ ವಿಧಾನ | 02 | 06.66 |
| | b) ಶಸ್ತ್ರ ಚಿಕಿತ್ಸೆ | 19 | 63.33 |
| | c) ಯಾವುದೂ ಇಲ್ಲ | 09 | 30.00 |
| 5 | ಕುಟುಂಬ ಯೋಜನಾ ಶಸ್ತ್ರ ಚಿಕಿತ್ಸೆ ಬಗ್ಗೆ ತೀರ್ಮಾನ ತೆಗೆದುಕೊಂಡವರಾರು? | | |
| | a) ಸ್ವಂತ | 01 | 05.26 |
| | b) ಅತ್ತೆ–ಮಾವ | 07 | 36.84 |
| | c) ಗಂಡ | 10 | 52.63 |
| | d) ಎಲ್ಲರೂ ಕೂಡಿ | 01 | 05.27 |
| 6 | ಶಸ್ತ್ರ ಚಿಕಿತ್ಸೆಯ ನಂತರ ಸರಿಯಾಗಿ ವೈದ್ಯಕೀಯ ಸೇವೆ ಮತ್ತು ವಿರಾಮ ದೊರೆಯಿತೆ? | | |
| | a) ಹೌದು | 03 | 15.79 |
| | b) ಇಲ್ಲ | 16 | 84.21 |

ಪ್ರಕಾಶ್ ಬಿ.ಎಂ.ಎ. ಕಿರು ಪ್ರಬಂಧ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

## ಸಾಮಾಜಿಕ ಅಂತಸ್ತು

ಕುಟುಂಬ ಮತ್ತು ಸಮಾಜಗಳಲ್ಲಿ ಸಾಮಾನ್ಯವಾಗಿ ಮಹಿಳೆಯರ ಅಂತಸ್ತು ಅಥವಾ ಸ್ಥಾನಮಾನ ಕೆಳಮಟ್ಟದಲ್ಲಿರುತ್ತದೆ. ಪುರುಷಶಾಹಿ ವ್ಯವಸ್ಥೆಯು ರೂಪಿಸಿದ ಸಾಂಪ್ರದಾಯಿಕ ಮೌಲ್ಯ ಪದ್ಧತಿಗಳೇ ಇದಕ್ಕೆ ಕಾರಣವಾಗಿದೆ. ಬಹಳ ಕಾಲದವರೆಗೂ ಈ ಪ್ರದೇಶವು ನಿಜಾಮರ ಆಡಳಿತಕ್ಕೆ ಒಳಪಟ್ಟಿತ್ತು. ಮುಸ್ಲಿಂ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ತೀರ ಕೆಳಮಟ್ಟದ ಸ್ಥಾನಮಾನವನ್ನು ನೀಡಲಾಗಿತ್ತು. ಇಂದಿಗೂ ಸಹ ಮಹಿಳೆಯು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾಳೆ. ಹೆಂಡತಿಯನ್ನು ಬೈಯ್ಯುವುದು, ಬಡಿಯುವುದು, ವರದಕ್ಷಣೆಗಾಗಿ ದೌರ್ಜನ್ಯ ಇವು ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಮೇಲೆ ನಡೆಯುವ ಕೌಟುಂಬಿಕ ಹಿಂಸೆಯ ಹಲವು ರೂಪಗಳು. ಆದರೆ ಅಪರಾಧ ಕುರಿತಂತೆ ನೋಂದಣಿಯಾಗಿರುವ ಪ್ರಕರಣಗಳ ಪ್ರಮಾಣವು ರಾಷ್ಟ್ರೀಯ ಮಟ್ಟಕ್ಕಿಂತಲೂ ಕಡಿಮೆ ಇದೆ. ಕುಟುಂಬದಿಂದ ಹೊರ ಹಾಕಲಾಗುತ್ತದೆ ಎಂಬ ಭಯದಿಂದಾಗಿ ಇಂಥ ಪ್ರಕರಣಗಳು ವರದಿಯಾಗುತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರು ಗಂಡನಿಂದ ಬಡಿಸಿಕೊಳ್ಳುವುದು ಮತ್ತು ಯಾತನೆಯನ್ನು ಅನುಭವಿಸುವುದನ್ನು ಒಪ್ಪಿಕೊಂಡು ಬಿಟ್ಟಿದ್ದಾರೆ. ಇದು ವಿವಾಹದ ಜೀವನದಲ್ಲಿ ಪ್ರಚಲಿತ ಲಕ್ಷಣವೆಂದೇ ಭಾವಿಸಿದ್ದಾರೆ. ಕುಟುಂಬದಲ್ಲಿಯ ತಾರತಮ್ಯದಿಂದಾಗಿ ಮಹಿಳೆಯರ ಆರೋಗ್ಯ ಸ್ಥಿತಿಯು ಕೆಳಮಟ್ಟಕ್ಕೆ ಇರುವುದಕ್ಕೆ ಕಾರಣ ಎಂಬುದನ್ನು ಗುಲಬರ್ಗಾ ಜಿಲ್ಲೆಯ ಎರಡು ಗ್ರಾಮಗಳಲ್ಲಿ ಕೈಗೊಂಡ ಕ್ಷೇತ್ರಕಾರ್ಯ ವರದಿಗಳು ತಿಳಿಸುತ್ತವೆ. ಅದರ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

## ಮಹಿಳೆಯರ ವಿರುದ್ಧ ದೌರ್ಜನ್ಯ

ಪ್ರತಿ ಲಕ್ಷ ಜನಸಂಖ್ಯೆಗೆ ನಡೆಯುತ್ತಿರುವ ಹೆಣ್ಣು ಭ್ರೂಣ ಹತ್ಯೆಯ ಪ್ರಮಾಣವು ಗುಲಬರ್ಗಾದಲ್ಲಿ ಅಧಿಕ ಪ್ರಮಾಣದಲ್ಲಿದೆ. (ಪ್ರತಿ ಲಕ್ಷಕ್ಕೆ 118, ರಾಜ್ಯ ಸರಾಸರಿ 23), ವಿಚ್ಛೇದನೆ, ಮಕ್ಕಳ ಬಂಧನ ಮತ್ತು ನಿರ್ವಹಣೆಗಳಿಗೆ ಸಂಬಂಧಿಸಿದ ಕಲಹಗಳನ್ನು ಬಗೆಹರಿಸಲು ಕೌಟುಂಬಿಕ ನ್ಯಾಯಾಲಯಗಳು ಸ್ಥಾಪನೆಗೊಂಡಿವೆ. ಆದರೆ ಅವುಗಳ ಕಾರ್ಯ ವೈಖರಿಯು ಪರಿಣಾಮಕಾರಿಯಾಗಿಲ್ಲ. ಇತರೆ ಅನಿಷ್ಟ ಸಾಮಾಜಿಕ ಆಚರಣೆಗಳು ಇಂದಿಗೂ ಸಹ ಮುಂದುವರಿದಿದೆ. ಯುವತಿಯರನ್ನು ಗುಡಿಗಳಿಗೆ ಅರ್ಪಿಸುವ 'ದೇವದಾಸಿ' ಪದ್ಧತಿಯ ಜಿಲ್ಲೆಯಲ್ಲಿ ಆಚರಣೆಯಲ್ಲಿದೆ. (ಚಿತ್ತಾಪುರ ತಾಲ್ಲೂಕಿನಲ್ಲಿ) ಇದು ಅಸಹಾಯಕತೆ, ಬಡತನ, ಮತ್ತು ಮೌಢ್ಯ




ಚೌಕಟ್ಟು 7.3

| ಲಿಂಗ ತಾರತಮ್ಯ |
|---|
| ಗುತ್ತಿ ಎಂಬುದು ಡೊಂಗರಗಾಂವ ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿರುವ ತಾಂಡ. ಇಲ್ಲಿ ಅಂಗನವಾಡಿ ಇದೆ. ಅಂಗನವಾಡಿ ಟೀಚರ್‌ಗೆ ನಾಲ್ಕು ಹೆಣ್ಣು ಮಕ್ಕಳು ಇದ್ದಾರೆ. ಆಕೆಯ ಗಂಡ ಗಂಡು ಮಗುವನ್ನು ಹೆತ್ತುಕೊಡಲಿಲ್ಲ ಎಂಬ ಕಾರಣಕ್ಕಾಗಿ ಆಕೆಯನ್ನು ಬಡಿಯುತ್ತಿರುತ್ತಾನೆ. ಗಂಡು ಮಗುವನ್ನು ಪಡೆಯುವುದಕ್ಕಾಗಿ ಆತ ಮತ್ತೊಂದು ಮದುವೆಯಾಗುವ ಬಯಕೆಯನ್ನು ಹೊಂದಿದ್ದಾನೆ. ಅಂಗನವಾಡಿ ಟೀಚರ್ ನಿಶಬ್ದವಾಗಿಯೇ ಅವುಗಳೆಲ್ಲವನ್ನೂ ತಾಳಿಕೊಂಡು ಬಂದಿದ್ದಾಳೆ. |
| ಸುರಪುರ ತಾಲ್ಲೂಕಿನ ಹಡ್ನೂರುನ ಸಮೀಕ್ಷೆಯಲ್ಲಿ ಕಂಡುಬಂದಂತೆ ಮಹಿಳೆಯೊಬ್ಬಳು ಮೂರು–ಅಥವಾ ನಾಲ್ಕು ಮಕ್ಕಳ ನಂತರವೇ ಕುಟುಂಬ ಯೋಜನೆಯ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಳ್ಳಲಿದ್ದು ಒಟ್ಟು ಮಕ್ಕಳಲ್ಲಿ ಒಂದಾದರೂ ಗಂಡು ಮಗುವಾಗಿರಬೇಕು. |

ಮೂಲ: ಮಲ್ಲಿಕಾರ್ಜುನರವರ ಎಂ.ಎ. ಸಂಪ್ರಬಂಧ (ಕ್ಷೇತ್ರಕಾರ್ಯ) ಮಹಿಳಾ ಅಧ್ಯಯನ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, 2005 ಮತ್ತು ಛಾಯಾ ದೇಗಾಂವಕರ್, 2001.

ಚೌಕಟ್ಟು 7.4

**ಮಹಿಳಾ ವಿರೋಧಿ ಮನೋಭಾವ**

ಕುಟುಂಬದೊಳಗೆ ಮತ್ತು ಸಮಾಜದಲ್ಲಿ ಮಹಿಳೆಯರಿಗೆ ಮತ್ತು ಹೆಣ್ಣು ಮಕ್ಕಳಿಗೆ ಸ್ಥಾನಮಾನ ಕೆಳಮಟ್ಟದಲ್ಲಿರಲು ಕಾರಣವಾದ ಸಂಗತಿಯೆಂದರೆ ಪುರುಷಶಾಹಿ. ಗುಲಬರ್ಗಾ ಜಿಲ್ಲೆಯ ಸರಡಗಿ, ಸಣ್ಣೂರು, ಸಣ್ಣೂರು ತಾಂಡ, ಕಲಗಿ ಮತ್ತು ಕಟ್ಟಿಸಾಂಗ್ವಿ ಗ್ರಾಮಗಳಲ್ಲಿ ನಡೆಸಿದ ಕ್ಷೇತ್ರಕಾರ್ಯದಿಂದ ತಿಳಿದುಬಂದ ಸಂಗತಿಗಳೆಂದರೆ ಮಹಿಳೆಯರನ್ನು ಮತ್ತು ಅವರ ಹೆಣ್ಣು ಮಕ್ಕಳನ್ನು ಕುರಿತ ತಾರತಮ್ಯ ಧೋರಣೆಯು ನಿಯಂತ್ರಿಸುತ್ತಿರುವ ಮೌಲ್ಯ ಕಟ್ಟುಪಾಡುಗಳು ಕುಟುಂಬ ಎಂಬ ಸಂಸ್ಥೆಯಲ್ಲಿ ಅನೂಚಾನವಾಗಿ ಹರಿದುಕೊಂಡು ಬರುತ್ತಿವೆ. ಇದರಿಂದಾಗಿ ಮಹಿಳೆಯರಿಗೆ ಮತ್ತು ಅವರ ಹೆಣ್ಣು ಮಕ್ಕಳಿಗೆ ತಾವು ತಾರತಮ್ಯಕ್ಕೆ ಒಳಗಾಗುತ್ತಿದ್ದೇವೆ ಎಂಬ ಅರಿವಿಲ್ಲ. ಸಮೀಕ್ಷೆಗೆ ಆಯ್ಕೆ ಮಾಡಿಕೊಂಡ ನಮೂನೆಯಲ್ಲಿನ ಶೇ. 65ರಷ್ಟು ಮಹಿಳೆಯರು ತಾರತಮ್ಯಕ್ಕೆ ಒಳಗಾಗಿರುವುದು ಕಮಡು ಬಂದಿತು(ಅಂದರೆ ಸಾಂಪ್ರದಾಯಿಕ ಕುಟುಂಬ ಚೌಕಟ್ಟಿನಲ್ಲಿ ಬದುಕುತ್ತಿರುವ ಮಹಿಳೆಯರು, ಲಿಂಗ ತಾರತಮ್ಯದ ಬಗ್ಗೆ ಅರಿವಿಲ್ಲದವರು, ಈ ಬಗೆಯ ಮೌಲ್ಯಗಳನ್ನು ತಮ್ಮ ಹೆಣ್ಣು ಮಕ್ಕಳಿಗೆ ವರ್ಗಾಹಿಸುವವರು).

ಮಹಿಳೆಯರ ಮತ್ತು ಅವರ ಹೆಣ್ಣುಮಕ್ಕಳ ಪೌಷ್ಟಿಕತೆ ಅತ್ಯಂತ ಕೆಳಮಟ್ಟದಲ್ಲಿರುವುದು ಸಮೀಕ್ಷೆಯಿಂದ ತಿಳಿದು ಬಂದಿದೆ. ಇದರಿಂದಾಗಿ ಅವರ ತೀವ್ರ ಅನಾರೋಗ್ಯಕ್ಕೆ ತುತ್ತಾಗಿಬಿಡುತ್ತಾರೆ. ಆಕೆಯು ಪುರುಷ ವೈದ್ಯರನ್ನು ಕಂಡು ಪರೀಕ್ಷೆ ಮಾಡಿಸಿಕೊಳ್ಳಲು ಹಿಂಜರಿಯುತ್ತಾಳೆ, ಸಾಕಷ್ಟು ಗಂಡು ಮಕ್ಕಳಾದ ನಂತರವೆ ಆಕೆ ಕುಟುಂಬ ಯೋಜನಾ ಶಸ್ತ್ರ ಕ್ರಿಯೆಗೆ ಒಪ್ಪುತ್ತಾಳೆ. ಗಂಡು ಮಕ್ಕಳಾದ ಮೇಲೆ ಮಾತ್ರವೇ ಕುಟುಂಬ ಯಶಸ್ವಿಯಾಯಿತೆಂದು ಪಾಲಕರು ಭಾವಿಸುತ್ತಾರೆ. ಮಹಿಳೆಯರು ತಂತಹ ತಾರತಮ್ಯವನ್ನು ಪ್ರಶ್ನೆ ಮಾಡದಿರುವುದಕ್ಕೆ ಅನಕ್ಷರತೆಯು ಪ್ರಮುಖ ಕಾರಣವಾಗಿದೆ.

ಮುಂತಾದವುಗಳ ಫಲವಾಗಿದೆ. ಅಧಿಕಾರಿಗಳ ವರದಿಗಳ ಪ್ರಕಾರ ಜಿಲ್ಲೆಯಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯಗಳ ಪ್ರಕರಣಗಳು ಕಡಿಮೆಯಾಗುತ್ತಿವೆ. ಸಾಂತ್ವನ, ಮಹಿಳಾ ಪೊಲೀಸ್ ಠಾಣೆಗಳು, ಕೌಟುಂಬಿಕ ಆಪ್ತ ಸಮಾಲೋಚನಾ ಕೇಂದ್ರಗಳು, ಕೌಟುಂಬಿಕ ನ್ಯಾಯಾಲಯಗಳು ಮುಂತಾದ ಕಾರ್ಯಕ್ರಮಗಳನ್ನು ಆಚರಣೆಯಲ್ಲಿ ತಂದಿರುವುದರ ಪರಿಣಾಮವಾಗಿ ಇಂದು ಮಹಿಳೆಯರ ಮೇಲಿನ ದೌರ್ಜನ್ಯಗಳ ಪ್ರಕರಣಗಳು ಇಳಿಮುಖವಾಗುತ್ತಿದೆ. ಅಲ್ಲದೇ ರಾಜ್ಯ ಮಹಿಳಾ ಆಯೋಗವು ಸಹ ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸುತ್ತಿದೆ.

## ಮಹಿಳಾ ಸಬಲೀಕರಣ – ಇತ್ತೀಚಿನ ಪ್ರವೃತ್ತಿಗಳು

ಮಹಿಳಾ ಅಭಿವೃದ್ಧಿಗೆ 'ಗುಂಪು ಪರಿಕಲ್ಪನೆ'ಯ ಅನುಷ್ಠಾನ ಮತ್ತು ಅದರ ಪರಿಣಾಮವಾಗಿ ಡ್ವಾಕ್ರಾ ಮತ್ತು ಸ್ತ್ರೀಶಕ್ತಿ ಗುಂಪುಗಳಲ್ಲಿ ಸ್ವಸಹಾಯ ಗುಂಪುಗಳ ಅಸ್ತಿತ್ವಕ್ಕೆ ಬಂದಿದ್ದು ಅವು ಮತ್ತು ಇತರೆ ಕಾರ್ಯಕ್ರಮಗಳು ಮಹಿಳೆಯರ ಸಬಲೀಕರಣದ ಮೇಲೆ ಧನಾತ್ಮಕ ಪರಿಣಾಮಗಳನ್ನು ಬೀರಿವೆ. ಜಿಲ್ಲೆಯಲ್ಲಿ ಇಂಥ ಗುಂಪುಗಳ ಸಂಖ್ಯೆಯು 6500ಕ್ಕೆ ಏರಿಕೆಯಾಗಿದೆ ಮತ್ತು ಇಂಥ ಸ್ವಸಹಾಯ ಗುಂಪುಗಳಲ್ಲಿ ಮಹಿಳಾ ಸದಸ್ಯರುಗಳ ಸಂಖ್ಯೆಯು 109769 ಮೀರಿದೆ. ಇದರಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಮಹಿಳಾ ಸದಸ್ಯರ ಪ್ರಮಾಣ ಶೇ. 31 ಮತ್ತು ಶೇ. 10ರಷ್ಟು ಸದಸ್ಯರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದಾರೆ.

ಗುಂಪುಗಳ ಕಾರ್ಯಗಳು ಮತ್ತು ನಿರ್ವಹಣೆ ಕುರಿತಂತೆ ಗುಲಬರ್ಗಾ ವಿಶ್ವವಿದ್ಯಾಲಯ ಮಹಿಳಾ ಅಧ್ಯಯನ ವಿಭಾಗವು ಹಲವಾರು ಮೌಲ್ಯಮಾಪನ ಅಧ್ಯಯನವನ್ನು ಕೈಗೊಂಡು ಪೂರೈಸಿದೆ. ಈ ಅಧ್ಯಯನಗಳು ತಿಳಿಸುವಂತೆ ಬಹುತೇಕ ಗುಂಪುಗಳು ಉತ್ತಮ ರೀತಿಯಲ್ಲಿ ನಡೆಯುತ್ತವೆ. ಮಹಿಳೆಯರು ಒಂದೆಡೆ ಕೂಡಿ ತಮ್ಮ ಕೌಟುಂಬಿಕ ವಿಷಯ ಮತ್ತು ಸಮಸ್ಯೆಗಳನ್ನು ಚರ್ಚಿಸಲು ಹಾಗೂ ಆರ್ಥಿಕ ಚಟುವಟಿಕೆಗಳ ಕುರಿತಂತೆ ಸಲಹೆಗಳನ್ನು ಪಡೆಯಲು ನೆರವಾಗಿದೆ. ಹೈನುಗಾರಿಕೆ, ಕೋಳಿ ಸಾಕಾಣಿಕೆ, ವ್ಯಾಪಾರ ಮತ್ತು ಸೇವೆಗಳು ಇವು ಗುಂಪುಗಳು ಕೈಗೊಂಡಿರುವ ಚಟುವಟಿಕೆಗಳಾಗಿವೆ. ಗುಂಪುಗಳು ನಿಯತಕಾಲಿಕವಾಗಿ ತಾವು ಪಡೆದಿರುವ ಸಾಲಗಳನ್ನು ಮರುಪಾವತಿ ಮಾಡುತ್ತಿವೆ. ಮಹಿಳೆಯರ ಜ್ಞಾನ ಮತ್ತು

ತಿಳುವಳಿಕೆಯ ಮಟ್ಟಗಳು ಅಧಿಕಗೊಳ್ಳುತ್ತಿದೆ. ಇವು ಸಮಾಜದಲ್ಲಿ ಮತ್ತು ಕುಟುಂಬಗಳಲ್ಲಿ ಮಹಿಳೆಯರ ಅಂತಸ್ತು ಅಧಿಕಗೊಳ್ಳಲು ಸಹಾಯಕವಾಗಿವೆ. ಮಹಿಳೆಯರು ಸಹ ಗ್ರಾಮಗಳ ಅಭಿವೃದ್ಧಿ ಚಟುವಟಿಕೆಗಳಲ್ಲಿ ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.



## ಶೀಘ್ರ ಗಮನ ಹರಿಸಬೇಕಾದ ಆತಂಕಕಾರಿ ಸಂಗತಿಗಳು

ಮಹಿಳೆಯರ ಸಾಕ್ಷರತಾ ಪ್ರಮಾಣವು ಜಿಲ್ಲೆಯಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ. ಬಾಲಕಿಯರ ದಾಖಲಾತಿ ಪ್ರಮಾಣವು ಬಾಲಕರಿಗಿಂತಲೂ ಕೆಳಮಟ್ಟದಲ್ಲಿದೆ. ಗುಲಬರ್ಗಾ, ಚಿಂಚೋಳಿ, ಯಾದಗಿರಿ ಮತ್ತು ಶಹಾಪುರ ತಾಲ್ಲೂಕುಗಳ ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಸಂಗತಿಗಳಿಂದಾಗಿ ದಾಖಲಾತಿ ಪ್ರಮಾಣವು ಅತ್ಯಂತ ಕೆಳಮಟ್ಟದಲ್ಲಿದೆ. ಇದು ಮಹಿಳಾ ಶಿಕ್ಷಣಕ್ಕೆ ಕಡಿಮೆ ಪ್ರಾಮುಖ್ಯತೆ ಇರಲು ಕಾರಣವಾಗಿದೆ. (ಉ.ಸಾ.ಎಸ್.ಎ. ಅಡಿಯಲ್ಲಿ ಶಿಕ್ಷಣ ಇಲಾಖೆಯವರು ನಡೆಸಿದ ಸಮೀಕ್ಷೆಯಲ್ಲಿ ಕಂಡುಬಂದ ಅಂಶ).



1. ಮಹಿಳೆಯರು ಮುಖ್ಯವಾಗಿ ಅಂಚಿನ ದುಡಿಮೆಗಾರರಾಗಿ ದುಡಿಯುತ್ತಿದ್ದು, ಅವರು ಕೃಷಿಯಲ್ಲಿ ಕೇಂದ್ರೀಕರಣಗೊಂಡಿದ್ದಾರೆ. ಕೃಷಿ ಕಾರ್ಮಿಕರಾಗಿರುವುದರಿಂದ ಇವರು ಬಡತನದ ವಿಷ ವರ್ತುಲದಲ್ಲಿ ಸಿಲುಕಿದ್ದಾರೆ. ಮಹಿಳೆಯರು ಅಪೌಷ್ಟಿಕತೆಯೊಂದಿಗೆ ಇಬ್ಬಗೆಯ ದುಡಿಮೆಯ ಭಾರದಿಂದ ನರಳುತ್ತಿದ್ದಾಳೆ.

2. ಕೃಷಿಯಲ್ಲಿ ಲಿಂಗಾಧಾರಿತ ಶ್ರಮ ವಿಭಜನೆಯ ಅಸ್ತಿತ್ವದಿಂದಾಗಿ ಮಹಿಳೆಯು ಕಡಿಮೆ ವೇತನ ಇರುವ ಕೆಲಸಗಳಲ್ಲಿ ತೊಡಗಿದ್ದಾಳೆ.

3. ಸರಾಸರಿ ಶೇ. 99ರಷ್ಟು ಸಂತಾನಹರಣ ಶಸ್ತ್ರ ಚಿಕಿತ್ಸೆಗಳು ಮಹಿಳೆಯರಿಗೆಯೇ ನಡೆಯುತ್ತವೆ. ಇದು ಮಹಿಳೆ ಇಂದಿಗೂ ತಾರತಮ್ಯಕ್ಕೆ ಒಳಗಾಗಿದ್ದಾಳೆ ಎಂಬುದನ್ನು ಬೆಂಬಲಿಸುತ್ತದೆ.

4. 0–6 ವಯೋಮಾನದವರಲ್ಲಿ ಲಿಂಗ ಪರಿಮಾಣವು ಕುಸಿಯುತ್ತಿರುವುದು ಸಹ ಮತ್ತೊಂದು ಆತಂಕಕರ ಸಂಗತಿಯಾಗಿದೆ. ಸಾಂಪ್ರಾದಾಯಿಕ ಸಮಾಜದಲ್ಲಿ ಪುರುಷ ಶಾಹಿ ವ್ಯವಸ್ಥೆಯ ಬೇರು ಇನ್ನು ಗಟ್ಟಿಯಾಗಿರುವುದನ್ನು ಇದು ತಿಳಿಸುತ್ತದೆ.

5. ಸ್ತ್ರೀಶಕ್ತಿಗಳಂಥ ಕಾರ್ಯಕ್ರಮಗಳು ಮತ್ತು ನೀತಿಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಗಣನೀಯ ಕೊಡುಗೆಗಳನ್ನು ನೀಡಿವೆ. ಆದರೆ ಇವು ಸಾಂಪ್ರದಾಯಿಕ ಕೌಶಲ್ಯಗಳಿಗೆ ಮಾತ್ರ ಸೀಮಿತಗೊಂಡಿವೆ.

6. ಗುಂಪು ಪರಿಕಲ್ಪನೆಯಿಂದಾಗಿ ಪ್ರಾರಂಭ'ಗೊಂಡಿರುವ ಸ್ವಸಹಾಯ ಗುಂಪುಗಳು ಮಹಿಳೆಯರ ಸಣ್ಣ ಉದ್ಯಮಿ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಪರಿಣಾಮ ಕಾರಿಯಾಗಿ ಕೆಲಸ ಮಾಡಿದೆ. ಆದರೆ ಅವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ.

## ಸಲಹೆಗಳು

ಜಿಲ್ಲೆಯಲ್ಲಿ ಮಹಿಳೆಯರ ವಿಷಯದಲ್ಲಿ ನಿರ್ದಿಷ್ಟ ನೀತಿಗಳ ಮೂಲಕ ಶೀಘ್ರವಾಗಿ ಗಮನ ನೀಡಬೇಕಾಗಿದೆ. ನಿರ್ದಿಷ್ಟ ಸಂಗತಿಗಳೆಂದರೆ;

- ಮಹಿಳೆಯರಿಗೆ ಶಿಕ್ಷಣವನ್ನು ದೊರೆಗೊಳ್ಳುವಲ್ಲಿ ಸುಧಾರಣೆಗಳ ಅಗತ್ಯವಿದೆ. ವಸತಿ ಸೌಲಭ್ಯಗಳಿರುವ ಬಾಲಕಿಯರ ಪ್ರೌಢ'ಶಾಲೆಗಳನ್ನು ಅಧಿಕ ಪ್ರಮಾಣದಲ್ಲಿ ಸ್ಥಾಪಿಸಬೇಕಾಗಿದೆ. ಬಾಲಕಿಯರು ಶಿಕ್ಷಣವನ್ನು ಮುಂದುವರಿಸಲು ಅವರಿಗೆ ಅಗತ್ಯ ಹಣಕಾಸಿನ ನೆರವನ್ನು ನೀಡಬೇಕಾಗಿದೆ. ಪುಸ್ತಕಗಳು ಮತ್ತು ಸಮವಸ್ತ್ರಗಳ ರೂಪದಲ್ಲಿಯೂ ನೆರವಿನ ಅಗತ್ಯವಿದೆ.

- ಮಹಿಳೆಯರಿಗೆ ಉತ್ತಮ ಸಂಭಾವನೆ ಇರುವ ಕೆಲಸ ಮತ್ತು ಉದ್ಯೋಗಗಳು ದೊರೆಗೊಳ್ಳುವಂತಾಗಬೇಕು. ತರಬೇತಿಗಳನ್ನು ನೀಡುವುದರ ಮೂಲಕ ಅವರಲ್ಲಿ ಕೌಶಲ್ಯಗಳನ್ನು ವೃದ್ಧಿಸಿ ಆ ಮೂಲಕ ಅವರಿಗೆ ಉತ್ತಮ ಉದ್ಯೋಗಗಳು

ದೊರೆಯುವಂತೆ ಮಾಡಬೇಕು. ಕೂಲಿಯಲ್ಲಿ ಪುರುಷ ಮತ್ತು ಮಹಿಳೆಯರ ನಡುವೆ ಇರುವ ತಾರತಮ್ಯಗಳನ್ನು ನಿರ್ಮೂಲನೆ ಮಾಡಬೇಕು. ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ನೀತಿಯನ್ನು ಪರಿಣಾಮಕಾರಿಯಾಗಿ ಅನುಷ್ಠಾನದಲ್ಲಿ ತರಬೇಕು.

- ಮಹಿಳೆಯರಿಗೆ ಭೂಮಾಲಿಕತ್ವ ಮತ್ತು ಸಾಲ ಸೌಲಭ್ಯಗಳು ಅಧಿಕ ಪ್ರಮಾಣದಲ್ಲಿ ದೊರೆಗೊಳ್ಳುವಂತೆ ಮಾಡುವುದರ ಮೂಲಕ ಅವರ ಆರ್ಥಿಕ ಸಬಲೀಕರಣವನ್ನು ಪ್ರೋತ್ಸಾಹಿಸಬೇಕು.

- ಜಾಗೃತಿ ಕಾರ್ಯಕ್ರಮಗಳ ಮೂಲಕ ಪ್ರಸ್ತುತ ಇರುವ ಕಾಯಿದೆಗಳು ಮತ್ತು ಅಭಿವೃದ್ಧಿ ಯೋಜನೆಗಳ ಬಗ್ಗೆ ಮಹಿಳೆಯರಿಗೆ ಜ್ಞಾನ ಮತ್ತು ಮಾಹಿತಿಗಳನ್ನು ನೀಡಬೇಕು.

- ಶಿಕ್ಷಣ, ಲಿಂಗ ಸಂವೇದಿ ಕಾರ್ಯಕ್ರಮಗಳ ಮೂಲಕ ಪುರುಷಶಾಹಿ ಮೌಲ್ಯಗಳು ಕಡಿಮೆಯಾಗುವಂತೆ ಮತ್ತು ಬದಲಾಗುವಂತೆ ಮಾಡಬೇಕು. ಆ ಮೂಲಕ ಮಹಿಳೆಯರ ಮೇಲಿನ ದುಡಿಮೆಯ ಇಬ್ಬಗೆಯ ಭಾರವನ್ನು ಕಡಿಮೆ ಮಾಡಬೇಕು.

- ಪರಿಣಾಮಕಾರಿ ಕಾರ್ಯಕ್ರಮಗಳು ಮತ್ತು ನಿರಂತರ ಅನುಷ್ಠಾನದ ಮೂಲಕ ಮಹಿಳೆಯರ ಆರೋಗ್ಯ ಸೇವೆಯನ್ನು ಮತ್ತು ಪೌಷ್ಠಿಕತೆಯಂಥ ಅಗತ್ಯಗಳನ್ನು ಪೂರೈಸಬೇಕು.

- ಶಿಕ್ಷಣ, ಸಾಮಾಜಿಕ ಮೌಲ್ಯಗಳಲ್ಲಿ ಬದಲಾವಣೆಗಳನ್ನು ತರುವುದರ ಮೂಲಕ ಕುಟುಂಬ ಮತ್ತು ಸಮಾಜಗಳಲ್ಲಿ ಮಹಿಳೆಯರ ಅಂತಸ್ತು/ಸ್ಥಾನಮಾನ ಅಧಿಕಗೊಳ್ಳುವಂತೆ ಮಾಡಬೇಕು. ಸಾಂಪ್ರದಾಯಿಕ ಮೌಲ್ಯವ್ಯವಸ್ಥೆಯಲ್ಲಿ ಬದಲಾವಣೆ ತರಲು ಸಾಮೂಹಿಕ ಆಂದೋಲನ ಸಂಘಟಿಸಬೇಕು.

ಈ ನಿಟ್ಟಿನಲ್ಲಿ ರಾಜ್ಯ, ನಾಗರಿಕ ಸಮಾಜ, ಸಾಮಾಜಿಕ ಕಾರ್ಯಕರ್ತರು, ಸರಕಾರೇತರ ಸಂಸ್ಥೆಗಳು ಪ್ರಮುಖ ಪಾತ್ರವನ್ನು ವಹಿಸಬೇಕಾಗಿದೆ.

# ವಂಚಿತ ಜನಸಮುದಾಯಗಳ ಸ್ಥಿತಿಗತಿ – ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಅಲ್ಪಸಂಖ್ಯಾತರು




KALBURGI (GULBARGA) District Map
Bidar
N
MAHARASHTRA
Khajuri
Aland
Salgar
Kinhi
Sonath
Bodhan
Kamlapur
Mahagaon
Mullamdri
Narona
Sargapur
Chincholi
Awarja
Benithora
Ratkal
Sulahpet
Kulali
Nimbarga
KALBURGI
Kalgi
Marhal
Mannur
Bari
Atanur
Gobur Buzurgr
Nirgunda
Tingli
Kogna
Afzalpur
Gangapur
Farhatabad
Sedam
Chitapur
Adki
Firozabad
Mudhol
Nelogi
Wadi
Kona
Javargi
www.mapsofindia.com
Andola
Nalwar
Handarki
Aralagundi
Ijeri
Gajarkot
Yaragol
Yedrami
Gurmatkal
ANDHRA PRADESH
Sirwal
Bhima
Yadgir
Bijapur
Doranahalli
Haligeri
Malla Buzurg
Gugi
Shahpur
Khanapur
Nandepalli
Kembhavi
Sagar
Hattigudur
Ajalapur
Saidapur
Agni
Wadagera
Shorapur
Tumkur
Krishna
Devapur
Kakkara
Tintani
Kodekal
Raichur
Narayanpur
Map not to Scale
Copyright © 2007 Compare Infobase Limited
LEGEND
State Boundary
District Boundary
Major Road
Railway
District Headquarter
Major Town
Other Town
River

ಅಧ್ಯಾಯ 8

# ವಂಚಿತ ಜನಸಮುದಾಯಗಳ ಸ್ಥಿತಿಗತಿ – ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು ಹಾಗೂ ಅಲ್ಪಸಂಖ್ಯಾತರು

ಭಾರತೀಯ ಸಮಾಜವು ಬಹುಜಾತಿ ಮತ್ತು ಬಹುಭಾಷೆಗಳಿಂದ ಕೂಡಿದ ಸಮಾಜವಾಗಿದೆ. ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಕೆಲವು ಜಾತಿ ಸಮುದಾಯಗಳು ಉನ್ನತ ಮಟ್ಟದಲ್ಲಿಯೂ ಮತ್ತು ಕೆಲವು ಸಮುದಾಯಗಳು ಕೆಳಮಟ್ಟದಲ್ಲೂ ಸ್ಥಾನವನ್ನು ಪಡೆದಿರುವುದು ಕಂಡು ಬರುತ್ತದೆ. ಜಾತಿ ಶ್ರೇಣೀಕರಣದಲ್ಲಿ ಕೆಳಮಟ್ಟದಲ್ಲಿರುವ ಮತ್ತು ವಂಚಿತ ಸ್ಥಿತಿಯಲ್ಲಿರುವವರಲ್ಲಿ ಬಹುಪಾಲು ಜನರು ಪ.ಜಾ. ಗುಂಪಿನಲ್ಲಿ ಸೇರುತ್ತಾರೆ. ಇವರು ಸಾಮಾಜಿಕವಾಗಿ ತುಳಿತಕ್ಕೊಳಗಾದ ಮತ್ತು ಸಮಾಜದಿಂದ ನಿರ್ಲಕ್ಷಿಸಲ್ಪಟ್ಟು ವಂಚಿತರಾಗಿ ಕೆಳದರ್ಜೆಯ ಸ್ಥಾನಮಾನಗಳನ್ನು ಹೊಂದಿದವರಾಗಿದ್ದಾರೆ. ಶತಮಾನಗಳ ಕಾಲ ತುಳಿತಕ್ಕೊಳಗಾಗಿ ಮತ್ತು ಸಮಾಜದ ಎಲ್ಲ ಅವಕಾಶಗಳಿಂದ ವಂಚಿತರಾಗಿರುವುದರ ಜೊತೆಗೆ ಮಾನವಾಭಿವೃದ್ಧಿಯ ಸೂಚಿಗಳಂತಹ ವಿಷಯದಲ್ಲಿ ಬಹಳ ಕಾಲ ವಂಚನೆಗೊಳಗಾದವರು ಇವರಾಗಿದ್ದಾರೆ. ಇವರನ್ನು ಭಾರತ ಸಂವಿಧಾನ ವಿಧೇಯಕಗಳನ್ವಯ ಮುಖ್ಯವಾಹಿನಿಗೆ ತರಲು ಶಿಕ್ಷಣ ಮತ್ತು ಉದ್ಯೋಗದ ಅವಕಾಶಗಳನ್ನು ನೀಡಿ ಅವರ ಸಂಪೂರ್ಣ ಅಭಿವೃದ್ಧಿಗೆ ಪ್ರೋತ್ಸಾಹ ನೀಡಲಾಗುತ್ತಿದೆ..

ಈ ಅಧ್ಯಾಯದಲ್ಲಿ ಸಾಮಾಜಿಕವಾಗಿ ತುಳಿತಕ್ಕೊಳಗಾದ ಸಮುದಾಯಗಳಲ್ಲಿ ಮಾನವ ಅಭಿವೃದ್ಧಿ ಸ್ಥಿತಿಗತಿಯ ಬಗ್ಗೆ ಗಮನ ಹರಿಸಲಾಗಿದೆ. ಈ ರೀತಿಯಲ್ಲಿ ವಿಶೇಷ ಗಮನಹರಿಸುವ ಅಗತ್ಯವೂ ಇದೆ. ಈ ಬಗೆಯ ಪ್ರತ್ಯೇಕವಾದ ಮತ್ತು ವಿಶಿಷ್ಟವಾದ ರೀತಿಯಲ್ಲಿ ಅವರ ಸ್ಥಿತಿಗತಿಗಳನ್ನು ವಿಶ್ಲೇಷಿಸುವ ಅಗತ್ಯವಿದೆ. ಏಕೆಂದರೆ ಸಾಮಾನ್ಯರೊಟ್ಟಿಗೆ ಇವರನ್ನು ಸೇರಿಸಿ ಜಿಲ್ಲೆಯ ಮಾನವ ಅಭಿವೃದ್ಧಿಯನ್ನು ವಿವರಿಸುವುದು ಕಷ್ಟವಾಗುತ್ತದೆ ಮತ್ತು ಅದು ಸರಿಯಾದ ಕ್ರಮವಾಗುವುದಿಲ್ಲ. ಈ ರೀತಿಯ ಅಧ್ಯಯನಗಳಿಂದಾಗಿ ಜನರನ್ನು ಒಳಗೊಳ್ಳುವ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ಅಗತ್ಯವಾದ ನೀತಿಯನ್ನು ರೂಪಿಸಲು ಸಾಧ್ಯವಾಗುತ್ತದೆ. ಈ ಜನಸಮುದಾಯದ ಸಮಸ್ಯೆಯನ್ನು ಅವರ ಶಿಕ್ಷಣ ಮತ್ತು ಆರೋಗ್ಯ, ಆದಾಯ ಮತ್ತು ಉದ್ಯೋಗಗಳಿಗೆ ಸಂಬಂಧಿಸಿದಂತೆ ಇಲ್ಲಿ ಚರ್ಚಿಸಲಾಗಿದೆ. ರಾಜ್ಯದಲ್ಲಿ ಅತಿ ಹೆಚ್ಚು ಪ್ರಮಾಣದ ಪ.ಜಾತಿ ಜನಸಂಖ್ಯೆಯನ್ನು ಹೊಂದಿರುವ ಒಂದು ಜಿಲ್ಲೆ ಗುಲಬರ್ಗಾ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಇವರು ಶೇ.23ರಷ್ಟು ಇದ್ದಾರೆ. ರಾಜ್ಯದ ಕೋಲಾರ ಮತ್ತು ಚಾಮರಾಜನಗರಗಳ ನಂತರದ ಮೂರನೆಯ ಸ್ಥಾನ ಹೊಂದಿದ ಜಿಲ್ಲೆಯಾಗಿದೆ. ನಿಖರವಾಗಿ ಜಿಲ್ಲೆಯು 7,17595 ಪರಿಶಿಷ್ಟ ಜಾತಿ ಜನಸಂಖ್ಯೆಯನ್ನು ಹೊಂದಿದೆ. ಬೆಂಗಳೂರು ನಗರ ಪ್ರದೇಶದಲ್ಲಿರುವ ಪ.ಜಾ.ಜನಸಂಖ್ಯೆಯ (851047) ನಂತರದ ಸ್ಥಾನ ಗುಲಬರ್ಗಾ ಜಿಲ್ಲೆಗಿದೆ. ಈ ಜಿಲ್ಲೆಯಲ್ಲಿ ಪ.ಜಾ. ಜನಸಂಖ್ಯೆಯನ್ನು ಅತಿ ಹೆಚ್ಚಾಗಿ ಹೊಂದಿರುವ ತಾಲ್ಲೂಕುಗಳೆಂದರೆ ಚಿಂಚೋಳಿ (ಶೇ. 33.2) ಮತ್ತು ಚಿತ್ತಾಪುರ (ಶೇ. 29.3). ಈ ತಾಲ್ಲೂಕುಗಳಲ್ಲಿ ಪ್ರತಿ ಮೂರನೆಯ ವ್ಯಕ್ತಿಯು ಪ.ಜಾ.ಯವನಾಗಿರುತ್ತಾನೆ. ಸೇಡಂ ತಾಲ್ಲೂಕಿನಲ್ಲಿ ಇವರ ಪ್ರಮಾಣ ಶೇ.25.8ರಷ್ಟಿದೆ. ಅಫಜಲಪುರ ತಾಲ್ಲೂಕಿನಲ್ಲಿ ಇವರ ಪ್ರಮಾಣ ಕಡಿಮೆ (ಶೇ.17.8)ಇದೆ. ಒಟ್ಟು ಜನಸಂಖ್ಯೆಯಲ್ಲಿ ಪ.ಜಾತಿ ಜನಸಂಖ್ಯೆಯ ಪ್ರಮಾಣ 1991–2001ರ ಮಧ್ಯಭಾಗದಲ್ಲಿ ಶೇ.23.6ರಿಂದ ಶೇ.22.9ಕ್ಕೆ

**ರಾಜ್ಯದಲ್ಲಿ ಅತಿ ಹೆಚ್ಚು ಪ್ರಮಾಣದ ಪ.ಜಾತಿ ಜನಸಂಖ್ಯೆಯನ್ನು ಹೊಂದಿರುವ ಒಂದು ಜಿಲ್ಲೆ ಗುಲಬರ್ಗಾ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಇವರು ಶೇ.23ರಷ್ಟು ಇದ್ದಾರೆ. ರಾಜ್ಯದ ಕೋಲಾರ ಮತ್ತು ಚಾಮರಾಜನಗರಗಳ ನಂತರದ ಮೂರನೆಯ ಸ್ಥಾನ ಹೊಂದಿದ ಜಿಲ್ಲೆಯಾಗಿದೆ. ನಿಖರವಾಗಿ ಜಿಲ್ಲೆಯು 7,17595 ಪರಿಶಿಷ್ಟ ಜಾತಿ ಜನಸಂಖ್ಯೆಯನ್ನು ಹೊಂದಿದೆ. ಬೆಂಗಳೂರು ನಗರ ಪ್ರದೇಶದಲ್ಲಿರುವ ಪ.ಜಾ.ಜನಸಂಖ್ಯೆಯ (851047) ನಂತರದ ಸ್ಥಾನ ಗುಲಬರ್ಗಾ ಜಿಲ್ಲೆಗಿದೆ.**

ಇಳಿಕೆಯಾಗಿರುವುದು ಕಂಡುಬರುತ್ತದೆ. ಈ ಇಳಿಕೆಯು ಪ್ರಮುಖವಾಗಿ ನಾಲ್ಕು ತಾಲ್ಲೂಕುಗಳಲ್ಲಿ ನಡೆದಿದೆ. ಅವು ಕ್ರಮವಾಗಿ ಯಾದಗೀರ್ (ಶೇ. 24ರಿಂದ ಶೇ. 22.3), ಗುಲಬರ್ಗಾ (ಶೇ. 21.4ರಿಂದ ಶೇ. 20.4), ಅಫ್ಜಲಪುರ್ (ಶೇ. 18.6ರಿಂದ ಶೇ. 17.8) ಮತ್ತು ಶೋರಾಪುರ (ಶೇ. 18.9ರಿಂದ ಶೇ. 18.2)

ಪ.ಜಾತಿ ಜನಸಂಖ್ಯೆಯು 1991ರಲ್ಲಿ 6,10,641 ಇದ್ದುದು 2001ರ ವೇಳೆಗೆ 7,17,595ಕ್ಕೆ ಏರಿಕೆಯಾಗಿದೆ. ಇದರ ವಾರ್ಷಿಕ ಸರಾಸರಿ ಬೆಳವಣಿಗೆಯು ಪ್ರಮಾಣ ಶೇ. 1.75 ಆಗಿದೆ. ಇದು ಸಾಮಾನ್ಯ ಜನಸಂಖ್ಯೆಯು ಬೆಳವಣಿಗೆ ಪ್ರಮಾಣಕ್ಕಿಂತ (ಶೇ. 2.1ಕ್ಕಿಂತ) ಕಡಿಮೆಯಾಗಿದೆ. ಇಲ್ಲಿ ಪ.ಜಾತಿ ಜನಸಂಖ್ಯೆಯು ಪ್ರಮಾಣದಲ್ಲಿ ಕುಸಿತ ಕಂಡುಬಂದಿದೆ.

**ಈ ಎಲ್ಲಾ ಮೂರು ತಾಲ್ಲೂಕುಗಳಲ್ಲಿ ಅಂದರೆ, ಶೋರಾಪುರ, ಶಹಾಪುರ ಮತ್ತು ಜೇವರ್ಗಿಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗೆ ಒಳಪಟ್ಟಿರುವುದರಿಂದ ಈ ಭಾಗದಲ್ಲಿ ಹೆಚ್ಚು ಕೃಷಿ ಕೂಲಿಕಾರರಿದ್ದಾರೆ. ಇವರಲ್ಲಿ ಬಹಳಷ್ಟು ಮಂದಿ ಪ.ಜಾತಿಗೆ ಸೇರಿದ್ದಾರೆ. ಹಾಗಾಗಿ ಪ.ಜಾತಿ ಜನಸಂಖ್ಯೆ ಈ ತಾಲ್ಲೂಕುಗಳಲ್ಲಿ ಹೆಚ್ಚಿರುವ ಸಾಧ್ಯತೆಯಿದ್ದು ಇವರೆಲ್ಲರೂ ಸಣ್ಣ ಭೂಹಿಡುವಳಿದಾರರು ಮತ್ತು ಕೃಷಿ ಕೂಲಿಗಳಾಗಿದ್ದಾರೆ.**

ಜಿಲ್ಲೆಯ ಪ.ಜಾತಿ ಜನಸಂಖ್ಯೆಯ ತಾಲ್ಲೂಕುವಾರು ಹಂಚಿಕೆಯು ಪ್ರಮಾಣದ ಅನುಪಾತವನ್ನು ಗಮನಿಸಿದಾಗ ಶೋರಾಪುರ ತಾಲ್ಲೂಕಿನ ಪಾಲು 1991 ರಿಂದ 2001ರ ಅವಧಿಯಲ್ಲಿ ಶೇ.27ರಿಂದ ಶೇ.39ಕ್ಕೆ ವೃದ್ಧಿಯಾಗಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಇದು ಕುತೂಹಲಕಾರಿ ಸಂಗತಿಯಾಗಿದೆ. ಉಳಿದ ತಾಲ್ಲೂಕುಗಳಲ್ಲಿ ಇದೇ ಅವಧಿಯಲ್ಲಿ ಈ ಸಮುದಾಯದ ಪ್ರಮಾಣವು ಕಡಿಮೆಯಾಗಿದೆ. ಇನ್ನುಳಿದ ಎರಡು ತಾಲ್ಲೂಕುಗಳಾದ ಶಹಾಪುರ ಮತ್ತು ಜೇವರ್ಗಿಗಳಲ್ಲಿ ಅವರ ಪ್ರಮಾಣವು ಅಧಿಕಗೊಂಡಿದೆ. ಈ ಎಲ್ಲಾ ಮೂರು ತಾಲ್ಲೂಕುಗಳಲ್ಲಿ ಅಂದರೆ, ಶೋರಾಪುರ, ಶಹಾಪುರ ಮತ್ತು ಜೇವರ್ಗಿಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿಗೆ ಒಳಪಟ್ಟಿರುವುದರಿಂದ ಈ ಭಾಗದಲ್ಲಿ ಹೆಚ್ಚು ಕೃಷಿ ಕೂಲಿಕಾರರಿದ್ದಾರೆ. ಇವರಲ್ಲಿ ಬಹಳಷ್ಟು ಮಂದಿ ಪ.ಜಾತಿಗೆ ಸೇರಿದ್ದಾರೆ. ಹಾಗಾಗಿ ಪ.ಜಾತಿ ಜನಸಂಖ್ಯೆ ಈ ತಾಲ್ಲೂಕುಗಳಲ್ಲಿ ಹೆಚ್ಚಿರುವ ಸಾಧ್ಯತೆಯಿದ್ದು ಇವರೆಲ್ಲರೂ ಸಣ್ಣ ಭೂಹಿಡುವಳಿದಾರರು ಮತ್ತು ಕೃಷಿ ಕೂಲಿಗಳಾಗಿದ್ದಾರೆ.

ಜಿಲ್ಲೆಯ ಪ.ಜಾತಿಯಲ್ಲಿ ಲಿಂಗಾನುಪಾತ ಆಶಾದಾಯಕವಾಗಿಲ್ಲ. ಜಿಲ್ಲೆಯಲ್ಲಿನ ಲಿಂಗ ಅನುಪಾತ 961 ಇದ್ದು ರಾಜ್ಯ ಸರಾಸರಿಗೆ (973) ಹೋಲಿಸಿದರೆ ಇಲ್ಲಿ ಕಡಿಮೆ ಇದೆ. ಅಲ್ಲದೆ ಜಿಲ್ಲೆಯ ಒಟ್ಟು ಜನಸಂಖ್ಯೆಯ ಲಿಂಗ ಅನುಪಾತಕ್ಕಿಂತ ಇದರ ಲಿಂಗ ಅನುಪಾತ (966) ಕಡಿಮೆ ಇದೆ. ಲಿಂಗಾನುಪಾತ ಕಡಿಮೆ ಇರುವ ತಾಲ್ಲೂಕುಗಳೆಂದರೆ ಅಫಜಲಪುರ (937),ಆಳಂದ, ಚಿಂಚೋಳಿ ಮತ್ತು ಗುಲಬರ್ಗಾ (930). ಇನ್ನುಳಿದ ಸೇಡಂ, ಶಹಾಪುರ್, ಶೋರಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಇದು ಉತ್ತಮವಾಗಿದೆ. ಮಹಿಳೆ ಮತ್ತು ಪುರುಷರ ನಡುವಿನ ಲಿಂಗ ಅನುಪಾತದಲ್ಲಿನ ಭಿನ್ನತೆಯು ಪ.ಪಂ. ಜನಸಂಖ್ಯೆಗಿಂತ ಪ.ಜಾತಿ ಜನಸಂಖ್ಯೆಯಲ್ಲಿ ಹೆಚ್ಚಾಗಿರುವುದು ಕಂಡುಬರುತ್ತದೆ.

ಪರಿಶಿಷ್ಟ ಪಂಗಡದ ಜನಸಂಖ್ಯೆಯು ಪ್ರಮಾಣ ಶೋರಾಪುರದಲ್ಲಿ ಶೇ.17.9 ರಷ್ಟಾದರೆ ಶಹಾಪುರದಲ್ಲಿ ಅದು ಶೇ.8.2ರಷ್ಟಿದೆ. ಯಾದಗಿರಿ ತಾಲ್ಲೂಕಿನಲ್ಲಿ ಅವರ ಪ್ರಮಾಣವು ಶೇ.7ರಷ್ಟಿದೆ. ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಪ.ಪಂ. ದ ಜನಸಂಖ್ಯೆಯ ಪ್ರಮಾಣವು 1991–2001ರಲ್ಲಿ ಸ್ವಲ್ಪ ಮಟ್ಟಿಗೆ ಏರಿಕೆಯಾಗಿದೆ. ಅದು 1991ರ ಶೇ.4ರಿಂದ 2001ರ ಶೇ.4.9 ಕ್ಕೆ ಏರಿಕೆಯಾಗಿದೆ: ಜನಗಣತಿಯ ಪ್ರಕಾರ 2001 ರಲ್ಲಿ ಜಿಲ್ಲೆಯ ಒಟ್ಟು ಪ.ಪಂ.ದ ಜನಸಂಖ್ಯೆ 1,54,195 ಆಗಿದೆ. 1991ರಲ್ಲಿ ಇವರ ಸಂಖ್ಯೆ 106935 ಆಗಿತ್ತು. ವಾರ್ಷಿಕ ಜನಸಂಖ್ಯಾ ಬೆಳವಣಿಗೆಯ ಪ್ರಮಾಣ ಶೇ. 4.4 ರಷ್ಟಾಗಿದೆ. ಇದು ಒಟ್ಟು ಜನಸಂಖ್ಯೆಯು ಬೆಳವಣಿಗೆ ಪ್ರಮಾಣಕ್ಕಿಂತ ಹೆಚ್ಚಾಗಿದೆ. ವಾಲ್ಮೀಕಿ ಸಮುದಾಯವನ್ನು ಪ.ಪಂ. ಪಟ್ಟಿಗೆ ಸೇರಿಸಿರುವುದರಿಂದ ಈ ರೀತಿಯ ಬೆಳವಣಿಗೆಯಾಗಿರಬಹುದು.

ಪರಿಶಿಷ್ಟ ಪಂಗಡದಲ್ಲಿ ಲಿಂಗಾನುಪಾತ ಸರಾಸರಿಗಿಂತ ಉತ್ತಮವಾಗಿದೆ. ಸರಾಸರಿ ಲಿಂಗಾನುಪಾತ ಪ.ಪಂ.ದ ಸಮುದಾಯದಲ್ಲಿ 979 ಇದ್ದು ಜಿಲ್ಲೆಯ ಸರಾಸರಿ(972)ಗಿಂತ ಹೆಚ್ಚಾಗಿದೆ. ಕೆಲವು ತಾಲ್ಲೂಕುಗಳಲ್ಲಿ ಅಂದರೆ ಸೇಡಂ (1045)ನಲ್ಲಿ ಅದು ಮಹಿಳಾ ಪರವಾದುದಾಗಿದೆ. ಹಾಗೆಯೇ ಶಹಾಪುರ ತಾಲ್ಲೂಕು ಕೂಡ ಜಿಲ್ಲಾ ಸರಾಸರಿಗೆ ಹತ್ತಿರವಿದ್ದು ಅದು 998 ಆಗಿದೆ. ಇದನ್ನು

ಗಮನಿಸಿದಾಗ ಪ.ಪಂ. ದ ಜನಸಂಖ್ಯೆ ಇರುವ ತಾಲ್ಲೂಕುಗಳಲ್ಲಿ ಲಿಂಗಾನುಪಾತ 980ಕ್ಕಿಂತ ಅಧಿಕವಾಗಿದೆ.

## ಶಿಕ್ಷಣ ಮತ್ತು ಸಾಕ್ಷರತೆ

ಜಿಲ್ಲೆಯಲ್ಲಿ ಪ.ಜಾತಿ ಜನಸಂಖ್ಯೆಯ ಸಾಕ್ಷರತಾ ಪ್ರಮಾಣ ಶೇ.39.05ರಷ್ಟು ಇದೆ. ರಾಜ್ಯದಲ್ಲೇ ಅತ್ಯಂತ ಕಡಿಮೆ ಸಾಕ್ಷರತೆಯನ್ನು ಹೊಂದಿರುವ ಎರಡು ಜಿಲ್ಲೆಗಳಾದ ರಾಯಚೂರು(38.76) ಮತ್ತು ಕೊಪ್ಪಳ (ಶೇ. 38.78) ಗಳಿಗಿಂತ ಇಲ್ಲಿ ಅದು ಸ್ವಲ್ಪ ಮಟ್ಟಿಗೆ ಉತ್ತಮವಾಗಿದೆ. ಆದರೆ ಗ್ರಾಮೀಣ ಪ್ರದೇಶದಲ್ಲಿ ಪ.ಪಂ ಸಾಕ್ಷರತಾ ಪ್ರಮಾಣ ತುಂಬಾ ಕಡಿಮೆಯಿದೆ.. ಅದು ಶೇ. 33.53. ಆಗಿದ್ದು, ರಾಯಚೂರು ಜಿಲ್ಲೆಯ ಪ.ಜಾತಿ ಗ್ರಾಮೀಣ ಸಾಕ್ಷರತಾ ಮಟ್ಟಕ್ಕೆ ತುಂಬಾ ಸಮೀಪವಾದುದ್ದಾಗಿದೆ. ಅಲ್ಲಿ ಅದು ಶೇ. 33.31ರಷ್ಟಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣ ಕೇವಲ ಶೇ. 27.ರಷ್ಟಿದೆ. ಲಿಂಗ ಸಂಬಂಧಿ ಸಾಕ್ಷರತಾ ಅಂತರ ಶೇ. 23.63ರಷ್ಟು ಜಿಲ್ಲೆಯಲ್ಲಿರುವುದು ಕಂಡುಬರುತ್ತದೆ. ನಗರ ಮತ್ತು ಗ್ರಾಮೀಣ ಪ್ರದೇಶದ ಅಂತರ ಶೇ. 26 ರಷ್ಟಿದೆ. ಹಾಗಾಗಿ ಮಹಿಳೆಯರ ಸಾಕ್ಷರತಾ ಬೆಳವಣಿಗೆಯ ಪ್ರಮಾಣ 1991–2001ರಲ್ಲಿ ಪುರುಷರ ಸಾಕ್ಷರತೆಯ ಬೆಳವಣಿಗೆ ಪ್ರಮಾಣಕ್ಕಿಂತ ಅಧಿಕವಾಗಿದೆ. ಇದು ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಮತ್ತು ಸರ್ವ ಶಿಕ್ಷಣ ಅಭಿಯಾನದ ಪ್ರಯತ್ನದಿಂದ ಉಂಟಾಗಿರುವ ಫಲದಿಂದಾಗಿದೆ.

ಜಿಲ್ಲೆಯ ಇನ್ನಿತರ ತಾಲ್ಲೂಕುಗಳಿಗೆ ಬಂದರೆ ಸಾಕ್ಷರತಾ ಪ್ರಮಾಣ ಶೇ. 25ಕ್ಕಿಂತ ಕಡಿಮೆ ಇರುವ ತಾಲ್ಲೂಕುಗಳೆಂದರೆ ಯಾದಗಿರಿ, ಶಹಾಪುರ ಮತ್ತು ಸೇಡಂ. ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. 15ಕ್ಕಿಂತಲೂ ಕಡಿಮೆ ಇರುವ ತಾಲ್ಲೂಕುಗಳೆಂದರೆ ಶಹಾಪುರ್ (ಶೇ. 13.3) ಮತ್ತು ಯಾದಗೀರ್ (ಶೇ. 14.1). ಮತ್ತು ಶೇ. 20ಕ್ಕಿಂತಲೂ ಕಡಿಮೆ ಸಾಕ್ಷರತೆ ಹೊಂದಿರುವ ತಾಲ್ಲೂಕುಗಳೆಂದರೆ ಜೇವರ್ಗಿ, ಶೋರಾಪುರ್ ಮತ್ತು ಚಿಂಚೋಳಿ ತಾಲ್ಲೂಕುಗಳಾಗಿವೆ. ಸರಾಸರಿ ಸಾಕ್ಷರತಾ ಪ್ರಮಾಣ ಅತಿ ಹೆಚ್ಚು ಇರುವ ತಾಲ್ಲೂಕು ಚಿತ್ತಾಪುರ.

ಶಾಲಾ ದಾಖಲಾತಿಯಲ್ಲಿ ಪರಿಶಿಷ್ಟ ಮಕ್ಕಳ ಸಂಖ್ಯೆ ಹೆಚ್ಚಳವಾಗಿರುವುದು ಮುಂಬರುವ ವರ್ಷಗಳಲ್ಲಿ ಪ.ಜಾ. ಸಮುದಾಯದ ಸಾಕ್ಷರತಾ ಪ್ರಮಾಣ ಉತ್ತಮಗೊಳ್ಳುವುದರ ಸೂಚಿಯಾಗಿದೆ. ಒಟ್ಟು ವಿದ್ಯಾರ್ಥಿಗಳ ಶಾಲಾ ದಾಖಲಾತಿಯ ಬೆಳವಣಿಗೆ ಪ್ರಮಾಣವು ಕಳೆದ 2003–04 ಮತ್ತು 2005–06ರಲ್ಲಿ ಕಡಿಮೆಯಾಗಿರುವುದು ಕಂಡುಬರುತ್ತದೆ. ಆದರೆ ಪ.ಜಾತಿ ವಿದ್ಯಾರ್ಥಿಗಳ ಶಾಲಾ ದಾಖಲಾತಿಯ ಒಟ್ಟು ಶೇಕಡಾವಾರು ಪ್ರಮಾಣದಲ್ಲಿ ಹೆಚ್ಚಳವಾಗಿದೆ. ಪ.ಜಾ. ವಿದ್ಯಾರ್ಥಿಗಳ ಶಾಲಾ ದಾಖಲಾತಿಯಲ್ಲಿ 2001–02 ಮತ್ತು 2005–06ರಲ್ಲಿ ಏರಿಕೆಯಾದ ಪ್ರಮಾಣವೆಂದರೆ ಶೇ. 26ರಿಂದ ಶೇ. 28.9. ಪ.ಜಾತಿ ಮಕ್ಕಳ ಶಿಕ್ಷಣಕ್ಕೆ ಪೂರಕವಾದ ಸಹಕಾರ ಸಿಗುತ್ತಿರುವುದು ಇದಕ್ಕೆ ಮೂಲ ಕಾರಣವಾಗಿದೆ. ಇದು ಅವರ ಭವಿಷ್ಯದ ದಿನಗಳಲ್ಲಿ ಆದಾಯ ಗಳಿಕೆಗೆ ಸಹಕಾರಿಯಾಗುತ್ತದೆ. ಇದೇ ಅವಧಿಯಲ್ಲಿ ಮಹಿಳೆಯರ ಸಾಕ್ಷರತಾ ಪ್ರಮಾಣ ಹೆಚ್ಚಾಗಿದ್ದು ಅದು ಶೇ. 25ರಿಂದ ಶೇ. 28.3ರಷ್ಟಾಗಿದೆ. ಸರ್ವ ಶಿಕ್ಷಾ ಅಭಿಯಾನದ ಪ್ರೋತ್ಸಾಹ ಮತ್ತು ಬೆಂಬಲವು ಇದಕ್ಕೆ ಪ್ರಮುಖ ಕಾರಣವಾಗಿದೆ. ಪರಿಶಿಷ್ಟ ಜಾತಿಯಲ್ಲಿ ಮಕ್ಕಳ ಶಾಲಾ ದಾಖಲಾತಿ ಅವರ ಜನಸಂಖ್ಯಾ ಪಾಲಿಗಿಂತ ಅಧಿಕವಾಗಿರುವುದು ಕಂಡು ಬರುತ್ತದೆ. ಇದು ಬಹಳ ಪ್ರಮುಖವಾದ ಸಂಗತಿಯಾಗಿದೆ. ದಾಖಲಾತಿಗೆ ಸಂಬಂಧಿಸಿದಂತೆ ಎಷ್ಟೇ ಸಾಧಿಸಿದರೂ ಸಾಕ್ಷರತಾ ಮಟ್ಟ ಮಾತ್ರ ತುಂಬಾ ಕೆಳಮಟ್ಟದಲ್ಲಿದೆ.

ಪ.ಜಾ.ಯ ಆಯ್ದ ಕುಟುಂಬಗಳ ಸಮೀಕ್ಷೆಯಲ್ಲಿ ದೊರೆತಿರುವ ಮಾಹಿತಿಯು ಈ ರೀತಿಯ ತೀರ್ಮಾನಗಳಿಗೆ ಕಾರಣವಾಗಿದೆ. ಈ ಸಮೀಕ್ಷಾ ಕಾರ್ಯವನ್ನು ಕರ್ನಾಟಕ ಸರಕಾರದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯವು ಜಿಲ್ಲಾ ಮಾನವ ಅಭಿವೃದ್ಧಿ ವರದಿ ತಯಾರು ಮಾಡಲು ಆಯ್ಕೆ ಮಾಡಿದ ನಾಲ್ಕು ಜಿಲ್ಲೆಗಳಾದ ಬಿಜಾಪುರ, ಗುಲಬರ್ಗಾ, ಮೈಸೂರು ಮತ್ತು ಉಡುಪಿಗಳಲ್ಲಿ 2005–06ರಲ್ಲಿ ನಡೆಸಿತು.

ಈ ಆಯ್ದ ನಮೂನೆಯ ಸಮೀಕ್ಷೆ ಪ್ರಕಾರ ಗುಲಬರ್ಗಾ ಜಿಲ್ಲೆಯ ಪ.ಜಾ.ಯ

**ಶಾಲಾ ದಾಖಲಾತಿಯಲ್ಲಿ ಪರಿಶಿಷ್ಟ ಮಕ್ಕಳ ಸಂಖ್ಯೆ ಹೆಚ್ಚಳವಾಗಿರುವುದು ಮುಂಬರುವ ವರ್ಷಗಳಲ್ಲಿ ಪ.ಜಾ. ಸಮುದಾಯದ ಸಾಕ್ಷರತಾ ಪ್ರಮಾಣ ಉತ್ತಮಗೊಳ್ಳುವುದರ ಸೂಚಿಯಾಗಿದೆ. ಒಟ್ಟು ವಿದ್ಯಾರ್ಥಿಗಳ ಶಾಲಾ ದಾಖಲಾತಿಯ ಬೆಳವಣಿಗೆ ಪ್ರಮಾಣವು ಕಳೆದ 2003–04 ಮತ್ತು 2005–06ರಲ್ಲಿ ಕಡಿಮೆಯಾಗಿರುವುದು ಕಂಡುಬರುತ್ತದೆ. ಆದರೆ ಪ.ಜಾತಿ ವಿದ್ಯಾರ್ಥಿಗಳ ಶಾಲಾ ದಾಖಲಾತಿಯ ಒಟ್ಟು ಶೇಕಡಾವಾರು ಪ್ರಮಾಣದಲ್ಲಿ ಹೆಚ್ಚಳವಾಗಿದೆ.**

**ದಾಖಲಾತಿಯು ಕೆಳಮಟ್ಟದಲ್ಲಿರುವ ಈ ಸಮುದಾಯಗಳಲ್ಲಿ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯ ಕೆಳಮಟ್ಟದಲ್ಲಿದೆ. ಇದನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. 2004ರ ಮಕ್ಕಳ ಗಣತಿ ಆಧಾರದ ಮೇಲೆ ಒಟ್ಟಾರೆ ಪ್ರಾಥಮಿಕ ಶಾಲಾ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವು ಶೇ. 90.77 ರಷ್ಟಿರುವುದು ತಿಳಿದು ಬಂದಿದೆ.**

2005–06ರಲ್ಲಿನ ಸರಾಸರಿ ಸಾಕ್ಷರತಾ ಪ್ರಮಾಣವು ಶೇ. 46.06.ರಷ್ಟಿರುವುದು ತಿಳಿದು ಬರುತ್ತದೆ. ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ. 56.06 ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ. 36.6. ಯಾದಗಿರಿ ತಾಲ್ಲೂಕಿನಲ್ಲಿ ಹೆಚ್ಚಿನ ಸಾಕ್ಷರತೆಯೇನು ಕಂಡುಬರುವುದಿಲ್ಲ. ಇಲ್ಲಿಯ ಆಯ್ದ ಮಾದರಿಯ ಸಮೀಕ್ಷೆಯ ಪ್ರಕಾರ ಸಾಕ್ಷರತೆ ಶೇ.29.8ರಷ್ಟಿದೆ. ಇಲ್ಲಿಯ ಮಹಿಳಾ ಸಾಕ್ಷರತೆ ಶೇ. 22.6 ರಷ್ಟು ಇದ್ದು, ಪುರುಷರ ಸಾಕ್ಷರತೆ ಶೇ. 37.14ರಷ್ಟಿದೆ. (ಕರ್ನಾಟಕದ ಆಯ್ದ ಜಿಲ್ಲೆಗಳ ಪ.ಜಾತಿ ಮತ್ತು ಪ.ಪಂ. ಗಳ ಸಮೀಕ್ಷೆ ಡಿ.ಈ.ಎಸ್ : 2005–06). ಗ್ರಾಮೀಣ ಪ್ರದೇಶದ ಸಾಕ್ಷರತಾ ಪ್ರಮಾಣ ಶೇ 40.8 ಮತ್ತು ನಗರ ಪ್ರದೇಶದ ಸಾಕ್ಷರತಾ ಪ್ರಮಾಣ ಶೇ. 67.5 ಇದೆ. ಗ್ರಾಮೀಣ ಮತ್ತು ನಗರ ಪ್ರದೇಶದ ಅಂತರವನ್ನು ಸಮೀಕ್ಷೆಯು ತೋರಿಸಿ ಕೊಟ್ಟಿದೆ.

ಪ.ಪಂ. ಜನಸಂಖ್ಯೆಯ ಸಾಕ್ಷರತಾ ಪ್ರಮಾಣವನ್ನು ತುಲನೆ ಮಾಡಿ ನೋಡಿದರೆ ಒಟ್ಟು ಜನಸಂಖ್ಯಾ ಸಾಕ್ಷರತಾ ಮಟ್ಟಕ್ಕಿಂತ ಅದು ತುಂಬಾ ಕಡಿಮೆಯಿರುವುದು ಕಂಡು ಬರುತ್ತದೆ. ಇದು ಶೇ. 32 ರಷ್ಟಿದೆ.. ಇದರಲ್ಲಿ ಮಹಿಳಾ ಸಾಕ್ಷರತೆ ಕೇವಲ ಶೇ. 20.7 ರಷ್ಟಿದೆ. ಅಲ್ಲಿ 1991ರಲ್ಲಿ ಮಹಿಳಾ ಸಾಕ್ಷರತೆ ಶೇ.9.4 ಇದ್ದದ್ದು 2001ರ ವೇಳೆಗೆ ಅದು ಶೇ. 20.7ಕ್ಕೆ ಏರಿಕೆಯಾಗಿದೆ. ಇದು ಶೋರಾಪುರದಲ್ಲಿ ಶೇ. 25 ಮತ್ತು ಶಹಾಪುರ ತಾಲ್ಲೂಕಿನಲ್ಲಿ ಅದು ಶೇ. 19.7 ಇದ್ದು, ಇವು ಅತೀ ಹೆಚ್ಚು ಪ.ಪಂ. ದ ಜನಸಂಖ್ಯೆ ಇರುವ ತಾಲ್ಲೂಕುಗಳಾಗಿವೆ.

ಪ.ಪಂ.ದ ಸಾಕ್ಷರತಾ ಪ್ರಮಾಣದಲ್ಲಿ ಏರಿಕೆಯ ಸೂಚನೆ ಕಂಡುಬರುತ್ತಿದೆ. ಈ ಜನಸಮುದಾಯದ ಸಾಕ್ಷರತಾ ಪ್ರಮಾಣವು 2005–06ರಲ್ಲಿ ಸ್ಯಾಂಪಲ್ ಸರ್ವೆ ಪ್ರಕಾರ ಶೇ. 43ರಷ್ಟಿದೆ. ಇದು ಪ.ಜಾತಿ ಸಾಕ್ಷರತೆಗೆ ತುಂಬಾ ಹತ್ತಿರವಾದುದಾಗಿದೆ. ಮಹಿಳಾ ಸಾಕ್ಷರತಾ ಪ್ರಮಾಣ ಶೇ.32.8. ಪ.ಪಂ. ಜನಸಂಖ್ಯೆಯಲ್ಲೂ ನಗರ ಮತ್ತು ಗ್ರಾಮೀಣ ಸಾಕ್ಷರತಾ ಪ್ರಮಾಣದಲ್ಲಿ ತುಂಬಾ ಅಂತರವಿರುವುದು ಕಂಡುಬರುತ್ತದೆ,

ತಾಲ್ಲೂಕಿನಾದ್ಯಂತ ಪ.ಜಾತಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣ ಪ್ರಾಥಮಿಕ ಶಾಲೆಗಳಲ್ಲಿ ಏರಿಳಿತವಾಗುತ್ತಿರುವುದು ಕಂಡುಬರುತ್ತದೆ. ಕೆಲವು ತಾಲ್ಲೂಕುಗಳಲ್ಲಿ ಉತ್ತಮ ದಾಖಲಾತಿ ಇರುವುದು ಕಂಡು ಬರುತ್ತದೆ. ಪ.ಜಾ. ಜನರು ಕೇಂದ್ರೀಕರಣಗೊಂಡಿರುವ ಅಫ಼ಜಲಪುರ, ಅಳಂದ್, ಚಿಂಚೋಳಿ, ಚಿತ್ತಾಪುರ, ಶಹಾಪುರ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಇದು ಋಣಾತ್ಮಕವಾಗಿದೆ. ಇವುಗಳಲ್ಲಿ ಅಫ಼ಜಲಪುರ ಮತ್ತು ಶಹಾಪುರ ತಾಲ್ಲೂಕುಗಳಿಗೆ ವಿಶೇಷ ಗಮನವನ್ನು ನೀಡುವ ಅವಶ್ಯವಿದೆ.

ಜಿಲ್ಲೆಯ ಒಟ್ಟಾರೆ ದಾಖಲಾತಿ ಪ್ರಮಾಣಕ್ಕೂ (ಜಿ.ಇ.ಆರ್.) ಪ.ಜಾತಿ ವಿದ್ಯಾರ್ಥಿಗಳ ಒಟ್ಟು ದಾಖಲಾತಿ ಪ್ರಮಾಣಕ್ಕೂ ಹೋಲಿಸಿದರೆ ಅಷ್ಟು ವ್ಯತ್ಯಾಸವೇನೂ ಕಂಡುಬರುವುದಿಲ್ಲ.

ಪ.ಪಂ.ದ ವಿದ್ಯಾರ್ಥಿಗಳ ಮತ್ತು ವಿದ್ಯಾರ್ಥಿನಿಯರ ಹಾಗೂ ಒಟ್ಟು ಮಕ್ಕಳ ಒಟ್ಟು ದಾಖಲಾತಿ ಪ್ರಮಾಣ ಕ್ರಮವಾಗಿ (ಜಿ.ಇ.ಆರ್.) ಶೇ. 94.6, ಶೇ.96.4 ಮತ್ತು ಶೇ 95.5ರಷ್ಟಿದ್ದು ಇದು ಸಾಮಾನ್ಯ ಮತ್ತು ಪ.ಜಾತಿ ವಿದ್ಯಾರ್ಥಿಗಳ ದಾಖಲಾತಿ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ದಾಖಲಾತಿಯು ಕೆಳಮಟ್ಟದಲ್ಲಿರುವ ಈ ಸಮುದಾಯಗಳಲ್ಲಿ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯ ಕೆಳಮಟ್ಟದಲ್ಲಿದೆ. ಇದನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. 2004ರ ಮಕ್ಕಳ ಗಣತಿ ಆಧಾರದ ಮೇಲೆ ಒಟ್ಟಾರೆ ಪ್ರಾಥಮಿಕ ಶಾಲಾ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವು ಶೇ. 90.77 ರಷ್ಟಿರುವುದು ತಿಳಿದು ಬಂದಿದೆ. ಅದು ಬಾಲಕರಲ್ಲಿ ಶೇ.91.43ರಷ್ಟಿದ್ದು ಬಾಲಕಿಯರಲ್ಲಿ ಅದು ಶೇ.90ರಷ್ಟಿದೆ. ಪ.ಜಾತಿಗೆ ಸೇರಿದ ಮಕ್ಕಳ ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯದ ಪ್ರಮಾಣ ಶೇ.88.2 ಆಗಿದೆ. ಇದರಲ್ಲಿ ಬಾಲಕರದ್ದು ಶೇ.89.7 ಮತ್ತು ಬಾಲಕಿಯರದ್ದು ಶೇ.86.9ರಷ್ಟಾಗಿದೆ.

ಈ ಪ್ರಮಾಣವು ಸಾಮಾನ್ಯ ವಿಧ್ಯಾರ್ಥಿಗಳ ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯಕ್ಕಿಂತ ಕಡಿಮೆಯಾಗಿದೆ. ಇದರಿಂದ ಪ್ರತಿ ವರ್ಷ ಶೇ.12ರಷ್ಟು ವಿಧ್ಯಾರ್ಥಿಗಳು ಬೇರೆ ಬೇರೆ

ಕೋಷ್ಟಕ 8.1

## ಒಟ್ಟು ದಾಖಲಾತಿ ಪ್ರಮಾಣ – ಒಟ್ಟು ಜನಸಂಖ್ಯೆ,ಪ.ಜಾ. ಮತ್ತು ಪ.ಪಂ.

| ಪ್ರವರ್ಗ | ಒಟ್ಟು | ಪ.ಜಾ. | ಪ.ಪಂ. |
|---|---|---|---|
| ಒಟ್ಟು | 107.58 | 106.55 | 95.52 |
| ಬಾಲಕರು | 107.7 | 106.8 | 94.64 |
| ಬಾಲಕಿಯರು | 107.5 | 106.3 | 96.40 |

ಮೂಲ: ಈ.ಎವ್.ಐ.ಎಸ್.–2004–05.

ಹಂತಗಳಲ್ಲಿ ಶಾಲೆಯನ್ನು ಬಿಡುವುದು ಕಂಡುಬರುತ್ತದೆ. ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವು ಪ.ಪಂ. ದಲ್ಲಿ ಕಡಿಮೆ ಇದ್ದು ಅದು ಶೇ.82.8ರಷ್ಟಿದೆ. ಇದರಲ್ಲಿ ಬಾಲಕರದ್ದು ಶೇ.84.5ರಷ್ಟಿದ್ದರೆ ಬಾಲಕಿಯರದ್ದು ಶೇ. 81ರಷ್ಟಿದೆ. ಈ ಸಂಗತಿಗಳ ಪ್ರಕಾರ ಈ ಹಿಂದುಳಿದ ಸಮುದಾಯಗಳ ಶಾಲೆಯಲ್ಲಿ ಉಳಿದುಕೊಳ್ಳುವ ಮಕ್ಕಳ ಸಾಮರ್ಥ್ಯವು ಕಡಿಮೆಯಿರುವುದರಿಂದ ಈ ಸಮುದಾಯಗಳು ಅಪಾರ ನಷ್ಟವನ್ನು ಅನುಭವಿಸುವಂತಾಗಿದೆ.

ಪ.ಜಾತಿ ಜನಾಂಗದಲ್ಲಿ ಶಾಲೆಯಲ್ಲಿ ಉಳಿದುಕೊಳ್ಳುವ ಮಕ್ಕಳ ಸಾಮರ್ಥ್ಯವು ಅತ್ಯಂತ ಕಡಿಮೆ ಇರುವ ತಾಲ್ಲೂಕು ಶೋರಾಪುರವಾಗಿದೆ. ಇದಾದ ನಂತರ ಕ್ರಮವಾಗಿ ಜೇವರ್ಗಿ, ಶಹಾಪುರ ಮತ್ತು ಯಾದಗಿರಿಗಳು ಬರುತ್ತವೆ. ಹೆಣ್ಣು ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವು ಜೇವರ್ಗಿ ಮತ್ತು ಶಹಾಪುರಗಳಲ್ಲಿ ಕ್ರಮವಾಗಿ ಶೇ.77 ಮತ್ತು 78ರಷ್ಟು ಇದೆ. ಈ ಎರಡು ತಾಲ್ಲೂಕುಗಳ ಜೊತೆಗೆ ಶೋರಾಪುರ ತಾಲೂಕು ಕೃಷ್ಣಾ ಮೇಲ್ದಂಡೆ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರದೇಶಕ್ಕೆ ಸೇರಿವೆ. ಇಲ್ಲಿ ಕೂಲಿಕಾರರಿಗೆ ಹೆಚ್ಚು ಬೇಡಿಕೆಯಿರುವುದರಿಂದ ಅಲ್ಲಿ ಬಾಲ ಕಾರ್ಮಿಕರ ಸಂಖ್ಯೆ ಅತಿಯಾಗಿದೆ. ಈ ತಾಲ್ಲೂಕುಗಳಲ್ಲಿ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವು ಕೆಳಮಟ್ಟದಲ್ಲಿದ್ದು ಹೆಚ್ಚು ಮಕ್ಕಳನ್ನು ಬಾಲ ಕಾರ್ಮಿಕರ ಗುಂಪಿಗೆ ಕೊಡುಗೆಯಾಗಿ ನೀಡಲಾಗುತ್ತಿದೆ. ಪ.ಪಂ.ದಲ್ಲಿ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವು ಈ ತಾಲ್ಲೂಕಿನಲ್ಲಿ ಕೂಡ ಕಡಿಮೆಯಿದೆ. ಜೊತೆಗೆ ಯಾದಗಿರಿ ತಾಲ್ಲೂಕಿನಲ್ಲಿಯೂ ಸ್ಥಿತಿ ಇದೇ ರೀತಿ ಇದೆ. ಈ ಪ್ರದೇಶದಲ್ಲಿ ಮಕ್ಕಳು ಜಾನುವಾರುಗಳನ್ನು ಕಾಯುವ ಇಲ್ಲವೇ ತೋಟಗಳಲ್ಲಿ ಕೆಲಸ ಮಾಡುವ ಕಾಯಕದವರಾಗಿದ್ದಾರೆ.

**ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವು ಈ ತಾಲ್ಲೂಕಿನಲ್ಲಿ ಕೂಡ ಕಡಿಮೆಯಿದೆ. ಜೊತೆಗೆ ಯಾದಗಿರಿ ತಾಲ್ಲೂಕಿನಲ್ಲಿಯೂ ಸ್ಥಿತಿ ಇದೇ ರೀತಿ ಇದೆ. ಈ ಪ್ರದೇಶದಲ್ಲಿ ಮಕ್ಕಳು ಜಾನುವಾರುಗಳನ್ನು ಕಾಯುವ ಇಲ್ಲವೇ ತೋಟಗಳಲ್ಲಿ ಕೆಲಸ ಮಾಡುವ ಕಾಯಕದವರಾಗಿದ್ದಾರೆ.**

**ಒಟ್ಟು ದಾಖಲಾತಿ ಅನುಪಾತ – ಸಾಮಾನ್ಯ ಪ.ಜಾ. ಮತ್ತು ಪ.ಪಂ.**



ಜಮೀನುದಾರರು ತಿಂಗಳ ಸಂಭಾವನೆ ಇಲ್ಲವೇ ವಾರ್ಷಿಕ ಸಂಭಾವನೆಯ ಆಧಾರದ ಮೇಲೆ ಮಕ್ಕಳನ್ನು ಜಾನುವಾರು ಕಾಯಲು ನೇಮಿಸಿಕೊಳ್ಳುತ್ತಾರೆ. ಕೃಷಿ ಚಟುವಟಿಕೆಗಳ ಕಾಲದಲ್ಲಿ ಮಕ್ಕಳ ಶಾಲಾ ಹಾಜರಾತಿ ತುಂಬಾ ಕಡಿಮೆ ಇರುತ್ತದೆ. (ಆಧಾರ: ಛಾಯಾ ದೇಗಾಂವಕರ್ : ಸರ್ವೆ ಆಫ್ ಹಡ್ಸೂರ್ ವಿಲೇಜ್ ಇನ್ ಶೋರಾಪುರ್ ತಾಲ್ಲೂಕು : ಕೆ ಆರ್ ಎಲ್ ಎಲ್ ಡಿ, ಸೆಂಟರ್ ಫಾರ್ ಡೆವೆಲಪ್‌ಮೆಂಟ್ ಸ್ಟಡೀಸ್, ತ್ರಿವೆಂಡ್ರಮ್–2001)

ಈ ಆಧಾರದಿಂದ ಜಿಲ್ಲೆಯಲ್ಲಿ ಪ.ಜಾತಿ ಮತ್ತು ಪ.ಪಂ.ದ ಜನಸಂಖ್ಯೆಯ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವುದು ಪ್ರಮುಖವಾದ ಆದ್ಯತಾ ಸಂಗತಿಯಾಗಬೇಕು. ಶಾಲಾ ದಾಖಲಾತಿ ಮತ್ತು ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯವನ್ನು ಉತ್ತಮಗೊಳಿಸಲು ಹೆಚ್ಚು ಶ್ರಮ ವಹಿಸಬೇಕಾದ ಅಗತ್ಯವಿದೆ. ಹೆಣ್ಣು ಮಕ್ಕಳಿಗಾಗಿ ವಿಶೇಷ ಗಮನ ನೀಡಬೇಕಾದ ಅಗತ್ಯವಿದೆ. ಹೀಗೆ ಹೆಚ್ಚು ಗಮನ ನೀಡಬೇಕಾದ ತಾಲ್ಲೂಕುಗಳೆಂದರೆ ಅಫಜಲಪುರ, ಜೇವರ್ಗಿ, ಶಹಾಪುರ, ಆಳಂದ ಮತ್ತು ಶೋರಾಪುರ. ಇಲ್ಲಿ ಮಹಿಳಾ ಸಾಕ್ಷರತೆ ಅತೀ ಕಡಿಮೆ ಇದೆ. ಪ.ಪಂಗಡಕ್ಕೆ ಬಂದಾಗ ಶಾಲಾ ದಾಖಲಾತಿಯಲ್ಲಿಯ ಹೆಚ್ಚಳ ಶೋರಾಪುರವನ್ನು ಹೊರತುಪಡಿಸಿ ಉಳಿದ ಎಲ್ಲಾ ತಾಲ್ಲೂಕುಗಳಲ್ಲಿ ನಿಧಾನಗತಿಯಲ್ಲಿ ಸಾಗುತ್ತಿದೆ. ಶೋರಾಪುರ ತಾಲ್ಲೂಕಿನಲ್ಲಿ ಇದು ಇತ್ತೀಚೆಗೆ ಹೆಚ್ಚಿರುವುದು ಖಚಿತವಾಗಿದೆ. ಇದಕ್ಕೆ ವಿಶೇಷ ಪ್ರಯತ್ನವೇನೂ ನಡೆದಿಲ್ಲ.. ಇದಕ್ಕೆ ಕಾರಣ ವಾಲ್ಮೀಕಿ ಎಂಬ ಉಪಜಾತಿಯನ್ನು ಪ.ಪಂಗಡದ ಪಟ್ಟಿಗೆ ಸೇರಿಸಿರುವುದೇ ಆಗಿದೆ. ಇವರು ಈ ಹಿಂದೆ ಇತರೆ ಹಿಂದುಳಿದ ವರ್ಗಗಳಲ್ಲಿ ಸೇರಿದ್ದರು. ಈ ಜನಾಂಗವು ಶೋರಾಪುರ ತಾಲ್ಲೂಕಿನಲ್ಲಿ ಅತೀ ಹೆಚ್ಚು ಇದ್ದಾರೆ. ಇದರಿಂದ ಇದ್ದಕ್ಕಿದ್ದಂತೆ ಈ ತಾಲ್ಲೂಕಿನಲ್ಲಿ ಶಾಲಾ ದಾಖಲಾತಿಯಲ್ಲಿ ಹೆಚ್ಚಳ ಕಂಡುಬಂದಿದೆ. ಶಾಲಾ ದಾಖಲಾತಿಯು 2001–02ರಲ್ಲಿ 1171 ಇದ್ದುದು 2005–06ರಷ್ಟಕ್ಕೆ 11384ರಷ್ಟಕ್ಕೆ ಏರಿಕೆಯಾಗಿದೆ.

ಕೋಷ್ಟಕ 8.2

## ಪ್ರಾಥಮಿಕ ಹಂತದಲ್ಲಿ ಮಕ್ಕಳು ಶಾಲೆಯಲ್ಲಿ ಉಳಿದುಕೊಳ್ಳುವ ಸಾಮರ್ಥ್ಯ

| ತಾಲ್ಲೂಕು | ಒಟ್ಟು | | | ಪರಿಶಿಷ್ಟ ಜಾತಿ | | | ಪರಿಶಿಷ್ಟ ಪಂಗಡ | | |
|---|---|---|---|---|---|---|---|---|---|
| | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು | ಒಟ್ಟು | ಪುರುಷರು | ಮಹಿಳೆಯರು |
| ಅಫಜಲಪುರ | 91.06 | 89.60 | 90.40 | 89.70 | 85.90 | 87.80 | 95.00 | 100.00 | 97.50 |
| ಆಳಂದ್ | 94.70 | 93.80 | 94.40 | 91.70 | 89.80 | 90.70 | 86.50 | 87.80 | 87.10 |
| ಚಿಂಚೋಳಿ | 91.50 | 91.00 | 91.30 | 90.20 | 87.90 | 89.00 | 94.20 | 95.20 | 94.60 |
| ಚಿತ್ತಾಪುರ | 93.10 | 92.00 | 92.50 | 91.80 | 90.40 | 91.00 | 94.50 | 91.30 | 92.90 |
| ಗುಲಬರ್ಗಾ | 96.00 | 95.40 | 95.70 | 94.20 | 92.00 | 93.10 | 94.30 | 96.00 | 95.10 |
| ಜೇವರ್ಗಿ | 86.90 | 84.50 | 85.80 | 83.30 | 78.30 | 80.80 | 84.00 | 79.30 | 81.70 |
| ಸೇಡಂ | 92.20 | 91.00 | 91.60 | 88.80 | 86.50 | 87.70 | 91.80 | 89.70 | 90.80 |
| ಶಹಾಪುರ | 88.80 | 85.90 | 87.50 | 87.70 | 82.40 | 85.00 | 80.00 | 74.20 | 77.10 |
| ಶೋರಾಪುರ | 85.70 | 83.10 | 84.50 | 83.20 | 77.10 | 80.20 | 82.50 | 79.50 | 81.00 |
| ಯಾದಗೀರ್ | 89.10 | 86.00 | 87.70 | 88.40 | 85.20 | 86.80 | 86.10 | 79.40 | 82.80 |
| **ಗುಲಬರ್ಗಾ ಜಿಲ್ಲೆ** | **91.40** | **90.00** | **90.70** | **89.70** | **86.80** | **88.30** | **84.50** | **81.40** | **82.80** |

ಮೂಲ: ಈಎಮ್‌ಐಎಸ್–2004–05. ಗುಲಬರ್ಗಾ

ಚೌಕಟ್ಟು 8.1

| ಪರಿಶಿಷ್ಟ ಪಂಗಡದ ಹೆಣ್ಣು ಮಕ್ಕಳ ಸಾಂಸ್ಕೃತಿಕ ಆಚರಣೆಗಳು |
| --- |
| ಲಂಬಾಣಿ ಸಮುದಾಯದ ಹೆಂಗಸರು ದೈಹಿಕವಾಗಿ ಬಲಿಷ್ಟರಿದ್ದು ಶ್ರಮದಾಯಕ ಕೆಲಸಗಳನ್ನು ನಿರ್ವಹಿಸುತ್ತಾ ಶೋಷಣೆಗೆ ಒಳಗಾಗಿದ್ದಾರೆ. ಈ ಸಮುದಾಯದ ಪುರುಷರು ಕುಡಿತದ ದುಶ್ಚಟಕ್ಕೀಡಾಗಿ ಆದಾಯದ ಬಹುಪಾಲನ್ನು ಕುಡಿತಕ್ಕೆ ವ್ಯಯ ಮಾಡುತ್ತಾರೆ. ಇದರಿಂದ ಮನೆಯ ನಿರ್ವಹಣೆ ಸಂಪೂರ್ಣವಾಗಿ ಹೆಣ್ಣು ಮಕ್ಕಳ ಮೇಲೆ ನಿಂತಿದೆ. ಹೆಣ್ಣುಮಕ್ಕಳು ಕಟ್ಟಡದ ಕೆಲಸಗಳಲ್ಲಿ ಇಲ್ಲವೇ ಅರಣ್ಯ ಉತ್ಪನ್ನಗಳ ಸಂಗ್ರಹ ಇಲ್ಲವೇ ತೋಟಗಳ ಕೆಲಸದಲ್ಲಿ ನಿರತರಾಗಿರುತ್ತಾರೆ. ಅವರನ್ನು 'ಯಾಡಿ' ಮತ್ತು 'ಬಾಯಿ' ಎಂಬ ಸಾಮಾನ್ಯ ಪದ ಬಳಸಿ ಕರೆಯುವ ವಾಡಿಕೆ ಇದೆ.<br><br>ಈ ಸಮುದಾಯದ ಸಂಸ್ಕೃತಿಯು ಇತರೆ ಸಮುದಾಯದ ಸಂಸ್ಕೃತಿಗಿಂತ ಭಿನ್ನವಾಗಿದೆ. ಈ ಸಮುದಾಯದ ಹೆಣ್ಣುಮಕ್ಕಳು ವಿಶೇಷ ಉಡುಗೆ ತೊಟ್ಟು ಅಂದಾಚರಣೆಗಳನ್ನು ಆಚರಿಸುತ್ತಾ ಸಂಪ್ರದಾಯಸ್ಥರಾಗಿದ್ದಾರೆ. ಜೊತೆಗೆ ಮಹಿಳೆಯರು ಅವರ ಮುಖ, ಹಣೆ ಮತ್ತು ಕೈಗಳ ಮೇಲೆ ವಿಶೇಷ ಚಿನ್ಹೆಗಳನ್ನು ಬಿಡಿಸಿಕೊಳ್ಳುವುದರ ಮೂಲಕ ಅವರ ವಿಶೇಷತೆಯನ್ನು ಪ್ರದರ್ಶಿಸುತ್ತಾರೆ. ಈ ರೀತಿಯ ಚಿನ್ಹೆಗಳನ್ನು ಹೊಂದಿರುವ ಮಹಿಳೆಯರ ಕೈಯಲ್ಲಿ ಅಡಿಗೆ ತಯಾರಿಸಿದರೆ ಊಟ ಕೆಡುವುದಿಲ್ಲ ಎಂಬ ನಂಬಿಕೆ ಇದೆ. ಇವರಲ್ಲಿ ವಿಧವಾ ವಿವಾಹಕ್ಕೆ ಅವಕಾಶವಿದೆ. ಆದರೆ ಅನಕ್ಷರತೆ ಅತಿಯಾಗಿರುವುದರಿಂದ ಇನ್ನಿತರ ಸಮುದಾಯಗಳಿಂದ ಬೇರ್ಪಟ್ಟು ನಾಗರೀಕತೆಯಿಂದ ದೂರ ಉಳಿದು ಕತ್ತಲಲ್ಲಿದ್ದಾರೆ. ಇವರ ಮಕ್ಕಳೂ ಕೂಡ ಇತರೆ ಸಮುದಾಯದಿಂದ ಬೇರ್ಪಟ್ಟು ಭಾಷೆಯ ಕಲಿಕೆ ಅಥವಾ ಬೋಧನೆಯಿಂದ ದೂರ ಉಳಿದು ತಮ್ಮದೇ ಆದ ಭಾಷೆಯನ್ನು ತಮ್ಮ ಮನೆಗಳಲ್ಲಿ ಮಾತನಾಡುತ್ತಾರೆ.<br><br>ಇತ್ತೀಚಿನ ಸರಕಾರದ ಅರಣ್ಯ ನೀತಿಯಿಂದ ಕಾಡಿನ ಉತ್ಪನ್ನಗಳ ಸಂಗ್ರಹಣೆ ಮಾಡದಂತಾಗಿ ಅನೇಕ ಕುಟುಂಬಗಳು ತಮ್ಮ ಜೀವನೋಪಾಯದ ಸಂಕಷ್ಟಕ್ಕೆ ಸಿಲುಕಿವೆ. ವಿವಾಹದಲ್ಲಿ ವರದಕ್ಷಿಣೆ ಪದ್ಧತಿ ಈ ಸಮುದಾಯದಲ್ಲಿ ಅತಿಯಾಗಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ಹೆಣ್ಣು ಮಕ್ಕಳ ಮಾರಾಟವೂ ಕೂಡ ನಡೆದಿದೆ. (ಮೂಲ: ಆರ್ಟ್ ಅಂಡ್ ಕಲ್ಚರ್ ಆಫ್ ಲಂಬಾಣಿ ಕಮ್ಯುನಿಟಿ. ಎಂ ಎ ಡೆಸರ್ಟೇಶನ್, ಡಿಪಾರ್ಟ್‌ಮೆಂಟ್ ಆಫ್ ವಿಮೆನ್ಸ್ ಸ್ಟಡೀಸ್–2001) |

ಚೌಕಟ್ಟು 8.2

| ವಂಚಿತ ಸಮುದಾಯಗಳು – ಸೇವೆಗಳ ಲಭ್ಯತೆ |
| --- |
| ಕರ್ನಾಟಕದ ಅಧ್ಯಯನದ ಸಂದರ್ಭದಲ್ಲಿ ಗ್ರಾಮೀಣ ಮತ್ತು ನಗರಗಳಲ್ಲಿ ಜನರಿಗೆ ದೊರೆಯುವ ಆಡಳಿತ ಸೇವೆಗಳು ವ್ಯತ್ಯಾಸದಿಂದ ಕೂಡಿರುವುದು ಕಂಡು ಬರುತ್ತದೆ. ಕೆಳವರ್ಗದ ಗ್ರಾಮೀಣ ಕುಟುಂಬವು ಖಾಸಗೀ ಆರೋಗ್ಯ ಸೇವೆಯನ್ನು ಪಡೆಯಲು ಸಾಧ್ಯವಿಲ್ಲವೆಂಬುದು ಸ್ಪಷ್ಟ. ಏಕೆಂದರೆ ದುಬಾರಿ ವೆಚ್ಚ ಮತ್ತು ಆಸ್ಪತ್ರೆಗಳು ಹತ್ತಿರ ಇರುವುದಿಲ್ಲ. ಅವರೆಲ್ಲರೂ ಪ್ರಮುಖವಾಗಿ ಅವಲಂಬಿಸಿರುವುದು ಸರಕಾರಿ ಆರೋಗ್ಯ ಸೇವೆಗಳನ್ನು. ಇದು ದೊರೆಯದಿದ್ದರೆ ಇವರ ಆರೋಗ್ಯ ಸೇವೆಗೆ ಸ್ಥಳೀಯ ಸಾಮಾನ್ಯ ನಾಟಿ ವೈದ್ಯರ ಮೊರೆ ಹೋಗಬೇಕಾಗುತ್ತದೆ. ಸ್ಥಳೀಯ ವೈದ್ಯರು ಇವರ ಮನಸ್ಥಿತಿಯನ್ನು ಅರಿತಿದ್ದಾರೆ ಮತ್ತು ಅವರ ಭಾವನೆಗಳಿಗೆ ಸ್ಪಂದಿಸುವಂತಿರುವುದರಿಂದ ಅವರ ರೋಗ ಶಮನಕಾರಕರಾಗಿದ್ದಾರೆ. |

ಮೂಲ: ಎಸ್ ರಾಜಶೇಖರ್, ಗ್ರೋಯಿಂಗ್ ರೂರಲ್ ಅರ್ಬನ್ ಡಿಸ್ಪಾರಿಟಿ ಇನ್ ಕರ್ನಾಟಕ ಐಎಸ್‌ಇಸಿ ಬೆಂಗಳೂರು–2006

## ಆರೋಗ್ಯ ಮತ್ತು ಪೌಷ್ಟಿಕತೆ

ಪ.ಜಾತಿ ಮತ್ತು ಪ.ಪಂ.ಗಳ ಜನ ಸಮುದಾಯದವರು ಆರೋಗ್ಯದಾಯಕವಲ್ಲದ ಪರಿಸರದಲ್ಲಿ ಬದುಕುತ್ತಿರುವುದರಿಂದ ಅವರು ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಗ್ರಾಮೀಣ ಆರೋಗ್ಯ ಸೇವೆಗಳ ಲಭ್ಯತೆಯೇನೋ ಹೆಚ್ಚುತ್ತಿದೆ. ಈ ಸೇವಾ ವ್ಯವಸ್ಥೆಯನ್ನು ಸರಕಾರ ಉಚಿತವಾಗಿ ನೀಡುತ್ತಿದೆ. ಆದರೂ ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೇವಾ ಸೌಲಭ್ಯ ಮಹಿಳೆಯರಿಗೆ ತಲುಪುತ್ತಿಲ್ಲ. ಮನೆಗಳಲ್ಲಿನ ಹೆರಿಗೆ ಪ್ರಮಾಣ ಅತಿ ಹೆಚ್ಚಾಗಿದ್ದು ಪ್ರಸವ ಪೂರ್ವ ಮತ್ತು ಪ್ರಸವ ನಂತರದ ಆರೈಕೆ ಇಲ್ಲವೇ ಇಲ್ಲ ಎನ್ನಬಹುದಾಗಿದೆ. ಹೆರಿಗೆಯಾದ ಹತ್ತು ದಿನಗಳ ನಂತರ ಬಾಣಂತಿಯರು ದುಡಿಮೆಗೆ ಹೋಗಬೇಕು. ಬಡತನ ಮತ್ತು ಅಜ್ಞಾನ ಹಾಗೂ ಪೌಷ್ಟಿಕಾಂಶದ ಕೊರತೆಯಿಂದ ಇವರು ಬಳಲುತ್ತಿದ್ದಾರೆ.

## ಆದಾಯ ಮತ್ತು ಉದ್ಯೋಗ ಹಾಗೂ ದುಡಿಮೆಯ ಸಹಭಾಗಿತ್ವ ಪ್ರಮಾಣ

ಪ.ಜಾ.ಯಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣವು ಶೇ.35.5ರಷ್ಟಿದೆ. ಇದರಲ್ಲಿ ಪುರುಷರದ್ದು ಶೇ.49.8ರಷ್ಟಾದರೆ ಮಹಿಳೆಯರದ್ದು ಶೇ.41.0. ಪ.ಪಂ.ದವರಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣವು ಪ.ಜಾತಿಗಿಂತ ಸ್ವಲ್ಪ ಹೆಚ್ಚಾಗಿದೆ. ಅದು ಶೇ. 48ರಷ್ಟಿದೆ. ಇದರಲ್ಲಿ ಪುರುಷರಲ್ಲಿ ಅದು ಶೇ. 53.3ರಷ್ಟಿದ್ದರೆ ಮಹಿಳೆಯರಲ್ಲಿ ಅದು ಶೇ. 42.6ರಷ್ಟಿದೆ. ಒಟ್ಟು ಜನಸಂಖ್ಯೆಯ ದುಡಿಮೆ ಸಹಭಾಗಿತ್ವ ಪ್ರಮಾಣವು ಶೇ. 43.1ರಷ್ಟಾಗುತ್ತದೆ. ಇದು ಪ.ಜಾತಿ ಮತ್ತು ಪ.ಪಂ.ದ ಜನಸಂಖ್ಯೆಯ ದುಡಿಮೆ ಸಹಭಾಗಿತ್ವ ಪ್ರಮಾಣಕ್ಕಿಂತ ಕಡಿಮೆಯಾಗಿದೆ. ಪ.ಜಾ. ಮತ್ತು ಪ.ಪಂ. ಪುರುಷರು ಹಾಗೂ ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣವು ಒಟ್ಟು ದುಡಿಮೆ ಸಹಭಾಗತ್ವ ಪ್ರಮಾಣವಾದ ಶೇ. 34.9ಕ್ಕಿಂತ ಅಧಿಕವಾಗಿದೆ. ಈ ರೀತಿಯ ಬೆಳವಣಿಗೆಯಿಂದಾಗಿ ಮಹಿಳೆಯರ ಆರ್ಥಿಕ ಸಬಲೀಕರಣವು ನಡೆಯುತ್ತಿದೆ. ಆದರೆ ಇನ್ನೊಂದು ಕಡೆ ಬಡತನದ ನಿರ್ವಹಣೆಯ ಜವಾಬುದಾರಿಯು ಮಹಿಳೆಯರ ಮೇಲೆ ಹೆಚ್ಚಾಗಿ ಬೀಳುತ್ತಿದೆ. ಮಹಿಳೆಯರು ಮನೆಯೊಳಗೆ ಮತ್ತು ಮನೆಯ ಹೊರಗೆ ಎರಡೂ ಕಡೆಗಳಲ್ಲಿ ದುಡಿಯಬೇಕಾಗಿದೆ. ಆದರೆ ಅವರು ತುಂಬಾ ಕಡಿಮೆ ಆದಾಯ ತರುವ ಕೆಲಸದಲ್ಲಿ ದುಡಿದು ಕಡಿಮೆ ಕೂಲಿಯನ್ನು ಪಡೆಯುತ್ತಿದ್ದಾರೆ.

ಈ ಜಿಲ್ಲೆಯ ತಾಲ್ಲೂಕುಗಳಾದ್ಯಂತ ದುಡಿಮೆಯ ಸಹಭಾಗಿತ್ವ ಪ್ರಮಾಣವು ಶೇ. 50ಕ್ಕಿಂತಲೂ ಅಧಿಕವಿರುವ ತಾಲ್ಲೂಕುಗಳೆಂದರೆ ಆಳಂದ, ಚಿಂಚೋಳಿ ಮತ್ತು ಸೇಡಂ. ಇಲ್ಲಿ ಅವಲಂಬಿತರ ಪ್ರಮಾಣವು ಅಧಿಕವಾಗಿದೆ. ಪ.ಪಂ. ದುಡಿಮೆ ಸಹಭಾಗಿತ್ವ ಪ್ರಮಾಣವು ಅತಿ ಹೆಚ್ಚು ಆಳಂದ ತಾಲ್ಲೂಕ್ಕಿನಲ್ಲಿದೆ. ಅದಾದ ನಂತರ ಚಿಂಚೋಳಿ ತಾಲ್ಲೂಕು ಬರುತ್ತದೆ. ಪ.ಜಾ. ಮತ್ತು ಪ.ಪಂ.ಗಳೆರಡಕ್ಕೂ ದುಡಿಮೆ ಸಹಭಾಗಿತ್ವ ಪ್ರಮಾಣವು ಗುಲಬರ್ಗಾ ಮತ್ತು ಯಾದಗಿರ್ ತಾಲ್ಲೂಕುಗಳಲ್ಲಿ ಅತಿ ಕಡಿಮೆಯಿದೆ. ಇದಕ್ಕೆ ಕಾರಣ ಗುಲಬರ್ಗಾ ತಾಲ್ಲೂಕಿನಲ್ಲಿ ನಗರವಾಸಿಗಳ ಪ್ರಮಾಣವು ಅಧಿಕವಾರುವುದು ಮತ್ತು ಶಿಕ್ಷಣ ಕೇತ್ರದಲ್ಲಿರುವ ಮಕ್ಕಳ ಪ್ರಮಾಣವು ಅತಿ ಹೆಚ್ಚಾಗಿರುವುದು ಕಾರಣವಾಗಿರಬಹುದು. ಅಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣವು ಶೇ. 33ರಷ್ಟಿದೆ. ಇದು ಯಾದಗಿರಿ ತಾಲ್ಲೂಕಿನಲ್ಲಿ ನಿರುದ್ಯೋಗದ ಪ್ರಮಾಣ ಅಧಿಕವಾಗಿರುವುದು ಕಂಡು ಬರುತ್ತದೆ. ಇಲ್ಲಿ ಪ.ಜಾ ಮತ್ತು ಪ.ಪಂ.ಗಳೆರಡರಲ್ಲೂ ಋತುಮಾನದ ವಲಸೆ ಅತಿಯಾಗಿರುವುದು ಕಾಣುತ್ತದೆ. ಅವರಲ್ಲಿ ದುಡಿಮೆಗಾರರು ಉದ್ಯೋಗವನ್ನು ಹುಡುಕಿಕೊಂಡು ಮುಂಬೈ ಅಥವಾ ಬೆಂಗಳೂರಿಗೆ ಹೋಗುವುದು ಸಾಮಾನ್ಯವಾಗಿದೆ. ಒಟ್ಟು ಜನವರ್ಗದಲ್ಲಿನ ದುಡಿಮೆ ಸಹಭಾಗಿತ್ವ ಪ್ರಮಾಣವಾದ ಶೇ51.35ಕ್ಕಿಂತ ಇವರಲ್ಲಿ ಅದು ಕಡಿಮೆಯಿದೆ. ಪ.ಜಾ.ಯಲ್ಲಿ ಪ್ರಧಾನ ದುಡಿಮೆಗಾರರ ಪ್ರಮಾಣ ಶೇ. 32.93. ಇದು ಒಟ್ಟು ಜನಸಂಖ್ಯೆಯಲ್ಲಿರುವ ಶೇ. 32.3ಕ್ಕಿಂತ ಸ್ವಲ್ಪ ಮಟ್ಟಿಗೆ ಅಧಿಕವಾಗಿದೆ. ಒಟ್ಟು ಪುರುಷ ದುಡಿಮೆಗಾರರಲ್ಲಿ ದುಡಿಮೆ ಸಹಭಾಗಿತ್ವ ಪ್ರಮಾಣವು ಶೇ. 44.7ರಷ್ಟಾದರೆ ಪ.ಪಂದ ಪುರುಷರಲ್ಲಿ ಅದು ಶೇ. 42.27ರಷ್ಟಿದೆ. ಒಟ್ಟು ಮಹಿಳಾ ದುಡಿಮೆಗಾರರ ಸಹಭಾಗಿತ್ವ ಪ್ರಮಾಣವು ಶೇ. 19.4ರಷ್ಟಿದ್ದರೆ ಪ.ಪಂ. ಮಹಿಳೆಯರಲ್ಲಿ ಅದು ಶೇ. 23.22ರಷ್ಟಿದೆ.

ಒಟ್ಟು ದುಡಿಮೆಗಾರರಲ್ಲಿ ಕಂಡು ಬರುವುದಕ್ಕಿಂತ ಪ.ಪಂ.ದ ಒಟ್ಟು ದುಡಿಮೆಗಾರರಲ್ಲಿ ಪ್ರಮುಖ ದುಡಿಮೆಗಾರರ ಪ್ರಮಾಣ ಹೆಚ್ಚಾಗಿರುವುದು ಕಂಡು ಬರುತ್ತದೆ. ಪ್ರಮುಖ ದುಡಿಮೆಗಾರರಲ್ಲಿ ಪುರುಷರ ಪ್ರಮಾಣ ಮಹಿಳೆಯರಿಗಿಂತ ಹೆಚ್ಚಿರುವುದು ಕಂಡುಬರುತ್ತದೆ. ಅದೇ ಪ.ಜಾತಿ ಸಮುದಾಯವನ್ನು ತೆಗೆದುಕೊಂಡರೆ ಮಹಿಳಾ ದುಡಿಮೆಗಾರರ ಪ್ರಮಾಣ ಜಿಲ್ಲಾ ಮಟ್ಟದ ಸರಾಸರಿಗಿಂತ ಹೆಚ್ಚಿರುವುದು ಕಂಡುಬರುತ್ತದೆ. ಅತಿ ಹೆಚ್ಚು ದುಡಿಮೆಗಾರರು ಪ.ಪಂ.ದ ಸಮುದಾಯಕ್ಕೆ ಸೇರಿದ ಪ್ರಮುಖ ದುಡಿಮೆಗಾರರಾಗಿದ್ದಾರೆ.

ಅಭಿವೃದ್ಧಿಯಿಂದ ವಂಚಿತರಾದವರ ಪ್ರಮಾಣವು ಪುರುಷರಿರಲಿ – ಮಹಿಳೆಯರಿರಲಿ, ಪ.ಜಾತಿ ಮತ್ತು ಪ.ಪಂ.ದವರಲ್ಲಿ ಹೆಚ್ಚು ಪ್ರಮಾಣದಲ್ಲಿರುವುದು ಕಂಡು ಬರುತ್ತದೆ. ಅಂಚಿನ ದುಡಿಮೆಗಾರರಲ್ಲಿ ಬಹಳಷ್ಟು ದುಡಿಮೆಗಾರರು ಮಹಿಳಾ ದುಡಿಮೆಗಾರರಾಗಿದ್ದಾರೆ.

ಕೋಷ್ಟಕ 8.3

## ಒಟ್ಟು ಜನಸಂಖ್ಯೆಯಲ್ಲಿ ಮುಖ್ಯ ದುಡಿಮೆಗಾರರ ಪ್ರಮಾಣ – 2001

| ವಿವರ | ಒಟ್ಟು | ಪ.ಜಾ.. | ಪ.ಪಂ. |
|---|---|---|---|
| ಒಟ್ಟು | 32.3 | 32.9 | 34.3 |
| ಪುರುಷರು | 44.7 | 42.27 | 45.6 |
| ಮಹಿಳೆಯರು | 19.4 | 23.22 | 22.9 |

ಮೂಲ: ಸೆನ್ಸಸ್ ಆಫ್ ಇಂಡಿಯಾ–2001.

ಪ.ಜಾತಿ ಸಮುದಾಯದಲ್ಲಿನ ಅಂಚಿನ ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣವು ಶೇ.69.2ರಷ್ಟಿದ್ದರೆ ಪ.ಪಂ.ದಲ್ಲಿ ಅವರ ಪ್ರಮಾಣವು ಶೇ69.5ರಷ್ಟಿದೆ. ತಾಲ್ಲೂಕಿನಾದ್ಯಂತ ಋತುಮಾನದ ವಲಸೆ ಹೆಚ್ಚಾಗಿರುವುದು ಪ್ರಮುಖವಾಗಿ ಪ.ಜಾತಿ ಮತ್ತು ಪ.ಪಂದ ಜನಸಮೂದಾಯಗಳಲ್ಲಿ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಈ ಸಮುದಾಯದ ದುಡಿಮೆಗಾರರು ಉದ್ಯೋಗಕ್ಕಾಗಿ ಮುಂಬೈ ಅಥವಾ ಬೆಂಗಳೂರಿಗೆ ವಲಸೆ ಹೋಗುತ್ತಾರೆ. ಈ ರೀತಿಯ ವಲಸೆಯಂತಹ ಕೆಲಸದಲ್ಲಿ ಭಾಗವಹಿಸುವವರ ಪ್ರಮಾಣವು ಸಾಮಾನ್ಯ ದುಡಿಮೆಗಾರರಲ್ಲಿರುವ ದುಡಿಮೆ ಸಹಭಾಗಿತ್ವ ಪ್ರಮಾಣಕ್ಕಿಂತ ಇಲ್ಲಿ ಅದು ಕಡಿಮೆಯಿದೆ (ಶೇ.51.35).

ಪ್ರಧಾನ ಕೆಲಸಗಾರರ ಪ್ರಮಾಣದಲ್ಲಿ ಪ.ಜಾತಿ ಸಮುದಾಯದ ಪಾಲು ಶೇ.32.93ರಷ್ಟಾಗಿದ್ದು ಇದು ಸಾಮಾನ್ಯ ವರ್ಗದವರಿಗಿಂತ ಸ್ವಲ್ಪ ಹೆಚ್ಚಿರುವುದು ಕಂಡುಬರುತ್ತದೆ. ಅದು ಶೇ. 32.3ರಷ್ಟಿದೆ. ಇದರಲ್ಲಿ ಪುರಷರು ಶೇ.42.27ರಷ್ಟಾಗಿದ್ದು ಅದು ಸಾಮಾನ್ಯ ವರ್ಗದ ಪ್ರಮಾಣ ಶೇ.44.7ಕ್ಕಿಂತ ಕಡಿಮೆಯಾಗಿದೆ. ಇದರಲ್ಲಿ ಶೇ.23.22 ರಷ್ಟು ಮಹಿಳಾ ಕೆಲಸಗಾರರಾಗಿದ್ದು ಇದು ಸಾಮಾನ್ಯವರ್ಗದ ಹೆಣ್ಣು ಮಕ್ಕಳ ಕೆಲಸಗಾರರಿಗಿಂತ (ಶೇ 19.4) ಹೆಚ್ಚಾಗಿದೆ.

ಪರಿಶಿಷ್ಟ ಪಂಗಡ ಸಮುದಾಯದಲ್ಲಿ ಕಡಿಮೆ ಕೂಲಿಗೆ ದುಡಿಯುವ ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣವು ಅಧಿಕವಾಗಿದೆ. ಪ.ಜಾಯಲ್ಲಿನ ಅಂಚಿನ ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣವು ಶೇ.69.2ರಷ್ಟಿದ್ದರೆ ಪ.ಪಂದಲ್ಲಿನ ಅಂಚಿನ ದುಡಿಮೆಗಾರರಲ್ಲಿ ಮಹಿಳೆಯರ ಪ್ರಮಾಣವು ಶೇ 69.5ರಷ್ಟಿದೆ. ಒಟ್ಟು ದುಡಿಮೆಗಾರರಿಗೆ ಸಂಬಂಧಿಸಿದಂತೆ ಅಂಚಿನ ದುಡಿಮೆಗಾರರಲ್ಲಿ ಮಹಿಳಾ ದುಡಿಮೆಗಾರರ ಪ್ರಮಾಣವು ಶೇ70.3ರಷ್ಟಿದೆ. ಇದರಿಂದ ಸಾಮಾನ್ಯವಾಗಿ ಮಹಿಳಾ ದುಡಿಮೆಗಾರರು ನಿರ್ಲಕ್ಷಕ್ಕೆ ಒಳಗಾಗಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಅದರಲ್ಲಿ ಪ.ಜಾ ಮತ್ತು ಪ.ಪಂ.ಗಳ ಮಹಿಳೆಯರು ಹೆಚ್ಚನ ನಿರ್ಲಕ್ಷ್ಯಕ್ಕೆ ಒಳಗಾಗಿದ್ದಾರೆ.

## ಉದ್ಯೋಗದ ವಿನ್ಯಾಸ

ಉದ್ಯೋಗದ ರಚನೆಯನ್ನು ತೆಗೆದುಕೊಂಡರೆ, ಒಟ್ಟು ದುಡಿಮೆಗಾರರಲ್ಲಿ ಕಂಡು ಬರುವುದಕ್ಕಿಂತ ಪ.ಜಾತಿ ಮತ್ತು ಪ.ಪಂ ಗಳ ದುಡಿಮೆಗಾರರ ಉದ್ಯೋಗ ರಚನೆಯು ಭಿನ್ನವಾಗಿರುತ್ತದೆ. ಇದು ಈ ಕೆಳಗಿನ ಕೋಷ್ಟಕದಿಂದ ತಿಳಿಯುತ್ತದೆ.

Proportion of main workers in Total population - 2001




ಕೋಷ್ಟಕ 8.4

## ಒಟ್ಟು ಜನಸಂಖ್ಯೆಯಲ್ಲಿ ಅಂಚಿನ ದುಡಿಮೆಗಾರರ ಪ್ರಮಾಣ – 2001

| ವಿವರ | ಒಟ್ಟು | ಪ.ಜಾ.. | ಪ.ಪಂ. |
|---|---|---|---|
| ಒಟ್ಟು | 10.84 | 12.5 | 14.0 |
| ಪುರುಷರು | 6.30 | 7.6 | 7.7 |
| ಮಹಿಳೆಯರು | 15.5 | 17.7 | 19.7 |

ಮೂಲ: ಸೆನ್ಸಸ್ ಆಫ್ ಇಂಡಿಯಾ–2001.

ಕೋಷ್ಟಕ 8.5

## ವಲಯವಾರು ಮುಖ್ಯ ದುಡಿಮೆಗಾರರ ಹಂಚಿಕೆ – 2001

| | ಸಾಗುವಳಿಗಾರರು | ಕೃಷಿ ಕೂಲಿಕಾರರು | ಕುಟುಂಬ ಕೈಗಾರಿಕೆಗಳು | ಇತರೆ |
|---|---|---|---|---|
| ಒಟ್ಟು | 27.1 | 40.0 | 2.5 | 30.4 |
| ಪ.ಜಾ. | 28.6 | 39.8 | 1.6 | 29.8 |
| ಪ.ಪಂ. | 43.0 | 34.0 | 1.4 | 21.5 |

ಮೂಲ: ಸೆನ್ಸ್ ಆಫ್ ಇಂಡಿಯಾ – ಕರ್ನಾಟಕ : 2001

ಕೋಷ್ಟಕ 8.6

## ವಲಯವಾರು ಮತ್ತು ವೃತ್ತಿವಾರು ಕುಟುಂಬಗಳ ಹಂಚಿಕೆ – ಆಯ್ದ ಕುಟುಂಬಗಳ ಸ್ಯಾಂಪಲ್ ಸಮೀಕ್ಷೆ – 2006–07 (ಪ.ಜಾ.–ಗ್ರಾಮೀಣ)

| ಕ್ರ.ಸಂ. | ತಾಲ್ಲೂಕು | ಸಾಗುವಳಿಗಾರರು | ಕೃಷಿ ಕೂಲಿಕಾರರು | ಇತರೆ | ಒಟ್ಟು |
|---|---|---|---|---|---|
| 1. | ಅಫಜಲಪುರ | 7.44 | 46.58 | 45.98 | 100.00 |
| 2. | ಅಳಂದ್ | 13.86 | 50.04 | 36.10 | 100.00 |
| 3. | ಚಿಂಚೋಳಿ | 21.15 | 74.72 | 04.13 | 100.00 |
| 4. | ಚಿತ್ತಾಪುರ | 9.10 | 10.30 | 80.60 | 100.00 |
| 5. | ಗುಲಬರ್ಗಾ | 10.59 | 54.80 | 34.61 | 100.00 |
| 6. | ಜೀವರ್ಗಿ | 17.43 | 12.88 | 69.69 | 100.00 |
| 7. | ಸೇಡಂ | 0.00 | 24.11 | 75.89 | 100.00 |
| 8. | ಶಹಾಪುರ | 9.31 | 82.25 | 08.44 | 100.00 |
| 9. | ಶೋರಾಪುರ | 18.65 | 74.04 | 07.31 | 100.00 |
| 10. | ಯಾದಗೀರ್ | 30.35 | 50.72 | 18.93 | 100.00 |
| | **ಗುಲಬರ್ಗಾ ಜಿಲ್ಲೆ** | **14.32** | **43.87** | **41.81** | **100.00** |

ಮೂಲ: ಸ್ಯಾಂಪಲ್ ಸಮೀಕ್ಷೆ–ಪ.ಜಾ. ಮತ್ತು ಪ.ಪಂ : ಡಿ.ಈ.ಎಸ್.ಬೆಂಗಳೂರು 2007

**ಪ.ಜಾತಿಯ ಮುಖ್ಯ ಕೆಲಸಗಾರರ ಗುಂಪಿನಲ್ಲಿ ಕೃಷಿ ಕೂಲಿಕಾರರಾಗಿದ್ದವರು ಕೃಷಿ ಸಾಗುವಳಿದಾರರಾಗಿ ಬದಲಾಗಿರುವುದು ಕಂಡುಬರುತ್ತದೆ. ಇದು ಉತ್ತಮ ಬೆಳವಣಿಗೆಯಾಗಿದ್ದು ಸಮಾಜದ ಅಂಚಿನಲ್ಲಿದ್ದ ಗುಂಪುಗಳು ಸಶಕ್ತೀಕರಣಕ್ಕೆ ಒಳಗಾಗುತ್ತಿರುವುದು ಇದರಿಂದ ತಿಳಿದು ಬರುತ್ತದೆ.**

ಇಲ್ಲಿನ ಕುತೂಹಲಕಾರಿ ಸಂಗತಿಯೆಂದರೆ ಪರಿಶಿಷ್ಟ ಜನಸಮುದಾಯದ ದುಡಿಮೆಗಾರರಿಗೆ ಉತ್ಪಾದನ ಆಸ್ತಿಯು ದುಡಿಮೆಗಾಗಿ ದೊರೆಯುತ್ತದೆ ಮತ್ತು ಈ ಸಮುದಾಯದಲ್ಲಿನ ಮುಖ್ಯ ದುಡಿಮೆಗಾರರಲ್ಲಿ ಹೆಚ್ಚು ಜನರು ಕೃಷಿಕೂಲಿಕಾರರಾಗಿ ದುಡಿಯುತ್ತಿದ್ದಾರೆ. ಒಟ್ಟು ದುಡಿಮೆಗಾರರಲ್ಲಿ ಕೃಷಿಕೂಲಿಗಳಾಗಿ ದುಡಿಯುತ್ತಿರುವವರಿಗಿಂತ ಹೆಚ್ಚು ಸದರಿ ಸಮುದಾಯಗಳಲ್ಲಿ ಕೃಷಿ ಕೂಲಿಗಳಾಗಿ ದುಡಿಯುತ್ತಿರುವವರು ಅಧಿಕವಾಗಿದ್ದಾರೆ. ಪ.ಜಾತಿಯ ಮುಖ್ಯಕೆಲಸಗಾರರಲ್ಲಿ ಕೃಷಿ ಕೂಲಿಗಳ ಪ್ರಮಾಣ ಶೇ.39.8ರಷ್ಟಿದೆ. ಇದು ಒಟ್ಟಾರೆ ಜಿಲ್ಲೆಯ ಕೃಷಿಕೂಲಿಗಳ ಪ್ರಮಾಣವಾದ ಶೇ.40ಕ್ಕೆ ಹತ್ತಿರವಾಗಿದೆ. ಇದು ವೃತ್ತಿಯ ವಿನ್ಯಾಸದಲ್ಲಿ ಆಗಿರುವ ಬದಲಾವಣೆಯನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಪ.ಜಾತಿಯ ಮುಖ್ಯ ಕೆಲಸಗಾರರ ಗುಂಪಿನಲ್ಲಿ ಕೃಷಿ ಕೂಲಿಕಾರರಾಗಿದ್ದವರು ಕೃಷಿ ಸಾಗುವಳಿದಾರರಾಗಿ ಬದಲಾಗಿರುವುದು ಕಂಡುಬರುತ್ತದೆ. ಇದು ಉತ್ತಮ

ಬೆಳವಣಿಗೆಯಾಗಿದ್ದು ಸಮಾಜದ ಅಂಚಿನಲ್ಲಿದ್ದ ಗುಂಪುಗಳು ಸಶಕ್ತೀಕರಣಕ್ಕೆ ಒಳಗಾಗುತ್ತಿರುವುದು ಇದರಿಂದ ತಿಳಿದು ಬರುತ್ತದೆ. ಹಾಗೆಯೇ ಈ ಜಾತಿಯಲ್ಲಿ ಕೂಲಿಕಾರರಲ್ಲಿ ಹೆಚ್ಚಿನವರು ಮಹಿಳಾ ಕೂಲಿಗಾರರಾಗಿದ್ದಾರೆ. ಇದು ಸಂಪನ್ಮೂಲಗಳು ಮತ್ತು ಆಸ್ತಿಯ ಮೇಲಿನ ಹಕ್ಕುದಾರಿಕೆಯು ಹೆಚ್ಚಾಗಿ ಪುರುಷರಿಗೆ ದಕ್ಕುತ್ತಿರುವುದರಿಂದ ಆ ಸಮುದಾಯಗಳಲ್ಲಿ ಮಹಿಳೆಯರು ಕೃಷಿ ಕೂಲಿಕಾರರಾಗಿಯೇ ಮುಂದುವರಿಯುತ್ತಿದ್ದಾರೆ. ಈ ಸಮುದಾಯದಲ್ಲಿನ ಮಹಿಳೆಯರು ಇತರೆ ಚಟುವಟಿಕೆಗಳಲ್ಲಿ ನಿರತವಾಗಿರುವುದು ಕಂಡು ಬರುತ್ತದೆ (ಶೇ. 21.7).

ಪರಿಶಿಷ್ಟ ಪಂಗಡದ ಕೆಲಸಗಾರರನ್ನು ತೆಗೆದುಕೊಂಡರೆ ಅಲ್ಲಿಯೂ ಮೇಲ್ಕಂಡ ಸ್ವರೂಪವೇ ಕಂಡು ಬರುತ್ತದೆ. ಪ.ಪಂದಲ್ಲಿನ ದುಡಿಮೆಗಾರರಲ್ಲಿ ಶೇ. 43ರಷ್ಟು ದುಡಿಮೆಗಾರರು ಕೃಷಿಯಲ್ಲಿ ನಿರತರಾಗಿದ್ದರೆ ಕೃಷಿಕೂಲಿಗಳಾಗಿ ದುಡಿಯುತ್ತಿರುವವರ ಪ್ರಮಾಣ ಶೇ. 34. ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ಪ.ಪಂ ಸಮುದಾಯವು ಕೇಂದ್ರೀಕೃತಗೊಂಡಿರುವ ಶಹಾಪುರ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ನೀರಾವರಿ ಸೌಲಭ್ಯವು ದೊರೆತಿದೆ. ಶಹಾಪುರದಲ್ಲಿನ ಒಟ್ಟು ದುಡಿಮೆಗಾರರಲ್ಲಿ ಶೇ. 48ರಷ್ಟು ಮತ್ತು ಶೋರಾಪುರದಲ್ಲಿ ಶೇ. 43 ರಷ್ಟು ಕೃಷಿಯನ್ನು ಅವಲಂಬಿಸಿಕೊಂಡಿರುವುದು ಕಂಡು ಬರುತ್ತದೆ. ಅಳಂದ ತಾಲ್ಲೂಕಿನಲ್ಲೂ ಶೇ. 49ರಷ್ಟು ದುಡಿಮೆಗಾರರು ಕೃಷಿಯನ್ನು ಅವಲಂಬಿಸಿಕೊಂಡಿರುವುದು ಕಂಡು ಬರುತ್ತದೆ. ಈ ತಾಲ್ಲೂಕುಗಳಲ್ಲಿನ ಒಟ್ಟು ದುಡಿಮೆಗಾರರಲ್ಲಿ ಕೃಷಿಕೂಲಿಕಾರರ ಪ್ರಮಾಣ ಕೇವಲ ಶೇ. 34.

ಆದರೆ ಸ್ಯಾಂಪಲ್ ಸರ್ವೆ ಪ್ರಕಾರ ಪ.ಜಾತಿಯ ದುಡಿಮೆಗಾರರಲ್ಲಿ ಹೆಚ್ಚು ಪ್ರಮಾಣದ ದುಡಿಮೆಗಾರರು ಕೃಷಿ ಕೂಲಿಗಳಾಗಿ ಕೆಲಸ ಮಾಡುತ್ತಿರುವುದು ಕಂಡು ಬರುತ್ತದೆ. ಈ ಪ್ರಮಾಣವು ಅತಿ ಹೆಚ್ಚಾಗಿ ಶಹಾಪುರ್ ತಾಲ್ಲೂಕಿನ ಗ್ರಾಮೀಣ ಭಾಗದಲ್ಲಿ ಶೇ.82.2ರಷ್ಟಿದ್ದು, ಶೇ.74ರಷ್ಟು ಶೋರಾಪುರ ತಾಲ್ಲೂಕಿನಲ್ಲೂ ಶೇ.74.7ರಷ್ಟು, ಚಿಂಚೋಳಿ ತಾಲ್ಲೂಕಿನಲ್ಲಿ ಕಂಡುಬರುತ್ತಿದೆ. ಸೇಡಂ, ಚಿತ್ತಾಪುರ ಮತ್ತು ಅಫ್‌ಜಲಪುರಗಳಲ್ಲಿ ದುಡಿಮೆಗಾರರು ದ್ವಿತೀಯ ಮತ್ತು ತೃತೀಯ ವಲಯದ ಉದ್ಯೋಗಗಳಲ್ಲಿ ದುಡಿಯುತ್ತಿದ್ದಾರೆ. ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೊಡ್ಡ, ಮಧ್ಯಮ ಮತ್ತು ಸಣ್ಣ ಪ್ರಮಾಣದ ಉದ್ಯಮಗಳಾದ ಬಂಡೆ ಒಡೆಯುವುದಕ್ಕೆ ಸಂಬಂಧಿಸಿದ ಕೆಲಸಗಳು ನಡೆಯುತ್ತಿದ್ದು ಇಲ್ಲಿ ಕಾರ್ಮಿಕರಾಗಿ ಪ.ಜಾ. ದುಡಿಮೆಗಾರರು ದುಡಿಯುತ್ತಿದ್ದಾರೆ. ಉದ್ಯೋಗದ ಮಾದರಿ ತುಂಬಾ ಅನಿಯಮಿತವಾದುದಾಗಿದೆ. ಮತ್ತು ಕಡಿಮೆ ಕೂಲಿಯದ್ದಾಗಿದೆ. ಕಲ್ಲಿನ ಬಂಡೆ ಒಡೆಯುವ ಕೆಲಸದಲ್ಲಿ ಈಗಿನ ಸರಾಸರಿ ಕೂಲಿಯ ದರ ಹೆಚ್ಚೆಂದರೆ ದಿನಕ್ಕೆ ನೂರು ರೂಪಾಯಿಗಳಾಗಿದೆ. ಆದರೆ ತುಂಬಾ ಕಷ್ಟದ ಮತ್ತು ಆರೋಗ್ಯಕ್ಕೆ ಅಪಾಯಕಾರಿಯಾದ ಕೆಲಸವಾಗಿದೆ. ಅಪಘಾತಗಳಿಗೆ ಯಾವುದೇ ಪರಿಹಾರವಿಲ್ಲ ಅಥವಾ ಕೆಲಸಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಭದ್ರತೆಗಳಿಲ್ಲ.

ಗ್ರಾಮೀಣ ಮತ್ತು ನಗರ ಪ್ರದೇಶ ದುಡಿಮೆಗಾರರ ದುಡಿಮೆ ಸ್ವರೂಪದಲ್ಲಿ ವ್ಯತ್ಯಾಸಗಳು ಸ್ಪಷ್ಟವಾಗಿ ಕಂಡು ಬರುತ್ತವೆ. ನಗರ ಪ್ರದೇಶಗಳಲ್ಲಿ ಇತರೆ ದುಡಿಮೆಗಾರರಾಗಿ ಹೆಚ್ಚು ದುಡಿಮೆಗಾರರು ದುಡಿಯುತ್ತಿದ್ದಾರೆ. ಇಲ್ಲಿ ಪ.ಜಾ.ಯಲ್ಲಿ ಕೃಷಿಯನ್ನು ಅವಲಂಬಿಸಿಕೊಂಡಿರುವವರ ಪ್ರಮಾಣ ಕೇವಲ ಶೇ. 10. ನಗರ ಪ್ರದೇಶದಲ್ಲಿ ಶೇ. 10.6ರಷ್ಟು ದುಡಿಮೆಗಾರರು ಸರ್ಕಾರಿ ಸೇವೆಯಲ್ಲಿದ್ದಾರೆ. ಒಟ್ಟು ದುಡಿಮೆಗಾರರಲ್ಲಿ ಶೇ. 64ರಷ್ಟು ಅನೌಪಚಾರಿಕ ವಲಯದಲ್ಲಿ ದುಡಿಮೆ ಮಾಡುತ್ತಿದ್ದಾರೆ. ನಗರ ಪ್ರದೇಶದಲ್ಲಿ ದುಡಿಮೆಯ ಸ್ವರೂಪವು ಹೆಚ್ಚು ವೈವಿಧ್ಯಮಯವಾಗಿರುತ್ತದೆ.

ಸ್ಯಾಂಪಲ್ ಸರ್ವೆಯೂ ಕೂಡ ಪ.ಜಾತಿಯಲ್ಲಿ ಕೃಷಿಕರ ಪ್ರಮಾಣ ಚಿಂಚೋಳಿ ಶಹಾಪುರ, ಜೇವರ್ಗಿ ಮತ್ತು ಯಾದಗಿರಿ ತಾಲ್ಲೂಕುಗಳಲ್ಲಿ ಹೆಚ್ಚಾಗಿರುವುದನ್ನು ತೋರಿಸಿದೆ. ಕೃಷಿ ವಿಸ್ತರಣಾ ಇಲಾಖೆಯು ಪ.ಜಾ.ಗೆ ಸೇರಿದ ಕೃಷಿಕರಿಗೆ ಕೃಷಿ ಬಗ್ಗೆ ಉತ್ತಮ ತಿಳುವಳಿಕೆ ನೀಡಬೇಕು ಮತ್ತು ಆಧುನಿಕ ರೀತಿಯ ಕೃಷಿ ಕ್ರಮಗಳ ಬಗ್ಗೆ ತರಬೇತಿ ನೀಡುವಲ್ಲಿ ಸಹಾಯ ನೀಡಬೇಕಾಗುತ್ತದೆ. ಇದರಿಂದ ಅವರ ಆದಾಯದಲ್ಲಿ ಹೆಚ್ಚಳಕ್ಕೆ ಉಂಟಾಗಬಹುದು ಮತ್ತು ಉತ್ಪಾದಕ ಸಂಪನ್ಮೂಲಗಳನ್ನು ದಕ್ಷತೆಯಿಂದ ಬಳಸಿಕೊಳ್ಳುವುದಕ್ಕೆ ಸಹಕಾರಿಯಾಗಬಲ್ಲದು.

## ಜನರ ಬದುಕಿನ ಸ್ಥಿತಿಗತಿ

ಪ.ಜಾತಿಯಲ್ಲಿ ವಸತಿ ಸೌಲಭ್ಯ ಪಡೆದುಕೊಳ್ಳುತ್ತಿರುವವರ ಪ್ರಮಾಣವು ಅಧಿಕಗೊಳ್ಳುತ್ತಿದೆ. ಇದಕ್ಕೆ ಸರ್ಕಾರವು ಅನುಷ್ಠಾನಗೊಳಿಸಿದ ಆಶ್ರಯ ಯೋಜನೆ, ಅಂಬೇಡ್ಕರ್ ಯೋಜನೆ, ಇಂದಿರಾ ಆವಾಸ್ ಯೋಜನೆ., ನೆರಳಿನ ಭಾಗ್ಯ ಮುಂತಾದವು ಕಾರಣಗಳಾಗಿವೆ. ಇಲ್ಲಿ 2001ರ ಜನಗಣತಿ ಪ್ರಕಾರ ಶೇ.63.3ರಷ್ಟು ಪ.ಜಾತಿ ಜನಸಂಖ್ಯೆಯು ಶಾಶ್ವತವಾದ ಮನೆಗಳಲ್ಲಿ ಜೀವಿಸುತ್ತಿದ್ದಾರೆ. ಇವರಲ್ಲಿ ಕೇವಲ ಶೇ. 6ರಷ್ಟು ಮಾತ್ರ ತಾತ್ಕಾಲಿಕ ಮನೆಗಳಲ್ಲಿ ಜೀವಿಸುತ್ತಿದ್ದಾರೆ. ಜಿಲ್ಲೆಯ ಪ.ಜಾತಿ ಜನರ ವಸತಿ ಸ್ಥಿತಿಯು ರಾಜ್ಯ ಮಟ್ಟಕ್ಕೆ ಹೋಲಿಸಿದರೆ ಉತ್ತಮವಾಗಿದೆ. ನಗರ ಮತ್ತು ಗ್ರಾಮೀಣ ಪ್ರದೇಶದ ವಸತಿಯ ಅಂತರ ತುಂಬಾ ವಿಸ್ತಾರವಾದುದಾಗಿದೆ. ಸರಾಸರಿ ಶೇ.57.3ರಷ್ಟು ಗ್ರಾಮೀಣ ಕುಟುಂಬಗಳು ಪಕ್ಕಾ ಮನೆಗಳಲ್ಲಿ ಜೀವನ ಸಾಗಿಸುತ್ತಿದ್ದರೆ, ನಗರ ಪ್ರದೇಶಗಳಲ್ಲಿ ಶೇ.88ರಷ್ಟು ಕುಟುಂಬಗಳು ಪಕ್ಕಾ ಮನೆಗಳನ್ನು ಹೊಂದಿದವರಾಗಿದ್ದಾರೆ.

ಅದೇ ಪ.ಪಂ. ದ ಜನರನ್ನು ತೆಗೆದುಕೊಂಡರೆ ಅಲ್ಲಿ ವಸತಿ ವ್ಯವಸ್ಥೆಯು ಉತ್ತಮವಾಗೇನು ಇಲ್ಲ. ಒಟ್ಟು ಮನೆಗಳಲ್ಲಿ ಶೇ.36ರಷ್ಟು ಜನರು ಮಾತ್ರ ಪಕ್ಕಾ ಮನೆಗಳಲ್ಲಿ ವಾಸಿಸುತ್ತಿದ್ದಾರೆ ಮತ್ತು ಶೇ. 52ರಷು ಜನರು ಅರೆ ಪಕ್ಕಾ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಅಲ್ಲದೆ ಶೇ. 62.3ರಷ್ಟು ನಗರ ವಾಸಿಗಳು ಪಕ್ಕಾ ಮನೆಗಳನ್ನು ಹೊಂದಿದ್ದಾರೆ. ಬಹುಪಾಲು ಅಂದರೆ ಶೇ. 85ರಷ್ಟು ಕುಟುಂಬಗಳಿಗೆ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ ಇದೆ. ಗ್ರಾಮೀಣ ಭಾಗದಲ್ಲಿಯೂ ಕೂಡ ಶೇ.82ರಷ್ಟು ಕುಟುಂಬಗಳು ಶುದ್ಧ ಕುಡಿಯುವ ನೀರಿನ ಸೌಲಭ್ಯವನ್ನು ಹೊಂದಿದ್ದಾರೆ.

ನೈರ್ಮಲ್ಯ ಮತ್ತು ಒಳಚರಂಡಿಯ ಸವಲತ್ತನ್ನು ನೋಡಿದರೆ ತುಂಬಾ ಕೆಟ್ಟದಾಗಿದೆ. ಇಲ್ಲಿ ಶೇ.3.7ರಷ್ಟು ಕುಟುಂಬಗಳು ಮಾತ್ರ ಶೌಚಾಲಯದ ಸವಲತ್ತನ್ನು ಹೊಂದಿದ್ದಾರೆ.

ಇದು ನಗರ ಪ್ರದೇಶದಲ್ಲಿಯೂ ಕೂಡ ಕೇವಲ ಶೇ. 39ರಷ್ಟು ಕುಟುಂಬಗಳು ಮಾತ್ರ ಶೌಚಾಲಯವನ್ನು ಹೊಂದಿದ್ದು ಇನ್ನಿತರ ಜನಸಮುದಾಯಗಳಿಗೆ ಹೋಲಿಸಿದರೆ ತುಂಬಾ ಕಡಿಮೆ ಇರುವುದು ತಿಳಿಯುತ್ತದೆ. ಬೇರೆ ಸಮುದಾಯಗಳಲ್ಲಿ ಶೇ. 57.2ರಷ್ಟು ಕುಟುಂಬಗಳು ಶೌಚಾಲಯವನ್ನು ಹೊಂದಿವೆ.

ಕೋಷ್ಟಕ 8.7

**ವೃತ್ತಿವಾರು ಮತ್ತು ವಲಯವಾರು ಕುಟುಂಬಗಳ ಹಂಚಿಕೆ – ಸ್ಯಾಂಪಲ್ ಸಮೀಕ್ಷೆ. (ಪ.ಜಾ –ನಗರ)**

| ಕ್ರ.ಸಂ. | ತಾಲ್ಲೂಕು | ಸಾಗುವಳಿಗಾರರು | ಕೃಷಿ ಕಾರ್ಮಿಕರು | ಇತರೆ ದುಡಿಮೆಗಾರರು |
|---|---|---|---|---|
| 1. | ಅಫಜಲಪುರ | 1.00 | 5.08 | 93.92 |
| 2. | ಅಳಂದ್ | 2.74 | 0.00 | 97.26 |
| 3. | ಚಿಂಚೋಳಿ | 4.85 | 75.15 | 20.00 |
| 4. | ಚಿತ್ತಾಪುರ | 1.06 | 3.13 | 95.81 |
| 5. | ಗುಲಬರ್ಗಾ | 0.13 | 0.34 | 99.53 |
| 6. | ಜೇವರ್ಗಿ | 6.02 | 0.20 | 93.78 |
| 7. | ಸೇಡಂ | 12.50 | 41.67 | 45.83 |
| 8. | ಶಹಾಪುರ | 6.76 | 71.62 | 21.62 |
| 9. | ಶೋರಾಪುರ | 2.63 | 5.26 | 92.11 |
| 10. | ಯಾದಗೀರ್ | 2.31 | 0.00 | 97.69 |
| | **ಗುಲಬರ್ಗಾ ಜಿಲ್ಲೆ** | **1.81** | **7.32** | **90.87** |

ಮೂಲ: ಸ್ಯಾಂಪಲ್ ಸಮೀಕ್ಷೆ–ಪ.ಜಾ ಮತ್ತು ಪ.ಪಂ : ಡಿ.ಈ.ಎಸ್.ಬೆಂಗಳೂರು 2007

## ಕಾಳಜಿವಹಿಸಬೇಕಾದ ಸಂಗತಿಗಳು

ಪ.ಜಾತಿ ಮತ್ತು ಪ.ಪಂ. ಸಮುದಾಯದೊಳಗಿನ ಸಾಕ್ಷರತೆಯು ಅತ್ಯಂತ ಕೆಳಮಟ್ಟದಲ್ಲಿದೆ. ಅಂದರೆ ಅದು ಅಷ್ಟೊಂದು ಆಶಾದಾಯಕವಾಗಿಲ್ಲ. ಈ ಸಮುದಾಯಗಳಲ್ಲಿ ಮೂಲ ಸ್ವರೂಪದ ಬದಲಾವಣೆ ತರಲು ಭವಿಷ್ಯದಲ್ಲಿ ಗಮನ ಹರಿಸಬೇಕಾಗಿದೆ. ಹೆಣ್ಣುಮಕ್ಕಳ ಸಾಕ್ಷರತೆ ವಿಶೇಷವಾಗಿ ಪ.ಪಂ. ಸಮುದಾಯದಲ್ಲಿ ತೀರಾ ಕೆಳಮಟ್ಟದಲ್ಲಿರುವುದರಿಂದ ದರ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗಿದೆ. ಶಾಲಾ ದಾಖಲಾತಿಯಲ್ಲಿ ಹೆಚ್ಚಳವಾದಂತೆ ಮುಂದಿನ ಹಂತದ ತರಗತಿಗಳಿಗೆ ಮಕ್ಕಳು ಹೋಗುತ್ತಿಲ್ಲ. ಭವಿಷ್ಯದಲ್ಲಿ ಇವರ ಸಾಕ್ಷರತೆಯ ಮಟ್ಟ ಹೆಚ್ಚಿಸುವ ಅನಿವಾರ್ಯತೆ ಇದೆ. ಈ ಮಕ್ಕಳಲ್ಲಿ ಕಲಿಕೆಯ ಧಾರಣಾ ಸಾಮರ್ಥ್ಯ ಕಡಿಮೆ ಇರುವುದರಿಂದ ಉನ್ನತ ಶಿಕ್ಷಣ ಕಲಿಕಾ ಸಾಮರ್ಥ್ಯವೂ ಈ ಸಮುದಾಯಗಳಲ್ಲಿ ಕಡಿಮೆ ಇದೆ.

ಈ ಸಮುದಾಯಗಳ ಆರ್ಥಿಕ ಮಟ್ಟ ಜಿಲ್ಲೆಯ ಕೆಲವು ಭಾಗಗಳಲ್ಲಿ ಅಲ್ಪ ಮಟ್ಟದಲ್ಲಿ ಚೇತರಿಕೆ ಕಂಡಿರುವುದು ಗೊತ್ತಾಗುತ್ತದೆ. ಅದು ಎಲ್ಲಿ ಜಮೀನು ದೊರೆತಿದೆಯೋ ಅಲ್ಲಿ ಬೇರೆ ರೀತಿಯ ಅಂದರೆ ನೀರಾವರಿ ಬೆಳೆಗಳಿಂದ ತಮ್ಮ ಆದಾಯದಲ್ಲಿ ಪ್ರಗತಿ ಕಂಡಿದ್ದಾರೆ. ಆದರೆ ಇನ್ನುಳಿದ ತಾಲ್ಲೂಕುಗಳಲ್ಲಿಯು ಹೆಚ್ಚು ಕೆಲಸಗಾರರು ಕಡಿಮೆ ಆದಾಯದ ನಗರ ಪ್ರದೇಶಗಳ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಅನೌಪಚಾರಿಕ ಮತ್ತು ಕೃಷಿ ಇಲ್ಲವೇ ಕೃಷಿಕೂಲಿಗಳಲ್ಲಿ ಯಾವುದೇ ಸೇವಾಭದ್ರತೆಯಾಗಲೀ ಇಲ್ಲವೇ ಕನಿಷ್ಠ ಮಟ್ಟದ ಜೀವನಕ್ಕೆ ಸಾಕಾಗುವಷ್ಟು ಆದಾಯದ ಗಳಿಕೆಯಾಗಲೀ ಇರುವುದಿಲ್ಲ.

ಕೆಲಸಗಾರರಲ್ಲಿ ಹೆಚ್ಚಿನವರು ಕೃಷಿ ಕೂಲಿಗಳಾಗಿದ್ದಾರೆ. ಇದರಿಂದ ಇವರು ಕೆಲಸದಲ್ಲಿ ಕೊರತೆಯನ್ನು ಮತ್ತು ಆದಾಯದಲ್ಲಿ ಅಭದ್ರತೆಯನ್ನು ಹೊಂದಿದ್ದಾರೆ. ಈ ಸಮಸ್ಯೆಯನ್ನು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಪಕ ಅನುಷ್ಠಾನದಿಂದ ನೀಗಿಸಬಹುದಾಗಿದೆ.

ವಸತಿ ಸ್ಥಿತಿಯನ್ನು ಬೇರೆ ಬೇರೆ ಯೋಜನೆಗಳ ಅನುಷ್ಠಾನದ ಮೂಲಕ ಸುಧಾರಿಸಲಾಗುತ್ತಿದೆ. ಆದರೆ ನೈರ್ಮಲ್ಯ ಮತ್ತು ಒಳಚರಂಡಿ ವ್ಯವಸ್ಥೆ ಇಲ್ಲವಾದ್ದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ.

**ಹೆಣ್ಣುಮಕ್ಕಳ ಸಾಕ್ಷರತೆ ವಿಶೇಷವಾಗಿ ಪ.ಪಂ. ಸಮುದಾಯದಲ್ಲಿ ತೀರಾ ಕೆಳಮಟ್ಟದಲ್ಲಿರುವುದರಿಂದ ದರ ಬಗ್ಗೆ ಹೆಚ್ಚು ಗಮನ ಹರಿಸಬೇಕಾಗಿದೆ. ಶಾಲಾ ದಾಖಲಾತಿಯಲ್ಲಿ ಹೆಚ್ಚಳವಾದಂತೆ ಮುಂದಿನ ಹಂತದ ತರಗತಿಗಳಿಗೆ ಮಕ್ಕಳು ಹೋಗುತ್ತಿಲ್ಲ. ಭವಿಷ್ಯದಲ್ಲಿ ಇವರ ಸಾಕ್ಷರತೆಯ ಮಟ್ಟ ಹೆಚ್ಚಿಸುವ ಅನಿವಾರ್ಯತೆ ಇದೆ.**

**ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ವಿಧ್ಯಾರ್ಥಿಗಳಿಗೆ ಹೆಚ್ಚು ವಸತಿ ನಿಲಯಗಳ ಅಗತ್ಯತೆ ಕಂಡು ಬರುತ್ತದೆ. ಹೆಣ್ಣು ಮಕ್ಕಳಿಗಾಗಿ ವಿಶೇಷ ವಸತಿ ಶಾಲೆಗಳನ್ನು ತೆರೆಯುವ ಅಗತ್ಯವಿದೆ. ವಿಶೇಷವಾಗಿ ಪ.ಜಾತಿ ಪ.ಪಂ ಹೆಣ್ಣು ಮಕ್ಕಳ ದಾಖಲಾತಿ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಇವುಗಳನ್ನು ಆರಂಭಿಸಬೇಕು.**

## ಸಲಹೆ ಸೂಚನೆಗಳು

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ಉತ್ತಮ ಶಿಕ್ಷಣದ ಸೌಲಭ್ಯಗಳನ್ನು ದೊರಕಿಸಿಕೊಡುವುದು ಅತ್ಯವಶ್ಯಕವಾಗಿದೆ. ಈ ಸಮುದಾಯದ ಮಕ್ಕಳ ಶಾಲಾ ದಾಖಲಾತಿ ಕಡಿಮೆ ಇರುವುದಕ್ಕೆ ಕಾರಣ ಬಡತನ, ವಲಸೆ ಮತ್ತು ಪಾಲಕರಲ್ಲಿ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಇಲ್ಲದಿರುವುದು. ಆದ್ದರಿಂದ ಮಕ್ಕಳ ಶಾಲಾ ದಾಖಲಾತಿ ಹೆಚ್ಚಿಸುವುದು ಅಗತ್ಯ. ಇದಕ್ಕೆ ಆರ್ಥಿಕ ನೆರವು ಅಗತ್ಯವಿದೆ. ಇದು ಪುಸ್ತಕರೂಪದಲ್ಲಿ ಮತ್ತು ಸಮವಸ್ತ್ರದ ಜೊತೆಗೆ ವಸತಿ ನಿಲಯಗಳಿಗಾಗಿ ಒದಗಿಸಬೇಕಾಗುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ವಿಧ್ಯಾರ್ಥಿಗಳಿಗೆ ಹೆಚ್ಚು ವಸತಿ ನಿಲಯಗಳ ಅಗತ್ಯತೆ ಕಂಡು ಬರುತ್ತದೆ. ಹೆಣ್ಣು ಮಕ್ಕಳಿಗಾಗಿ ವಿಶೇಷ ವಸತಿ ಶಾಲೆಗಳನ್ನು ತೆರೆಯುವ ಅಗತ್ಯವಿದೆ. ವಿಶೇಷವಾಗಿ ಪ.ಜಾತಿ ಪ.ಪಂ ಹೆಣ್ಣು ಮಕ್ಕಳ ದಾಖಲಾತಿ ಕಡಿಮೆ ಇರುವ ತಾಲ್ಲೂಕುಗಳಲ್ಲಿ ಇವುಗಳನ್ನು ಆರಂಭಿಸಬೇಕು. ಶಿಕ್ಷಣದ ಮಹತ್ವದ ಅರಿವನ್ನು ಸ್ವಯಂ ಸೇವಕರಿಂದ, ಜಿಲ್ಲಾ ಪಂಚಾಯತಿಗಳ ಮೂಲಕ ಮತ್ತು ಸ್ವಸಹಾಯ ಸಂಘಗಳ ಮೂಲಕ ಮೂಡಿಸಬೇಕು. ಈ ಸಮುದಾಯದ ಜನರ ಭೂ ಸಂಪತ್ತು ಮತ್ತು ಬಂಡವಾಳದಲ್ಲಿಯ ಪ್ರಗತಿಗಾಗಿ ಸ್ವಸಹಾಯ ಗುಂಪುಗಳನ್ನು ರಚಿಸಿ ಇವಕ್ಕೆ ಆರ್ಥಿಕ ಸಹಾಯ ನೀಡಬೇಕು. ಈ ಜನವರ್ಗದ ಧಾರಣಾ ಸಾಮರ್ಥ್ಯವನ್ನು ಹೆಚ್ಚಿಸುವುದು ಅಗತ್ಯವಾಗಿದೆ. ಇದರಿಂದ ಅವರಲ್ಲಿ ಗ್ರಾಮ ಮಟ್ಟದ ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ಭಾಗವಹಿಸಲು ಮತ್ತು ಸಾಮಾಜಿಕ ಜವಾಬ್ದಾರಿಯ ಸಶಕ್ತೀಕರಣ ಮತ್ತು ಹಾಗೂ ಸಾಮಾಜಿಕ ಬದ್ಧತೆ ಸಾಧಿಸಲು ಸಾಮರ್ಥ ಉಂಟಾಗುತ್ತದೆ. ಈ ಸಮುದಾಯದ ಕೇರಿಗಳಿಗೆ ನೈರ್ಮಲ್ಯ ಸೌಲಭ್ಯ ನೀಡುವುದರ ಮೂಲಕ ಶುಚಿತ್ವ ಮತ್ತು ಆರೋಗ್ಯವನ್ನು ಕಾಪಾಡಬೇಕು.

ಈ ಸಮುದಾಯದ ಕಲ್ಯಾಣಕ್ಕಾಗಿ ಕಾರ್ಯರೂಪದಲ್ಲಿರುವ ಹಲವಾರು ಯೋಜನೆಗಳಾದ ಗಂಗಾ ಕಲ್ಯಾಣ, ವಿಶೇಷ ಘಟಕ ಯೋಜನೆ(ಎಸ್.ಸಿ.ಪಿ.) ಇಂತಹವುಗಳು ಸಮರ್ಥವಾಗಿ ಜಾರಿಯಾಗದೆ ತೊಡಕುಂಟಾಗಿವೆ. ಆಡಳಿತದಲ್ಲಿಯ ನಿಧಾನಗತಿಯಿಂದಾಗಿ ನಿಗದಿತ ಉದ್ದೇಶಿತ ಹಣ ಪೂರ್ಣವಾಗಿ ಬಳಕೆಯಾಗುತ್ತಿಲ್ಲ. ಇದಕ್ಕೆ ಅಗತ್ಯ ಸಿಬ್ಬಂದಿಯ ಅವಶ್ಯಕತೆಯಿದ್ದು ಸಾಮಾಜಿಕ ವ್ಯವಸ್ಥೆಯ ಹೊಣೆಗಾರಿಕೆ ಅರಿತು ತಡವಾಗದಂತೆ ಯೋಜನೆಗಳ ಜಾರಿಗೆ ಸರಾಗ ದಾರಿ ಮಾಡಬೇಕು. ಈ ಜಿಲ್ಲೆಯ ಒಟ್ಟು ಜನಸಂಖ್ಯೆಯಲ್ಲಿ ಶೇ.30ರಷ್ಟು ಇರುವ ಪ.ಜಾತಿ ಮತ್ತು ಪ.ಪಂ. ಜನರಿಗೆ ಅಧಿಕಾರ ನೀಡಿ ಮಾನವ ಅಭಿವೃದ್ಧಿಗೆ ಸಹಕರಿಸುವುದು ಜಿಲ್ಲೆಯಾದ್ಯಂತ ಅಗತ್ಯವಿದೆ.

ಚೌಕಟ್ಟು 8.3

### ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಸ್ಥಿತಿಗತಿ – ಅಧ್ಯಯನ ವರದಿಯ ಸಾರ

#### ಹಿನ್ನೆಲೆ

ಭಾರತ ಸರಕಾರದ ಅಲ್ಪಸಂಖ್ಯಾತರ ಕಲ್ಯಾಣ ಸಚಿವಾಲಯವು ದೇಶದಲ್ಲಿ ಅಲ್ಪಸಂಖ್ಯಾತರು ನೆಲೆಸಿರುವ ಹಿಂದುಳಿದ ಜಿಲ್ಲೆಗಳನ್ನು ಗುರುತಿಸಲು 8 ಮಾನದಂಡಗಳನ್ನು ಬಳಸಿಕೊಂಡಿದೆ. ಅವರ ಆರ್ಥಿಕ ಅಭಿವೃದ್ಧಿ ಮತ್ತು ಮೂಲಭೂತ ಅವಶ್ಯಕತೆಗಳ ಲಭ್ಯತೆಯ ಆಧಾರದಿಂದ 2001ರ ಜನಗಣತಿ ಅಂಕಿಅಂಶಗಳ ಮಾಹಿತಿಯ ಹಿನ್ನೆಲೆಯಲ್ಲಿ ಅವರ ಆರ್ಥಿಕ ಮಟ್ಟವನ್ನು ಸರಾಸರಿ ರಾಷ್ಟ್ರೀಯ ಮಟ್ಟಕ್ಕೆ ಎತ್ತರಿಸುವ ಸಲುವಾಗಿ ವಿವಿಧ ರೀತಿಯ ಅಭಿವೃದ್ಧಿ ಯೋಜನೆಗಳನ್ನು 11ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಲಾಗಿದೆ. ಈ ವರೆಗಿನ ನಿರೀಕ್ಷೆಯಂತೆ ಅವರಲ್ಲಿ 2001ರ ನಂತರದ ಬದಲಾವಣೆಯನ್ನು ಗುರುತಿಸಲು ಹಿಂದಿನ ಮಾನದಂಡಗಳ ಮೂಲಕ ಬೇಸ್ ಲೈನ್ ಸರ್ವೆಯನ್ನು ಆರಂಭಿಸಲಾಯಿತು. ಇದರಲ್ಲಿ ಅವರ ವಿವಿಧ ರೀತಿಯ ಅಭಿವೃದ್ಧಿ ಯೋಜನೆಯ ಜೊತೆಗೆ ಇತ್ತೀಚಿನ ಕೊರತೆಗಳು ಮತ್ತು ಆದ್ಯತೆಗಳನ್ನು ಮಾಪನ ಮಾಡಲಾಯಿತು. ಅಲ್ಪಸಂಖ್ಯಾತರು ಅಧಿಕವಾಗಿ ನೆಲೆಸಿರುವ 90 ಹಿಂದುಳಿದ ಜಿಲ್ಲೆಗಳ ಪೈಕಿ ಗುಲಬರ್ಗಾ ಜಿಲ್ಲೆಯೂ ಒಂದಾಗಿದೆ.

ಕರ್ನಾಟಕ ರಾಜ್ಯದ ಅತ್ಯಂತ ಹಿಂದುಳಿದ ಜಿಲ್ಲೆಗಳ ಪೈಕಿ ಗುಲ್ಬರ್ಗಾ ಜಿಲ್ಲೆಯೂ ಒಂದಾಗಿದೆ. ಆರ್ಥಿಕ ಅಭಿವೃದ್ಧಿಯಲ್ಲಿ ಮತ್ತು ಮಾನವ ಅಭಿವೃದ್ಧಿಯಲ್ಲಿ ರಾಜ್ಯದಲ್ಲಿಯೇ ಅತಿ ಹಿಂದುಳಿದಿರುವ ಜಿಲ್ಲೆ ಇದಾಗಿದೆ. ಈ ಜಿಲ್ಲೆಯು ಬರಪೀಡಿತವಾಗಿರುವುದರಿಂದ ಇಲ್ಲಿಯ ಬಡಜನರು ಮತ್ತು ಅಲ್ಪಸಂಖ್ಯಾತರ ಜೀವನ ಸಂಕಷ್ಟಕ್ಕೊಳಗಾಗಿದೆ.

## ಅಧ್ಯಯನ ವಿಧಾನ

## ಹಳ್ಳಿಗಳ ಆಯ್ಕೆಯನ್ನು ಈ ಕೆಳಕಂಡ ರೀತಿಯಲ್ಲಿ ಮಾಡಲಾಗಿದೆ.

ಈ ಸಮೀಕ್ಷೆ ಗ್ರಾಮೀಣ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಿಕೊಳ್ಳಲಾಗಿದೆ. ಹಾಗಾಗಿ ಇಲ್ಲಿಯ ಎಲ್ಲಾ ಅಂಕಿಅಂಶಗಳು ಮತ್ತು ಇತರೆ ಚಲಗಳು ಗ್ರಾಮೀಣ ಪ್ರದೇಶ ಮತ್ತು ಗ್ರಾಮೀಣ ಜನರಿಗೆ ಸೀಮಿತವಾಗಿವೆ. ಹಾಗೆಯೇ 2001ರ ಜನಗಣತಿಯ ಅಂಕಿಅಂಶಗಳನ್ನು ಈ ಸಮೀಕ್ಷೆಯಲ್ಲಿ ಬಳಸಿಕೊಳ್ಳಲಾಗಿದೆ. ಈವರೆಗೆ ಧರ್ಮದ ಆಧಾರದ ಜನಸಂಖ್ಯೆಯ ಮಾಹಿತಿ ತಾಲ್ಲೂಕು ಮಟ್ಟದವರೆಗೆ ಮಾತ್ರ ಸಿಗುತ್ತದೆ. ಹಾಗಾಗಿ ಇದರ ರಚನೆಯನ್ನು ತಾಲ್ಲೂಕು ಮಟ್ಟದಲ್ಲಿಯೇ ಮಾಡಲಾಗಿದೆ.

ಮೊದಲಿಗೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಅಲ್ಪಸಂಖ್ಯಾತರ ಜನಸಂಖ್ಯೆಗನುಗುಣವಾಗಿ ಅವರೋಹಣ ಕ್ರಮದಲ್ಲಿ ಜೋಡಿಸಿಕೊಳ್ಳಲಾಯಿತು. ಆಮೇಲೆ ಎಲ್ಲಾ ತಾಲ್ಲೂಕುಗಳನ್ನು (ತಹಶಿಲ್) ಮೂರು ಹಂತಗಳನ್ನಾಗಿ ವಿಂಗಡಿಸಿಕೊಳ್ಳಲಾಯಿತು. ಒಂದು, ಜನಸಂಖ್ಯೆಗನುಗುಣವಾಗಿ ಆಯ್ಕೆ ಮಾಡಿದ ಶೇ.20ರಷ್ಟು ತಾಲ್ಲೂಕುಗಳು. ಎರಡು ಜನಸಂಖ್ಯೆಯಲ್ಲಿ ಮಧ್ಯಮ ಗಾತ್ರದ ಶೇಕಡಾ 50ರಷ್ಟು ತಾಲ್ಲೂಕುಗಳನ್ನು ಪರಿಗಣಿಸಲಾಯಿತು. ಮೂರು, ಉಳಿದ ಶೇ.30ರಷ್ಟನ್ನು ಕೆಳಮಟ್ಟವೆಂದು ಪರಿಗಣಿಸಲಾಯಿತು. ಮೂರು ಗುಂಪುಗಳಲ್ಲಿ ಮೂವತ್ತು ಹಳ್ಳಿಗಳನ್ನು ಸಂಭವನೀಯ ಅನುಪಾತದ ವಿಧಾನವನ್ನು ಅಳವಡಿಸಿಕೊಂಡು ಆಯ್ಕೆ ಮಾಡಿಕೊಳ್ಳಲಾಯಿತು. ಆಯ್ಕೆಯಾದ ಪ್ರತಿ ಹಳ್ಳಿಗೂ ನಿಗದಿತ ಹಂತದ ಗುಂಪಿನ ಕುಟುಂಬಗಳ ಪಟ್ಟಿಯಲ್ಲಿ ಸಹಾ ಅಲ್ಪಸಂಖ್ಯಾತರ ಕುಟುಂಬದ ಸ್ಥಿತಿಯನ್ನು ದಾಖಲಿಸಲಾಯಿತು. ಅಂದರೆ ಎಲ್ಲಾ ಮುಸಲ್ಮಾನ ಕುಟುಂಬಗಳನ್ನು ಎರಡನೇ ಹಂತದ ಒಂದು ಗುಂಪಾಗಿ, ಎಲ್ಲಾ ಭೌದ್ಧ ಧರ್ಮದ ಕುಟುಂಬಗಳನ್ನು ಮತ್ತೊಂದು ಹಂತದ ಗುಂಪನ್ನಾಗಿ ಮಾಡಿ ಇದೇರೀತಿ ವಿಭಾಗಿಸಿಕೊಳ್ಳಲಾಯಿತು.

ಆಯ್ಕೆಯಾದ ಪ್ರತಿ ಹಳ್ಳಿಯಲ್ಲಿ ಸುಮಾರು 30 ಕುಟುಂಬಗಳನ್ನು ಆಯ್ಕೆ ಮಾಡಿಕೊಂಡು ಸಮಗ್ರವಾಗಿ ಸಮೀಕ್ಷೆ ಮಾಡಲಾಯಿತು. ಈ 30 ಕುಟುಂಬಗಳನ್ನು ಪ್ರತಿ ಹಳ್ಳಿಗಳಿಂದ ಆಯ್ಕೆ ಮಾಡಿಕೊಳ್ಳಲಾಯಿತು. ಸಮೀಕ್ಷೆಗೆ ಅಗತ್ಯವಿದ್ದ ಕುಟುಂಬಗಳ ಸಂಖ್ಯೆಯನ್ನು ಪ್ರತಿ ಎರಡನೆ ಹಂತದ ಗುಂಪಿನಿಂದ ಎಸ್.ಕೆ.ಎಸ್.ಡಬ್ಲ್ಯೂ.ಓ.ಆರ್. ವಿಧಾನದಲ್ಲಿ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಒಂದುವೇಳೆ ಹಳ್ಳಿಯಲ್ಲಿ 30ಕ್ಕಿಂತ ಕಡಿಮೆ ಕುಟುಂಬಗಳು ಕಂಡು ಬಂದರೆ ಆ ಹಳ್ಳಿಯ ಎಲ್ಲಾ ಕುಟುಂಬಗಳನ್ನೂ ಸಮೀಕ್ಷೆಗೆ ಆಯ್ಕೆ ಮಾಡಿಕೊಳ್ಳಲಾಯಿತು.

## ಜಿಲ್ಲೆಯ ಪರಿಚಯ (2001ರ ಜನಗಣತಿ, ಗ್ರಾಮೀಣ ಭಾಗ)

ಗುಲಬರ್ಗಾ ಜಿಲ್ಲೆಯು ಮೂಲತಃ ಒಂದು ಗ್ರಾಮೀಣ ಜಿಲ್ಲೆಯಾಗಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇ.72ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ (1360 ಹಳ್ಳಿಗಳು). ನಗರ ಪ್ರದೇಶದ ಜನರು ಮುಖ್ಯವಾಗಿ ಕಂಡುಬರುವುದು ಗುಲ್ಬರ್ಗಾ, ಚಿತ್ತಾಪುರ, ಸೇಡಂ ಮತ್ತು ಯಾದಗಿರಿ ಪಟ್ಟಣಗಳಲ್ಲಿ (ಜನಗಣತಿ 2001) ಮಾತ್ರ.

ಜಿಲ್ಲೆಯು ಪ್ರಮುಖವಾಗಿ ಅಲ್ಪಸಂಖ್ಯಾತ ಜನಸಂಖ್ಯೆಯನ್ನು ಹೆಚ್ಚು ಪ್ರಮಾಣದಲ್ಲಿ ಒಳಗೊಂಡಿದೆ. ಮುಸಲ್ಮಾನರು ಶೇ. 11.6ರಷ್ಟು ಗ್ರಾಮೀಣ ಪ್ರದೇಶದಲ್ಲಿ ಕಂಡು ಬರುತ್ತಾರೆ. ರಾಜ್ಯ ಮಟ್ಟದಲ್ಲಿ ಅವರ ಪ್ರಮಾಣ ಶೇ. 7.6 ರಷ್ಟಾಗಿದೆ. ಅಲ್ಪಸಂಖ್ಯಾತರ ಪ್ರಮಾಣವು ರಾಜ್ಯಮಟ್ಟದಲ್ಲಿನ ಶೇ. 10.3 ಕ್ಕೆ ಪ್ರತಿಯಾಗಿ ಜಿಲ್ಲೆಯಲ್ಲಿ ಶೇ. 18ರಷ್ಟಿದೆ. ಪ.ಜಾತಿ ಜನಸಂಖ್ಯೆಯು ಒಟ್ಟು ಜನಸಂಖ್ಯೆಯ ಶೇ25ರಷ್ಟಿದ್ದಾರೆ. (ರಾಜ್ಯ ಸರಾಸರಿ ಶೇ. 18.4).

ಗ್ರಾಮೀಣ ಸಾಕ್ಷರತಾ ಮಟ್ಟ ಶೇ. 43.1 ಆಗಿದ್ದು ಇದು ರಾಜ್ಯ ಮತ್ತು ರಾಷ್ಟ್ರಮಟ್ಟದ ಸರಾಸರಿಗಿಂತ ತುಂಬಾ ಕೆಳಮಟ್ಟದ್ದಾಗಿದೆ. ಹೆಣ್ಣುಮಕ್ಕಳ ಸಾಕ್ಷರತಾ ಪ್ರಮಾಣ ಕೂಡ

ತುಂಬಾ ಕೆಳಮಟ್ಟದಲ್ಲಿದೆ. ಅದು ಶೇ.29.4ರಷ್ಟಿದೆ. ಇದರಿಂದ ಶೇ. 70ರಷ್ಟು ಗ್ರಾಮೀಣ ಮಹಿಳೆಯರು ಅರಿವು ಮತ್ತು ಶಿಕ್ಷಣದ ಸೌಲಭ್ಯದಿಂದ ವಂಚಿತರಾಗಿರುವುದು ಕಂಡು ಬರುತ್ತದೆ ಮತ್ತು ಅವರು ಹೆಚ್ಚಿನ ದುಸ್ಥಿತಿ ಅನುಭವಿಸುತ್ತಿರುವುದು ಗೊತ್ತಾಗುತ್ತದೆ.

ಒಟ್ಟಾರೆ ದುಡಿಮೆ ಸಹಭಾಗಿತ್ವದ ಪ್ರಮಾಣ ಶೇ. 43.12ರಷ್ಟಿದೆ. ಅದೇ ಮಹಿಳಾ ದುಡಿಮೆಗಾರರ ದುಡಿಮೆ ಸಹಭಾಗಿತ್ವ ಪ್ರಮಾಣ ಕೇವಲ ಶೇ. 34.9ರಷ್ಟಿದೆ. ಜಿಲ್ಲೆಯಲ್ಲಿ ಶೇ. 67ರಷ್ಟು ಪ್ರಮುಖ ದುಡಿಮೆಗಾರರು ಕೃಷಿ ಕೆಲಸಗಳಲ್ಲಿ ನಿರತರಾಗಿದ್ದಾರೆ. ಇವರಲ್ಲಿ ಶೇ. 40ರಷ್ಟು ದುಡಿಮೆಗಾರರು ಕೃಷಿ ಕೂಲಿಗಳಾಗಿದ್ದಾರೆ. ಒಟ್ಟು ಕೆಲಸಗಾರರಲ್ಲಿ ಶೇ. 25ರಷ್ಟು ಕೆಲಸಗಾರರು ಅಂಚಿನ ಕೂಲಿಗಳಾಗಿದ್ದಾರೆ. ಜಿಲ್ಲೆಯಲ್ಲಿ ಶೇ. 30.4ರಷ್ಟು ದುಡಿಮೆಗಾರರು ಸೇವಾ ವಲಯಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಾಗಾಗಿ ದುಡಿಮೆ ಸಹಭಾಗಿತ್ವ ಪ್ರಮಾಣವು ಅಧಿಕವಾಗಿರುವುದು ಕಂಡು ಬರುತ್ತದೆ. ಒಣಭೂಮಿ ವ್ಯವಸಾಯದಲ್ಲಿ ದುಡಿಮೆಯ ಲಭ್ಯತೆಯು ತುಂಬಾ ಕಡಿಮೆ. ಇವರಲ್ಲಿ ಬಹುಪಾಲು ಕೆಲಸಗಾರರು ಸಾಮಾನ್ಯ ಕೃಷಿ ಕೂಲಿಗಳಾಗಿ ಅಸಂಪ್ರದಾಯಿಕ ವಲಯದಲ್ಲಿ ದುಡಿಯುತ್ತಿದ್ದಾರೆ. ಇದು ಜಿಲ್ಲೆಯ ಜನರು ಕೆಳಮಟ್ಟದ ಜೀವನ ಸಾಗಿಸುತ್ತಿದ್ದಾರೆ ಎನ್ನುವುದನ್ನು ಸೂಚಿಸುತ್ತದೆ. ಅಸಂಘಟಿತ ವಲಯದಲ್ಲಿಯ ಕೆಲಸಗಾರರು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದ್ದಾರೆ. ಇವರಿಗೆ ತುಂಬಾ ಕಡಿಮೆ ಕೂಲಿ ದೊರೆಯುತ್ತದೆ ಮತ್ತು ಕೆಲಸದಲ್ಲಿ ಅವರಿಗೆ ಯಾವುದೆ ಭದ್ರತೆಯಿಲ್ಲವಾಗಿದೆ.

ಗ್ರಾಮಮಟ್ಟದಲ್ಲಿ ಮೂಲ ಸೌಕರ್ಯಗಳ ಕೊರತೆ ಇದೆ. ಇದು ಹಳ್ಳಿಗಳ ಅಭಿವೃದ್ಧಿಗೆ ಪ್ರಮುಖ ತೊಡಕಾಗಿ ಪರಿಣಮಿಸಿದೆ. ಕುಡಿಯುವ ನೀರು ಮತ್ತು ಆರೋಗ್ಯ ಸೌಲಭ್ಯಗಳಿಂದ ತೀವ್ರ ಕೊರತೆಯನ್ನು ಹಳ್ಳಿಗಳು ಎದುರಿಸುತ್ತಿವೆ. ಕೇವಲ ಶೇ.29ರಷ್ಟು ಹಳ್ಳಿಗಳು ಮಾತ್ರ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು 5 ಕಿ.ಮೀ ಅಂತರದಲ್ಲಿ ಹೊಂದಿವೆ ಮತ್ತು ಶೇ.13.4ರಷ್ಟು ಹಳ್ಳಿಗಳಿಗೆ ಮಾತ್ರ ಹೆರಿಗೆ ಮತ್ತು ಮಕ್ಕಳ ಆರೈಕೆಯ ಕೇಂದ್ರಗಳು 5 ಕಿ.ಮೀ. ಅಂತರದಲ್ಲಿ ಲಭ್ಯವಿವೆ. (ರಾಜ್ಯ ಸರಾಸರಿ ಶೇ.23.6) ಒಂದು ಲಕ್ಷ ಜನಸಂಖ್ಯೆಗೆ ಇರುವ ಕೊಳಾಯಿಗಳ ಸಂಖ್ಯೆ ಕೇವಲ 34. ರಾಜ್ಯದ ಸರಾಸರಿ 43 ಇದೆ. ಅದೇ ಪ್ರಕಾರವಾಗಿ ಕೊಳವೆ ಬಾವಿ ಮತ್ತು ಕೈ ಪಂಪುಗಳ ಕೊರತೆಯೂ ಇದೆ. ರಾಜ್ಯವು ಸರಾಸರಿಯಾಗಿ ನಿರ್ಧರಿಸಿರುವ ಕನಿಷ್ಠ ಅವಶ್ಯಕತೆಗಳನ್ನು ಆದ್ಯತೆ ಮೇಲೆ ದೊರಕಿಸಿಕೊಡುವ ಅಗತ್ಯವಿದೆ. ಇಲ್ಲಿ ಉನ್ನತ ಮಟ್ಟದ ಶಿಕ್ಷಣ ಸಂಸ್ಥೆಗಳು ಮತ್ತು ಶಾಲಾ ಹಾಗೂ ಹಣ ಹೂಡಿಕೆ ಮಾಡುವ ಸಂಸ್ಥೆಗಳ ಕೊರತೆ ಇದೆ. ಇವು ಪ್ರತಿ ಹಳ್ಳಿಗೂ 5 ಕಿ.ಮೀ. ಅಂತರದಲ್ಲಿ ದೊರೆಯುವಂತೆ ಕ್ರಮ ಕೈಗೊಳ್ಳಬೇಕಾಗಿದೆ. ಪ್ರಮುಖವಾಗಿ ತುಂಬಾ ವಿರಳವಾಗಿ ನೆಲೆಗೊಂಡಿರುವ ಸಂಗತಿಗಳೆಂದರೆ ಬ್ಯಾಂಕ್‌ಗಳು ಮತ್ತು ಮೂಲಭೂತ ಸೌಲಭ್ಯಗಳಾದ ಆಧುನಿಕ ಕೃಷಿ ಉತ್ಪಾದಕ ಸೌಕರ್ಯಗಳು. ಇವುಗಳು ಕೃಷಿಕರಿಗೆ ದೊರೆಯುವಂತಾಗಬೇಕು.

## ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ ಸ್ಥಿತಿಗತಿ ಮತ್ತು ಇತರ ಸವಲತ್ತುಗಳು : ಸಮೀಕ್ಷೆಯ ಪ್ರಮುಖ ತಥ್ಯಗಳು

ಜಿಲ್ಲೆಯಲ್ಲಿ 2008ರಲ್ಲಿ ನಡೆದ ಸಮೀಕ್ಷ ಆಧಾರದಿಂದ ಇದು ಅಖಿಲಭಾರತ ಸರಾಸರಿ 8 ಸೂಚಿಗಳ ಪೈಕಿ ನಾಲ್ಕು (ಶೇ.50) ರಲ್ಲಿ ಹಿಂದುಳಿದಿದೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸೂಚಿಗಳಲ್ಲಿಯೂ ಅದು ಹಿಂದುಳಿದಿದೆ. ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಅಖಿಲ ಭಾರತ ಮತ್ತು ಗುಲ್ಬರ್ಗಾ ಜಿಲ್ಲೆಯ ನಡುವಿನ ಅಂತರದ ಅಂಕಿ ಅಂಶಗಳಲ್ಲಿ 10 ಸೂಚಿಗಳು ಪರಸ್ಪರ ವಿರುದ್ಧವಾಗಿವೆ. ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಆದ್ಯತೆಯೂ ಕೂಡ ಪರಸ್ಪರ ವಿರೋಧಭಾಸದಿಂದ ಕೂಡಿವೆ. ಇವು 2008ರಲ್ಲಿ ಜಿಲ್ಲೆಯ ಸಮೀಕ್ಷೆಯಿಂದ ಹೊರಬಂದ ಅಂಕಿಅಂಶಗಳು ಮತ್ತು 2004–05 ಮತ್ತು 2005–06ರ ಅಖಿಲ ಭಾರತದ ಅಂಕಿಅಂಶಗಳ ಆಧಾರವಾಗಿದೆ. ಅಖಿಲ ಭಾರತ ಮಟ್ಟದ ಅಂಕಿಅಂಶಗಳು ಗುಲ್ಬರ್ಗಾ ಜಿಲ್ಲಾಮಟ್ಟದ ಅಂಕಿಅಂಶಗಳಿಗಿಂತ ಹೆಚ್ಚಾಗಿದೆ. ಭಾರತದ ಅಂಕಿ ಅಂಶಗಳು ಇತ್ತೀಚಿನದಲ್ಲ.

## ಆದ್ಯತಾನುಸಾರ ಅಭಿವೃದ್ಧಿಯ ಎಂಟು ಸೂಚ್ಯಾಂಕಗಳು

### 1. ನೈರ್ಮಲ್ಯ ವ್ಯವಸ್ಥೆ:

ಜಿಲ್ಲೆಯ ಗ್ರಾಮೀಣ ಭಾಗದ ಕುಟುಂಬಗಳಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದಿರುವುದು ಗಂಭೀರ ಸಮಸ್ಯೆಯಾಗಿದೆ. ಕೇವಲ ಶೇ.5ರಷ್ಟು ಕುಟುಂಬಗಳು ಮಾತ್ರ ಈ ಸೌಲಭ್ಯವನ್ನು ಹೊಂದಿವೆ. ಉಳಿದ ಎಲ್ಲರೂ ಬಯಲಿನಲ್ಲಿ ಮಲವಿಸರ್ಜನೆ ಮಾಡುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಇದರಲ್ಲಿ ಹಿಂದೂ ಅಥವಾ ಮುಸ್ಲಿಂ ಸಮುದಾಯಗಳೆರಡರಲ್ಲೂ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ.

ನೈರ್ಮಲ್ಯ ವ್ಯವಸ್ಥೆಯು ಜನರ ಉತ್ತಮ ಆರೋಗ್ಯಕ್ಕಿರುವ ಪ್ರಮುಖ ಸಾಧನ. ಜಿಲ್ಲೆಯಾದ್ಯಂತ ಶೌಚಾಲಯ ಆಂದೋಲನ ಅಭಿಯಾನದ ಮೂಲಕ 2009 ವೇಳೆಗೆ ಎಲ್ಲರಿಗೂ ಶೌಚಾಲಯ ವ್ಯವಸ್ಥೆ ದೊರಕಿಸಿಕೊಡಬೇಕೆಂದಿದ್ದರೂ ಜಿಲ್ಲೆಯಲ್ಲಿ ನಿಗದಿತ ಗುರಿ ಸಾಧಿಸಲು ಸಾಧ್ಯವಾಗಿಲ್ಲ. ರಾಷ್ಟ್ರ ಮತ್ತು ಜಿಲ್ಲೆಯ ಶೌಚಾಲಯ ಸೌಲಭ್ಯದ ನಡುವಿನ ಅಂತರ ಶೇ.34.2ರಷ್ಟಿದೆ. ಒಳಚರಂಡಿ ವ್ಯವಸ್ಥೆಯೂ ಕೂಡ ಗ್ರಾಮೀಣ ಭಾಗದಲ್ಲಿ ಕಂಡುಬರುವುದಿಲ್ಲ. ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ವಿವಿದೋದ್ದೇಶ ಯೋಜನೆಗಳನ್ನು ಜಿಲ್ಲೆಯಾದ್ಯಂತ ಕೈಗೊಳ್ಳಬೇಕಾಗಿದೆ.

### 2. ಶಿಕ್ಷಣ ಮತ್ತು ಸಾಕ್ಷರತೆ – ವಿಶೇಷವಾಗಿ ಹೆಣ್ಣು ಮಕ್ಕಳ ಸಾಕ್ಷರತೆ

ತುಂಬಾ ಕ್ಷೀಣವಾಗಿರುವ ಮತ್ತು ತಕ್ಷಣವೇ ಗಮನಹರಿಸಬೇಕಾಗಿರುವ ಮತ್ತೊಂದು ಮಸುಕಾದ ವಲಯವೆಂದರೆ ಶಿಕ್ಷಣ. ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ. 51.3ರಷ್ಟಿದ್ದು ರಾಜ್ಯ ಸರಾಸರಿಗಿಂತ

ಕೋಷ್ಟಕ 8.8

**ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯಲ್ಲಿನ ಅಂತರಗಳು**

| ಸೂಚಿಗಳು | ಗುಲಬರ್ಗಾ 2008 | ಅಖಿಲ ಭಾರತ 2005 | ಜಿಲ್ಲೆ ಮತ್ತು ಅಖಿಲ ಭಾರತ ನಡುವಿನ ಅಂತರ | ಅಂತರವನ್ನು ಆಧರಿಸಿ ಆದ್ಯತೆಗಳು |
|---|---|---|---|---|
| | 1 | 2 | (3=1– 2) | 4 |
| ಸಾಕ್ಷರತಾ ಪ್ರಮಾಣ | 51.3 | 67.3 | –16.0 | 2 |
| ಮಹಿಳೆಯರ ಸಾಕ್ಷರತ ಪ್ರಮಾಣ | 43.1 | 57.1 | –14.02 | 3 |
| ದುಡಿಮೆ ಸಹಭಾಗಿತ್ವ ಪ್ರಮಾಣ | 44.26 | 38 | 6.26 | 6 |
| ಮಹಿಳೆಯರ ದುಡಿಮೆ ಸಹಭಾಗಿತ್ವ ಪ್ರಮಾಣ | 32.53 | 21.5 | 11.03 | 7 |
| ಪಕ್ಕಾ ಮನೆಗಳಿರುವ ಕುಟುಂಬಗಳ ಪ್ರಮಾಣ | 65.22 | 59.4 | 5.82 | 5 |
| ಶುದ್ಧ ಕುಡಿಯುವ ನೀರು ಪಡೆಯುತ್ತಿರುವ ಕುಟುಂಬಗಳೂ | 74.78 | 87.9 | –13.12 | 4 |
| ವಿದ್ಯುಚ್ಚಕ್ತಿ ಸಂಪರ್ಕ ಪಡೆದಿರುವ ಕುಟುಂಬಗಳ ಪ್ರಮಾಣ | 90.78 | 67.9 | 22.88 | 8 |
| ನೀರಿನ ಸಂಪರ್ಕವಿರುವ ಶೌಚಾಲಯಗಳಿರುವ ಕುಟುಂಬಗಳ ಪ್ರಮಾಣ | 5.00 | 39.2 | –34.2 | 1 |
| ಚುಚ್ಚುಮದ್ದು ಹಾಕಿಸಿಕೊಂಡಿರುವ ಮಕ್ಕಳ ಪ್ರಮಾಣ | 57.78 | 43.5 | 14.28 | – |
| ಆರೋಗ್ಯ ಸೌಲಭ್ಯವಿರುವ ಸ್ಥಳದಲ್ಲಿ ನಡೆದ ಹೆರಿಗೆ ಪ್ರಮಾಣ | 23.35 | 38.7 | –15.35 | – |

ಟಿಪ್ಪಣ:(1) ಜಿಲ್ಲೆಯ ಸಮೀಕ್ಷೆಯ ಮಾಹಿತಿಯು ಗ್ರಾಮೀಣ ವಲಯಕ್ಕೆ ಅನ್ವಯವಾಗುತ್ತದೆ.(ಅಂಕಣ–1) ಆದರೆ ಅಖಿಲ ಭಾರತ ಮಾಹಿತಿಯು ಒಟ್ಟು ಪ್ರದೇಶಕ್ಕೆ ಅನ್ವಯವಾಗುತ್ತದೆ (ಅಂಕಣ–2)

(2) ಅಂಕಣ–2ರ ಕ್ರಮ ಸಂಖ್ಯೆ 5 ರಿಂದ 8ರವರೆಗೆ ಎನ್‌ಎಫ್‌ಎಚ್‌ಎಸ್ ನ 2005–06ನೆಯ ಸಾಲಿಗೆ ಅನ್ವಯವಾಗುತ್ತವೆ ಮತ್ತು ಅಂಕಣದಲ್ಲಿನ ಉಳಿದ ಕ್ರಮಸಂಖ್ಯೆ. ಮಾಹಿತಿಯು ಎನ್‌ಎಸ್‌ಎಸ್‌ಒನ 20004–05ನೆಯ ಸಾಲಿಗೆ ಅನ್ವಯವಾಗುತ್ತವೆ.,

(ಶೇ. 66.6) ತುಂಬಾ ಕಡಿಮೆಯಿದೆ. (2001). ರಾಷ್ಟ್ರದ ಸರಾಸರಿ ಶೇ. 67.3ರಷ್ಟಿರುತ್ತದೆ. ಹೆಣ್ಣುಮಕ್ಕಳ ಸಾಕ್ಷರತಾ ಪ್ರಮಾಣ ಶೇ.43.1 ಇದ್ದು, ಇದು ರಾಜ್ಯ ಸರಾಸರಿ (ಶೇ.56.6) ಗಿಂತ ತುಂಬಾ ಕೆಳಮಟ್ಟದಲ್ಲಿದೆ.(2001) ಅದೇರೀತಿ ರಾಷ್ಟ್ರದ ಸರಾಸರಿ (57.1) ಗಿಂತಲೂ ತುಂಬಾ ಕೆಳಮಟ್ಟದಲ್ಲಿರುವುದು ಕಂಡುಬರುತ್ತದೆ. ಗ್ರಾಮೀಣ ಮಹಿಳಾ ಸಾಕ್ಷರತಾ ಪ್ರಮಾಣ 2001ರಲ್ಲಿ ಕೇವಲ ಶೇ.27.4 ರಷ್ಟಿತ್ತು. ಸಾಕ್ಷರತೆಯು ಬೆಳವಣಿಗೆ ನಿಧಾನಗತಿಯಲ್ಲಿ ನಡೆದಿದೆ. ಜಿಲ್ಲೆಯು ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮಗಳು ಮತ್ತು ಸರ್ವ ಶಿಕ್ಷಾ ಅಭಿಯಾನ ಯೋಜನೆಗಳು ಜಿಲ್ಲಾಡಳಿತಕ್ಕೊಳಪಟ್ಟಿವೆ. ಶಿಕ್ಷಣವು ಹಿಂದುಳಿದ ಸಮುದಾಯಗಳ ಸಶಕ್ತೀಕರಣಕ್ಕೆ ಪ್ರಮುಖವಾದ ಸಾಧನವಾಗಿದೆ. ಆದಕಾರಣ ವಿವಿಧ ಹಂತದಲ್ಲಿ ಕಾರ್ಯಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಅಗತ್ಯವಿದೆ. ಕುಟುಂಬ ಸಮೀಕ್ಷೆಯಿಂದ ಬಂದ ಸಾರಾಂಶದ ಪ್ರಕಾರ ಕೆಲಸದ ಕೌಶಲ್ಯ ಮತ್ತು ಶಿಕ್ಷಣವು ಉತ್ತಮ ಸಂಪಾದನೆಗೆ ಅಗತ್ಯವಾಗುತ್ತದೆ. ನಂತರ ಆಸ್ತಿಪಾಸ್ತಿ ಉಳ್ಳವರ ಕುಟುಂಬಗಳು ತುಂಭಾ ಕಡಿಮೆ ಇವೆ. ಆದಕಾರಣ ಜನರು ಸಶಕ್ತರಾಗುವುದಕ್ಕೆ ಶಿಕ್ಷಣ ಮತ್ತು ಕೆಲಸದ ಕೌಶಲದಂತಹ ಉಪಕರಣಗಳು ತುಂಬಾ ಪರಿಣಾಮಕಾರಿಯಾದವುಗಳಾಗಿವೆ. ಹೆಣ್ಣುಮಕ್ಕಳ ಪ್ರೌಢಶಾಲೆಗಳ ಜೊತೆಗೆ ವಸತಿನಿಲಯಗಳ ವ್ಯವಸ್ಥೆಯು ಮುಖ್ಯವಾಗಿ ಹೆಣ್ಣುಮಕ್ಕಳ ಸಾಕ್ಷರತೆ ಸಶಕ್ತರಾಗುವುದಕ್ಕೆ ಪ್ರೋತ್ಸಾಯಿಸುತ್ತದೆ. ಬಡ ಕುಟುಂಬಗಳ ಉನ್ನತ ವ್ಯಾಸಂಗಕ್ಕೆ ಅಗತ್ಯ ಧನಸಹಾಯವನ್ನು ಉದಾರವಾಗಿ ನೀಡಬೇಕು. ಪ್ರಾಥಮಿಕ ಶಾಲೆ ಮತ್ತು ಉಚಿತ ಊಟ, ವಸತಿಸೌಲಭ್ಯ ಮತ್ತು ಆಟೋಟಗಳ ಸೌಲಭ್ಯಗಳನ್ನು ನೀಡುವುದರ ಮೂಲಕ ಮಕ್ಕಳು ಶಾಲೆಗೆ ಬರುವಂತೆ ಆಕರ್ಷಣೆ ಮಾಡಬೇಕಾಗಿದೆ.

## 3. ಸುರಕ್ಷಿತ ಕುಡಿಯುವ ನೀರು

ಇದೊಂದು ಪ್ರಮುಖ ಹಾಗೂ ಕಾಳಜಿ ವಹಿಸಲೇಬೇಕಾದ ಸಂಗತಿಯಾಗಿದೆ. ಜಿಲ್ಲೆಯಲ್ಲಿ ಶೇ.25ರಷ್ಟು ಗ್ರಾಮೀಣ ಕುಟುಂಬಗಳಿಗೆ ಸುರಕ್ಷಿತ ಕುಡಿಯುವ ನೀರು ದೊರೆಯುತ್ತಿಲ್ಲ. ಇತ್ತೀಚಿನ ವರ್ಷಗಳಲ್ಲಿ ಅನೇಕ ಗ್ರಾಮೀಣ ನೀರು ಸರಬರಾಜು ಯೋಜನೆಗಳ ಅನುಷ್ಠಾನದಿಂದಾಗಿ ಶೇ. 74.78ರಷ್ಟು ಮಟ್ಟಕ್ಕೆ ಕುಡಿಯುವ ನೀರನ್ನು ದೊರೆಯುವಂತೆ ಮಾಡಲಾಗಿದೆ. ಆ ಯೋಜನೆಗಳನ್ನು ಮುಂದಿನ ದಿನಗಳಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಅಗತ್ಯವಿದೆ, ಸಮೀಕ್ಷೆಯ ಸಂದರ್ಭದಲ್ಲಿ ಕಂಡುಬಂದ ಸಂಗತಿಗಳೆಂದರೆ ಅನೇಕ ಕಿರುನೀರು ಸರಬರಾಜು ಯೋಜನೆಗಳು ಮತ್ತು ಕೊಳವೆ ನೀರುಸರಬರಾಜು ಯೋಜನೆಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ. ನೀರಿನ ಸೋರಿಕೆ, ಪೈಪುಗಳ ಒಡೆದಿರುವುದು ಕಂಡು ಬಂದವು. ವಾರ್ಷಿಕ ಬಜೆಟ್‌ನಲ್ಲಿ ದುರಸ್ತಿಗೆ ಯಾವುದೇ ರೀತಿಯ ಹಣವನ್ನು ತೆಗೆದಿರಿಸಿಲ್ಲ. ಇದರಿಂದ ಗ್ರಾಮೀಣ ಮಹಿಳೆಯರಿಗೆ ತುಂಬಾ ಅನಾನುಕೂಲ ಮತ್ತು ಹೆಚ್ಚಿನ ಆಯಾಸ ಸಂಭವಿಸುತ್ತದೆ. ಗ್ರಾಮೀಣ ಕುಟುಂಬಗಳು ಮೂಲಭೂತ ಅವಶ್ಯಕತೆಗಳಿಂದ ವಂಚಿತರಾಗಿದ್ದಾರೆ. ಮನೆಮನೆಗಳಿಗೆ ನೀರು ಸರಬರಾಜು ಮಾಡುವ ಯೋಜನೆಗಳು ಜಾರಿಯಾಗಬೇಕು. ಮತ್ತು ಅಗತ್ಯವಿರುವಷ್ಟು ನೀರನ್ನು ದಿನನಿತ್ಯ ಒದಗಿಸುವ ಭರವಸೆ ನೀಡಬೇಕು.

## 4. ಉದ್ಯೋಗಾವಕಾಶಗಳು

ದುಡಿಮೆ ಸಹಭಾಗಿತ್ವ ಪ್ರಮಾಣವು ಜಿಲ್ಲೆಯಲ್ಲಿ ರಾಷ್ಟ್ರಮಟ್ಟದ ಸರಾಸರಿಗಿಂತಲೂ ಹೆಚ್ಚಾಗಿದೆ. ಉದ್ಯೋಗವು ಪ್ರಮುಖವಾಗಿ ಮಳೆಯಾಶ್ರಿತ ಒಣ ಕೃಷಿ ಕೆಲಸವಾಗಿದೆ. ಇಲ್ಲಿ ಉದ್ಯೋಗ ಭರವಸೆ ಇಲ್ಲ. ಮತ್ತು ಕಡಿಮೆ ಸಂಭಾವನೆಯಾಗಿರುತ್ತದೆ. ಆದ್ದರಿಂದ ಉದ್ಯೋಗಕ್ಕೆ ಮೊದಲ ಆದ್ಯತೆಯನ್ನು ಕೊಡಬೇಕು. ಏಕೆಂದರೆ ಈಗಿರುವ ಉದ್ಯೋಗದಿಂದ ಸಂತೃಪ್ತ ಜೀವನವನ್ನು ನಡೆಸಲು ಆಗುವುದಿಲ್ಲ. ಸರಾಸರಿ ಪುರುಷರು ಕೃಷಿ ಚಟುವಟಿಕೆಗಳಲ್ಲಿ ಕೆಲಸ ಮಾಡುವುದಕ್ಕೆ ದಿನ ಒಂದಕ್ಕೆ ಕೇವಲ ರೂ.50 ಗಳನ್ನು ಕೂಲಿ ಪಡೆಯುತ್ತಿದ್ದಾರೆ. ಅಲ್ಲದೆ ಉದ್ಯೋಗ ದೊರಕುವುದು ವರ್ಷದಲ್ಲಿ ಕೇವಲ 6ರಿಂದ 8ತಿಂಗಳುಗಳು ಮಾತ್ರ. ಮಹಿಳಾಕೂಲಿಯ ಪ್ರಮಾಣ ಕೇವಲ ದಿನಕ್ಕೆ ರೂ. 30 ರಷ್ಟಿದೆ. ಒಟ್ಟು ಕೆಲಸಗಾರರಲ್ಲಿ ಹೆಚ್ಚಿನವರು ಮಹಿಳಾ ದುಡಿಮೆಗಾರರಾಗಿದ್ದಾರೆ. ಇವರೆಲ್ಲರೂ ಅಂಚಿನ ಕೂಲಿಗಾರರು.

ಜಿಲ್ಲೆಯಲ್ಲಿ ಸೇವಾವಲಯವು ಬೆಳಣಿಗೆಯಾಗುತ್ತಿದೆ. ಇದರ ಬೆಳವಣಿಗೆಯನ್ನು ಸ್ಥಿರಗೊಳಿಸುವುದರ ಮೂಲಕ ಹೆಚ್ಚಿನ ಬಡಕುಟುಂಬದವರಿಗೆ ಈ ವಲಯದಲ್ಲಿ ದುಡಿಯಲು ಸಾಲದ ಸೌಲಭ್ಯ ಮತ್ತು ಕೌಶಲ್ಯದ ಅವಕಾಶವನ್ನು ಮಾಡಿಕೊಡಬೇಕು. ಮುಸಲ್ಮಾನ ಸಮುದಾಯದವರಲ್ಲಿ ಸಣ್ಣ ಪ್ರಮಾಣದ ಉದ್ದಿಮೆದಾರರು ಮತ್ತು ಸಣ್ಣ ಪ್ರಮಾಣದ ಕೈಗಾರಿಕೆ ಮತ್ತು ವ್ಯಾಪಾರದಲ್ಲಿ ತೊಡಗಿಕೊಂಡಿರುವುದು ಕಂಡುಬರುತ್ತದೆ. ಈ ನಿರ್ಧಿಷ್ಟ ಕ್ಷೇತ್ರಕ್ಕೆ ಅಗತ್ಯವಿರುವ ಯೋಜನೆ ರೂಪಿಸಿ ತರಬೇತಿ ಮತ್ತು ಕೌಶಲ್ಯ ನೀಡಲು ನಿಗದಿತ ವರ್ಗಗಳ ಅಭಿವೃದ್ಧಿಯ ಕಡೆಗೆ ಗಮನ ಕೇಂದ್ರೀಕರಿಸಬೇಕಾಗಿದೆ.

## ಇತರ ಹೆಚ್ಚುವರಿ ಸಂಗತಿಗಳು

1. ಆರೋಗ್ಯ ಸೌಲಭ್ಯಗಳ ಲಭ್ಯತೆ ಮತ್ತೊಂದು ಜವಾಬ್ದಾರಿಯುತ ಸಂಗತಿಯಾಗಿದೆ. ಶೇ.70ರಷ್ಟು ಹಳ್ಳಿಗಳಿಗೆ ಯಾವುದೇ ವೈದ್ಯಕೀಯ ಸೌಲಭ್ಯಗಳಿಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರಗಳೂ ಸಹಾ ಸಿಬ್ಬಂದಿ ಮತ್ತು ಔಷಧಗಳ ಕೊರತೆಯಿಂದ ಸಮರ್ಪಕ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ಬಡ ಕುಟುಂಬಗಳು ತಮ್ಮ ಆರೋಗ್ಯದ ಅವಶ್ಯಕತೆಗಳಿಗಾಗಿ ಖಾಸಗೀ ವೈದ್ಯರ ಮೊರೆಹೋಗುತ್ತಾರೆ. ಬಹುಪಾಲು ಕಟುಂಬಗಳು ಆರೋಗ್ಯ ಸಂಬಂಧವಾಗಿ ತುಂಬಾ ಸಾಲಮಾಡಿಕೊಂಡಿರುವುದು ಕಂಡುಬರುತ್ತದೆ. ಇಲ್ಲಿ ಕೇವಲ ಶೇ. 23ರಷ್ಟು ಮಾತ್ರ ಸಾಂಸ್ಥಿಕ ಹೆರಿಗೆಗಳು ನಡೆಯುತ್ತಿವೆ. ಹಾಗಾಗಿ ಆರೋಗ್ಯ ಸೌಲಭ್ಯಗಳನ್ನು ಹೆಚ್ಚಿಸುವ ಅಗತ್ಯತೆ ತುಂಬಾ ಇದೆ. ದೂರದ ಹಳ್ಳಿಗಳಿಗೆ ಮತ್ತು ಸಣ್ಣಗ್ರಾಮಗಳಿಗೆ ಆರೋಗ್ಯ ಸೌಲಭ್ಯಗಳನ್ನು ಮುಟ್ಟಿಸಲು ಮೊಬೈಲ್ ರೀತಿಯ ಸೇವಾಸೌಲಭ್ಯಗಳ ಮೂಲಕ ಸೇವೆಯನ್ನು ನೀಡುವ ಅಗತ್ಯವಿದೆ.

2. ಸರಕಾರಿ ಸಂಸ್ಥೆಗಳ ಮೂಲಕ(ಬ್ಯಾಂಕ್ ಇತರೆ) ಸಾಲಪಡೆಯುವವರ ಪ್ರಮಾಣ ತುಂಬಾ ಕಡಿಮೆ. ಏಕೆಂದರೆ ಆ ರೀತಿಯ ಸಂಸ್ಥೆಗಳೇ ಹಳ್ಳಿಯ ಸುತ್ತಾಮುತ್ತಾ ಇರುವುದಿಲ್ಲ. ಶೇ. 49ರಷ್ಟು ಜನರು ತಮ್ಮ ಸಾಂಪ್ರದಾಯಿಕ ಮೂಲಗಳಿಂದ ಸಾಲ ಪಡೆಯುತ್ತಿದ್ದಾರೆ. (ಇದರಲ್ಲಿ ಹಿಂದುಗಳು ಶೇ. 45ರಷ್ಟು ಮತ್ತು ಮುಸಲ್ಮಾನರು ಶೇ.60ರಷ್ಟು) ಇದಕ್ಕಾಗಿ ವಿವಿಧ ರೀತಿಯ ಯೋಜನೆಗಳ ಮೂಲಕ ಅಗತ್ಯ ಸಾಲಸೌಲಭ್ಯದ ವ್ಯವಸ್ಥೆಯನ್ನು ಮಾಡಲು ಗಮನ ಹರಿಸಬೇಕಾಗಿದೆ.

3. ನೀರಾವರಿ ಸೌಲಭ್ಯವನ್ನು ಹೆಚ್ಚಿಸುವುದರ ಮೂಲಕ ಮಳೆಯಾಶ್ರಿತ ಕೃಷಿಕರ ಜೀವನೋಪಾಯದ ಅಭದ್ರತೆಯನ್ನು ಹೋಗಲಾಡಿಸುವ ಅಗತ್ಯವಿದೆ. ಜಲಾನಯನ ಮತ್ತು ಸಣ್ಣ ನೀರಾವರಿ ಯೋಜನೆಗಳ ನಿರ್ಮಾಣದಿಂದ ಸಹಾಯವಾಗಬಲ್ಲದು.

4. ಗ್ರಾಮೀಣ ಭಾಗದ ರಸ್ತೆಗಳು ಮತ್ತು ವಾಹನ ಸೌಲಭ್ಯದಂತಹ ಸೇವೆಗಳು ಅದರಲ್ಲಿಯೂ ತುಂಬಾ ದೂರದ ಮತ್ತು ಸುತ್ತಂಚಿನ ಹಳ್ಳಿಯವರೆಗೆ ದೊರಕಿಸಿಕೊಡುವ ಅಗತ್ಯತೆ ಅನಿವಾರ್ಯವಾಗಿದೆ. ಜಿಲ್ಲಿಯಿಂದ ನಿರ್ಮಿಸಿರುವ ರಸ್ತೆಗಳು ಶೇ. 64ರಷ್ಟನ್ನು ಮಾತ್ರ ಈ ಭಾಗದ ಹಳ್ಳಿಗಳು ಹೊಂದಿವೆ.

## ಸಮೀಕ್ಷೆಯ ಸಾರಾಂಶ

### ಜನಸಂಖ್ಯೆ ಮತ್ತು ಕುಟುಂಬಗಳ ಸಾಮಾಜಿಕ ಲಕ್ಷಣಗಳು

ಆಯ್ಕೆಮಾಡಿಕೊಂಡ 900 ಕುಟುಂಬಗಳಲ್ಲಿ 651 (ಶೇ. 72.31) ಹಿಂದೂ ಕುಟುಂಬಗಳು, 245 (ಶೇ. 27.2) ಮುಸ್ಲಿಂ ಕುಟುಂಬಗಳು ಮತ್ತು 4 (0.4) ಇತರೆ ಸಮುದಾಯಕ್ಕೆ ಸೇರಿದವುಗಳಾಗಿವೆ. ಮುಸಲ್ಮಾನರ ಕುಟುಂಬಗಳು ಹಿಂದೂ ಕುಟುಂಬಗಳಿಗೆ ಹೋಲಿಸಿದರೆ ಹೆಚ್ಚು ದೊಡ್ಡವು ಪ್ರತಿ ಕುಟುಂಬದ ಸರಾಸರಿ ಗಾತ್ರ ಮುಸ್ಲಿಂರಲ್ಲಿ 6.9 ರಷ್ಟಾದರೆ ಅದೇ ರೀತಿ ಹಿಂದೂಗಳಲ್ಲಿ ಕುಟುುಂಬದ ಗಾತ್ರ 6.15 ರಷ್ಟಾಗಿದೆ. ಇತರೆ ಜನವರ್ಗಗಳಲ್ಲಿ ಕುಟುಂಬಗಳ ಸರಾಸರಿ ಗಾತ್ರ 7.25ರಷ್ಟಿದ್ದು ತುಂಬಾ ಹೆಚ್ಚಾಗಿದೆ. ಲಿಂಗಪ್ರಮಾಣವು ಮುಸ್ಲಿಂ ಕುಟುಂಬದಲ್ಲಿ ಆಶಾದಾಯಕವಾಗಿದೆ. ಇದು 940 ರಷ್ಟಿದ್ದು ಹಿಂದು ಕುಟುಂಬಗಳಲ್ಲಿ ಇದು 900 ಆಗಿದೆ. ಹಿಂದು ಕುಟುಂಬಗಳಲ್ಲಿ ಹೆಚ್ಚಾಗಿ ಪ.ಜಾತಿ ಮತ್ತು ಇತರೆ ಹಿಂದುಳಿದ ವರ್ಗಗಳು ಸೇರಿವೆ. ಈ ವರ್ಗಗಳ ಲಿಂಗ ಅನುಪಾತ ಜಿಲ್ಲೆಯಲ್ಲಿ ಕಡಿಮೆ ಇದೆ.

ಪ.ಜಾತಿ ಸಮುದಾಯದಲ್ಲಿ ಲಿಂಗ ಅನುಪಾತ 961 ರಷ್ಟಿದೆ. ಇದು ಜಿಲ್ಲೆಯ ಸಾಮಾನ್ಯ ಸರಾಸರಿ 966 ಕ್ಕಿಂತ ಕಡಿಮೆ ಇದೆ. ಪರಾವಲಂಬನೆಯ ಪ್ರಮಾಣ ಮುಸ್ಲಿಂರಲ್ಲಿ ಕಡಿಮೆ ಇದ್ದು, ಹಿಂದುಗಳಲ್ಲಿ ಅತಿಯಾಗಿದೆ. ಅವಲಂಬಿತರ ಪ್ರಮಾಣ ಶೇ.1.25 ಮುಸ್ಲಿಂರಲ್ಲಿದ್ದರೆ, ಶೇ.1.62 ಹಿಂದೂ ಕುಟುಂಬದಲ್ಲಿ ಕಂಡುಬರುತ್ತಾರೆ.

## ಶಿಕ್ಷಣ ಮತ್ತು ಸಾಕ್ಷರತೆ

2001ರ ಜನಗಣತಿಯ ಪ್ರಕಾರ ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ. 50.01 ಆಗಿದೆ. ನಮ್ಮ ಈ ಕುಟುಂಬಗಳ ಸಮೀಕ್ಷೆಯಲ್ಲಿ ಕಂಡುಬಂದ ಸಾಕ್ಷರತೆಗೆ ಹೋಲಿಸಿದರೆ ಇದು ಸ್ವಲ್ಪ ಹೆಚ್ಚಾಗಿದೆ. ಇದು ಶೇ. 49.56 ಇದ್ದು, 2001ರ ಜನಗಣತಿಗೆ ತುಂಬಾ ಹತ್ತಿರವಾಗಿದೆ. ಮಹಿಳಾ ಸಾಕ್ಷರತೆ ಶೇ. 43.08 ಇದ್ದು, ಪುರುಷರ ಸಾಕ್ಷರತಾ ಪ್ರಮಾಣ ಶೇ. 61.48ರಷ್ಟಿದೆ. ಕೇವಲ ಶೇ.5.6ರಷ್ಟು ಮಕ್ಕಳಿಗೆ ಮಾತ್ರ ಉನ್ನತ ಶಿಕ್ಷಣದ ಅವಶ್ಯಕತೆ ದೊರಕಿದೆ. ಯಾರೊಬ್ಬರೂ ಸ್ನಾತಕೋತ್ತರ ಪದವಿಯನ್ನು ಮುಗಿಸಿರುವುದಿಲ್ಲ.

ಸರಕಾರಿ ಶೇ. 90ರಷ್ಟು ಮಕ್ಕಳು ಶಾಲೆಗಳಿಗೆ ಹೋಗುತ್ತಿದ್ದು ಅಲ್ಲಿದೊರೆಯುವ ಉಚಿತ ಪುಸ್ತಕಗಳು, ಬ್ಯಾಗ್ ಮತ್ತು ಮಧ್ಯಾಹ್ನದ ಬಿಸಿಯೂಟದಂತಹ ಸೌಲಭ್ಯವನ್ನು ಪಡೆಯುತ್ತಿವೆ. ಮಧ್ಯಾಹ್ನದ ಬಿಸಿಯೂಟದಿಂದ ಶಾಲಾ ದಾಖಲಾತಿ ಮತ್ತು ಹಾಜರಾತಿಯಲ್ಲಿ ಹೆಚ್ಚಳ ಕಂಡುಬಂದಿದೆ. ಕೆಲವೇ ಉನ್ನತವರ್ಗಕ್ಕೆ ಸೇರಿದ ಕುಟುಂಬಗಳವರ ಮಕ್ಕಳು ಖಾಸಗೀ ಶಾಲೆಗಳಿಗೆ ಹೋಗುತ್ತಿದ್ದಾರೆ.

ಕೋಷ್ಟಕ 8.9

### ನಮೂನೆಯಲ್ಲಿ ಕುಟುಂಬಗಳ ವಿತರಣೆ ಮತ್ತು ಕುಟುಂಬಗಳ ಜನಸಂಖ್ಯಾ ವಿಶಿಷ್ಟತೆಗಳು

| | | | | |
|---|---|---|---|---|
| ನಮೂನೆಯ ಆಯ್ದ ಕುಟುಂಬಗಳ ಸಂಖ್ಯೆ | 651 | 245 | 4 | 900 |
| ಶೇಕಡಾ | 72.3 | 27.2 | 0.4 | 100.0 |
| ಕುಟುಂಬದ ಸರಾಸರಿ ಗಾತ್ರ | 6.15 | 6.91 | 7.25 | 6.36 |
| ಲಿಂಗ ಅನುಪಾತ | 901 | 946 | 1417 | 916 |

ಕೋಷ್ಟಕ 8.10

### ಶಾಲೆಯನ್ನು ಸೇರದಿರಲು ಕಾರಣಗಳು ಮತ್ತು ಶಾಲೆ ಬಿಟ್ಟ ಮಕ್ಕಳು

| ವಿವರಗಳು | ಒಟ್ಟು |
|---|---|
| ಮನೆವಾರ್ತೆ | 27.71 |
| ದುಡಿಮೆಯ ಅಗತ್ಯ | 9.64 |
| ಶಾಲೆ ದೂರವಿರುವುದು | 7.23 |
| ಶಾಲೆಯಲ್ಲಿ ಸೌಲಭ್ಯವಿಲ್ಲದಿರುವುದು | 2.41 |
| ಶಿಕ್ಷಕರು ದಂಡಿಸುವುದು | 4.82 |
| ಪಾಠ ಮಾಡದಿರುವ ಶಿಕ್ಷಕರು | 1.20 |
| ಪರೀಕ್ಷೆಯಲ್ಲಿ ನಪಾಸಾದುದು | 1.20 |
| ಶುಲ್ಕ ಅಥವಾ ಖರ್ಚನ್ನು ಭರಿಸಲು ಸಾಧ್ಯವಿಲ್ಲದುದು | 1.20 |

ಸರ್ವ ಶಿಕ್ಷಣ ಅಭಿಯಾನದವರು ಎಷ್ಟೇ ಪ್ರಯತ್ನ ಪಟ್ಟರೂ ಈಗಲೂ ಶೇ.20ರಷ್ಟು ಕುಟುಂಬಗಳು ತಮ್ಮ ಮಕ್ಕಳನ್ನು ಶಾಲೆಗೆ ದಾಖಲು ಮಾಡಿಸಿರುವುದಿಲ್ಲ. ಬಡತನ ಮತ್ತು ವಲಸೆ ಇದಕ್ಕೆ ಪ್ರಮುಖ ಕಾರಣವಾಗಿದೆ. ಮಾಧ್ಯಮಿಕ ಶಾಲೆ ಮುಗಿದ ಬಳಿಕ ಹೆಚ್ಚು ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದಾರೆ. ಕುಟುಂಬಗಳ ನಿರ್ವಹಣೆಗೆ ಸಂಪಾದನೆಯು ಅನಿವಾರ್ಯವಾಗಿರುವುದರಿಂದ ಮಕ್ಕಳು ಶಾಲೆಬಿಡಲು ಪ್ರಮುಖ ಕಾರಣ.

ಪೋಷಕರು ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಹೆಚ್ಚು ಆಸಕ್ತಿ ತೋರದಿರುವುದನ್ನು ಎಲ್ಲಾ ವರ್ಗದವರಲ್ಲಿಯೂ ಸಾಮಾನ್ಯವಾಗಿ ಕಾಣಬಹುದು. ಇಲ್ಲಿಯವರೆಲ್ಲರೂ ತಮ್ಮ ಮಕ್ಕಳನ್ನು ಕೊನೇಪಕ್ಷ ಪಿಯುಸಿಯವರೆಗೆ ವಿದ್ಯಾಭ್ಯಾಸವನ್ನು ಕಲಿಸುವ ಅಗತ್ಯವಿದೆ. ಈಗಾಗಲೇ ಶೇ.53ರಷ್ಟು ಮಕ್ಕಳು ಪಿಯುಸಿ ಇಲ್ಲವೇ ಪದವಿಗಳಿಗೆ ಸೇರಿಕೊಂಡಿದ್ದಾರೆ. ಪೋಷಕರ ಮನಸ್ಥಿತಿಯು ತಮ್ಮ ಮನೆಯ ಹೆಣ್ಣುಮಕ್ಕಳನ್ನು ಹೆಚ್ಚಿನ ವ್ಯಾಸಂಗಕ್ಕೆ ಕಳುಹಿಸುವ ಮನೋ ಪ್ರವೃತ್ತಿಯನ್ನು ಹೊಂದಿಲ್ಲ. ಶೇ.73ರಷ್ಟು ಪೋಷಕರು ಹೆಣ್ಣು ಮಕ್ಕಳನ್ನು ಪಿಯುಸಿವರೆಗೆ ವಿದ್ಯಾಭ್ಯಾಸಕ್ಕಾಗಿ ಕಳುಹಿಸಲು ಸಮ್ಮತಿಸುತ್ತಾರೆ.

## ಆರೋಗ್ಯದ ಸ್ಥಿತಿ

(1) ಬಹುಪಾಲು ಕುಟುಂಬಗಳು ಸಮೀಕ್ಷೆಯ ವರ್ಷ ಆರೋಗ್ಯಕ್ಕಾಗಿ ಹೆಚ್ಚು ವ್ಯಯಮಾಡಿರುವುದು ಕಂಡುಬರುತ್ತದೆ. ಒಟ್ಟು ಖರ್ಚಿನಲ್ಲಿ ಶೇ. 70ರಷ್ಟನ್ನು ಇದಕ್ಕಾಗಿ ವ್ಯಯಿಸಿರುತ್ತಾರೆ. ಜ್ವರದ ಸಮಸ್ಯೆಯು ಪ್ರಮುಖವಾಗಿ ಎಲ್ಲಾ ಕುಟುಂಬಗಳಲ್ಲಿಯೂ ಕಂಡುಬಂದಿದೆ. ಇತರೆ ಕಾಯಿಲೆಗಳಾದ ಹೃದಯಕ್ಕೆ ಸಂಬಂಧಿಸಿದ ಮತ್ತು ಸ್ತ್ರೀಯರ ಬಸಿರುತನಕ್ಕೆ ಹಾಗೂ ಹೆರಿಗೆ ಸಮಯದ ತೊಂದರೆಗಳು ಪ್ರಮುಖವಾಗಿ ಕಂಡುಬಂದಿವೆ. ಶೇ.6ರಿಂದ 7ರಷ್ಟು ಕುಟುಂಬಗಳು ಮಲೇರಿಯಾ ಕಾಯಿಲೆಗೆ ತುತ್ತಾಗಿದ್ದುದು ಕಂಡುಬಂದಿದೆ. ಇದು ಇಲ್ಲಿ ಸಾಮಾನ್ಯ ಕಾಯಿಲೆಯಾಗಿದೆ. ಏಕೆಂದರೆ ಗ್ರಾಮೀಣ ಬಾಗದಲ್ಲಿ ಒಳಚರಂಡಿ / ಶೌಚಾಲಯದ ವ್ಯವಸ್ಥೆಯಿರುವುದಿಲ್ಲ.

ಕೋಷ್ಟಕ 8.11

**ಮಕ್ಕಳ ಶಿಕ್ಷಣದ ಬಗ್ಗೆ ಪಾಲಕರ ನಿರೀಕ್ಷೆಗಳು**

| ವಿವರಗಳು | ಬಾಲಕರು | ಬಾಲಕಿಯರು |
|---|---|---|
| ಪ್ರೌಢಶಾಲೆಗಳು | 15.11 | 29.05 |
| ಪದವಿ ಪೂರ್ವ ಕಾಲೇಜು | 11.57 | 18.57 |
| ಪದವಿ ಶಿಕ್ಷಣ | 28.36 | 25.95 |
| ಪದವೀಧರರು | 25.19 | 15.48 |
| ಸ್ನಾತಕೋತ್ತರ ಪದವಿ | 10.26 | 4.29 |
| ತಾಂತ್ರಿಕ ಪದವಿ | 9.51 | 6.67 |
| ಒಟ್ಟು | 100.00 | 100.00 |

(2) ಆದಾಯಕ್ಕೆ ತಕ್ಕಂತೆ ವೈದ್ಯಕೀಯ ಸೌಲಭ್ಯ ಸೇವೆ ಪಡೆಯುವ ಅನಿವಾರ್ಯತೆ ಉಂಟಾಗಿದೆ. ಹಳ್ಳಿಯಲ್ಲಿ ಯಾವ ಮೂಲಗಳಿಂದ ವೈದ್ಯಕೀಯ ಸೇವೆ ಸಿಗುತ್ತದೆ ಎಂಬುದನ್ನು ಸಮೀಕ್ಷೆಯಲ್ಲಿ ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸಿದೆ.

## ಔಷದೋಪಚಾರದ ಮೂಲಗಳು

ಜನರು ಒಂದಕ್ಕಿಂತ ಹೆಚ್ಚು ಔಷದೋಪಚಾರಗಳ ಆಯ್ಕೆಯನ್ನು ಬಯಸುತ್ತಾರೆ. ಬಹಳ ಸಾಮಾನ್ಯವಾದ ಔಷದೋಪಚಾರದ ಮೂಲ, ಹಳ್ಳಿಗಳಲ್ಲಿ ಸಿಗುವ ಖಾಸಗೀ ವೈದ್ಯ ಸೇವೆಯಾಗಿದೆ. ಇದರಲ್ಲಿ ನಾಟಿವೈದ್ಯದ ಕೆಲವು ಪ್ರಕರಣಗಳು ಸೇರಿವೆ. ಶೇ. 80ರಷ್ಟು ಕುಟುಂಬಗಳು ಖಾಸಗೀ ವೈದ್ಯರಲ್ಲಿ ಹೋಗುವ ಪದ್ಧತಿ ಇದೆ. ಎಲ್ಲರಿಗೂ ಗೊತ್ತಿರುವ ಹಾಗೆ ಸರಕಾರಿ ಆಸ್ಪತ್ರೆಗಳಲ್ಲಿ ಸಿಗುವ ವೈದ್ಯೋಪಚಾರ ಖಾಸಗೀ ವೈದ್ಯ ಸೇವೆಗಿಂತ ಕಡಿಮೆ ಖರ್ಚಿನದಾಗಿರುತ್ತದೆ. ಹಾಗಾಗಿ ಬಡ ಕುಟುಂಬಗಳು ಇಂಥವನ್ನು ಹೆಚ್ಚು ಬಯಸುತ್ತಾರೆ. ಇದನ್ನು ಪಡೆಯುವಲ್ಲಿ ಇರುವ ವಿರೋದಾಭಾಸವೆಂದರೆ ಬಡಜನರೂ ಕೂಡ ಸರಕಾರಿ ಆಸ್ಪತ್ರೆಗಿಂತ ಖಾಸಗೀ ವೈದ್ಯಕೀಯ ಸೇವೆಗೆ ಹೋಗಲು ಇಷ್ಟಪಡುತ್ತಾರೆ. ಇದಕ್ಕೆ ಅನೇಕ ಕಾರಣಗಳು ಸೇರಿಕೊಂಡಿವೆ. ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಔಷಧಗಳ ಕೊರತೆ, ತಾತ್ಸಾರ ಮನೋಭಾವಾ, ಸಮಯಕ್ಕೆ ಸರಿಯಾಗಿ ಸಿಗದಿರುವುದು, ತುಂಬಾ ದೂರದಲ್ಲಿ

ಆಸ್ಪತ್ರೆಗಳಿರುವುದು ಮುಂತಾದವುಗಳಾಗಿವೆ. ಇವುಗಳನ್ನು ಗಮನಿಸಿದ ಜನರು ಸರಕಾರಿ ಆಸ್ಪತ್ರೆಗಳ ಬಗ್ಗೆ ನಂಬಿಕೆ ಕಳೆದುಕೊಂಡಿದ್ದಾರೆ.

ಮಕ್ಕಳ ರೋಗನಿರೋಧಕ ಲಸಿಕೆಗಳನ್ನು ಇತ್ತೀಚೆಗೆ ಹೆಚ್ಚು ವ್ಯಾಪಕವಾಗಿ ಹಾಕಲಾಗುತ್ತಿದೆ. ಏಕೆಂದರೆ, ಸರಕಾರವು ತೆಗೆದುಕೊಂಡ ಸಮಗ್ರ ಲಸಿಕಾ ಅಭಿಯಾನದಿಂದಾಗಿ ಜನರಿಗೆ ಸಿಗಬೇಕಾದ ಜನಪರ ಸೇವೆಗಳು ಮನೆಮನೆಗೆ ತೆರಳಿ ವಯಸ್ಸಿಗನುಗುಣವಾಗಿ ಲಸಿಕೆಗಳನ್ನು ಹಾಕುತ್ತಿರುವುದೇ ಆಗಿದೆ. ಈಗಲೂ ಜಿಲ್ಲೆಯು ಶೇ.100ರಷ್ಟು ಲಸಿಕಾ ಕಾರ್ಯಕ್ರಮ ಸಾಧಿಸುವುದರಿಂದ ದೂರ ಉಳಿದಿದೆ. ನಮ್ಮ ಸಮೀಕ್ಷೆಯೊಳಗಿನ ಕುಟುಂಬಗಳ ಪೈಕಿ ಶೇ.40ರಷ್ಟು ಕುಟುಂಬಗಳು ಮಾತ್ರ ಪೂರ್ಣ ಪ್ರಮಾಣದ ಲಸಿಕಾ ಸೌಲಭ್ಯವನ್ನು ಪಡೆದಿವೆ.

ಹೆರಿಗೆಯ ಸ್ಥಳವು ತಾಯಿ ಮತ್ತು ಮಗುವಿನ ಸಾವಿನ ಪ್ರಮಾಣದ ಮೇಲೆ ಪರಿಣಾಮ ಬೀರುತ್ತಿದೆ. ಮನೆಯಲ್ಲಿಯ ಹೆರಿಗೆಗಳು ಈ ಕುಟುಂಬಗಳಲ್ಲಿ ತುಂಬಾ ಹೆಚ್ಚಾಗಿದೆ. ಶೇ.76ರಷ್ಟು ಹೆರಿಗೆಗಳು ಮನೆಯಲ್ಲೇ ಆಗುತ್ತಿವೆ. ಕೆಲವೊಂದು ಮಾತ್ರ ತರಬೇತಿಪಡೆದ ದಾದಿಯರಿಂದ ನಡೆದಿವೆ. ಆದರೆ ಹೆಚ್ಚಿನ ಸಂಖ್ಯೆಯಲ್ಲಿ ಹಳ್ಳಿಯಲ್ಲಿರುವ ತರಬೇತಿಯಿಲ್ಲದ ದಾದಿ ಅಥವಾ ಸೂಲಗಿತ್ತಿಯರಿಂದ ಹೆರಿಗೆಗಳು ನಡೆಯುತ್ತಿವೆ.

## ಆರ್ಥಿಕ ಸ್ಥಿತಿಗತಿ

## ಉದ್ಯೋಗದ ಸ್ವರೂಪ

ಕುಟುಂಬಕ್ಕೆ ಹಂಚಿಕೆಯಾಗಿರುವ ಭೂಮಿ ಪ್ರಮಾಣಕ್ಕೆ ಅನುಗುಣವಾಗಿ ಉದ್ಯೋಗದ ಪ್ರವೃತ್ತಿಯನ್ನು ಕುಟುಂಬಗಳು ಒಳಗೊಂಡಿರುವುದನ್ನು ಈ ಕೆಳಗಿನ ಕೋಷ್ಟಕದಿಂದ ಕಂಡು ಬರುತ್ತದೆ.

ಕೋಷ್ಟಕ 8.12

ಉದ್ಯೋಗದ ಸ್ವರೂಪ

| | ಪುರುಷರು | ಮಹಿಳೆಯರು | ಒಟ್ಟು |
|---|---|---|---|
| ಸ್ವಯಂ ಉದ್ಯೋಗ | 47.65 | 26.29 | 40.18 |
| ಖಾಯಂ | 6.55 | 2.81 | 5.25 |
| ಹಂಗಾಮಿ | 45.80 | 70.89 | 54.56 |

ನಿಗದಿತ ಉದ್ಯೋಗವಿಲ್ಲದ ಅಕಾಲಿಕ ಕೆಲಸಗಾರರು ಹಿಂದುಳಿದ ಮತ್ತು ಮುಸ್ಲಿಂ ಕುಟುಂಬದ ಎರಡು ಸಮುದಾಯಗಳಲ್ಲಿಯೂ ಪ್ರಮುಖವಾಗಿ ಕಂಡುಬರುತ್ತಾರೆ. ಶೇ.2.25ರಷ್ಟು ಜನರು ಮಾತ್ರ ನಿಯಮಿತ ವೇತನ ಪಡೆಯುವ ಉದ್ಯೋಗಸ್ಥರಿದ್ದಾರೆ. ಶೇ. 54.5ರಷ್ಟು ಹಿಂದೂ ಕೆಲಸಗಾರರು ಮತ್ತು ಶೇ.58.3ರಷ್ಟು ಮುಸ್ಲಿಂ ಕೆಲಸಗಾರರು ಸಾಮಾನ್ಯ ಉದ್ಯೋಗಸ್ತರಾಗಿದ್ದಾರೆ. ಸ್ವಂತ ಕೃಷಿ ದುಡಿಮೆಗಾರರು ಹಿಂದೂ ಕುಟುಂಬದಲ್ಲಿ ಹೆಚ್ಚಾಗಿದ್ದಾರೆ. ಇವರು ಭೂಮಿ ಹೊಂದಿದವರಾಗಿದ್ದಾರೆ. ಈ ಅಕಾಲಿಕ ಕೆಲಸಗಾರರು ಆದಾಯ ಮತ್ತು ಉದ್ಯೋಗ ಎರಡರಲ್ಲಿಯೂ ಅಭದ್ರತೆಗೊಳಗಾಗಿದ್ದಾರೆ. ಜಿಲ್ಲೆಯ ಒಣಬೇಸಾಯದ ಸ್ಥಳಗಳ ಕ್ಷೇತ್ರ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಹಲವರ ಹೇಳಿಕೆ ಪ್ರಕಾರ ಪ್ರತಿನಿತ್ಯ ಉದ್ಯೋಗ ಸಿಗುವುದಿಲ್ಲ ಎಂದಿರುತ್ತಾರೆ. ಮೇಲಿನ ಎರಡು ಗುಂಪಿನ ಮಹಿಳೆಯರು ಆಗಾಗ ದೊರಕುವ ಕೆಲಸಕ್ಕೆ ಹೋಗುವವರಾಗಿದ್ದಾರೆ.

## ಉದ್ಯೋಗದ ಸ್ಥಿತಿ

ಉದ್ಯೋಗದ ಪ್ರಕಾರವನ್ನು ವಿಂಗಡಣೆ ಮಾಡಿ ನೋಡಿದಾಗ ಸ್ವಂತ ಜಮೀನಿನಲ್ಲಿ ಹೆಚ್ಚು ಕುಟುಂಬಗಳು ಸ್ವಯಂ ಉದ್ಯೋಗ ಕೃಷಿಕ್ಷೇತ್ರದಲ್ಲಿ ಹೆಚ್ಚು ಇದೆ. ಕೃಷಿಯು ಜಿಲ್ಲೆಯ ಪ್ರಮುಖ ಆರ್ಥಿಕ ವಲಯವಾಗಿದೆ. ಇಲ್ಲಿ ಕಡಿಮೆ ಪ್ರಮಾಣದ ಕೃಷಿಯೇತರ ಉದ್ಯೋಗವಿರುತ್ತದೆ. ಏಕೆಂದರೆ ಕಡಿಮೆ ಸಂಪನ್ಮೂಲವಿರುವ ಪ್ರದೇಶವಾದ ಇದು ಅತಿ ಕಡಿಮೆ ಮಟ್ಟದಲ್ಲಿ ಕೈಗಾರಿಕಾಭಿವೃದ್ಧಿ ನಡೆದಿದೆ.

ಸಮೀಕ್ಷೆಯಲ್ಲಿಯ ಹೆಚ್ಚು ಪ್ರಮಾಣದ ಕುಟುಂಬಗಳು ಕೃಷಿಯಲ್ಲಿ ಉದ್ಯೋಗ ಮಾಡುತ್ತಿದ್ದಾರೆ. ಇಲ್ಲವೇ ಕೃಷಿಕರಾಗಿದ್ದಾರೆ. ಅಥವಾ ಕೃಷಿ ಕೂಲಿಗಳಾಗಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ವ್ಯವಸಾಯಗಾರರು ಬೇಸಾಯ ಮತ್ತು ಕೃಷಿಕೂಲಿ ಎರಡೂ ಮಾಡಿ ತಮ್ಮ ದಿನನಿತ್ಯದ ಜೀವನವನ್ನು ಸಾಗಿಸುತ್ತಿದ್ದಾರೆ.

ಕುಟುಂಬಗಳ ಉದ್ಯೋಗದ ಮಟ್ಟದಿಂದ ನಮಗೆ ತಿಳಿದುಬರುವುದೇನೆಂದರೆ ಅನಿಯಮಿತ ಉದ್ಯೋಗ ನೀಡುತ್ತಿರುವುದು ಕೃಷಿ ಕೆಲಸ. ಇದು ಪ್ರಮುಖ

ಉದ್ಯೋಗವಾಗಿ ಪರಿಣಮಿಸಿರುವ ಕುಟುಂಬಗಳ ಪ್ರಮಾಣ ಶೇ.53.4. ಶೇ.69ರಷ್ಟು ಮಹಿಳಾ ಸದಸ್ಯರು ಈ ಆಕಸ್ಮಿಕ ಕೂಲಿಗಳಾಗಿ ಕೆಲಸ ಮಾಡುತ್ತಿದ್ದಾರೆ. ಇನ್ನೊಂದು ಮೂಲದ ಉದ್ಯೋಗವೆಂದರೆ ಕೃಷಿಯಲ್ಲಿ ಸ್ವಯಂ ಉದ್ಯೋಗ ಮಾಡುತ್ತಿರುವವರು (ಶೇ.33.48) ಕ್ಷೇತ್ರ ಸಮೀಕ್ಷೆಗೊಳಪಟ್ಟ ಕುಟುಂಬದಲ್ಲಿ ಶೇ.86.89ರಷ್ಟು ಸದಸ್ಯರು ತಮ್ಮ ಜೀವನ ನಿರ್ವಹಣೆಗೆ ವ್ಯವಸಾಯವನ್ನು ಅವಲಂಬಿಸಿದ್ದಾರೆ.

## ದುಡಿಮೆಯಾಧಾರಿತ ಉದ್ಯೋಗ ವಿಭಜನೆ

ದುಡಿಮೆಯಾಧಾರದ ಮೇಲೆ ಉದ್ಯೋಗದ ವಿಭಜನೆಯಲ್ಲಿ ತುಂಬಾ ಕಡಿಮೆ ವಿಧದ ಉದ್ಯೋಗ ಅವಕಾಶಗಳು ಕಂಡುಬರುತ್ತವೆ.; ಇವರಲ್ಲಿ ಹೆಚ್ಚಿನವರು ಪ್ರಾಥಮಿಕ ಕ್ಷೇತ್ರದ ಉದ್ಯೋಗಿಗಳಾಗಿದ್ದಾರೆ. ಅದು (ಶೇ. 87.7) ಕೃಷಿ ಆಧಾರಿತ ಮಹಿಳಾ ಉದ್ಯೋಗಿಗಳ ಪ್ರಮಾಣ ಶೇ. 93ರಷ್ಟು ಅದೇರೀತಿ ಕಟ್ಟಡದ ಕೆಲಸಗಳಲ್ಲಿ ಶೇ.8.55ರಷ್ಟು ಉದ್ಯೋಗವನ್ನು ಹೊಂದಿದ್ದಾರೆ. ಎಲ್ಲಾ ಜಾತಿಸಮುದಾಯದ ಉಳಿದ ಉದ್ಯೋಗಸ್ಥರು ಶೇ. 5ಕ್ಕಿಂತಲೂ ಕಡಿಮೆ (ಕೈಗಾರಿಕಾ ಉತ್ಪಾದನೆಯಲ್ಲಿ ಶೇ. 3.06, ವ್ಯಾಪಾರ ಶೇ. 3.01, ಸಾರ್ವಜನಿಕ ಆಡಳಿತದಲ್ಲಿ ಶೇ.3.62 ಇತ್ಯಾದಿ) ಹೊಂದಿದ್ದಾರೆ.

ಹೆಚ್ಚು ಸಂಖ್ಯೆಯ ಕೆಲಸಗಾರರು ಕೆಲಸ ಮಾಡುತ್ತಿರುವುದು ಕೃಷಿಯಲ್ಲಿ. ಜಿಲ್ಲೆಯ ಹೆಚ್ಚು ಪ್ರಮಾಣದ ಭೂಮಿ ಮಳೆಯಾಶ್ರಿತ ಬೇಸಾಯವಾಗಿದೆ (ಶೇ.18.7ರಷ್ಟು ಮಾತ್ರ ಒಟ್ಟು ಭೂಮಿಯಲ್ಲಿ ನೀರಾವರಿಗೊಳಪಟ್ಟಿದೆ.) ವರ್ಷದಲ್ಲಿ ಇವರಿಗೆ ತುಂಬಾ ಕಡಿಮೆ ದಿನಗಳು ಮಾತ್ರ ಉದ್ಯೋಗ ಸಿಗುತ್ತವೆ. ಸ್ವಂತ ಉದ್ಯೋಗ ಮಾಡುವವರು ಸರಾಸರಿ 150ರಿಂದ 160 ದಿನಗಳು ತಮ್ಮ ಜಮೀನಿನಲ್ಲಿ ಉದ್ಯೋಗ ಮಾಡುತ್ತಾರೆ. ಮತ್ತೊಂದುಕಡೆ ಕೃಷಿಯಲ್ಲಿ ಋತುಮಾನಕ್ಕನುಸಾರವಾಗಿ ಆಗಾಗ ಸಿಗುವ ಕೆಲಸದ ವಾರ್ಷಿಕ ಸರಾಸರಿ 170ರಿಂದ 180 ದಿನಗಳು. ಇದು ಪ್ರಕೃತಿಯ ಪ್ರಾಕೃತಿಕ ಬೆಳೆಗಳ ಮೇಲೆ ನಿರ್ಧರಿಸಲ್ಪಟ್ಟಿರುತ್ತದೆ. ವರ್ಷದಲ್ಲಿ ಜೂನ್ ಮತ್ತು ಜುಲೈ ತಿಂಗಳಲ್ಲಿ ಉದ್ಯೋಗ ಭರಾಟೆ ಇರುತ್ತದೆ. ಇದು ಬಿತ್ತನೆ ಕಾಲ. ಡಿಸೆಂಬರ್ ಮತ್ತು ಮಾರ್ಚ್ ತಿಂಗಳುಗಳು ಒಕ್ಕಣೆ ಕಾಲಗಳು. ಉಳಿದ ಸಮಯದಲ್ಲಿ ಬಿತ್ತನೆ ಮಾಡುವುದು, ಔಷಧ ಸಿಂಪಡಣೆ, ನೀರಾವರಿ ಕೆಲಸಗಳಿಗೆ ಸಂಬಂಧಿಸಿದ ಕೃಷಿ ಚಟುವಟಿಕೆಗಳಲ್ಲಿ ತೊಟಗಿಕೊಂಡಿರುತ್ತಾರೆ.

ಇನ್ನೊಂದು ಕಡೆ ಯಾರು ಸ್ವಯಂ ಉದ್ಯೋಗಿಗಳಾದ ವ್ಯಾಪಾರ ವಹಿವಾಟು ಮತ್ತಿತರ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುತ್ತಾರೋ ಅವರು ಹೆಚ್ಚು ದಿನಗಳ ಕಾಲ ಅಂದರೆ ವರ್ಷದಲ್ಲಿ 270 ದಿನಗಳವರೆಗೆ ಉದ್ಯೋಗವನ್ನು ಹೊಂದಿರುತ್ತಾರೆ. ಯಾರು ಕೃಷಿಯೇತರ ಕೆಲಸಗಳಾದ ಕಟ್ಟಡ ನಿರ್ಮಾಣ ಕೆಲಸದಂತವುಗಳಲ್ಲಿ ತೊಡಗಿಸಿಕೊಂಡಿರುತ್ತಾರೋ ಅವರೂ ಕೂಡ ಸರಾಸರಿ 240 ದಿನಗಳು ಕೆಲಸ ಹೊಂದಿರುತ್ತಾರೆ.

ಕೋಷ್ಟಕ 8.13

### ಕುಟುಂಬಗಳ ವೃತ್ತಿ ರಚನೆ

| ವೃತ್ತಿ ರಚನೆ | ಪುರುಷರು | ಮಹಿಳೆಯರು | ಒಟ್ಟು |
|---|---|---|---|
| ಕೃಷಿಯಲ್ಲಿ ಸ್ವಯಂ ಉದ್ಯೋಗ | 633 (38.52) | 215 (24.16) | 848 (33.48) |
| ಕೃಷಿಯೇತರ ದುಡಿಮೆಯಲ್ಲಿ ಸ್ವಯಂ ಉದ್ಯೋಗ | 132 (8.03) | 27 (3.03) | 159 (6.28) |
| ಖಾಯಂ/ಸಂಬಳದಾರ | 93 (5.67) | 24 (2.70) | 117 (04.62) |
| ಕೃಷಿಯಲ್ಲಿ ಹಂಗಾಮಿ | 739 (44.98) | 614 (68.99) | 1353 (53.41) |
| ಕೃಷಿಯೇತರದಲ್ಲಿ ಹಂಗಾಮಿ | 46 (2.80) | 10 (1.12) | 56 (02.21) |
| **ಒಟ್ಟು** | **1643 (100.00)** | **890 (100.00)** | **2533 (100.00)** |

## ಆದಾಯ ಮತ್ತು ಖರ್ಚಿನ ಪ್ರವೃತ್ತಿ

ಕುಟುಂಬದ ಸರಾಸರಿ ತಲಾದಾಯ ಮತ್ತು ಖರ್ಚು ತುಂಬಾ ಕಡಿಮೆ ಇದೆ. ಇಲ್ಲಿಯ ಜನರು ಪ್ರಮುಖವಾಗಿ ದಿನಗೂಲಿಯನ್ನು ಅವಲಂಬಿಸಿದ್ದಾರೆ. ಕುಟುಂಬದ ಆದಾಯದ ಮೂಲಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಇಲ್ಲಿಯ ಜನರ ಪ್ರಮುಖ ಆದಾಯದ ಮೂಲ ಕೃಷಿಚಟುವಟಿಕೆಯಾಗಿದೆ(ಶೇ.43.76). ಇವರ ಪ್ರಮುಖ ಆದಾಯದ ಮೂಲ ದಿನಗೂಲಿ ಕೆಲಸವಾಗಿದೆ. ಇದು ಒಟ್ಟು ಆದಾಯದಲ್ಲಿ ಶೇ.28ರಷ್ಟಾಗಿದೆ. ವೇತನ ಪಡೆದು ಜೀವಿಸುವ ಕುಟುಂಬಗಳು ಶೇ.7.72ರಷ್ಟಿವೆ. ಹಾಗೆಯೇ ಇವರಲ್ಲಿ ಹಣ ಉಳಿಸುವವರೂ ಕೂಡ ಪ್ರಮುಖವಾಗಿದ್ದಾರೆ. ಆದಾಯ ಎನ್ನುವುದು ಇವರಲ್ಲಿ ಯಾವಾಗಲೂ ಇರುವುದಿಲ್ಲ. ಹಾಗಾಗಿ ಈ ಕುಟುಂಬಗಳು ಸದಾ ಸಂಕಷ್ಟದಲ್ಲಿರುತ್ತವೆ. ಎನ್‌ಆರ್‌ಇಜಿಎ ದಂತಹ ಯೋಜನೆಗಳು ಜಿಲ್ಲೆಯಲ್ಲಿ ಅನುಷ್ಠಾನಗೊಂಡಿದೆಯಾದರೂ, ಇದನ್ನು ಹೊರತುಪಡಿಸಿ ಅನೇಕರು ಸಂಪಾದನೆ ಮಾಡುವುದು ಕಷ್ಟವಾಗಿದೆ.

## ಕುಟುಂಬದ ಖರ್ಚಿನ ವಿವರ

ಕುಟುಂಬದ ಖರ್ಚಿನ ರೀತಿಯನ್ನು ನೋಡಿದರೆ ಹೆಚ್ಚು ಕುಟುಂಬಗಳು ಹೊಟ್ಟೆಹೊರೆಯುವ ಸ್ವರೂಪದ ಕುಟುಂಬಗಳಾಗಿರುವುದು ಕಂಡು ಬರುತ್ತದೆ. ಈ ಕುಟುಂಬಗಳು ತಮ್ಮ ಒಟ್ಟು ಆದಾಯದ ಶೇ. 53.57ರಷ್ಟನ್ನು ದವಸ ಧಾನ್ಯಗಳಿಗಾಗಿ ವಿನಿಯೋಗಿಸುತ್ತಿದ್ದಾರೆ. ಉಳಿದಂತೆ ಶೇ. 15ರಷ್ಟು ಆದಾಯವನ್ನು ಸಾಮಾಜಿಕ ಆಚರಣೆಗಾಗಿ ಖರ್ಚುಮಾಡುತ್ತಿದ್ದರೆ. ಖರ್ಚು ಮತ್ತು ಆದಾಯದಲ್ಲಿ ಅಷ್ಟೇನು ವ್ಯತ್ಯಾಸಗಳು ಕಂಡುಬರುವುದಿಲ್ಲ. ಹಾಗಾಗಿ ಈ ಕುಟುಂಬಗಳ ಸರಾಸರಿ ಆದಾಯ ಮತ್ತು ಖರ್ಚಿನ ಅನುಪಾತ ತುಂಬಾ ಕಡಿಮೆಯದಾಗಿದೆ. ಆದಾಯವು ಸದಾ ಇರುವುದಿಲ್ಲ. ತಲಾವಾರು ಆದಾಯ ಮತ್ತು ಖರ್ಚು ನಡುವಿನ ಅಂತರ ಕೇವಲ ರೂ. 400 ಮಾತ್ರ.

ಕೋಷ್ಟಕ 8.14

**ವಿವಿಧ ಮೂಲಗಳಿಂದ ಕುಟುಂಬದ ವರಮಾನದ ಆಗಮನ**

| ವರಮಾನದ ಆಗಮನ | ಒಟ್ಟು |
|---|---|
| ಕೃಷಿ | 43.76 |
| ಪಶು ಸಂಗೋಪನೆ | 0.78 |
| ಕೂಲಿ ದುಡಿಮೆ | 28.00 |
| ಸಂಬಳದ ನೌಕರಿ | 7.72 |
| ವ್ಯಾಪರ | 5.05 |
| ಸಂದಾಯ | 3.34 |
| ಇತರೆ | 11.34 |
| ಒಟ್ಟು | 100.00 |

## ಸಾಲ ಸೋಲಗಳು

ಈ ಎರಡು ಸಮುದಾಯಗಳಲ್ಲಿಯೂ ಸಾಲಗಾರರ ಪ್ರಮಾಣ ಹೆಚ್ಚಾಗಿರುವುದು ಕಂಡುಬಂದಿದೆ. ಆದಾಯ ಮತ್ತು ಖರ್ಚಿನ ನಡುವಿನ ಅಂತರ ತುಂಬಾ ಕಡಿಮೆಯಿರುವುದು ಕಂಡುಬರುತ್ತದೆ. ಹಾಗಾಗಿ ಉಳಿತಾಯದ ಪ್ರಮಾಣ ತುಂಬಾ ಕಡಿಮೆ. ಇದರಿಂದ ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಚಿಕ್ಕ ಅಥವಾ ದೊಡ್ಡ ಪ್ರಮಾಣದ ಆರೋಗ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳು ಅಥವಾ ಮದುವೆಯಂತಹ ಆಚರಣೆಗಳು ಬಂದರೆ ಇವರೆಲ್ಲರೂ ಸಾಲದ ಮೊರೆಹೋಗುವುದು ಅನಿವಾರ್ಯವಾಗಿದೆ. ಹಾಗಾಗಿ ಶೇ.47.3ರಷ್ಟು ಕುಟುಂಬಗಳು ಸಾಲದ ಸಂಕೋಲೆಗೆ ಒಳಗಾಗಿವೆ. ಸರಿಸುಮಾರು ಅರ್ಧದಷ್ಟು ಕುಟುಂಬಗಳು ತಮ್ಮ ಆದಾಯದಲ್ಲಿ ಹೆಚ್ಚು ಭಾಗವನ್ನು ಬಡ್ಡಿ ಕಟ್ಟಲು ಬಳಸುತ್ತಿದ್ದಾರೆ. ಶೇ. 48.69ರಷ್ಟು ಕುಟುಂಬಗಳು ಸಾಂಪ್ರದಾಯಿಕ ಮೂಲಗಳಿಂದ ಸಾಲ ಪಡೆಯುತ್ತಾರೆ. ಸರಾಸರಿ ಕುಟುಂಬದ ಸರಾಸರಿ ಸಾಲದ ಮೊತ್ತ ರೂ. 18839 ಗಳಿರುವುದು ಕಂಡುಬರುತ್ತದೆ. ಇದು ಇವರ ತಲಾದಾಯಕ್ಕೆ ಹೋಲಿಸಿದರೆ ಹೆಚ್ಚೇ ಆಗಿದೆ. ಕುಟುಂಬಗಳ ಬಳಿಯಿರುವ ಆಸ್ತಿಯ ಪ್ರಮಾಣ ತುಂಬಾ ಕಡಿಮೆ. ಇವರಿಗೆ ಸಾಂಸ್ಥಿಕ ಮೂಲಗಳ ಸಾಲಸೌಲಭ್ಯಗಳು ತುಂಬಾ ಕಡಿಮೆ. ತುಂಬಾ ಕುಟುಂಬಗಳು ತಾವು ಮಾಡಿದ ಸಾಲಕ್ಕೆ ತಮ್ಮ ಆದಾಯದ ಬಹುಪಾಲನ್ನು ಬಡ್ಡಿಯರೂಪದಲ್ಲಿ ಸಾಂಪ್ರದಾಯಿಕ ಬಡ್ಡಿದಾರರಿಗೆ ಕಟ್ಟುತ್ತಿದ್ದಾರೆ.

ಸಾಲ ಮಾಡಲು ಮುಖ್ಯ ಕಾರಣ, ಆರೋಗ್ಯದ ತೊಂದರೆಯಾಗಿದೆ. ಇದಕ್ಕಾಗಿಯೇ ಶೇ. 45ರಷ್ಟು ಕುಟುಂಬಗಳು ಸಾಲ ಮಾಡಿವೆ. ಕುಟುಂಬ ಸಮೀಕ್ಷೆ ಸಂದರ್ಭದಲ್ಲಿ ಕಂಡುಬಂದದ್ದು ಮದುವೆಯಂಥ ಆಚರಣೆಗಳಿಗೆ ಎಲ್ಲಾ ಕುಟುಂಬಗಳು ಸಾಲಮಾಡಿರುವುದು ಕಂಡು ಬಂದಿವೆ. ಇನ್ನಿತರ ಸಾಮಾನ್ಯ ಕೌಟುಂಬಿಕ ಕಾರಣದ ಖರ್ಚಿಗಾಗಿ ಸಾಲ ಮಾಡಿರುತ್ತಾರೆ. ಕೆಲವು ಕುಟುಂಬಗಳು ಆಸ್ತಿಕೊಳ್ಳಲು ಸಾಲ ಮಾಡಿದ್ದಿದೆ. ಹೆಚ್ಚು ಸಾಲ ಪಡೆದಿರುವುದು ಅನುತ್ಪಾಧಕ ಉದ್ದೇಶಗಳಾದ ಮದುವೆ ಮತ್ತಿತರ ಸಾಮಾಜಿಕ ಆಚರಣೆಗಳಿಗಾಗಿ.

## ವಸತಿ, ವಲಸೆ ಮತ್ತು ಸಾಮುದಾಯಿಕ ಜೀವನ

ವಸತಿಯು ಮಾನವನ ಮೂಲಭೂತ ಅವಶ್ಯಕತೆಗಳಲ್ಲಿ ಒಂದಾಗಿದೆ. ಇದು ವ್ಯಕ್ತಿಗೆ ಏಕಾಂತತೆ ಮತ್ತು ಭದ್ರತೆಯನ್ನು ನೀಡುತ್ತದೆ. ಆದ್ದರಿಂದ ಇದು ಜೀವನದ ಮೂರು ಪ್ರಮುಖ ಮೂಲಭೂತ ಅವಶ್ಯಕತೆಗಳಲ್ಲಿ ಒಂದಗಿದೆ. ಬಹುಪಾಲು ಕುಟುಂಬದವರು ತಮ್ಮ ಸ್ವಂತ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಗ್ರಾಮೀಣ ಭಾಗದವರಿಗೆ ಇರಲು ಒಂದು ಮನೆಯಾದರೆ ಅವರಿಗೆ ಅನೇಕರೀತಿಯ ಭದ್ರತೆ ದೊರೆತಂತಾಗುತ್ತದೆ. ನಮ್ಮ ಆಯ್ದ ಕುಟುಂಬ ಸಮೀಕ್ಷೆಯಲ್ಲಿ ಶೇ.82ರಷ್ಟು ಕುಟುಂಬಗಳು ತಮ್ಮ ಸ್ವಂತಮನೆಗಳಲ್ಲಿ ವಾಸಿಸುತ್ತಿದ್ದಾರೆ. ಇದರಲ್ಲಿ ಶೇ.13ಕ್ಕಿಂತಲೂ ಹೆಚ್ಚು ಕುಟುಂಬಗಳು ಸರಕಾರ ನೀಡಿದ ಮನೆಗಳಾಗಿವೆ. ಆದರೆ ಈ ಮನೆಗಳು ನಿರಂತರ ರಿಪೇರಿಗೀಡಾಗಿದ್ದು ಮಳೆ ಬಂದರೆ ತೊಂದರೆಗೊಳಗಾಗುತ್ತವೆ.

ಅಲ್ಪಸಂಖ್ಯಾತರ ಕುಟುಂಬಗಳು ತಾವು ಕೆಳಗಿನ ಸಾಲಭ್ಯಗಳಿಗೆ ವಂಚಿತರಾಗಿರುವುದು ಬಹಿರಂಗಪಡಿಸಿದ್ದಾರೆ.

ಕೋಷ್ಟಕ 8.15

**ಕುಟುಂಬ ಮಟ್ಟದಲ್ಲಿ ದುಸ್ಥಿತಿಯ ಮಟ್ಟ**

| ಸೂಚಿಗಳು | ಸ್ಥಾನ |
|---|---|
| ಉದ್ಯೋಗ | 1 |
| ಶಿಕ್ಷಣ / ಕುಶಲತೆ | 2 |
| ವಸತಿ | 3 |
| ಭೂಮಿ | 4 |
| ಆರೋಗ್ಯ ಕೇಂದ್ರ | 5 |
| ಸಾಮಾಜಿಕ ಘನತೆ | 6 |
| ನೀರಾವರಿ | 7 |
| ಸಾಲ | 8 |
| ವ್ಯಾಪಾರ | 9 |
| ಶೌಚಾಲಯ | 10 |
| ಕುಟುಂಬ ಯೋಜನೆ | 11 |
| ಕುಡಿಯುವ ನೀರು | 12 |
| ಸೇತುವೆ | 13 |
| ಇತರೆ ಅನುಕೂಲಗಳು | 14 |

ಚೌಕಟ್ಟು 8.4

**ಮನೆಯ ಮೂಲಭೂತ ಸೌಲಭ್ಯಗಳು**

ಆಯ್ದ ಹಳ್ಳಿಯ ಕ್ಷೇತ್ರ ಸಮೀಕ್ಷೆ ಸಂದರ್ಭದಲ್ಲಿ ಕಂಡುಬಂದಂತೆ ಜಿಲ್ಲೆಯಲ್ಲಿ ಕೇವಲ ಒಂದು ಕೊಠಡಿಯಲ್ಲಿ 9 ಜನರು ವಾಸ ಮಾಡು ಕುಟುಂಬಗಳಿವೆ. ಅದಕ್ಕೆ ಬಾಗಿಲು ಇಲ್ಲ. ಇಲ್ಲಿ ಒಂದು ಭಾಗ ಹೊರಾಂಡ ಮತ್ತು ಮನೆ ಮುಂದೆ ತೆರೆದ ಮೈದಾನವಿರುತ್ತದೆ. ಮೂಲೆಯಲ್ಲಿ ಒಂದು ಹೆಂಗಸು ಹಸುವಿನ ಬೆರಣಿ ಮತ್ತು ಉರವಲಿಂದ ಅಡಿಗೆ ಮಾಡುತ್ತಿದ್ದಳು. ಆಗ ಆ ಮನೆಯತುಂಬಾ ಹೊಗೆ ಆವರಿಸಿತ್ತು ಅಲ್ಲಿ ಸಣ್ಣ ಮಗು ಮಲಗಿತ್ತು. ಮನೆಯ ಮುಂದೆ ನೀರನ್ನು ಸಂಗ್ರಹಿಸಿದ್ದ ತೊಟ್ಟಿಯಿತ್ತು. ಅವರ ಜೀವನ ರೀತಿಯನ್ನು ಊಹಿಸಲು ಸಾಧ್ಯವಿಲ್ಲ.

ಗ್ರಾಮೀಣ ಪ್ರದೇಶದ ಮನೆಗಳು ಸಾಮಾನ್ಯವಾಗಿ ಒಳಚರಂಡಿಯನ್ನು ಹೊಂದಿಲ್ಲ. ಗ್ರಾಮೀಣ ಭಾಗದಲ್ಲಿ ಶೇ.5ರಷ್ಟು ಕುಟುಂಬಗಳು ಮಾತ್ರ ಶೌಚಾಲಯವನ್ನು ಹೊಂದಿವೆ. ಶೇ.90ರಷ್ಟು ಕುಟುಂಬಗಳು ವಿದ್ಯತ್ ಸೌಲಭ್ಯವನ್ನು ಹೊಂದಿವೆ . ಇದು ಸರಕಾರದ ಭಾಗ್ಯಜ್ಯೋತಿ ಯೋಜನೆಯ ಫಲವಾಗಿದೆ. ಇದರಲ್ಲಿ ಒಂದು ಲೈಟ್ ಉರಿಸಲು ಅವಕಾಶವಿದೆ. ಉಳಿದ ಸ್ವಲ್ಪ ಜನರು ಸ್ವಂತ ಹಣದಿಂದ ವಿದ್ಯುತ್ ಸಂಪರ್ಕ ಪಡೆದಿದ್ದಾರೆ. ಇಲ್ಲಿ ವಿದ್ಯುತ್ ಸೇವೆ ರಾತ್ರಿ ಮಾತ್ರ ಇರುತ್ತದೆ.

## ಸರಕಾರದ ಸಹಾಯದ ನಿರೀಕ್ಷೆಯಲ್ಲಿ

ಸರಕಾರದಿಂದ ನೀವು ಯಾವ ಬಗೆಯ ಕಲ್ಯಾಣ ಸೇವೆಯ ಸಹಾಯವನ್ನು ನಿರೀಕ್ಷಿಸುತ್ತೀರಿ ಎಂಬ ಪ್ರಶ್ನೆಗೆ ಅಲ್ಪಸಂಖ್ಯಾತ ಕುಟುಂಬಗಳಿಂದ ಬಂದ ಮಾಹಿತಿಯನ್ನು ಕೋಷ್ಟಕದಲ್ಲಿ ನೀಡಲಾಗಿದೆ (ಕೋಷ್ಟಕ–8.4.2).

ಈ ಕುಟುಂಬಗಳ ಅನಿಸಿಕೆ ಪ್ರಕಾರ ಸರಕಾರವು ನೀಡಲೇ ಬೇಕಾದ ಸವಲತ್ತುಗಳು ಶಿಕ್ಷಣ, ಉದ್ಯೋಗ ತರಬೇತಿ ಮತ್ತು ಅಲ್ಪಸಂಖ್ಯಾತರ ಅಭ್ಯುದಯಕ್ಕಾಗಿ ಸಾಲದ ವ್ಯವಸ್ಥೆಯನ್ನು ಕೋರಿರುತ್ತಾರೆ. ಅಲ್ಪಸಂಖ್ಯಾತರ ಕುಟುಂಬಗಳಿಗೆ ಅಗತ್ಯವಿರುವ ಮೇಲಿನವುಗಳನ್ನು ಸರಕಾರ ಬೇಕಾದಷ್ಟು ಯೋಜನೆಗಳ ಮೂಲಕ ಒದಗಿಸುತ್ತಿದೆ. ಅವುಗಳಿಂದ ಪ್ರಯೋಜನ ಪಡೆಯಬಹುದು.

## ನೀತಿ ಕಾರ್ಯಕ್ರಮಗಳ ಸಲಹೆ

ಸಂಯೋಜಿತ ನೀತಿಗಳ ಮೂಲಕ ತೆಗೆದುಕೊಳ್ಳಬಹುದಾದ ಕ್ಷೇತ್ರಗಳು ಮತ್ತು ಕ್ರಮಗಳ ಇಲ್ಲಿ ಗುರುತಿಸಲಾಗಿದೆ.

### ಶಿಕ್ಷಣ

- ಅಲ್ಪಸಂಖ್ಯಾತರಿಗೆ ಶಿಕ್ಷಣವನ್ನು ಆದ್ಯತೆಯಾಗಿ ಪರಿಗಣಿಸಬೇಕು.
- ಪೋಷಕರ ಜೊತೆಗೆ ಸಮಾಲೋಚನೆ ನಡೆಸಿ ಅವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಪ್ರೋತ್ಸಾಹ ಮತ್ತು ಉತ್ತೇಜನ ನೀಡಬೇಕು.
- ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಎಲ್ಲಾ ತಾಲ್ಲೂಕುಗಳಲ್ಲಿ ತೆರೆಯಬೇಕು.
- ಶಾಲೆಗೆ ಬೇಕಾದಷ್ಟು ಶಿಕ್ಷಕರನ್ನು ಒದಗಿಸಬೇಕು ಮತ್ತು ಉತ್ತಮ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು.
- ಕಲಿಕಾಗುಣಮಟ್ಟ ಹೆಚ್ಚಿಸಲು ತ್ವರಿತ ಗತಿಯಲ್ಲಿ ಕಲಿಕೆಯ ಕಾರ್ಯಕ್ರಮಗಳು, ಗಣಿತ ಅಭ್ಯಾಸದ ಕಾರ್ಯಕ್ಕಾಗಿ ಎನ್.ಜಿ.ಓ. ಗಳನ್ನು ಬಳಕೆಮಾಡಿಕೊಳ್ಳುವುದು.
- ವಿದ್ಯಾರ್ಥಿಗಳಿಗೆ ಶಾಲಾ ದಾಖಲಾತಿಯ ಪ್ರೋತ್ಸಾಹ ಧನ ಮತ್ತು ಅಗತ್ಯವಿದ್ದಷ್ಟು ಪ್ರಮಾಣದ ಶಿಷ್ಯವೇತನ, ಸವಲತ್ತು ನೀಡುವುದನ್ನು ಮುಂದುವರಿಸಬೇಕು.
- ಉತ್ತಮ ಗುಣಮಟ್ಟದ ಮಧ್ಯಾಹ್ನದ ಬಿಸಿಯೂಟ ನೀಡಬೇಕು.
- ಆಟದ ಮೈದಾನ ಮತ್ತು ಆಟದ ಉಪಕರಣಗಳನ್ನು ನೀಡುವುದರ ಮೂಲಕ ಮಕ್ಕಳನ್ನು ಶಾಲೆಗೆ ಆಕರ್ಷಿಸಬೇಕು.

- ಉತ್ತಮ ಬೋಧನಾ ಮತ್ತು ಕಲಿಕಾ ವಿಧಾನದ ಅಳವಡಿಕೆಗಾಗಿ ಉತ್ತಮ ಫಲಿತಾಂಶ ತಂದ ಶಿಕ್ಷಕರಿಗೆ ಉತ್ತೇಜನ ನೀಡಬೇಕು.

## ತರಬೇತಿ

ಅಂಚಿನ ಸಮುದಾಯಗಳ ಧಾರಣಾ ಸಾಮರ್ಥ್ಯ ಹೆಚ್ಚಿಸುವ ಮತ್ತು ಸಶಕ್ತರನ್ನಾಗಿ ಮಾಡುವ ಅನಿವಾರ್ಯತೆ ಇದೆ. ಇದಕ್ಕೆ ಬೇಕಾದ ಕ್ರಮಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

- ಆಟೋಮೊಬೈಲ್ ಮತ್ತು ಮಿಶನ್‌ಟೂಲ್ ಆಪರೇಟರ್ ತರಬೇತಿ ದ್ವಿಚಕ್ರ ವಾಹನ, ನಾಲ್ಕು ಚಕ್ರವಾಹನ, ಕೌಟುಂಬಿಕ ಉಪಕರಣಗಳಾದ ವಿದ್ಯುತ್ ಉಪಕರಣಗಳು, ಕೃಷಿ ಉಪಕರಣಗಳಂತಹ ರಿಪೇರಿಗಾಗಿ 6 ತಿಂಗಳಿಂದ ಒಂದು ವರ್ಷದವರೆಗಿನ ತರಬೇತಿ ನೀಡಬೇಕು
- ಸಣ್ಣ ಉದ್ಯಮ ಸಾಹಸಿಗಳ ಅಭಿವೃದ್ಧಿ
- ಸಣ್ಣ ಉದ್ದಿಮೆಗಳಾದ ಕೃಷಿ ಮಣ್ಣು ಪರೀಕ್ಷೆಯ ಚಟುವಟಿಕೆಗಳಿಗೆ ಅಗತ್ಯ ತರಬೇತಿ ನೀಡಿ ತಾಲ್ಲೂಕು ಮಟ್ಟದಲ್ಲಿ ಕೆಲಸ ನಿರ್ವಹಿಸಲು ಸಾಲದ ರೂಪದಲ್ಲಿ ಸಹಾಯಧನ ನೀಡಬೇಕು ಮತ್ತು ಉದ್ದಿಮೆಗಳ ಅಭಿವೃದ್ಧಿ ಮತ್ತು ಆಡಳಿತ ನಿರ್ವಹಣೆಯಂತಹ ವಿಷಯದಲ್ಲಿ ತರಬೇತಿ ನೀಡಬೇಕು.
- ಆಹಾರ ಸಂಸ್ಕರಣ ಘಟಕದ ತರಬೇತಿ– ಐಸ್‌ಕ್ರೀಂ, ತಂಪುಪಾನೀಯಗಳು, ಮಾಂಸ ಪರಿಷ್ಕರಣೆ, ಕೋಳಿ ಮತ್ತು ಇನ್ನಿತರ ಪ್ರಾಣಿಗಳ ಉತ್ಪನ್ನಗಳ ಸಂಸ್ಕರಣೆ ಮತ್ತು ಶೈತ್ಯಾಗಾರಗಳ ಸವಲತ್ತುಗಳನ್ನು ಒದಗಿಸಬೇಕು.
- ಹೊಲಿಗೆ ತರಬೇತಿ – ಬಟ್ಟೆಗಳ ಕಸೂತಿಕಲೆ, ಸೌಂದರ್ಯ ಪಾರ್ಲರ್ ಮತ್ತು ಸಿದ್ದುಡುಪುಗಳ ತಯಾರಿಕಾ ಘಟಕಗಳನ್ನು ಸ್ಥಾಪಿಸಲು ಅಗತ್ಯವಾದ ತರಬೇತಿಯನ್ನು ಯುವಕ ಮತ್ತು ಯುವತಿಯರಿಗಾಗಿ ನೀಡಬೇಕು.
- 10ನೆಯ ತರಗತಿ ಮುಗಿಸಿದ ವಿದ್ಯಾರ್ಥಿಗಳಿಗೆ 6 ತಿಂಗಳ ಕಂಪ್ಯೂಟರ್ ಕೋರ್ಸ್ ತರಬೇತಿ ನೀಡಬೇಕು.
- ವಾಹನ ಚಾಲನೆಗೆ ತರಬೇತಿ ನೀಡುವುದು
- ಕೃಷಿಕರಿಗೆ ತೋಟಗಾರಿಕೆ, ಪುಷ್ಪೋದ್ಯಮದಲ್ಲಿ ತರಬೇತಿ ನೀಡಿ ಮಾರುಕಟ್ಟೆಯ ಸಂಪರ್ಕ ದೊರಕಿಸಿಕೊಡಬೇಕು.

## ಇತರ ಸೌಲತ್ತುಗಳು

- ಅಲ್ಪಸಂಖ್ಯಾತರ ಕಾಲೋನಿಗಳಿಗೆ ವಸತಿ ಮತ್ತಿತರ ಮೂಲಭೂತ ಸೌಲಭ್ಯಗಳ ವ್ಯವಸ್ಥೆಯಾಗಬೇಕು.
- ಸಮಗ್ರ ಆರೋಗ್ಯ ವಿಮಾ ಯೋಜನಾ ಸೌಲಭ್ಯ ದೊರಕಿಸಿಕೊಡುವುದು.
- ಬಡ ಕುಟುಂಬಗಳಿಗೆ ಪಡಿತರ ಚೀಟಿ ವಿತರಣೆ
- ನಿರಂತರ ಉದ್ಯೋಗಕ್ಕೆ ಅನುಕೂಲ ಮಾಡುವುದು.

ಈ ಎಲ್ಲ ಸೌಲಭ್ಯಗಳನ್ನು ನೀಡುವುದರ ಮೂಲಕ ಅಲ್ಪಸಂಖ್ಯಾತರ ಸಮುದಾಯದ ಸಬಲೀಕರಣವನ್ನು ಸಾಧಿಸಬಹುದು.

# ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಉತ್ತಮ ಆಡಳಿತ




KALBURGI (GULBARGA) District Map
MAHARASHTRA
Bidar
Bijapur
ANDHRA PRADESH
Raichur
Khajuri
Aland
Salgar
Kinhi
Sonath
Bodhan
Kamlapur
Narona
Mahagaon
Sargapur
Ratkal
Chincholi
Sulahpet
Kulali
Nimbarga
KALBURGI
Kalgi
Marhal
Mannur
Atanur
Gobur Buzurgr
Tingli
Nirgunda
Afzalpur
Gangapur
Farhatabad
Sadam
Chitapur
Adki
Firozabad
Mudhol
Nelogi
Wadi
Kona
Jevargi
Addola
Nalwar
Handarki
Aralagundi
Ijeri
Gajarkot
Yaragol
Yedrami
Gurmatkal
Sirwal
Yadgir
Doranahalli
Haligeri
Gugi
Malla Buzurg
Shahpur
Khanapur
Nandepalli
Kembhavi
Sagar
Hattigudur
Ajalapur
Saidapur
Agni
Wadagera
Shorapur
Tumkur
Devapur
Kakkera
Tintani
Kodekal
Narayanpur
Awarja
Bari
Benithora
Mullamdri
Kogna
Bhima
Krishna
N
LEGEND
State Boundary
District Boundary
Major Road
Railway
District Headquarter
Major Town
Other Town
River
Map not to Scale
Copyright © 2007 Compare Infobase Limited
www.mapsofindia.com

ಅಧ್ಯಾಯ 9

# ಪಂಚಾಯತ್ ರಾಜ್ ಸಂಸ್ಥೆಗಳು ಮತ್ತು ಉತ್ತಮ ಆಡಳಿತ

## ಪ್ರಸ್ತಾವನೆ

ಭಾರತೀಯ ರಾಜಕೀಯದಲ್ಲಿ ಸ್ಥಳೀಯ ಆಡಳಿತ ಸಮುದಾಯಗಳ ಪಾತ್ರವು ಪ್ರಾಚೀನ ಕಾಲದಿಂದಲೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಚರಿತ್ರೆಯಲ್ಲಿ ತಳಮಟ್ಟದ ಸ್ಥಳೀಯ ಆಡಳಿತ ಸಂಸ್ಥೆಯನ್ನು ಪಂಚಾಯತಿ ಎಂದು ಕರೆಯಲಾಗುತ್ತಿತ್ತು. ಇದು ಸಾಮಾಜಿಕ ಮತ್ತು ಆರ್ಥಿಕವಾಗಿ ಗ್ರಾಮೀಣ ಜನರ ಜೀವನದಮೇಲೆ ರಾಜಕೀಯವಾಗಿ ಸಾಕಷ್ಟು ಪ್ರಭಾವ ಬೀರುವಂತಹ ಸಂಸ್ಥೆಯಾಗಿತ್ತು. ಈ ಸ್ಥಳೀಯ ಸಂಸ್ಥೆಗಳಿಗೆ ಮೊಗಲರ ಕಾಲಾವಧಿಯಲ್ಲಿ ಮತ್ತು ಬ್ರಿಟೀಷರ ಕಾಲದಲ್ಲಿ ಹಿನ್ನಡೆಯುಂಟಾಯಿತು. ಆದರೆ ಈ ಸಂಸ್ಥೆಯು ಸ್ವಾತಂತ್ರ್ಯಾನಂತರ ಮರುಜೀವ ಪಡೆದುಕೊಂಡಿತು.

ಸ್ವಾತಂತ್ರ್ಯಾನಂತರದ 1957ರ ಬಲವಂತರಾಯ್ ಮೆಹತಾ ಅಧ್ಯಯನ ಸಮಿತಿಯ ಶಿಫಾರಸ್ಸಿನ ಪರಿಣಾಮವಾಗಿ ಪಂಚಾಯತ್‌ರಾಜ್ ಸಂಸ್ಥೆಗಳಿಗೆ ವಿಶೇಷ ಆದ್ಯತೆ ಬಂದಿತು. ಅಶೋಕ ಮೆಹತಾ ಸಮಿತಿ ವರದಿಯ ನಂತರದ ದಶಕಗಳಲ್ಲಿ ಅವು ಹೆಚ್ಚು ಮಹತ್ವವನ್ನು ಪಡೆದುಕೊಂಡವು. ಹೀಗಾಗಿ ಪಶ್ಚಿಮ ಬಂಗಾಳ, ಕರ್ನಾಟಕ ಮತ್ತು ಆಂಧ್ರ ಪ್ರದೇಶ ಮುಂತಾದ ರಾಜ್ಯಗಳು ತಮ್ಮದೇ ಆದ ಹೊಸರೀತಿಯಲ್ಲಿ ಪಂಚಾಯತ್ ರಾಜ್ ಮಾದರಿಯನ್ನು ಜಾರಿಗೊಳಿಸಲು ಪ್ರಯತ್ನಿಸಿದವು. ಈ ಪ್ರಯತ್ನದಲ್ಲಿ ಕರ್ನಾಟಕದ ಶ್ರೀರಾಮಕೃಷ್ಣ ಹೆಗಡೆಯವರು ರಾಜಕೀಯ ವಿಕೇಂದ್ರೀಕರಣ ಆಡಳಿತವನ್ನು ಜಾರಿಗೆ ತಂದು ಪಂಚಾಯತ್ ರಾಜ್ ವ್ಯವಸ್ಥೆಗೆ ಸಂಬಂಧಿಸಿದಂತೆ ಹೊಸಯುಗವೊಂದಕ್ಕೆ 90ರ ದಶಕದಲ್ಲಿ ನಾಂದಿಯಾಡಿದರು. ಈ ಅವಧಿಯಲ್ಲಿ ಪ್ರಜ್ಞಾಪೂರ್ವಕವಾಗಿಯೇ ಪಂಚಾಯತ್ ಸಮಿತಿಗಳಿಗೆ ಸಂವಿಧಾನಿಕ ಸ್ಥಾನಮಾನಗಳನ್ನು ನೀಡಲಾಯಿತು. ಇದು ಸಂವಿಧಾನದ 73ನೆಯ ತಿದ್ದುಪಡಿಯಾಗಿ ಪರಿವರ್ತನೆಯ ಹೆಗ್ಗುರುತಾಯಿತು. ಇದು 24 ಏಪ್ರಿಲ್ 1993ರಲ್ಲಿ ಜಾರಿಗೆ ಬಂದಿತು. ಈ ಕಾಯಿದೆಯು ವ್ಯಾಪಕವಾಗಿ, ಕ್ರಾಂತಿಕಾರಿಯಾದ ಸಂವಿಧಾನಿಕ ಬದಲಾವಣೆಯಿಂದಾಗಿ ಅಧಿಕಾರ ವಂಚಿತ ಲಕ್ಷಾಂತರ ಭಾರತೀಯರ ಮನೆ ಬಾಗಿಲಿಗೆ ಬರುವಂತಾಯಿತು. ಮಹಾತ್ಮ ಗಾಂಧಿ ಅವರು ಬಲವಾಗಿ ನಂಬಿದ್ದ ಗ್ರಾಮೀಣ ಭಾಗದ ಜನರ ಅಭಿವೃದ್ಧಿ, ಗ್ರಾಮೀಣ ಭಾಗದ ಜನರ ಜೀವನದಲ್ಲಿ ಪ್ರಗತಿ ಮತ್ತು ಅಗತ್ಯವಾದ ಅಭಿವೃದ್ಧಿಯ ನೀತಿ ಗ್ರಾಮೀಣ ಜನರೇ ರೂಪಿಸಿಕೊಳ್ಳುವಂತಾಗಬೇಕು ಎಂಬುದಕ್ಕೆ ಇಲ್ಲಿ ಹೊಸ ಜೀವ ಬಂದಂತಾಯಿತು. ಈ ಕಾಯಿದೆಯಿಂದ ಜನರು ಸ್ಥಳೀಯ ಸಂಸ್ಥೆಗಳಲ್ಲಿ ಭಾಗವಹಿಸುವುದು ಸಾಧ್ಯವಾಯಿತು ಮತ್ತು ಅಭಿವೃದ್ಧಿಯ ನೀತಿ ಮತ್ತು ಯೋಜನೆಗಳ ರೂಪಿಸುವ ಒಂದು ವೇದಿಕೆಯಾಗಿ ಅದು ಮಾರ್ಪಟ್ಟಿತು. ದೇಶದಲ್ಲಿ ಪಂಚಾಯಿತಿ ಕಾಯಿದೆಯನ್ನು 1993ರಲ್ಲಿ ವ್ಯಾಪಕವಾಗಿ ಜಾರಿಗೆ ತಂದ ಮೊದಲ ರಾಜ್ಯವೆಂಬ ಹೆಗ್ಗಳಿಕೆಗೆ ಕರ್ನಾಟಕವು ಪಾತ್ರವಾಯಿತು. ಸಂವಿಧಾನದ 73ನೆಯ ತಿದ್ದುಪಡಿಯ ನಂತರ ರಾಜ್ಯದಲ್ಲಿ ಪಂಚಾಯಿತಿ ಸಂಸ್ಥೆಗಳಿಗೆ ಮೂರು ಭಾರಿ ಚುನಾವಣೆ ನಡೆದಿವೆ.

## ಗುಲ್ಬರ್ಗಾ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ

ಗುಲ್ಬರ್ಗಾ ಜಿಲ್ಲೆಯಲ್ಲಿ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯು ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯಿದ್ದು ಮಧ್ಯಮ ಮಟ್ಟದಲ್ಲಿ ಹತ್ತು ತಾಲ್ಲೂಕು ಪಂಚಾಯತಿಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ತಳಹಂತದ 1210 ಹಳ್ಳಿಗಳನ್ನೊಳಗೊಂಡ 337 ಗ್ರಾಮ

ಪಂಚಾಯಿತಿಗಳು ಜಿಲ್ಲೆಯಲ್ಲಿವೆ. ಭೌಗೋಳಿಕವಾಗಿ ವಿಸ್ತಾರವಾಗಿರುವ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಒಂದು ಜಿಲ್ಲಾ ಪಂಚಾಯಿತಿ, ಹತ್ತು ತಾಲ್ಲೂಕು ಪಂಚಾಯಿತಿಗಳು ಮತ್ತು 363 ಗ್ರಾಮ ಪಂಚಾಯಿತಿಗಳನ್ನೊಳಗೊಂಡ ಒಂದು ಬೃಹತ್ ವ್ಯವಸ್ಥೆಯಾಗಿದೆ.

ಆರಂಭದಿಂದಲೂ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯು ಜಿಲ್ಲೆಯಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಜನಪ್ರತಿನಿಧಿಗಳು ಸರಕಾರದ ಕಾರ್ಯಕ್ರಮಗಳಲ್ಲಿ ಸಮರ್ಥವಾಗಿ ಭಾಗವಹಿಸಿ ಯೋಜನೆಗಳ ನಿರ್ವಹಣೆ ಮತ್ತು ಜಾರಿಯಲ್ಲಿ ಪರಿಣಾಮಕಾರಿ ಪಾತ್ರ ನಿರ್ವಹಿಸುತ್ತಿದ್ದಾರೆ. ಜಿಲ್ಲಾ ಪಂಚಾಯಿತಿಯಲ್ಲಿ ಐದು ಉನ್ನತ ಸ್ಥಾಯಿ ಸಮಿತಿಗಳಿವೆ. ಅವುಗಳು ಈ ಕೆಳಕಂಡಂತಿವೆ.

1. ಯೋಜನೆ, ಹಣಕಾಸು ಮತ್ತು ಲೆಕ್ಕ ಪರಿಶೋಧನಾ ಸಮಿತಿ
2. ಕಾರ್ಯಾಂಗ ಸಮಿತಿ
3. ಶಿಕ್ಷಣ ಮತ್ತು ಆರೋಗ್ಯ ಸಮಿತಿ
4. ಕೃಷಿ ಮತ್ತು ಕೈಗಾರಿಕೆ ಸಮಿತಿ
5. ಸಾಮಾಜಿಕ ನ್ಯಾಯ ಸಮಿತಿ

ಯೋಜನೆಯನ್ನು ಸಿದ್ಧಪಡಿಸುವ ಮತ್ತು ಅದನ್ನು ಅನುಷ್ಠಾನಗೊಳಿಸುವ ಹಾಗೂ ಅಭಿವೃದ್ಧಿ ಯೋಜನೆ ಮತ್ತು ನೀತಿ ನಿರೂಪಣೆಯಲ್ಲಿ ಈ ಎಲ್ಲಾ ಸಮಿತಿಗಳು ಜಿಲ್ಲಾ ಪಂಚಾಯತಿ ಜೊತೆಯಲ್ಲಿ ಕೆಲಸ ನಿರ್ವಹಿಸುತ್ತಿವೆ. ಕ್ರಿಯಾ ಯೋಜನೆ ಸಿದ್ಧಪಡಿಸುವ ಕಾರ್ಯದಲ್ಲಿ ಸಮಿತಿಗಳ ಸಗಭಾಗಿತ್ವವಿರುತ್ತದೆ.

ಗುಲಬರ್ಗಾ ಜಿಲ್ಲಾ ಪಂಚಾಯತಿ ಹಂತದಿಂದ ಕೆಳಗೆ ಬರುವ ಹತ್ತು ತಾಲ್ಲೂಕು ಪಂಚಾಯತಿಗಳು ಈ ಮುಂದಿನಂತಿವೆ. ಅಫಜಲ್ ಪುರ, ಆಳಂದ. ಚಿಂಚೋಳಿ, ಚಿತ್ತಾಪುರ, ಗುಲಬರ್ಗಾ, ಜೇವರ್ಗಿ, ಸೇಡಂ, ಶಹಾಪುರ, ಶೋರಾಪುರ್ ಮತ್ತು ಯಾದಗಿರ್. ಈ ಹತ್ತೂ ತಾಲ್ಲೂಕು ಪಂಚಾಯಿತಿಗಳ ವ್ಯಾಪ್ತಿಯಲ್ಲಿ 337 ಗ್ರಾಮಪಂಚಾಯಿತಿಗಳು ಬರುತ್ತವೆ. ಜಿಲ್ಲಾ ಪಂಚಾಯತಿಯಲ್ಲಿನ 65 ಸದಸ್ಯರ ಪೈಕಿ 24 ಮಹಿಳಾ ಸದಸ್ಯರು (ಶೇ. 36.9) ಮತ್ತು 236 ತಾಲ್ಲೂಕು ಪಂಚಾಯತ್ ಸದಸ್ಯರ ಪೈಕಿ 92 ಮಹಿಳಾ ಸದಸ್ಯರು (ಶೇ. 39) ಇದ್ದಾರೆ. ತಾಲ್ಲೂಕು ಪಂಚಾಯತಿಯ ಬಹುಪಾಲು ಸದಸ್ಯರು ಅಕ್ಷರಸ್ಥರಾಗಿದ್ದಾರೆ. ಅಲ್ಲಿನ 236 ಸದಸ್ಯರಲ್ಲಿ ಕೇವಲ 43 ಸದಸ್ಯರು (ಶೇ.18.2) ಮಾತ್ರ ಅನಕ್ಷರಸ್ಥರು.

ಗ್ರಾಮಪಂಚಾಯತಿಗಳ ಒಟ್ಟು ಸದಸ್ಯರ ಸಂಖ್ಯೆ 5858. ಇವರಲ್ಲಿ 2248 ಮಹಿಳಾ ಸದಸ್ಯರಿದ್ದಾರೆ. (ಶೇ.38.4) ಇಲ್ಲಿರುವ 337 ಅಧ್ಯಕ್ಷರ ಪೈಕಿ 111 ಮಹಿಳಾ ಅಧ್ಯಕ್ಷರಿದ್ದಾರೆ (ಶೇ.33). ಗ್ರಾಮ ಪಂಚಾಯಿತಿಗಳಿಗೆ 2000ದಲ್ಲಿ ನಡೆದ ಚುನಾವಣೆಯಲ್ಲಿ ಮಹಿಳೆಯರಿಗೆ ಶೇ. 43ರಷ್ಟು ಸ್ಥಾನಗಳು ಲಭ್ಯವಾಗಿದ್ದವು. ಅದೇ ರೀತಿಯಲ್ಲಿ 2005ರಲ್ಲಿ ಶೇ. 38.4 ಮಹಿಳಾ ಸದಸ್ಯರು ತಾಲ್ಲೂಕು ಪಂಚಾಯಿತಿಯಲ್ಲಿದ್ದರು. ಇಲ್ಲಿ ಶೇ. 2ರಷ್ಟು ಕಡಿತ ಕಂಡುಬಂದಿದೆ. ಆದರೆ ಜಿಲ್ಲಾ ಪಂಚಾಯತಿಯಲ್ಲಿ ಹಿಂದಿನ ಎರಡು ಚುನಾವಣೆಯಲ್ಲಿ ಮಹಿಳಾ ಸದಸ್ಯರ ಪ್ರಮಾಣದಲ್ಲಿ ಶೇ. 3 ರಷ್ಟು ಹೆಚ್ಚಳ ಕಂಡುಬಂದಿದೆ.

ರಾಷ್ಟ್ರೀಯ ಸಮ ವಿಕಾಸ ಯೋಜನೆಯಡಿ 15 ರಿಂದ 18 ದಿನಗಳ ಕಾಲ ವಿವಿಧ ಗುಂಪುಗಳಿಗೆ ಹಮ್ಮಿಕೊಂಡಿದ್ದ ಅಕ್ಷರ ಕಲಿಕಾ ಸಾಮರ್ಥ್ಯ ಶಿಬಿರದಲ್ಲಿ ಅನಕ್ಷರಸ್ಥ ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಸದಸ್ಯರು ಪಾಲ್ಗೊಂಡಿದ್ದರು. ಇದು ಪಂಚಾಯತಿ ಕೆಲಸಕಾರ್ಯಗಳಲ್ಲಿ ಸದಸ್ಯರು ಸಮರ್ಥವಾಗಿ ಭಾಗವಹಿಸಲು ಮತ್ತು ಕಾರ್ಯಭಾರವನ್ನು ಸಮರ್ಥವಾಗಿ ನಿಭಾಯಿಸಲು ಸಹಕಾರಿಯಾಗುತ್ತದೆ. ಸ್ಥಳೀಯ ಸ್ವಯಮಾಡಳಿತದ ಪ್ರಮುಖ ಉದ್ದೇಶ ಅಧಿಕಾರದ ವಿಕೇಂದ್ರೀಕರಣ ಮತ್ತು ಗ್ರಾಮಪಂಚಾಯತ್ ಮಟ್ಟದಲ್ಲಿ ಯೋಜನೆಗಳ ತಯಾರಿಕೆ. ಗ್ರಾಮಪಂಚಾಯತಿ ಹಂತದಲ್ಲಿ ಜನರ ಮತ್ತು ಸದಸ್ಯರ ಉನ್ನತ ಕೌಶಲ್ಯದ ಅವಶ್ಯಕತೆಯಿದೆ. ವಿವಿಧ ಮಟ್ಟದ ಯೋಜನೆಗಳ ಜಾರಿಗೆ ಬುದ್ಧಿಶಕ್ತಿಯು ಅತ್ಯವಶ್ಯಕವಾಗಿ ಬೇಕಾಗುತ್ತದೆ. ಜನಪ್ರತಿನಿಧಿಗಳು ಹಳ್ಳಿಗಳ ಅಗತ್ಯ ಮತ್ತು ಆದ್ಯತೆಯನ್ನು ಗುರುತಿಸುವುದು, ಅದಕ್ಕೆ ಅಗತ್ಯ ನೀತಿ ಮತ್ತು ಯೋಜನೆಗಳನ್ನು ರೂಪಿಸುವ ಸಾಮರ್ಥ್ಯ

ಹೊಂದಿರಬೇಕು. ಈ ಹಿನ್ನೆಲೆಯಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಪಂಚಾಯತಿಯಲ್ಲಿ ಅನಕ್ಷರಸ್ಥ ಸದಸ್ಯರಿರುವುದರಿಂದ ಮತ್ತು ಜಿಲ್ಲೆಯಲ್ಲಿ ಅನಕ್ಷರತೆಯು ವ್ಯಾಪಕವಾಗಿರುವುದರಿಂದ ಅದು ಒಂದು ರೀತಿಯಲ್ಲಿ ವಿಕಲಾಂಗವಾಗಿದೆ. ಜಿಲ್ಲೆಯಲ್ಲಿ ಗ್ರಾಮೀಣ ಸಾಕ್ಷರತೆ ಶೇ. 42.3ರಷ್ಟಿದೆ. ಗ್ರಾಮೀಣ ಸಾಮಾಜಿಕ ರಚನೆ ತುಂಬಾ ಹಿಂದುಳಿದಿದೆ ಮತ್ತು ಶ್ರೇಣೀಕೃತ ಜಾತಿ ವ್ಯವಸ್ಥೆಯ ಪ್ರಭಾವದಿಂದ ಕೂಡಿದೆ. ನಿಜವಾಗಲೂ ಬಲಾಢ್ಯ ಉನ್ನತ ಜಾತಿಗಳ ಕೈಯಲ್ಲಿ ಪಂಚಾಯತಿ ಅಧಿಕಾರ ಕೇಂದ್ರೀಕರಣವಾಗಿದೆ. ಅಧಿಕಾರವು ಭೂಮಾಲಿಕರ ಪರವಾಗಿ ಕೆಲಸ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಗಳನ್ನು ಕುರಿತ ಅಧ್ಯಯನಗಳು ಅವುಗಳ ದಕ್ಷತೆಯನ್ನು ಕುರಿತಂತೆ ಮತ್ತು ಅವುಗಳ ಕಾರ್ಯಕ್ಷಮತೆ ಕುರಿತಂತೆ ಅನೇಕ ಸತ್ಯಸಂಗತಿಗಳನ್ನು ಬಹಿರಂಗಗೊಳಿಸಿವೆ(ಛಾಯಾ ದೇಗಾವಂಕರ್,1996). ಆರಂಭದ ಹಂತದಲ್ಲಿ ಗ್ರಾಮಪಂಚಾಯ್ತಿಗಳು ಅಗತ್ಯಕ್ಕನುಸಾರವಾಗಿ ಕರ್ತವ್ಯ ನಿರ್ವಹಿಸುತ್ತಿದ್ದುದು ಬಹಳ ಕಡಿಮೆ. ಗ್ರಾಮಪಂಚಾಯತಿ ಸಭೆಗಳು ನಿಯಮಿತವಾಗಿರದೆ ಯಾವಾಗಲೋ ಕಾಟಾಚಾರಕ್ಕೆ ನಡೆಯುತ್ತಿದ್ದವು. ಅವು ಸರಿಯಾಗಿ ನಡೆಯುತ್ತಲೇ ಇರಲಿಲ್ಲ. ಇದರಿಂದ ಬಡತನ ನಿರ್ಮೂಲನಾ ಕಾರ್ಯಕ್ರಮಗಳಡಿ ಫಲಾನುಭವಿಗಳ ಆಯ್ಕೆಗಳು ಗ್ರಾಮಸಭೆಗಳ ಮೂಲಕ ನಡೆಯುತ್ತಲೇ ಇರಲಿಲ್ಲ. ಮಹಿಳಾ ಪ್ರತಿನಿಧಿಗಳ ಹೆಸರಲ್ಲಿ ಮತ್ತಾರೋ ಪುರುಷ ಸಂಬಂಧಿಕರು ಅಧಿಕಾರವನ್ನು ಚಲಾಯಿಸುವುದು ಗ್ರಾಮೀಣ ಸಮಾಜದಲ್ಲಿ ಸಹಜವಾಗಿದೆ. ಇಲ್ಲಿ ಗ್ರಾಮ ಮಟ್ಟದ ಯೋಜನೆಗಳನ್ನು ಅರ್ಥಮಾಡಿಕೊಳ್ಳುವ, ಅದನ್ನು ಅರಿತುಕೊಳ್ಳುವ ಬುದ್ಧಿವಂತ ಸದಸ್ಯರ ಅಗತ್ಯವಿದೆ.

ಕಾಲ ಕಳೆದಂತೆ ಪರಿಸ್ಥಿತಿ ನಿಧಾನಗತಿಯಲ್ಲಿ ಬದಲಾಗುತ್ತಿದೆ. ಎರಡನೆಯ ಹಂತದ ಚುನಾವಣೆಯಲ್ಲಿ ಆರಿಸಿ ಬಂದ ಚುನಾಯಿತ ಪ್ರತಿನಿಧಿಗಳು ಪಂಚಾಯತಿ ವ್ಯವಸ್ಥೆ ಬಗ್ಗೆ ಸ್ವಲ್ಪ ತಿಳುವಳಿಕೆ ಮತ್ತು ಅನುಭವ ಉಳ್ಳವರಾಗಿದ್ದಾರೆ. ಜಿಲ್ಲೆಯ ಕೆಲವು ತಾಲ್ಲೂಕುಗಳ ಪರಿಸ್ಥಿತಿ ಅಂದರೆ ಆಳಂದ, ಗುಲ್ಬರ್ಗಾ, ಅಫಜಲ್‌ಪುರ, ಸೇಡಂ, ಚಿತ್ತಾಪುರಗಳು ಉತ್ತಮಗೊಂಡಿವೆ. ಆದರೆ ಗ್ರಾಮ ಪಂಚಾಯತಿ ಮಟ್ಟದ ಯೋಜನೆಗಳ ಜಾರಿ ಮತ್ತು ಅನುಷ್ಠಾನವನ್ನು ಗಮನಿಸಿದರೆ ಪರಿಣಾಮಕಾರಿಯಾಗಿ ಅವುಗಳು ಗ್ರಾಮ ಪಂಚಾಯತಿ ಮಟ್ಟದಲ್ಲಿ ಸಾಧ್ಯವಾಗಿಲ್ಲಯೆಂಬುದು ತಿಳಿಯುತ್ತದೆ. ಅಭಿವೃದ್ಧಿ ಯೋಜನೆಗಳಾದ ಕುಡಿಯುವ ನೀರು ಸರಬರಾಜು, ಐ.ಆರ್.ಡಿ.ಪಿ. ವಸತಿ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಫಲಾನುಭವಿಗಳ ಆಯ್ಕೆ ನಿಯಮಾನುಸಾರ ಗ್ರಾಮಸಭೆಗಳಲ್ಲಿ ನಡೆಯುತ್ತಿಲ್ಲ. ಹಳ್ಳಿಯ ಕೆಲವೇ ಬಲಾಢ್ಯ ಮುಂದುವರೆದ ಜಾತಿ ಮತ್ತು ಶ್ರೀಮಂತರ ಹಿಡಿತದಲ್ಲಿ ಗ್ರಾಮಪಂಚಾಯತಿಗಳು ಇಂದಿಗೂ ಇವೆ. ಆದರೆ ಕೆಲವು ಗ್ರಾಮಪಂಚಾಯಿತಿಗಳಲ್ಲಿ ಉತ್ತಮ ಸಾಧನೆ ಆಗಿರುವುದು ಕಂಡುಬರುತ್ತದೆ. ಜಿಲ್ಲೆಯಲ್ಲಿ 2005ರಲ್ಲಿ ಹೊಸದಾಗಿ ಆಯ್ಕೆಯಾದ ಯುವಕರು ಮತ್ತು ಮಧ್ಯವಯಸ್ಸಿನ ಕೆಲವು ಸದಸ್ಯರು ಹೆಚ್ಚಿನ ವಿದ್ಯಾಭ್ಯಾಸ ಹೊಂದಿದವರಾಗಿದ್ದಾರೆ. ಪಂಚಾಯತಿ ಕೆಲಸಗಳ ಮರುಹೊಂದಾಣಿಕೆಯ ಸವಾಲು ಮತ್ತು ವಿವಿಧ ಹಂತಗಳ ಯೋಜನೆಗಳ ತಯಾರಿ ಹಾಗೂ ನೀತಿ ನಿಯಮಗಳ ಅನುಷ್ಠಾನದ ಸವಾಲುಗಳು ಇವರ ಮುಂದಿವೆ.

## ವಿಕೇಂದ್ರೀಕರಣ

ನಿರಂತರ ಚುನಾವಣೆಯ ಮೂಲಕ ಸ್ಥಾಪಿತವಾದ ಸ್ಥಳೀಯ ಆಡಳಿತ ಮಾದರಿಯನ್ನು ಗುಲಬರ್ಗಾ ಜಿಲ್ಲೆಯು ಒಪ್ಪಿಕೊಂಡಿದೆ. ಆದರೆ ವ್ಯವಸ್ಥೆಯ ಕಾರ್ಯವಿಧಾನ ತೃಪ್ತಿ ತರುವಷ್ಟು ಸಮರ್ಥವಾಗಿ ಕೆಲಸ ನಿರ್ವಹಿಸುತ್ತಿಲ್ಲ. ಗ್ರಾಮ ಪಂಚಾಯತಿ ಮಟ್ಟದಲ್ಲಿ ತಮಗೆ ದೊರೆತ ಅಧಿಕಾರ ಚಲಾಯಿಸಲು ಮತ್ತು ಕೆಲಸದಲ್ಲಿ ದಕ್ಷತೆ ಪ್ರದರ್ಶಿಸಲು ತೊಡಕಾಗಿರುವ ಪ್ರಮುಖ ಸಂಗತಿಯೆಂದರೆ ಅನಕ್ಷರತೆ. ಈ ರೀತಿಯ ಸತ್ಯಸಂಗತಿಗಳನ್ನು ಪಂಚಾಯತ್ ರಾಜ್ ವ್ಯವಸ್ಥೆ ಎಂಬ ಶೀರ್ಷಿಕೆಯ ಅಧ್ಯಾಯದ ಮೊದಲ ಭಾಗದಲ್ಲಿ ಚರ್ಚಿಸಿದಂತೆ ಕಡಿಮೆ ಸಾಮರ್ಥ್ಯವನ್ನು ಹೊಂದಿದೆ. 2005ರಲ್ಲಿ ಹೊಸದಾಗಿ ಆಯ್ಕೆಯಾದ ಯುವ ಮತ್ತು ಮಧ್ಯಮ ವಯಸ್ಸಿನ ಗುಂಪಿನ ಅಭ್ಯರ್ಥಿಗಳು ಕನಿಷ್ಠ ಶಿಕ್ಷಣವನ್ನು ಹೊಂದಿದ್ದು ಉತ್ತಮ ಫಲಿತಾಂಶದ ನಿರೀಕ್ಷೆಯಲ್ಲಿದೆ.

ಕೋಷ್ಟಕ 9.1

## ಗ್ರಾಮ ಪಂಚಾಯಿತಿಗಳ ಮಹಿಳಾ ಸದಸ್ಯರು –2005

| ತಾಲ್ಲೂಕುಗಳ ಹೆಸರು | ಸ್ಥಾನಗಳ ಸಂಖ್ಯೆ | ಮಹಿಳೆಯರು ಗೆದ್ದ ಸ್ಥಾನಗಳು | ಶೇಕಡಾ | ಒಟ್ಟು ಅಧ್ಯಕ್ಷರ ಸಂಖ್ಯೆ | ಮಹಿಳಾ ಅಧ್ಯಕ್ಷರ ಸಂಖ್ಯೆ | ಶೇಕಡಾ |
|---|---|---|---|---|---|---|
| ಅಫಜಲಪುರ | 412 | 173 | 42.07 | 22 | 8 | 36.3 |
| ಆಳಂದ್ | 629 | 39 | 6.2 | 39 | – | – |
| ಚಿಂಚೋಳಿ | 531 | 217 | 48.01 | 31 | 11 | 39.5 |
| ಚಿತ್ತಾಪುರ | 636 | 267 | 42.0 | 35 | 13 | 38.2 |
| ಗುಲಬರ್ಗಾ | 647 | 278 | 43.0 | 36 | 16 | 44.4 |
| ಜೇವರ್ಗಿ | 562 | 232 | 41.3 | 33 | 12 | 36.3 |
| ಸೇಡಮ್ | 420 | 177 | 42.1 | 23 | 9 | 39.1 |
| ಶಹಾಪುರ | 636 | 275 | 43.2 | 36 | 12 | 33.33 |
| ಶೋರಾಪುರ | 739 | 301 | 40.7 | 42 | 17 | 40.5 |
| ಯಾದಗೀರ್ | 646 | 289 | 44.7 | 40 | 13 | 32.5 |
| **ಒಟ್ಟು** | **5858** | **2248** | **38.37** | **337** | **111** | **32.9** |

ಮೂಲ; ಜಿಲ್ಲಾ ಪಂಚಾಯಿತಿ, ಗುಲಬರ್ಗಾ

ಕೋಷ್ಟಕ 9.2

## ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಮಹಿಳಾ ಸದಸ್ಯರು – 2005

| ತಾಲ್ಲೂಕುಗಳ ಹೆಸರು | ಒಟ್ಟು ಸ್ಥಾನಗಳು | ತಾಲ್ಲೂಕು ಪಂಚಾಯಿತಿ ಮಹಿಳೆಯರು ಗೆದ್ದ ಸ್ಥಾನಗಳು | ಶೇಕಡಾ | ಒಟ್ಟು ಸ್ಥಾನಗಳು | ಜಿಲ್ಲಾ ಪಂಚಾಯಿತಿ ಮಹಿಳೆಯರು ಗೆದ್ದ ಸ್ಥಾನಗಳು | ಶೇಕಡಾ |
|---|---|---|---|---|---|---|
| ಅಫಜಲಪುರ | 17 | 6 | 35.3 | 5 | 2 | 40.0 |
| ಆಳಂದ್ | 27 | 11 | 40.7 | 6 | 1 | 16.7 |
| ಚಿಂಚೋಳಿ | 21 | 8 | 38.0 | 6 | 3 | 50.0 |
| ಚಿತ್ತಾಪುರ | 25 | 10 | 40.7 | 7 | 2 | 28.6 |
| ಗುಲಬರ್ಗಾ | 26 | 10 | 38.4 | 7 | 1 | 14.3 |
| ಜೇವರ್ಗಿ | 26 | 10 | 38.4 | 6 | 3 | 50.0 |
| ಸೇಡಮ್ | 17 | 7 | 41.0 | 5 | 3 | 60.0 |
| ಶಹಾಪುರ | 25 | 9 | 36.0 | 8 | 4 | 50.0 |
| ಶೋರಾಪುರ | 30 | 11 | 36.6 | 7 | 2 | 28.6 |
| ಯಾದಗೀರ್ | 26 | 10 | 38.4 | 7 | 3 | 42.8 |
| **ಒಟ್ಟು** | **240** | **92** | **38.9** | **65** | **24** | **36.9** |

ಮೂಲ; ಜಿಲ್ಲಾ ಪಂಚಾಯಿತಿ, ಗುಲಬರ್ಗಾ

## ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್‌ದಲ್ಲಿ ಮಹಿಳಾ ಸದಸ್ಯರು




ಇತ್ತೀಚಿನ ವರ್ಷಗಳಲ್ಲಿ ಗ್ರಾಮಪಂಚಾಯತ್‌ಗಳ ಸಬಲೀಕರಣಕ್ಕಾಗಿ ಅಧಿಕಾರ ಮತ್ತು ಯೋಜನೆಗಳ ಕಾರ್ಯಾನುಷ್ಠಾನವನ್ನು ಈ ತಳಮಟ್ಟದ ವ್ಯವಸ್ಥೆಗೆ ನೀಡುವ ಕ್ರಮ ಕೈಗೊಳ್ಳಲಾಗಿದೆ. ಈ ಪಂಚಾಯಿತಿಗಳು 2004ಕ್ಕೆ ಹಿಂದೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಮತ್ತು ಆಡಳಿತ ನೋಡಿಕೊಳ್ಳುವ ವಾರ್ಷಿಕ ಬಜೆಟ್ ರೂ. 5 ಲಕ್ಷಗಳ ಅನುದಾನ ನೀಡಲಾಗುತ್ತಿತ್ತು. ಅದಲ್ಲದೆ ಅವು ವಿಶೇಷವಾಗಿ ಹಣಕಾಸು ಆಯೋಗದಿಂದ ಮತ್ತು ಕುಡಿಯುವ ನೀರಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಹಣಕಾಸು ನೆರವು ಪಡೆಯುತ್ತಿದ್ದವು.

ಸಂವಿಧಾನದ 73ನೆಯ ತಿದ್ದುಪಡಿಯ ನಂತರ ಅವುಗಳಿಗೆ 29 ಪ್ರಕಾರ್ಯಗಳನ್ನು ವರ್ಗಾಯಿಸಲಾಯಿತು. ಗ್ರಾಮ ಪಂಚಾಯಿತಿಗಳಿಗೆ ಈಗ ನೇರವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವ ಜವಾಬುದಾರಿ ನೀಡಲಾಯಿತು.

ಈಗ ಗ್ರಾಮಪಂಚಾಯಿತಿಗಳು ಈಗ ಅಭಿವೃದ್ಧಿ ಯೋಜನೆಗಳಾದ ಕುಡಿಯುವ ನೀರು, ವಸತಿ, ನೈರ್ಮಲ್ಯ, ಉದ್ಯೋಗ, ಮಣ್ಣಿನ ಸಂರಕ್ಷಣೆ ಇತ್ಯಾದಿಗಳ ಸಮರ್ಪಕ ನಿರ್ವಹಣೆಗೆ ಮತ್ತು ಯೋಜನೆಗಳ ಅನುಷ್ಠಾನಗೊಳಿಸುವ ಜವಾಬುದಾರಿಯುನ್ನು ಪಡೆದುಕೊಂಡವು. ಕರ್ನಾಟಕ ಸರಕಾರದ 16 ಅಕ್ಟೋಬರ್ 2004 ಆದೇಶದ ಪ್ರಕಾರ ಮೂವತ್ತು ಕಾರ್ಯ ಯೋಜನೆಗಳ ಅನುಷ್ಠಾನದ ಜವಾಬುದಾರಿಯನ್ನು ಪಂಚಾಯಿತಿಗಳಿಗೆ ವರ್ಗಾಹಿಸಲಾಯಿತು. ಅವುಗಳಲ್ಲಿ ಮುಖ್ಯವಾದವುಗಳೆಂದರೆ

- ಗ್ರಾಮೀಣ ಕುಡಿಯುವ ನೀರು ಸರಬರಾಜು ಯೋಜನೆ – ರಿಪೇರಿ ಮತ್ತು ನಿರ್ವಹಣೆ
- ಕೊಳವೆ ಬಾವಿಗಳ ದುರಸ್ತಿ
- ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ
- ಜಲ ನಿರ್ಮಲ
- ಗ್ರಾಮೀಣ ನೈರ್ಮಲ್ಯ
- ಮಣ್ಣು ಸಂರಕ್ಷಣೆ
- ರಾಷ್ಟ್ರೀಯ ಜಲ ಸಂರಕ್ಷಣಾ ಯೋಜನೆ
- ಸ್ವರ್ಣಜಯಂತಿ ಗ್ರಾಮ ಸ್ವರಾಜ್ ಯೋಜನೆ

- ಸ್ವರ್ಣಜಯಂತಿ ಗ್ರಾಮ ರೋಜ್‌ಗಾರ್ ಯೋಜನೆ
- ಗಂಗಾ ಕಲ್ಯಾಣ
- ವಸತಿ ಯೋಜನೆಗಳು (ಆಶ್ರಯ ಮತ್ತು ಇಂದಿರಾ ಆವಾಸ್ ಯೋಜನೆ)
- ಅರಣ್ಯ ಸಂರಕ್ಷಣೆ
- ಜೀತ ಕಾರ್ಮಿಕರಿಗೆ ಪುನರ್ವಸತಿ
- ಕರ್ನಾಟಕ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ

ಆ ಯೋಜನೆಗಳಲ್ಲಿ ಉದ್ಯೋಗಕ್ಕೆ ಸಂಬಂದಿಸಿದ ಕೃಷಿ ಅಭಿವೃದ್ಧಿ, ವಸತಿ, ಕುಡಿಯುವ ನೀರು ಮತ್ತು ನೈರ್ಮಲ್ಯದಂತಹ ಯೋಜನೆಗಳನ್ನು ಗ್ರಾಮಪಂಚಾಯತಿ ಮಟ್ಟದಲ್ಲಿ ಅನುಷ್ಠಾಗೊಳಿಸಬೇಕಾಗಿದೆ. ಗ್ರಾಮ ಪಂಚಾಯಿತಿಗಳಿಗೆ ನಿಗದಿತ ಯೋಜನಾ ತಯಾರಿಕೆಯ ಮಾದರಿಯನ್ನು ನೀಡಲಾಗಿದೆ. ಗುಲಬರ್ಗಾ ಜಿಲ್ಲೆಯು ಈಗ ಹಿಂದುಳಿದ ಪ್ರದೇಶವೆಂದು ಗುರುತಿಸಲ್ಪಟ್ಟಿದ್ದು ಹಿಂದುಳಿದ ಪ್ರದೇಶ ಅಭಿವೃದ್ಧಿಗೆ (ಬಿ.ಆರ್.ಜಿ.ಎಫ್.) ವಿಶೇಷ ಅನುದಾನ ದೊರೆತಿದೆ. ಇದರ ಮೂಲಕ ಗ್ರಾಮಪಂಚಾಯತ್ ಮಟ್ಟದ ಯೋಜನೆಗಳನ್ನು ತಯಾರಿಸಲು ನಿರ್ಧರಿಸಲಾಗಿದೆ.

ಇತ್ತೀಚೆಗೆ ಗ್ರಾಮಪಂಚಾಯತಿಗಳಿಗೆ ಕಂಪ್ಯೂಟರ್‌ಗಳನ್ನು ಸರಬರಾಜು ಮಾಡಿರುವುದು ಗ್ರಾಮಪಂಚಾಯಿತಿಗಳ ಕಾರ್ಯನಿರ್ವಹಣೆಗೆ ಮತ್ತು ಅಂಕಿ ಅಂಶಗಳಿಗೆ ಸಂಬಂಧಿಸಿದ ಮಾಹಿತಿಗೆ ಸಹಕಾರಿಯಾಗಿದೆ.

ಗ್ರಾಮಪಂಚಾಯತಿಯ ಸದಸ್ಯರಿಗೆ ಸರಕಾರದ ಯೋಜನೆಗಳ ಬಗ್ಗೆ ಹೆಚ್ಚಿನ ಮಾಹಿತಿ ಅಗತ್ಯವಿದೆ. ಒಂದು ಪ್ರದೇಶದ ಆರ್ಥಿಕ ಅಡಿಪಾಯವೆಂದು ಪರಿಗಣಿಸಲಾಗುವ, ಅಂದರೆ ಶಾಲಾ ಕಟ್ಟಡಗಳು, ಸಮುದಾಯ ಭವನ, ರಸ್ತೆ ಸೇತುವೆಗಳು, ಆಸ್ಪತ್ರೆಗಳು, ಇತ್ಯಾದಿಗಳ ನಿರ್ಮಾಣಕ್ಕೆ ಮೊದಲ ಆದ್ಯತೆ ನೀಡುವುದು ಪ್ರಮುಖವಾಗಿದೆ. ಇಂಥ ಯೋಜನೆಗಳೂ ಸಹಾ ವ್ಯಕ್ತಿಯ ವೈಯುಕ್ತಿಕ ಉನ್ನತಿಗೆ, ಘನತೆಗೆ ಸಹಕಾರಿಯಾಗಬಲ್ಲವು.

ಚೌಕಟ್ಟು 9.1

### ಸುವರ್ಣ ಗ್ರಾಮೋದಯ ಯೋಜನೆ

ಸುವರ್ಣ ಗ್ರಾಮೋದಯ ಯೋಜನೆ ಎಂಬ ವಿನೂತನ ಪರಿವರ್ತನಾ ಯೋಜನೆಯನ್ನು ಸುವರ್ಣ ಕರ್ನಾಟಕ ವರ್ಷಾಚರಣೆಯ ಅಂಗವಾಗಿ ಕರ್ನಾಟಕ ಸರಕಾರ 2006ರಲ್ಲಿ ಜಾರಿಗೆ ತಂದಿದೆ. ಈ ಯೋಜನೆಯು ಹಳ್ಳಿಗಳ ಸಮಗ್ರ ಅಭಿವೃದ್ಧಿಯನ್ನು ಒಳಗೊಂಡಿದೆ. ಈ ಯೋಜನೆಯ ಪ್ರಮುಖ ಆಯಾಮವೆಂದರೆ ಸರಕಾರ ಮತ್ತು ಎನ್.ಜಿ.ಓ. ಹಾಗೂ ಖಾಸಗೀ ವಲಯ ಮತ್ತು ಇನ್ನಿತರ ಆಸಕ್ತರೊಡನೆ ಸೌಹಾರ್ದಯುತವಾಗಿ ಸೇರಿ ಗ್ರಾಮೀಣ ಸಮುದಾಯದ ಉನ್ನತಿಗೆ ಶ್ರಮಿಸುವುದಾಗಿದೆ. ಈ ಯೋಜನೆಯ ಮೂಲ ಉದ್ದೇಶಗಳು

1. ಆಯ್ದ ಗ್ರಾಮಗಳ ಭೌತಿಕ ಪರಿಸರವನ್ನು ಉತ್ತಮಪಡಿಸಿ ಸಮುದಾಯವು ಉತ್ತಮ ಗುಣಮಟ್ಟದ ಜೀವನ ನಡೆಸುವಂತೆ ಮಾಡುವುದು.
2. ಭೂಸಂಬಂಧಿತ ಚಟುವಟಿಕೆಗಳ ಅಭಿವೃದ್ಧಿ ಮತ್ತು ಉತ್ತಮ ಬಳಕೆಯಿಂದ ಹೆಚ್ಚು ಆದಾಯ ಹೊಂದುವಂತೆ ಮಾಡುವುದು ಮತ್ತು ಇದಕ್ಕೆ ಬೇಕಾದ ಸವಲತ್ತುಗಳಾದ ಶಿಕ್ಷಣ, ಆರೋಗ್ಯಸೇವೆ, ಮಕ್ಕಳ ಕಲ್ಯಾಣಗಳಂತವುಗಳನ್ನು ಉತ್ತಮಪಡಿಸುವುದು,
3. ಉದ್ಯೋಗಾವಕಾಶಗಳನ್ನು ವಿಶೇಷವಾಗಿ ಕೃಷಿಯೇತರ ಚಟುವಟಿಕೆಗಳಿಗೆ ಸಂಬಂಧಿಸಿದ ಗ್ರಾಮೀಣ ವಿದ್ಯಾವಂತ ಯುವಕ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವುದು,
4. ಸ್ವಸಹಾಯ ಸಂಘಗಳು ಮತ್ತು ಸಾಂಸ್ಕೃತಿಕ ಸಂಘಗಳ ಮೂಲಕ ಅಭಿವೃದ್ಧಿಗೆ ಅಗತ್ಯವಾದ ಸಮುದಾಯ ಪ್ರಜ್ಞೆ ಮೂಡಿಸುವುದು.

ಈ ಯೋಜನೆಯನ್ನು ಗುಲಬರ್ಗಾ ತಾಲ್ಲೂಕಿನ ಶ್ರೀನಿವಾಸ ಸರದಗಿ ಗ್ರಾಮದಲ್ಲಿ ಆರಂಭಿಸಲಾಗಿದೆ. ಈ ಯೋಜನೆಯಿಂದ ರಾಜ್ಯದಾದ್ಯಂತ ಪ್ರತಿವರ್ಷ 1000 ಹಳ್ಳಿಗಳನ್ನು ಆಯ್ಕೆಮಾಡಿ ಅವುಗಳ ಸಮಗ್ರ ಅಭಿವೃದ್ಧಿಗೆ ಯೋಜಿಸಲಾಗಿದೆ.

ಆಧಾರ: ಜಿಲ್ಲಾ ಪಂಚಾಯತ್, ಗುಲಬರ್ಗ

ಕಣ್ಣಿಗೆ ಎದ್ದು ಕಾಣುವಂತಹ ಕಾಮಗಾರಿಗಳ ಬಗ್ಗೆ ಪಂಚಾಯಿತಿ ಸದಸ್ಯರಿಗೆ ಆಸಕ್ತಿಯಿರುವುದರಿಂದ ಮಾನವಾಭಿವೃದ್ಧಿಗೆ ಸಂಬಂಧಿಸಿದ ಸಂಗತಿಗಳು ನಿರ್ಲಕ್ಷ್ಯಕ್ಕೆ ಒಳಗಾಗಿ ಬಿಡುತ್ತವೆ. ಇದು ಮಾನವ ಅಭಿವೃದ್ಧಿಯ ದೃಷ್ಟಿಯಿಂದ ಉಪಯುಕ್ತವಾಗುವುದಿಲ್ಲ.

ಗ್ರಾಮ ಮಟ್ಟದಲ್ಲಿ ಮೂಲಭೂತ ಅವಶ್ಯಕತೆಗಳನ್ನು ಒದಗಿಸಲಾಗಿದೆ. ಆದರೆ ಅವುಗಳ ಕಾರ್ಯಕ್ಷಮತೆ ಅಥವಾ ಸೇವಾ ಪ್ರವೃತ್ತಿಯನ್ನು ಯಾರೂ ಗಮನಿಸುವುದಿಲ್ಲ. ಅತ್ಯಾವಶ್ಯಕವಾದ ಶಾಲಾ ಕಟ್ಟಡಗಳ ನಿರ್ಮಾಣ ಮಾಡಲಾಗಿದೆ. ಇವುಗಳ ನಿರ್ಮಾಣ ಎಲ್ಲ ಕಡೆ ಆಗಿದೆ. ಆದರೆ ಗುಣಮಟ್ಟದ ಶಿಕ್ಷಣ ಖಾತರಿ ಇಲ್ಲ. ಎಸ್.ಡಿ.ಎಂ.ಸಿ. ಸಮಿತಿಗಳ ರಚನೆಯ ಉದ್ದೇಶ ಶಾಲಾ ಶಿಕ್ಷಣದ ಗುಣಮಟ್ಟ ಮತ್ತು ಶಾಲಾ ಕಾರ್ಯಗಳ ಕ್ಷಮತೆಯನ್ನು ನಿರಂತರ ಗಮನಿಸುವುದಾಗಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ಮಿಸಲಾಗಿದೆ. ಇದರಲ್ಲಿ ವೈದ್ಯರ ಮತ್ತು ವೈದ್ಯಕೀಯ ಸಿಬ್ಬಂದಿ ಲಭ್ಯತೆ ಬಗ್ಗೆ ಖಾತರಿ ಇಲ್ಲ. ಗ್ರಾಮಸಭೆಗಳಲ್ಲಿ ಪಾಲ್ಗೊಳ್ಳಲು ಜನರಿಗೆ ತರಬೇತಿ ಇಲ್ಲವೇ ಮಾಹಿತಿ ಅಥವಾ ತಿಳುವಳಿಕೆ ನೀಡುವುದು ಅಗತ್ಯವಾಗದೆ. ಸ್ವಂತ ಆಲೋಚನೆ ಮಾಡಿ ಉತ್ತಮ ಕೆಲಸಗಳು ನಡೆಯುವಂತೆ ಮಾಡಲು ಅಗತ್ಯವಾದ ಮಾಹಿತಿ ಮತ್ತು ತಿಳುವಳಿಕೆಗಳನ್ನು ಗ್ರಾಮ ಪಂಚಾಯಿತಿ ಸದಸ್ಯರಿಗೆ ನೀಡುವ ಅಗತ್ಯವಿದೆ.

ಚೌಕಟ್ಟು 9.2

| ಪಂಚಾಯತ್ ಸಶಕ್ತೀಕರಣ |
|---|
| ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕಂಡುಬಂದಂತೆ ಪಂಚಾಯತ್‌ಗಳ ಕಾರ್ಯಕ್ಷಮತೆ ಹೆಚ್ಚಿಸಲು, ಯೋಜನೆ ಮತ್ತು ಅವುಗಳ ಅನುಷ್ಠಾನಕ್ಕೆ ಅಗತ್ಯವಾಗಿ ಬೇಕಾದ ಸಿಬ್ಬಂದಿಗಳ ನಿಯೋಜನೆಯ ಅಗತ್ಯವಿದೆ. ಇಲ್ಲಿರುವ ಕಾರ್ಯದರ್ಶಿ ಮತ್ತು ಬಿಲ್ ಕಲೆಕ್ಟರ್‌ಗಳಿಗೆ ಹೆಚ್ಚಿನ ಕೆಲಸದ ಒತ್ತಡವಿದೆ. ಇಲ್ಲಿನ ಅಧ್ಯಕ್ಷರು ಮತ್ತು ಸದಸ್ಯರುಗಳಿಗೆ ಸರಕಾರದ ಯೋಜನೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ಇಲ್ಲದಿರುವುದು ಕಂಡುಬರುತ್ತದೆ. ಇವರೂ ಕೂಡ ತಮ್ಮ ತಮ್ಮ ವೈಯಕ್ತಿಕ ಕೆಲಸಗಳಲ್ಲಿ ತೊಡಗಿಕೊಂಡಿರುತ್ತಾರೆ. ಇಲ್ಲಿ ಯಾರೊಬ್ಬರೂ ಸರಕಾರಿ ಯೋಜನೆಗಳ ಬಗ್ಗೆ ಅಥವಾ ಅವುಗಳ ನಿರ್ವಹಣೆ ಬಗ್ಗೆ ಪರಿಣತಿ ಹೊಂದಿರುವುದಾಗಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಗ್ರಾಮಪಂಚಾಯ್ತಿಗಳನ್ನು ಸಶಕ್ತೀಕರಣಗೊಳಿಸುವುದು ಅನಿವಾರ್ಯ. ಜೊತೆಗೆ ಅಗತ್ಯ ಸಿಬ್ಬಂದಿಗಳ ನಿಯೋಜನೆ ಮತ್ತು ಅವರಿಗೆ ತರಬೇತಿಯಿಲ್ಲದೆ ಹೋದರೆ ಅವರಲ್ಲಿ ಪರಾವಲಂಬಿತನ ಮತ್ತು ಅಸಮರ್ಥತೆ ಇನ್ನಷ್ಟು ಹೆಚ್ಚಾಗುತ್ತದೆ. |

ಆಧಾರ: ಕ್ಷೇತ್ರಕಾರ್ಯ

ಚೌಕಟ್ಟು 9.3

| ಉತ್ತಮ ಪಂಚಾಯಿತಿಗಳ ಯಶಸ್ವೀ ಗಾಥೆಗಳು |
|---|
| ಅಳಂದ ತಾಲ್ಲೂಕಿನ ಸುಂಟನೂರು ಗ್ರಾಮ ಪಂಚಾಯಿತಿಯು ಮೂರು ಹಳ್ಳಿಗಳನ್ನು ಒಳಗೊಂಡಿದೆ. ಇದು ಉತ್ತಮ ಅಭಿವೃದ್ಧಿ ಕೆಲಸಗಳನ್ನು ನಡೆಸಿದೆ. ಈ ಹಳ್ಳಿಯ ಶೇ. 50ರಷ್ಟು ಕುಟುಂಬಗಳು ಪ.ಜಾತಿಗೆ ಸೇರಿದವುಗಳಾಗಿವೆ. ಈ ಕುಟುಂಬಗಳು ಪಲ್ಸ್ ಪೋಲಿಯೋ ಮತ್ತು ಲಸಿಕಾ ಕಾರ್ಯಕ್ರಮಗಳಂದು ತುಂಬಾ ಪ್ರಜ್ಞಾಪೂರ್ವಕವಾಗಿ ಕೆಲಸ ನಿರ್ವಹಿಸುತ್ತವೆ. ಅದೇ ರೀತಿ ಎಚ್.ಐ.ವಿ/ಏಡ್ಸ್ ಬಗ್ಗೆ ಬೀದಿ ನಾಟಕ ಆಡಿ ಪ್ರಜ್ಞೆ ಮೂಡಿಸುತ್ತಿವೆ. ಗ್ರಾಮಪಂಚಾಯತಿ ಸಭೆಗಳನ್ನು ನಿರಂತರವಾಗಿ ಮತ್ತು ನಿಯಮಾನುಸಾರ ನಡೆಸುತ್ತಾರೆ. ರಸ್ತೆಗಳ ನಿರ್ಮಾಣ ಮತ್ತು ಕೃಷಿ ಹೊಂಡಗಳು, ಚೆಕ್ ಡ್ಯಾಂಗಳಂತಹ ಆಸ್ತಿಗಳನ್ನು ನಿರ್ಮಿಸಲಾಗಿದೆ.<br><br>ಚಿತ್ತಾಪುರ ತಾಲ್ಲೂಕಿನ ಗುಂಡಗುರ್ತಿ ಪಂಚಾಯತ್‌ನಲ್ಲಿ ಶೇ.77ರಷ್ಟು ಸಾಕ್ಷರತೆ ಹೊಂದಿದ ಸದಸ್ಯರಿದ್ದಾರೆ. ಅನೇಕ ಅಭಿವೃದ್ಧಿಪರ ಕೆಲಸಗಳಾದ ಆರೋಗ್ಯ, ಶಿಕ್ಷಣ ಮತ್ತು ಉದ್ಯೋಗ ಮುಂತಾದ ಕಾರ್ಯಗಳನ್ನು ಪಂಚಾಯತಿಯು ಕೈಗೆತ್ತಿಕೊಂಡಿದೆ. ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗಿದೆ. ಜಲನಿರ್ಮಲ ಯೋಜನೆಯನ್ನು ಸಾರ್ವಜನಿಕರ ದೇಣಿಗೆಯಿಂದ ಆರಂಭಿಸಿ ನೀರು ಸರಬರಾಜು ಯೋಜನೆಯನ್ನು ಪಂಚಾಯತಿ ಸಮರ್ಪಕವಾಗಿ ನಿಭಾಯಿಸುತ್ತಿದೆ. ಶೌಚಾಲಯ ಸೌಲಭ್ಯವನ್ನು ಶೇ.58ರಷ್ಟು ಕುಟುಂಬಗಳು ಹೊಂದಿದ್ದು ಉತ್ತಮ ನೈರ್ಮಲ್ಯ ವ್ಯವಸ್ಥೆಯನ್ನು ಕಾಯ್ದುಕೊಳ್ಳಲಾಗಿದೆ. |

# ಉತ್ತಮ ಆಡಳಿತ

## ಪ್ರಾಸ್ತಾವಿಕ

ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಹೆಚ್ಚು ಬಂಡವಾಳವನ್ನು ಹೂಡುವುದರಿಂದ ಹೆಚ್ಚಿನ ಪ್ರತಿಫಲವನ್ನು ಪಡೆಯಬಹುದು. ಇದು ಯಾವಾಗ ಸಾಧ್ಯವಾಗುತ್ತದೆಯೆಂದರೆ ಪಂಚಾಯತಿಗಳು ಉತ್ತಮ ಸೇವೆಯನ್ನು ನೀಡಿದಾಗ ಮಾತ್ರ. ಅಭಿವೃದ್ಧಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯಗಳಾದ ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಮತ್ತು ನೈರ್ಮಲ್ಯ ಬಹಳ ಮುಖ್ಯವಾದವುಗಳು. ಇವುಗಳ ಸೇವಾ ಸೌಲಭ್ಯ ಮತ್ತು ಸೇವೆ ನೀಡುವಲ್ಲಿ ಹಾಗೂ ಆಡಳಿತದಲ್ಲಿಯ ಸ್ನೇಹಮಯ ವಾತಾವರಣ, ಉತ್ತಮ ವಿತರಣೆ, ವ್ಯವಸ್ಥೆಯಲ್ಲಿ ಹೆಚ್ಚಿನ ಸಹಭಾಗಿತ್ವಕ್ಕೆ ಅವಕಾಶ ಮತ್ತು ಸರಳ ನಿಯಮಗಳ ಪಾಲನೆ, ಖರ್ಚಿನ ಬಗ್ಗೆ ಮತ್ತು ಲೆಕ್ಕದ ಬಗ್ಗೆ ಹೆಚ್ಚಿನ ಪಾರದರ್ಶಕತೆ ಇವುಗಳೆಲ್ಲವು ಉತ್ತಮ ಆಡಳಿತದ ಲಕ್ಷಣಗಳು. ಇವುಗಳಿಂದ ಜನತೆ ಉತ್ತಮ ಆರೋಗ್ಯದಿಂದ ಒತ್ತಡ ರಹಿತ ಮುಕ್ತ ಜೀವನವನ್ನು ಉತ್ತಮ ಸೇವೆಯ ಮೂಲಕ ಸವಿಯ ಬಲ್ಲರು.

ಉತ್ತಮ ಆಡಳಿತಕ್ಕೆ ಅಗತ್ಯವಿರುವುದು ಅಧಿಕಾರ ವಿಕೇಂದ್ರೀಕರಣ ಮತ್ತು ಕಾರ್ಯಾಚರಣೆ. ಇದರ ಜೊತೆಗೆ ನೀತಿ ನಿರೂಪಣೆಗೆ ಅಗತ್ಯವಿರುವಷ್ಟು ಸ್ವಾಯತ್ತೆಯನ್ನು ಅವು ಹೊಂದಿದ್ದರೆ ತಳ ಹಂತದ ಜನತೆಯ ಜೀವನದಮೇಲೆ ಅದು ಹೆಚ್ಚಿನ ಪರಿಣಾಮ ಬೀರಬಲ್ಲದು. ವಿವಿಧ ಹಂತಗಳ ನೀತಿ ನಿರೂಪಣೆಯಲ್ಲಿ ಕ್ರಿಯಾಶೀಲರಾಗಿ ಜನರು ಭಾಗವಹಿಸುವಿಕೆ ಮತ್ತು ಯೋಜನೆಗಳ ಜಾರಿ ಜೊತೆಗೆ ಉತ್ತಮ ಧ್ಯೇಯೋದ್ದೇಶವುಳ್ಳ ಎನ್.ಜಿ.ಓ. ಗಳು ಮತ್ತು ನಾಗರೀಕ ಸಂಘ ಸಂಸ್ಥೆಗಳು ಭಾಗವಹಿಸುವಿಕೆಯಿಂದ ಸಾಮಾಜಿಕ ನ್ಯಾಯ ಹಾಗೂ ಉತ್ಪಾದನೆಯನ್ನು ಕಾಪಾಡಿಕೊಳ್ಳಬಹುದು. ಇವುಗಳ ಸಹಭಾಗಿತ್ವವಿಲ್ಲದೆ ಸರಕಾರಿ ಆಡಳಿತ ವ್ಯವಸ್ಥೆಯ ಮೂಲಕ ಜನತೆಯ ಕ್ಷೇಮಾಭಿವೃದ್ಧಿಯನ್ನು ಸಾಧಿಸಿಕೊಳ್ಳುವುದು ಅಸಾಧ್ಯ ಮತ್ತು ಬಡವರ ಹಾಗೂ ಸಮಾಜದ ಅಂಚಿನಲ್ಲಿರುವ ಜನರ ಮತ್ತು ಪಂಗಡಗಳ ಕ್ಷೇಮಾಭಿವೃದ್ಧಿ ಅಸಾಧ್ಯ. ವಿವಿಧ ಹಂತಗಳಲ್ಲಿ ಜನರು ಸಾರ್ವಜನಿಕವಾಗಿ ಪಾಲ್ಗೊಳ್ಳುವುದು, ಹೊಣೆಗಾರಿಕೆ, ಪಾರದರ್ಶಕತೆ ಪರಿಣಾಮಗಾರಿಯಾಗಿ ಕಣ್ಣಿಗೆ ಕಾಣುತ್ತಿಲ್ಲ. ಈ ಹೊಣೆಗಾರಿಕೆ ಇಲ್ಲದಿರುವುದರಿಂದ ಅದು ಬೇರೆ ಬೇರೆ ಪ್ರಕರಣಗಳಿಗೆ ಎಡೆ ಮಾಡಿಕೊಡುತ್ತದೆ.

ಇದಕ್ಕೆ ಮುಖ್ಯ ಕಾರಣವೆಂದರೆ ಅನಕ್ಷರತೆ, ಮೌಢ್ಯ, ಔದಾಸೀನ್ಯ, ಮಾಹಿತಿ ಕೊರತೆ ಮುಂತಾದವು. ಜನರ ಮೌನ ಮತ್ತು ನಿರಾಸಕ್ತಿಯ ಅದಕ್ಷತೆಗೆ ಅಪ್ರತ್ಯಕ್ಷವಾಗಿ ನೆರವು ನೀಡಿದಂತಾಗುತ್ತದೆ.

ಪರಿಣಾಮಕಾರಿಯಾದ ನಾಗರಿಕ ಮಧ್ಯಪ್ರವೇಶವಿಲ್ಲದಿರುವುದರಿಂದ ಇಲ್ಲಿ ಉತ್ತರಧಾಯಿತ್ವವಾಗಲಿ ಅಥವಾ ಪಾರದರ್ಶಕತೆಯಾಗಲಿ ವ್ಯವಸ್ಥೆಯಲ್ಲಿ ಇಲ್ಲದಿರುವುದರಿಂದ ಇದು ಅನವಶ್ಯಕ ವಿಳಂಬ, ಭ್ರಷ್ಟಾಚಾರ, ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬ ಮುಂತಾದ ಸಮಸ್ಯೆಗಳು ಉಂಟಾಗಿ ಬಿಡುತ್ತವೆ.

## ಹಣಕಾಸು ನಿರ್ವಹಣೆ

ಜಿಲ್ಲೆಯಲ್ಲಿ ಹಣಕಾಸು ನಿರ್ವಹಣೆಯು ಸಮರ್ಪಕವಾಗಿ ನಡೆಯುತ್ತಿಲ್ಲ. ವಿವಿಧ ಕಾಮಗಾರಿಗಳಿಗೆ ಮತ್ತು ಕಾರ್ಯ ಯೋಜನೆಗಳಿಗೆ ನೀಡುತ್ತಿರುವ ಹಣಕಾಸನ್ನು ಬಳಸಿಕೊಳ್ಳುತ್ತಿರುವ ರೀತಿಯಿಂದ ತಿಳಿಯುತ್ತದೆ. ಅನೇಕ ಆಡಳಿತಾತ್ಮಕ ಕಾರಣಗಳಿಂದಾಗಿ ಹಣವನ್ನು ಬಿಡುಗಡೆಗೊಳಿಸುವುದು ವಿಳಂಬವಾಗುತ್ತಿದೆ. ಯೋಜನೆಗಳನ್ನು ಅನುಷ್ಠಾನಗೊಳಿಸುವ ಕಾರ್ಯವ್ಯವಸ್ಥೆಯು ಅದಕ್ಷತೆಯಿಂದ ಕೂಡಿರುವುದರಿಂದ ಮತ್ತು ಅನುಷ್ಠಾನ ವ್ಯವಸ್ಥೆಯು ಅಸಮರ್ಥವಾಗಿರುವುದರಿಂದ ಬಿಡುಗಡೆಯಾದ ಹಣದ ಬಳಕೆ ಅತ್ಯಂತ ಮಂದವಾಗಿದೆ. ಇದಕ್ಕೆ ಸಾಕ್ಷಿ ಎಂದರೆ ಅನೇಕ ಯೋಜನೆಗಳಾದ ವಸತಿ, ಕುಡಿಯುವ ನೀರು, ಕಟ್ಟಡಗಳ ನಿರ್ಮಾಣ ಮುಂತಾದವುಗಳಿಗೆ ಬಿಡುಗಡೆಯಾದ ಹಣಕಾಸು ಬಳಕೆಯಾಗುತ್ತಿಲ್ಲ.

ಇತ್ತೀಚೆಗೆ ಸ್ವಸಹಾಯ ಗುಂಪುಗಳು, ಎನ್.ಜಿ.ಒ.ಗಳು ಮತ್ತು ನಾಗರಿಕ ಜಾಗೃತ ಸಂಘಟನೆಗಳು ಅಸ್ತಿತ್ವಕ್ಕೆ ಬರುತ್ತಿವೆ. ಈಗಿರುವ ಅವ್ಯವಸ್ಥೆಯನ್ನು ಸರಿಪಡಿಸಲು ಬಹಳಷ್ಟು ಕಷ್ಟಪಡಬೇಕಾಗುತ್ತದೆ.

ಚೌಕಟ್ಟು 9.4

| ಆಡಳಿತ– ಊಳಿಗಮಾನ್ಯ ವ್ಯವಸ್ಥೆ |
| --- |
| ಗ್ರಾಮೀಣ ಭಾಗದ ಜನರು ಬಸ್ ಸ್ಟ್ಯಾಂಡಿನಲ್ಲಿ ಬಸ್‌ಗಾಗಿ ಸಾಕಷ್ಟು ಸಮಯ ಕಾಯುವುದು ಸಾಮಾನ್ಯ ಸಂಗತಿ. ಸಮಯಕ್ಕೆ ಸರಿಯಾಗಿ ಬಸ್ ಬಾರದಕ್ಕೆ ಯಾವುದೇ ರೀತಿಯ ವಿಚಾರಣೆ ಮಾಡುವ ತಿಳುವಳಿಕೆಯಿಲ್ಲ. ಈ ರೀತಿಯ ಅನೇಕ ಊಳಿಗಮಾನ್ಯ ಪ್ರವೃತ್ತಿ ಜನರಲ್ಲಿ ಬೆಳೆದುಬಂದಿದೆ. ನಿಧಾನ ಮತ್ತು ಸಮಯವನ್ನು ಕಳೆದುಕೊಳ್ಳುವುದನ್ನು ಜನರು ಸಹಜವೆಂದು ಪರಿಗಣಿಸುತ್ತಾರೆ. ಇದು ಸಾಮಾನ್ಯ ಸಂಗತಿಯೆಂದು ಸಹಿಸಿಕೊಳ್ಳುತ್ತಾರೆ. ಸರಕಾರಿ ಕಛೇರಿಗಳಲ್ಲಿಯೂ ಕೂಡ ಜನರು ವಿನಾಕಾರಣ ಕಾಯುತ್ತಾರೆ. ಅದರ ಬಗ್ಗೆ ಚಕಾರವೆತ್ತುವುದಿಲ್ಲ. ಸಂಬಂಧಪಟ್ಟ ವ್ಯಕ್ತಿ ಟೀ ಸೇವಿಸಲು ಎಷ್ಟು ಹೊತ್ತು ಹೋದರೂ ಕೇಳದೆ ಕಾದು ಕೂತಿರುತ್ತಾರೆ. ಯಾವುದೇ ಆಕ್ಷೇಪವಾಗಲೀ, ದೂರಾಗಲೀ ನೀಡುವುದಿಲ್ಲ. ಅಧಿಕಾರ ನಡೆಸುವುದಕ್ಕೂ ಮತ್ತು ಆಡಳಿತಕ್ಕೂ ನಡುವಿನ ಸಂಬಂಧವು ಊಳಿಗಮಾನ್ಯ ಸ್ವರೂಪದ್ದಾಗಿದೆ ಮತ್ತು ಈ ರೀತಿಯ ಸ್ಥಿತಿಯನ್ನು ಸಾಮಾನ್ಯವೆಂದು ಜನರು ಒಪ್ಪಿದ್ದಾರೆ. ಮುಖ್ಯ ಸಂಗತಿಯೆಂದರೆ ಜನರಿಗೆ ನಿಮಿಷದಲ್ಲಾಗುವ ಕೆಲಸವನ್ನು ದಿನದಲ್ಲಿ ಮಾಡಿಕೊಟ್ಟರೆ ಅದೇ ಸಂತೋಷ. |

ಚೌಕಟ್ಟು 9.5

| ಹಣಕಾಸು ಬಳಕೆ |
| --- |
| ಹಿಂದುಳಿದ ಪ್ರದೇಶಾಭಿವೃದ್ಧಿ ನಿಧಿಯಾಗಿ ಜಿಲ್ಲೆಗೆ ವರ್ಷಕ್ಕೆ ರೂ. 15 ಕೋಟಿ ಬಿಡುಗಡೆಯಾಗುತ್ತಿದೆ. ಈ ರೀತಿಯ ಅನುದಾನ ಮೂರುವರ್ಷಗಳು ಬರುತ್ತದೆ. ಈ ಅನುದಾನ ನಿಗದಿತ ಸಮಯಕ್ಕೆಂದು ಕೆಲವು ನಿಯಮಗಳನ್ನು ಮಾಡಲಾಗಿದೆ. ಆದರೂ ಬಿಡುಗಡೆ ಮಾಡಿದ ಅನುದಾನದಲ್ಲಿ ಶೇ. 50ರಷ್ಟು ಹಣವನ್ನು ಮಾತ್ರ ಮೊದಲ ವರ್ಷ ಖರ್ಚು ಮಾಡಲಾಯಿತು ಉಳಿದ ಹಣವನ್ನು ಮುಂದಿನ ವರ್ಷ ಬಳಸಲಾಯಿತು. ವರ್ಷವೆಲ್ಲಾ ಖರ್ಚು ಮಾಡದೆ ಮಾರ್ಚ್ ತಿಂಗಳಲ್ಲಿ ಹಣ ಖರ್ಚು ಮಾಡಲು ಮತ್ತು ಬಳಕೆ ಪ್ರಮಾಣ ಪತ್ರ ಸಲ್ಲಿಕೆಗಾಗಿ ವಿಭಾಗಗಳು ಹರಸಾಹಸ ಪಡುತ್ತಾರೆ. |

## ಶಿಫಾರಸ್ಸುಗಳು

1. ವ್ಯವಸ್ಥೆಯ ಹೊಣೆಗಾರಿಕೆಯನ್ನು ಹೆಚ್ಚಿಸಿ ಉತ್ತಮ ಆಡಳಿತಕ್ಕೆ ಮನ್ನಣೆ ನೀಡುವ ಮತ್ತು ಸಂಭಾವನೆಯನ್ನು ನೀಡುವುದರ ಮೂಲಕ ಪ್ರೋತ್ಸಾಯಿಸಬೇಕು.

2. ಆಡಳಿತ ವ್ಯವಸ್ಥೆಯಲ್ಲಿ ವಿಳಂಬಗತಿಯನ್ನು ತಡೆಯಲು ಮೇಲಿನ ಅಧಿಕಾರಿಗಳು ಸಂಬಂಧಿಸಿದ ಸಂಗತಿಯನ್ನು ಪರಿಶೀಲಿಸಿ ಅಸಮರ್ಥತೆಯನ್ನು ತೊಡೆದುಹಾಕಲು ಶ್ರಮ ವಹಿಸಬೇಕು.

3. ಮಾಹಿತಿ ಹಕ್ಕು ಕಾಯಿದೆಗೆ ಹೆಚ್ಚಿಗೆ ಪ್ರಚಾರ ನೀಡಿ ಸಾರ್ವಜನಿಕರು ತಮ್ಮ ಇಚ್ಛೆದಿಂದ ಮಾಹಿತಿಯನ್ನು ಪಡೆಯುವ, ಪ್ರಶ್ನಿಸುವಂತಹ ಪ್ರಜ್ಞೆಯನ್ನು ಬೆಳೆಸಿಕೊಳ್ಳಲು ಅನುವು ಮಾಡಿಕೊಡಬೇಕು.

4. ಭ್ರಷ್ಟಾಚಾರ ತಡೆಯಲು ಉತ್ತಮ ಸ್ವಯಂ ಸೇವಾ ಸಂಘಗಳಿಗೆ ಪ್ರೋತ್ಸಾಹ ನೀಡಬೇಕು. ನಾಗರೀಕ ಹಿತರಕ್ಷಣಾ ಸಂಘದಂತಹ ಗ್ರಾಹಕರ ಸಂಘಟನೆಗಳನ್ನು, ಜಾಗೃತಿ ಸಮಿತಿಗಳನ್ನು ಸ್ವಸಹಾಯ ಸಂಘಗಳಂತಹ ಸಂಸ್ಥೆಗಳನ್ನು ಪ್ರೋತ್ಸಾಯಿಸಬೇಕು.

5. ಎಲ್ಲಾ ಹಂತದಲ್ಲಿಯೂ ವಿದ್ಯುನ್ಮಾನ ಆಡಳಿತವನ್ನು ಪ್ರೋತ್ಸಾಯಿಸಿ ಜಾರಿಗೆ ತರುವುದು.

6. ಅಭಿವೃದ್ಧಿ ಯೋಜನೆಗಳ ಜಾರಿಯಲ್ಲಿ ಸರಕಾರೇತರ ಸಂಘಸಂಸ್ಥೆಗಳು, ಎನ್.ಜಿ.ಓ.ಗಳನ್ನು ಒಳಗೊಂಡು ಉತ್ತಮ ಸಾಮರಸ್ಯದಿಂದ ನಿರ್ವಹಣೆ ಮಾಡಬೇಕು.

7. ಗ್ರಾಮೀಣ ಸಮುದಾಯಕ್ಕೆ ತಿಳುವಳಿಕೆ ಮೂಡಿಸಲು ಶಿಬಿರಗಳ ಮೂಲಕ ಮಾಹಿತಿಯನ್ನು ನೀಡುವ ಜಾಲವನ್ನು ಹೆಚ್ಚಿಸಬೇಕು.

8. ಜನರಲ್ಲಿ ಕರ್ತವ್ಯ ಪ್ರಜ್ಞೆ ಬೆಳೆಸಲು ಹಾಗೂ ಅಧಿಕಾರಿಗಳು ಮತ್ತು ಸಾರ್ವಜನಿಕರ ನಡುವೆ ಚರ್ಚೆ ಮತ್ತು ಸಂವಾದ ನಡೆಸಲು ಅನುವಾಗುವಂತೆ ಕುಂದುಕೊರತೆಗಳ ವಿಶೇಷ ಘಟಕವೊಂದನ್ನು ಹಳ್ಳಿ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಸ್ಥಾಪಿಸಿ ಜನರ ತೊಂದರೆಗಳಿಗೆ ಆದಷ್ಟು ಬೇಗ ಪರಿಹಾರ ಸಿಗುವಂತೆ ಕ್ರಮ ವಹಿಸಬೇಕು.

# ಸಾಮಾಜಿಕ ಬಂಡವಾಳ ಮತ್ತು ಮಾನವ ಅಭಿವೃದ್ಧಿ – ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳು





KALBURGI (GULBARGA) District Map
N
Bidar
MAHARASHTRA
ANDHRA PRADESH
Bijapur
Raichur
Khajuri
Aland
Bodhan
Salgar
Kinhi
Sonath
Kamlapur
Mahagaon
Narona
Sargapur
Ratkal
Chincholi
Mullamdri
Sulahpet
Benithora
Awarja
Kulali
Nimbarga
KALBURGI
Kalgi
Nirgunda
Marhal
Mannur
Bari
Atanur
Gobur Buzurgr
Tingli
Kogna
Sadam
Afzalpur
Gangapur
Farhatabad
Chitapur
Adki
Firozabad
Mudhol
Nelogi
Wadi
Kolla
Jevargi
Handarki
Andola
Nalwar
Aralagundi
Gajarkot
Ijeri
Yaragol
Yedrami
Gurmatkal
Sirwal
Bhima
Yadgir
Doranahalli
Haligeri
Gugi
Malla Buzurg
Shahpur
Khanapur
Nandepalli
Kembhavi
Sagar
Hattigudur
Ajalapur
Saidapur
Agni
Wadagera
Shorapur
Tumkur
Krishna
Devapur
Kakkera
Tintani
Kodekal
Narayanpur
Map not to Scale
Copyright © 2007 Compare Infobase Limited
LEGEND
State Boundary
District Boundary
Major Road
Railway
District Headquarter
Major Town
Other Town
River

ಅಧ್ಯಾಯ 10

# ಸಾಮಾಜಿಕ ಬಂಡವಾಳ ಮತ್ತು ಮಾನವ ಅಭಿವೃದ್ಧಿ – ಸರ್ಕಾರೇತರ ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳು

ಅನಾದಿ ಕಾಲದಿಂದಲೂ ಸ್ವಇಚ್ಛೆಯಿಂದ ಮಾಡುವ ಸಾಮಾಜಿಕ ಸೇವೆಯನ್ನು ಭಾರತೀಯ ಪರಂಪರೆಯ ಒಂದು ಭಾಗವನ್ನಾಗಿ ಪರಿಗಣಿಸಿಕೊಂಡು ಬರಲಾಗಿದೆ. ವ್ಯಕ್ತಿಗಳಾಗಲಿ, ಅಥವಾ ಸಾಮಾಜಿಕ ಮತ್ತು ಧಾರ್ಮಿಕ ಸಂಸ್ಥೆಗಳಾಗಲಿ ಸ್ವಇಚ್ಛೆಯಿಂದ ನಡೆಸುವ ಸಾಮಾಜಿಕ ಸೇವೆಯನ್ನು ಸಮಾಜದ ಬಹುಜನರ ಹಿತ ಕಾಯುವ ದೃಷ್ಟಿಯಿಂದ ನೈತಿಕ ಹಾಗೂ ಸಾಮಾಜಿಕ ಮೌಲ್ಯಗಳು ಬೆಂಬಲಿಸುತ್ತ ಬಂದಿವೆ.

ಸ್ವಯಂಸೇವಾ ಸಂಸ್ಥೆಗಳು ಎನ್‌ಜಿಒ ಹೆಸರಿನಲ್ಲಿ ಅತ್ಯಂತ ವ್ಯಾಪಕವಾದ ಸ್ವರೂಪವನ್ನು ತಳೆದು ಜನರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಿವೆ. ಅವುಗಳ ಹುಟ್ಟು, ವ್ಯಾಪ್ತಿ, ವಿಚಾರಧಾರೆ ಕಾರ್ಯಕ್ರಮ ಮುಂತಾದವುಗಳ ದೃಷ್ಟಿಯಿಂದ ಅವು ವಿಭಿನ್ನ ರೂಪಗಳನ್ನು ತಳೆದು ಕೆಲಸ ನಿರ್ವಹಿಸುತ್ತಿವೆ. ಅವು ಅಭಿವೃದ್ಧಿಯ ಎಲ್ಲ ಸಂಭವನೀಯ ವಿಷಯಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಜನತೆ ಮತ್ತು ನೀತಿ ನಿರೂಪಣೆ ಮಾಡುತ್ತಿರುವವರು ಅವುಗಳಿಗೆ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಸಂಬಂಧಿಸಿದ ಎಲ್ಲ ಜವಾಬುದಾರಿಗಳನ್ನು ವಹಿಸುತ್ತಿದ್ದಾರೆ. ಅವು ಈ ಕೆಳಕಂಡ ಅನೇಕ ಪಾತ್ರಗಳಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

1. ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸುವುದು ಮತ್ತು ಅವುಗಳ ಅನುಷ್ಠಾನಗೊಳಿಸುವುದು.
2. ಸ್ಥಳೀಯ ಸಂಪನ್ಮೂಲಗಳ ಮತ್ತು ಕರ್ತೃತ್ವ ಶಕ್ತಿಯನ್ನು ಸಂಘಟಿಸುವುದು,
3. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವೇಗವರ್ಧಕವಾಗಿ ಮತ್ತು ಆವಿಷ್ಕಾರಾತ್ಮಕವಾಗಿ ಘಟಕಗಳಾಗಿ ಕಾರ್ಯನಿರ್ವಹಿಸುವುದು.
4. ಸಮಾಜದಲ್ಲಿ ಸ್ವಾವಲಂಬಿ ಮತ್ತು ಸುಸ್ಥಿರಗತಿ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು,
5. ಸರ್ಕಾರ ಮತ್ತು ಜನತೆಯ ನಡುವೆ ಮಧ್ಯಸ್ಥಿಕೆಗಾರರಾಗಿ ಕಾರ್ಯ ನಿರ್ವಹಿಸುವುದು,
6. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಜನರಿಗೆ ಸೇವೆಯನ್ನು ಒದಗಿಸುವ ವ್ಯವಸ್ಥೆಯನ್ನು ಚುರುಕುಗೊಳಿಸುವಲ್ಲಿ ಸರ್ಕಾರದ ಪಾಲುದಾರರಾಗಿ ಬೆಂಬಲ ನೀಡುವುದು.
7. ಸಾಮಾನ್ಯ ಜನತೆ ಮತ್ತು ಗ್ರಾಮೀಣ ಪ್ರದೇಶದ ಬಡರೈತರಿಗೆ ತಾಂತ್ರಿಕತೆಯ ವಾಹಕರಾಗುವುದು,
8. ಬಡವರ ಧಾರಣಾ ಸಾಮರ್ಥ್ಯವನ್ನು ಹೆಚ್ಚಿಸುವುದು.
9. ಶಿಕ್ಷಣ, ತರಬೇತಿ, ಆರೋಗ್ಯ ಸೌಕರ್ಯಗಳನ್ನು ಬಡವರು ಮತ್ತು ಅಂಚಿನಲ್ಲಿರುವ ಗುಂಪುಗಳಿಗೆ ಒದಗುವಂತೆ ಮಾಡಿ ಮಾನವ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.
10. ಗ್ರಾಮೀಣ ನಾಯಕತ್ವವನ್ನು ಮತ್ತು ಅಂಚಿನಲ್ಲಿರುವ ಗುಂಪುಗಳ ಸಹಭಾಗಿತ್ವವನ್ನು ಪ್ರೋತ್ಸಾಹಿಸುವುದು.

ಹೀಗೆ ಸರ್ಕಾರೇತರ ಸಂಸ್ಥೆಗಳು ಬಲು ಪರಿಣಾಮಕಾರಿಯಾಗಿ ಮತ್ತು ಸಮರ್ಥವಾಗಿ ಸೇವೆ ಒದಗಿಸುವ ಸಂಸ್ಥೆಗಳೆಂದು ಹಾಗೂ ಮಾರುಕಟ್ಟೆ ಶಕ್ತಿಗಳು ಅಥವಾ ಸರ್ಕಾರ ಸೇವೆ ಒದಗಿಸಲು ಸಾಧ್ಯವಾಗದ ಬಡವರಿಗೆ ಸೇವೆ ಸಲ್ಲಿಸುವಲ್ಲಿ ಯಶಸ್ವಿಯಾಗಿವೆ ಎಂದು ಅವುಗಳನ್ನು ಪರಿಗಣಿಸಲಾಗಿದೆ.

## ಗುಲ್ಬರ್ಗಾ ಜಿಲ್ಲೆಯಲ್ಲಿ ಸರ್ಕಾರೇತರ ಸಂಸ್ಥೆಗಳು

ಸೂಕ್ತ ಮಾಹಿತಿಯ ಕೊರತೆಯಿಂದ ಗುಲ್ಬರ್ಗಾ ಜಿಲ್ಲೆಯಲ್ಲಿ ಎಷ್ಟು ಎನ್‌ಜಿಓಗಳಿವೆ ಎಂಬುದು ಸರಿಯಾಗಿ ತಿಳಿದಿಲ್ಲ. ಆದರೂ ಸುಮಾರು 150 ಎನ್‌ಜಿಓಗಳು ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ ನೊಂದಾಯಿತ ಎನ್‌ಜಿಓಗಳ ಹರವನ್ನು ಕೆಳಗಿನ ಕೋಷ್ಟಕದಲ್ಲಿ ತೋರಿಸಲಾಗಿದೆ. ಗುಲ್ಬರ್ಗಾ ತಾಲೂಕಿನಲ್ಲಿ ಮುಖ್ಯವಾಗಿ ಗುಲ್ಬರ್ಗಾ ನಗರದಲ್ಲಿ ಶೇಕಡಾ 67 ರಷ್ಟು ಎನ್‌ಜಿಓಗಳು ಕೇಂದ್ರಿಕೃತಗೊಂಡಿವೆ ಎಂಬುದನ್ನು ಗಮನಿಸಬಹುದಾಗಿದೆ. ಜಿಲ್ಲೆಯ ಸಮಗ್ರ ಅಭಿವೃದ್ಧಿಗಾಗಿ ಮತ್ತು ಸಾಮಾಜಿಕ ಬದಲಾವಣೆಗಾಗಿ ಅತ್ಯಂತ ಬದ್ಧವಾಗಿ ಕೆಲವೇ ಕೆಲವು ಉತ್ತಮ ಎನ್‌ಜಿಓಗಳು ದುಡಿಯುತ್ತಿವೆ. ಈ ಎನ್‌ಜಿಓಗಳು ಸರ್ಕಾರದ ಕಾರ್ಯಕ್ರಮಗಳ ಜೊತೆಗೆ ಕೃಷಿ ಜಲಾನಯನ ಪ್ರದೇಶ ಅಭಿವೃದ್ಧಿ ಕುರಿತ ತರಬೇತಿ ಮತ್ತು ಕೌಶಲ್ಯಗಳ ಅಭಿವೃದ್ಧಿ, ಶಿಕ್ಷಣ ಮತ್ತು ಆರೋಗ್ಯ, ಬಾಲಕಾರ್ಮಿಕ ಮುಂತಾದ ಕ್ಷೇತ್ರಗಳಲ್ಲಿ ತಮ್ಮ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡುತ್ತಿದೆ. ಹೀಗೆ ಅವುಗಳು ಮಾನವ ಅಭಿವೃದ್ಧಿಯೊಂದಿಗೆ ನಿಕಟವಾದ ಸಂಬಂಧವಿರುವ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿರುವುದನ್ನು ನೋಡಬಹುದಾಗಿದೆ.

ಅನೇಕ ಎನ್‌ಜಿಓಗಳು ಬಡಜನರನ್ನು ತೊಡಗಿಸಿಕೊಂಡು ಸ್ವಸಹಾಯ ಗುಂಪುಗಳನ್ನು ರಚಿಸಿ ಅದರ ಸದಸ್ಯರಿಗೆ ತರಬೇತಿ ನೀಡುವುದರ ಮೂಲಕ ಮತ್ತು ಕುಶಲತೆ ನೀಡುವುದರ ಮೂಲಕ ಅವರ ಧಾರಣಾ ಸಾಮರ್ಥ್ಯವನ್ನು ವಿಸ್ತೃತಗೊಳಿಸುವಲ್ಲಿ ಯಶಸ್ವಿಯಾಗಿವೆ.

ಕೋಷ್ಟಕ 10.1

### ಗುಲಬರ್ಗಾ ಜಿಲ್ಲೆಯಲ್ಲಿ ಎನ್‌ಜಿಓಗಳ ವಿತರಣೆ

| ತಾಲ್ಲೂಕು | ಎನ್‌ಜಿಓಗಳ ಸಂಖ್ಯೆ |
|---|---|
| ಅಫಜಲಪುರ | 03 |
| ಅಳಂದ್ | 03 |
| ಚಿಂಚೋಳಿ | 04 |
| ಚಿತ್ತಾಪುರ | 03 |
| ಗುಲಬರ್ಗಾ | 70 |
| ಜೇವರ್ಗಿ | 04 |
| ಸೇಡಮ್ | 04 |
| ಶಹಾಪುರ | 04 |
| ಶೋರಾಪುರ | 05 |
| ಯಾದಗೀರ್ | 05 |
| **ಜಿಲ್ಲೆ** | **105** |

ಮೂಲ: ಜಿಲ್ಲಾಧಿಕಾರಿ ಕಚೇರಿ, ಗುಲಬರ್ಗಾ 2006-07

ಚೌಕಟ್ಟು 10.1

### ಮೈಸೂರು ಪುನರ್‌ವಸತಿ ಮತ್ತು ಅಭಿವೃದ್ಧಿ ಸಂಸ್ಥೆ (ಎಮ್‌ವೈಆರ್‌ಎಡಿಎ)

ಮೈಸೂರು ಪುನರ್‌ವಸತಿ ಮತ್ತು ಅಭಿವೃದ್ಧಿ ಸಂಸ್ಥೆ (**ಎಮ್‌ವೈಆರ್‌ಎಡಿಎ**) ಮೈರಾಡ ಎಂಬುದು ಗ್ರಾಮೀಣ ಅಭಿವೃದ್ಧಿಯಲ್ಲಿ ನಿರತವಾಗಿರುವ ಗುಲ್ಬರ್ಗಾ ಜಿಲ್ಲೆಯ ಪ್ರಮುಖ ಎನ್‌ಜಿಓ. ಅದನ್ನು 1968ರಲ್ಲಿ ಪ್ರಾರಂಭಿಸಲಾಯಿತು. ಅದು 1968ರಿಂದ 1978-79ರ ವರೆಗೆ ಸಂಪೂರ್ಣವಾಗಿ ಟಿಬೆಟ್ ವಲಸಿಗರ ಪುನರ್‌ವಸತಿಗೆ ತನ್ನನ್ನು ತಾನು ತೊಡಗಿಸಿಕೊಂಡಿತ್ತು. ಅನಂತರ ಆರ್ಥಿಕ ಚಟುವಟಿಕೆಗಳು ಮತ್ತು ಧಾರಣಾ ಸಾಮರ್ಥ್ಯ ನಿರ್ಮಾಣದ ಮೂಲಕ ಬಡಜನರ ಮತ್ತು ಅಂಚಿನಲ್ಲಿರುವ ಗುಂಪುಗಳ ಸಬಲೀಕರಣಗೊಳಿಸುವ ಕಡೆಗೆ ತನ್ನ ಕಾರ್ಯಾಚರಣೆಯನ್ನು ವಿಸ್ತರಿಸಿತು.

**ಕಾರ್ಯನೀತಿ**

ಮೈರಾಡ ಎರಡು ರೀತಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಒಂದು, ಬಡ ಜನರಿಂದ ಕೂಡಿದ ಪರ್ಯಾಯ ಅಭಿವೃದ್ಧಿ ಸಂಸ್ಥೆಗಳನ್ನು ಪೋಷಿಸುವುದು, ಅದಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಕ್ರೂಢೀಕರಿಸುವುದು ಹಾಗೂ ಅದನ್ನು ನಿರ್ವಹಿಸುವುದು. ಈ ಸಂಸ್ಥೆಗಳನ್ನು

ಬಡವರ ಸಬಲೀಕರಣಕ್ಕೆ ನಿರಂತರ ಆಧಾರವಾಗುವಂತೆ ಮಾಡುವುದು. ಎರಡು, ಈ ಪರ್ಯಾಯ ವ್ಯವಸ್ಥೆಗಳಿಗೆ ಮನ್ನಣೆ ಒದಗಿಸುವುದಕ್ಕೆ ಅಧಿಕಾರ ವ್ಯವಸ್ಥೆಯೊಂದಿಗೆ ಕೆಲಸಮಾಡಿ ಅದರ ಮನವೊಲಿಸುವುದು ಮತ್ತು ಇವುಗಳಿಗೆ ಸೂಕ್ತ ಬೆಂಬಲ ನೀಡಿ ಅವುಗಳನ್ನು ಮುಖ್ಯವಾಹಿನಿಗೆ ತರುವುದು.

ಈ ಜಿಲ್ಲೆಯು ಮುಖ್ಯವಾಗಿ ಒಣ ಭೂಮಿ ಬೇಸಾಯವನ್ನು ಹೊಂದಿರುವುದರಿಂದ ಬಡವರ ಆಹಾರ ಸುಭದ್ರತೆಗೆ ಮೈರಾಡ ಸೂಕ್ಷ್ಮ ಜಲಾನಯನ ನಿರ್ವಹಣಾ ತಂತ್ರವನ್ನು ಗುಲ್ಬರ್ಗಾದಲ್ಲಿ ಪ್ರಾರಂಭಿಸಿತು.

ಮೈರಾಡವು ಅನೇಕ ರೀತಿಯ ಗ್ರಾಮೀಣ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಧಾರಣಾ ಸಾಮರ್ಥ್ಯದ ನಿರ್ಮಾಣಕ್ಕೆ ಸ್ವಸಹಾಯ ಗುಂಪುಗಳು, ಜಲಾನಯನ ಅಭಿವೃದ್ಧಿ ಸಂಘಗಳು, ಗ್ರಾಮ ಅಭಿವೃದ್ಧಿ ಸಮಿತಿಗಳು, ಶಾಲಾಸಮಿತಿಗಳು, ಗ್ರಾಮ ಜಲ ಮತ್ತು ನೈರ್ಮಲ್ಯ ಸಮಿತಿಗಳು, ಪ್ರಗತಿಪರ ರೈತರ ಸಂಘಗಳು, ಗ್ರಾಮ ಅರಣ್ಯ ಸಮಿತಿಗಳು, ಗ್ರಾಮ ಆರೋಗ್ಯ ಸಮಿತಿಗಳನ್ನು ಸಂಘಟಿಸುತ್ತಾ ಬಂದಿದೆ.

ಹೀಗೆ ಮೈರಾಡದ ಗಮನ ಜನರಿಗೆ ಜೀವನೋಪಾಯಕ್ಕೆ ಆಧಾರವಾದ ಚಟುವಟಿಕೆಗಳನ್ನು ಮತ್ತು ಆದಾಯದ ಮೂಲಗಳ ಸೃಷ್ಟಿಸುವುದರ ಕಡೆಗೆ ಕೇಂದ್ರೀಕೃತಗೊಂಡಿತ್ತು. ಬರಪೀಡಿತ ಪ್ರದೇಶವಾದ ಗುಲ್ಬರ್ಗಾ ಜಿಲ್ಲೆಯಲ್ಲಿ ಜಲಾನಯನ ಮಾರ್ಗವನ್ನು ಕೃಷಿ ಹಾಗೂ ಪರಿಸರ ಸಂರಕ್ಷಣೆಗೆ ಬಳಸಿಕೊಳ್ಳಲಾಗುತ್ತಿದೆ.

ಮೈರಾಡವು ಸಹಭಾಗಿತ್ವ ಜಲಾನಯನದ ಸಮಗ್ರ ಅಭಿವೃದ್ಧಿ ಎಂಬ ಯೋಜನಾ ತಂತ್ರವನ್ನು ಎಸ್‌ಡಿಸಿ ಮತು ಕರ್ನಾಟಕ ಸರ್ಕಾರದ ಪಾಲುದಾರಿಕೆಯಲ್ಲಿ 1984ರಲ್ಲಿ ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಿತು. ಸರ್ಕಾರದೊಂದಿಗೆ ಪಾಲುದಾರಿಕೆಯಲ್ಲಿ ಒಂದು ಎನ್‌ಜಿಓ ಅಧಿಕೃತವಾಗಿ ಭಾಗವಹಿಸಿದ ದೇಶದ ಮೊಟ್ಟಮೊದಲ ಯೋಜನೆ ಇದಾಗಿತ್ತು. ಸಹಭಾಗಿತ್ವವಾದಿ ಜಲಾನಯನ ಸಮಗ್ರ ಅಭಿವೃದ್ಧಿ ಎಂಬ ಪ್ರಯೋಗವು ರಾಷ್ಟ್ರೀಯ ನೀತಿಯ ಮೇಲೆ ಬಹಳ ಪರಿಣಾಮ ಬೀರಿತು. ಜಲಾನಯನದ ಎಲ್ಲ ಚಟುವಟಿಕೆಗಳು ದೈಹಿಕ ಶ್ರಮದಿಂದ ನೆರವೇರಿಸುತ್ತಿದ್ದುದರಿಂದ ಸುತ್ತಮುತ್ತ ಪ್ರದೇಶದ ಬಡವರು ವಲಸೆ ಹೋಗುವುದು ನಿಂತಿತು. ಯೋಜನೆಯ ಎಲ್ಲ ಹಂತಗಳಲ್ಲಿ ಜನರ ಸಹಭಾಗಿತ್ವ ಈ ಜಲಾನಯನ ಯೋಜನೆಯ ಮತ್ತೊಂದು ಪ್ರಮುಖ ವಿಶೇಷತೆಯಾಗಿತ್ತು.

ಜಲಾನಯನ ಅಭಿವೃದ್ಧಿ ಯೋಜನೆಯಲ್ಲಿ ಹೊಸ ಹೊಸ ಆವಿಷ್ಕಾರಗಳನ್ನು ಅಳವಡಿಸಿಕೊಳ್ಳುವ ದಿಶೆಯಲ್ಲಿ ಪ್ರಯೋಗಗಳನ್ನು ನಡೆಸಿತು. ಮೊದಲು ಅನುದಾನದಿಂದ ನಡೆಯುತ್ತಿದ್ದ ಯೋಜನೆಯು ನಂತರ ಶೇಕಡಾ 25–50 ರಷ್ಟು ದೇಣಿಗೆ ಕಡೆಗೆ ಪರಿವರ್ತನೆಗೊಂಡಿತು. ಅನಂತರ ದೇಣಿಗೆ ಹಂತದಿಂದ ಅದು ಸಾಲ ಆಧಾರಿತ ಜಲಾನಯನ ಮಾರ್ಗಕ್ಕೆ ಪಲ್ಲಟಗೊಂಡಿತು.

ಧಾರಣಾ ಸಾಮರ್ಥ್ಯ ನಿರ್ಮಾಣದ ಕಾರ್ಯಕ್ರಮದಡಿಯಲ್ಲಿ ಮೈರಾಡವು ಅನೇಕ ಸ್ವಸಹಾಯ ಗುಂಪುಗಳನ್ನು ಸಂಘಟಿಸಿತು. ಅವುಗಳ ಸದಸ್ಯರು ಮೈರಾಡದಿಂದ ತರಬೇತಿ ಮತ್ತು ಮಾರ್ಗದರ್ಶನವನ್ನು ಪಡೆದುಕೊಂಡರು. ಮೈರಾಡವು 'ಸಂಘಮಿತ್ರ ಸಣ್ಣ ಹಣಕಾಸು ಸಂಸ್ಥೆಗಳ ಒಕ್ಕೂಟವನ್ನು ಆರಂಭಿಸಿ ಅದನ್ನು ಪ್ರೋತ್ಸಾಹಿಸುತ್ತಿದೆ. ಈ ಸಂಸ್ಥೆಯ ವಿಶಿಷ್ಟ ಗುಣವೆಂದರೆ ತನ್ನ ಸಂಪನ್ಮೂಲ ಹಾಗೂ ಹಣಕಾಸು ನೆರವನ್ನು ನೀಡಿ ಬೇರೆ ಸಂಘಗಳ ಸದಸ್ಯರಿಗೆ ತರಬೇತಿ ನೀಡುವ ಮೂಲಕ ಸಿಬಿಓಗಳ ಸಾಮರ್ಥ್ಯ ಹೆಚ್ಚಿಸುವುದು.

ಮೈರಾಡವು ಜನರು ಯೋಜನೆಯಲ್ಲಿ ಪಾಲ್ಗೊಳ್ಳುವಂತೆ ಮಾಡಲು ನಿರಂತರವಾಗಿ ಶ್ರಮಿಸುತ್ತಿದೆ ಎಂದು ಚಿಂಚೋಳಿ ತಾಲ್ಲೂಕಿನ ಜಲಾನಯನ ಯೋಜನೆಯನ್ನು ಕುರಿತ ಅಧ್ಯಯನವು ತಿಳಿಸಿದೆ. ಯಾರು ಇದರಿಂದ ನೇರವಾಗಿ ಲಾಭಪಡೆಯುವರೋ ಅವರೇ ಇದರೊಂದಿಗೆ ಸೇರಿಕೊಳ್ಳಬೇಕು ಎಂಬುದು ಜನರ ಸಾಮಾನ್ಯ ಅಭಿಪ್ರಾಯವಾಗಿತ್ತು. ಸಾಮಾಜಿಕ ಕಾರಣಗಳಿಂದಾಗಿ ಸಮಾಜದ ಕೆಳಜಾತಿ ಜನರು ಈ ಯೋಜನೆಗಳಲ್ಲಿ ಪಾಲ್ಗೊಳ್ಳಲು ಮುಂದಾಗಲಿಲ್ಲ. ತೀವ್ರ ಕಾರ್ಯಾಚರಣೆ, ತರಬೇತಿ, ರಾತ್ರಿಯ ಸಭೆಗಳ ಮೂಲಕ ರೈತರು ಎರಡು ಪ್ರಕ್ರಿಯೆಗಳಲ್ಲಿ ಭಾಗವಹಿಸುವಂತೆ ಎನ್‌ಜಿಓ ಪ್ರೇರೇಪಿಸಿತು. ಮೌಲ್ಯಮಾಪನ ಅಧ್ಯಯನವು ತಿಳಿಸಿರುವಂತೆ ಶೇಕಡಾ 96 ರಷ್ಟು ಜನರ ಭಾಗವಹಿಸುವಿಕೆಯು ಯೋಜನೆ ರೂಪಿಸುವ ಹಂತದಲ್ಲಿದ್ದರೆ ಶೇಕಡಾ 87 ರಷ್ಟು ಜನರ ಭಾಗವಹಿಸುವಿಕೆಯು ಯೋಜನೆಯ ನಿರ್ವಹಣಾ ಹಂತದಲ್ಲಿದ್ದುದನ್ನು ಗುರುತಿಸಿತು. ಅಧ್ಯಯನವು ಕೃಷಿ ಆದಾಯ ಮತ್ತು ಉತ್ಪಾದನೆ ಮೇಲೆ ಜಲಾನಯನ ಚಟುವಟಿಕೆಯು ಸಕಾರಾತ್ಮಕ ಪ್ರಭಾವ ಬೀರಿರುವುದನ್ನು ಅಧ್ಯಯನವು ಸ್ಪಷ್ಟವಾಗಿ ತೋರಿಸಿಕೊಟ್ಟಿತು. ಇಷ್ಟಲ್ಲದೆ ಇದು ಜನರ ಮನೋಭಾವವನ್ನು ಬದಲಾಯಿಸಿ ಸಾಮಾಜಿಕ ಪರಿಸರವನ್ನು ಸುಧಾರಿಸಿತು. ಈ ಪ್ರದೇಶದಲ್ಲಿ ನಂತರ ಅಸ್ತಿತ್ವಕ್ಕೆ ಬಂದ ಸ್ವಸಹಾಯ ಗುಂಪುಗಳು ಸಾಂಪ್ರದಾಯಿಕ ಸಮಾಜದಲ್ಲಿ ಪ್ರಮುಖ ಬದಲಾವಣೆಯನ್ನು ತರುವಲ್ಲಿ ಯಶಸ್ವಿಯಾದವು. (ವೈ.ಪ್ರತಿಭಾ ಅವರ ಎಂ.ಫಿಲ್. ಮಹಾಪ್ರಬಂಧ – ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮ: ಎನ್‌ಜಿಓಗಳ ಮಧ್ಯಸ್ಥಿಕೆ, ಅರ್ಥಶಾಸ್ತ್ರ ವಿಭಾಗ, ಗುಲ್ಬರ್ಗಾ ವಿಶ್ವವಿದ್ಯಾಲಯ, ಗುಲ್ಬರ್ಗಾ. 2002)

## ಸದಸ್ಯರಲ್ಲಿ ಸೂಕ್ತ ಪರಿಣಿತಿಯ ಮನೋ ಪ್ರವೃತ್ತಿ

ಸ್ಥಳೀಯ ಪಂಚಾಯತ್ ಸದಸ್ಯರಿಗೆ ಮೈರಾಡವು ತನ್ನ ಜಲಾನಯನ ಯೋಜನೆಯಡಿಯಲ್ಲಿ ತರಬೇತಿ ನೀಡುವುದರ ಮೂಲಕ ಇತರ ಅನೇಕ ಜಲಾನಯನ ಯೋಜನೆಗಳಿಗೆ ಅಗತ್ಯವಾದ ಜ್ಞಾನ ಹಾಗೂ ಅನುಭವ ಒದಗುವಂತೆ ಮಾಡಿತು.

ಮೈರಾಡವು ಆರಂಭಿಸಿದ್ದ ಜಲಾನಯನ ಸಮಗ್ರ ಅಭಿವೃದ್ಧಿ ಯೋಜನೆಯು ಈಗ ಸಾಂಸ್ಥಿಕ ಮತ್ತು ಸಂಘಟನಾತ್ಮಕ ಸುಧಾರಣಾ ಸಂಸ್ಥೆ ಎಂಬುದಾಗಿ ರೂಪಾಂತರಗೊಂಡಿದೆ. ಉತ್ತರ ಕರ್ನಾಟಕದಲ್ಲಿ ಈ ಸಾಂಸ್ಥಿಕ ಮತ್ತು ಸಂಘಟನಾತ್ಮಕ ಸುಧಾರಣಾ ಸಂಸ್ಥೆಯು ಪ್ರತಿಷ್ಠಿತ ತರಬೇತಿ ಕೇಂದ್ರವಾಗಿ ಬೆಳೆದಿದೆ. ಇದು ವಿವಿಧ ಜಿಲ್ಲೆಗಳ ಸಮುದಾಯ ಗುಂಪುಗಳಿಗೆ – ಸಮುದಾಯ ಆಧಾರಿತ ಸಂಘಗಳಿಗೆ, ಎನ್‌ಜಿಓ ಮತ್ತು ಸರ್ಕಾರಿ ಅಧಿಕಾರಿಗಳು, ಸ್ಥಳೀಯ ಗ್ರಾಮೀಣ ಬ್ಯಾಂಕುಗಳಿಗೆ ತರಬೇತಿ ನೀಡುತ್ತದೆ. ಈ ಸಂಸ್ಥೆಯು ಏಳು ಸಮುದಾಯ ನಿರ್ವಹಿಸುವ ಸಂಪನ್ಮೂಲ ಕೇಂದ್ರಗಳನ್ನು (CMRC) ಸ್ಥಾಪಿಸಿದೆ. ಹೀಗೆ ಸ್ಥಳೀಯ ಜನರಿಗೆ ಹಾಗೂ ಸಂಸ್ಥೆಗಳಿಗೆ ಇದು ಜ್ಞಾನದ ಕೇಂದ್ರವಾಗಿ ಸೇವೆ ಸಲ್ಲಿಸುತ್ತಿದೆ.

ಮೈರಾಡ ಈ ಪ್ರದೇಶದ ಜನರ ಆರೋಗ್ಯದ ಕಡೆಗೂ ಗಮನಹರಿಸಿದೆ. ಕರ್ನಾಟಕ ಆರೋಗ್ಯ ಪ್ರೋತ್ಸಾಹ ಮತ್ತು ಯುಎಸ್‌ಎಐಡಿನೊಂದಿಗಿನ ಪಾಲುದಾರಿಕೆಯಲ್ಲಿ ಎಚ್‌ಐವಿ/ಏಡ್ಸ್ ಪ್ರತಿಬಂಧ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಗುಲ್ಬರ್ಗಾ ಜಿಲ್ಲೆಯು ಅತಿ ಹೆಚ್ಚು ಗಂಡಾಂತರ ಪ್ರದೇಶವಾಗಿರುವುದರಿಂದ ಪ್ರತಿಬಂಧ'ದ ಜೊತೆಗೆ ಶುಶ್ರೂಷೆಯ ಚಟುವಟಿಕೆಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ. ಇದನ್ನು ಜಾಗೃತಿ ಮೂಡಿಸುವ ಮೂಲಕ, ತರಬೇತಿ, ಕಾಂಡೋಂಗಳ ಪ್ರಚಾರ, ರೆಡ್ ರಿಬ್ಬನ್ ಕ್ಲಬ್‌ಗಳ ಮೂಲಕ ನಡೆಸಲಾಗುತ್ತಿದೆ. ಈ ರೋಗ ಪೀಡಿತರಿಗೆ ಬೆಂಬಲ ಮತ್ತು ಶುಶ್ರೂಷೆಯನ್ನು ಸಲಹಾ ಕೇಂದ್ರ ಮತ್ತು ಎಸ್‌ಟಿಐ ಚಿಕಿತ್ಸಾಲಯ, ಸ್ವಯಂ ಪ್ರೇರಿತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರಗಳ ಮೂಲಕ ಒದಗಿಸಲಾಗುತ್ತಿದೆ. ಜೀವನಾಧಾರಕ್ಕೆ ಬೆಂಬಲವನ್ನು ಎಸ್‌ಎಜಿಗಳು/ಬ್ಯಾಂಕ್/ಸಂಘಮಿತ್ರ ಮೂಲಕ ನೀಡಲಾಗುತ್ತಿದೆ.

ಹೀಗೆ ಮೈರಾಡ ಮಾನವ ಅಭಿವೃದ್ಧಿಯನ್ನು ಆರ್ಥಿಕ ಸಬಲೀಕರಣದ ಮೂಲಕ ಬಡಜನರ ಧಾರಣಾ ಸಾಮರ್ಥ್ಯ ಹೆಚ್ಚಿಸುವ ಮೂಲಕ ಪ್ರೋತ್ಸಾಹಿಸುತ್ತಿದೆ ಹಾಗೂ ಸಹಭಾಗಿತ್ವವಾದಿ ಅಭಿವೃದ್ಧಿ ಪದ್ಧತಿಗೆ ತನ್ನದೇ ಆದ ಕೊಡುಗೆ ನೀಡಿದೆ.

ಚೌಕಟ್ಟು 10.2

## ಅಭಿವೃದ್ಧಿಯ ವೇಗವರ್ಧಕ – ಎನ್‌ಜಿಓ

ವಿಶ್ವಸೇವಾ ಮಿಷನ್ ಎಂಬ ಎನ್.ಜಿ.ಒ. ಮಾನವ ಅಭಿವೃದ್ಧಿಯ ಎಲ್ಲ ಪ್ರಮುಖ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದೆ. ಇದು 2000ರಲ್ಲಿ ಪ್ರಾರಂಭವಾಯಿತು. ಇದು ಪರಿಸರ, ಶಿಕ್ಷಣ, ಬಾಲ ಕಾರ್ಮಿಕ, ಸ್ವಚ್ಛ ನಗರ ಕಾರ್ಯಾಚರಣೆ, ಸಂಪೂರ್ಣ ನೈರ್ಮಲ್ಯ ಚಳುವಳಿ, ವಯಸ್ಕರ ಶಿಕ್ಷಣ ಮತ್ತು ಮಹಿಳಾ ಅಭಿವೃದ್ಧಿ ಮುಂತಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಅನೇಕ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದರ ಮೂಲಕ ಅದರ ಕಾರ್ಯಾಲಯವಾಗಿಯೂ ಅದು ಸೇವೆ ಸಲ್ಲಿಸುತ್ತಿದೆ. ಜಿಲ್ಲೆಯಲ್ಲಿ ಒಂದು ಲಕ್ಷ ಮರಗಳನ್ನು ನೆಡುವ ಜವಾಬ್ದಾರಿಯನ್ನು ಇದು ವಹಿಸಿಕೊಂಡಿದೆ.

ಸಾರ್ವಜನಿಕ ಸ್ಥಳವಾದ ಶಾಲೆ, ಕಛೇರಿ ಹಾಗೂ ಮನೆಗಳಲ್ಲಿ ನೀರು ಕೊಯ್ಲು ರಚನೆ (ಮಳೆ ಕೊಯ್ಲು ರಚನೆಗಳು) ಗಳನ್ನು ನಿರ್ಮಿಸುತ್ತಿದೆ.

ಸ್ವಚ್ಛತೆಯ ಬಗ್ಗೆ, ಮಲ ನಿರ್ಮೂಲನೆಯ ಬಗ್ಗೆ ಗುಲ್ಬರ್ಗಾ ನಗರದ ಅನೇಕ ಕಾಲೋನಿಗಳಲ್ಲಿ ಸಾಮಾನ್ಯ ಜನರಲ್ಲಿ ಜಾಗೃತಿ ಮೂಡಿಸಿದೆ. ಈಗ ಜನರು ಹಣ ಸಂದಾಯ ಮಾಡಿ ಮನೆಯ ಕಸದ ವಿಲೇವಾರಿ ಸೇವೆಯನ್ನು ಬಳಸುತ್ತಿದ್ದಾರೆ.

ಜಿಲ್ಲೆಯ ಜೇವರ್ಗಿ ಹಾಗೂ ಯಾದಗಿರಿ ತಾಲ್ಲೂಕುಗಳಲ್ಲಿ ಎಸ್.ಎಸ್.ಎ. ಕಾರ್ಯಕ್ರಮದಡಿ ಮಕ್ಕಳಿಗೆ 18 ಟೆಂಟ್/ಬಿಡಾರ ಶಾಲೆಗಳನ್ನು ತೆರೆದಿದೆ. ಇದು ವಲಸಿ ಹೋದ ಪಾಲಕರ ಮಕ್ಕಳು ಶಿಕ್ಷಣವನ್ನು ಮುಂದುವರೆಸುವಲ್ಲಿ ಸಹಾಯಕವಾಗಿದೆ. ಅಲ್ಲದೆ ಅವರನ್ನು ಮುಖ್ಯವಾಹಿನಿಗೆ ತರುವಲ್ಲಿ ಇದು ನೆರವಾಗಿದೆ.

ಸಂಪೂರ್ಣ ನೈರ್ಮಲ್ಯ ಕಾರ್ಯಾಚರಣೆದಡಿ ಈ ಎನ್.ಜಿ.ಓ. ಗುಲ್ಬರ್ಗಾ ಜಿಲ್ಲೆಯ 10 ಪಂಚಾಯಿತಿಗಳ 57 ಹಳ್ಳಿಗಳಲ್ಲಿ ಕೆಲಸ ಮಾಡಿ ಮಾಹಿತಿ, ಶಿಕ್ಷಣ ಮತ್ತು ಸಂವಾದದ ಮೂಲಕ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸಲು ಶ್ರಮವಹಿಸಿದೆ.

## ಸ್ವ-ಸಹಾಯ ಗುಂಪುಗಳು

ಸ್ವ-ಸಹಾಯ ಗುಂಪುಗಳ ಮೂಲವನ್ನು ಭಾರತೀಯ ಗ್ರಾಮ ಸಮುದಾಯದ 'ಪರಸ್ಪರ ನೆರವು ನೀಡುವ ಗುಣದಲ್ಲಿ ಕಾಣಬಹುದು. ಕೃಷಿ ಚಟುವಟಿಕೆ ಹಾಗೂ ಮನೆ ನಿರ್ಮಾಣವನ್ನು ನಿಗದಿತ ಸಮಯದಲ್ಲಿ ಸಂಪೂರ್ಣಗೊಳಿಸಬೇಕಾದ್ದರಿಂದ ಪರಸ್ಪರ ಸಹಾಯದ ಮೂಲಕ ಹೆಚ್ಚು ಶ್ರಮಿಕರನ್ನು ಅವಲಂಬಿಸಬೇಕಾಗುತ್ತದೆ. ಜನರು ಉಪಕರಣಗಳನ್ನು, ನೀರು ಹಾಗೂ ಜಾನುವಾರುಗಳನ್ನು ಹಂಚಿಕೊಳ್ಳುವುದರ ಮೂಲಕ ಗ್ರಾಮೀಣ ವ್ಯವಸ್ಥೆ ಸ್ವ-ಸಹಾಯವನ್ನು ಅವಲಂಬಿಸಿತ್ತು ಎಂದು ಹೇಳಬಹುದು. ಆದರೆ ಇದು ಸ್ವ-ಸಹಾಯ ಸಂಘಗಳಂತೆ ಯಾವುದೇ ವಿಧ್ಯುಕ್ತ/ಔಪಚಾರಿಕ ಸಾಂಸ್ಥಿಕ ರಚನೆಗೆ ಒಳಪಟ್ಟಿರಲಿಲ್ಲ. ಇಂದು ಸ್ವ-ಸಹಾಯ ಸಂಘಗಳು ಬಡವರ ಅಭಿವೃದ್ಧಿ ಮತ್ತು ಸಬಲೀಕರಣವನ್ನು ಪ್ರೋತ್ಸಾಹಿಸುವ ವ್ಯವಸ್ಥಿತ ಸಂಸ್ಥೆಗಳಾಗಿ ಹೊರಹೊಮ್ಮಿವೆ.

ಅನೇಕ ಅಭಿವೃದ್ಧಿ ಪರ ಕಾರ್ಯಕ್ರಮಗಳಡಿಯಲ್ಲಿ ನೆರವನ್ನು ಸ್ವ-ಸಹಾಯ ಗುಂಪುಗಳ ಮೂಲಕ ನೀಡಲು ತೊಡಗಿದಾಗ ಅವು ಎಲ್ಲರ ಗಮನ ಸೆಳೆಯಲು ಆರಂಭಿಸಿದವು. ಗುಲ್ಬರ್ಗಾ ಜಿಲ್ಲೆಯಲ್ಲಿ ಸ್ವಸಹಾಯ ಗುಂಪುಗಳನ್ನು ಅಭಿವೃದ್ಧಿಯ ಹಕ್ಕುದಾರರಾದ ಸರ್ಕಾರ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ), ಎನ್‌ಜಿಓ, ಬ್ಯಾಂಕುಗಳು ಪ್ರೋತ್ಸಾಹಿಸುತ್ತಿವೆ. ಅನೇಕ ಸರ್ಕಾರಿ ಕಾರ್ಯಕ್ರಮಗಳಡಿ ಮೈರಾಡ, ವರ್ಲ್ಡ್ ವಿಷನ್, ಬಯಲುಸೀಮೆ ಮತ್ತು ಮಹಿಳಾ ಸಮಖ್ಯದಂಥ ಸಂಸ್ಥೆಗಳು ಸ್ವ-ಸಹಾಯ ಗುಂಪುಗಳ ರಚನೆಯಲ್ಲಿ ಸಕ್ರಿಯವಾಗಿ ಕಾರ್ಯನಿರತವಾಗಿವೆ. ಸ್ವ-ಸಹಾಯ ಸಂಘಗಳು ತಮ್ಮ ಚಟುವಟಿಕೆಗಳನ್ನು ಮುಂದುವರಿಸಲು ಅಗತ್ಯವಾದ ತರಬೇತಿಯನ್ನು ಪಡೆದಿವೆ.

ಸ್ವಸಹಾಯ ಗುಂಪುಗಳ ಸದಸ್ಯರಿಗೆ ವ್ಯವಹಾರದ ಲೆಕ್ಕಾ ಪರಿಶೋದನೆ, ಮೈಕ್ರೋ ಫೈನಾನ್ಸ್, ಆರ್ಥಿಕ ಚಟುವಟಿಕೆಗಳನ್ನು ಗುರುತಿಸುವುದು, ಬ್ಯಾಂಕಿನಿಂದ ಹಣಕಾಸಿನ ನೆರವು, ಮಾರಾಟ ಮತ್ತು ಉದ್ಯಮಶೀಲತೆ ಇತ್ಯಾದಿ ವಿಷಯಗಳಲ್ಲಿ ತರಬೇತಿ ನೀಡಲಾಗುತ್ತಿದೆ.



ಸ್ವ-ಸಹಾಯ ಗುಂಪುಗಳು ಎಸ್‌ಜೆಎಸ್‌ಆರ್‌ವೈ, ಎಸ್.ಜಿ.ಎಸ್.ವೈ., ಜಲಾನಯನ ಅಭಿವೃದ್ಧಿ, ಸ್ತ್ರೀಶಕ್ತಿ ಮತ್ತು ಸ್ವಶಕ್ತಿಯಂಥ ಅನೇಕ ಕಾರ್ಯಕ್ರಮಗಳಡಿ ಸಂಘಟಿತವಾಗುತ್ತಿವೆ. ಉಳಿತಾಯ ಹಾಗೂ ಸಣ್ಣ ಸಾಲ (ಮೈಕ್ರೋ ಕ್ರೆಡಿಟ್) ಮಹಿಳಾ ಸಬಲೀಕರಣವನ್ನು ಪ್ರೋತ್ಸಾಹಿಸಲು ಇರುವ ಮೂಲ ಸಾಧನವೆಂದು ಅವುಗಳನ್ನು ಗುರುತಿಸಲಾಗಿದೆ. ಮಹಿಳಾ ಸ್ವ-ಸಹಾಯ ಗುಂಪುಗಳು ಪುರುಷರ ಸ್ವ-ಸಹಾಯ ಗುಂಪುಗಳಿಗಿಂತಲೂ ಉತ್ತಮ ರೀತಿಯಲ್ಲಿ ನಡೆಯುತ್ತಿದೆ. ಮಿಶ್ರ ಸ್ವಸಹಾಯ ಗುಂಪುಗಳ ಸಂಖ್ಯೆ ಬಹಳ ಕಡಿಮೆ ಇದೆ.

ಚೌಕಟ್ಟು 10.3

### ಸ್ವ-ಸಹಾಯ ಗುಂಪುಗಳು ಮತ್ತು ಮಹಿಳೆ

ಗುಲ್ಬರ್ಗಾ ತಾಲ್ಲೂಕಿನ ಸ್ವಉದ್ಯೋಗ ಕಾರ್ಯಕ್ರಮದ ಎಸ್‌ಜಿಎಸ್‌ವೈ ನೆರವು ನೀಡಿದ ಸ್ವಸಹಾಯ ಗುಂಪುಗಳ ಅಧ್ಯಯನ ಕೈಗೊಳ್ಳಲಾಯಿತು. ಇದರಲ್ಲಿ ಸಂಘದೊಳಗೆ ಸಹಾಯ ಮಾಡುವ ಪ್ರವೃತ್ತಿ ಪುರುಷರಿಗಿಂತ ಮಹಿಳೆಯರಲ್ಲಿ ಹೆಚ್ಚು ಇದೆ ಎಂಬುದನ್ನು ಗಮನಿಸಲಾಯಿತು. ಮಹಿಳೆಯರ ಗುಂಪು ಆರ್ಥಿಕ ಚಟುವಟಿಕೆಗಳ ಪ್ರಾರಂಭ ಹಾಗೂ ನಿರ್ವಹಣೆಯಲ್ಲಿ ಉತ್ತಮ ಸಾಧನೆ ತೋರಿವೆ. ಸಾಲದ ಮರುಪಾವತಿಯೂ ಮಹಿಳಾ ಸ್ವಸಹಾಯ ಗುಂಪುಗಳಲ್ಲಿ ನಿಯಮಿತವಾಗಿದೆ. ಒಗ್ಗಟ್ಟು ಮತ್ತು ಅಭಿಪ್ರಾಯದ ಸಾಮರಸ್ಯವನ್ನು ಪುರುಷರ ಗುಂಪಿಗಿಂತ ಮಹಿಳೆಯರ ಗುಂಪಿನಲ್ಲಿ ಹೆಚ್ಚು ಕಂಡುಬರುತ್ತದೆ.

ಸ್ವಸಹಾಯ ಗುಂಪುಗಳ ಮೂಲ ಉದ್ದೇಶ ಬಡವರಲ್ಲಿ ಕುಶಲತೆಯನ್ನು ನಿರ್ಮಿಸುವುದು, ಆತ್ಮವಿಶ್ವಾಸವನ್ನು ಬೆಳೆಸುವುದು ಮತ್ತು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಭಾಗವಹಿಸುವುದನ್ನು ಸಾಧ್ಯವಾಗಿಸುವುದು. ಆದ್ದರಿಂದ ಸ್ವಸಹಾಯ ಸಂಘಗಳನ್ನು ಸಣ್ಣ ಸಾಲ ಮತ್ತು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿದ ಕೇವಲ ಉಳಿತಾಯ ಮಾಡುವ ಗುಂಪು ಎಂದು ಪರಿಗಣಿಸಬಾರದು. ಸ್ವಸಹಾಯ ಗುಂಪುಗಳ ಪಾತ್ರ ಇದನ್ನೂ ಮೀರಿದ್ದಾಗಿದೆ. ಗ್ರಾಮದ ಸಾಮಾಜಿಕ ಪರಿವರ್ತನೆ ಮತ್ತು ಮಾನವ ಅಭಿವೃದ್ಧಿಗೆ ಪೂರಕವಾಗುವಂಥ ಅನೇಕ ಚಟುವಟಿಕೆಗಳಲ್ಲಿ ಹಾಗೂ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕೆಲವು ಉತ್ತಮ/ಯಶಸ್ವಿ ಸ್ವಸಹಾಯ ಗುಂಪುಗಳು ತೊಡಗಿಕೊಂಡಿವೆ.

ಚೌಕಟ್ಟು 10.4

**ಸ್ವಸಹಾಯ ಗುಂಪಿನ ಮೂಲಕ ಮಹಿಳಾ ಸಬಲೀಕರಣ**

ಸುರಪುರ ತಾಲ್ಲೂಕಿನ ಕೆಂಬಾವಿಯ ಗಾಯತ್ರಿ ಸ್ವಸಹಾಯ ಗುಂಪು ದಿವಂಗತ ಯಶೋಧರಾ ದಾಸಪ್ಪ ಪ್ರಶಸ್ತಿ ಹಾಗೂ 2007ನೇ ಸಾಲಿನಲ್ಲಿ ಗುಲ್ಬರ್ಗಾ ಜಿಲ್ಲೆಯ ಅತ್ಯುತ್ತಮ ಸ್ವಸಹಾಯ ಗುಂಪು ಎಂಬ ಪ್ರಶಸ್ತಿಯನ್ನು ಪಡೆಯಿತು. ಈ ಗುಂಪಿನಲ್ಲಿ 16 ಸದಸ್ಯರಿದ್ದು ಎಲ್ಲರೂ ಅಕ್ಷರಸ್ಥರಾಗಿದ್ದಾರೆ. ಈ ಗುಂಪು ಬ್ಯಾಂಕಿನಿಂದ ರೂ.1,50,000 ಮತ್ತು ರೂ. 3,00,000 ಮೊತ್ತದ ಸಾಲವನ್ನು ಎರಡು ಬಾರಿ ಪಡೆದಿದೆ. ಇದರ ಸದಸ್ಯರು ಕಸೂತಿ, ಹೈನುಗಾರಿಕೆ, ಕಿರಾಣಿ ಅಂಗಡಿಯಂಥ ಚಟುವಟಿಕೆಯಲ್ಲಿ ತೊಡಗಿ ಸದಸ್ಯರೆಲ್ಲರೂ ಒಳ್ಳೆಯ ಆದಾಯ ಗಳಿಸುತ್ತಿದ್ದಾರೆ.

ತಮ್ಮ ನಿಯಮಿತ ಸಭೆಗಳಲ್ಲಿ ಈ ಗುಂಪು ಬಾಲವಿವಾಹ, ಹೆಣ್ಣುಮಕ್ಕಳ ಶಿಕ್ಷಣ, ಮಹಿಳೆಯರ ತೊಂದರೆಗಳು, ಪುರುಷರ ಮದ್ಯಪಾನ, ಬಡತನ, ಬಾಲ ಕಾರ್ಮಿಕ ಪದ್ಧತಿ ಮುಂತಾದ ಸಾಮಾಜಿಕ ಪಿಡುಗುಗಳನ್ನು ಕುರಿತು ಚರ್ಚಿಸುತ್ತಾರೆ. ಈ ಗುಂಪಿಗೆ ಸೇರುವ ಮುನ್ನ ತಮ್ಮ ಸುತ್ತಲಿನ ಜಗತ್ತಿನ ಬಗ್ಗೆ ಜ್ಞಾನವಿಲ್ಲದ ಮಹಿಳೆಯರು, ಗುಂಪಿಗೆ ಸೇರಿದ ನಂತರ ಅನೇಕ ವಿಷಯಗಳನ್ನು ತಿಳಿಯುವಂತಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಆತ್ಮವಿಶ್ವಾಸವನ್ನು ಪಡೆದಿದ್ದಾರೆಂದು ಈ ಮಹಿಳೆಯರು ತಿಳಿಸಿದ್ದಾರೆ. ಬೀದಿನಾಟಕಗಳು ಮತ್ತು ಧಾರ್ಮಿಕ ಕಾರ್ಯಕ್ರಮಗಳ ಮುಖಾಂತರ ಗ್ರಾಮದ ಮಹಿಳೆಯರಲ್ಲಿ ಜಾಗೃತಿ ಮೂಡಿಸುವುದು ಮತ್ತು ಜ್ಞಾನ/ಮಾಹಿತಿಯನ್ನು ಪಸರಿಸುವಂಥ ಕಾರ್ಯಕ್ರಮಗಳನ್ನು ಈ ಗುಂಪು ಏರ್ಪಡಿಸುತ್ತಿದೆ. ಶಾಲೆ ಬಿಟ್ಟ ಮಕ್ಕಳು ಮರು ಶಾಲೆ ಸೇರಲು ಈ ಗುಂಪಿನ ಸದಸ್ಯರು ಸಹಾಯ ಮಾಡಿದ್ದಾರೆ. ವಿಕಲಚೇತನ ಮಕ್ಕಳಿಗೆ ಅವರ ಮನೆಯಲ್ಲಿಯೇ ಕಲಿಸುವ ವ್ಯವಸ್ಥೆ ಕಲ್ಪಿಸಿದ್ದಾರೆ. ಸಣ್ಣ ವಯಸ್ಸಿನ ಹೆಣ್ಣು ಮಕ್ಕಳ ಮದುವೆ ಹಾಗೂ ವರದಕ್ಷಿಣೆ ಪದ್ಧತಿಯನ್ನು ಈ ಗುಂಪು ವಿರೋಧಿಸುತ್ತದೆ. ಗ್ರಾಮದಲ್ಲಿ ಮದ್ಯಪಾನವನ್ನು ನಿಯಂತ್ರಿಸಲು ಈ ಗುಂಪು ಪ್ರಯತ್ನಿಸುತ್ತದೆ. ಮೈಸೂರಿನ ಗ್ರಾಮ ಸ್ವರಾಜಿನಲ್ಲಿ ಇವರು ತರಬೇತಿ ಪಡೆದಿದ್ದು ಮಹಿಳಾ ಗ್ರಾಮಪಂಚಾಯ್ತಿ (ಜಿಪಿ) ಸದಸ್ಯರಿಗೆ ಯೋಜನೆಗಳ/ಕಾರ್ಯಕ್ರಮಗಳನ್ನು ಸೂತ್ರಬದ್ಧವಾಗಿಸುವುದು ಮತ್ತು ಗ್ರಾಮದ ಮಹಿಳೆಯರ ಅಭಿವೃದ್ಧಿಗೆ ಪೂರಕವಾಗುವ ನೀತಿಗಳನ್ನು ರೂಪಿಸುವಲ್ಲಿ ಸಹಾಯ ಮಾಡುತ್ತಿದ್ದಾರೆ.

ಸಂಪನ್ಮೂಲಗಳ ಮೇಲೆ ಮಹಿಳೆಯರಿಗೆ ನಿಯಂತ್ರಣವಿಲ್ಲದಿರುವುದರಿಂದ ಉತ್ಪಾದನಾ ಸಂಪನ್ಮೂಲಗಳು ಇವರಿಗೆ ದೊರೆಯುವುದು ಸುಲಭವಲ್ಲ. ಮಾರಾಟಕ್ಕೆ ಇವರಿಗೆ ಅವಕಾಶವಿಲ್ಲದಿರುವುದರಿಂದ ಅವರ ಆರ್ಥಿಕ ಚಟುವಟಿಕೆಗಳಿಗೆ ಅಡಚಣೆಯುಂಟಾಗಿದೆ. ಹೈನುಗಾರಿಕೆ, ಪಶುಸಂಗೋಪನೆ, ರೇಷ್ಮೆ ಕೃಷಿಯ ಚಟುವಟಿಕೆಗಳನ್ನು ಮಹಿಳೆಯರು ಮಾಡುತ್ತಿದ್ದರೂ ಅವನ್ನು ಮಾರಾಟ ಮಾಡಲು ಇನ್ನೂ ಪುರುಷರನ್ನೇ ಅವಲಂಬಿಸುತ್ತಿದ್ದಾರೆ. ಹೀಗಾಗಿ ಹಣವನ್ನು ಪುರುಷರೇ ಪಡೆಯುವುದರಿಂದ ಮಹಿಳೆಯರು ಹಾಕುವ ಶ್ರಮಕ್ಕೆ ತಕ್ಕ ಪ್ರತಿಫಲ ಪಡೆಯುತ್ತಿಲ್ಲ. ಮಹಿಳಾ ಸ್ವಸಹಾಯ ಸಂಘಗಳು ಈ ಪರಿಸ್ಥಿತಿಯನ್ನು ಬದಲಾಯಿಸಿ ಮಹಿಳೆಯರನ್ನು ಮಾರಾಟದ/ಮಾರುಕಟ್ಟೆಯ ಪ್ರಕ್ರಿಯೆಯಲ್ಲಿ ಸೇರಿಸಲು ಪ್ರಯತ್ನಿಸುತ್ತಿವೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಸ್ವಸಹಾಯ ಸಂಘಗಳ ಬೆಳವಣಿಗೆ ಶರವೇಗದಲ್ಲಾಗುತ್ತಿದೆ. 2005–06ರಲ್ಲಿ ಸ್ತ್ರೀಶಕ್ತಿ ಕಾರ್ಯಕ್ರಮವೊಂದರ ಅಡಿಯಲ್ಲಿಯೇ ಸುಮಾರು 6500 ಗುಂಪುಗಳನ್ನು ರಚಿಸಲಾಯಿತು.

ಜಿಲ್ಲೆಯಲ್ಲಿ ಶೇಕಡಾ 41.7ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿದ್ದಾರೆ. ಬಡ ಹಾಗೂ ಸಮಾಜದ ಅಂಚಿನಲ್ಲಿರುವ

ಚೌಕಟ್ಟು 10.5

**ಮಾರುಕಟ್ಟೆ ಅಡೆತಡೆಗಳ ನಿವಾರಣೆ**

ಅಫ್ಜಲಪುರದ ಸ್ವಸಹಾಯ ಸಂಘಕ್ಕೆ ಮಾರಾಟವು ಒಂದು ತೊಂದರೆಯೇ ಅಲ್ಲ. ಈ ಸಂಘವು ಮೂರು ಬಾರಿ ಬ್ಯಾಂಕಿನೊಂದಿಗೆ ಸಂಯೋಜನೆಗೊಂಡು ಕೃಷಿ ಉತ್ಪನ್ನ, ತರಕಾರಿ, ಹೈನು ಉತ್ಪನ್ನ ಮತ್ತು ಕರಕುಶಲ ಕೆಲಸಗಳ ಮಾರಾಟವನ್ನು ಕೈಗೊಂಡಿದೆ. ಈ ಗುಂಪಿನ ಪ್ರಸ್ತುತ ಉಳಿತಾಯ 64,000ರಷ್ಟಿದೆ. ಜಿಲ್ಲೆಯಲ್ಲಿ 2006ನೇ ಸಾಲಿನ ಉತ್ತಮ ಸ್ವಸಹಾಯ ಸಂಘವೆಂದು ಮಾನ್ಯತೆ ಪಡೆದಿದೆ. ಈ ಗುಂಪಿನಲ್ಲಿ 20 ಜನ ಸದಸ್ಯರಿದ್ದರೂ ಕೇವಲ 30% ಅಕ್ಷರಸ್ಥರಾಗಿದ್ದಾರೆ. ಆದರೂ ಈ ಗುಂಪು ಮಾರಾಟದ ವಹಿವಾಟನ್ನು ನಿಭಾಯಿಸುತ್ತದೆ. ಹಳ್ಳಿಯ ಜಲ ಮತ್ತು ನೈರ್ಮಲ್ಯದ ತೊಂದರೆಯ ನಿವಾರಣೆಗೆ ಸಹಾಯಹಸ್ತ ನೀಡಿದೆ. ಗ್ರಾಮೀಣ ಜನರಲ್ಲಿ ಶಿಕ್ಷಣದ ಬಗ್ಗೆ ಜಾಗೃತಿ ಮೂಡಿಸಿದೆಯಲ್ಲದೆ ಶಾಲೆ ಬಿಟ್ಟ ಮಕ್ಕಳು ಶಾಲೆಗೆ ಮರಳುವಂತೆ ಪ್ರೇರೇಪಿಸಿದೆ. ಈ ಗುಂಪು ಸಕ್ರಿಯವಾಗಿದ್ದು ಸಾಹಸಶೀಲವಾಗಿದೆ. ಗ್ರಾಮದಲ್ಲಿ ಅಂಗನವಾಡಿಯವರಿಗೆ ಬೆಂಬಲ ನೀಡುವುದಲ್ಲದೆ ಸುನಾಮಿ ಸಂತ್ರಸ್ಥರ ನಿಧಿಗೂ ನೆರವಾಗಿದೆ. ಸೀಮೆಎಣ್ಣೆಯ ವಿತರಕರಾಗುವ ಮೂಲಕ ಅಲ್ಲಿ ನಡೆಯುತ್ತಿದ್ದ ದುರ್ವ್ಯಾಪಾರವನ್ನು ತಪ್ಪಿಸುವ ಇಚ್ಛೆ ಈ ಗುಂಪಿಗಿದೆ.

ಕೋಷ್ಟಕ 10.2

| ಸ್ತ್ರೀಶಕ್ತಿ ಕಾರ್ಯಕ್ರಮದಡಿಯಲ್ಲಿ ಮಹಿಳಾ ಸ್ವಸಹಾಯ ಗುಂಪುಗಳು | | | | | |
|---|---|---|---|---|---|
| ಕ್ರ.ಸಂ. | ತಾಲ್ಲೂಕು | ಸ್ವ.ಸ.ಗು.ಗಳ ಸಂಖ್ಯೆ | ಒಟ್ಟು ಮಹಿಳಾ ಸದಸ್ಯರ ಸಂಖ್ಯೆ | ಒಟ್ಟು ಪ.ಜಾ. ಮಹಿಳಾ ಸದಸ್ಯರ ಸಂಖ್ಯೆ | ಒಟ್ಟು ಪ.ಪಂ. ಮಹಿಳಾ ಸದಸ್ಯರ ಸಂಖ್ಯೆ |
| 1 | ಅಫಜಲಪುರ | 450 | 7309 | 1495 (20.5) | 0 |
| 2 | ಆಳಂದ್ | 850 | 15019 | 4370 (29.1) | 343 (2.3) |
| 3 | ಚಿಂಚೋಳಿ | 580 | 9044 | 3678 (40.6) | 105 (1.2) |
| 4 | ಚಿತ್ತಾಪುರ | 770 | 14405 | 6449 (144.8) | 158 (1.1) |
| 5 | ಗುಲಬರ್ಗಾ | 700 | 10915 | 2339 (21.4) | 0 |
| 6 | ಜೇವರ್ಗಿ | 820 | 10968 | 2936 (26.8) | 456 (4.2) |
| 7 | ಸೇಡಮ್ | 430 | 6728 | 1836 (27.3) | 96 (1.4) |
| 8 | ಶಹಾಪುರ | 700 | 11475 | 4302 (37.5) | 1088 (9.5) |
| 9 | ಶೋರಾಪುರ | 700 | 11788 | 2701 (22.9) | 3197 (27.1) |
| 10 | ಯಾದಗೀರ್ | 700 | 12178 | 4051 (33.3) | 1653 (13.6) |
| | **ಜಿಲ್ಲೆ** | **6500** | **109769** | **34155 (31.1)** | **11596 (10.6)** |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿಅಂಶಗಳ ನೋಟ 2005–06

ಮಹಿಳೆಯರನ್ನು ಮುಖ್ಯವಾಹಿನಿಗೆ ತರಬೇಕೆಂದರೆ ಶೇಕಡಾ 50 ರಿಂದ 60 ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರನ್ನು ಒಳಗೊಳ್ಳುವುದು ಅವಶ್ಯಕವಾಗಿದೆ. ಚಿತ್ತಾಪುರ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಶೇಕಡಾ 40ರಷ್ಟು ಪರಿಶಿಷ್ಟ ಜಾತಿಯುವರನ್ನು ಒಳಗೊಳ್ಳಲಾಗಿದೆ.

ಕೋಷ್ಟಕ 10.3

## ಸ್ವಸಹಾಯ ಗುಂಪುಗಳ ಹಣಕಾಸು ಪ್ರಗತಿ

| ತಾಲ್ಲೂಕು | ಉಳಿತಾಯ ಆರಂಭಿಸಿರುವ | ಸಂಗ್ರಹವಾದ ಉಳಿತಾಯ ಗುಂಪುಗಳು | ಬ್ಯಾಂಕಿನಿಂದ ಸಾಲ ಪಡೆದ ಗುಂಪುಗಳು | ಬ್ಯಾಂಕಿನಿಂದ ಪಡೆದ ಒಟ್ಟು ಸಾಲದ ಮೊತ್ತ | ಸರ್ಕಾರವು ಬಿಡುಗಡೆಗೊಳಿಸಿದ ಸುತ್ತಿನಿಧಿ (ಲಕ್ಷ ರೂ.ಗಳಲ್ಲಿ) |
|---|---|---|---|---|---|
| ಅಫಜಲಪುರ | 450 | 129,844 | 301 | 50,699 | 22.60 |
| ಆಳಂದ್ | 850 | 202,353 | 490 | 99,590 | 42.00 |
| ಚಿಂಚೋಳಿ | 580 | 131,086 | 388 | 30,230 | 28.50 |
| ಚಿತ್ತಾಪುರ | 770 | 158,091 | 327 | 56,672 | 38.80 |
| ಗುಲಬರ್ಗಾ | 700 | 180,580 | 252 | 99,059 | 34.55 |
| ಜೇವರ್ಗಿ | 620 | 157,983 | 392 | 83,770 | 30.50 |
| ಸೇಡಮ್ | 430 | 134,754 | 252 | 55,900 | 21.00 |
| ಶಹಾಪುರ | 700 | 166,330 | 428 | 102,149 | 34.50 |
| ಶೋರಾಪುರ | 700 | 220,230 | 270 | 51,506 | 34.50 |
| ಯಾದಗೀರ್ | 700 | 230,184 | 359 | 87,965 | 34.80 |
| **ಜಿಲ್ಲೆ** | **6500** | **1,711,435** | **3459** | **717,540** | **321.75** |

ಮೂಲ: ಗುಲಬರ್ಗಾ ಜಿಲ್ಲಾ ಅಂಕಿಅಂಶಗಳ ನೋಟ 2005–06

## ಸ್ವಸಹಾಯ ಸಂಘಗಳ ಆರ್ಥಿಕ ಪ್ರಗತಿ

ಎಲ್ಲ ಗುಂಪುಗಳು ಉಳಿತಾಯದಲ್ಲಿ ತೊಡಗಿವೆ. ಈ ಗುಂಪುಗಳಿಂದ ನಿಖರವಾಗಿ 1711.435 ಲಕ್ಷ ರೂಪಾಯಿಗಳಷ್ಟು ಹಣ ಕೂಡಿಸಲಾಗಿದೆ. ಒಂದು ಗುಂಪಿನ ಸರಾಸರಿ ಉಳಿತಾಯ ರೂ.26,000ರಷ್ಟು. ಶೇಕಡಾ 53ರಷ್ಟು ಗುಂಪುಗಳು ಬ್ಯಾಂಕಿನೊಂದಿಗೆ ಸಂಯೋಜನೆಗೊಂಡು ಆರ್ಥಿಕ ಚಟುವಟಿಕೆಗಳಲ್ಲಿ ನಿರತರಾಗಲು ಸಾಲ ಪಡೆದಿವೆ.

ಕೆಲವು ಸ್ವಸಹಾಯ ಸಂಘಗಳು ಗುಂಪನ್ನು ಸರಿಯಾಗಿ ನಿರ್ವಹಿಸದಿರುವ ಹಾಗೂ ಬ್ಯಾಂಕಿನೊಂದಿಗೆ ಸಂಪರ್ಕವಿಲ್ಲದ ಕಾರಣ ಉಳಿತಾಯ ಮಾಡುವ ಪ್ರಾಥಮಿಕ ಗುಂಪಿನ ಹಂತದಲ್ಲಿಯೇ ಇದೆ. ಇನ್ನೂ ಕೆಲವು ಸಂದರ್ಭಗಳಲ್ಲಿ ಮಾರ್ಗದರ್ಶಕ ಸಂಸ್ಥೆಯು ಈ ಗುಂಪುಗಳನ್ನು ಮಧ್ಯದಲ್ಲಿಯೇ ತೊರೆದಿರುವುದರಿಂದ ಸೂಕ್ತ ಜ್ಞಾನ ಮತ್ತು ಮಾಹಿತಿಯ ಕೊರತೆಯಿಂದಾಗಿ ತಮ್ಮ ಚಟುವಟಿಕೆಯನ್ನು ಮುಂದುವರಿಸಲು ಸಾಧ್ಯವಾಗಿಲ್ಲ.

## ಗಮನ ನೀಡಬೇಕಾದ ಕಾಳಜಿಯ ವಿಷಯಗಳು

ಬಡಜನರ ಅದರಲ್ಲೂ ಮಹಿಳೆಯರ ಸ್ವಸಹಾಯ ಗುಂಪುಗಳು ಬಡವರ ಮತ್ತು ಮಹಿಳೆಯರ ಸಬಲೀಕರಣಕ್ಕೆ ಬಹಳ ಪರಿಣಾಮಕಾರಿಯಾಗಿವೆ. ಕೆಲವು ಗುಂಪುಗಳು ತಮ್ಮದೇ ಯಶೋಗಾಥೆಯನ್ನು ಹೊಂದಿವೆ. ಹೆಚ್ಚು ಶಿಕ್ಷಿತ ಮಹಿಳೆಯರಿರುವ ಸ್ವಸಹಾಯ ಸಂಘಗಳು ಉತ್ತಮ ಪ್ರಗತಿ ತೋರಿದ್ದರೂ, ಅಶಿಕ್ಷಿತ ಗುಂಪುಗಳು ಸಹ ಪ್ರಗತಿ ಹೊಂದಿರುವ ಅನೇಕ ಉದಾಹರಣೆಗಳಿವೆ. ಬದ್ಧತೆ ಮತ್ತು ಮಾರ್ಗದರ್ಶಕ ಸಂಸ್ಥೆಗಳ – ಅದು ಎನ್‌ಜಿಓ ಅಥವಾ ಸರ್ಕಾರಿ ಸಂಸ್ಥೆಯಾಗಿರಬಹುದು – ಇವುಗಳ ಉತ್ತಮ ಬೆಂಬಲ ಇವು ಇಲ್ಲಿ ಮುಖ್ಯವಾಗುತ್ತವೆ.

ಕ್ರಮೇಣವಾಗಿ ಜಿಲ್ಲೆಯಲ್ಲಿ ಸ್ವಸಹಾಯ ಗುಂಪುಗಳ ಸಂಖ್ಯೆ ವೇಗವಾಗಿ ಬೆಳೆಯುತ್ತಿದೆ. ಅಭಿವೃದ್ಧಿ ಕಾರ್ಯಕ್ರಮಗಳು ಗುಂಪಾಧಾರಿತವಾಗಿರುವುದು ಇದಕ್ಕೆ ಕಾರಣವಾಗಿದೆ. ಅಂಗನವಾಡಿ ಕಾರ್ಯಕರ್ತೆ ಅಥವಾ ಒಂದು ಎನ್‌ಜಿಓಗಳಿಗೆ ಎಲ್ಲ ಸಂಘಗಳಿಗೂ ಕನಿಷ್ಠ ಪಕ್ಷ ಕೆಲ ಸಮಯ ಸೂಕ್ತಮಾರ್ಗದರ್ಶನ ನೀಡಲೂ ಸಾಧ್ಯವಾಗಿಲ್ಲ. ಸೂಕ್ತ ತರಬೇತಿಯ ಹಾಗೂ ಮಾರ್ಗದರ್ಶನದ ಕೊರತೆಯಿಂದ ಅನೇಕ ಸ್ವಸಹಾಯ ಗುಂಪುಗಳು ಉಳಿತಾಯ ಗುಂಪುಗಳಾಗಿಯೇ ಉಳಿದುಕೊಂಡು, ಬ್ಯಾಂಕಿನೊಂದಿಗೆ ಸಂಪರ್ಕ ಹೊಂದಲೂ ಸಾಧ್ಯವಾಗಿಲ್ಲ. ಕೆಲವು ಸ್ವಸಹಾಯ ಸಂಘಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿದ್ದರೂ, ಮಾರುಕಟ್ಟೆಗೆ ಪ್ರವೇಶಿಸಲಾಗದೆ ಗಣನೀಯ ಪ್ರಗತಿ ಸಾಧಿಸಲಾಗಿಲ್ಲ. ಹೈನುಗಾರಿಕೆ, ಪಶು ಸಂಗೋಪನೆ, ಅಗರ್‌ಬತ್ತಿ ತಯಾರಿಕೆ, ಬುಟ್ಟಿ ಹೆಣೆಯುವಿಕೆ, ಉಪ್ಪಿನಕಾಯಿ, ಚಟ್ನಿ, ಮೇಣದ ಬತ್ತಿ ತಯಾರಿಕೆ, ಕಸೂತಿ ಕೆಲಸದಂಥ

ಚೌಕಟ್ಟು 10.6

| ಸಾಮಾಜಿಕ ಬಂಡವಾಳ |
|---|
| ಮಾನವ ಅಭಿವೃದ್ಧಿಯ ಮೂಲ ಅಗತ್ಯಗಳಲ್ಲಿ ಸಾಮಾಜಿಕ ಬಂಡವಾಳ ಅಭಿವೃದ್ಧಿಗೆ ಮಹಿಳಾ ಸ್ವಸಹಾಯ ಸಂಘಗಳ ಮತ್ತು ಇತರ ಸಾಮೂಹಿಕ ಕೂಟಗಳು ಸಹಾಯಕವಾಗಲಿವೆ ಎಂದು ನಿರೀಕ್ಷಿಸಲಾಗಿದೆ. ಗುಲ್ಬರ್ಗಾ ಜಿಲ್ಲೆಯ ಐದು ಗ್ರಾಮಗಳ ಅಧ್ಯಯನದಿಂದ ಸಾಮಾಜಿಕ ಮತ್ತು ಮಾನವ ಅಭಿವೃದ್ಧಿಯು ಸಾಮಾಜಿಕ ಬಂಡವಾಳದ ಮೂಲಕ ಉಂಟಾಗುವ ಸಾಮೂಹಿಕ/ ಸಾಮುದಾಯಿಕ ದುಡಿಮೆಯಿಂದ ಪ್ರಭಾವಿಸಲ್ಪಟ್ಟಿದೆ ಎಂದು ತೋರಿಸಿದೆ. ಈ ಹಿಂದೆ ಇಂತಹ ಸಂಘಗಳ ಅನುಪಸ್ಥಿತಿಯಿಂದ ಈ ಹಳ್ಳಿಗಳಲ್ಲಿ ರಾಚನಿಕ ಸಾಮಾಜಿಕ ಬಂಡವಾಳದ ಕೊರತೆಯಿಂದ ಅಭಿವೃದ್ಧಿ ಮಟ್ಟ ಅತಿ ಕಡಿಮೆಯಾಗಿತ್ತು. ಮೈರಾಡದಂಥ ಎನ್‌ಜಿಓಗಳ ಮಧ್ಯ ಪ್ರವೇಶದಿಂದ ಸಂಸ್ಥೆಗಳು ರಾಚನಿಕ ಸಾಮಾಜಿಕ ಬಂಡವಾಳ ರಚಿಸುವುದಕ್ಕೆ ಚಾಲನೆ ನೀಡಿತು. ಕಾಲಕಳೆದಂತೆ ಇದು ಹೆಚ್ಚಿನ ಸಾಮುದಾಯಿಕ ದುಡಿಮೆ ಮತ್ತು ಪರಸ್ಪರ ಸಹಕಾರಕ್ಕೆ ಜನರು ಸಕ್ರಿಯವಾಗಿ ಭಾಗವಹಿಸುವಂತೆ ಮಾಡಿತು. |

ಸಾಂಪ್ರದಾಯಿಕ ಕ್ಷೇತ್ರದಲ್ಲಿ ಉತ್ಪಾದನಾ ಚಟುವಟಿಕೆಗಳಲ್ಲಿ ಕೇಂದ್ರೀಕೃತವಾಗಿರುವುದರಿಂದ ಪುರುಷ ಪ್ರಧಾನವಾದ ಮಾರುಕಟ್ಟೆಯಲ್ಲಿ ಇವನ್ನು ಮಾರಾಟ ಮಾಡಲು ತೊಂದರೆಯಾಗಿದೆ.

## ಸಲಹೆ

ಸ್ವಸಹಾಯ ಗುಂಪುಗಳು ಸಾಮಾಜಿಕ ಸಂಸ್ಥೆಗಳ ಹೊಸ ರೂಪದಲ್ಲಿ ಉದ್ಭವವಾಗುತ್ತಿರುವುದರಿಂದ ಅವನ್ನು ಬಲಪಡಿಸಲು ಸೂಕ್ತ ಬೆಂಬಲದ ಅಗತ್ಯವಿದೆ. ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಸ್ವಸಹಾಯ ಸಂಘವನ್ನು ಪ್ರೋತ್ಸಾಹಿಸುವ / ಮಾರ್ಗದರ್ಶನ ಮಾಡುವ ಏಜೆನ್ಸಿಯು / ಸಂಸ್ಥೆಯು ಕನಿಷ್ಠ ಪಕ್ಷ ಎರಡು ವರ್ಷಗಳು ಇವುಗಳೊಂದಿಗೆ ಸಂಪರ್ಕವಿರಿಸಿಕೊಂಡು ಮಾರ್ಗದರ್ಶನ ನೀಡಬೇಕು. ಇದಕ್ಕೆ ಸಂಬಂಧಪಟ್ಟ ಎನ್‌ಜಿಓಗೆ ಸೂಕ್ತ ಸಂಭಾವನೆ ನೀಡಿ ಇಂಥ ಮೇಲ್ವಿಚಾರಣೆಯನ್ನು ಕಡ್ಡಾಯಗೊಳಿಸಬೇಕು.

ಸರ್ಕಾರಿ ಅಥವಾ ಸಹಕಾರಿ ಮಾರಾಟ ವಿಭಾಗಗಳೊಂದಿಗೆ ಸಂಪರ್ಕ ಮತ್ತು ಸೂಕ್ತ ಮಾರಾಟ ಸೌಕರ್ಯಗಳನ್ನು ಒದಗಿಸುವ ಮೂಲಕ ಸ್ವಸಹಾಯ ಗುಂಪುಗಳ ಮಾರಾಟದ ಕೊರತೆಗಳನ್ನು ನೀಗಿಸಬೇಕು.

ಹೊಸ ಕುಶಲಕರ್ಮ, ಹೊಸ ವಿನ್ಯಾಸ ಮತ್ತು ತಂತ್ರಗಳಲ್ಲಿ ಉತ್ತಮ ತರಬೇತಿಯನ್ನು ಸ್ವಸಹಾಯ ಸಂಘಗಳಿಗೆ ನೀಡಿ ಇನ್ನೂ ಹೆಚ್ಚಿನ ಪ್ರತಿಫಲ ನೀಡುವ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಬೇಕು.

ಸ್ವಸಹಾಯ ಗುಂಪುಗಳ ಅಡಿಪಾಯವನ್ನು ಬಲಗೊಳಿಸಲು ಅವನ್ನು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಸೇರಿಸಿಕೊಳ್ಳಬೇಕು. ಗ್ರಾಮ ಪಂಚಾಯ್ತಿಯ ಮಟ್ಟದಲ್ಲಿ ಯೋಜನಾ ಪ್ರಕ್ರಿಯೆಯು ಪ್ರಾರಂಭವಾಗುತ್ತಿರುವುದರಿಂದ ಅಂತಹ ಯೋಜನೆಯ ತರಬೇತಿ ಕಾರ್ಯಕ್ರಮದಲ್ಲಿ ಇವನ್ನೂ ಸೇರಿಸಿಕೊಳ್ಳಬೇಕು. ಇದರಿಂದ ಜನರ ಧಾರಣಾ ಶಕ್ತಿ ಬೆಳೆದು ಯೋಜನಾ ತಯಾರಿಕೆಯಲ್ಲಿ ಗ್ರಾಮ ಪಂಚಾಯ್ತಿಗಳಿಗೆ ಅವು ಸಹಾಯವನ್ನು ಒದಗಿಸಬಹುದು.

# ಮುಂದಿನ ಗುರಿ ಮತ್ತು ದಾರಿ




KALBURGI (GULBARGA) District Map
Bidar
MAHARASHTRA
ANDHRA PRADESH
Bijapur
Raichur
Khajuri
Salgar
Kinhi
Sonath
Aland
Bodhan
Kamlapur
Narona
Mahagaon
Awarja
Mullamdri
Sargapur
Chincholi
Benithora
Ratkal
Sulahpet
Kulali
Nimbarga
Kalgi
KALBURGI
Marhal
Nirgunda
Mannur
Bari
Gobur Buzurgr
Atanur
Tingli
Kogna
Afzalpur
Sedam
Gangapur
Farhatabad
Chitapur
Adki
Firozabad
Mudhol
Nelogi
Wadi
Kona
www.mapsofindia.com
Jevargi
Andola
Nalwar
Handarki
Aralagundi
Gajarkot
Ijeri
Yaragol
Yedrami
Gurmatkal
Sirwal
Bhima
Yadgir
Doranahalli
Haligeri
Gugi
Malla Buzurg
Shahpur
Khanapur
Nandepalli
Kembhavi
Ajalapur
Sagar
Hattigudur
Saidapur
Agni
Wadagera
Shorapur
Tumkur
Devapur
Krishna
Kakkera
Tintani
Kodekal
Narayanpur
Map not to Scale
Copyright © 2007 Compare Infobase Limited
LEGEND
State Boundary
District Boundary
Major Road
Railway
District Headquarter
Major Town
Other Town
River

ಅಧ್ಯಾಯ 11

# ಮುಂದಿನ ಗುರಿ ಮತ್ತು ದಾರಿ

ಗುಲಬರ್ಗಾ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯ ಕೆಳ ಮಟ್ಟದ ಸ್ಥಿತಿಯನ್ನು ಉತ್ತಮಪಡಿಸಲು ಅಗತ್ಯವಾದ ಒಂದು ಚೌಕಟ್ಟನ್ನು ಹಾಗೂ ಒಂದು ಕ್ರಿಯಾ ಯೋಜನೆಯನ್ನು ನೀಡಲು ಪ್ರಸ್ತುತ ಅಧ್ಯಾಯದಲ್ಲಿ ಪ್ರಯತ್ನಿಸಲಾಗಿದೆ. ಜಿಲ್ಲಾ ಮಟ್ಟದಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಅಗತ್ಯವಾದ ಸಂಗತಿಗಳನ್ನು ಮತ್ತು ಒಂದು ನೀಲಿನಕ್ಷೆಯನ್ನು ಇಲ್ಲಿ ನೀಡಲಾಗಿದೆ. ಈ ಅಧ್ಯಯನ ವರದಿಯ ಹಿಂದಿನ ಹತ್ತು ಅಧ್ಯಾಯಗಳಲ್ಲಿ ನಡೆಸಿರುವ ಅನೇಕ ಸಂಗತಿಗಳನ್ನು ಕುರಿತಂತೆ ವಿಸ್ತೃತವಾದ ವಿಶ್ಲೇಷಣೆಯನ್ನು ಆಧರಿಸಿ ಪ್ರಸ್ತುತ ಚೌಕಟ್ಟನ್ನು ರೂಪಿಸಲಾಗಿದೆ.

ಪ್ರಸ್ತುತ ವರದಿಯು ಒಂದು ಸ್ಥಿತಿಗತಿಯ ಅಧ್ಯಯನ ವರದಿಯಾಗಿದೆ. ಮಾನವ ಅಭಿವೃದ್ಧಿಯ ವಿಸ್ತೃತವಾದ ಸೂಚಿಗಳನ್ನು ಬಳಸಿಕೊಂಡು ಇಲ್ಲಿ ವಿಶ್ಲೇಷಣೆ ನಡೆಸಲಾಗಿದೆ. ಇಲ್ಲಿ ಮಾನವ ಅಭಿವೃದ್ಧಿಯನ್ನು ನಿರ್ಧರಿಸುವ ಮತ್ತು ಒಟ್ಟಾರೆ ಜಿಲ್ಲೆಯ ಸ್ಥಿತಿಗತಿಯನ್ನು ನಿರ್ಧರಿಸುವ ಸಾಮಾನ್ಯ ಸಂಗತಿಗಳ ಮೇಲೆ ಗಮನ ಕೇಂದ್ರೀಕರಿಸಲಾಗಿದೆ. ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳುವ ದಿಶೆಯಲ್ಲಿ ರೂಪುಗೊಂಡಿರುವ ಸಂಸ್ಥೆಗಳಾದ ಸ್ವಯಂ ಸೇವಾ ಸಂಸ್ಥೆಗಳು, ಎನ್.ಜಿ.ಒ.ಗಳು ಮತ್ತು ಸ್ವಸಹಾಯ ಗುಂಪುಗಳ ಪಾತ್ರವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಸರ್ಕಾರ ಮತ್ತು ನಾಗರಿಕ ಸಮಾಜಗಳೊಂದಿಗಿನ ಸಹಭಾಗಿತ್ವದ ಮೂಲಕ ನಡೆದ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನವು ಉತ್ತಮ ಫಲಿತಾಂಶವನ್ನು ನೀಡಿರುವುದು ನಮ್ಮ ಗಮನಕ್ಕೆ ಬಂದಿದೆ.

ತಳಮಟ್ಟದಲ್ಲಿ ಮಾನವ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲು ಸೂಕ್ತ ಪ್ರಕಾರ್ಯ ಮತ್ತು ಅಧಿಕಾರ ಹೊಂದಿರುವ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಲ್ಲಿ ವಿಕೇಂದ್ರೀಕೃತ ಯೋಜನಾ ವ್ಯವಸ್ಥೆ ಇರಬೇಕಾಗುತ್ತದೆ. ತಳಮಟ್ಟದಲ್ಲಿ ಪರಿಣಾಮಕಾರಿ ಯೋಜನೆಯನ್ನು ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಗತ್ಯವಾದ ಸಾಂಸ್ಥಿಕ ವ್ಯವಸ್ಥೆಯು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದೆ. ಮಾನವ ಅಭಿವೃದ್ಧಿಯನ್ನು ಪ್ರಧಾನ ಗುರಿಯನ್ನಾಗಿಸಿಕೊಂಡಿರುವ ತಳಮಟ್ಟದಲ್ಲಿನ ಯೋಜನೆಗೆ ಸಂಬಂಧಿಸಿದ ತರಬೇತಿಯು ಪರಿಣಾಮಕಾರಿ ಫಲಗಳನ್ನು ನೀಡಬಹುದೆಂದು ನಿರೀಕ್ಷಿಸಲಾಗಿದೆ. ಏಕೆಂದರೆ ಇಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳ ಮತ್ತು ಯೋಜನೆಗಳ ಅನುಷ್ಠಾನಕ್ಕಾಗಿ ಜನರ ಸಹಭಾಗಿತ್ವಕ್ಕಾಗಿ ವಿಸ್ತೃತವಾದ ಅವಕಾಶವಿರುವುದರಿಂದ ಇದು ಸಾಧ್ಯವಾಗುತ್ತದೆ. ಸ್ಥಳೀಯ ಸರ್ಕಾರ ಮತ್ತು ಸಾರ್ವಜನಿಕ ಸಹಭಾಗಿತ್ವಗಳು ಯಶಸ್ವಿಯಾಗ ಬೇಕಾದರೆ ಅಲ್ಲಿ ನಾಗರಿಕ ಸಮಾಜಕ್ಕೆ ಸೂಕ್ತ ಜಾಗೃತಿ ಮತ್ತು ಅರಿವು ಇರಬೇಕಾಗುತ್ತದೆ. ಸಮಾಜದಲ್ಲಿ ಜಾಗೃತಿ ಮತ್ತು ಅರಿವು ಮೂಡಿಸಲು ಅಲ್ಲಿ ಸಾಮುದಾಯಿಕ ಸಂಘಗಳು, ಸ್ವಸಹಾಯ ಸಂಘಗಳು, ಎನ್.ಜಿ.ಒ.ಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳ ಜಾಲವೊಂದರ ಅಗತ್ಯವಿದೆ. ಇಂತಹ ಸಂಸ್ಥೆಗಳ ಜಾಲದ ಅನುಪಸ್ಥಿತಿಯು ಅಲ್ಲಿ ಸಾಮಾಜಿಕ ಬಂಡವಾಳ ಅತ್ಯಂತ ಕೆಳಮಟ್ಟದಲ್ಲಿರುವುದನ್ನು ಮತ್ತು ಅದರ ಮೂಲಕ ಸಾಧಿಸಿಕೊಳ್ಳಬೇಕಾಗಿರುವ ಮಾನವ ಅಭಿವೃದ್ಧಿ ಸ್ಥಿತಿಯು ದುರ್ಬಲವಾಗಿರುವುದನ್ನು ಸೂಚಿಸುತ್ತದೆ. ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಅಗತ್ಯವಾದ ಸಂಗತಿಗಳೆಂದರೆ ಭದ್ರವಾದ ಸಾಮಾಜಿಕ ಬಂಡವಾಳ, ಆದರ್ಶವಾದ ಸ್ಥಳೀಯ ಆಡಳಿತ ಪರಿಪಾಲನೆ ಮತ್ತು ಸೇವೆಯನ್ನು ತಳಮಟ್ಟದಲ್ಲಿ ಒದಗಿಸುವಂತಹ ವ್ಯವಸ್ಥೆ. ಈ ಬಗೆಯ ಸಾಂಸ್ಥಿಕ ವ್ಯವಸ್ಥೆಯು ಇಲ್ಲದಿರುವುದೇ ಗುಲಬರ್ಗಾ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ ಮಟ್ಟವು ದುರ್ಬಲವಾಗಿರಲು ಕಾರಣವಾಗಿದೆ.

## ಗುಲಬರ್ಗಾ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿ – 2001

ಕರ್ನಾಟಕದ ಎರಡನೆಯ ಮಾನವ ಅಭಿವೃದ್ಧಿ ವರದಿಯನ್ನು 2005ರಲ್ಲಿ ಪ್ರಕಟಿಸಲಾಯಿತು. ಈ ವರದಿಯಲ್ಲಿ ಕರ್ನಾಟಕದ 27 ಜಿಲ್ಲೆಗಳ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಲೆಕ್ಕ ಹಾಕಲಾಗಿದೆ. ಕರ್ನಾಟಕದಲ್ಲಿನ ಮಾನವ ಅಭಿವೃದ್ಧಿ ಸಾಧನೆಯಲ್ಲಿ ಗುಲಬರ್ಗಾ ಜಿಲ್ಲೆಯ ಸ್ಥಾನವು ಕೆಳಮಟ್ಟದಲ್ಲಿರುವುದನ್ನು ವರದಿಯು ತೋರಿಸಿಕೊಟ್ಟಿದೆ. ರಾಜ್ಯದ 27 ಜಿಲ್ಲೆಗಳಲ್ಲಿ ಗುಲಬರ್ಗಾ ಜಿಲ್ಲೆಯ ಸ್ಥಾನವು 26 ನೆಯದಾಗಿದೆ. ಈ ಅವಧಿಯಲ್ಲಿ ಜಿಲ್ಲೆಯು ವರಮಾನಕ್ಕೆ ಸಂಬಂಧಿಸಿದಂತೆ ಉತ್ತಮವಾದ ಸಾಧನೆಯನ್ನು ಸಾಧಿಸಿಕೊಂಡಿದೆ. ಆದರೆ ಮಾನವ ಅಭಿವೃದ್ಧಿಗೆ ಸಂಬಂಧಿಸಿದಂತೆ ಅದರ ಸಾಧನೆಯು ಅತ್ಯಂತ ಕೆಳಮಟ್ಟದ್ದಾಗಿದೆ. ಈ ಬಗೆಯ ವರಮಾನ ಕೇಂದ್ರಿತ ಮತ್ತು ಮಾನವ ಅಭಿವೃದ್ಧಿಯೇತರ ಹಾಗೂ ಭೌತಿಕವಾದ ವರ್ಧನೆಯಿಂದ ಸಮಾಜದ ಬಹಳಷ್ಟು ಜನರ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ವ್ಯಾಪಕವಾದ ಅನಕ್ಷರತೆ, ಕನಿಷ್ಠವಾದ ಆರೋಗ್ಯ ಸೌಲಭ್ಯಗಳು, ನಿಕೃಷ್ಟವಾದ ಜೀವನಾಧಾರದ ಅವಕಾಶಗಳು ಮುಂತಾದವುಗಳು ಜನರು ಸಾಮಾನ್ಯವಾದ ಮತ್ತು ಗೌರವಯುತವಾದ ಜೀವನವನ್ನು ಸಾಧಿಸಿಕೊಳ್ಳಲು ಸಾಧ್ಯವಿಲ್ಲದಂತೆ ಮಾಡಿಬಿಟ್ಟಿವೆ.

ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕವು 1991ರಲ್ಲಿ 0.453 ರಷ್ಟಿದ್ದುದು 2001 ರಲ್ಲಿ ಅದು 0.564ಕ್ಕೇರಿದೆ. ಈ ಅವಧಿಯಲ್ಲಿ ಅದು ಶೇ. 24.6ರಷ್ಟು ಏರಿಕೆ ಕಂಡಿದೆ. ಇದೇ ಅವಧಿಯಲ್ಲಿ ರಾಜ್ಯಮಟ್ಟದಲ್ಲಿ ಉಂಟಾದ ಶೇ. 20ರಷ್ಟು ಏರಿಕೆಗಿಂತ ಇದು ಅಧಿಕವಾಗಿದೆ. ಆದರೆ ಇದು ತನ್ನ ನೆರೆಯ ಮಾನವ ಅಭಿವೃದ್ಧಿಯಲ್ಲಿ ಕೆಳಮಟ್ಟದ ಸಾಧನೆ ಮಾಡಿರುವ ಕೊಪ್ಪಳ ಹಾಗೂ ರಾಯಚೂರು ಜಿಲ್ಲೆಗಳಲ್ಲಿನ ಏರಿಕೆಗಿಂತ ಕಡಿಮೆಯಾಗಿದೆ. ಕೊಪ್ಪಳ ಜಿಲ್ಲೆಯ ಸೂಚ್ಯಂಕವು 1991 ರಿಂದ 2001ರ ಅವಧಿಯಲ್ಲಿ ಶೇ. 30.5ರಷ್ಟು ಏರಿಕೆಯಾಗಿದ್ದರೆ ರಾಯಚೂರು ಜಿಲ್ಲೆಯಲ್ಲಿ ಅದು ಶೇ. 23.5ರಷ್ಟು ಏರಿಕೆಯಾಗಿದೆ. ರಾಜ್ಯ ಮತ್ತು ಜಿಲ್ಲೆಗಳ ಸೂಚ್ಯಂಕಗಳ ನಡುವಿನ ಅಂತರ 1991ರಲ್ಲಿ 0.88ರಷ್ಟಿದ್ದುದು 2001ರಲ್ಲಿ ಅಂತರವು 0.86ಕ್ಕೆ ಇಳಿದಿದೆ. ಆದರೆ ಅದರ ರಾಜ್ಯಮಟ್ಟದಲ್ಲಿನ ಸ್ಥಾನವು 1991ರಲ್ಲಿ 25ರಲ್ಲಿದ್ದುದು 2001ರಲ್ಲಿ 26ನೆಯ ಸ್ಥಾನಕ್ಕೆ ಇಳಿದಿದೆ. ಅಂದರೆ ರಾಜ್ಯ ಮತ್ತು ಜಿಲ್ಲೆಗಳ ನಡುವಿನ ಅಂತರವು 1991 ರಿಂದ 2001 ಅವಧಿಯಲ್ಲಿ ತೀವ್ರ ಇಳಿದಿಲ್ಲ. ಇದು ಜಿಲ್ಲೆಯ ಕೆಳಮಟ್ಟದ ಸಾಧನೆಯನ್ನು ತೋರಿಸುವುದರ ಜೊತೆಗೆ ಮುಂದೆ ಅದು ಎದುರಿಸಬೇಕಾಗಿರುವ ಜವಾಬುದಾರಿಯ ಅಗಾಧತೆಯನ್ನು ಮತ್ತು ಅಂತರವನ್ನು ನಿರೀಕ್ಷಿತ ಮಟ್ಟಕ್ಕೆ ಇಳಿಸಲು ಅಗತ್ಯವಾದ ಸವಾಲಿನ ಸ್ವರೂಪವನ್ನು ತೋರಿಸುತ್ತದೆ.

ಜಿಲ್ಲೆಯಲ್ಲಿ ಶಿಕ್ಷಣದ ಸೂಚ್ಯಂಕವು ಏರಿಕೆ ಪ್ರವೃತ್ತಿಯನ್ನು ತೋರಿಸುತ್ತಿದ್ದರೂ ಅದರ ಮಟ್ಟವು ಚಾಮರಾಜನಗರ ಮತ್ತು ರಾಯಚೂರು ಜಿಲ್ಲೆಗಳಲ್ಲಿನ ಮಟ್ಟಕ್ಕಿಂತ ಕೆಳಗಿದೆ. ಆರೋಗ್ಯ ಮತ್ತು ವರಮಾನದಲ್ಲಿ ಉಂಟಾಗಿರುವ ಏರಿಕೆಯೂ ಜನರಿಗೆ ಉತ್ತಮ ಜೀವನವನ್ನು ಒದಗಿಸುವ ಪ್ರಮಾಣದಲ್ಲಿಲ್ಲ. ಆದ್ದರಿಂದ ಇಲ್ಲಿ ಸೂಕ್ತವಾದ ಮಾನವ ಅಭಿವೃದ್ಧಿ ತಂತ್ರಗಳನ್ನು ರೂಪಿಸುವ ಅಗತ್ಯವಿದೆ ಮತ್ತು ಮಾನವ ಅಭಿವೃದ್ಧಿ ಸ್ಥಿತಿಯಲ್ಲಿ ಪರಿಣಾಮಕಾರಿಯಾದ ಬದಲಾವಣೆ ತರುವಂತಹ ರೀತಿಯಲ್ಲಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗಿದೆ.

## ಜಿಲ್ಲೆಯೊಳಗೆ ಮಾನವ ಅಭಿವೃದ್ಧಿ ಸ್ಥಿತಿಗತಿ 2006

ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ವರದಿಯನ್ನು 2006ಕ್ಕೆ ಸಂಬಂಧಿಸಿದಂತೆ ಸಿದ್ಧಪಡಿಸಲಾಗಿದೆ. ಈ ಜಿಲ್ಲೆಯ ಎಲ್ಲ ಹತ್ತು ತಾಲ್ಲೂಕುಗಳಿಗೂ ಮಾನವ ಅಭಿವೃದ್ಧಿ ಸೂಚ್ಯಂಕಗಳನ್ನು ಲೆಕ್ಕಹಾಕಲಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕವು 2001ರಲ್ಲಿ 0.564ರಷ್ಟಿದ್ದುದು 2006ರಲ್ಲಿ ಅದು 0.590ಕ್ಕೆ ಏರಿಕೆಯಾಗಿದೆ. ಇಲ್ಲಿ ಉಂಟಾಗಿರುವ ಏರಿಕೆ ಶೇ. 4.6. ಜಿಲ್ಲೆಯೊಳಗಿನ ತಾಲ್ಲೂಕು–ತಾಲ್ಲೂಕುಗಳ ನಡುವೆ ಮಾನವ ಅಭಿವೃದ್ಧಿ ಸೂಚ್ಯಂಕಗಳ ನಡುವೆ ಗಣನೀಯವಾದ ಭಿನ್ನತೆಗಳಿವೆ. ಗುಲಬರ್ಗಾ ಜಿಲ್ಲೆಯ ಮಾನವ ಅಭಿವೃದ್ಧಿ ಸೂಚ್ಯಂಕವು 2006ರಲ್ಲಿ 0.631

ರಷ್ಟಿತ್ತು. ಯಾದಗೀರ್ ತಾಲ್ಲೂಕು ಹತ್ತನೆಯ ಸ್ಥಾನ ಪಡೆದಿದ್ದು ಅದರ ಸೂಚ್ಯಂಕ 0.543 ರಷ್ಟಿತ್ತು. ಜಿಲ್ಲೆಯಲ್ಲಿ ಶಿಕ್ಷಣ ಮತ್ತು ವರಮಾನ ಸೂಚ್ಯಂಕಗಳು ಅತಿ ಕಡಿಮೆಯಿರುವುದು ಯಾದಗೀರ್ ತಾಲ್ಲೂಕಿನಲ್ಲಿ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ. ಅಲ್ಲಿ ಶಿಕ್ಷಣ ಸೂಚ್ಯಂಕ 0.445ರಷ್ಟಿದ್ದರೆ ವರಮಾನ ಸೂಚ್ಯಂಕ 0.518ರಷ್ಟಿದೆ. ಅತ್ಯಂತ ಕಡಿಮೆ ವರಮಾನ ಸೂಚ್ಯಂಕವಿರುವ ತಾಲ್ಲೂಕೆಂದರೆ ಅಳಂದ್. ಮಾನವ ಅಭಿವೃದ್ಧಿಯಲ್ಲಿ ಗುಲಬರ್ಗಾ ತಾಲ್ಲೂಕು ಅತ್ಯಂತ ಉತ್ತಮ ಸ್ಥಾನದಲ್ಲಿದೆ. ಇದಕ್ಕೆ ಬಹುಮುಖ್ಯ ಕಾರಣವೆಂದರೆ ಅಲ್ಲಿರುವ ಅತಿ ಹೆಚ್ಚಿನ ನಗರ ಜನಸಂಖ್ಯೆ. ಅದರ ಮಾನವ ಅಭಿವೃದ್ಧಿ ಸೂಚ್ಯಂಕ 0. 631. ಆದರೆ ಅದು ರಾಜ್ಯದ 2001ರ 0.650 ಸೂಚ್ಯಂಕಕ್ಕಿಂತ ಕಡಿಮೆಯಿದೆ. ಅದರ ಸೂಚ್ಯಂಕವು ಮೈಸೂರು ಮತ್ತು ತುಮಕೂರು ಜಿಲ್ಲೆಗಳ ಸೂಚ್ಯಂಕಗಳಿಗೆ ಸಮವಾಗಿದೆ. ಈ ತಾಲ್ಲೂಕಿನ ಸೂಚ್ಯಂಕವು ಉತ್ತರ ಕರ್ನಾಟಕದ ವಿಜಾಪುರ, ಹಾವೇರಿ, ಬಾಗಲಕೋಟೆ, ಬೀದರ್ ಮತ್ತು ಬಳ್ಳಾರಿ ಜಿಲ್ಲೆಗಳ 2001ರ ಸೂಚ್ಯಂಕಕ್ಕಿಂತ ಅಧಿಕವಾಗಿತ್ತು. ಅತಿ ಹೆಚ್ಚಿನ ಸೂಚ್ಯಂಕದ ತಾಲ್ಲೂಕು ಮತ್ತು ಅತಿ ಕಡಿಮೆ ಸೂಚ್ಯಂಕದ ತಾಲ್ಲೂಕುಗಳ ನಡುವಿನ ಅಂತರ 2001ರಲ್ಲಿ 13.94ರಷ್ಟಿತ್ತು.

ಮಾನವ ಅಭಿವೃದ್ಧಿ ಸೂಚ್ಯಂಕ ಮತ್ತು ಸಮಗ್ರ ಸಂಯುಕ್ತ ಅಭಿವೃದ್ಧಿ ಸೂಚ್ಯಂಕಗಳ ನಡುವಿನ ತುಲನೆಯು ತೋರಿಸುವುದೇನೆಂದರೆ ಆರ್ಥಿಕ ಅಭಿವೃದ್ಧಿಯು ಯಾವಾಗಲೂ ಮಾನವ ಅಭಿವೃದ್ಧಿಯನ್ನು ಪೋಷಿಸುತ್ತದೆಯೆಂದು ತಿಳಿಯಲು ಬರುವುದಿಲ್ಲ. ಗುಲಬರ್ಗಾ ಜಿಲ್ಲೆಯಲ್ಲಿ ಸೇಡಮ್ ಮತ್ತು ಯಾದಗೀರ್ ತಾಲ್ಲೂಕುಗಳು ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಉತ್ತಮವಾಗಿವೆ. ಆದರೆ ಅವುಗಳ ಮಾನವ ಅಭಿವೃದ್ಧಿ ಸಾಧನೆ ಕೆಳಮಟ್ಟದಲ್ಲಿದೆ,. ವರಮಾನದಲ್ಲಿ ಯಾದಗೀರ್‌ನ ಸ್ಥಾನ ನಾಲ್ಕನೆಯದಾದರೆ ಮಾನವ ಅಭಿವೃದ್ಧಿಯಲ್ಲಿ ಕೆಳಮಟ್ಟದ್ದಾಗಿದೆ. ಸೇಡಮ್ ತಾಲ್ಲೂಕು ವರಮಾನದಲ್ಲಿ ಎರಡನೆಯ ಸ್ಥಾನದಲ್ಲಿದ್ದರೆ ಮಾನವ ಅಭಿವೃದ್ಧಿಯಲ್ಲಿ ಆರನೆಯ ಸ್ಥಾನದಲ್ಲಿದೆ. ಅದೇ ರೀತಿ ಚಿತ್ತಾಪುರ ತಾಲ್ಲೂಕು ವರಮಾನದಲ್ಲಿ ಎರಡನೆಯ ಸ್ಥಾನದಲ್ಲಿದ್ದರೆ ಮಾನವ ಅಭಿವೃದ್ಧಿಯಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಆದರೆ ಅಫಜಲಪುರ ಮತ್ತು ಅಳಂದ್ ತಾಲ್ಲೂಕುಗಳಲ್ಲಿ ವರಮಾನದ ಮಟ್ಟ ಕಡಿಮೆಯಿದ್ದರೂ ಅವುಗಳ ಮಾನವ ಅಭಿವೃದ್ಧಿ ಮಟ್ಟ ಉತ್ತಮವಾಗಿದೆ. ಉಳಿದ ತಾಲ್ಲೂಕುಗಳಲ್ಲಿ ಏರಿಕೆಯಾದ ವರಮಾನವು ಸ್ವಲ್ಪ ಮಟ್ಟಿಗೆ ಮಾನವ ಅಭಿವೃದ್ಧಿಯಾಗಿ ಪರಿವರ್ತನೆಗೊಳ್ಳುತ್ತಿರುವುದು ಕಂಡು ಬರುತ್ತಿದೆ.

ಆದ್ದರಿಂದ ಆರ್ಥಿಕ ಅಭಿವೃದ್ಧಿಯನ್ನು ಸೂಕ್ತ ನೀತಿಗಳ ಮೂಲಕ ಮಾನವ ಅಭಿವೃದ್ಧಿಯಾಗಿ ಪರಿವರ್ತಿಸುವ ಅಗತ್ಯವಿದೆ ಎಂಬುದನ್ನು ಪ್ರಸ್ತುತ ಅಧ್ಯಯನವು ತೋರಿಸಿಕೊಟ್ಟಿದೆ.

## ಸಾಕ್ಷರತೆ ಮತ್ತು ಶಿಕ್ಷಣ

ಸಾಕ್ಷರತೆಯಲ್ಲಿ ಅತ್ಯಂತ ಹಿಂದುಳಿದಿರುವ ಜಿಲ್ಲೆ ಗುಲಬರ್ಗಾ. ಈ ಕಾರಣದಿಂದಾಗಿ ಅದರ ಮಾನವ ಅಭಿವೃದ್ಧಿ ಮಟ್ಟವು ಅತ್ಯಂತ ಕೆಳಮಟ್ಟದಲ್ಲಿದೆ. ಇದು ಜಿಲ್ಲೆಯು ಆರ್ಥಿಕವಾಗಿ ಹಿಂದುಳಿದಿರುವುದಕ್ಕೂ ಕಾರಣವಾಗಿದೆ. ಅಭಿವೃದ್ಧಿಯ ದೃಷ್ಟಿಯಿಂದ ತಕ್ಷಣ ಗಮನ ಹರಿಸಬೇಕಾದ ಕ್ಷೇತ್ರ ಇದಾಗಿದೆ. ಜಿಲ್ಲೆಯ ಸಾಕ್ಷರತೆಯು 2001ರಲ್ಲಿ ಶೇ. 50.01ರಷ್ಟಿತ್ತು. ಅದು 2006ರಲ್ಲಿ ಶೇ. 57.32ರಷ್ಟಾಗಬಹುದೆಂದು ನಿರೀಕ್ಷಿಸಲಾಗಿದೆ. ಹತ್ತನೆಯ ಯೋಜನೆಯ ಸಾಕ್ಷರತೆಯ ಗುರಿಯಾದ ಶೇ. 75ಕ್ಕಿಂತ ಮತ್ತು ದಾಖಲಾತಿಯ 2010ರ ಗುರಿಯಾದ ಶೇ. 100 ಗುರಿಯಿಂದ ಜಿಲ್ಲೆಯು ಬಹಳ ದೂರದಲ್ಲಿದೆ. ಈ ಗುರಿಯನ್ನು ನಗರ ಪ್ರದೇಶಕ್ಕೆ ಸಂಬಂಧಿಸಿದಂತೆಯೂ ಸಾಧಿಸಿಕೊಳ್ಳಲು ಸಾಧ್ಯವಾಗಿಲ್ಲ. ಜಿಲ್ಲೆಯಲ್ಲಿನ ಗ್ರಾಮೀಣ ಸಾಕ್ಷರತೆಯ ಮಟ್ಟ 2001ರಲ್ಲಿ ಶೇ. 29. ಜಿಲ್ಲೆಯ ಶಹಾಪುರ, ಶೋರಾಪುರ ಮತ್ತು ಯಾದಗೀರ್ ತಾಲ್ಲೂಕುಗಳು ಸಾಕ್ಷರತೆಯಲ್ಲಿ ಕೆಳಮಟ್ಟದಲ್ಲಿವೆ.

ಸಾರ್ವಜನಿಕ ಶಿಕ್ಷಣ ಇಲಾಖೆಯು 2006–07ರಲ್ಲಿ ಸಾಧಿಸಿಕೊಳ್ಳಲು ಕೆಲವು ಲಕ್ಷ್ಯಗಳನ್ನಿಟ್ಟುಕೊಂಡಿತ್ತು. ಅವುಗಳಾವುವೆಂದರೆ (1) ಎಲ್ಲ ಮಕ್ಕಳು ಎಂಟು ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯಬೇಕು, (2) ಹೀಗೆ ಎಂಟು ವರ್ಷಗಳ ಶಾಲಾ ಶಿಕ್ಷಣವನ್ನು ಮುಗಿಸಿದವರಲ್ಲಿ ಶೇ. 80ರಷ್ಟು ಪ್ರೌಢಶಾಲೆಗೆ ಸಾಗಬೇಕು, (3) ಪರೀಕ್ಷೆಯ ಮಾನದಂಡದ ದೃಷ್ಟಿಯಿಂದ ಶಿಕ್ಷಣದ ಗುಣಮಟ್ಟವು

ಉತ್ತಮವಾಗಬೇಕು (4) ದಾಖಲಾತಿಯಲ್ಲಿ ವರಮಾನ, ಜಾತಿ ಮತ್ತು ಲಿಂಗಸಂಬಂಧಿ ಅಂತರಗಳನ್ನು ಕಡಿಮೆ ಮಾಡುವುದು.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಮತ್ತು ಸರ್ವ ಶಿಕ್ಷಣ ಅಭಿಯಾನಗಳನ್ನು ಅನುಷ್ಠಾನಗೊಳಿಸಿದ ಮೇಲೆ ಜಿಲ್ಲೆಯ ಶಿಕ್ಷಣ ಮಟ್ಟವು ಬಹಳಷ್ಟು ಉತ್ತಮಗೊಂಡಿದೆ. ಆದರೂ ಅದು ತಾನು ನಿಗದಿಪಡಿಸಿಕೊಂಡಿದ್ದ ಲಕ್ಷ್ಯಗಳನ್ನು ಈಡೇರಿಸಿಕೊಳ್ಳುವಲ್ಲಿ ವಿಫಲವಾಗಿದೆ.

ಶಾಲಾ ದಾಖಲಾತಿಯು ಉತ್ತಮಗೊಳ್ಳುತ್ತಿದೆ ಮತ್ತು ಶಾಲೆಯಿಂದ ಹೊರಗಿರುವ ಮಕ್ಕಳ ಪ್ರಮಾಣವು ಕಡಿಮೆಯಾಗುತ್ತಿದೆ. ಶಾಲೆಯಿಂದ ಹೊರಗಿರುವ ಮಕ್ಕಳ ಪ್ರಮಾಣವು 2001ರಲ್ಲಿ ಶೇ. 24.2ರಷ್ಟಿದ್ದುದು 2006ರಲ್ಲಿ ಅದು ಶೇ. 5.9ಕ್ಕೆ ಇಳಿದಿದೆ. ಇದನ್ನು ಸಾಧಿಸಿಕೊಳ್ಳಲು ಶಿಕ್ಷಣ ಇಲಾಖೆಯು ಆರಂಭಿಸಿದ್ದ ಕಾರ್ಯಕ್ರಮಗಳಾದ ಸೇತುಬಂಧ', ಚಿನ್ನರ ಅಂಗಳ, ಬಾ ಬಾಲೆ ಶಾಲೆಗೆ, ಕೂಲಿಯಿಂದ ಶಾಲೆಗೆ, ಬೀದಿಯಿಂದ ಶಾಲೆಗೆ, ಮುಂತಾದವುಗಳ ಕಾಣಿಕೆ ಅಪಾರವಾಗಿದೆ. ಮಕ್ಕಳನ್ನು ಶಾಲಾವಾಹಿನಿಗೆ ತರುವ ದೃಷ್ಟಿಯಿಂದ ಎಲ್ಲ ಕಾರ್ಯಕ್ರಮಗಳನ್ನು ಹೆಚ್ಚು ಸಶಕ್ತವಾಗಿ ಮುಂದುವರಿಸುವ ಅಗತ್ಯವಿದೆ.

ದಾಖಲಾತಿಯ ಜೊತೆಗೆ ಮಕ್ಕಳು ಶಾಲೆಯಲ್ಲಿ ಉಳಿಯುವಂತೆ ಮಾಡುವುದು ಬಹಳ ಮುಖ್ಯ. ಶಹಾಪುರ, ಶೋರಾಪುರ ಮತ್ತು ಯಾದಗೀರ್ ತಾಲ್ಲೂಕುಗಳಲ್ಲಿ ಮಕ್ಕಳು 5 ರಿಂದ 7 ನೆಯ ತರಗತಿಗಳ ನಡುವೆ ಶಾಲೆ ಬಿಡುವುದು ಮತ್ತು ದುಡಿಮೆಗೆ ಪ್ರವೇಶಿಸುವುದು ಅಧಿಕವಾಗಿದೆ. ಇದನ್ನು ತಡೆಗಟ್ಟಬೇಕು ಮತ್ತು ಪ್ರತಿಯೊಂದು ಮಗುವೂ ಕನಿಷ್ಠ ಹತ್ತು ವರ್ಷಗಳ ಶಾಲಾ ಶಿಕ್ಷಣವನ್ನು ಮುಗಿಸುವಂತೆ ಮಾಡಬೇಕು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳ ದಾಖಲಾತಿಯು ಅಧಿಕಗೊಳ್ಳುತ್ತಿದೆ. ಆದರೆ ಇವರ ಸಾಕ್ಷರತೆಯ ಮಟ್ಟವು ಅತ್ಯಂತ ಕಡಿಮೆ ಮತ್ತು ಶಾಲೆ ಬಿಡುವ ಮಕ್ಕಳ ಪ್ರಮಾಣವು ಇಲ್ಲಿ ಅಧಿಕ. ಪ.ಜಾ.ಯಲ್ಲಿ ಶಾಲೆಯಲ್ಲಿ ಉಳಿಯುವ ಮಕ್ಕಳ ಪ್ರಮಾಣ ಬಾಲಕರಲ್ಲಿ ಶೇ. 96 ಮತ್ತು ಬಾಲಕಿಯರಲ್ಲಿ ಶೇ. 94ರಷ್ಟಿದೆ. ಇದು ಪ.ಪಂ. ದಲ್ಲಿ ಕ್ರಮವಾಗಿ ಶೇ. 95 ಮತ್ತು 94ರಷ್ಟಿದೆ. ಶಾಲೆಯಿಂದ ಹೊರಗಿರುವ ಪ.ಜಾ. 11 ರಿಂದ 14 ವಯೋಮಾನದ ಮಕ್ಕಳ ಪ್ರಮಾಣ ಶಹಾಪುರದಲ್ಲಿ 15.7, ಶೋರಾಪುರದಲ್ಲಿ ಶೇ. 15,2 ಮತ್ತು ಯಾದಗೀರ್‌ನಲ್ಲಿ ಮತ್ತು ಚಿತ್ತಾಪುರದಲ್ಲಿ ಅದು ಶೇ. 12ರಷ್ಟಿದೆ. ಈ ತಾಲ್ಲೂಕುಗಳಲ್ಲಿ ಪ.ಪಂ. ಮಕ್ಕಳ ಸ್ಥಿತಿಯು ಪ.ಜಾ.ಮಕ್ಕಳ ಸ್ಥಿತಿಗಿಂತ ಉತ್ತಮವಾಗೇನಿಲ್ಲ. ಶಾಲೆಯಿಂದ ಹೊರಗಿರುವ ಮಕ್ಕಳು ಕೃಷಿಯಲ್ಲಿ ದುಡಿಯುತ್ತಿರುತ್ತಾರೆ. ಈ ಸಮಸ್ಯೆಯನ್ನು ಎದುರಿಸಲು ನಿರ್ದಿಷ್ಟವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಅಗತ್ಯವಿದೆ. ಈ ಮಕ್ಕಳು ಶಾಲೆಯಿಂದ ಹೊರಬಿದ್ದು ಕುಟುಂಬದ ವರಮಾನ ಸಂಪಾದಿಸುವ ದುಡಿಮೆಗಾರರಾಗಿ ಬಿಡುತ್ತಾರೆ. ಈ ಕುಟುಂಬಗಳಿಗೆ ಪರ್ಯಾಯವಾದ ವರಮಾನದ ಮೂಲಗಳನ್ನು ವಿದ್ಯಾರ್ಥಿ ವೇತನದ ಮೂಲಕ ನೀಡದಿದ್ದರೆ ಅವರು ಶಾಲಾವಾಹಿನಿಯನ್ನು ಮತ್ತೆ ಸೇರುವುದು ಅಸಾಧ್ಯ.

ಶಾಲಾ ಶಿಕ್ಷಣದ ಗುಣಮಟ್ಟದ ಬಗ್ಗೆ ಗಮನ ನೀಡುವ ಅಗತ್ಯವಿದೆ. ಹತ್ತನೆಯ ತರಗತಿಯ ಫಲಿತಾಂಶವನ್ನು ನೋಡಿದರೆ ಜಿಲ್ಲೆಯ ಸಾಧನೆಯು, ಅದರಲ್ಲೂ ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಕೆಳಮಟ್ಟದಲ್ಲಿದೆ. ಸರ್ಕಾರಿ ಶಾಲೆಗಳಲ್ಲಿ ಫಲಿತಾಂಶ ಅತಿ ಕಡಿಮೆಯಿದೆ. ಇದು ಆತಂಕಕ್ಕೆ ಕಾರಣವಾಗಿದೆ. ಏಕೆಂದರೆ ಪರಿಶಿಷ್ಟ ಗುಂಪಿಗೆ ಸೇರಿದ, ವಂಚಿತ ಮತ್ತು ದುಸ್ಥಿತಿಯಲ್ಲಿರುವ ಮಕ್ಕಳು ಅಧಿಕಾಧಿಕವಾಗಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುತ್ತಾರೆ. ಈ ಮಕ್ಕಳ ಸಶಕ್ತೀಕರಣದ ದೃಷ್ಟಿಯಿಂದ ಮೇಲಿನ ಸಮಸ್ಯೆಯು ತೀವ್ರ ಪರಿಣಾಮ ಬೀರಬಲ್ಲುದಾಗಿದೆ. ಶಿಕ್ಷಣ ಇಲಾಖೆಯು ಉತ್ತರಧಾಯಿತ್ವವನ್ನು ಉತ್ತಮಪಡಿಸಬೇಕಾಗುತ್ತದೆ. ಸೂಕ್ತವಾದ ಬೋಧನಾ ತರಬೇತಿ ಮತ್ತು ಪ್ರಶಿಕ್ಷಣದ ಮೂಲಕ ಶಿಕ್ಷಕರ ಬೋಧನಾ ಗುಣಮಟ್ಟವನ್ನು ಉತ್ತಮಪಡಿಸುವ ಅಗತ್ಯವಿದೆ. ಇದಕ್ಕಾಗಿ ಶಾಲೆಗಳಿಗೆ ಹೆಚ್ಚು ಹೆಚ್ಚು ಬೋಧನಾ ಉಪಕರಣಗಳನ್ನು ಮತ್ತು ಪ್ರಯೋಗಾಲಯವನ್ನು ನೀಡುವ ಅಗತ್ಯವಿದೆ. ಜಿಲ್ಲೆಯಲ್ಲಿ ಬಡವರು ಮತ್ತು ಶ್ರೀಮಂತರ ನಡುವಿನ ಶಿಕ್ಷಣಕ್ಕೆ ಸಂಬಂಧಿಸಿದ ಅಸಮಾನತೆಯನ್ನು ನಿವಾರಿಸುವಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವು ನೆರವಾಗಬಲ್ಲದು.

ಶಾಲಾ ಮೂಲಭೂತ ಸೌಲಭ್ಯಗಳ ಮಟ್ಟವನ್ನು ಉತ್ತಮಪಡಿಸುವ ಅಗತ್ಯವಿದೆ. ಕುಡಿಯುವ ನೀರಿನ ಸೌಲಭ್ಯವಿಲ್ಲದ ಶಾಲೆಗಳ ಪ್ರಮಾಣ ಶೇ.36ರಷ್ಟಿದೆ. ಶೇ.60ರಷ್ಟು ಶಾಲೆಗಳಲ್ಲಿ ಶೌಚಾಲಯಗಳಿಲ್ಲ, ಶೇ.65ರಷ್ಟು ಶಾಲೆಗಳಲ್ಲಿ ಶಾಲಾ ಆವರಣದ ಸುತ್ತ ರಕ್ಷಣಾ ಗೋಡೆಯಿಲ್ಲ ಮತ್ತು ವಿದ್ಯುಚ್ಛಕ್ತಿಯಿಲ್ಲ. ಕನಿಷ್ಠ ಮುಲಭೂತ ಸೌಲಭ್ಯಗಳನ್ನು ಒದಗಿಸುವ ಅಗತ್ಯವಿದೆ. ಶಾಲೆಯಲ್ಲಿ ಕಲಿಯುವ ವಾತಾವರಣವನ್ನು ನಿರ್ಮಿಸುವ ದೃಷ್ಟಿಯಿಂದ ಶಾಲಾ ಗ್ರಂಥಾಲಯವನ್ನು ಉತ್ತಮಪಡಿಸುವ ಅಗತ್ಯವಿದೆ.

ಮಧ್ಯಾಹ್ನದ ಬಿಸಿಯೂಟದ ಗುಣಮಟ್ಟವನ್ನು ಉತ್ತಮಪಡಿಸುವ ಅಗತ್ಯವಿದೆ. ಕಲಿಯುವಿಕೆಯಲ್ಲಿ ಹಿಂದುಳಿದಿರುವ ಮಕ್ಕಳಿಗಾಗಿ ಮತ್ತು ಭಾಷಾ ಸಮಸ್ಯೆಯನ್ನು ಎದುರಿಸುತ್ತಿರುವ ಮಕ್ಕಳಿಗಾಗಿ ಅದರಲ್ಲೂ ಪರಿಶಿಷ್ಟ ಮಕ್ಕಳಿಗಾಗಿ ವಿಶೇಷ ಪ್ರಯತ್ನ ಮಾಡುವ ಬಗ್ಗೆ ಯೋಚಿಸಬೇಕಾಗಿದೆ. ಜಿಲ್ಲೆಯ ಸಾಕ್ಷರತೆಗೆ ಸಂಬಂಧಿಸಿದ ಎಲ್ಲ ಸಮಸ್ಯೆಗಳನ್ನು ಸೂಕ್ತ ನೀತಿಗಳ ಮೂಲಕ ಬಗೆಹರಿಸುವ ಬಗ್ಗೆ ಪ್ರಯತ್ನಿಸಬೇಕಾಗುತ್ತದೆ. ಶಾಲಾ ವ್ಯವಸ್ಥೆಯಲ್ಲ ಉತ್ತರಧಾಯಿತ್ವ ಕ್ರಮವನ್ನು ಅನುಸರಿಸಬೇಕಾಗುತ್ತದೆ. ದೀರ್ಘಕಾಲ ಗೈರುಹಾಜರಾಗುವ ಶಿಕ್ಷಕರಿಗೆ ಮತ್ತು ಬೋಧನೆಯನ್ನು ನಿರ್ಲಕ್ಷಿಸುವ ಶಿಕ್ಷಕರಿಗೆ ಕಠಿಣ ಶಿಕ್ಷೆ ನೀಡುವಂತಾಗಬೇಕು. ಸೂಕ್ತ ತರಬೇತಿಯ ಮೂಲಕ ಅವರ ಕಾರ್ಯಕ್ಷಮತೆಯನ್ನು ಉತ್ತಮಪಡಿಸುವ ಅಗತ್ಯವಿದೆ.

## ಆರೋಗ್ಯ ಮತ್ತು ಪೌಷ್ಟಿಕತೆ

ಆರೋಗ್ಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ತಕ್ಷಣ ಗಮನಹರಿಸಬೇಕಾದ ಸಂಗತಿಗಳೆಂದರೆ ಜನಸಂಖ್ಯಾ ಬೆಳವಣಿಗೆ ಗತಿಯನ್ನು ಕಡಿಮೆ ಮಾಡುವುದು, ತಾಯಂದಿರ ಮತ್ತು ಮಕ್ಕಳ ಪೋಷಣೆ ಮತ್ತು ಪಾಲನೆ, ಆರೋಗ್ಯ ಸೇವೆಯನ್ನು ಜನರಿಗೆ ಒದಗಿಸುವುದು, ವೈದ್ಯಕೀಯ ಸೇವೆಯ ಗುಣಮಟ್ಟವನ್ನು ಉತ್ತಮಪಡಿಸುವುದು ಮುಂತಾದವುಗಳು. ಜನಸಂಖ್ಯೆಯ ಬೆಳವಣಿಗೆ ಗತಿಯನ್ನು ಕಡಿಮೆ ಮಾಡಲು ಅದಕ್ಕೆ ಸಂಬಂಧಿಸಿದ ಅರಿವನ್ನು ಮತ್ತು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಜನರಿಗೆ ಒದಗಿಸುವುದು, ಕುಟುಂಬ ಯೋಜನೆ ಬಗ್ಗೆ ಮತ್ತು ಅದರ ವಿವಿಧ ವಿಧಾನಗಳ ಬಗ್ಗೆ ಮಾಹಿತಿ ನೀಡುವುದು ಹಾಗೂ ಸಣ್ಣ ಕುಟುಂಬದ ಬಗ್ಗೆ ಜನರಲ್ಲಿ ಒಲವು ಮೂಡುವಂತೆ ಮಾಡುವುದು, ಗಂಡು ಮಗುವಿನ ಬಗೆಗಿನ ವ್ಯಾಮೋಹವನ್ನು ಕೈಬಿಡುವಂತೆ ಮುಖ್ಯವಾಗಿ ಜೇವರ್ಗಿ, ಶಹಾಪುರ ಮತ್ತು ಶೋರಾಪುರ ತಾಲ್ಲೂಕುಗಳ ಮಹಿಳೆಯರ ಮನವೊಲಿಸುವುದು ಮುಂತಾದವು.

ತಾಯಂದಿರ ಮತ್ತು ಮಕ್ಕಳ ಆರೋಗ್ಯವನ್ನು ಉತ್ತಮಪಡಿಸುವುದಕ್ಕೆ ಮೊದಲು ಸಾಂಸ್ಥಿಕ ಹೆರಿಗೆ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಬೇಕು. ಪ್ರಸ್ತುತ ಅದರ ಪ್ರಮಾಣ ಕೇವಲ ಶೇ.30.73. ಅಸುರಕ್ಷಿತ ಹೆರಿಗೆಗಳ ಪ್ರಮಾಣ ಈಗ ಶೇ.50ಕ್ಕಿಂತ ಅಧಿಕವಾಗಿದೆ. ಇದನ್ನು ಉತ್ತಮಪಡಿಸಲು ಆರೋಗ್ಯಕ್ಕೆ ಸಂಬಂಧಿಸಿದ ಮೂಲಸೌಲಭ್ಯಗಳನ್ನು ಉತ್ತಮಪಡಿಸಬೇಕು, 24 ಗಂಟೆಗಳ ಕಾಲ ವೈದ್ಯಕೀಯ ಸೇವೆ ಒದಗಿಸುವುದರ ಮೂಲಕ ಆರೋಗ್ಯ ಸೇವೆಯು ಜನರಿಗೆ ಸದಾಕಾಲ ದೊರೆಯುವಂತೆ ಮಾಡಬೇಕು ಹಾಗೂ ಮಹಿಳೆಯರ ಶಿಕ್ಷಣ ಮತ್ತು ಅವರ ಅರಿವಿನ ನೆಲೆಯನ್ನು ವಿಸ್ತರಿಸುವುದರ ಮೂಲಕ ಮಹಿಳೆಯರಿಗೆ ಆರೋಗ್ಯ ಸೇವೆ ದೊರೆಯುವಂತೆ ಮಾಡಬೇಕು.

ಆರೋಗ್ಯ ಸೇವೆಯನ್ನು ಜನರಿಗೆ ಒದಗಿಸುವುದಕ್ಕಾಗಿ ವೈದ್ಯಕೀಯ ಸಿಬ್ಬಂದಿಯ ಸಂಖ್ಯೆಯನ್ನು ಹೆಚ್ಚಿಸಬೇಕು ಮತ್ತು ಆರೋಗ್ಯ ಮೂಲಭೂತ ಸೌಲಭ್ಯವನ್ನು ಹೆಚ್ಚಿಸಬೇಕು. ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸರಿಯಾದ ಕಟ್ಟಡಗಳಿಲ್ಲ, ಉಪಕರಣಗಳಿಲ್ಲ ಮತ್ತು ಶಸ್ತ್ರ ಚಿಕಿತ್ಸಾ ಕೊಠಡಿಗಳಿಲ್ಲ. ಇದರಿಂದಾಗಿ ರಾತ್ರಿಯ ಸಮಯದಲ್ಲಿ ಹೆರಿಗೆ ಮಾಡಿಸುವುದು ಕಷ್ಟವಾಗುತ್ತಿದೆ. ಇಲ್ಲಿ ವೈದ್ಯರ ಮತ್ತು ಶುಶ್ರೂಷಕಿಯರ ತೀವ್ರ ಕೊರತೆಯಿದೆ. ವೈದ್ಯರಿಗೆ ಮತ್ತು ವೈದ್ಯಕೀಯ ಸಿಬ್ಬಂದಿಗೆ ವಸತಿ ಸೌಲಭ್ಯಗಳು ಸರಿಯಾಗಿ ಲಭ್ಯವಿಲ್ಲ. ಲಭ್ಯವಿದ್ದರೂ ಅವು ವಾಸಿಸಲು ಯೋಗ್ಯವಾಗಿಲ್ಲ. ಈ ಬಗೆಯ ಸೌಲಭ್ಯಗಳನ್ನು ಒದಗಿಸುವುದರಿಂದ ವೈದ್ಯಕೀಯ ಸಿಬ್ಬಂದಿಗೆ ಹೆಚ್ಚಿನ ಉತ್ತೇಜನ ಸಿಕ್ಕಂತಾಗುತ್ತದೆ.

ಈ ವ್ಯವಸ್ಥೆಯಲ್ಲಿ ಉತ್ತರಧಾಯಿತ್ವದ ಅವಶ್ಯಕತೆಯಿದೆ. ಇಲ್ಲಿ ಒಳ್ಳೆಯ ಕೆಲಸಕ್ಕೆ

ಪ್ರೋತ್ಸಾಹ ಹಾಗೂ ಉತ್ತೇಜನಗಳಿರಬೇಕು. ಅದೇ ರೀತಿ ಕರ್ತವ್ಯದಲ್ಲಿ ಲೋಪವೆಸಗಿದವರಿಗೆ ಶಿಕ್ಷೆಯಾಗಬೇಕು ಮತ್ತು ಅವರಿಗೆ ದಂಡ ವಿಧಿಸಬೇಕು. ವೈದ್ಯಕೀಯ ಸಿಬ್ಬಂದಿಯು ಗ್ರಾಮೀಣ ಪ್ರದೇಶದಲ್ಲಿ ಸದಾಕಾಲ ಮತ್ತು ದಿನದ ಎಲ್ಲ ಸಮಯದಲ್ಲೂ ಜನರಿಗೆ ದೊರೆಯುವಂತಿರಬೇಕು.

ಗ್ರಾಮೀಣ ಪ್ರದೇಶದಲ್ಲಿ ಮಕ್ಕಳ ಪೌಷ್ಟಿಕತೆ ಮಟ್ಟವು ತೀವ್ರ ಕೆಳಮಟ್ಟದಲ್ಲಿದೆ. ಅಂಗನವಾಡಿ ಕೇಂದ್ರಗಳಲ್ಲಿ ಎಲ್ಲ ಮಕ್ಕಳಿಗೂ ಸೇವೆ ದೊರೆಯುವಂತೆ ಮಾಡುವುದರ ಮೂಲಕ ಅವರ ಪೌಷ್ಟಿಕತೆ ಮಟ್ಟವನ್ನು ಉತ್ತಮಪಡಿಸಬಹುದು.

## ವರಮಾನ ಮತ್ತು ಉದ್ಯೋಗ

ಜಿಲ್ಲಾ ವರಮಾನದಲ್ಲಿ ವಿವಿಧ ವಲಯಗಳ ಸಾಪೇಕ್ಷ ಕಾಣಿಕೆ ಪ್ರಮಾಣವು ತೀವ್ರ ಬದಲಾಗುತ್ತಿದೆ. ಪ್ರಾಥಮಿಕ ವಲಯವು 1990–1991ರಲ್ಲಿ ಅಪಾರ ಕಾಣಿಕೆ ನೀಡುತ್ತಿತ್ತು. ಕಳೆದ ಹದಿನೈದು ವರ್ಷಗಳಲ್ಲಿ (1990–91 ರಿಂದ 2005–06) ಅದರ ಕಾಣಿಕೆ ಕುಸಿದಿದೆ. ಅದರ ಕಾಣಿಕೆಯು 2000–01ರಲ್ಲಿ ಶೇ. 46ರಷ್ಟಿದ್ದಿದು 2001–02ರಲ್ಲಿ ಅದು ಶೇ. 30.8ಕ್ಕೆ ಮತ್ತು 2005–06ರಲ್ಲಿ ಶೇ. 29.57ಕ್ಕೆ ಇಳಿದಿದೆ. ಈ ಜಿಲ್ಲೆಯಲ್ಲಿ ಪ್ರಾಥಮಿಕ ವಲಯವು ನೀಡುತ್ತಿರುವ ಕಾಣಿಕೆಯ ಪ್ರಮಾಣವು ಉತ್ತರ ಕರ್ನಾಟಕದ ಜಿಲ್ಲೆಗಳಾದ ರಾಯಚೂರು (ಶೇ. 41.1), ಬಾಗಲಕೋಟೆ (40), ವಿಜಾಪುರ (ಶೇ. 35.1) ಮತ್ತು ಬಳ್ಳಾರಿ (ಶೇ. 31.9)ಗಳಲ್ಲಿ ಪ್ರಾಥಮಿಕ ವಲಯವು ನೀಡುತ್ತಿರುವ ಕಾಣಿಕೆಗಿಂತ ಕಡಿಮೆಯಿದೆ. ಸಾಪೇಕ್ಷವಾಗಿ ವರಮಾನದ ಮೂಲವು ನಿಧಾನವಾಗಿ ತೃತೀಯ ವಲಯದ ಕಡೆಗೆ 1990–91ರ ನಂತರ ಪಲ್ಲಟವಾಗುತ್ತಿರುವುದನ್ನು ಗುರುತಿಸಲಾಗಿದೆ. ಅದರ ಪಾಲು ಈ ಅವಧಿಯಲ್ಲಿ ಶೇ. 33.8 ರಿಂದ ಶೇ. 48.3ಕ್ಕೆ ಏರಿಕೆಯಾಗಿದೆ. ದ್ವಿತೀಯ ವಲಯದ ಸ್ಥಾನದಲ್ಲಿ ತೀವ್ರ ಬದಲಾವಣೆಗಳಾಗಿಲ್ಲ. ಅದರ ಕಾಣಿಕೆ ಈ ಅವಧಿಯಲ್ಲಿ ಶೇ. 20.2 ರಿಂದ ಶೇ. 21.3ಕ್ಕೆ ಏರಿಕೆಯಾಗಿದೆ. ತೃತೀಯ ವಲಯದ ಕಡೆಗೆ ಉಂಟಾಗಿರುವ ಪಲ್ಲಟವನ್ನು ಬಲಪಡಿಸಬೇಕಾದ ಅವಶ್ಯಕತೆಯಿದೆ. ಅದಕ್ಕಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು, ಅವುಗಳಿಗೆ ಅಗತ್ಯವಾದ ಮಾರುಕಟ್ಟೆ ಸೌಲಭ್ಯ, ಸಾಲದ ಸೌಲಭ್ಯಗಳನ್ನು ನೀಡಬೇಕಾಗುತ್ತದೆ.

ಆಧುನಿಕ ಜೀವನಾಧಾರ ಅವಕಾಶಗಳು ಎರಡು ತಾಲ್ಲೂಕುಗಳಲ್ಲಿ ಉದಯವಾಗುತ್ತಿರುವುದು ಮಾತ್ರ ಕಂಡು ಬಂದಿದೆ. ಈ ತಾಲ್ಲೂಕುಗಳಲ್ಲಿ ಒಟ್ಟು ದುಡಿಮೆಗಾರರಲ್ಲಿ ಇತರೆ ದುಡಿಮೆಗಾರರ ಪ್ರಮಾಣದಿಂದ ಇಲ್ಲಿ ಉಂಟಾಗುತ್ತಿರುವ ಪಲ್ಲಟವನ್ನು ಗುರುತಿಸಬಹುದಾಗಿದೆ. ಇವೆರಡು ತಾಲ್ಲೂಕುಗಳೆಂದರೆ ಗುಲಬರ್ಗಾ ಮತ್ತು ಚಿತ್ತಾಪುರ. ಗುಲಬರ್ಗಾ ತಾಲ್ಲೂಕಿನಲ್ಲಿ ಒಟ್ಟು ದುಡಿಮೆಗಾರರಲ್ಲಿ ಶೇ. 60ರಷ್ಟು ಇತರೆ ದುಡಿಮೆಗಾರರಿದ್ದಾರೆ. ಈ ದುಡಿಮೆಗಾರರು ಕಂಡಿತವಾಗಿ ತೃತೀಯ ವಲಯವನ್ನು ಪ್ರವೇಶಿಸುತ್ತಿದ್ದಾರೆ. ಅಲ್ಲಿ ಹೆಚ್ಚು ವರಮಾನ ಪಡೆಯುವ ಉದ್ಯೋಗಗಳು ದೊರೆಯುತ್ತಿವೆ. ಸೇಡಮ್ ತಾಲ್ಲೂಕಿನಲ್ಲಿ ಕೈಗಾರಿಕಾ ವಲಯವು ಸುಸ್ಥಿರವಾಗಿರುವುದರಿಂದ ಅಲ್ಲಿ ಜನರಿಗೆ ಉತ್ತಮವಾದ ಉದ್ಯೋಗ ಅವಕಾಶಗಳು ದೊರೆಯುತ್ತಿವೆ. ಉಳಿದ ತಾಲ್ಲೂಕುಗಳಲ್ಲಿ ಶೇ. 75 ರಿಂದ 80ರಷ್ಟು ದುಡಿಮೆಗಾರರು ಕೃಷಿಯನ್ನು ಮತ್ತು ತತ್ಸಂಬಂಧಿ ಚಟುವಟಿಕೆಗಳನ್ನು ಅವಲಂಬಿಸಿಕೊಂಡಿದ್ದಾರೆ. ಜಿಲ್ಲೆಯು ಪ್ರಸ್ತುತ ಪ್ರಾಥಮಿಕ ವಲಯವು ಪ್ರಧಾನವಾಗಿರುವ ಜಿಲ್ಲೆಯಾಗಿ ಉಳಿದಿದೆ. ಇಲ್ಲಿ ದುಡಿಮೆಗಾರರಲ್ಲಿ ಶೇ. 67 ರಷ್ಟು ಕೃಷಿಯನ್ನು ಅವಲಂಬಿಸಿಕೊಂಡಿದ್ದಾರೆ. ಜಿಲ್ಲೆಯಲ್ಲಿನ ಪ್ರಧಾನ ದುಡಿಮೆಗಾರರಲ್ಲಿ ಶೇ. 40ರಷ್ಟು ಕೃಷಿ ಕೂಲಿಕಾರರಿದ್ದಾರೆ. ಈ ಕೃಷಿ ಕೂಲಿಕಾರರ ಪ್ರಮಾಣವು 1991ರಲ್ಲಿ ಶೇ. 50ರಷ್ಟಿದ್ದುದು 2001ರಲ್ಲಿ ಶೇ. 40ಕ್ಕೆ ಇಳಿದಿದೆ. ಕಳೆದ ದಶಕದಲ್ಲಿ ಉದ್ಯೋಗಗಳು ಪ್ರಾಥಮಿಕ ವಲಯದಿಂದ ತೃತೀಯ ವಲಯಕ್ಕೆ ಪಲ್ಲಟಗೊಳ್ಳುತ್ತಿದ್ದರೂ ಜಿಲ್ಲೆಯು ಪ್ರಾಥಮಿಕ ವಲಯ ಪ್ರಧಾನ ಆರ್ಥಿಕತೆಯಾಗಿ ಉಳಿದಿದೆ. ತೃತೀಯ ವಲಯದಲ್ಲಿನ ಉದ್ಯೋಗದ ಪ್ರಮಾಣ ಶೇ. 12.6 ರಿಂದ ಶೇ. 30.4 ಕ್ಕೆ ಅಧಿಕಗೊಂಡಿದೆ. ಈ ಜಿಲ್ಲೆಯಲ್ಲಿ ಕೃಷಿ ದುಡಿಮೆಗಾರರಲ್ಲಿ ಬಹಳಷ್ಟು ಮಂದಿ ಬಡತನ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಜಿಲ್ಲೆಯ ಬಹು ಭಾಗ, ಅಂದರೆ ಶೇ. 80 ರಷ್ಟು ಒಣ ಭೂಮಿ ಬೇಸಾಯ ಸ್ವರೂಪದ್ದಾಗಿದೆ. ಅಲ್ಲಿ ಸರಾಸರಿ ವರ್ಷದಲ್ಲಿ ಉದ್ಯೋಗ ದೊರೆಯುವ ದಿನಗಳು 180 ರಿಂದ 200 ದಿನಗಳು ಮೀರುವುದಿಲ್ಲ. ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರ ಕೂಲಿ ದಿನಕ್ಕೆ ರೂ. 50 ರಿಂದ ರೂ. 60 ರಷ್ಟಿದೆ. ಮಹಿಳಾ

ದುಡಿಮೆಗಾರರ ಕೂಲಿ ರೂ. 30 ರಷ್ಟಿದೆ. ಶಹಾಪುರ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ಕೃಷಿ ಕಾರ್ಮಿಕರ ಬದುಕು ಉತ್ತಮವಾಗುತ್ತಿದೆ. ಏಕೆಂದರೆ ಅಲ್ಲಿಗೆ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ನೀರಾವರಿ ಸೌಲಭ್ಯ ದೊರೆತಿದೆ. ಅಲ್ಲಿ ಸರಾಸರಿ ವಾರ್ಷಿಕ ಉದ್ಯೋಗ ದೊರೆಯುವ ದಿನಗಳು 250ಕ್ಕೇರಿದೆ. ಆದರೆ ಅಲ್ಲಿ ಕೂಲಿಮಟ್ಟವು ಏರಿಕೆಯಾಗುತ್ತಿಲ್ಲ. ಇದಕ್ಕೆ ಮುಖ್ಯ ಕಾರಣವೆಂದರೆ ಶ್ರಮಶಕ್ತಿಯ ಏರಿಕೆಯಾದ ಪೂರೈಕೆ. ಇದಕ್ಕೆ ಕಾರಣವಾದ ಸಂಗತಿಗಳೆಂದರೆ ಮಹಿಳೆಯು ದುಡಿಮೆ ಸಹಭಾಗಿತ್ವ ಪ್ರಮಾಣ ಹೆಚ್ಚುತ್ತಿದೆ ಮತ್ತು ಅಂಚಿನ ದುಡಿಮೆಗಾರರು ಶ್ರಮ ಮಾರುಕಟ್ಟೆ ಪ್ರವೇಶಿಸುತ್ತಿದ್ದಾರೆ ಒಟ್ಟಾರೆ ವರಮಾನದಲ್ಲಿನ ಏರಿಕೆಯಿಂದಾಗಿ ಮತ್ತು ಉದ್ಯೋಗದ ಅವಕಾಶಗಳು ವಿಸ್ತರಿಸುತ್ತಿರುವುದರಿಂದಾಗಿ ಕೂಲಿಕಾರರ ಬದುಕು ಉತ್ತಮವಾಗುತ್ತಿದೆ.

ಆದರೆ ಈ ತಾಲ್ಲೂಕುಗಳಲ್ಲಿ ಬಾಲ ಕಾರ್ಮಿಕರ ಪ್ರಮಾಣವು ಅಧಿಕವಾಗುತ್ತಿದೆ. ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣವು ಅಧಿಕವಾಗುತ್ತಿರುವುದು ಇದಕ್ಕೆ ನಿದರ್ಶನವಾಗಿದೆ. ನಾಟಿ ಮತ್ತು ಸುಗ್ಗಿ ಕಾಲದಲ್ಲಿ ಶಾಲಾ ಹಾಜರಾತಿಯು ಅತ್ಯಂತ ಕಡಿಮೆಯಿರುತ್ತದೆ. ಏಕೆಂದರೆ ಮಕ್ಕಳು ಪಾಲಕರ ಜೊತೆಯಲ್ಲಿ ದುಡಿಮೆಗೆ ಸೇರಿಕೊಳ್ಳುತ್ತಾರೆ. ಇದನ್ನು ಸೂಕ್ತ ಕಾರ್ಯಕ್ರಮಗಳ ಮೂಲಕ ತಡೆಗಟ್ಟಬೇಕಾಗಿದೆ.

ಈ ಜಿಲ್ಲೆಯು ಒಣಭೂಮಿ ಬೇಸಾಯ ವ್ಯಾಪಕವಾಗಿರುವ ಪ್ರದೇಶದಲ್ಲಿ ಜನರಿಗೆ ಸಾಕಷ್ಟು ಉದ್ಯೋಗವನ್ನು ಒದಗಿಸುವ ದೃಷ್ಟಿಯಿಂದ ಕೂಲಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾಗಿದೆ. ಕರ್ನಾಟಕ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯು ಅತ್ಯಂತ ವಿಸ್ತೃತವಾದ ಕಾರ್ಯಕ್ರಮವಾಗಿದೆ. ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು. ಜಿಲ್ಲೆಯಲ್ಲಿ ಜಾರಿಯಲ್ಲಿದ್ದ ಎಲ್ಲ ಉದ್ಯೋಗ ಕಾರ್ಯಕ್ರಮಗಳನ್ನು ಎನ್‌ಆರ್‌ಈಜಿಎಸ್ ಕಾರ್ಯಕ್ರಮದಲ್ಲಿ ವಿಲೀನಗೊಳಿಸಲಾಗಿದೆ. ಇದರಿಂದ ಈಗ ಎಲ್ಲ ರೀತಿಯ ಸಹಯೋಗ ಮತ್ತು ಸಹಕಾರ ಸಾಧ್ಯವಾಗುತ್ತದೆ. ದುಡಿಮೆಗಾರರ ವಲಸೆಯನ್ನು ಇದರಿಂದ ತಡೆಗಟ್ಟಬಹುದು ಮತ್ತು ಜನರಿಗೆ ಕನಿಷ್ಠ ಜೀವನಾಧಾರವನ್ನು ಇದರಿಂದ ನೀಡಬಹುದು. ಈ ಜಿಲ್ಲೆಯಲ್ಲಿ ಕೃಷಿ ವಿಸ್ತರಣಾ ಕಾರ್ಯಕ್ರಮವು ತುಂಬಾ ದುರ್ಬಲವಾಗಿದೆ. ಅದನ್ನು, ಅದರಲ್ಲಿ ನೀರಾವರಿ ಪ್ರದೇಶದಲ್ಲಿ ಬಲಪಡಿಸಬೇಕು. ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ರೈತರಿಗೆ ಸೂಕ್ತವಾದ ಬೆಳೆ ಮಾದರಿಯನ್ನು ಅಳವಡಿಸಿಕೊಳ್ಳಲು ಅಗತ್ಯವಾದ ತರಬೇತಿಯನ್ನು, ಸಾವಯವ ಕೃಷಿಯ ಬಗ್ಗೆ ತಿಳುವಳಿಕೆಯನ್ನು, ಸಮಗ್ರ ಕೀಟ ನಿಯಂತ್ರಣ ಕಾರ್ಯಕ್ರಮವನ್ನು, ಕೃಷಿಗೆ ಬಳಸುವ ಎಲ್ಲ ಕಚ್ಚಾ ಸಾಮಗ್ರಿಗಳಾದ ರಸಗೊಬ್ಬರ, ಕೀಟನಾಶಕಗಳ ಸೂಕ್ತ ಬಳಕೆ ಬಗ್ಗೆ ತರಬೇತಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಬೇಕು. ಈ ಬಗೆಯ ತರಬೇತಿಯಲ್ಲಿ ರೈತ ಮಹಿಳೆಯರನ್ನು ತೊಡಗಿಸಬೇಕು. ಏಕೆಂದರೆ ಆಧುನಿಕ ಕೃಷಿಯ ಬಗ್ಗೆ ಅವರಿಗೆ ತಿಳುವಳಿಕೆಯ ಅವಶ್ಯಕತೆಯಿದೆ.

ಈ ಜಿಲ್ಲೆಯಲ್ಲಿ ರೇಷ್ಮೆ ಮತ್ತು ತೋಟಗಾರಿಕೆ ಬೇಸಾಯಕ್ಕೆ ವಿಪುಲ ಅವಕಾಶವಿದೆ. ಇದಕ್ಕೆ ರೈತರಿಗೆ ಸರಿಯಾದ ತರಬೇತಿ ನೀಡಬೇಕು ಮತ್ತು ಅದಕ್ಕೆ ಅಗತ್ಯವಾದ ಶೈತ್ಯಾಗಾರಗಳನ್ನು ಒದಗಿಸಬೇಕು. ಇಂತಹ ಕಾರ್ಯಕ್ರಮಗಳಿಂದ ರೈತರ ವರಮಾನದ ಮಟ್ಟವನ್ನು ಹೆಚ್ಚಿಸುವುದು ಸಾಧ್ಯ.

ವಿವಿಧ ಕಾರ್ಯತಂತ್ರಗಳಡಿಯಲ್ಲಿ ಜಿಲ್ಲೆಯೊಳಗೆ ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಇದರಿಂದ ಮಣ್ಣಿನ ಸವಕಳಿಯನ್ನು ತಡೆಗಟ್ಟಬಹುದು ಮತ್ತು ಅಂತರ್ಜಲ ಮಟ್ಟವನ್ನು ಕಾಯ್ದುಕೊಳ್ಳಬಹುದು. ಇದು ಒಣ ಭೂಮಿ ಬೇಸಾಯ ಪ್ರದೇಶದಲ್ಲಿ ಹೆಚ್ಚು ಉಪಯುಕ್ತವಾದುದಾಗಿದೆ. ಜಿಲ್ಲೆಯಲ್ಲಿ ಇದನ್ನು ಹೆಚ್ಚು ಸಶಕ್ತಗೊಳಿಸಬೇಕಾಗಿದೆ.

## ಕುಡಿಯುವ ನೀರು, ನೈರ್ಮಲ್ಯ ಮತ್ತು ವಸತಿ

ಬಡವರಿಗಾಗಿ ರೂಪಿಸಿರುವ ಅನೇಕ ವಸತಿ ಕಾರ್ಯಕ್ರಮಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸುತ್ತಿರುವುದರಿಂದ ಇಲ್ಲಿ ವಸತಿ ಸ್ಥಿತಿಯು ಸ್ವಲ್ಪಮಟ್ಟಿಗೆ ಸುಧಾರಿಸುತ್ತಿದೆ. ಬ್ಯಾಂಕುಗಳು ಅತ್ಯಂತ ಉದ್ಧಾರವಾಗಿ ಸಾಲ ಸೌಲಭ್ಯವನ್ನು ಒದಗಿಸುತ್ತಿರುವುದರಿಂದ

ಕೆಳಮಧ್ಯಮ ವರ್ಗದವರು ವಸತಿ ಸೌಲಭ್ಯವನ್ನು ಸುಲಭವಾಗಿ ಪಡೆಯುವುದು ಸಾಧ್ಯವಾಗಿದೆ. ಆದರೂ ಸ್ಥಿತಿಯು ಹೇಳಿಕೊಳ್ಳುವಂತಿಲ್ಲ. ಮನೆಗಳ ಸ್ಥಿತಿಯು ಅಫಜಲಪುರ, ಜೇವರ್ಗಿ, ಶಹಾಪುರ, ಶೋರಾಪುರ, ತಾಲ್ಲೂಕುಗಳಲ್ಲಿ ಅತ್ಯಂತ ಶಿಥಿಲಾವಸ್ಥೆಯಲ್ಲಿದೆ. ಶಹಾಪುರ ಮತ್ತು ಶೋರಾಪುರ ತಾಲ್ಲೂಕುಗಳಲ್ಲಿ ತಾತ್ಕಾಲಿಕ ಸ್ವರೂಪದ ಮನೆಗಳಲ್ಲಿ ವಾಸಿಸುವ ಕುಟುಂಬಗಳ ಪ್ರಮಾಣವು ಅಧಿಕವಾಗುತ್ತಿದೆ. ಮುಂದಿನ ವರ್ಷಗಳಲ್ಲಿ ಈ ತಾಲ್ಲೂಕುಗಳಿಗೆ ಹೆಚ್ಚಿನ ಗಮನ ನೀಡುವ ಅವಶ್ಯಕತೆಯಿದೆ. ಮನೆಗಳ ಗುಣಮಟ್ಟವು ಅತ್ಯಂತ ಕೀಳಾಗಿದೆ. ಇದರ ಬಗ್ಗೆ ಸೂಕ್ತವಾಗಿ ನಿಗಾವಹಿಸಬೇಕು. ವಾಸಿಸಲು ಯೋಗ್ಯವಾದ ಮನೆಗಳನ್ನು ಕಟ್ಟುವಂತೆ ಒತ್ತಡ ತರಬೇಕು. ಗೃಹ ನಿರ್ಮಾಣ ಕಾರ್ಪೋರೇಶನ್ ಇದರ ಬಗ್ಗೆ ಗಮನಹರಿಸಬೇಕು. ಮನೆಗಳಲ್ಲಿ ಕನಿಷ್ಠ ಸೌಲಭ್ಯಗಳಾದ ನೀರು, ವಿದ್ಯುಚ್ಛಕ್ತಿ ಹಾಗೂ ಅನುಕೂಲಕರವಾದ ರಸ್ತೆ ಮುಂತಾದವುಗಳನ್ನು ಒದಗಿಸಬೇಕು. ಈ ಯೋಜನೆಯನ್ನು ಜನರ ಸಹಭಾಗಿತ್ವದಲ್ಲಿ ಕೈಗೊಳ್ಳುವುದರಿಂದ ಮನೆಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದು ಸಾಧ್ಯವಾಗುತ್ತದೆ. ಸ್ಥಳೀಯರ ಸಹಕಾರದೊಂದಿಗೆ ಮತ್ತು ಸ್ಥಳೀಯವಾದ ಸಂಘ ಸಂಸ್ಥೆಗಳೊಂದಿಗೆ ಪಂಚಾಯಿತಿ ಮಟ್ಟದಲ್ಲಿ ಮನೆಗಳನ್ನು ಕಟ್ಟುವ ಸ್ಥಳವನ್ನು ಗುರುತಿಸುವುದು, ಫಲಾನುಭವಿಗಳ ಆಯ್ಕೆ ಮತ್ತು ನಿರ್ಮಾಣದ ಉಸ್ತುವಾರಿ ನಡೆಯಬೇಕು. ಈ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಸಾಧಿಸಿಕೊಳ್ಳಬೇಕು.

ಕುಡಿಯುವ ನೀರಿನ ಲಭ್ಯತೆಯನ್ನು ಉತ್ತಮಪಡಿಸಬೇಕಾಗಿದೆ. ಮುಖ್ಯವಾಗಿ ಚಿತ್ತಾಪುರ, ಜೇವರ್ಗಿ, ಶಹಾಪುರ, ಶೋರಾಪುರ ತಾಲ್ಲೂಕುಗಳಲ್ಲಿ ಸಧ್ಯ ನೀರನ್ನು ಸುಮಾರು 500 ಮೀಟರುಗಳಿಂದ ತರಬೇಕಾಗಿದೆ. ಅನೇಕ ಗ್ರಾಮೀಣ ನೀರು ಸರಬರಾಜು ಯೋಜನೆಗಳು ದುರಸ್ತಿಯಲ್ಲಿವೆ. ಅವುಗಳ ರಿಪೇರಿಯನ್ನು ಶೀಘ್ರವಾಗಿ ನಡೆಸಬೇಕಾಗಿದೆ. ಈ ಯೋಜನೆಗಳಲ್ಲಿಯೇ ಅದರ ನಿರ್ವಹಣೆಗಾಗಿ ಸಾಕಷ್ಟು ಹಣಕಾಸು ಮೊತ್ತವನ್ನು ಮೀಸಲಿಡಬೇಕು. ಉಪಯೋಗಕ್ಕೆ ಬಾರದ ಯೋಜನೆಗಳನ್ನು ತೆಗೆದುಹಾಕಬೇಕು. ಕುಡಿಯುವ ನೀರಿನ ನಿರ್ವಹಣೆಯನ್ನು ಗ್ರಾಮ ಪಂಚಾಯಿತಿಗಳು ತಮ್ಮ ವಶಪಡಿಸಿಕೊಳ್ಳಬೇಕು. ಈ ಯೋಜನೆಗಳ ಅನುಷ್ಠಾನದಲ್ಲಿ ಜನರ ಸಹಭಾಗಿತ್ವಕ್ಕೆ ಹೆಚ್ಚು ಒತ್ತು ನೀಡಬೇಕು. ತಪ್ಪು ಯೋಜನೆಯಿಂದಾಗುವ ಹಾನಿಯನ್ನು ತಡೆಗಟ್ಟಬೇಕು. ಜಿಲ್ಲೆಯಲ್ಲಿ ನೈರ್ಮಲ್ಯದ ಸ್ಥಿತಿಯು ಅತ್ಯಂತ ಗಂಭೀರವಾಗಿದೆ. ಈ ದಿಶೆಯಲ್ಲಿ ಗಮನ ಜೇವರ್ಗಿ, ಅಳಂದ್, ಚಿಂಚೋಳಿ, ಚಿತ್ತಾಪುರ, ಗುಲಬರ್ಗಾ, ಯಾದ್‌ಗೀರ್ ತಾಲ್ಲೂಕುಗಳಿಗೆ ಹೆಚ್ಚು ಗಮನಹರಿಸಬೇಕಾಗಿದೆ. ಗ್ರಾಮೀಣ ಜನರಲ್ಲಿ ಆರೋಗ್ಯದ ಬಗ್ಗೆ, ನೈರ್ಮಲ್ಯದ ಬಗ್ಗೆ, ಮತ್ತು ಶೌಚಾಲಯಗಳ ಬಳಕೆ ಬಗ್ಗೆ ಜಾಗೃತಿಯನ್ನು ಮೂಡಿಸಬೇಕಾಗಿದೆ. ಸಂಪೂರ್ಣ ನೈರ್ಮಲ್ಯ ಆಂದೋಲನದಲ್ಲಿ ಎನ್‌ಜಿಒಗಳನ್ನು ಮತ್ತು ಸ್ಥಳೀಯ ಸಂಘ ಸಂಸ್ಥೆಗಳನ್ನು ತೊಡಗಿಸಿಕೊಳ್ಳಬೇಕಾಗಿದೆ.

## ಆಡಳಿತ ಪರಿಪಾಲನೆ ಮತ್ತು ಸೇವೆ ನೀಡುವ ಕ್ರಮ

ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಅಗತ್ಯವಾದ ಎರಡು ಸಂಗತಿಗಳೆಂದರೆ ಆದರ್ಶ ಆಡಳಿತ ಪರಿಪಾಲನೆ ಮತ್ತು ಸೇವೆಯನ್ನು ಜನರಿಗೆ ಉತ್ತಮವಾಗಿ ಒದಗಿಸುವುದು. ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ನಾವು ಮೊದಲು ತಳಮಟ್ಟದಲ್ಲಿ ಜನರ ಅಗತ್ಯಗಳನ್ನು ಗುರುತಿಸಬೇಕು, ಜನರ ಆದ್ಯತೆಗಳನ್ನು ಕಂಡುಕೊಳ್ಳಬೇಕು. ಸಮಾಜದಲ್ಲಿ 'ಅಪಾರ ಜನರ ಅಗಾಧ ಒಳಿತ'ನ್ನು ಸಾಧಿಸಿಕೊಳ್ಳುವ ಗುರಿಯಿಟ್ಟುಕೊಂಡು ಅಭಿವೃದ್ಧಿ ಕಾರ್ಯಕ್ರಮಗಳನ್ನು ಉತ್ತಮವಾಗಿ ಅನುಷ್ಠಾನಗೊಳಿಸಬೇಕು. ಆದರ್ಶ ಆಡಳಿತ ಪರಿಪಾಲನೆಯೆಂಬುದು ಉತ್ತಮವಾದ ಯೋಜನೆಯನ್ನು ಸಿದ್ಧಪಡಿಸಲು ಮತ್ತು ಸೇವೆಯನ್ನು ಜನರಿಗೆ ಉತ್ತಮವಾಗಿ ಒದಗಿಸಲು ಅನುವು ಮಾಡಿಕೊಡುತ್ತದೆ. ಜನರು ಉತ್ತಮವಾದ ಜೀವನ ನಡೆಸಲು ಅಗತ್ಯವಾದ ಆಯ್ಕೆಗಳನ್ನು ಮಾಡುವುದು ಇಲ್ಲಿ ಸರಳವಾಗುತ್ತದೆ.

ಜಿಲ್ಲೆಯಲ್ಲಿ ಸಂಘಟಿತವಾದ ಸ್ಥಳೀಯ ಸ್ವಯಂ ಆಡಳಿತ ವ್ಯವಸ್ಥೆಯು ಅಸ್ತಿತ್ವದಲ್ಲಿದೆ. ಆದರೆ ಆಡಳಿತದಲ್ಲಿ ಜನರ ಸಹಭಾಗಿತ್ವವು ತೃಪ್ತಿಕರವಾಗಿಲ್ಲ. ಅನಕ್ಷರತೆ ಮತ್ತು ಜಾತಿ ಆಧಾರಿತ ಸಾಮಾಜಿಕ ರಚನೆಯಿಂದಾಗಿ

ಮೇಲ್ವರ್ಗವು ತಳಮಟ್ಟದಲ್ಲಿರುವ ಬಡವರನ್ನು 'ಅಧಿಕಾರ'ದಿಂದ ದೂರವಿಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಇದರಿಂದಾಗಿ ಯೋಜನೆ ಮತ್ತು ಅದರ ಅನುಷ್ಠಾನ ಅತ್ಯಂತ ಮಂದಗತಿಯಲ್ಲಿ ನಡೆಯುತ್ತದೆ. ಸೇವೆಯನ್ನು ಜನರಿಗೆ ಒದಗಿಸುವ ಕ್ರಮವು ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ. ಪ್ರಾಥಮಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ, ಕುಡಿಯುವ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಅತ್ಯಂತ ದುಸ್ಥಿತಿಯಲ್ಲಿದೆ. ಬಡತನ ನಿವಾರಣಾ ಕಾರ್ಯಕ್ರಮದ ಅನುಷ್ಠಾನವು ಸಮರ್ಪಕವಾಗಿ ನಡೆಯುತ್ತಿಲ್ಲ. ಅದಕ್ಷತೆ ಮತ್ತು ನಿರ್ಲಕ್ಷ್ಯ ಇವು ಆಡಳಿತ ವ್ಯವಸ್ಥೆಯು ಶಿಥಿಲಗೊಳ್ಳಲು ಕಾರಣಗಳಾಗಿವೆ. ಇದರಿಂದಾಗಿ ಜನರಿಗೆ ಅಗತ್ಯವಾದ ಸಂಗತಿಗಳನ್ನು ಆದ್ಯತೆಯ ಮೇಲೆ ಶೀಘ್ರವಾಗಿ ಮತ್ತು ಶಿಸ್ತಿನಿಂದ ಒದಗಿಸುವುದು ಸಾಧ್ಯವಾಗುತ್ತಿಲ್ಲ.

ತಳಮಟ್ಟದಲ್ಲಿ ಆಡಳಿತದಲ್ಲಿ ಜನರ ಸಹಭಾಗಿತ್ವವನ್ನು ಉತ್ತಮಪಡಿಸಲು ಮಾಹಿತಿ, ಶಿಕ್ಷಣ, ಸಂವಹನ ಮತ್ತು ಜಾಗೃತಿಗಳನ್ನೊಳಗೊಂಡಂತೆ ಜನರ ಸಾಮರ್ಥ್ಯವನ್ನು ನಿರ್ಮಿಸುವ ಕೆಲಸ ನಡೆಯಬೇಕು. ಮತ್ತು ಜನರಿಗೆ ಯೋಜನೆಯನ್ನು ಸಿದ್ಧಪಡಿಸುವ, ಅನುಷ್ಠಾನಗೊಳಿಸುವ ಮತ್ತು ಅದರ ಉಸ್ತುವಾರಿ ನೋಡಿಕೊಳ್ಳುವ ವಿಷಯದಲ್ಲಿ ತರಬೇತಿಯನ್ನು ಜನರಿಗೆ ನೀಡಬೇಕಾಗುತ್ತದೆ. ಯೋಜನಾ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ 'ಹಿಂದುಳಿದ ಪ್ರದೇಶ ಅನುದಾನ ನಿಧಿ' (ಬಿಆರ್‌ಜಿಎಫ್) ಕಾರ್ಯಕ್ರಮದಲ್ಲಿ ಸಾಮರ್ಥ್ಯ ನಿರ್ಮಿಸುವ ಸಂಗತಿಗೆ ವಿಶೇಷ ಅವಕಾಶವಿದೆ. ಗ್ರಾಮ ಪಂಚಾಯಿತಿಗಳಿಗೆ ಅಗತ್ಯವಾದ ಯೋಜನೆಗಳನ್ನು ಜನರು ರೂಪಿಸಲು ಬೇಕಾದ ಕುಶಲತೆಯನ್ನು ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದ ಮೂಲಕ ಒದಗಿಸಬಹುದಾಗಿದೆ.

ಜನರಿಗೆ ಸೇವೆ ನೀಡುವ ವ್ಯವಸ್ಥೆಯನ್ನು ಉತ್ತಮಪಡಿಸಲು ಅದಕ್ಷತೆಯನ್ನು ಸಾಮಾಜಿಕ ಉತ್ತರಧಾಯಿತ್ವದ ಮೂಲಕ ಮತ್ತು ಕಠಿಣವಾದ ಶಿಕ್ಷೆ ವಿಧಿಸುವ ಮೂಲಕ ಹತ್ತಿಕ್ಕುವುದಕ್ಕೆ ಪ್ರಯತ್ನಿಸಬೇಕಾಗಿದೆ. ಶಿಕ್ಷಣ, ಆರೋಗ್ಯ ಮತ್ತು ಬಡತನ ನಿವಾರಣೆ ಮುಂತಾದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸರ್ಕಾರೇತರ ಸಂಘಟನೆಗಳು ಮಧ್ಯ ಪ್ರವೇಶಿಸುತ್ತಿರುವುದರಿಂದ ಜನರಿಗೆ ಸೇವೆ ಒದಗುವ ಪರಿಯಲ್ಲಿ ಸಾಕಷ್ಟು ಸುಧಾರಣೆ ಉಂಟಾಗಿದೆ. ಅವು ಜನರಲ್ಲಿ ಜಾಗೃತಿಯನ್ನು ಉಂಟು ಮಾಡುತ್ತಿವೆ ಮತ್ತು ಬಡಜನರ ಸ್ವಸಹಾಯ ಗುಂಪುಗಳನ್ನು ಅವು ಸಂಘಟಿಸುತ್ತಿವೆ. ಅನೇಕ ಸ್ವಯಂ ಸೇವಾ ಸಂಸ್ಥೆಗಳು ಜನರ ಸಂಘಟನೆಗಳನ್ನು ಕಟ್ಟುವುದರ ಮೂಲಕ ಸೇವಾ ಸೌಲಭ್ಯಗಳು ಜನರಿಗೆ ಒದಗುವಂತೆ ಮಾಡುವ ಕ್ರಮದ ಮೇಲೆ ಅವು ನಿಗಾ ಇಡುತ್ತಿವೆ ಹಾಗೂ ಬಡಜನರ ಹಿತಾಸಕ್ತಿಗಳನ್ನು ಸಂರಕ್ಷಿಸುವ ಮತ್ತು ಪೋಷಿಸುವ ಕೆಲಸವನ್ನು ಮಾಡುತ್ತಿವೆ. ಆದರೆ ಅವುಗಳ ಕಾರ್ಯವ್ಯಾಪ್ತಿಯು ತುಂಬಾ ಸಿಮೀತವಾದುದು ಮತ್ತು ಅವುಗಳ ಪರಿಣಾಮಗಳು ಬಹಳ ಕಾಲ ಹಸಿರಾಗಿರುವುದಿಲ್ಲ. ಕೆಲವು ಸಂಸ್ಥೆಗಳು ತಮ್ಮ ಉದ್ದೇಶಗಳಿಗೆ ಬದ್ಧವಾಗಿರುವುದಿಲ್ಲ. ಈ ಸಂಸ್ಥೆಗಳು ತಮ್ಮ ಕಾರ್ಯ ವ್ಯಾಪ್ತಿಯನ್ನು ವಿಸ್ತೃತಗೊಳಿಸಬೇಕು ಮತ್ತು ಮಾನವ ಅಭಿವೃದ್ಧಿಯನ್ನು ಸಾಧಿಸುವ ದಿಶೆಯಲ್ಲಿ ಅವಿರತ ಶ್ರಮಿಸಬೇಕು. ಈ ಸಂಸ್ಥೆಗಳನ್ನು ಬಲಪಡಿಸುವುದರಿಂದ ಜಿಲ್ಲೆಯಲ್ಲಿ ಮಾನವ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ಅಗತ್ಯವಾದ ವಾತಾವರಣ ಉಂಟಾಗುವ ಸಾಧ್ಯತೆಯಿದೆ.

## ಸಾಮಾಜಿಕ, ಲಿಂಗಸಂಬಂಧಿ ಮತ್ತು ಪ್ರಾದೇಶಿಕ ಅಸಮಾನತೆಗಳ ನಿವಾರಣೆ

### ಮಾನವ ಅಭಿವೃದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆ

ಇಡೀ ರಾಜ್ಯದಲ್ಲಿ ಮಾನವ ಅಭಿವೃದ್ಧಿಯಲ್ಲಿ ಅತ್ಯಂತ ಕೆಳಮಟ್ಟದಲ್ಲಿರುವ ಕೆಲವು ಜಿಲ್ಲೆಗಳ ಪೈಕಿ ಗುಲಬರ್ಗಾ ಒಂದಾಗಿದೆ. ಆದರೆ ಜಿಲ್ಲೆಯೊಳಗೆ ಪರಿಸ್ಥಿತಿಯು ಏಕರೂಪಿಯಾಗಿಲ್ಲ. ಜಿಲ್ಲೆಯಲ್ಲಿ ತಾಲ್ಲೂಕುಗಳ ನಡುವೆ ಅಂತರಗಳಿವೆ ಮತ್ತು ನಗರ–ಗ್ರಾಮೀಣ ಅಂತರಗಳು ಉಲ್ಬಣಗೊಳ್ಳುತ್ತಿವೆ. ಸಾಕ್ಷರತೆಯಲ್ಲಿ ಗುಲಬರ್ಗಾ ತಾಲ್ಲೂಕು ಅತ್ಯಂತ ಮುಂದುವರಿದಿದೆ. ಅವರ ನಂತರ ಸ್ಥಾನದಲ್ಲಿ ಅಳಂದ್, ಅಫಜಲಪುರ್ ಮತ್ತು ಚಿತ್ತಾಪುರ ಬರುತ್ತವೆ. ಕೆಳಮಟ್ಟದಲ್ಲಿರುವ ತಾಲ್ಲೂಕುಗಳೆಂದರೆ ಜೇವರ್ಗಿ, ಸೇಡಮ್,

ಶಹಾಪುರ, ಶೋರಾಪುರ ಮತ್ತು ಯಾದಗೀರ್. ಈ ತಾಲ್ಲೂಕುಗಳಲ್ಲಿ ಸಾಕ್ಷರತೆಯ ಬೆಳವಣಿಗೆ ಪ್ರಮಾಣವು ಅತ್ಯಂತ ಮಂದವಾಗಿದೆ. ಇಲ್ಲಿ ತಾಂಡಾಗಳಲ್ಲಿ ಮತ್ತು ಕ್ಯಾಂಪುಗಳಲ್ಲಿ ವಾಸಿಸುವ ಮಕ್ಕಳಿಗಾಗಿ ಗುಣಮಟ್ಟವನ್ನು ಬಲಿಕೊಡದ ರೀತಿಯಲ್ಲಿ ಬೇರೆ ಬಗೆಯ ಶಾಲೆಗಳನ್ನು ತೆರೆದು ಅವರ ಶಿಕ್ಷಣದ ಅವಶ್ಯಕತೆಯನ್ನು ಪೂರೈಸಬೇಕು. ಈ ಬಗೆಯ ವಿಶೇಷ ಶಾಲೆಗಳಲ್ಲಿ ಕಲಿತ ಮಕ್ಕಳನ್ನು ಪ್ರಧಾನ ಶಾಲಾ ಧಾರೆಗೆ ಸೇರಿಸುವಂತಾಗಬೇಕು.

ಈ ತಾಲ್ಲೂಕುಗಳ ಗ್ರಾಮೀಣ ಭಾಗದಲ್ಲಿ ಆರೋಗ್ಯ ಸೌಲಭ್ಯ ಸಾಕಷ್ಟು ದೊರೆಯುತ್ತಿಲ್ಲ ಮತ್ತು ಅವು ಜನರಿಗೆ ದೊರೆಯುತ್ತಿಲ್ಲ. ಜನರು ಆರೋಗ್ಯ ಸೇವೆಗಾಗಿ ಆರ್.ಎಮ್.ಪಿ. (ನೊಂದಾಯಿಸಿದ ವೈದ್ಯಕೀಯ ನಡೆಸುವವರು) ಗಳನ್ನು ಅವಲಂಬಿಸಿದ್ದಾರೆ. ಏಕೆಂದರೆ ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ದೂರದಲ್ಲಿರುತ್ತವೆ ಅಥವಾ ಅಲ್ಲಿ ವೈದ್ಯರು ಲಭ್ಯವಿರುವುದಿಲ್ಲ. ನಗರ ಮತ್ತು ಗ್ರಾಮೀಣಗಳ ನಡುವಿನ ಆರೋಗ್ಯಕ್ಕೆ ಸಂಬಂಧಿಸಿದ ಅಂತರವನ್ನು ಕಡಿಮೆ ಮಾಡಬೇಕಾಗಿದೆ. ಅದಕ್ಕಾಗಿ ಗ್ರಾಮೀಣ ಭಾಗಗಳಲ್ಲಿ ವೈದ್ಯಕೀಯ ಸೌಲಭ್ಯ ದೊರೆಯುವಂತೆ ಮಾಡಬೇಕಾಗಿದೆ.

## ಲಿಂಗಸಂಬಂಧಗಳು

ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಲಿಂಗ ಸಂಬಂಧಿ ಅಸಮಾನತೆಗಳು ಗುಲಬರ್ಗಾ ಜಿಲ್ಲೆಯಲ್ಲಿ ಕಣ್ಣಿಗೆ ದಟ್ಟವಾಗಿ ಗೋಚರಿಸುತ್ತವೆ. ಅವರ ಸಾಕ್ಷರತೆ, ಅವರ ವರಮಾನದ ಮಟ್ಟ ಮತ್ತು ಅವರಿಗೆ ದೊರೆಯುತ್ತಿರುವ ಆರೋಗ್ಯ ಸೌಲಭ್ಯದಿಂದ ಅಲ್ಲಿರುವ ಅಸಮಾನತೆಯ ತೀವ್ರತೆಯನ್ನು ತಿಳಿದುಕೊಳ್ಳಬಹುದು. ಈ ಬಗೆಯ ಅಂತರ ಉಂಟಾಗಲು ಜಿಲ್ಲೆಯಲ್ಲಿರುವ ಬಲವಾದ ಪುರುಷಶಾಹಿ ಮೌಲ್ಯಗಳಿಂದ ಎಂಬುದು ಸ್ಪಷ್ಟವಾಗಿದೆ. ಈ ಲಿಂಗಸಂಬಂಧಿ ಅಸಮಾನತೆಗಳು ಕುಟುಂಬ ಮಟ್ಟದಲ್ಲಿ ಮತ್ತು ಸಾಮಾಜಿಕ ಮಟ್ಟದಲ್ಲಿ ಸಂಪನ್ಮೂಲಗಳನ್ನು ಪುರುಷರಿಗೆ ಮತ್ತು ಮಹಿಳೆಯರಿಗೆ ಹಂಚುವುದರಲ್ಲಿ ತಾರತಮ್ಯ ಕಂಡು ಬರುತ್ತದೆ. ಕುಟುಂಬದಲ್ಲಿ ಮಹಿಳೆಯರ ಸ್ಥಾನಮಾನ ಕೆಳಮಟ್ಟದಲ್ಲಿರುವುದರಿಂದ ಅವರು ಶಿಕ್ಷಣ, ಆಹಾರ, ಪೌಷ್ಟಿಕತೆ ಮತ್ತು ವರಮಾನದ ಮೂಲಕ್ಕೆ ಸಂಬಂಧಿಸಿದಂತೆ ತಾರತಮ್ಯವನ್ನು ಎದುರಿಸಬೇಕಾಗಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣದ ಸೌಲಭ್ಯ ದೊರೆಯುವುದಿಲ್ಲ ಮತ್ತು ಅವರ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲು ಅವಕಾಶಗಳು ಕಡಿಮೆ. ಕುಟುಂಬದ ಸದಸ್ಯರನ್ನು, ಮುಖ್ಯವಾಗಿ ಅಲ್ಲಿನ ಪುರುಷರನ್ನು ಸೇವೆ ಮಾಡುವುದು ಮಹಿಳೆಯರ ಪ್ರಧಾನ ಕಾರ್ಯಭಾರವೆಂಬ ಮೌಲ್ಯವನ್ನು ಪುರುಷಶಾಹಿಯು ಬಿತ್ತಿಬಿಟ್ಟಿದೆ. ಕೆಳಜಾತಿಗಳಲ್ಲಿ, ಕೆಳ ವರಮಾನ ಪಡೆಯುತ್ತಿರುವ ಕುಟುಂಬಗಳಲ್ಲಿ ಹಾಗೂ ಮಧ್ಯಮ ದರ್ಜೆ ಕುಟುಂಬಗಳಲ್ಲಿ ಮಹಿಳೆಯರು ಲೈಂಗಿಕ ದೌರ್ಜನ್ಯಕ್ಕೆ ಬಲಿಪಶುಗಳಾಗುತ್ತಾರೆ.

ಮಹಿಳೆಯರಿಗೆ ಭೂಮಿಯ ಮಾಲೀಕತ್ವ ಇಲ್ಲವೆ ಇಲ್ಲವೆಂದರೆ ತಪ್ಪೇನಿಲ್ಲ. ಇದರಿಂದಾಗಿ ಮಹಿಳಾ ಸಾಗುವಳಿದಾರರ ಸಂಖ್ಯೆ ಬಹಳ ಕಡಿಮೆ. ಎಲ್ಲ ಜಾತಿಗಳಲ್ಲೂ ಮಹಿಳೆಯರು ಕೃಷಿ ಕೂಲಿಕಾರರಾಗಿ ದುಡಿಮೆ ಮಾಡುತ್ತಿದ್ದಾರೆ. ಇಲ್ಲಿಯೂ ಅವರು ಕೂಲಿ ತಾರತಮ್ಯದಿಂದ ಮತ್ತು ಕಡಿಮೆ ಕೂಲಿಯಂತಹ ಶೋಷಣೆಯಿಂದ ನರಳುತ್ತಿದ್ದಾರೆ. ಶಿಕ್ಷಣ ಮತ್ತು ತಾಂತ್ರಿಕ ತರಬೇತಿ ಇಲ್ಲದಿರುವುದರಿಂದ ಅವರಿಗೆ ದ್ವಿತೀಯ ಮತ್ತು ತೃತೀಯ ವಲಯಗಳಲ್ಲಿ ಉದ್ಯೋಗ ದೊರೆಯುವುದು ಕಷ್ಟ. ಏಕೆಂದರೆ ಸಣ್ಣ ಪ್ರಮಾಣದ ವ್ಯಾಪಾರ–ವ್ಯವಹಾರಗಳಲ್ಲೂ ಇವರು ಇಲ್ಲ. ಜಿಲ್ಲಾ ಆರ್ಥಿಕತೆಯು ಬೆಳೆಯುತ್ತಿದ್ದರೂ ಬಡ ಮಹಿಳೆಯರ ಬದುಕು ಅವರ ವರಮಾನದ ಮಟ್ಟವು ಉತ್ತಮ ಆಗುತ್ತಿಲ್ಲ.

ಪುರುಷಶಾಹಿಯಿಂದಾಗಿ ಉಂಟಾಗಿರುವ ಮತ್ತೊಂದು ಪರಿಣಾಮವೆಂದರೆ ಮಹಿಳೆಯರಲ್ಲಿ ಕಂಡು ಬರುವ ಅತಿಯಾದ ಅಪೌಷ್ಟಿಕತೆ ಮತ್ತು ಅನಾರೋಗ್ಯ. ಅವರಿಗೆ ಉತ್ತಮವಾದ ಮತ್ತು ಆರೋಗ್ಯಕಾರಿಯಾದ ಆಹಾರ ದೊರೆಯುತ್ತಿಲ್ಲ ಮತ್ತು ಆರೋಗ್ಯ ಸೌಲಭ್ಯವೂ ದೊರೆಯುತ್ತಿಲ್ಲ. ಏಕೆಂದರೆ ಕುಟುಂಬದೊಳಗೆ ಪುರುಷರಿಗೆ ಇರುವಷ್ಟು ಮನ್ನಣೆ ಮತ್ತು ಮರ್ಯಾದೆ ಮಹಿಳೆಯರಿಗಿಲ್ಲ.

ಕೆಳ ವರಮಾನದ ಮತ್ತು ಕೆಳ ಜಾತಿಯ ಮಹಿಳೆಯರು ಎರಡು ರೀತಿಯ ದುಡಿಮೆಯನ್ನು ನಿಭಾಯಿಸಬೇಕಾಗಿದೆ. ಅವರು ಮನೆಯಲ್ಲಿ ಮನೆಕೆಲಸವನ್ನು ನಿರ್ವಹಿಸಬೇಕಾಗಿದೆ ಮತ್ತು ಮನೆ ಹೊರಗೆ ಉತ್ಪಾದನಾ ದುಡಿಮೆಯನ್ನು ನಿಭಾಯಿಸಬೇಕಾಗಿದೆ. ಅವರು ಬಹು ದೂರ ಪ್ರಯಾಣ ಮಾಡಿ ನೀರು ಮತ್ತು ಉರುವಲನ್ನು ಸಂಗ್ರಹಿಸಬೇಕಾಗಿದೆ. ಮಕ್ಕಳನ್ನು ಪೋಷಿಸುತ್ತಲೇ ಮನೆವಾರ್ತೆಯನ್ನು ನಿರ್ವಹಿಸಬೇಕಾಗಿದೆ. ಈ ಎಲ್ಲ ಸಂಗತಿಗಳು ಅವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಮಹಿಳೆಯರ ಅಭಿವೃದ್ಧಿಗಾಗಿ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅದರೆ ಅವು ಸಾಕಾಗುವುದಿಲ್ಲ ಮತ್ತು ಅವರುಗಳ ಅನುಷ್ಠಾನ ಸಮರ್ಪಕವಾಗಿ ನಡೆಯುತ್ತಿಲ್ಲ. ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ನೀತಿ–ಕಾರ್ಯಕ್ರಮಗಳ ಪಾತ್ರ ಅಗತ್ಯವಾಗಿದೆ. ಅಂತಹ ಒಂದು ಕ್ಷೇತ್ರವೆಂದರೆ ಶಿಕ್ಷಣವನ್ನು ಪಡೆದುಕೊಳ್ಳುವ ಸೌಲಭ್ಯ. ಅದಕ್ಕಾಗಿ ಮಹಿಳೆಯರ ಶಾಲಾ ದಾಖಲಾತಿಯನ್ನು ಉತ್ತಮಪಡಿಸಬೇಕಾಗಿದೆ. ಮಹಿಳೆಯರ ದಾಖಲಾತಿ ಉನ್ನತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅತ್ಯಂತ ಕೆಳಮಟ್ಟದಲ್ಲಿದೆ. ಈ ಬಗೆಯ ಶಿಕ್ಷಣ ಪಡೆಯಲು ಅಪಾರ ಸಂಪನ್ಮೂಲ ಬೇಕಾಗುತ್ತದೆ. ಉನ್ನತ ಶಿಕ್ಷಣದಲ್ಲಿ ಮತ್ತು ತಾಂತ್ರಿಕ ಶಿಕ್ಷಣದಲ್ಲಿ ಶುಲ್ಕದ ಪ್ರಮಾಣವನ್ನು ವಿಪರೀತವಾಗಿ ದುಬಾರಿಯಾಗಿರುವುದರಿಂದ ಬಡ ಕುಟುಂಬಗಳ ಬಾಲಕಿಯರಿಗೆ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಶಿಕ್ಷಣ ಪಡೆಯುವುದು ದುರ್ಬಲವಾಗುತ್ತಿದೆ. ಆದ್ದರಿಂದ ಮಹಿಳೆಯರ ಶಿಕ್ಷಣವನ್ನು ಆದ್ಯತೆಯ ಮೇಲೆ ಶಿಕ್ಷಣ ವೇತನವನ್ನು ಅಧಿಕ ಪ್ರಮಾಣದಲ್ಲಿ ನೀಡಬಹುದಾಗಿದೆ.

ಬಾಲಕಿಯರಿಗಾಗಿ ಪ್ರತ್ಯೇಕ ಪ್ರೌಢಶಾಲೆಗಳನ್ನು ಪ್ರತಿ ತಾಲ್ಲೂಕಿನಲ್ಲಿ ವಿದ್ಯಾರ್ಥಿ ನಿಲಯವನ್ನು ಹೊಂದಿರುವಂತೆ ಅಧಿಕ ಸಂಖ್ಯೆಯಲ್ಲಿ ತೆರೆಯಬೇಕಾಗಿದೆ. ಇದರಿಂದಾಗಿ ಅವರು ಉನ್ನತ ಶಿಕ್ಷಣಕ್ಕೆ ಪ್ರವೇಶ ಪಡೆಯುವುದು ಸುಲಭವಾಗುತ್ತದೆ.

ಲಿಂಗಸಂಬಂಧ ಕುರಿತಂತೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳ ಅವಶ್ಯಕತೆಯಿದೆ. ಅದರಿಂದ ಅವರಲ್ಲಿ ಅರಿವನ್ನು ಮೂಡಿಸಬಹುದು. ಈ ಬಗೆಯ ಅರಿವುದರಿಂದ ಕುಟುಂಬ ಮಟ್ಟದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮವಾಗುವ ಸಾಧ್ಯತೆಯಿದೆ.

ಮಹಿಳೆಯರ ಕೃಷಿಯಲ್ಲಿ ದುಡಿಮೆ ಸಹಭಾಗಿತ್ವವನ್ನು ಅಧಿಕಗೊಳಿಸಬೇಕಾಗಿದೆ. ಅದಕ್ಕಾಗಿ ಅವರಿಗೆ ಉದ್ಯಮಸಾಹಸಿಯ ಸಂಬಂಧಿಸಿದಂತೆ ತರಬೇತಿ ನೀಡುವ ಅವಶ್ಯಕತೆಯಿದೆ.

## ಸಾಮಾಜಿಕ ಗುಂಪುಗಳು

ಅಲ್ಪಸಂಖ್ಯಾತರ, ಪ.ಜಾ. ಮತ್ತು ಪ.ಪಂ.ಗಳ ಜನರ ಮಾನವ ಅಭಿವೃದ್ಧಿ ಮಟ್ಟವನ್ನು ಮತ್ತು ಜೀವನಮಟ್ಟವನ್ನು ಸಮಗ್ರ ಸ್ವರೂಪದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಉತ್ತಮಪಡಿಸಬೇಕಾಗಿದೆ. ಶಿಕ್ಷಣದ ಮಟ್ಟವು ಕಡಿಮೆಯಿರುವುದು, ವರಮಾನ ಗಳಿಸುವ ಅವಕಾಶಗಳು ಇಲ್ಲದಿರುವುದು ಮತ್ತು ಸಂಪನ್ಮೂಲಗಳ ಮೇಲೆ ನಿಯಂತ್ರಣವಿಲ್ಲದಿರುವುದರಿಂದ ಅವರ ಅಭಿವೃದ್ಧಿಯ ಸ್ಥಿತಿಗತಿ ಕೆಳಮಟ್ಟದಲ್ಲಿದೆ. ಇವರಲ್ಲಿ ಬಹುಪಾಲು ಜನರು ಕೃಷಿ ಕೂಲಿಕಾರರಾಗಿ ದುಡಿಮೆ ಮಾಡುತ್ತಿದ್ದಾರೆ. ಕೆಲವರು ಸಾಗುವಳಿದಾರರಾಗಿದ್ದಾರೆ. ಆದರೆ ಅವರು ಸಣ್ಣ ಮತ್ತು ಅತಿ ಸಣ್ಣ ಸಾಗುವಳಿದಾರರಾಗಿದ್ದಾರೆ. ವಸತಿ ಮತ್ತು ಕುಡಿಯುವ ನೀರಿನ ಕಾರ್ಯಕ್ರಮಗಳ ಮೂಲಕ ಅವರಿಗೆ ಅನೇಕ ಅನುಕೂಲಗಳನ್ನು ಒದಗಿಸಿಕೊಡಲಾಗಿದೆ. ಆದರೂ ಅವರು ಜೀವಿಸುವ ಪ್ರದೇಶದಲ್ಲಿ ನೈರ್ಮಲ್ಯದ ಸ್ಥಿತಿಯು ಸರಿಯಿಲ್ಲ.

ಈ ಸಮುದಾಯದಲ್ಲಿ ಸಾಕ್ಷರತೆಯ ಮಟ್ಟವು ಅತಿ ಕಡಿಮೆಯಿದೆ. ಅವರಿಗೆ ಸರಿಯಾದ ಮಾಹಿತಿ ನೀಡುವುದರ ಮೂಲಕ ಮತ್ತು ಅವರಲ್ಲಿ ಜಾಗೃತಿ ಮೂಡಿಸುವುದರ ಮೂಲಕ ಅವರ ದಾಖಲಾತಿಯನ್ನು ಉತ್ತಮಪಡಿಸಬೇಕಾಗಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸುವುದರ ಮೂಲಕ ಅವರಿಗೆ ಉತ್ತಮ ಗುಣಮಟ್ಟದ ಶಿಕ್ಷಣವು ದೊರೆಯುವಂತೆ

ಮಾಡಬೇಕಾಗಿದೆ. ಅವರ ಉನ್ನತ ಶಿಕ್ಷಣದಲ್ಲಿನ ಮತ್ತು ತಾಂತ್ರಿಕ ಶಿಕ್ಷಣದಲ್ಲಿನ ಪ್ರವೇಶ ಮಾಡಲು ಗಮನ ನೀಡಬೇಕಾಗಿದೆ.

ಅಲ್ಪಸಂಖ್ಯಾತರ ಜೀವನಮಟ್ಟವು ಅತ್ಯಂತ ಕೆಳಮಟ್ಟದಲ್ಲಿದೆ. ಈ ಜನಸಮುದಾಯವನ್ನು ಸಶಕ್ತರನ್ನಾಗಿ ಮಾಡಲು ಸಮಗ್ರ ನೀತಿಯನ್ನು ಜಾರಿಗೊಳಿಸಬೇಕಾಗಿದೆ. ಇವರಲ್ಲಿ ಹೆಚ್ಚಿನವರು ಕೃಷಿಯನ್ನು ಅವಲಂಬಿಸಿಕೊಂಡಿರುವುದರಿಂದ ಅವರ ಜೀವನಮಟ್ಟವನ್ನು ಉತ್ತಮಪಡಿಸಲು ಅಗತ್ಯವಾದ ಉದ್ಯೋಗ ಖಾತ್ರಿ ಯೋಜನೆಯಂತಹ ಕಾರ್ಯಕ್ರಮಗಳನ್ನು ಬಲಪಡಿಸಬೇಕು. ಅವರ ಜೀವನ ಮಟ್ಟವನ್ನು ಉತ್ತಮಪಡಿಸಲು ಅವರಿಗೆ ಸಾಮಾಜಿಕ ಭದ್ರತೆಯ ಯೋಜನೆಯನ್ನು ಆರಂಭಿಸಬೇಕು.

## ಎನ್‌ಜಿಓ ಮತ್ತು ಸ್ವಸಹಾಯ ಗುಂಪುಗಳು

ಎನ್‌ಜಿಓಗಳು, ಸ್ವಸಹಾಯ ಗುಂಪುಗಳು ಮತ್ತು ಸ್ವಯಂ ಸೇವಾ ಸಂಸ್ಥೆಗಳು ಜಿಲ್ಲೆಯಲ್ಲಿನ ಮಾನವ ಅಭಿವೃದ್ಧಿ ಮಟ್ಟವನ್ನು ಉತ್ತಮಪಡಿಸುವ ದಿಶೆಯಲ್ಲಿ ಅಪಾರ ಕಾಣಿಕೆ ನೀಡಬಹುದು. ಗುಲಬರ್ಗಾ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಕ್ರಿಯಾಶೀಲ ಎನ್‌ಜಿಓಗಳ ಸಂಖ್ಯೆ ಬಹಳ ಕಡಿಮೆ. ಮಾನವ ಅಭಿವೃದ್ಧಿಯಂತಹ ಬೃಹತ್ ಕಾರ್ಯವನ್ನು ಕೈಗೊಳ್ಳಲು ನಮಗೆ ಎನ್‌ಜಿಓಗಳ ಸಂಖ್ಯೆ ಅಧಿಕ ಬೇಕಾಗುತ್ತದೆ. ಅವುಗಳ ಒಕ್ಕೂಟವು ಅವರ ಕೆಲಸ ಕಾರ್ಯವನ್ನು ಸರಿಯಾಗಿ ಸಂಯೋಜಿಸಬೇಕು. ಹಾಗೆ ಅವುಗಳು ಸಂಘಟಿತವಾದಾಗ ಮಾತ್ರ ಗ್ರಾಮೀಣ ಜನರಿಗೆ ಉಪಯೋಗವಾಗುತ್ತದೆ. ಸರ್ಕಾರವು ತನ್ನ ಕಾರ್ಯಕ್ರಮಗಳನ್ನು, ಮುಖ್ಯವಾಗಿ ಆರೋಗ್ಯ ಮತ್ತು ಶಿಕ್ಷಣ ಕಾರ್ಯಕ್ರಮಗಳನ್ನು ಎನ್‌ಜಿಓಗಳ ಮೂಲಕ ಅನುಷ್ಠಾನಗೊಳಿಸುವಂತಾಗಬೇಕು.

ಗ್ರಾಮೀಣ ಪ್ರದೇಶದಲ್ಲಿ ಸ್ವಸಹಾಯ ಗುಂಪುಗಳ ಸಂಖ್ಯೆಯು ಹೆಚ್ಚುತ್ತಿದೆ. ಅನೇಕ ಗುಂಪುಗಳು ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳುವಲ್ಲಿ ಯಶಸ್ವಿಯಾಗಿವೆ. ಈ ಗುಂಪುಗಳ ಮೂಲಕ ಮಹಿಳೆಯು ಸಶಕ್ತರಾಗುತ್ತಿದ್ದಾರೆ. ಆದರೆ ಈ ಗುಂಪುಗಳು ಅನೇಕ ಸಮಸ್ಯೆಗಳನ್ನು ಎದುರಿಸುತ್ತಿವೆ. ಅವು ಎದುರಿಸುತ್ತಿರುವ ಎರಡು ಸಮಸ್ಯೆಗಳೆಂದರೆ ಮಾರುಕಟ್ಟೆ ವ್ಯವಸ್ಥೆ ಮತ್ತು ಚಟುವಟಿಕೆಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವುದು. ಈ ಸ್ವಸಹಾಯ ಗುಂಪುಗಳು ಗ್ರಾಮೀಣ ಪ್ರದೇಶದಲ್ಲಿ ಅರಿವು ಮೂಡಿಸುವ ಕಾರ್ಯದಲ್ಲಿ ತೊಡಗಬೇಕು. ಗ್ರಾಮ ಪಂಚಾಯಿತಿಗಳು ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಗೆ ಈ ಗುಂಪುಗಳು ಕೆಲಸ ಮಾಡಬೇಕು. ಅವು ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಬಂಡವಾಳವನ್ನು ನಿರ್ಮಿಸುವ ದಿಶೆಯಲ್ಲಿ ಹಾಗೂ ಸಾಮಾಜಿಕ ಸೌಹಾರ್ದತೆಯನ್ನು ಕಾಪಾಡುವ ಕೆಲಸ ಮಾಡಬೇಕು. ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಬದಲಾವಣೆ ತರುವುದು ಬಹಳ ಮಹತ್ವವಾದುದು. ಇದನ್ನು ನಾವು ಗುರುತಿಸಬೇಕಾಗಿದೆ.

## ಅಂಕಿಅಂಶಗಳ ಕೊರತೆ ಮತ್ತು ಅವುಗಳ ಅಗತ್ಯ

ಜಿಲ್ಲಾ ಮಟ್ಟದಲ್ಲಿ ಮಾನವ ಅಭಿವೃದ್ಧಿ ವರದಿಯನ್ನು ಸಿದ್ಧಪಡಿಸುವುದು ಸುಲಭದ ಕೆಲಸವಲ್ಲ. ಏಕೆಂದರೆ ಅಲ್ಲಿ ಮಾಹಿತಿ ಮತ್ತು ಅಂಕಿಅಂಶಗಳ ತೀವ್ರ ಕೊರತೆಯಿದೆ. ಜಿಲ್ಲಾ ಸಾಂಖ್ಯಿಕ ಕಚೇರಿಯು ಪ್ರತಿವರ್ಷ ಜಿಲ್ಲಾ ಅಂಕಿಅಂಶಗಳ ನೋಟವೆಂಬ ಹೊತ್ತಿಗೆಯನ್ನು ಪ್ರಕಟಿಸುತ್ತದೆ. ಆದರೆ ಅದರಲ್ಲಿ ದೊರೆಯುವ ಮಾಹಿತಿ ಅತ್ಯಂತ ಕಡಿಮೆ. ಮಾನವ ಅಭಿವೃದ್ಧಿ ಮಟ್ಟವನ್ನು ಅಳೆಯಲು ಅಲ್ಲಿನ ಮಾಹಿತಿ ಮತ್ತು ಅಂಕಿಅಂಶಗಳು ಸಾಕಾಗುವುದಿಲ್ಲ. ಆರೋಗ್ಯಕ್ಕೆ, ಉದ್ಯೋಗಕ್ಕೆ, ವರಮಾನಕ್ಕೆ ಮತ್ತು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ದೊರೆಯುವ ಅಂಕಿಅಂಶ ಅತ್ಯಂತ ಖಚಿತವಾಗಿದ್ದು, ಈ ಬಗ್ಗೆ ಆಡಳಿತ ವಿಭಾಗಗಳಲ್ಲಿ ಲಭ್ಯವಿರುವ ಮಾಹಿತಿಯೂ ಅತ್ಯಲ್ಪ. ಖಚಿತತೆ ಬಗ್ಗೆ ಸಮಸ್ಯೆಯಿದೆ. ಶಾಲಾ ದಾಖಲಾತಿಗೆ ಸಂಬಂಧಿಸಿದಂತೆ ಇಲಾಖೆಯು ವಿವಿಧ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ನೀಡುವ ಅಂಕಿಅಂಶಕ್ಕೂ ಮತ್ತು ಸರ್ವ ಶಿಕ್ಷಣ ಅಭಿಯಾನದಲ್ಲಿ ಲಭ್ಯವಿರುವ ಅಂಕಿಅಂಶಗಳಿಗೂ ತಾಳೆಯಾಗುವುದಿಲ್ಲ. ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ಬಗ್ಗೆ ಸರಿಯಾದ ಮಾಹಿತಿ ದೊರೆಯುವುದಿಲ್ಲ.

ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಬಗೆಗಿನ ಅಂಕಿಅಂಶಗಳು ವಿಶ್ವಾಸಾರ್ಹವಲ್ಲ. ಪ್ರತಿ ವರ್ಷ ಜಿಲ್ಲೆಯಲ್ಲಿ ಮಕ್ಕಳ ಜನಗಣತಿ ಮೂಲಕ ಶಾಲೆ ಸೇರುವ ಮಕ್ಕಳ ಅಂಕಿಅಂಶಗಳನ್ನು ಸಂಗ್ರಹಿಸಲಾಗುತ್ತದೆ. ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳ ಪ್ರಮಾಣವನ್ನು ಕ್ಷೇತ್ರಕಾರ್ಯದ ಆಧಾರದ ಮೇಲೆ ಲೆಕ್ಕ ಹಾಕಲಾಗುತ್ತದೆ. ಈ ರೀತಿಯಲ್ಲಿನ ವರದಿ ಮಾಡುವ ಕ್ರಮವನ್ನು ಸುಧಾರಿಸಬೇಕಾಗಿದೆ.

ಆರೋಗ್ಯದ ಬಗೆಗಿನ ಮಾಹಿತಿಯು ಸಮರ್ಪಕವಾಗಿಲ್ಲ. ಸಿಬ್ಬಂದಿಯ ಕೊರತೆಯು ಇಲ್ಲಿ ಸಮಸ್ಯೆಯಾಗಿದೆ. 'ಆರೋಗ್ಯ ನಿರ್ವಹಣಾ ಮಾಹಿತಿ ವ್ಯವಸ್ಥೆ'ಯಡಿಯಲ್ಲಿ ಮಾಹಿತಿ ಕೋಶ ಸಿದ್ಧಪಡಿಸುವ ಕ್ರಮವನ್ನು ಆರಂಭಿಸಬೇಕಾಗಿದೆ. ಮಾನವ ಅಭಿವೃದ್ಧಿಗೆ ಸಂಬಂಧಿಸಿದ ಸೂಚಿಗಳಾದ ಶಿಶು ಮರಣ ಪ್ರಮಾಣ, ಮಕ್ಕಳ ಮರಣ ಪ್ರಮಾಣ, ವಯೋಮಾನವಾರು ಮರಣ ಪ್ರಮಾಣಗಳ ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಮಾಹಿತಿ ದೊರೆಯುವುದಿಲ್ಲ. ಜನನ–ಮರಣ ಕುರಿತಂತೆ ಮಾಹಿತಿಯು ಸರಿಯಾಗಿ ಲಭ್ಯವಿರುವುದಿಲ್ಲ. ಆದ್ದರಿಂದ ಅಲ್ಲಿ ಜನರ ಜೀವನಾಯುಷ್ಯವನ್ನು ಲೆಕ್ಕ ಹಾಕುವುದು ಕಷ್ಟವಾಗುತ್ತದೆ. ವಿಶ್ವಾಸಾರ್ಹವಾದ ಮಾಹಿತಿ ಸಂಗ್ರಹಿಸಲು ವಿಶೇಷ ಕ್ಷೇತ್ರ ಕಾರ್ಯವನ್ನು ನಡೆಸಬೇಕಾಗುತ್ತದೆ.

## ಮುಕ್ತಾಯ

ಚರಿತ್ರೆಯಲ್ಲಿ ಗುಲಬರ್ಗಾ ಜಿಲ್ಲೆಯ ಜನರು ಗಂಭೀರವಾದ ಕಷ್ಟನಷ್ಟಗಳನ್ನು ಅನುಭವಿಸಿದ್ದಾರೆ. ಅನಂತ ಕಾಲ ಅವರು ಇಲ್ಲಿ ಶೋಷಣೆಗೆ ಒಳಗಾಗಿದ್ದಾರೆ ಮತ್ತು ತಾರತಮ್ಯ ಎದುರಿಸುತ್ತಿದ್ದಾರೆ. ಬಡತನದಲ್ಲಿರುವವರ ದುಸ್ಥಿತಿ ಗಂಭೀರವಾದುದ್ದಾಗಿದೆ. ಈ ಹಿನ್ನೆಲೆಯಲ್ಲಿ ಅಭಿವೃದ್ಧಿಗೆ ಸಂಬಂಧಿಸಿದ ನೀತಿಗಳ ನೆಲೆಯಲ್ಲಿ ಮಾನವ ಅಭಿವೃದ್ಧಿ ದೃಷ್ಟಿಕೋನವು ಮಹತ್ವವನ್ನು ಪಡೆದುಕೊಳ್ಳುತ್ತದೆ.

ಮುಂದಿನ ಗುರಿಗಳ ಬಗ್ಗೆ ಸ್ಪಷ್ಟವಾದ ಮತ್ತು ಖಚಿತ ನಿಲುವು ಸಾಧ್ಯ. ಆರೋಗ್ಯ ಮತ್ತು ಶಿಕ್ಷಣಗಳಿಗೆ ಮಹತ್ವ ನೀಡಬೇಕೆಂಬುದರ ಬಗ್ಗೆ ಯಾವ ಮೂಲೆಯಲ್ಲೂ ಅನುಮಾನವಿಲ್ಲ. ಬಹಳಷ್ಟು ಜನರ ವರಮಾನ ಕಡಿಮೆಯಿರುವುದರಿಂದ ಮತ್ತು ಅಪಾರ ಜನರು ಬಡತನದಿಂದ ನರಳುತ್ತಿರುವುದರಿಂದ ಸುಸ್ಥಿರಗತಿ ಅಭಿವೃದ್ಧಿಯನ್ನು ಸಾಧಿಸಿಕೊಳ್ಳಲು ವರಮಾನದ ವರ್ಧನೆಯನ್ನು ಸಾಧಿಸಿಕೊಳ್ಳಬೇಕಾಗುತ್ತದೆ.

ಅತ್ಯಂತ ಸಾಂಪ್ರದಾಯಿಕವಾದ ಜಿಲ್ಲೆಯಲ್ಲಿ ಮಹಿಳೆಯರು ಲಿಂಗ ತಾರತಮ್ಯದಿಂದ ನರಳುತ್ತಿರುವುದರಿಂದ ಮಾನವ ಅಭಿವೃದ್ಧಿಯ ಲಿಂಗಸಂಬಂಧಿ ಆಯಾಮವು ಮಹತ್ವ ಪಡೆದುಕೊಂಡು ಬಿಡುತ್ತದೆ. ಈ ದಿಶೆಯಲ್ಲಿ ಲಿಂಗ ಸಮಾನತೆ ಬಗ್ಗೆ ಜಾಗೃತಿ ಮತ್ತು ಮಹಿಳಾ ಸಶಕ್ತೀಕರಣ ನೀತಿಗಳ ಅಗತ್ಯವಿದೆ.

ವಿಶೇಷ ಗಮನ ನೀಡಬೇಕಾದ ಮತ್ತೊಂದು ದುಸ್ಥಿತಿಯಲ್ಲಿರುವ ವರ್ಗವೆಂದರೆ ಪ.ಜಾ. ಮತ್ತು ಪ.ಪಂ. ಈ ಜನವರ್ಗದ ಅಭಿವೃದ್ಧಿಗೆ ಜಾಗೃತಿ, ಮಾಹಿತಿ ಮತ್ತು ಶಿಕ್ಷಣಗಳ ಜೊತೆಯಲ್ಲಿ ಅವರಿಗೆ ಉತ್ತಮ ಉದ್ಯೋಗದ ಅವಕಾಶಗಳನ್ನು ಒದಗಿಸಬೇಕಾಗುತ್ತದೆ.

ಅಭಿವೃದ್ಧಿಯ ಜವಾಬುದಾರಿಯನ್ನು ನಿರ್ವಹಿಸಲು ಅಗತ್ಯವಾದ ಹಣಕಾಸು ಮತ್ತು ಸಿಬ್ಬಂದಿ ಸೌಲಭ್ಯಗಳನ್ನು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಿಗೆ ನೀಡುವ ಅವಶ್ಯಕತೆಯಿದೆ. ಸಾಂಪ್ರದಾಯಿಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಲು ಎನ್‌ಜಿಓಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸ್ವಸಹಾಯ ಗುಂಪುಗಳು ಮಹತ್ವದ ಪಾತ್ರ ನಿರ್ವಹಿಸಬಹುದಾಗಿದೆ. ಕೆಳಮಟ್ಟದ ಮಾನವ ಅಭಿವೃದ್ಧಿ ಕೂಪದಿಂದ ಹೊರಬರಲು ಈ ಸಂಸ್ಥೆಗಳು ಶ್ರದ್ಧೆಯಿಂದ ಮತ್ತು ಕಟಿಬದ್ಧವಾಗಿ ಹಾಗೂ ಪ್ರಮಾಣಿಕವಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇದೊಂದು ಬೃಹತ್ ಸವಾಲಾಗಿದೆ. ಏಕೆಂದರೆ ಅಭಿವೃದ್ಧಿಯ ಆಯಾಮಗಳು ಬಹುಮುಖಿಯಾಗಿವೆ. ಸರ್ಕಾರ, ಎನ್‌ಜಿಓಗಳು, ನಾಗರಿಕ ಸಮಾಜ ಮುಂತಾದ ಸಂಸ್ಥೆಗಳ ನಡುವೆ ವಿವಿಧ ಹಂತಗಳಲ್ಲಿ ಆರೋಗ್ಯಕಾರಿಯಾದ ಸಹಯೋಗವಿದ್ದರೆ ನಿರೀಕ್ಷಿತ ಗುರಿಗಳನ್ನು ಸಾಧಿಸಿಕೊಳ್ಳಬಹುದಾಗಿದೆ.

# ಸಾಂಖ್ಯಿಕ ಕೋಷ್ಟಕಗಳು



# ಸಾಂಖ್ಯಿಕ ಕೋಷ್ಟಕಗಳು

## ಮಾನವ ಅಭಿವೃದ್ಧಿ ಸೂಚ್ಯಂಕದ ಸಂರಚನೆ : 2001

| | ಜಿಲ್ಲೆಗಳು | ಸೂಚಿಗಳು | | | | | | |
|---|---|---|---|---|---|---|---|---|
| | | ಆರೋಗ್ಯ | | ಶಿಕ್ಷಣ | | ವರಮಾನ | | ಎಚ್.ಡಿ.ಐ. |
| | | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ |
| 1 | ಬಾಗಲಕೋಟೆ | 0.597 | 27 | 0.636 | 22 | 0.539 | 12 | 0.591 |
| 2 | ಬೆಂಗಳೂರು(ಗ್ರಾಮೀಣ) | 0.692 | 6 | 0.662 | 20 | 0.605 | 4 | 0.653 |
| 3 | ಬೆಂಗಳೂರು(ನಗರ) | 0.705 | 5 | 0.887 | 1 | 0.666 | 1 | 0.753 |
| 4 | ಬೆಳಗಾವಿ | 0.712 | 2 | 0.699 | 15 | 0.532 | 13 | 0.648 |
| 5 | ಬಳ್ಳಾರಿ | 0.685 | 7 | 0.618 | 23 | 0.549 | 9 | 0.617 |
| 6 | ಬೀದರ್ | 0.638 | 17 | 0.689 | 17 | 0.470 | 26 | 0.599 |
| 7 | ವಿಜಾಪುರ | 0.627 | 24 | 0.642 | 21 | 0.499 | 23 | 0.589 |
| 8 | ಚಾಮರಾಜನಗರ | 0.642 | 15 | 0.570 | 26 | 0.518 | 17 | 0.576 |
| 9 | ಚಿಕ್ಕಮಗಳೂರು | 0.637 | 19 | 0.742 | 9 | 0.563 | 6 | 0.647 |
| 10 | ಚಿತ್ರದುರ್ಗ | 0.660 | 12 | 0.704 | 14 | 0.517 | 18 | 0.627 |
| 11 | ದಕ್ಷಿಣ ಕನ್ನಡ | 0.707 | 3 | 0.823 | 4 | 0.636 | 2 | 0.722 |
| 12 | ದಾವಣಗೆರೆ | 0.680 | 8 | 0.711 | 13 | 0.515 | 19 | 0.635 |
| 13 | ಧಾರವಾಡ | 0.615 | 26 | 0.758 | 7 | 0.553 | 8 | 0.642 |
| 14 | ಗದಗ | 0.628 | 23 | 0.750 | 8 | 0.525 | 15 | 0.634 |
| 15 | ಗುಲಬರ್ಗಾ | 0.632 | 20 | 0.572 | 25 | 0.490 | 25 | 0.564 |
| 16 | ಹಾಸನ | 0.670 | 10 | 0.729 | 10 | 0.519 | 16 | 0.639 |
| 17 | ಹಾವೇರಿ | 0.620 | 25 | 0.699 | 16 | 0.491 | 24 | 0.603 |
| 18 | ಕೊಡಗು | 0.638 | 18 | 0.833 | 3 | 0.621 | 3 | 0.697 |
| 19 | ಕೋಲಾರ | 0.653 | 13 | 0.713 | 12 | 0.508 | 21 | 0.625 |
| 20 | ಕೊಪ್ಪಳ | 0.642 | 16 | 0.576 | 24 | 0.529 | 14 | 0.582 |
| 21 | ಮಂಡ್ಯ | 0.632 | 21 | 0.682 | 18 | 0.513 | 20 | 0.609 |
| 22 | ಮೈಸೂರು | 0.663 | 11 | 0.669 | 19 | 0.561 | 7 | 0.631 |
| 23 | ರಾಯಚೂರು | 0.648 | 14 | 0.524 | 27 | 0.469 | 27 | 0.547 |
| 24 | ಶಿವಮೊಗ್ಗ | 0.707 | 4 | 0.766 | 6 | 0.547 | 10 | 0.673 |
| 25 | ತುಮಕೂರು | 0.672 | 9 | 0.714 | 11 | 0.505 | 22 | 0.630 |
| 26 | ಉಡುಪಿ | 0.713 | 1 | 0.842 | 2 | 0.588 | 5 | 0.714 |
| 27 | ಉತ್ತರ ಕನ್ನಡ | 0.632 | 22 | 0.781 | 5 | 0.546 | 11 | 0.653 |
| | **ಕರ್ನಾಟಕ** | **0.680** | | **0.712** | | **0.559** | | **0.650** |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ – 2005

## ಮಾನವ ಅಭಿವೃದ್ಧಿ ಸೂಚ್ಯಂಕದ ಸಂರಚನೆ : 1991

| | ಜಿಲ್ಲೆಗಳು | ಸೂಚಿಗಳು | | | | | | ಎಚ್.ಡಿ.ಐ. | |
|---|---|---|---|---|---|---|---|---|---|
| | | ಆರೋಗ್ಯ | | ಶಿಕ್ಷಣ | | ವರಮಾನ | | | |
| | | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ |
| 1 | ಬಾಗಲಕೋಟೆ | 0.567 | 27 | 0.567 | 18 | 0.380 | 18 | 0.505 | 20 |
| 2 | ಬೆಂಗಳೂರು(ಗ್ರಾಮೀಣ) | 0.657 | 5 | 0.582 | 15 | 0.378 | 19 | 0.539 | 11 |
| 3 | ಬೆಂಗಳೂರು(ನಗರ) | 0.663 | 4 | 0.757 | 3 | 0.449 | 5 | 0.623 | 4 |
| 4 | ಬೆಳಗಾವಿ | 0.657 | 6 | 0.586 | 14 | 0.393 | 10 | 0.545 | 9 |
| 5 | ಬಳ್ಳಾರಿ | 0.630 | 10 | 0.506 | 23 | 0.399 | 9 | 0.512 | 18 |
| 6 | ಬೀದರ್ | 0.600 | 14 | 0.547 | 22 | 0.340 | 26 | 0.496 | 23 |
| 7 | ವಿಜಾಪುರ | 0.570 | 25 | 0.561 | 19 | 0.381 | 17 | 0.504 | 21 |
| 8 | ಚಾಮರಾಜನಗರ | 0.625 | 12 | 0.446 | 24 | 0.392 | 11 | 0.488 | 24 |
| 9 | ಚಿಕ್ಕಮಗಳೂರು | 0.585 | 19 | 0.639 | 7 | 0.457 | 4 | 0.559 | 7 |
| 10 | ಚಿತ್ರದುರ್ಗ | 0.630 | 11 | 0.590 | 13 | 0.384 | 15 | 0.535 | 13 |
| 11 | ದಕ್ಷಿಣ ಕನ್ನಡ | 0.683 | 2 | 0.799 | 2 | 0.500 | 2 | 0.661 | 1 |
| 12 | ದಾವಣಗೆರೆ | 0.633 | 7 | 0.623 | 9 | 0.388 | 13 | 0.548 | 8 |
| 13 | ಧಾರವಾಡ | 0.568 | 26 | 0.637 | 8 | 0.412 | 6 | 0.539 | 10 |
| 14 | ಗದಗ | 0.583 | 20 | 0.601 | 11 | 0.364 | 23 | 0.516 | 17 |
| 15 | ಗುಲಬರ್ಗಾ | 0.575 | 23 | 0.432 | 25 | 0.352 | 24 | 0.453 | 25 |
| 16 | ಹಾಸನ | 0.575 | 24 | 0.599 | 12 | 0.384 | 16 | 0.519 | 16 |
| 17 | ಹಾವೇರಿ | 0.577 | 22 | 0.582 | 16 | 0.331 | 27 | 0.496 | 22 |
| 18 | ಕೊಡಗು | 0.600 | 15 | 0.739 | 4 | 0.531 | 1 | 0.623 | 3 |
| 19 | ಕೋಲಾರ | 0.617 | 13 | 0.576 | 17 | 0.372 | 20 | 0.522 | 15 |
| 20 | ಕೊಪ್ಪಳ | 0.583 | 21 | 0.403 | 26 | 0.351 | 25 | 0.446 | 26 |
| 21 | ಮಂಡ್ಯ | 0.598 | 16 | 0.548 | 21 | 0.386 | 14 | 0.511 | 19 |
| 22 | ಮೈಸೂರು | 0.632 | 9 | 0.550 | 20 | 0.389 | 12 | 0.524 | 14 |
| 23 | ರಾಯಚೂರು | 0.590 | 18 | 0.372 | 27 | 0.367 | 22 | 0.443 | 27 |
| 24 | ಶಿವಮೊಗ್ಗ | 0.680 | 3 | 0.662 | 6 | 0.410 | 7 | 0.584 | 5 |
| 25 | ತುಮಕೂರು | 0.633 | 8 | 0.612 | 10 | 0.370 | 21 | 0.539 | 12 |
| 26 | ಉಡುಪಿ | 0.685 | 1 | 0.830 | 1 | 0.463 | 3 | 0.659 | 2 |
| 27 | ಉತ್ತರ ಕನ್ನಡ | 0.598 | 17 | 0.692 | 5 | 0.410 | 8 | 0.567 | 6 |
| | **ಕರ್ನಾಟಕ** | **0.618** | | **0.602** | | **0.402** | | **0.541** | |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ – 2005

## ಮಾನವ ಅಭಿವೃದ್ಧಿಯಲ್ಲಿ ಜಿಲ್ಲೆಗಳ ಸಾಧನೆ 1991 ಮತ್ತು 2001

| ಕ್ರಮ ಸಂಖ್ಯೆ | ಜಿಲ್ಲೆಗಳು | ಎಚ್.ಡಿ.ಐ –2001 | | ಎಚ್.ಡಿ.ಐ –1991 | |
|---|---|---|---|---|---|
| | | ಮೌಲ್ಯ | ಸ್ಥಾನ | ಮೌಲ್ಯ | ಸ್ಥಾನ |
| 1 | ಬಾಗಲಕೋಟೆ | 0.591 | 22 | 0.505 | 20 |
| 2 | ಬೆಂಗಳೂರು(ಗ್ರಾಮೀಣ) | 0.653 | 6 | 0.539 | 11 |
| 3 | ಬೆಂಗಳೂರು(ನಗರ) | 0.753 | 1 | 0.623 | 4 |
| 4 | ಬೆಳಗಾವಿ | 0.648 | 8 | 0.545 | 9 |
| 5 | ಬಳ್ಳಾರಿ | 0.617 | 18 | 0.512 | 18 |
| 6 | ಬೀದರ್ | 0.599 | 21 | 0.496 | 23 |
| 7 | ವಿಜಾಪುರ | 0.589 | 23 | 0.504 | 21 |
| 8 | ಚಾಮರಾಜನಗರ | 0.576 | 25 | 0.488 | 24 |
| 9 | ಚಿಕ್ಕಮಗಳೂರು | 0.647 | 9 | 0.559 | 7 |
| 10 | ಚಿತ್ರದುರ್ಗ | 0.627 | 16 | 0.535 | 13 |
| 11 | ದಕ್ಷಿಣ ಕನ್ನಡ | 0.722 | 2 | 0.661 | 1 |
| 12 | ದಾವಣಗೆರೆ | 0.635 | 12 | 0.548 | 8 |
| 13 | ಧಾರವಾಡ | 0.642 | 10 | 0.539 | 10 |
| 14 | ಗದಗ | 0.634 | 13 | 0.516 | 17 |
| 15 | ಗುಲಬರ್ಗಾ | 0.564 | 26 | 0.453 | 25 |
| 16 | ಹಾಸನ | 0.639 | 11 | 0.519 | 16 |
| 17 | ಹಾವೇರಿ | 0.603 | 20 | 0.496 | 22 |
| 18 | ಕೊಡಗು | 0.697 | 4 | 0.623 | 3 |
| 19 | ಕೋಲಾರ | 0.625 | 17 | 0.522 | 15 |
| 20 | ಕೊಪ್ಪಳ | 0.582 | 24 | 0.446 | 26 |
| 21 | ಮಂಡ್ಯ | 0.609 | 19 | 0.511 | 19 |
| 22 | ಮೈಸೂರು | 0.631 | 14 | 0.524 | 14 |
| 23 | ರಾಯಚೂರು | 0.547 | 27 | 0.443 | 27 |
| 24 | ಶಿವಮೊಗ್ಗ | 0.673 | 5 | 0.584 | 5 |
| 25 | ತುಮಕೂರು | 0.630 | 15 | 0.539 | 12 |
| 26 | ಉಡುಪಿ | 0.714 | 3 | 0.659 | 2 |
| 27 | ಉತ್ತರ ಕನ್ನಡ | 0.653 | 7 | 0.567 | 6 |
| | **ಕರ್ನಾಟಕ** | **0.650** | | **0.541** | |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ – 2005

## ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕದ ಸಂರಚನೆ – 2001

| | ಜಿಲ್ಲೆಗಳು | ಸೂಚಿಗಳು | | | | | | | |
|---|---|---|---|---|---|---|---|---|---|
| | | ಸಮಾನ ವಿತರಣೆ | | | | | | ಜಿಡಿಐ | |
| | | ಆರೋಗ್ಯ | | ಶಿಕ್ಷಣ | | ವರಮಾನ | | | |
| | | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ |
| 1 | ಬಾಗಲಕೋಟೆ | 0.595 | 27 | 0.617 | 22 | 0.500 | 13 | 0.571 | 23 |
| 2 | ಬೆಂಗಳೂರು (ಗ್ರಾಮೀಣ) | 0.692 | 6 | 0.659 | 20 | 0.569 | 4 | 0.640 | 6 |
| 3 | ಬೆಂಗಳೂರು (ನಗರ) | 0.705 | 4 | 0.880 | 1 | 0.608 | 2 | 0.731 | 1 |
| 4 | ಬೆಳಗಾವಿ | 0.712 | 1 | 0.689 | 16 | 0.503 | 12 | 0.635 | 9 |
| 5 | ಬಳ್ಳಾರಿ | 0.685 | 7 | 0.603 | 23 | 0.528 | 7 | 0.606 | 17 |
| 6 | ಬೀದರ್ | 0.638 | 17 | 0.680 | 17 | 0.399 | 27 | 0.572 | 22 |
| 7 | ವಿಜಾಪುರ | 0.626 | | 0.627 | 21 | 0.464 | 23 | 0.573 | 21 |
| 8 | ಚಾಮರಾಜನಗರ | 0.641 | 15 | 0.566 | 24 | 0.462 | 24 | 0.557 | 25 |
| 9 | ಚಿಕ್ಕಮಗಳೂರು | 0.636 | 19 | 0.738 | 8 | 0.534 | 6 | 0.636 | 8 |
| 10 | ಚಿತ್ರದುರ್ಗ | 0.660 | 11 | 0.697 | 14 | 0.497 | 15 | 0.618 | 14 |
| 11 | ದಕ್ಷಿಣ ಕನ್ನಡ | 0.703 | 5 | 0.819 | 4 | 0.620 | 1 | 0.714 | 2 |
| 12 | ದಾವಣಗೆರೆ | 0.680 | 8 | 0.701 | 12 | 0.481 | 19 | 0.621 | 13 |
| 13 | ಧಾರವಾಡ | 0.614 | 26 | 0.748 | 7 | 0.515 | 9 | 0.626 | 11 |
| 14 | ಗದಗ | 0.628 | 23 | 0.737 | 9 | 0.511 | 11 | 0.625 | 12 |
| 15 | ಗುಲಬರ್ಗಾ | 0.631 | 20 | 0.556 | 25 | 0.442 | 25 | 0.543 | 26 |
| 16 | ಹಾಸನ | 0.670 | 10 | 0.720 | 10 | 0.499 | 14 | 0.630 | 10 |
| 17 | ಹಾವೇರಿ | 0.620 | 25 | 0.692 | 15 | 0.475 | 21 | 0.596 | 19 |
| 18 | ಕೊಡಗು | 0.637 | 18 | 0.831 | 3 | 0.602 | 3 | 0.690 | 4 |
| 19 | ಕೋಲಾರ | 0.653 | 13 | 0.699 | 13 | 0.486 | 18 | 0.613 | 16 |
| 20 | ಕೊಪ್ಪಳ | 0.641 | 16 | 0.554 | 26 | 0.487 | 17 | 0.561 | 24 |
| 21 | ಮಂಡ್ಯ | 0.631 | 21 | 0.677 | 18 | 0.469 | 22 | 0.593 | 20 |
| 22 | ಮೈಸೂರು | 0.659 | 12 | 0.663 | 19 | 0.493 | 16 | 0.605 | 18 |
| 23 | ರಾಯಚೂರು | 0.648 | 14 | 0.503 | 27 | 0.440 | 26 | 0.530 | 27 |
| 24 | ಶಿವಮೊಗ್ಗ | 0.706 | 3 | 0.760 | 6 | 0.516 | 8 | 0.661 | 5 |
| 25 | ತುಮಕೂರು | 0.672 | 9 | 0.705 | 11 | 0.477 | 20 | 0.618 | 15 |
| 26 | ಉಡುಪಿ | 0.712 | 2 | 0.839 | 2 | 0.559 | 5 | 0.704 | 3 |
| 27 | ಉತ್ತರ ಕನ್ನಡ | 0.631 | 22 | 0.774 | 5 | 0.512 | 10 | 0.639 | 7 |
| | **ಕರ್ನಾಟಕ** | **0.679** | | **0.704** | | **0.526** | | **0.637** | |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ – 2005

## ಲಿಂಗಸಂಬಂಧಿ ಅಭಿವೃದ್ಧಿ ಸೂಚ್ಯಂಕದ ಸಂರಚನೆ – 1991

| | ಜಿಲ್ಲೆಗಳು | ಸೂಚಿಗಳು | | | | | | | |
|---|---|---|---|---|---|---|---|---|---|
| | | ಸಮಾನ ವಿತರಣೆ | | | | | | ಜಿಡಿಐ | |
| | | ಆರೋಗ್ಯ | | ಶಿಕ್ಷಣ | | ವರಮಾನ | | | |
| | | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ | ಸೂಚ್ಯಂಕ | ಸ್ಥಾನ |
| 1 | ಬಾಗಲಕೋಟೆ | 0.566 | 27 | 0.538 | 20 | 0.347 | 16 | 0.483 | 21 |
| 2 | ಬೆಂಗಳೂರು(ಗ್ರಾಮೀಣ) | 0.657 | 5 | 0.564 | 14 | 0.351 | 14 | 0.524 | 12 |
| 3 | ಬೆಂಗಳೂರು(ನಗರ) | 0.664 | 4 | 0.754 | 3 | 0.357 | 12 | 0.592 | 4 |
| 4 | ಬೆಳಗಾವಿ | 0.656 | 6 | 0.562 | 16 | 0.357 | 13 | 0.525 | 11 |
| 5 | ಬಳ್ಳಾರಿ | 0.629 | 11 | 0.484 | 23 | 0.385 | 6 | 0.499 | 17 |
| 6 | ಬೀದರ್ | 0.600 | 14 | 0.507. | 22 | 0.324 | 25 | 0.477 | 23 |
| 7 | ವಿಜಾಪುರ | 0.569 | 25 | 0.540 | 19 | 0.351 | 15 | 0.486 | 20 |
| 8 | ಚಾಮರಾಜನಗರ | 0.625 | 12 | 0.433 | 24 | 0.359 | 10 | 0.472 | 24 |
| 9 | ಚಿಕ್ಕಮಗಳೂರು | 0.583 | 19 | 0.631 | 7 | 0.434 | 3 | 0.550 | 6 |
| 10 | ಚಿತ್ರದುರ್ಗ | 0.630 | 9 | 0.575 | 13 | 0.337 | 22 | 0.514 | 13 |
| 11 | ದಕ್ಷಿಣ ಕನ್ನಡ | 0.683 | 2 | 0.795 | 2 | 0.456 | 2 | 0.645 | 1 |
| 12 | ದಾವಣಗೆರೆ | 0.633 | 7 | 0.614 | 9 | 0.344 | 18 | 0.530 | 9 |
| 13 | ಧಾರವಾಡ | 0.568 | 26 | 0.625 | 8 | 0.401 | 5 | 0.531 | 8 |
| 14 | ಗದಗ | 0.583 | 20 | 0.578 | 12 | 0.346 | 17 | 0.502 | 16 |
| 15 | ಗುಲಬರ್ಗಾ | 0.574 | 23 | 0.396 | 25 | 0.326 | 24 | 0.432 | 25 |
| 16 | ಹಾಸನ | 0.573 | 24 | 0.583 | 11 | 0.366 | 8 | 0.507 | 14 |
| 17 | ಹಾವೇರಿ | 0.576 | 22 | 0.564 | 15 | 0.301 | 27 | 0.480 | 22 |
| 18 | ಕೊಡಗು | 0.599 | 15 | 0.733 | 4 | 0.519 | 1 | 0.617 | 3 |
| 19 | ಕೋಲಾರ | 0.616 | 13 | 0.556 | 17 | 0.344 | 19 | 0.505 | 15 |
| 20 | ಕೊಪ್ಪಳ | 0.583 | 21 | 0.370 | 26 | 0.331 | 23 | 0.428 | 26 |
| 21 | ಮಂಡ್ಯ | 0.597 | 16 | 0.531 | 21 | 0.344 | 20 | 0.491 | 19 |
| 22 | ಮೈಸೂರು | 0.630 | 10 | 0.541 | 18 | 0.317 | 26 | 0.496 | 18 |
| 23 | ರಾಯಚೂರು | 0.588 | 18 | 0.341 | 27 | 0.338 | 21 | 0.422 | 27 |
| 24 | ಶಿವಮೊಗ್ಗ | 0.680 | 3 | 0.655 | 6 | 0.381 | 7 | 0.572 | 5 |
| 25 | ತುಮಕೂರು | 0.633 | 8 | 0.594 | 10 | 0.358 | 11 | 0.528 | 10 |
| 26 | ಉಡುಪಿ | 0.684 | 1 | 0.815 | 1 | 0.433 | 4 | 0.644 | 2 |
| 27 | ಉತ್ತರ ಕನ್ನಡ | 0.597 | 17 | 0.684 | 5 | 0.365 | 9 | 0.548 | 7 |
| | **ಕರ್ನಾಟಕ** | **0.618** | | **0.587** | | **0.371** | | **0.525** | |

ಮೂಲ: ಕರ್ನಾಟಕ ಮಾನವ ಅಭಿವೃದ್ಧಿ ವರದಿ – 2005

## 1 ಜನಸಂಖ್ಯಾ ವಿವರ

| ಕ್ರ. ಸಂ. | ತಾಲ್ಲೂಕು | ವಿಸ್ತೀರ್ಣ (ಚ.ಕಿ.ಮೀ.) | 1971 | | 1981 | | 1991 |
|---|---|---|---|---|---|---|---|
| | | | ಜನಸಂಖ್ಯೆ | ಜನಸಾಂದ್ರತೆ | ಜನಸಂಖ್ಯೆ | ಜನಸಾಂದ್ರತೆ | ಜನಸಂಖ್ಯೆ |
| 1 | | 2 | 3 | 4 | 5 | 6 | 7 |
| 1 | ಅಫಜಲಪುರ | 1305 | 111779 | 86 | 125078 | 96 | 150856 |
| 2 | ಅಳಂದ | 1735 | 197203 | 114 | 216112 | 125 | 260834 |
| 3 | ಚಿಂಚೋಳಿ | 1569 | 132580 | 85 | 158200 | 102 | 189161 |
| 4 | ಚಿತ್ತಾಪುರ | 1765 | 217049 | 123 | 257883 | 143 | 309481 |
| 5 | ಗುಲಬರ್ಗಾ | 1730 | 305722 | 177 | 402504 | 233 | 523944 |
| 6 | ಜೇವರ್ಗಿ | 1822 | 136358 | 75 | 153047 | 84 | 188707 |
| 7 | ಸೇಡಮ್ | 1025 | 107316 | 105 | 129434 | 134 | 163155 |
| 8 | ಶಹಾಪುರ | 1694 | 159347 | 95 | 191654 | 113 | 240206 |
| 9 | ಶೋರಾಪುರ | 1820 | 175607 | 95 | 223522 | 121 | 281743 |
| 10 | ಯಾದಗೀರ್ | 1709 | 196259 | 115 | 223209 | 131 | 274082 |
| | **ಒಟ್ಟು** | **16174** | **1739220** | **107** | **2080643** | **128** | **2582169** |

ಮೂಲ: ಸೆನ್ಸಸ್ ಆಫ್ ಇಂಡಿಯಾ 1971, 1981 ಮತ್ತು 1991

## 1 ಜನಸಂಖ್ಯಾ ವಿವರ

| ಕ್ರಮ ಸಂಖ್ಯೆ | ತಾಲ್ಲೂಕು | ಜನಸಾಂದ್ರತೆ–1991 | ಜನಸಂಖ್ಯೆ 2001 | ದಶಕವಾರು ಜನಸಂಖ್ಯಾ ಬೆಳವಣಿಗೆ (ಶೇ) | | |
|---|---|---|---|---|---|---|
| | | | | 1971 ರಿಂದ 1981 | 1981 ರಿಂದ 1991 | 1991 ರಿಂದ 2001 |
| 1 | | 8 | 9 | 10 | 11 | 12 |
| 1 | ಅಫಜಲಪುರ | 116 | 180071 | 11.90 | 20.61 | 19.40 |
| 2 | ಅಳಂದ | 150 | 297136 | 5.59 | 20.69 | 13.90 |
| 3 | ಚಿಂಚೋಳಿ | 121 | 223646 | 19.32 | 19.57 | 18.20 |
| 4 | ಚಿತ್ತಾಪುರ | 175 | 366802 | 18.81 | 20.01 | 18.50 |
| 5 | ಗುಲಬರ್ಗಾ | 303 | 675679 | 31.66 | 30.17 | 29.00 |
| 6 | ಜೇವರ್ಗಿ | 104 | 235254 | 12.24 | 23.30 | 24.70 |
| 7 | ಸೇಡಮ್ | 159 | 196154 | 20.61 | 26.05 | 20.20 |
| 8 | ಶಹಾಪುರ | 142 | 293518 | 20.27 | 25.33 | 22.20 |
| 9 | ಶೋರಾಪುರ | 155 | 336755 | 27.29 | 26.05 | 19.50 |
| 10 | ಯಾದಗೀರ್ | 160 | 325907 | 13.73 | 22.79 | 18.90 |
| | **ಒಟ್ಟು** | **159** | **3130922** | **19.63** | **24.10** | **21.40** |

ಮೂಲ: ಸೆನ್ಸಸ್ ಆಫ್ ಇಂಡಿಯಾ –1971, 1818, 1991 ಮತ್ತು 2001

## 1 ಜನಸಂಖ್ಯಾ ವಿವರ

| ಕ್ರಮ ಸಂಖ್ಯೆ | ತಾಲ್ಲೂಕು | ಲಿಂಗ ಅನುಪಾತ | | | ಲಿಂಗ ಅನುಪಾತ (0–6) |
|---|---|---|---|---|---|
| | | 1981 | 1991 | 2001 | 2001 |
| 1 | | 13 | 14 | 15 | 16 |
| 1 | ಅಫಜಲಪುರ | 984 | 946 | 946 | 940 |
| 2 | ಆಳಂದ | 974 | 955 | 952 | 917 |
| 3 | ಚಿಂಚೋಳಿ | 992 | 976 | 974 | 932 |
| 4 | ಚಿತ್ತಾಪುರ | 984 | 966 | 968 | 938 |
| 5 | ಗುಲಬರ್ಗಾ | 935 | 923 | 938 | 918 |
| 6 | ಜೇವರ್ಗಿ | 1006 | 981 | 967 | 934 |
| 7 | ಸೇಡಮ್ | 1013 | 987 | 1008 | 964 |
| 8 | ಶಹಾಪುರ | 1009 | 979 | 979 | 942 |
| 9 | ಶೋರಾಪುರ | 979 | 976 | 980 | 951 |
| 10 | ಯಾದಗೀರ್ | 1006 | 982 | 988 | 964 |
| | **ಒಟ್ಟು** | **981** | **962** | **966** | **938** |

ಮೂಲ: ಸೆನ್ಸಸ್ ಆಫ್ ಇಂಡಿಯಾ –1971, 1818, 1991 ಮತ್ತು 2001

## 1 ಜನಸಂಖ್ಯಾ ವಿವರ

| ಕ್ರಮ ಸಂಖ್ಯೆ | ತಾಲ್ಲೂಕು | ಪ.ಜಾ. ಮತ್ತು ಪ.ಪಂ. ಜನಸಂಖ್ಯೆ–2001 | | | | | | | |
|---|---|---|---|---|---|---|---|---|---|
| | | ಪ.ಜಾ. | | | | ಪ.ಪಂ. | | | |
| | | ಒಟ್ಟು | ಗ್ರಾಮೀಣ | ನಗರ | ಒಟ್ಟು ಜನಸಂಖ್ಯೆಯಲ್ಲಿ ಪ.ಜಾ. ಮತ್ತು ಪ.ಪಂ. ಜನಸಂಖ್ಯೆ ಪ್ರಮಾಣ(ಶೇ) | ಒಟ್ಟು | ಗ್ರಾಮೀಣ | ನಗರ | ಒಟ್ಟು ಜನಸಂಖ್ಯೆಯಲ್ಲಿ ಪ.ಜಾ. ಮತ್ತು ಪ.ಪಂ. ಜನಸಂಖ್ಯೆ ಪ್ರಮಾಣ(ಶೇ) |
| **1** | | **17** | **18** | **19** | **20** | **21** | **22** | **23** | **24** |
| 1 | ಅಫಜಲಪುರ | 32103 | 28607 | 3496 | 17.82 | 3720 | 3667 | 53 | 2.06 |
| 2 | ಅಳಂದ | 67652 | 63682 | 3970 | 22.77 | 6194 | 6035 | 159 | 2.08 |
| 3 | ಚಿಂಚೋಳಿ | 74337 | 70023 | 4314 | 33.23 | 5153 | 4917 | 236 | 2.30 |
| 4 | ಚಿತ್ತಾಪುರ | 107506 | 66845 | 40661 | 29.3 | 5789 | 4560 | 1229 | 15.78 |
| 5 | ಗುಲಬರ್ಗಾ | 138047 | 73669 | 64378 | 20.43 | 9986 | 5335 | 4651 | 14.78 |
| 6 | ಜೇವರ್ಗಿ | 46806 | 43240 | 3566 | 19.89 | 11221 | 10454 | 767 | 4.76 |
| 7 | ಸೇಡಮ್ | 50686 | 42248 | 8438 | 25.83 | 5072 | 4129 | 943 | 2.58 |
| 8 | ಶಹಾಪುರ | 66592 | 61478 | 5114 | 22.68 | 24082 | 22615 | 1467 | 8.20 |
| 9 | ಶೋರಾಪುರ | 61187 | 56928 | 4259 | 18.16 | 60300 | 53738 | 6562 | 17.90 |
| 10 | ಯಾದಗೀರ್ | 72779 | 62567 | 10212 | 22.33 | 22678 | 19138 | 3540 | 6.96 |
| | **ಒಟ್ಟು** | **717695** | **569287** | **148408** | **22.92** | **154195** | **134588** | **19607** | **4.92** |

ಮೂಲ: ಸೆನ್ಸಸ್ ಆಫ್ ಇಂಡಿಯಾ – 2001

## ಗುಲಬರ್ಗಾ ಜಿಲ್ಲೆಯ
## ಪ್ರಕ್ಷೇಪಿತ ಜನಸಂಖ್ಯೆ : 2001 ರಿಂದ 2011

| ಕ್ರ. ಸಂ. | ತಾಲ್ಲೂಕು | 2001 | 2002 | 2003 | 2004 | 2005 | 2006 | 2007 | 2008 | 2009 | 2010 | 2011 |
|---|---|---|---|---|---|---|---|---|---|---|---|---|
| 1 | ಅಫಜಲಪುರ | 1800 | 1831 | 1861 | 1892 | 1924 | 1956 | 1989 | 2022 | 2057 | 2091 | 2127 |
| 2 | ಆಳಂದ | 2971 | 3021 | 3073 | 3125 | 3177 | 3232 | 3287 | 3343 | 3400 | 3459 | 3518 |
| 3 | ಚಿಂಚೋಳಿ | 2236 | 2272 | 2308 | 2346 | 2384 | 2422 | 2462 | 2501 | 2541 | 2583 | 2625 |
| 4 | ಚಿತ್ತಾಪುರ | 3668 | 3746 | 3827 | 3909 | 3994 | 4081 | 4169 | 4261 | 4354 | 4450 | 4549 |
| 5 | ಗುಲಬರ್ಗಾ | 2236 | 2272 | 2308 | 2346 | 2384 | 2422 | 2462 | 2501 | 2541 | 2583 | 2625 |
| 6 | ಜೇವರ್ಗಿ | 2353 | 2390 | 2429 | 2468 | 2508 | 2549 | 2591 | 2633 | 2676 | 2719 | 2764 |
| 7 | ಸೇಡಮ್ | 1961 | 1998 | 2035 | 2073 | 2112 | 2152 | 2192 | 2233 | 2276 | 2319 | 2363 |
| 8 | ಶಹಾಪುರ | 2935 | 2986 | 3038 | 3092 | 3146 | 3202 | 3258 | 3316 | 3375 | 3435 | 3497 |
| 9 | ಶೋರಾಪುರ | 3367 | 3425 | 3483 | 3543 | 3604 | 3666 | 3729 | 3795 | 3860 | 3927 | 3996 |
| 10 | ಯಾದಗೀರ್ | 3259 | 3321 | 3385 | 3449 | 3516 | 3585 | 3654 | 3725 | 3798 | 3872 | 3949 |
| **ಒಟ್ಟು** | | **31307** | **31929** | **32566** | **33218** | **33885** | **34571** | **35268** | **35985** | **36717** | **37467** | **38239** |

ಮೂಲ: ಗುಲಬರ್ಗಾ ಜಿಲ್ಲೆ ಅಂಕಿಅಂಶಗಳ ನೋಟ – 2006

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಪುರುಷರ ಸಾಕ್ಷರತೆಯ ಬೆಳವಣಿಗೆ ಪ್ರಮಾಣ 1961–2001 | | | | | | | | | |
|---|---|---|---|---|---|---|---|---|---|---|---|
| | | ಪುರುಷರ ಸಾಕ್ಷರತೆಯ ಪ್ರಮಾಣ | | | | | ಪುರುಷರ ಸಾಕ್ಷರತೆಯ ಬೆಳವಣಿಗೆ ಪ್ರಮಾಣ (ಶೇ) | | | | |
| | | **1961** | **1971** | **1981** | **1991** | **2001** | **1961–71** | **1971–81** | **1981–91** | **1991–2001** | **1971–2001** |
| **1** | | **2** | **3** | **4** | **5** | **6** | **7** | **8** | **9** | **10** | **11** |
| 1 | ಅಫಜಲಪುರ | 20.11 | 25.50 | 35.82 | 52.29 | 63.6 | 26.80 | 40.47 | 45.00 | 23.29 | 152.82 |
| 2 | ಆಳಂದ | 23.52 | 29.30 | 37.88 | 55.01 | 66.0 | 24.57 | 29.28 | 45.22 | 21.94 | 128.94 |
| 3 | ಚಿಂಚೋಳಿ | 24.69 | 27.60 | 33.43 | 48.27 | 62.3 | 11.78 | 21.12 | 44.39 | 31.07 | 129.23 |
| 4 | ಚಿತ್ತಾಪುರ | 22.67 | 29.10 | 36.92 | 52.30 | 61.0 | 28.36 | 26.87 | 41.65 | 18.33 | 112.68 |
| 5 | ಗುಲಬರ್ಗಾ | 37.01 | 42.60 | 50.88 | 70.12 | 76.3 | 15.10 | 19.43 | 37.81 | 10.00 | 81.05 |
| 6 | ಜೇವರ್ಗಿ | 19.19 | 25.20 | 33.18 | 48.42 | 57.9 | 31.30 | 31.66 | 45.93 | 20.40 | 131.34 |
| 7 | ಸೇಡಮ್ | 22.77 | 25.00 | 32.59 | 47.73 | 56.4 | 9.79 | 30.36 | 46.45 | 19.84 | 128.8 |
| 8 | ಶಹಾಪುರ | 18.73 | 20.00 | 25.94 | 41.04 | 49.9 | 6.78 | 29.70 | 58.21 | 21.71 | 149.75 |
| 9 | ಶೋರಾಪುರ | 21.14 | 24.50 | 32.06 | 46.39 | 56.3 | 15.89 | 26.77 | 44.69 | 22.50 | 131.95 |
| 10 | ಯಾದಗೀರ್ | 20.94 | 22.50 | 27.22 | 35.96 | 47.5 | 7.40 | 20.98 | 32.10 | 32.84 | 112.31 |
| | **ಒಟ್ಟು** | **24.15** | **28.70** | **36.37** | **52.08** | **61.8** | **18.84** | **26.72** | **43.19** | **20.04** | **117.83** |

ಮೂಲ: ಸೆನ್ಸಸ್ ಆಫ್ ಇಂಡಿಯಾ –1971, 1981, 1991 ಮತ್ತು 2001

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಮಹಿಳೆಯರ ಸಾಕ್ಷರತೆಯ ಬೆಳವಣಿಗೆ ಪ್ರಮಾಣ 1961–2001 | | | | | | | | | |
|---|---|---|---|---|---|---|---|---|---|---|---|
| | | ಮಹಿಳೆಯರ ಸಾಕ್ಷರತೆಯ ಪ್ರಮಾಣ | | | | | ಮಹಿಳೆಯರ ಸಾಕ್ಷರತೆಯ ಬೆಳವಣಿಗೆ ಪ್ರಮಾಣ(ಶೇ) | | | | |
| | | 1961 | 1971 | 1981 | 1991 | 2001 | 1961–71 | 1971–81 | 1981–91 | 1991–01 | 1961–2001 |
| 1 | | 11 | 12 | 13 | 14 | 15 | 16 | 17 | 18 | 19 | 20 |
| 1 | ಅಫಜಲಪುರ | 3.17 | 5.80 | 11.78 | 22.09 | 37.5 | 45.34 | 103.10 | 87.52 | 72.56 | 1102.52 |
| 2 | ಅಳಂದ | 4.60 | 6.60 | 11.37 | 22.45 | 39.2 | 43.47 | 72.27 | 97.44 | 77.90 | 768.26 |
| 3 | ಚಿಂಚೋಳಿ | 4.10 | 5.90 | 9.06 | 18.28 | 34.7 | 93.90 | 53.55 | 101.76 | 92.66 | 759.02 |
| 4 | ಚಿತ್ತಾಪುರ | 4.70 | 8.30 | 13.82 | 24.70 | 37.7 | 76.59 | 66.50 | 72.72 | 54.89 | 714.04 |
| 5 | ಗುಲಬರ್ಗಾ | 11.60 | 18.60 | 25.57 | 43.41 | 56.1 | 60.34 | 37.47 | 69.76 | 31.60 | 392.50 |
| 6 | ಜೇವರ್ಗಿ | 2.60 | 15.20 | 8.63 | 17.09 | 29.86 | 100.00 | 65.38 | 98.03 | 74.72 | 1048.46 |
| 7 | ಸೇಡಮ್ | 4.60 | 6.50 | 10.89 | 21.13 | 33.4 | 41.30 | 67.53 | 94.03 | 58.30 | 627.17 |
| 8 | ಶಹಾಪುರ | 3.30 | 4.90 | 7.95 | 17.04 | 27.5 | 48.48 | 62.24 | 114.33 | 58.27 | 717.27 |
| 9 | ಶೋರಾಪುರ | 3.20 | 6.70 | 10.18 | 18.84 | 30.4 | 109.37 | 51.94 | 85.06 | 62.26 | 855.31 |
| 10 | ಯಾದಗೀರ್ | 4.70 | 6.90 | 9.55 | 15.62 | 26.9 | 46.80 | 38.90 | 63.56 | 72.79 | 474.25 |
| | **ಒಟ್ಟು** | **5.20** | **8.50** | **13.30** | **24.49** | **37.9** | **63.46** | **56.47** | **84.13** | **56.80** | **638.46** |

ಮೂಲ: ಸೆನ್ಸಸ್ ಆಫ್ ಇಂಡಿಯಾ –1971, 1981, 1991 ಮತ್ತು 2001

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಸಾಕ್ಷರತೆಯ ಬೆಳವಣಿಗೆ ಪ್ರಮಾಣ 1961–2001 | | | | | | | | | |
|---|---|---|---|---|---|---|---|---|---|---|---|
| | | ಸಾಕ್ಷರತೆಯ ಪ್ರಮಾಣ | | | | | ಸಾಕ್ಷರತೆಯ ಬೆಳವಣಿಗೆ ಪ್ರಮಾಣ(ಶೇ) | | | | |
| | | 1961 | 1971 | 1981 | 1991 | 2001 | 1961–71 | 1971–81 | 1981–91 | 1991–01 | 1961–2001 |
| 1 | | 21 | 22 | 23 | 24 | 25 | 26 | 27 | 28 | 29 | 30 |
| 1 | ಅಫಜಲಪುರ | 9.20 | 16.00 | 23.70 | 37.62 | 50.9 | 73.91 | 48.13 | 58.73 | 37.34 | 461.63 |
| 2 | ಅಳಂದ | 14.23 | 18.20 | 24.80 | 39.12 | 52.9 | 27.89 | 36.26 | 57.74 | 37.50 | 278.00 |
| 3 | ಚಿಂಚೋಳಿ | 14.45 | 16.80 | 21.30 | 33.41 | 48.6 | 16.26 | 26.78 | 56.85 | 47.80 | 241.73 |
| 4 | ಚಿತ್ತಾಪುರ | 13.06 | 18.80 | 25.46 | 38.72 | 49.5 | 43.95 | 35.42 | 52.08 | 29.77 | 284.76 |
| 5 | ಗುಲಬರ್ಗಾ | 24.80 | 31.00 | 38.65 | 57.33 | 66.5 | 25.01 | 24.67 | 48.33 | 17.66 | 172.01 |
| 6 | ಜೇವರ್ಗಿ | 9.80 | 15.20 | 20.87 | 32.85 | 44.1 | 55.11 | 37.30 | 57.40 | 34.73 | 351.63 |
| 7 | ಸೇಡಮ್ | 13.70 | 15.70 | 21.67 | 34.50 | 44.8 | 14.59 | 38.02 | 59.20 | 31.10 | 230.14 |
| 8 | ಶಹಾಪುರ | 10.90 | 12.60 | 16.91 | 29.14 | 38.8 | 15.59 | 34.20 | 72.32 | 32.22 | 253.48 |
| 9 | ಶೋರಾಪುರ | 12.20 | 15.60 | 21.24 | 32.74 | 43.4 | 27.86 | 36.15 | 54.14 | 33.90 | 259.34 |
| 10 | ಯಾದಗೀರ್ | 12.80 | 14.60 | 18.36 | 25.88 | 37.2 | 14.06 | 25.75 | 40.95 | 8.56 | 192.42 |
| | **ಒಟ್ಟು** | **14.72** | **18.70** | **24.94** | **38.54** | **50.01** | **27.03** | **33.36** | **54.53** | **31.42** | **244.08** |

ಮೂಲ: ಸೆನ್ಸಸ್ ಆಫ್ ಇಂಡಿಯಾ – 1971, 1981, 1991 ಮತ್ತು 2001

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಗ್ರಾಮೀಣ ಸಾಕ್ಷರತಾ ಪ್ರಮಾಣ | | | |
|---|---|---|---|---|---|
| | | 1991 | 2001 | | |
| | | ಒಟ್ಟು | ಒಟ್ಟು | ಪುರುಷರು | ಮಹಿಳೆಯರು |
| 1 | | 31 | 32 | 33 | 34 |
| 1 | ಅಫಜಲಪುರ | 30.00 | 49.50 | 62.60 | 35.80 |
| 2 | ಅಳಂದ | 29.09 | 51.60 | 65.10 | 37.60 |
| 3 | ಚಿಂಚೋಳಿ | 25.38 | 47.20 | 61.10 | 33.20 |
| 4 | ಚಿತ್ತಾಪುರ | 22.88 | 41.30 | 53.30 | 29.30 |
| 5 | ಗುಲಬರ್ಗಾ | 29.02 | 49.30 | 62.60 | 35.50 |
| 6 | ಜೇವರ್ಗಿ | 25.07 | 42.40 | 56.40 | 28.00 |
| 7 | ಸೇಡಮ್ | 22.06 | 39.40 | 51.20 | 27.90 |
| 8 | ಶಹಾಪುರ | 19.07 | 34.50 | 45.70 | 23.10 |
| 9 | ಶೋರಾಪುರ | 21.03 | 40.30 | 53.40 | 27.10 |
| 10 | ಯಾದಗೀರ್ | 14.04 | 28.90 | 39.00 | 18.70 |
| | **ಒಟ್ಟು** | **24.00** | **42.30** | **54.90** | **29.40** |

ಮೂಲ: ಸೆನ್ಸಸ್ ಆಫ್ ಇಂಡಿಯಾ – 1971, 1981, 1991 ಮತ್ತು 2001

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ನಗರ ಸಾಕ್ಷರತಾ ಪ್ರಮಾಣ | | | |
|---|---|---|---|---|---|
| | | 1991 | 2001 | | |
| | | ಒಟ್ಟು | ಒಟ್ಟು | ಪುರುಷರು | ಮಹಿಳೆಯರು |
| 1 | | 35 | 36 | 37 | 38 |
| 1 | ಅಫಜಲಪುರ | 0.00 | 62.20 | 71.70 | 51.90 |
| 2 | ಅಳಂದ | 42.01 | 62.50 | 72.60 | 51.50 |
| 3 | ಚಿಂಚೋಳಿ | 43.90 | 65.10 | 75.80 | 53.30 |
| 4 | ಚಿತ್ತಾಪುರ | 47.02 | 64.40 | 74.80 | 53.40 |
| 5 | ಗುಲಬರ್ಗಾ | 57.07 | 76.10 | 83.80 | 67.80 |
| 6 | ಜೇವರ್ಗಿ | 0.00 | 63.50 | 74.80 | 51.70 |
| 7 | ಸೇಡಮ್ | 47.02 | 65.70 | 75.70 | 55.30 |
| 8 | ಶಹಾಪುರ | 44.09 | 62.60 | 72.50 | 52.20 |
| 9 | ಶೋರಾಪುರ | 52.15 | 64.00 | 75.10 | 52.70 |
| 10 | ಯಾದಗೀರ್ | 44.02 | 63.90 | 74.40 | 53.20 |
| | **ಒಟ್ಟು** | **52.02** | **70.10** | **79.20** | **60.50** |

ಮೂಲ: ಸೆನ್ಸಸ್ ಆಫ್ ಇಂಡಿಯಾ – 1971, 1981, 1991 ಮತ್ತು 2001

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಆಡಳಿತವಾರು ಪ್ರಾಥಮಿಕ ಶಾಲೆಗಳು (ತರಗತಿ : 1–4 ) | | | | | | | |
|---|---|---|---|---|---|---|---|---|---|
| | | 2003–04 | | | | 2005–06 | | | |
| | | ಸರ್ಕಾರಿ | ಖಾಸಗಿ | | ಒಟ್ಟು | ಸರ್ಕಾರಿ | ಖಾಸಗಿ | | ಒಟ್ಟು |
| | | | ಅನುದಾನಿತ | ಅನುದಾನ ರಹಿತ | | | ಅನುದಾನಿತ | ಅನುದಾನ ರಹಿತ | |
| 1 | | 39 | 40 | 41 | 42 | 43 | 44 | 45 | 46 |
| 1 | ಅಫಜಲಪುರ | 148 | 5 | 15 | 168 | 149 | 13 | 54 | 216 |
| 2 | ಅಳಂದ | 209 | 6 | 26 | 241 | 217 | 21 | 31 | 269 |
| 3 | ಚಿಂಚೋಳಿ | 211 | 3 | 10 | 224 | 234 | 4 | 16 | 254 |
| 4 | ಚಿತ್ತಾಪುರ | 261 | 9 | 27 | 297 | 273 | 11 | 40 | 324 |
| 5 | ಗುಲಬರ್ಗಾ | 264 | 79 | 98 | 441 | 278 | 73 | 68 | 419 |
| 6 | ಜೇವರ್ಗಿ | 190 | 6 | 8 | 204 | 207 | 5 | 15 | 227 |
| 7 | ಸೇಡಮ್ | 195 | 7 | 6 | 208 | 211 | 6 | 15 | 232 |
| 8 | ಶಹಾಪುರ | 223 | 3 | 19 | 245 | 243 | 3 | 27 | 273 |
| 9 | ಶೋರಾಪುರ | 276 | 9 | 23 | 308 | 340 | 9 | 30 | 379 |
| 10 | ಯಾದಗೀರ್ | 230 | 8 | 14 | 252 | 253 | 9 | 21 | 283 |
| | **ಒಟ್ಟು** | **2207** | **135** | **246** | **2588** | **2405** | **154** | **317** | **2876** |

ಮೂಲ: ಈಎಮ್ಐಎಸ್: 2004 ಮತ್ತು 2006

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಆಡಳಿತವಾರು ಪ್ರಾಥಮಿಕ ಶಾಲೆಗಳು(ಶೇಕಡವಾರು) | | | | | |
|---|---|---|---|---|---|---|---|
| | | 2003–04 (1–7 ) | | | 2005–06 (1– 8 ) | | |
| | | ಸರ್ಕಾರಿ | ಅನುದಾನಿತ | ಅನುದಾನರಹಿತ | ಸರ್ಕಾರಿ | ಅನುದಾನಿತ | ಅನುದಾನರಹಿತ |
| | | **47** | **48** | **49** | **50** | **51** | **52** |
| 1 | ಅಫಜಲಪುರ | 88.09 | 2.97 | 8.94 | 68.98 | 6.02 | 25.00 |
| 2 | ಅಳಂದ | 86.72 | 2.49 | 10.79 | 80.67 | 7.81 | 11.52 |
| 3 | ಚಿಂಚೋಳಿ | 94.19 | 1.35 | 4.46 | 92.12 | 1.58 | 6.30 |
| 4 | ಚಿತ್ತಾಪುರ | 87.88 | 3.03 | 9.09 | 84.26 | 3.40 | 12.34 |
| 5 | ಗುಲಬರ್ಗಾ | 59.86 | 17.91 | 22.23 | 66.34 | 17.42 | 16.24 |
| 6 | ಜೇವರ್ಗಿ | 93.14 | 2.94 | 3.92 | 91.19 | 2.20 | 6.61 |
| 7 | ಸೇಡಮ್ | 93.75 | 3.36 | 2.89 | 90.95 | 2.59 | 6.46 |
| 8 | ಶಹಾಪುರ | 91.02 | 1.23 | 7.75 | 89.01 | 1.10 | 9.89 |
| 9 | ಶೋರಾಪುರ | 89.61 | 2.92 | 7.47 | 89.71 | 2.38 | 7.91 |
| 10 | ಯಾದಗೀರ್ | 91.27 | 3.18 | 5.55 | 89.4 | 3.18 | 7.42 |
| | **ಒಟ್ಟು** | **85.28** | **5.22** | **9.50** | **83.62** | **5.36** | **11.02** |

ಮೂಲ : ಎಸ್.ಎಸ್.ಎ. ದಾಖಲೆ : 2003–04 & 2005–06

# 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಪ್ರಾಥಮಿಕ ಶಾಲೆಗಳಲ್ಲಿ ಮಕ್ಕಳ ದಾಖಲಾತಿ (ಎಲ್ಲ) 1 ರಿಂದ 7 ನೇಯ ತರಗತಿ | | | | | | | | | |
|---|---|---|---|---|---|---|---|---|---|---|---|
| | | 1998–99 | 2001–02 | | | 2003–04 | | | 2005–06 | | |
| | | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| 1 | | 53 | 54 | 55 | 56 | 57 | 58 | 59 | 60 | 61 | 62 |
| 1 | ಅಫಜಲಪುರ | 34202 | 20585 | 18506 | 39091 | 18758 | 16811 | 35569 | 19138 | 16904 | 36042 |
| 2 | ಆಳಂದ | 65712 | 30478 | 28259 | 58737 | 30125 | 27984 | 58109 | 26534 | 25010 | 51544 |
| 3 | ಚಿಂಚೋಳಿ | 50690 | 23419 | 18413 | 41832 | 21249 | 19801 | 41050 | 19978 | 18692 | 28670 |
| 4 | ಚಿತ್ತಾಪುರ | 162611 | 32358 | 29221 | 61579 | 34803 | 32253 | 67056 | 32463 | 30706 | 63169 |
| 5 | ಗುಲಬರ್ಗಾ | 189148 | 51979 | 49155 | 101134 | 57932 | 54882 | 112814 | 56836 | 57689 | 114525 |
| 6 | ಜೇವರ್ಗಿ | 45630 | 24513 | 21190 | 45703 | 25549 | 22787 | 48336 | 26466 | 24437 | 50903 |
| 7 | ಸೇಡಮ್ | 32106 | 17197 | 15539 | 32736 | 16899 | 16207 | 33106 | 19059 | 17521 | 36580 |
| 8 | ಶಹಾಪುರ | 45621 | 30942 | 25525 | 56467 | 29013 | 24731 | 53744 | 31994 | 24044 | 56038 |
| 9 | ಶೋರಾಪುರ | 58297 | 31286 | 26265 | 57551 | 35156 | 29413 | 64569 | 31915 | 26333 | 58248 |
| 10 | ಯಾದಗೀರ್ | 38488 | 30021 | 24364 | 54385 | 32017 | 27094 | 59111 | 26640 | 22452 | 49092 |
| | **ಒಟ್ಟು** | **722505** | **292778** | **256437** | **549215** | **301501** | **271963** | **573464** | **291023** | **263788** | **554811** |

ಮೂಲ: ಈ.ಎಮ್.ಐ.ಎಸ್. : 2001–02, 2003–04 ಮತ್ತು 2005–06

## 2 ಶಿಕ್ಷಣ

| ಕ್ರ. ಸಂ. | ತಾಲ್ಲೂಕು | ಪ್ರಾ. ಶಾ. ಮಕ್ಕಳ ದಾಖಲಾತಿ (1 ರಿಂದ 8ನೇ ತರಗತಿ) | | | ಪ.ಜಾ. ಮಕ್ಕಳ ಪ್ರಾ. ಶಾ. ದಾಖಲಾತಿ (1 ರಿಂದ 7 ನೇಯ ತರಗತಿ) | | | | | | | | |
|---|---|---|---|---|---|---|---|---|---|---|---|---|---|
| | | 2005–06 | | | 2001–02 | | | 2003–04 | | | 2005–06 | | |
| | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| **1** | | **63** | **64** | **65** | **66** | **67** | **68** | **69** | **70** | **71** | **72** | **73** | **74** |
| 1 | ಅಫಜಲಪುರ | 20504 | 17711 | 38215 | 4375 | 3931 | 8306 | 3826 | 3320 | 7146 | 3943 | 3344 | 7287 |
| 2 | ಅಳಂದ | 29682 | 27221 | 56903 | 7937 | 7064 | 15001 | 7539 | 6859 | 14398 | 8059 | 7007 | 15066 |
| 3 | ಚಿಂಚೋಳಿ | 22200 | 20500 | 42700 | 8586 | 7456 | 16042 | 7599 | 6640 | 14239 | 8091 | 7309 | 15400 |
| 4 | ಚಿತ್ತಾಪುರ | 31243 | 28832 | 60075 | 10706 | 9028 | 19734 | 11071 | 9570 | 20641 | 10441 | 9449 | 19890 |
| 5 | ಗುಲಬರ್ಗಾ | 44264 | 43424 | 87688 | 12358 | 11048 | 23406 | 14971 | 13149 | 28120 | 13542 | 12501 | 26043 |
| 6 | ಜೇವರ್ಗಿ | 26595 | 22803 | 49398 | 5281 | 4615 | 9896 | 5432 | 4795 | 10227 | 5636 | 4882 | 10518 |
| 7 | ಸೇಡಮ್ | 18735 | 18330 | 37065 | 4981 | 4140 | 9121 | 4822 | 4366 | 9188 | 6404 | 5219 | 11623 |
